REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨ನೇ ಜನವರಿ ೧೯೩೯ [ಸಂಚಿಕೆ ೩೫

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವಸಭೆಯೋ? ಬಸವಪಂಥಿಗಳ ಸಭೆಯೋ?

ಹುಬ್ಬಳ್ಳಿಯಲ್ಲಿ ಡಿಸೆಂಬರ್ 26-27-28 ನೆಯ ತಾರೀಖುಗಳಲ್ಲಿ ವೀರಶೈವಮಹಾಸಭೆಯೆಂಬ ಹೆಸರಿನಿಂದ ಬಸವ ಪಂಥಿಗಳ ಸಭೆಯೊಂದು ನೆರವೇರಿತು. ಈ ಮಹಾಸಭೆಯು ಮೊದಲು ಈ ಮತದ ಪ್ರಮುಖರಿಂದ ಧರ್ಮಸಂಸ್ಥಾಪನೆಗಾಗಿ ಸ್ಥಾಪಿಸಲ್ಪಟ್ಟಿತು. 5-6 ಸಭೆಗಳವರೆಗೆ ಈ ಸಭೆಯು ಅಭೂತಪೂರ್ವವಾದ ಉತ್ಸಾಹದಿಂದ ಕೆಲಸ ಮಾಡಿತು. ಆ ಕಾಲದಲ್ಲಿ ಈ ಮತವನ್ನಲಂಕರಿಸಿದ್ದ ಮಹಾಸ್ವಾಮಿಗಳೂಕೂಡ ಅಂಧವರೇ ಇದ್ದರು. ಆ ಕಾಲದಲ್ಲಿ ನಡೆದ ಸಭೆಗಳಿಗೆ ಇಂಡಿಯಾ ದೇಶದ ನಾನಾಭಾಗಗಳಿಂದ ನಾನಾಂಶಕೆತರಾದ ವೀರಶೈವರುಮುಖರು ಬಂದು ಶೋಭೆಯನ್ನುಂಟುಮಾಡುತ್ತಿದ್ದರು. ಸಭೆಯಲ್ಲಿ ಕೇವಲ ಧಾರ್ಮಿಕವಿಚಾರಗಳೇ ಚರ್ಚಿಸಲ್ಪಡುತ್ತಿದ್ದವು. ಆ ಕಾರ್ಯಕ್ರಮವನ್ನು ನೋಡಿದವರೆಲ್ಲರೂ ಪರಮಾನಂದ ಭರಿತರಾಗಿ ಮಹಾಸಭೆಯನ್ನು ಮನೆದನೆಯುವಂತೆ ಕೊಂಡಾಡುತ್ತಿದ್ದರು. ಈ ರೀತಿಯಾಗಿ ಉನ್ನತಸ್ಥಿತಿಯಲ್ಲಿದ್ದ ಈ ಸಭೆಗೆ ಬಸವಪಂಥಿಗಳ ಸಹವಾಸದಿಂದ ಬರಬರುತ್ತ ಕ್ಷಯರೋಗವು ವ್ಯಾಪ್ತವಾಗಿ ಈಗೀಗಂತೂ ಮರಣಾವಸ್ಥೆಯಲ್ಲಿಯೇ ಇರುವುದು. ಮರಣಶಯ್ಯೆಯಲ್ಲಿರುವ ಈ ಸಭೆಯನ್ನು ಪುನಃ ಯೌವನಾವಸ್ಥೆಗೆ ತರಬೇಕೆಂದು ಬಸವಪಂಥಿಗಳು ಬಹು ಪ್ರಯತ್ನ ಪಡುತ್ತಿರುವರು. ಈಶ್ವರೇಚ್ಛೆಯೇ ಬೇರಿರುವಾಗ ಅದಕ್ಕೆಯಾರಿಂದೇನು ಮಾಡಲಾದೀತು? ಈಗ ಈ ಸಭೆಯು ಕೇವಲ ಬಸವಪಂಥಿಗಳ ಕೈಯಲ್ಲಿ ಶಿಕ್ಕು ನರಳಹತ್ತಿದೆ. ಮತದ ಪ್ರಮುಖರಾರೂ ಇದರ ಹತ್ತರ ಸುಳಿದಾಡುವಂತಿಲ್ಲ. ಜಾತಿಸಾಂಕರ್ಯವಾದಿಗಳೇ ಅಲ್ಲಿ ಶೇರುವರು. ಒಟ್ಟಿಗೆ ಇದು ಈಗ ಕೇವಲ ಹುಡುಗಾಟದ ಸಭೆಯಾಗಿ ಪರಿಣಮಿಸಿದೆ. ಈ ವರ್ಷ ಹುಬ್ಬಳ್ಳಿಯಲ್ಲಿ ನಡೆದ ಸಭೆಗೆ ಹುಬ್ಬಳ್ಳಿಯ ಮತ್ತು ಧಾರವಾಡದ ಪ್ರಮುಖರೇ ಬಂದಿದ್ದಿಲ್ಲವೆಂದಮೇಲೆ ಇದರ ಸ್ಥಿತಿಯು ಯಾವರೀತಿಯಾಗಿರಬಹುದೆಂಬುದನ್ನು ಕುಶಲರೇ ಯೋಚಿಸಬೇಕು. ಈಗ ಈ ಸಭೆಗೆ ಶುದ್ಧಸಂಪ್ರದಾಯದ ಶುದ್ಧವೀರಶೈವರಾರೂ ಶೇರದಿರುವದರಿಂದಲೂ, ಕೇವಲ ಜಾತಿಸಾಂಕರ್ಯವಾದಿಗಳ ಗುಂಪೇ ಶೇರುತ್ತಿರುವದರಿಂದಲೂ ಇದರ ಹೆಸರನ್ನು ಇನ್ನುಮುಂದೆ ಬದಲಾಯಿಸಿ "ಬಸವಪಂಥಿಗಳ ಮಹಾಸಭೆ" ಯೆಂದು ಕರೆದರೆ ಭೂಷಣವಾಗುವದು. ಇಲ್ಲದಿದ್ದಲ್ಲಿ ಶುದ್ಧಸಂಪ್ರದಾಯದ ವೀರಶೈವರನ್ನು ವಂಚಿಸಿದಂತಾಗುವದು. ಈಸಾರಿಯ ಹುಬ್ಬಳ್ಳಿಯ ಸಭೆಗೆ ನಾನು ಹೋಗಿದ್ದೆನು. ಎಲ್ಲಿನೋಡಿದರೂ ಜಾತಿಸಾಂಕರ್ಯವಾದಿಗಳ ಆರ್ಭಟವೇ ಆರ್ಭಟ! ಸನಾತನಧರ್ಮವಾದಿಗಳಿಗೆ ತಿರಸ್ಕಾರ! ವೇದಾಗಮಗಳ ನಿಂದೆ! ಅಮಂಗಲವಚನೆಗಳ ಸ್ತುತಿ! ಇದೇ ತುಂಬ ತುಳುಕುತ್ತಿತ್ತು. ಇವನ್ನು ನೋಡಿ ಇದು ಕಾಲಮಹಿಮೆಯೆಂದೇತಿಳಿದುಕೊಂಡೆನು. ಶುದ್ಧಸಂಪ್ರದಾಯದ ವೀರಶೈವರು ಈ ಸಭೆಗೆ ನಿಶೇಷ ಬಂನಿದ್ದೇ ಇಲ್ಲ. ಇದೊಂದು ಉತ್ತಮವಾಯಿತೆಂದು ಭಾವಿಸಿದೆನು. ಸಭೆಯಲ್ಲಿ ಬಸವನ ಚಿತ್ರವನ್ನು ಕಟ್ಟಿದ್ದರು. ಆ ಮೇಲೆ ಗುರುಪೀಠಾಧಿಮಾನಿಗಳು ಜೋರುಮಾಡಿ ಜಗದಾಚಾರ್ಯರ ಚಿತ್ರವನ್ನು ಕಟ್ಟಿಸಿದರು. ಇಂತಹ ಅಮಂಗಲವರ್ತನೆಯ ಸಭೆಗೆ "ವೀರಶೈವಮಹಾಸಭೆ"ಯೆಂದು ಕರೆಯುವುದು ಅಪಮಾನವನಲ್ಲದ ಬೇರೆಯಲ್ಲ. ಇನ್ನುಮುಂದೆ ಶುದ್ಧಸಂಪ್ರದಾಯದ ವೀರಶೈವರು ಈ ಜಾತಿಸಾಂಕರ್ಯದ ಸಭೆಗೆ ಬಹಿಷ್ಕಾರವನ್ನು ಹಾಕಬೇಕು. ಸನಾತನವೀರಶೈವಧರ್ಮ ಮಹಾಸಭೆ ಎಂಬ ಹೆಸರಿನಿಂದ ಬೇರೊಂದು ಸಭೆಯನ್ನು ಸ್ಥಾಪಿಸಿ, ಆ ಮೂಲಕ ಮತವನ್ನು ಸುಧಾರಿಸಲು ಪ್ರಯತ್ನ ಮಾಡಬೇಕು. ಹೀಗೆ ಮಾಡಿದರೆ ಜೋಳ ಬಸವಪಂಥಿಗಳ ಸಭೆಯು ನಿರ್ನಾಮವಾಗುವದರಲ್ಲಿ ಸಂಶಯವಿಲ್ಲ. ಈ ಜೋಳಪಂಥಿಗಳ ಸಭೆಗೆ ಜನರು ವಿಶೇಷವಾಗಿ ಶೇರುವುದಿಲ್ಲವೆನ್ನುವುದಕ್ಕೂ, ಇದರಲ್ಲಿ ಜನರಿಗೆ ಪ್ರೀತಿಯಿರುವುದಿಲ್ಲವೆನ್ನುವುದಕ್ಕೂ ಈಸಾರಿ ಹುಬ್ಬಳ್ಳಿಯಲ್ಲಿ ನಡೆದ ಸಭೆಯೇ ದೊಡ್ಡ ಸಾಕ್ಷಿಯಾಗಿದೆ. ಈ ಸಭೆಗೆ ಜನರು ಮೊದಲು ಬರುತ್ತಿದ್ದವಕ್ಕೂ ಈಗ ಬರುತ್ತಿರುವುದಕ್ಕೂ ತೂಕಪಾಕಿ ನೋಡಿದರೆ ಮೇರುಪರ್ವತದಂತೆ ವ್ಯತ್ಯಾಸವಾಗಿ ತೋರುವುದು. ಒಟ್ಟಿಗೆ ಇತ್ತೀಚೆಗೆ ಜೋಳಪಂಥಿಗಳ ಸಹವಾಸದಿಂದ ಈ ಸಭೆಯು ನಿರ್ನಾಮವಾಗುವದೆಯಲ್ಲಿಯೇ ಅವೆಯೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಅಸ್ತು!

ಈ ಸಭೆಗೆ ಅಂಗಭೂತವಾಗಿ ಕೆಲವು ಸಭೆಗಳು ಅಲ್ಲಿ ನಡೆದವು. ಅದರಲ್ಲಿ ಸ್ತ್ರೀಯರದೂ ಒಂದು. ಆ ಸಭೆಗೆ ಯಾರಿಗೂ ಗೊತ್ತಿಲ್ಲದಿರುವ, ಜನ್ಮಾಗಿಯಾನ ಭಾಷೆಯನ್ನೂ ತಿಳಿಯದಿರುವ ಸೊಲ್ಲಾಪುರ ಲಿಂಗಾಡೆ ಜಯದೇವಿ ಬಾಯಿಯನ್ನು ಅಧ್ಯಕ್ಷಳನ್ನಾಗಿ ಆರಿಸಿದ್ದನ್ನು ನೋಡಿ ಅಲ್ಲಿಗೆ ಬಂದಿದ್ದವರೆಲ್ಲಾ ಆಶ್ಚರ್ಯಭರಿತರಾದರು. ವೀರಶೈವಸ್ತ್ರೀಯರಲ್ಲಿ ಈಗ ಎಷ್ಟೋ ಜನರು ಬಿ.ಎ. ಮೊದಲಾದ ಪದವಿಗಳನ್ನು ಪಡೆದಿಗುತ್ತಾರೆ. ಅವರೆಲ್ಲರನ್ನು ಬಿಟ್ಟು ಈ ಅವಿದ್ಯಾವತಿಯನ್ನು ಶೋಧಿಸಿ ಆರಿಸಿದ್ದೆಂದರೆ ಸಾಮಾನ್ಯವಾದ ಕೆಲಸವಲ್ಲ! ಕೋಲಂಬಶನು ಜಮೈರಿಕಾ ಖಂಡವನ್ನು ಶೋಧಿಸಿದಂತೆಯೇ ಆಗಿದೆಯೆಂದು ಬಹುಜನರು ನುಡಿಯುತ್ತಿದ್ದರು. ಮತ್ತೆ ಕೆಲವರು ಗುಣಮತಕಲ್ಲ ವಿರಕ್ತರನ್ನು ಅಧ್ಯಕ್ಷರನ್ನಾಗಿ ಆರಿಸಿದ್ದರೆ, ಸುವರ್ಣಕ್ಕೆ ಸುಗಂಧವು ಪ್ರಾಪ್ತವಾದಂತಾಗುತ್ತಿತ್ತೆಂದು ಕೆಲವು ಜನರು ನುಡಿಯುತ್ತಿದ್ದರು. ಅವರೇಕೆ ಹಾಗೆ ನುಡಿಯುತ್ತಿದ್ದರೆಂಬುದು ಯಾರಿಗೂ ತಿಳಿಯದಾಗಿದೆ. ಅದರೂ ಆ ವಿರಕ್ತರು ಹುಬ್ಬಳ್ಳಿ ಸಭೆಗೆ ಬಂದೇಬಿಟ್ಟಿರುವರಲ್ಲಾ! ಇದೂ ಒಂದು ವಿಧವಾದ ಸಂತೋಷವೆಂದು ಕೆಲವರು ನುಡಿಯುತ್ತಿದ್ದರು. ಅಸ್ತು! ಅಂತು ಇಂತು ಹುಬ್ಬಳ್ಳಿಯಲ್ಲಿ ಸಭೆಯಾಗಿ ೪೦-೫೦ ಸಾವಿರ ರೂಪಾಯಿಗಳು ಈ ಸಮಾಜವನ್ನು ಬಿಟ್ಟು ರೇಲ್ವೆಯವರ ಬೊಕ್ಕಸಕ್ಕೆ ಬಿದ್ದವು. ಈ ಸಭೆಯಿಂದ ರೇಲ್ವೆ ಇಲಾಖೆಯು ಸುಧಾರಿಸಿತೇ ಹೊರತು ಮತದ ಸುಧಾರಣೆಯಂತೂ ಸ್ವಪ್ನದಲ್ಲಿಯೂ ಇಲ್ಲವೆನ್ನುವದು ಪ್ರತ್ಯಕ್ಷವಾಗಿ ಎಲ್ಲರಿಗೂ ತೋರಿಹೋಯಿತು. ಮೊದಲು ಈ ಸಭೆಯನ್ನು ಸ್ಥಾಪಿಸಿದವರ ಉದ್ದೇಶಗಳೆಲ್ಲವೂ ನಷ್ಟವಾಗಿ ಬಸವಪಂಥಿಗಳ ಉದ್ದೇಶವೇ ಇವರಲ್ಲಿ ಸಫಲವಾಗುತ್ತಿರುವದರಿಂದ ಇನ್ನುಮುಂದೆ ಈ ಸಭೆಗೆ ವೀರಶೈವ ಮಹಾಸಭೆಯೆನ್ನುವದಕ್ಕಿಂತಲೂ ಬಸವಪಂಥಿಗಳ ಮಹಾಸಭೆಯೆಂದು ಪ್ರಸಿದ್ಧಮಾಡಿದರೆ ಶೋಭೆಯಾಗುವದೆಂದು ಜನೇಕರು ಸಂಬರುವರು.

ಓರ್ವ ಸಭಾಪ್ರೇಕ್ಷಕ.

ಲಿಂಗಧಾರಣ ವಿಧಿ.

ಬಹುಜನರ ಪ್ರಾರ್ಥನೆಯ ಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದವರಿಗೆ ಈ ವಿಧಿಯು ಮುಖ್ಯವಾಗಿರುವದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮುಂದಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಬೆಲೆ ೪ ಆಣೆ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೈಸ್ರಾಯರ ಮಂತ್ರಿಮಂಡಲದಲ್ಲಿ ಬದಲಾವಣೆಗಳು

ವೈಸರಾಯರವರ ಮಂತ್ರಿಮಂಡಲದಲ್ಲಿ ನ್ಯಾಯಶಾಖೆಯ ಸಚಿವರಾದ ಸರ್ ಎ. ಎ. ಸರ್ಕಾರರವರೂ, ಖಜಾನಾಸಚಿವರಾದ ಸರ್ ವಿ. ಜಿ. ಗ್ರಿಗ್‌ರವರೂ ಕೆಲಸದಿಂದ ನಿವೃತ್ತರಾಗುವರು. ಇಂಡಿಯಾ ಸರ್ಕಾರದವರು ಸಾರ್ವಭೌಮರ ಅನುಮತಿ ಪಡೆದು ಈಗ ವಾಣಿಜ್ಯ ಶಾಖೆಯ ಸಚಿವರಾಗಿರುವ ಚೌಧರಿ ಸರ್ ಮಹಮದ್ ಜಫರುಲ್ಲಾಖಾನ್‌ರನ್ನು ನ್ಯಾಯಶಾಖೆಯ ಸಚಿವರನ್ನಾಗಿಯೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯ ಮಂತ್ರಾಲೋಚಕರಾಗಿ ಲಂಡನ್ನಿನಲ್ಲಿರುವ ದಿವಾ ಬಹದ್ದೂರ್ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರನ್ನು ವಾಣಿಜ್ಯಶಾಖೆಯ ಸಚಿವರನ್ನಾಗಿಯೂ ಇಂಡಿಯಾ ಸರ್ಕಾರದ ಫೈನಾನ್ಸ್ ಸೆಕ್ರೆಟರಿಯಾಗಿರುವ ಮಿ॥ ಎ. ಜಿ. ಕೈಸ್‌ರನ್ನು ಖಜಾನಾಸಚಿವರನ್ನಾಗಿಯೂ ನೇಮಕಮಾಡಿಯಾತ್ತಾರೆ.

ಸೌರಮಾಸ-ಚಾಂದ್ರಮಾನಗಳಂದರೆ ಏನು? ಅಂಕ ೨.

ಹಿಂದಿನವಾರದಲ್ಲಿ ನಾವು ಹೇಳಿದಂತೆ ಶ್ರೀ ಚಾಂದ್ರ ತಿಥಿಮಾನ ಅರ್ಥಾತ್ ಚಂದ್ರನ ಚಲನಗಣಿತವು ನಿರ್ಧರಿಸಿರುತ್ತೆ. ಹೇಗೆಂದರೆ ಒಂದು ಕಲ್ಪವೆಂದು ಆರಿಯಲ್ಪಡುವ ಕಾಲಪ್ರಮಾಣಕ್ಕೆ ಇಷ್ಟೇ ತಿಥಿಗಳಾಗುವವೆಂದು ಹೇಳುವ ಪ್ರಮಾಣವು ಅವುವೆಂದರೆ 1603998061840 ತಿಥಿಗಳಾದರೆ ಇದಕ್ಕೆ ಸೌರಮಾನವೆಂಬ ಭೂಮಾನವು ಭಗಣರೂಪದಲ್ಲಿ 4320000,000 ನಿರಂತರವೂ ಆಗುತ್ತದೆ

ವೇದಗಳಲ್ಲಿ ಹೇಳಿರುವ ನಿಜಸೌರಮಾನದ ರವಿಯ ಚಲನೆಯು-ಮಹಾಸಂಕಲ್ಪದ ಪ್ರಮಾಣಕ್ಕೆ ಸರಿಯಾಗಿ ನಾವು ಹೇಳಬೇಕಾಗಿರುತ್ತದೆ. ಹೇಗೆಂದರೆ-ಕೃತ್ತಿಕಾದಿ ಭರಣಿ ಅಂತ್ಯದವರೆವಿಗೂ, ಅಭಿಜಸಹಿತ 28 ನಕ್ಷತ್ರಗಳು ಎಣಿಸಲ್ಪಟ್ಟು, ನಿಜಸೌರಮಾನದ ಒಂದು ಕಲ್ಪದ ಪ್ರಮಾಣಕ್ಕೆ 14 ಮನುಗಳೊಡನೆ ಪೂರ್ಣಯಾಗಬೇಕಾದ 28 ನಕ್ಷತ್ರಗಳಲ್ಲಿ, ಮನು ಒಂದಕ್ಕೆ 2 ನಕ್ಷತ್ರಗಳಾಗುವುದು ಕೃತ್ತಿಕಾದಿ ವಿಶಾಖೆಯು ವರೆವಿಗು 7ನೆ ಮನುವು ನಡೆಯುವುದು ಇದರ ಅಂಕಾದಿ ಗಣಿತವನ್ನು ವಾಚಕರ ಅವಗಾಹನೆಗಾಗಿ, ಚಾಂದ್ರತಿಥಿಮಾನದ ಗಣಿತಸಹಿತವಾಗಿ ಕೊಡುತ್ತೀವೆ

ಧೂತಕ್ಷ-ಪ್ರತಿಗ್ರಹತಕ್ಷಕ್ಕೆ ಭೂತಕ್ಷದ್ವಾರ ಏರ್ಪಡತಕ್ಕ ವ್ಯತ್ಯಾಸಗಳ ಸಂಬಂಧವಾಗಿ ಶ್ರೀ ಅರ್ಕಭಟ್ಟೆಯರ ಪೂರ್ವೋತ್ತರಭಾಗಗಳಲ್ಲಿ ಒಂದಕ್ಕೊಂದು ವ್ಯತ್ಯಾಸವಾಗಿ ಹೇಳಿರುವದನ್ನು ಕೆಳಗೆ ವಿವರಿಸುತ್ತೀವೆ.

ವರ್ತಮಾನಕಾಲದ 7ನೆ ಮನುವಿನ 28 ಮನು ವರ್ಷಗಳು ಕಳೆದಿರುವದಾಗಿ ಹೇಳಿದ ಪ್ರಮಾಣಕ್ಕೆ ಈ ಕಾಲದಲ್ಲಿ ಚಂದ್ರನ ವರ್ಷಮಾನಗಳು ಕಳೆದಿರುವದನ್ನು, ಕಲಿಯುಗಾದಿಯಿಂದ ಗಣಿಸಲ್ಪಟ್ಟಲ್ಲವಾದ್ದರಿಂದ ಮೊದಲು ವಿದ್ವಾಂಸರ ಅವಗಾಹನೆಗಾಗಿ ಮಾನಸೆಂಬ ಭೂಮಾನದ್ವಾರವೇ ಕಾಲಪ್ರಮಾಣವನ್ನು ನಿರ್ಧರಿಸಿದ ಮೇಲೆ-ಯಥೋಚಿತವಾಗಿ ತಿಥಿಗಣನದಿಂದ ಸೌರಮಾನವೆಂಬ ಭೂಮಾನವನ್ನು ಪಡೆಯುವುದು.

ಈಗ ಎಣಿಸಲ್ಪಟ್ಟಿರುವ ಸೌರಮಾನವೆಂಬ ಭೂಮಾನವು ನಿಜವಾದ ಒಂದು ಸೌರವರ್ಷಕ್ಕೆ 1320000000 ಈ ಅವಧಿಯು 14 ಮನುಗಳ ಆಯುಃಪ್ರಮಾಣವಾಯಿತು ಇದು 14 ರಿಂದ ಭಾಗಿಸಲ್ಪಟ್ಟು ಪ್ರತಿ ಮನುವಿನ ಶತಮಾನ ಆಯುಃಪ್ರಮಾಣ $=\frac{308571429}{7}$ ಭೂಮಾನವರ್ಷಗಳು ಆಗುತ್ತವೆ ನವ್ಯನೆಂದಗಲ್ಪಟ್ಟವೂ ಆಯುಃಪ್ರಮಾಣವನ್ನು ಶತಮಾನವಾಗಿ ಹೇಳಿದ್ದೀವೆ. ಮೇಲೆ ಒಂದಿಯವ ಒಂದು ವನುವಿನ ಆಯುಃಪ್ರಮಾಣವು ಶತಮಾನವಾಗಿ ಎಣಿಸಲ್ಪಟ್ಟಿದೆ ಇದು $308571429\frac{1}{7}$ ಇದನ್ನು 100 ರಿಂದ ಭಾಗಿಸಲು ಒಂದು ಮನುವಿನ ಪ್ರತಿ ವರ್ಷ ಪ್ರಮಾಣವು $3085714\frac{2}{7}$ ಆಗುತ್ತದೆ ಸ್ಪೆತವರಾಹಕಲ್ಪವಾರಂಭವಾಗಿ 6 ಮನ್ವಂಗಳ ಸಂಪೂರ್ಣ ಆಯುಃಪ್ರಮಾಣವೂ, ಮತ್ತು 7ನೆ ಮನುವಿನಿಂದ ಕಳೆದಿರುವ 28 ಮನ್ವಂತರಗಳಿಗೆ ಕೊಟ್ಟಿರುವ ಗಣಿತ

ಒಂದು ಮನುವಿನ ಆಯುಃಪ್ರಮಾಣ $(308571428\frac{4}{7} \times 28) = 1937828571\frac{3}{7}$ ಸೌರಮಾನವೆಂಬ ಭೂಮಾನಪ್ರಮಾಣವಾಯಿತು ಇದುವರಿವಿಗೆ ಒಂದು ಚತುರ್ಯುಗವಾದ ಮಹಾಯುಗಗಳೆಷ್ಟು ಕಳೆದನೆಂದೂ ಆದಮೇಲೆ, ಈ ಕಲಿಯುಗದಲ್ಲಿ ಕಳೆದಿರುವ ಪ್ರಮಾಣವನ್ನು ಸೇರಿಸಿ ಬಂದಿರುವ ಗಣಿತ

ಒಂದು ಚತುರ್ಯುಗವಾದ ಮಹಾಯುಗಕ್ಕೆ 4320000 ಇದರಿಂದ 7ನೆ ಮನುವಿನ 28 ವರ್ಷಗಳು ಕಳೆದಿರುವವರಿವಿಗೂ ವ್ಯತ್ಯಾಸವಾಗಿರುವ ತಾತ್ಕಾಲಿಕ ಸಾರದಲ್ಲಿರುವ ಸೌರಮಾನವೆಂಬ ಭೂಮಾನವರ್ಷಗಳು $1937828571\frac{3}{7}$ ಇದು ಭಾಗಿಸಲ್ಪಡುತ್ತದೆ

$4320000 \div 1937828571\frac{3}{7} = 448$ ಮಹಾಯುಗಗಳು ಕಳೆದವೆಂದೂ, 449ನೇ ಮಹಾಯುಗವು ನಡೆಯುತ್ತಿರುವದೆಂದೂ ಸಿದ್ಧವಾಯಿತು

ಇತ್ತೀಚಿನಕಾಲದವರು ಮಹಾಯುಗಾದಿಯಿಂದಾರಂಭಿಸಿರುವರೇ ಹೊರತು ಮನುವಿನ ಶತಮಾನವರ್ಷಗಳಿಂದ ಎಣಿಸಿರುವದಿಲ್ಲ ಈ ಸಮಯದಲ್ಲಿ ಮನುವರ್ಷಗಳ ಗತಪ್ರಮಾಣದಿಂದ 449ನೇ ಮಹಾಯುಗವು ಕಳೆದಿರುವದಿಲ್ಲ ಕಳೆದಿರುವ ಮಹಾಯುಗಗಳು 448 ಮತ್ತು 449ನೆ ಮಹಾಯುಗದಲ್ಲಿ ಕಳೆದಿರುವ ಕೃತ-ತ್ರೇತ-ದ್ವಾಪರ ಈ ಯುಗಗಳು ಗತವಾಗಿಯೂ, ಈ ಕಲಿಯುಗದಲ್ಲಿ ಮುಂದೆ ಬರುವ ಪ್ರಮಾಥಿ ಸಂವತ್ಸರದ ಮೇಷ ಸಂಕ್ರಮಣಕ್ಕೆ ರವಿಯು ಬರುವ ಸಮಯಕ್ಕೆ ಸೌರಮಾನವೆಂಬ ಭೂಮಾನದ ವರ್ಷಂಗಳು 5010 ಕಳೆಯುವವು. ಇದರಿಂದ 448 ಮಹಾಯುಗಗಳು ಮತ್ತು ಮೇಲೆ ಹೇಳಿದ 3 ಅಂತರ್ಯುಗಗಳು, ಅಲ್ಲದೆ ಈ ಕಲಿಯುಗದಲ್ಲಿ ಕಳೆದ ಸೌರಮಾನವೆಂಬುವ ಭೂಮಾನದ ವರ್ಷಗಳು ಸೇರಿದ್ದು-$(4320000 \times 448 + 432000 \times 3 + 5010) = 1939253040$ ಇದರಿಂದ ಆ ದಿವಸದ ತಿಥಿಸಾಧನೆಯು ಮಾಡಲ್ಪಡುವುದು.

ಕಲ್ಪಪ್ರಮಾಣದ ತಿಥಿಗಣಗಳು-$1603998061840 \times 1939253040 = 3108618864537327893600 - 3108618864537327905600 - 1320000000 = 71958770012422-54-19-4-48$ ತಿಥ್ಯಾದಿಗಳು. ಇದೇ ತಿಥಿಗಣಗಳಿಂದ ಕಂದಿರುವ ವಿಧಾನ—ಕಲ್ಪಪ್ರಮಾಣದ ತಿಥಿಗಣಗಳಿಂದ ಪ್ರಾಕ್ಪ್ರವಾಗುವ ಒಂದು ಮನುವಿನ ಆಯುಃಪ್ರಮಾಣ ತಿಥಿಗಳು-$1145712901315 \times 6 =$ ಅರುಮನುಗಳ ಆಯುಃಪ್ರಮಾಣದಲ್ಲಿ ಗತವಾಗಿರುವ ತಿಥಿಗಳು—$6874277407915 +$ (ಒಂದು ಮನುವಿನ ಶತಮಾನಪ್ರಮಾಣದಿಂದ ಪ್ರಾಕ್ಪ್ರವಾದ ಪ್ರತಿಮನುವಿನ ವರ್ಷಪ್ರಮಾಣತಿಥಿಗಳು $1145712901\frac{25}{700} \times 28$ ಮನುವರ್ಷಗಳಿಗೆ) $32081961236\frac{105}{175} = 71950970.028\frac{21}{175}$ ಇದನ್ನು ಭೂನಕ್ಕೆ ತಂದಿರುತ್ತೆ.

ಪ್ರತಿಮಹಾಯುಗಕ್ಕೆ ತಿಥಿಗಳು $1601998061\frac{21}{25}$ ಇದರಿಂದ ಭಾಗಿಸಿ ಬಂದ ಮಹಾಯುಗಗಳ ಲಬ್ಧ $448\frac{1007480000625}{2500078000000625}$ ಮಹಾಯುಗಗಳು ಈ ಲಾಗಾಯ್ತು ಮನ್ವಂತರಗಣಿತಗಳು ಚಂದ್ರಮಾನದಲ್ಲಿ ಕೊಡದೆ ಇರುವದರಿಂದ ಮೇಲಿರುವ ಗಣಿತವನ್ನು ಕೆಲಸಿಕೊಳ್ಳುವ ವಿಧಾನವು ಬರುವ ಸಂಚಿಕೆಯಲ್ಲಿ ಕೊಡುತ್ತೀವೆ

ಶ್ರೀ ಚಾಂದ್ರ ತಿಥಿ ಮಾನದಲ್ಲಿ ನಾವು ತಿಳಿದುಕೊಳ್ಳಬೇಕಾದ ಮುಖ್ಯ ವಿಷಯಗಳು ಯಾವುವೆಂದರೆ—ನೇದಾಗನೋಪನಿಷತ್ತುಗಳು, ಪುರಾಣಗಳು, ಇತಿಹಾಸಗಳು ನಿಜವಾಗಿಯೂ ಅತ್ಯಂತ ಪ್ರಾಚೀನವೆಂದು ಕಾಲಪ್ರಮಾಣವನ್ನು ನಿರ್ಧರಿಸುವುದಕ್ಕೆ ಹೇತುವಾದುದು ಒಂದು. ಮತ್ತು ಆಗಮಗಳಲ್ಲಿ ಹೇಳಲ್ಪಟ್ಟಿರುವ ಮೂರ್ತಿಸಂಬಂಧವಾದ ಆರಾಧನವನ್ನು, ಯಾಯನ ವಿಜ್ಞಾನವನ್ನು ಪಡೆದೂಕೂಡ ನಾಸ್ತಿಕರಾಗಿರುವವರೂ ಸಹಾ ನಿರುಪಾಯರಾಗಿ ಒಪ್ಪಿಕ್ಕೊಳ್ಳಬೇಕಾದುದು ಮತ್ತೊಂದು ಮೊದಲು ನಾವು ಶ್ರೀ ಚಾಂದ್ರ ತಿಥಿಮಾನದ ಕಾಲಪ್ರಮಾಣವನ್ನು ಕಂಡು ಹಿಡಿದಿರುವುದಕ್ಕೆ ಆಧಾರವೇನೆಂದರೆ-ಈ ತಿಥಿಮಾನವು ಕಲ್ಪಾದಿ ಕಲ್ಪಾಂತದವರಿವಿಗೂ ಒಂದು ಸಹಸ್ರ ಮಹಾಯುಗದಲ್ಲಿ ಎಷ್ಟಸೌಮ್ಯದಾಗುವದೆ ದೂ ಆ ಮಹಾಯುಗದಲ್ಲಿ ತಿಥಿ ಅಂತರ್ಯುಗಗಳು ಎಷ್ಟು ಕಳೆದವೆಂದೂ, ವರ್ತಮಾನಕಾಲದ ಅಂತರ್ಯುಗದಲ್ಲಿ ಇಷ್ಟೇ ವರ್ಷ-ಮಾಸ-ತಿಥಿ-ವಾರಗಳು ಗತವಾಗಿವೆಯೆಂದು ನಿರ್ಧರಿಸುತ್ತದೆ ಅಲ್ಲದೆ ನಾವೇನಾದರೂ ಕೈತಪ್ಪಿ ಒಂದು ತಿಥಿಯನ್ನು ಹೆಚ್ಚು ಕಡಮೆ ಹಾಕಿದ್ದರೂ ಅದನ್ನು ವ್ಯಕ್ತವಾಗಿ ತಿಳಿಸುತ್ತದೆ.

ಇತ್ತೀಚಿನಕಾಲದಲ್ಲಿ ಕಾಲಾತೀತವೆಂದು ಪ್ರಚಾರದಲ್ಲಿರುವ ಗ್ರಂಥಕರ್ತೃಗಳ ತಪ್ಪುಭಿಪ್ರಾಯದಿಂದಲೋ ಅಥವಾ ಅವರ ಗ್ರಂಥಗಳಂತೆ ಆಚರಿಸಿದವರಿಂದಲೋ ಮತ್ತು ವ್ಯಾಕರಣಜ್ಞಾನವಿಲ್ಲದ ಅಲ್ಪಜ್ಞರಾದ ವ್ಯಾಪ್ಯನಕರ್ತೃಗಳಿಂದಲೋ ಏರ್ಪಟ್ಟಿರುವ ಪ್ರತಿ ಮಹಾಯುಗಾದಿ ಗಣಿತದಿಂದ, ನಮ್ಮ ಹಿಂದೂ ಧರ್ಮಕ್ಕೆ ಹೇತುವಾಗಿರುವ ವೇದಾಗಮಗಳ ಕಾಲನಿರ್ಣಯವನ್ನು ನಿರ್ಧರಿಸಲು ಸಾಧ್ಯವೇ ಇಲ್ಲ. ಆದರೆ ತಿಥಿಗಣನವನ್ನು ಕಲ್ಪಾದಿಯಿಂದ ಪ್ರಾರಂಭಿಸಿದರೆ ಕಲ್ಪಾಂತದವರಿವಿಗೂ ಮಧ್ಯಕಾಲದಲ್ಲಿ ಮಾತ್ರ ಗಡಿಪಸಂಪೂರ್ತಿಯಾಗುವದೇ ಇಲ್ಲ. ನಾವು ಕಲ್ಪಾದಿಯಿಂದಲೇ ತಿಥಿಗಣಿತಗಳನ್ನು ಮಾಡಬೇಕಾಗಿದೆ. ಹೀಗೆ ಮಾಡುವಲ್ಲಿ ಕಲ್ಪಾದಿಯಿಂದ ಇದುವರಿವಿಗೆ ವಾರಶುದ್ಧಿಗಾಗಿ ಒಂದು ತಿಥಿಯನ್ನು ಕೂಡುವುದಾಗಲಿ, ಕಳೆಯುವುದಾಗಲಿ ಬೇಕಾಗಿರುವದಿಲ್ಲ. ಇದರಂತೆಯೇ ಸೃಷ್ಟ್ಯಾದಿ ತಿಥಿಗಳನ್ನು ತರುವ ವಿಧಾನವನ್ನು ಮುಂದಿನ ಸಂಚಿಕೆಯಲ್ಲಿ ನೋಡಬಹುದು

ಅಸ್ಮದ್ಗುರುಗಳು ಪೂರ್ವಭಾಗದಲ್ಲಿ ಹೇಳಿರುವ ಕಕ್ಷಾವೃತ್ತಗಳ ಸಂಖ್ಯಾರವು ಮತ್ತು ಗ್ರಹಗಳಿಗೂ ಈ ಭೂಮಿಗೂ ವರ್ತಿಸುವ ವ್ಯತ್ಯಾಸಸಂಬಂಧವಾದುದು. ಉತ್ತರ ಭಾಗದಲ್ಲಿ ಹೇಳಿರುವದು ಧ ಮಧ್ಯಕ್ಕೂ ಭೂಮಧ್ಯಕ್ಕೂ ಯಾವ ವ್ಯತ್ಯಾಸವೂ ಬರದ ವಿಷಯವು.

ಈಗ ನಾವು ಹೇಳಿಕ್ಕೊಂಡುಬರುವ ಸಂಕಲ್ಪಗಳ ಪದ್ಧತಿಯನ್ನು ಅತ್ಯಂತ ಪ್ರಾಚೀನಕಾಲದಿಂದ ತಪ್ಪಿಸದೇ ಅನುಸರಿಸಿಕ್ಕೊಂಡು ಬಂದಿರುವುದು ನಮ್ಮ ಸುಕೃತವೆಂದೇ ಹೇಳಬಹುದು (ಸಶೇಷ)

• ಬೆಳ್ಳಾವಿ ರುದ್ರವ.ತೀಯ ಮಲ್ಲಿಕಾರ್ಜುನಶಾಸ್ತ್ರಿ

ಮಿತ್ರವಿಯೋಗದ ದುಃಖೋಪಶಮನ.

ಸ್ವಯಪ್ರಭಾವಾಚಕರೇ, ಪ್ರಭಾಪತ್ರಿಕೆಯಲ್ಲಿ "ದೈವಜ್ಞವಿನೋದ" ಎಂಬ ಅಂಕಿತದಿಂದ ಅನೇಕಾನೇಕ ಲೇಖಗಳನ್ನು ಬರೆದವರೂ, ಸನಾತನ ಧರ್ಮಾಭಿಮಾನಿಗಳೂ ಆದ ವೇ॥ ಪಂಚಾಕ್ಷರಶಾಸ್ತ್ರಿಗಳು ಹಿರೇಮಳಿ, ಶಿರೋಳ್ ಇವರು ಸ್ವರ್ಗಾಮದಲ್ಲಿ ವಿಷಮ ಜ್ವರದಿಂದ ಶಿವಾಧೀನರಾದರೆಂಬ ವಿಷಯವನ್ನು ಕೇಳಿ ಅವರ ಕೇವಲ ಸ್ನೇಹಿತನಾದ ನಾನು ಅವರ ಅಕಾಲಿಕ ವಿಯೋಗದಿಂದ ದುಃಖಸಮುದ್ರದಲ್ಲಿ ಮುಳುಗಿರುತ್ತೇನೆ ವೇ॥ ಪಂಚಾಕ್ಷರಶಾಸ್ತ್ರಿಗಳ ವಿಯೋಗದಿಂದಾದ ದುಃಖವನ್ನು ಬಣ್ಣಿಸಲಶಕ್ಯವಲ್ಲ ಒಂದು ಧರ್ಮಶಾಲೆಯಲ್ಲಿ ಒಂದಿರಲು ಪಾಪಮಾಡಿ ಪ್ರಾಕೃತರಾಲಕ್ಕೆ ತಮ್ಮ ತಮ್ಮ ಊರುಗಳಿಗೆ ಹೊರಟುಹೋಗುವ ಪಥಿಕರಿಗೆ ಎಷ್ಟೋ ವಿಷಾದವೆನಿಸುತ್ತದೆ. ಅಂದರೆ ಈ ಸಪ್ತಶ್ರರ ಪರಿಚಯವು ನನಗೆ ೨೦ ವರುಷಗಳಿಗಿಂತ ಹೆಚ್ಚು ಕಾಲ ಇದ್ದುದರಿಂದ ಇವರ ವಿಯೋಗಜನ್ಯಮಃಖವನ್ನು ಸಹಿಸಲಶಕ್ಯವಾಗಿದೆ. ಇವರು ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಮೂರನೆ ಇಯತ್ತೆಯ ಮಟ್ಟಿಗೆ ಮಾತ್ರ ವಿದ್ಯಾಭ್ಯಾಸಮಾಡಿದ್ದರಲ್ಲದೆ, ಉಚ್ಚವೃತ್ತಿಯ ಯಾವ ಶಿಕ್ಷಣವನ್ನಾಗಲಿ ಸಂಸ್ಕೃತವನ್ನಾಗಲಿ ಕಲಿತವರಲ್ಲೆಂದು ನನಗೆ ಸಂಪೂರ್ಣ ಗೊತ್ತಿದೆ. ಹೀಗಿದ್ದರೂ ಇವರು ಲೇಖನ ಕಲೆಯಲ್ಲಿಯೂ ವೈಕೃತ್ಯ ಕಲೆಯಲ್ಲಿಯೂ, ಅಸಾಧಾರಣವಾದ ಯಶಸ್ಸನ್ನು ಪಡೆದುದನ್ನು ನೋಡಿದರೆ, ಇದಕ್ಕೆ ಶ್ರೀಜಗದ್ಗುರುಪಂಚಾಚಾರ್ಯರ ಕೃಪೆಯೇ ಮುಖ್ಯವೆಂದು ಧಾರಾಳವಾಗಿ ಹೇಳಬಹುದಾಗಿದೆ ಇವರು ಯಾವದೊಂದು ಆಶೆಯಿಂದ ಅಥವಾ ಪ್ರತಿಷ್ಠೆಯಿಂದ ಕೆಲಸ ಮಾಡಲಿಲ್ಲ; ಜ್ಞಾನದಿಂದ ತಮಗೆ ಆನಂದವುಂಟಾಗಬೇಕೆಂತಲೂ, ಆ ಜ್ಞಾನವನ್ನು ಶುದ್ಧ ಸಂಪ್ರದಾಯದ ವೀರಶೈವರಲ್ಲಿ ಪಸರಿಸಿ ಲೋಕೋಪಕಾರವನ್ನು ಮಾಡಬೇಕೆಂತಲೂ ಅವರ ಇಚ್ಛೆಪ್ಪೆ ಇತ್ತು ಅದರಿಂದಲೇ "ಪಂಚಾಚಾರ್ಯಪ್ರಭಾ" ಪತ್ರಿಕೆಯು ಜನ್ಮವೆತ್ತಿದ ಲಗಾಯಿತು ತಪ್ಪದೆ ಧರ್ಮಿಕ, ನೈತಿಕ, ಸಾಮಾಜಿಕ, ವಿಷಯಗಳನ್ನು ಕುರಿತು "ದೈವಜ್ಞವಿನೋದ" ಎಂಬ ಹೆಸರಿನಿಂದ ಒರೆದು ವೀರಶೈವ ಸಮಾಜಕ್ಕೆ ಅನಂತ ಋಣಕಾರಮಾಡಿದರು ಇವರ ವಿಯೋಗದಿಂದ ವೀರಶೈವ ಸಮಾಜವೇ ಒಂದು ರತ್ನವನ್ನು ಕಳೆದುಕೊಂಡಿತೆಂದು ಹೇಳಬಹುದಾಗಿದೆ

ನಾವು ಈ ಪ್ರಸಂಗದಲ್ಲಿ ದುಃಖಿಸುತ್ತ ಕುಳಿತುಕೊಳ್ಳುವದು ಸರಿಯಲ್ಲ ದೇವರು ಹೇಗೆ ಅನಾದಿಯೋ ನಿತ್ಯನೋ ಹಾಗೆ ಜೀವನು ನಿತ್ಯನು. ಸಾಯದೆ ಜೀವದಲುವಾಗಿ ಅಳದೆಂಡೆಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ ಹೇಳಿದ್ದಾನೆ ಅದ್ದರಿಂದ ಸತ್ತವರ ದೆತೆಯಿಂದ ಶೋಕಿಸುವದು ಕೇವಲ ವ್ಯರ್ಥವು. (ಈ ಜಗತ್ತು ನಾಟಕದ ರಂಗಭೂಮಿಯು ಪುರುಷರೂ ಸ್ತ್ರೀಯರೂ, ನಾಟಕದ ಪಾತ್ರಗಳಾಗಿದ್ದಾರೆ. ಅವರು ರಂಗಭೂಮಿಗೆ ಬರುವರು ಹಾಗೂ ತೆರಳುವರು) ಈ ನಾತ್ಪರ್ಯದಿಂದ ಜಗತ್ಸಾಟಕದ ಅಸ್ಥಿರತ್ವತೆ ಸಿದ್ಧವಾಗುತ್ತದೆ. ಬೆಳಗಾದಕೂಡಲೆ ನಾಟಕವು ಮುಗಿಯುವಂತೆ ಮರಣಾಂತದಲ್ಲಿ ಜಗತ್ಸಾಟಕದೊಳಗಿನ ಪಾತ್ರಗಳ ಕೆಲಸವು ಮುಗಿಯುವದು. ಆದರೆ ಪ್ರತಿ

ಯೊಂದು ಪಾತ್ರವು ತನ್ನ ಧಾಗವನ್ನು ಹೇಗೆ ಮಾಡಿ ಹೋಯಿತೆಂಬದನ್ನು ಮಾತ್ರ ಜಗತ್ತಿನ ಜನರೆಲ್ಲ ನೋಡುತ್ತಿರುವರು. "ಎಲೈ ಮನುಷ್ಯನೇ! ನೀನು ಹುಟ್ಟಿದ್ದಾಗ್ಗೆ ಅಳುತ್ತಿದ್ದಿ. ನಿನ್ನನ್ನು ನೋಡಿ ಜನರು ನಗುತ್ತಿದ್ದರು ಅದರೆ ನೀನು ಸಾಯುವಾಗ ನಿನ್ನ ಆಚರಣೆಕ್ರಿಯೆಗಳಿಂದ ನಗುತ್ತಿರುವಂತೆಯೂ, ಜನರು ಅಳುತ್ತಿರುವಂತೆಯೂ ಮಾಡು" ಎಂದು ಮಹಾತ್ಮರು ನುಡಿದಿರುವರು. ಇತ್ಯಾದಿ ವಿಚಾರದಿಂದ ನಾವು ಮನಸ್ಸನ್ನು ಶಾಂತಗೊಳಿಸುವದು ವಿಹಿತವು; ಅಸಾಮಾನ್ಯ ಪುರುಷರು ಮರಣ ಹೊಂದಿದರೆ ನಾವು ಅವರಲ್ಲಿರುವ ಅನುಪಮ ಗುಣಗಳನ್ನು ಹಿಂಬಾಲಿಸಲಿಕ್ಕೆ ಯತ್ನಪಡಕ್ಕದ್ದು. ಆದುದರಿಂದ ವೇ॥ ಪಂಚಾಕ್ಷರ ಶಾಸ್ತ್ರಿಗಳಂತೆ ಸಜ್ಜನಶತ್ರು ಶುದ್ಧಸಂಪ್ರದಾಯ ವೀರಶೈವರೇ! ಏಳ್ಗೆಯಲ್ಲಿ ಪ್ರವರ್ತರಾಗಿರಿ. ಅವರಂತೆ ಜಗದಾಚಾರ್ಯರಲ್ಲಿ ಭಕ್ತಿ ವಿಶ್ವಾಸಗಳನ್ನಿಡಿರಿ. ಮಹಾಮಹಿಮರಾದ ಶ್ರೀಜಗದ್ಗುರು ಪಂಚಾಚಾರ್ಯರು ಶ್ರೀ ಪಂಚಾಕ್ಷರ ಶಾಸ್ತ್ರಿಗಳ ಆತ್ಮಕ್ಕೆ ಶಾಂತಿಯನ್ನಿಯಲಿ, ಮತ್ತು ಅವರ ಪಂಚವರುಷದ ಮಗನಿಗೆ ಪೂರ್ಣಾಯುಸ್ಸನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಟಿ. ಎ. ಬೈಲಹೊಂಗಲ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಪಂಡಾ ಸಂಘ, ಬೆಂಗಳೂರು.

ಮೇಲ್ಕಂಡ ಸಂಘದಿಂದ 1938–39 ನೇ ಸಾಲಿಗೆ ವೀರಶೈವ ವಿದ್ಯಾರ್ಥಿಗಳಿಗೆ ಕೊಡಬೇಕಾಗಿದ್ದ ವೇತನಗಳನ್ನು ಕಾರಣಾಂತರದಿಂದ ಇದುವರೆವಿಗೂ ನಿಲ್ಲಿಸಬೇಕಾಗಿ ಬಂತು. ಈ ವಿಚಾರದಲ್ಲಿ ಸಂಘವಿದ್ದ ಕೊಡಕುಗಳು ಈಗ ಬಿಡುಗಡೆಯಾಗಿ ಈ ಸಂಬಂಧದ ತೊಂದರೆಗಳು ನಿವಾರ್ತನೆಯಾಗಿರುತ್ತವೆ. ಬಡವಿದ್ಯಾರ್ಥಿಗಳಗುಂಟಾದ ತೊಂದರೆಗಳಿಗಾಗಿ ಕಮಿಟಿಯವರು ವಿಷಾದಿಸುತ್ತಾರೆ.

ಸದರೀ ಸಾಲಿನ ವೇತನಗಳನ್ನು ಶೀಘ್ರದಲ್ಲಿಯೇ ತೀರ್ಮಾನಿಸುವ ಪ್ರಯತ್ನವನ್ನು ಮಾಡಿ, ವೇತನ ಮುಂಜೂರಾದ ವಿದ್ಯಾರ್ಥಿಗಳಿಗೆ ತಡವಿಲ್ಲದೆ ಹಣ ವಾವತಿ ಮಾಡಲಾಗುತ್ತೆಂದು ಈ ಮೂಲಕ ಸಮಾಜ ಬಾಂಧವರಿಗೆ ತಿಳಿಸಿರುತ್ತೆ.

ತಾ॥ 26-12-38, ಸರಾಫ್ ಬಸಪ್ಪ,

ಬೆಂಗಳೂರು. ಟ್ರೆಜರರ್ ಮತ್ತು ಅಕ್ಟಿಂಗ್ ಸೆಕ್ರೆಟರಿ.

ದುಃಖವಾರ್ತೆ!

ಗುಬ್ಬಿ ತಾ॥ ಮಲ್ಲೇನಹಳ್ಳಿಗ್ರಾಮದ ಶ್ರೀ ಸಿದ್ಧರಾಮಯ್ಯನವರು ೨ ತಿಂಗಳುಗಳಿಂದ ಕಾಯಿಲೆಯಿಂದ ಇದ್ದು, ಕಳೆದತಿಂಗಳು ೩೩ನೆಯ ತಾರೀಖಿನ ದಿವಸ ಮೃತರಾದರೆಂಬ ವಿಷಯವನ್ನು ಬರೆಯಲು ಪರಮ ವ್ಯಸನವೆನಿಸುತ್ತದೆ. ಇವರು ಒಳ್ಳೆ ಭೂತದಯಾ ಪರರೂ ಅನ್ನದಾನಿಗಳೂ, ಗುರುಪೀಠಾಭಿಮಾನಿಗಳೂ ಆಗಿದ್ದರು. ಶ್ರೀಮದ್ರಂಭಾಪುರೀ ಜಗದ್ಗುರುಗಳವರು ತಮ್ಮ ಪ್ರಾಂತಕ್ಕೆ ವಿಜಯಂಗೈದ ಸಮಯದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದರು ಮತ್ತು ಉಜ್ಜಯಿನೀ ಪೀಠದ ಪೂರ್ವದ ಶ್ರೀ ವುರುಲಸಿದ್ಧ ಸ್ವಾಮಿಗಳವರಿಗೆ ಸರ್ಕೀಟ್‌ನಲ್ಲಿ ಬಹಳದಿವಸವಿದ್ದು ವಿಶೇಷ ಸೇವೆಯನ್ನು ಸಲ್ಲಿಸಿದ್ದರು. ಇಂತಹ ಗುರುಭಕ್ತರು ಅಗ್ಮಾರೆಯಾದುದು ನಮ್ಮ ಗ್ರಾಮದ ದುರ್ದೈವವೆಂದೇ ಹೇಳಬೇಕಾಗಿದೆ. ಶ್ರೀಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನಿಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಶುಭ್ರಶಾರ್ದೂಲಾರಾಧ್ಯ ರಾಜೆಪೇಟ್ಟೂರು ಮಳೆಮಳ ಮುದೇನೂರು.

ಪ್ರ–ಹಣದ ಪ್ರಭಾವವೇನು?

ಉ–ಈ ಘೋರವಾದ ಸಂಸಾರದಲ್ಲಿ ಸಂಪತ್ತೆಂದು ಕಲ್ಪಿತವಾದ ಧನವು ಜೀವನಾಧಾರವಾಗಿದ್ದರೂ ಅಧಿವ್ಯಾಧಿಗಳಿಗೆ ಉತ್ಪತ್ತಿ ಸ್ಥಾನವಾಗಿ, ವರ್ಷಾಕಾಲದ ಪ್ರವಾಹವು ವಿವಿಧವಾದ ತೆರೆಗಳಂ ವಹಿಸುವಂತೆ ಜಾತ್ಯಪ್ರದಗಳಾದ ಮನೋರಥಗಳಂ ವಹಿಸುತ್ತ ಜನರಿಗೆ ವಿಶೇಷ ಮೋಹವಂ ಹುಟ್ಟಿಸುತ್ತಿರುವದು ಹೃದಯವಂ ಕತ್ತರಿಸುವ ಮೊನೆಗಳುಳ್ಳ ವಿಚಿತ್ರವಾದ ಚಿಂತೆಗಳೆಂಬ ಅರಗಳ ಸಮೂಹಕ್ಕೆ ಚಕ್ರವಾಗಿ ದುಃಖಮಯವಾದಾಗ್ಯೂ ಸುಖಸ್ವರೂಪವಾಗಿ ತೋರುತ್ತಲೂ ಸಂಸಾರವಂ ವೃದ್ಧಿ ಹೊಂದಿಸುತ್ತಲೂ ಸಮಸ್ತವಾದ ಅಪತ್ತುಗಳಿಗೆ ತಾಯ್ನನೆಯಾಗಿರುವದು ಇದು ಕಾಲಚಕ್ರವನ್ನನುಸರಿಸುವ ಪ್ರಾಣಿಯಂತೆ ಒಂದು ಮುಹೂರ್ತವಾದರೂ ಒಂದೆಡೆಯಲ್ಲಿ ನಿಲ್ಲದೆ, ಅತಿಚಲಲಾದ ಕಾಮಿನಿಯನ್ನನುಸರಿಸುವದು ಇದು ಮನುಷ್ಯನಲ್ಲಿ ಅಶ್ಕಲ್ಪವಾಗಿ ಬೇರಿದಾಗ್ಯೂ ನಾಭಿಯಲ್ಲಿ ಸೇರಿದ ಶೀತದಂತೆ ಅತಿ ದಾಹವನ್ನುಂಟುಮಾಡುವದು. ಇದು ಪ್ರಕಾಶರೂಪವಾದಾಗ್ಯೂ ದೀಪಶಿಖೆಯಂತೆ ಧೂಮದೋಷಗಳಿಂದ ಶುಭ್ರವಾದ ಮನವೆಂಬ ಮನೆಯನ್ನು ಮಲಿನ ಮಾಡುವದು. ಇದು ಕಾಮಿನಿಯಂತೆ ಗುಣದೋಷಗಳ ತಾರತಮ್ಯವಿಲ್ಲದೆ ಸುಳ್ಳು-ಕಳ್ಳತನ-ಜೂಜು-ವ್ಯಾಪಾರ-ನಿಂದಾಸ್ತುತಿ, ವ್ಯಭಿಚಾರ, ಮೋಸ, ನೀರಸಾದಕಶತನ, ಯುದ್ಧ ಇತ್ಯಾದಿ ಮಾರ್ಗಗಳಿಂದ ವೃದ್ಧಿಯನ್ನು ಹೊಂದುತ್ತ ಮಹತ್ತರವಾದ ಪಾಪಗಳಂ ವೃದ್ಧಿಪಡಿಸುವದು ಇದರ ಸಂಬಂಧವಾದೊಡನೆ ಆ ಪುರುಷನ ಪ್ರಾಜ್ಞತೆ, ಶೌರ್ಯವೂ ಸಹ ಸಂವಾದನೆಯಲ್ಲಿಯೂ, ಸಂಪಾದಿಸಿದ್ದನ್ನು ರಕ್ಷಿಸುವುದರಲ್ಲಿಯೂ, ನಿಲ್ಲುವದು. ಕೃತಜ್ಞತೆಗೆ ಬದಲಾಗಿ ಕೃತಘ್ನತೆಯುಂಟಾಗುವದು. ಮೈದುಳ್ಳಮನೋಹರತ್ವಗಳು ವಂಚನಾಪರವಾದ ಮಾತಿನಲ್ಲಿ ಮಾತ್ರ ನಿಲ್ಲುವವು. ಅದ್ದರಿಂದ ಕೃತಜ್ಞನು ದ್ರೋಹಿಯೆಂತಲೂ, ಪ್ರಾಜ್ಞನು ಮೂಢನೆಂತಲೂ, ಖ್ಯಾತಿಯಂ ಪಡೆಯುವರು ಇದನ್ನು ನನ್ನದೆಂದಭಿಮಾನಿಸಿದ ಮಾತ್ರದಿಂ ಮದಾದಿ ವಿಕಾರವನ್ನುಂಟು ಮಾಡುವುದರಿಂದ ಇದು ಮದ್ಯಕ್ಕಿಂತಲೂ ಅಧಿಕವಾಗಿರುವದು. ಇದು ಶುಭದೃಷ್ಟಿಯೆಂಬ ದೀಪಕ್ಕೆ ಬಯಗಾಳಿಯಾಗಿ, ದುಃಖಗಳೆಂಬ ಸರ್ಪಗಳಿಗೆ ಗುಹೆಯಾಗಿ ಸತ್ಕರ್ಮಗಳೆಂಬ ಕಮಲಗಳಿಗೆ ರಾತ್ರಿಯಾಗಿರುವದು ಇದು ಮರುಮರೀಚಿಕಾ ಜಲಕ್ಕಿಂತಲೂ ಅಧಿಕವಾಗಿ ವಂಚನೆಯಂ ಮಾಡುವುದು. ಪ್ರವಾಹದಂತೆ ನಿಲ್ಲಲಶಕ್ಯವಿದ್ದಲ್ಲವಾದರೂ ಮುಂದೆ ಪರಾಜಯವನ್ನೇ ಉಂಟುಮಾಡುವದು. ಅತಿ ಜಾಗರೂಕತೆಯಿಂದ ಕಾಪಾಡುತ್ತಿದ್ದರೂ ಗಾಳಿಬಡಿದ ದೀಪದಂತೆ ಮಾಯವಾಗುವದು. ಈ ಧನಪಿಶಾಚಿಗ್ರಸ್ತನಾದವನು ಕಣ್ಣಿದ್ದರೂ ಕುರುಡನಂತೆ ಜಾತಿಕುಲ ಮಾತಿನಿಂದ ಮಾಗರ್ವಂ ತಿಳಿದು ನಡೆಯುವನು; ದೃಢಕಾಯನಾಗಿ ಸರ್ವಾವಯವಗಳುಳ್ಳವನಾಗಿದ್ದರೂ ಕೂತವನು ಏಳುವುದಕ್ಕೆ ಹಸ್ತಲಾಘವವನ್ನಪೇಕ್ಷಿಸುವನು ಪ್ರಾಜ್ಞನಾದಾಗ್ಯೂ ಅಜ್ಞಬಾಲಕರಂತೆ ವೃದ್ಧರಂ ಪರಿಹಾಸವಂ ಗೈಯುವನು ಸಾಧುವಾದದಲ್ಲಿ ಕೆಲವುಡನಂತೆಯೂ, ಮೂಗನಂತೆಯೂ ಸ್ವಜ್ಞನಾಗಿರುವನು ಎಂತಹ ಸದಾಚಾರಿಯಾದಾಗ್ಯೂ ದುರಾಚಾರಿಯಾಗುವನು. ಧರ್ಮಪರನಿಗೆ ದ್ರೋಹಬುದ್ಧಿಯಂ ಹುಟ್ಟಿಸುವದು. ಕೃತಜ್ಞನಾದಾಗ್ಯೂ ಕಣ್ಣುರಿಯುಳ್ಳವನಂತೆ ಮಿತ್ರಮಂಡಲದ ಅಭ್ಯುದಯವಂ ಸಹಿಸನು ಶಾಸ್ತ್ರಜ್ಞನಾದಾಗ್ಯೂ ಶತ್ರವೇ ವಿಚಾರಿಸದೆ, ಕೋಣನಾದಾಗ್ಯೂ ಮನವಂ ನಿಗ್ರಹಿಸದೆ ಧೀರನಾದಾಗ್ಯೂ ವಿಷಯಗಳಿಗೆ ಚಪಲಪಡುತ್ತ ಪಂಡಿತನಾದಾಗ್ಯೂ ಹಿತಾಹಿತಜ್ಞಾನವಿಲ್ಲದೆ ವಂಚಕರಾದ ಜನಗಳಿಗೆ ವಶನಾಗಿ ಹುಚ್ಚನಂತೆ ಅಲೆಯುತ್ತಿರುವನು ಇದು ತನ್ನಂ ರಕ್ಷಿಸುವದಿಲ್ಲೆಂಬ ದ್ವೇಷದಿಂ ಧಾರ್ಮಿಕನಲ್ಲಿ ಕೂಡುವದಿಲ್ಲ ತನಗೆ ನಿರ್ಬಂಧವಂ ಮಾಡುವರೆಂಬ ದುಃಖದಿಂದ ಬೋಧಗಳಲ್ಲಿಯೂ ನಿಲ್ಲುವದಿಲ್ಲ. ಮತ್ತು ತನ್ನಂ ಬಲಾತ್ಕಾರದಿಂ ಪಿಡಿದನೆಂಬ ಆಕ್ರೋಶದಿಂದ ಶೂರನಲ್ಲಿ ಚಪಲವಾಗುವದು ಅಂದರೆ ಇದಕ್ಕೆ ಲೋಭಯು ಪುತ್ರನೆಂತಲೂ, ದಾತೃವು ಪತಿಯೆಂತಲೂ ಜ್ಞಾನಿಗಳು ಹೇಳುತ್ತಿರಿ ಪ್ರಿಯವಾಚಕರೇ! ಹಣದ ಪ್ರಭಾವವು ಈ ರೀತಿ ವಿಲಕ್ಷಣವಾಗಿರುವದಲ್ಲದೆ ಸಪಂಯಬಂದರೆ ತಂದೆ-ತಾಯಿ-ಮೈಗ-ಸಹೋದರ-ಗಂಡ-ಹೆಂಡತಿ-ಮಿತ್ರ-ಗುರು-ರಾಜರು ಇವರಂ ತೀರಿಸಿ ಬಿಡುವ ದುರ್ಬುದ್ಧಿಯಂ ಹುಟ್ಟಿಸುವದು ಇಂತಹ ವಿಸಮ ವಿಷಯಗಳು ಅನೇಕ ನಡೆದಿರುವುದನ್ನೂ, ಹಾಲಿ ನಡೆಯುತ್ತಿರುವುದನ್ನೂ ಇತಿಹಾಸಗಳ ಮೂಲಕವೂ ವರ್ತಾಪತ್ರಗಳ ಮೂಲಕವೂ ನೋಡುತ್ತಲೇ ಇದ್ದೇವೆ ಅಲ್ಲದೆ ಕಾಳಿದಾಸ ಕವಿಯೂ ಸಹ ಇದಂ ವಿಷಯದಲ್ಲಿ " ಅವಿಜ್ಞಾಸನಿಘ್ನಾನಾಯ ಮಹಾಪಾತಕಹೇತುವೇ ॥ ವಿತ್ತಾಯಾಸ ವಿರುದ್ಧಾಯ ಹಿರಣ್ಯಾಯ ನಮೋನಮಃ ॥ ಎಂದು ಹೇಳಿರುವದು ಯೋಗ್ಯವಾಗಿಯೇ ಇರುವದು—ಈ ಹಣವು ಬರುವಲ್ಲಿಯೂ, ಇರುವಲ್ಲಿಯೂ, ಕೈಬಿಟ್ಟು ಹೋಗುವಲ್ಲಿಯೂ ಸಹ ಬಹುದುಃಖವನ್ನುಂಟುಮಾಡುವದಾದ್ದರಿಂದ ಇದು ಸರ್ವವಿಧದಿಂದಲೂ ದುಃಖಸ್ವರೂಪವೇ ಆಗಿರುವದು. ಈ ಪರಿಯಿಂದ ವಿಲಕ್ಷಣರೂಪಳಾದ ಇವಳಂ (ಹಣವನ್ನು) "ಲಕ್ಷ್ಮಿ" ಎಂದು ಜನರು ಹೇಗೆ ಹೇಳುವರೋ ತಿಳಿಯುವದಿಲ್ಲವು.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಪಟ್ಟು ಬರುವ ಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ ಕ್ವಿನೈನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದಿ ಸಸೀತ ಸಂಪೂರ್ಣ ಗುಣಪಡಿಸುತ್ತದೆ. ೪ ಡೋಸ್ಸ್ ಸೀಸೆಗೆ ಆಣೆ 0-14-0, 8 ಡೋಸ್ಸ್ ಸೀಸೆಗೆ ರೂ. 1-8-0, ಡಜನ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಪರ್ಸ—ಸ್ವಸ್ಥೇಂದ್ರಿಯ ಸ್ವಲನ, ಶೀಲ್ಯಸ್ವಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ಸಪ್ಪವಾಗುವದು, ವೀರ್ಯಸ್ಖಲನ, ತೆಳ್ಳಗಾದಧಾತು, ಇವೆಲ್ಲದರ ಬುಡವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪಾಸ್ಟಿಕ ರಸಾಯನವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0

ಪ್ರಜ್ಞಾತಿಪಟ್ಟಿ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲರೋಗದ ಹೊಟ್ಟೆಹುಳುಗಳನ್ನು ನಾಶಪಡಿಸಿ ಜಾಡಿಸುವ ದರಲ್ಲಿ ಮುಖ್ಯ ಔಷಧಿ. ಡಜನ್ ಆ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಮು—ಕಲಿಂಚವಾದ ಹುಳ ಮೇಯುವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟಿ—ಬಸೀ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋನ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ಕಾಮರೆಗ್ರಹಣ ರೋಗದಿಂದ ಮಾಂಸ ಜೋಲುಬಿದ್ದು, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಈಯರ್ ಒಯಿಲ್—ಕಿವಿ ಸೊರುವದು, ವ ನೋವ ಕಿವುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಸ್ಣ ಹೊರಳಿಡಿಗೆ ನಿಷ್ಕಾಪಧಿ ಸೀಸೆಗೆ ರೂ. 1-0-0.

ಡಯೆರಿಯಾ ಕ್ಯೂರ್—ಅತಿಸಾರದ ಹೊರಳಿಡಿಗೆ ಸೀಸೆಗೆ ರೂ. 1-0-0.

ಕೆಂಪೌಂಡ್ ಸಿರಪ್ ವೆಸಿಟೊಜ—ಪ್ರಮೇಹ ಮೂತ್ರದ್ವಾರದಿಂದ ಕೀವು, ಮೂತ್ರತೊಯ್ಯುವಾಗ ತಡೆಯಲಾರದ ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆದಿಟ್ಟಲ್ಕೆ ಸಾಮರ್ಥ್ಯವಿಲ್ಲದಿರುವದು, ಇನೇ ಮೊದಲಾದ ಪ್ರಮೇಹದ ಲಕ್ಷಣಗಳ ಬುಡವನ್ನು ತೆಲವು ಹಾಕುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0

ಕುಷ್ಠ ಬಿಳ್ಳು, ಹೊಮ್ಮೊಪಕಿ ಔಷಧಿಗಳು-ಸಣ್ಣಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾಧ್ಯರ.

ಪಂಚಾಚಾರ್ಯಪ್ರಭಾ.

೧೯೩೯ನೆಯ ಜನವರಿ ತಾ॥ ೨ನೇ ಸೋಮವಾರ.

ವೀರಶೈವಪ್ರಾಶಸ್ತ್ಯ.

ಮೋಕ್ಷವೆಂಬ ಮಣಿಪ್ರಾಸಾದವನ್ನು ಏರಲು ಸಾಧಕಗಳಾದ ಅನಾದಿಶೈವಾದಿ ವೀರಶೈವಾಂತಗಳಾದ ಸಪ್ತ ಸ್ಥಾನಗಳು ಸಪ್ತಸೋಪಾನಗಳಾಗಿರುತ್ತವೆ. ಇವುಗಳಲ್ಲಿ ವೀರಶೈವ ಎಂಬುದೇ ಏಳನೆಯ ಸೋಪಾನವಾಗಿದೆ. ಈ ಏಳನೆಯ ಸೋಪಾನವನ್ನೇರುವವರೆಗೂ ಶಿವಜೀವೈಕ್ಯರೂಪ ಮುಕ್ತಿಯು ಸಂಭವಿಸುವುದಿಲ್ಲ. ಇದರ ಹಿಂದಿನ ಜ್ಞಾನವೈರಾಚರಣೆಯು ಅಂಗಲಿಂಗಿಗಳ ಸಾಮರಸ್ಯ ಜ್ಞಾನವನ್ನುಂಟುಮಾಡಿ ಚಿತ್ತವನ್ನು ಪರಿಪಕ್ವಾನತೆಗೆ ತರಿಯವದು. ಇದರ ಹಿಂದಿನ ಯೋಗೈಶ್ವರಾಚರಣೆಯು ಚಿತ್ತಪರಿಪಕ್ವತೆಗೆ ಸಾಧನವಾದ ಇಂದ್ರಿಯಜಯವನ್ನುಂಟುಮಾಡುವದು. ಹೀಗೆ ಇಂದ್ರಿಯಜಯವು ಚಿತ್ತಪರಿಪಕ್ವತೆಯೂ ಎರಡೂ ಒಂದೆಯೆಂಬ ರೀತಿ ಶಿವಜೀವನ (ಅಂಗ ಲಿಂಗ) ಸಾಮರಸ್ಯಸಿದ್ಧಿಯನ್ನುಂಟುಮಾಡುವುವು. ಇಂಥ ಸಾಮರಸ್ಯದ ತಿರುಳೇ ವೀರಶೈವಮತದ ಸ್ವರೂಪವಾಗಿದೆ.

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಮಾಂ ರಮಂತೇ ಯೇ ಶೈವಾ ವೀರಶೈವಾ ಪ್ರಕೀರ್ತಿತಾಃ ।

ಶಿವಜೀವರಿಬ್ಬರಿಗೂ ಏಕತ್ವವನ್ನು ಬೋಧಿಸುವ ವೇದಾಂತವಿದ್ಯೆಯಲ್ಲಿ ಯಾವ ಶೈವರು ಸದಾ ನಿಹಿರುವರೋ ಅವರೇ ವೀರಶೈವರೆಂದು ಶಿವಾಗಮವು ವೀರ ಶೈವಪದದ ನಿರ್ವಚನವನ್ನು ಮಾಡಿರುವದರಿಂದ ವೀರ ಶೈವ ಎಂಬ ಪದವು. ಗುರುಮುಖದಿಂದ ತ್ರಿವಿಧದೀಕ್ಷೆಯಂ ಪಡೆದು ತ್ರಿವಿಧಶರೀರಗಳಲ್ಲಿರುವ ತ್ರಿವಿಧಮಲಗಳನ್ನು ನಾಶಗೊಳಿಸಿ ತ್ರಿವಿಧಲಿಂಗಗಳನ್ನು ಧರಿಸಿರ್ದು ಯೋಗದಿಂದ ಇಂದ್ರಿಯದರ್ಪವನ್ನಡಗಿಸಿ ಜ್ಞಾನದಿಂದ ಸುಲಾಪರಣವನ್ನು ಪರಿಹರಿಸಿ ಪರಿಶುದ್ಧಿಗೊಂಡು ಪರ ಶಿವನಲ್ಲಿ ಬೆರೆದ ಸಿದ್ಧಪುರುಷನೆಂಬ ಅರ್ಥವನ್ನೇ ಕೊಡುತ್ತದೆ. "ನಿರಸ್ತಸಮಸ್ತೋಪಾಧಿಕಳಂಕನಿರತಿಶಯ ಮಂಗಲಾಸ್ಪದತ್ವಂ ಶಿವತ್ವಂ" ಯಾವನು ಉಪಾಧಿಯ ಲೇಶಮಾತ್ರ ಸ್ಪರ್ಶವೂ ಇಲ್ಲದೆ ನಿರತಿಶಯವಾದ ಮಂಗಲಾಸ್ಪದನಾಗಿರುವನೋ ಅವನೇ ಶಿವನು.

"ಅನಾದ್ಯಜ್ಞಾನವಾಸನಾವಶ್ಯಂಭವಿಜೃಂಭಿತವಿಚಿತ್ರಕರ್ಮ ಫಲಭೋಗಾನುಗುಣಬಹುವಿಧಶರೀರಪ್ರತಿನಿಯತಗರ್ಭವ್ಯಾಕಾರ ಪರಪರಸ್ಪೀಡನೋತ್ಪಾದಸಹಿಷ್ಣುತ್ವಂ ಜೀವತ್ವಂ"

ಹಿಂದುಹಿಂದಿನ ವಾಸನೆಗಳಿಂದ ನಾನಾವಿಧ ಪುಣ್ಯ ಪಾಪಕರ್ಮಗಳನ್ನು ಮಾಡುತ್ತ ಆ ಪುಣ್ಯಪಾಪಾನುಗುಣವಾದ ನಾನಾವಿಧ ಶರೀರಗಳನ್ನು ಧರಿಸುತ್ತ ಒಂದು ಶರೀರದಿಂದ ಮತ್ತೊಂದು ಶರೀರವನ್ನು ಸ್ರವೇಷಿಸುತ್ತ ಸುತ್ತಿಸುತ್ತಿ ಜೀವಶತ್ವ ಹೇಳಲಸದಳವಾದ ದುಃಖಾಗ್ನಿಯ ಸಂತಾಪಕ್ಕೀಡಾಗಿರುತ್ತಿರುವದೇ ಜೀವನ. ಇಂಥ ಜೀವನು ತನ್ನು ಮಲಾವರಣದಿಂದ ಮುಕ್ತನಾಗದ ಹೊರತು ದುಃಖಾಗ್ನಿಯು ಶಾಂತವಾಗುವದಿಲ್ಲ. ತನಕ್ಕಾಗಿಯೇ ಯೋಗಜ್ಞಾನಗಳೆರಡನ್ನೂ ಅನುಷ್ಠಿಸಿ ಏಳನೆಯದಾದ ವೀರಶೈವಸೋಪಾನದ ನೆಲೆ ಕಾಲಿಡಬೇಕು. ಹೀಗೆ ಏಳು ಸೋಪಾನಗಳನ್ನೇರಿದವನೇ ಚರಮಶರೀರಿಯು. ಇವನಿಗೆ ಪುನರ್ಜನ್ಮವಿಲ್ಲ. ಇಂಥ ಲಿಂಗಾಂಗಸಾಮರಸ್ಯ ಸಿದ್ಧಿಯನ್ನು ಪಡೆದ ವೀರಶೈವನನ್ನು ಶಿವಯೋಗಿಯೆಂದಾ ಗಾಸ್ತ್ರವು ಕರೆಯುತ್ತದೆ. ಇವನು ಮಾನವಸಾಧಾರಣವಾದ ನೀತಿಯನ್ನು ಬಿಡದೆ ಆನಂದವನ್ನನುಭವಿಸುವನು

ಈಷಣತ್ರಯಾನಿರ್ಮುಕ್ತೌ ಜ್ಞಾನವಿಜ್ಞಾನತತ್ಪರಾಃ ।
ವೈತತ್ಯೈರಾಗ್ಯಸಂಪನ್ನಾ ವೀರಾಸ್ತೇ ಶಿವಯೋಗಿನಃ ॥
ಅಂಧಾ ಯೇ ಲಿಂಗಿನೋ ದೇಶಿ ಸದ್ಭಕ್ತಿಪೂಜಪರ್ದನೇ ।
ಯಾವಾನಾಕ್ಷಾಶ್ಮಸಟಿಮೆ ತೇ ವೀರಾಶ್ಚಿವಯೋಗಿನಃ ॥
ಯೇ ಮೂಕಾ ಲಿಂಗಿನೋ ದೇವಿ ಪರಮೋಕ್ಷಾನುಸಾವದೇ ।
ಯೇ ಪಂಡಾಃ ಪರಕಾಂತಾಸು ಸಂಗಸ್ತೋವ ಸ್ಯ ವೀಡನೇ ।
ಅಜಿಹ್ವಾ ಯೇ ರಸಜ್ಞಾಸ್ತೇ ವೀರಾಸ್ತೇ ಶಿವಯೋಗಿನಃ ॥
ಅಮಾನೋಕ್ಷಮಭಿಧನೇ ಯೋಕ್ಷಹಿಂಸಾಕ್ಷಾಂತ್ಯಾರ್ಜವಾನ್ವಿತಾಃ ।
ಅಡಾಯೋಕ್ಷಾಸಮಾಸಕ್ತಾ ವೀರಾಸ್ತೇ ಶಿವಯೋಗಿನಃ ।
ತಾಲಾಸ್ಯಾನಿಗ್ರಹಸ್ಥೈರ್ಯೇ ಯೇಽನಮಾಚಾರಕಾಲನೇ ॥
ಸರ್ವತ್ರ ಸಮಚಿತ್ತಾ ಯೇ ವೀರಾಸ್ತೇ ಶಿವಯೋಗಿನಃ ॥

ನಿಶದಾ ಭಕ್ತಿಮಂತೋ ಯೇ ಯೇ ಆಸ್ಮಿಕಾಂತೇವಿನಃ ।
ಮುಕ್ತಾ ಧ್ಯಾನರತಾ ನಿತ್ಯಂ ವೀರಾಸ್ತೇ ಶಿವಯೋಗಿನಃ ॥

ಯಾವನು ಪುತ್ರೈಷಣದಾರೈಷಣ ವಿತ್ತೈಷಣಗಳೆಂಬ ಈಷಣಗಳಿಂದ ಬಿಡಲ್ಪಟ್ಟವನೂ ಲಿಂಗಾಂಗಸಾಮರಸ್ಯ ಜ್ಞಾನಸಿದ್ಧಿಯುಳ್ಳವನೂ ಎಂದೂ ಕದಡದ ವೈರಾಗ್ಯ ಸಂಪತ್ತಿಯುಳ್ಳವನೂ ಆಗಿರುವನೋ ಯಾವನು ಪರಸ್ತ್ರೀ ದರ್ಶನದಲ್ಲಿ ಕಣ್ಣಿಲ್ಲದವನಂತೆ ಇರುವನೋ ಯಾವನು ಯುವಕನಾಗಿದ್ದರೂ ಸ್ತ್ರೀದರ್ಶನದಲ್ಲಿ ಬಾಲಕನಂತಾಚರಿಸುವನೋ ಯಾವನು ಪರರ ದೋಷಗಳನ್ನೆತ್ತಾಡುವುದರಲ್ಲಿ ಮೂಕಭಾವನವನ್ನಾಚರಿಸುತ್ತಾನೆಯೋ ಯಾವನು ಪರಕಾಂತೆಯರ ವಿಷಯದಲ್ಲಿ ನಪುಂಸಕನಂತಾಚರಿಸುವನೋ ಯಾವನು ಪರರಿಷನಿಂದನೆಯಲ್ಲಿ ಕಿವಿಯಿಲ್ಲದವನಂತಾಚರಿಸುವನೋ ಯಾವನು ಸುಧಾಸಾಮ್ಯಾದಿ ರಸಾಸ್ವಾದದಲ್ಲಿ ನಾಲಿಗೆಯಿಲ್ಲದವನಂತಾಚರಿಸುವನೋ ಯಾವನು ಮಾನಾಮಾನಗಳೊನ್ನನಾಗಿರುವನೋ ಯಾವನು ನಾನು ನಾನೆಂಬ ಗರ್ವದಿಂದ ದೂರನಾಗಿರುವನೋ ಯಾವನು ತಿಂನೆ, ಕ್ಷುತ್ತಿ, ಆದ್ಯರನಾದಿಗಳಿಂದ ಕೂಡಿರುವನೋ ಯಾವನು ಅನವರತ ಆಚಾರ್ಯಪೂಜಾಸಕ್ತನೋ ಯಾವನು ಶೌಚ ಆತ್ಮಸ್ಥೈರ್ಯ ಸ್ಥೈರ್ಯಾದಿಸದ್ಗುಣಾಲಂಕಿತನಾಗಿರುವನೋ ಯಾವನು ಎಲ್ಲವೆರಲ್ಲಿಯೂ ಸಮಬುದ್ಧಿಯುಳ್ಳವನಾಗಿರುವನೋ ಯಾವನು ಶಿವನಲ್ಲಿ ಸಹಜ ಪ್ರೇಮವನ್ನು ತೋರಿಸುತ್ತ ವಿಕಲಾಂತಃಕರಣಿಯಾಗಿರುವನೋ ಅಂಥ ಶಿವಯೋಗಿಯೇ ವೀರ ಎಂಬ ಅಭಿವಾನವಂ ಪಡೆಯುತ್ತಾನೆಂದು ವೀರಶೈವ ಪದವಲ್ಲಿರುವ ವೀರ ಎಂಬ ವಿಶೇಷಣದ ಅರ್ಥವನ್ನು ಪರಮೇಶ್ವರನು ಪಾರ್ವತಿಗೆ ನಾನಾವಿಧವಾಗಿ ಬೋಧಿಸಿರುವನು

ಯಥಾ ಸರ್ವೇಷು ದೇವೇಶಾ ಜಾಧಿಕೋ ನೋಳಸಾನಸೇ ।
ತಸ್ಮಾನೀದಧಿಕೋ ಬ್ರಹ್ಮಾ ಸ ತಸ್ಮಾದಧಿಕೋ ಹರಿ ।
ವಿಷ್ಣ್ವಾದೀನಾಂ ಜ ಸರ್ವೇಷಾಮಧಿಕೋಹಂ ಯತಶ್ಚಿಕೇ ।
ಮತ್ತೋ ಕತರದೋ ನಾಸ್ತಿ ಮಾನ್ಯತಾತ್ತು ಪರಂ ನಹಿ ॥

ಎಲೌ ಪಾರ್ವತಿಯೇ! ದೇವತೆಗಳಲ್ಲಿ ಇಂದ್ರನು ಶ್ರೇಷ್ಠನು, ಅವನಿಗಿಂತ ಬ್ರಹ್ಮನು ಶ್ರೇಷ್ಠನು, ಅವನಿಗಿಂತ ಹರಿಯು ಶ್ರೇಷ್ಠನು, ಇವರೆಲ್ಲರಿಗಿಂತಲೂ ನಾನು ಶ್ರೇಷ್ಠನು ನನಗಿಂತಲೂ ಶ್ರೇಷ್ಠವಾದ ಮತ್ತೊಂದು ವಸ್ತುವಿಲ್ಲವು. ನನ್ನ ಮತ(ವೀರಶೈವ)ಕ್ಕಿಂತಲೂ ಉತ್ತಮವಾದ ಮತಪೊಂದಿಲ್ಲವೆಂದು ಪರಮೇಶ್ವರನು ಉಪದೇಶಿಸಿರುತ್ತಾನೆ ಮತ್ತು

ಯಥಾಹೋ ವಾಸಿ ಕಂಗುರ್ವಾ ಮೂಳೋವಾ ಬಧಿರೋಪಿ ವಾ।
ಉನ್ಮತ್ತೋ ವಾಪಿ ಸರ್ವಜ್ಞೋ ದರಿದ್ರೋ ವಾ ಮಹೇಶಕಃ ॥
.....ಕಾತೀಂ ಪ್ರಾಪ್ಯ ಭವೇಜ್ಜನಃ ।
ಪ್ರಸೇಶಮಾತ್ರೇಣ ಶಿವೇ ಪಂಚಕ್ರೋಶಾತ್ಮಕೆ ಆಪಿ
ಪ್ರವೇಶಮಾತ್ರೇಣ ಶಿಸ್ಯೋ ಮಮ ತೈವಮತೇ ಶಿವೇ ।
ಸೋಪಮೇನ ನ ಸಂದೇಹಃ ಕಿಮು ವೀರಶಿಸ್ಯೋ ಯದಿ ॥
ಸ್ಖಧಿತಸ್ಯಾಪಿ ಕೃಪ್ತಸ್ಯ ಶರ್ಕರಾ ಮಧುರಾ ಯಥಾ ।
ಜ್ಞಾನಿನೋಽಜ್ಞಾನಿನೋವಾಪಿ ವೀರತ್ವಿವಂ ಶುಭಾವಹಂ ॥

ಎಲೌ ಪಾರ್ವತಿಯೇ! ಹೆಳವನಾಗಿರಲಿ, ಕುರುಡನಾಗಿರಲಿ, ಮೂಗನಾಗಿರಲಿ, ಕಿವುಡನಾಗಿರಲಿ, ಹುಚ್ಚನಾಗಿರಲಿ, ಸರ್ವಜ್ಞನಾಗಿರಲಿ, ದರಿದ್ರನಾಗಿರಲಿ, ರಾಜನಾಗಿರಲಿ, ಪಾಪಿಯಾಗಿರಲಿ, ಪುಣ್ಯವಂತನಾಗಿರಲಿ, ಶಿಷ್ಟನಾಗಿರಲಿ, ದುಷ್ಟನಾಗಿರಲಿ, ಪವಿತ್ರನಾಗಿರಲಿ, ಅಪವಿತ್ರನಾಗಿರಲಿ ಇವರೆಲ್ಲರೂ ಕಾಶಿಯನ್ನು ಪ್ರವೇಶಿಸಿದ ಮಾತ್ರದಿಂದ ಶಿವಸ್ವರೂಪಿಗಳಾಗುವಂತೆ ದೃಢತರವಾದ ಶಿಷ್ಟೋಪಾಸನೆಮಾಡುತ್ತ ಶೈವಸುತದಲ್ಲಿ ಕಾಲಿಟ್ಟಮಾತ್ರದಿಂದಲೇ ಶಿವಸ್ವರೂಪಿಗಳಾಗುತ್ತಾರೆ. ಜೀವಾತ್ಮನೆಂಬ ಮಲಿನಸುವರ್ಣವು ಗುರುಕೃತ ದೀಕ್ಷಾಗ್ನಿಯಲ್ಲಿ ಪರಿಶುದ್ಧಿಗೊಂಡು ಲಿಂಗಧಾರಿಯಾಗಿ ಕ್ರಮದಿಂ ಉತ್ತರೋತ್ತರ ಉತ್ತಮವಾದ ಆನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಿಶೈವ, ಜ್ಞಾನಶೈವ ಎಂಬ ತರಗತಿಗಳಲ್ಲಿ ತೇರ್ಗಡೆಯಾಗಿ ಕೊನೆದಾದ ವೀರಶೈವ ಸೋಪಾನವನ್ನೇರಿದ ಬಳಿಕ ಸೂರ್ಯೋದಶ್ಮನದಿಂದ ಪಕ್ವಕಮಲಗಳು ಅರಳುವಂತೆ ಹೃದಯಾಕಾಶದಲ್ಲಿ ಮೂಡಿದ ಶಿವಲಿಂಗಭಾಸ್ಕರನ ಕಿರಣಪ್ರಣಾಳಗಳಿಂದ ಪರಿಪಕ್ವವಾದ ಜೀತಃಪದ್ಮವು ಸದ್ಯಃ ವಿಕಸಿತವಾಗುವದು. ಅವಿದ್ಯಾದೋಷದಿಂದ ತಿರೋಹಿತವಾದ ಸರ್ವಜ್ಞತ್ವ ನಿತ್ಯತೃಪ್ತತ್ವಾದಿಪರಮೇಶ್ವರನಿತ್ಯಗುಣಗಳುದಿಸಿ,

ನಿರ್ಧೂತಮಲಸಂಬಂಧಾತ್ಮಳಂಕಮನೋಗತಃ ।
ಶಿವೋಹಮಿತಿ ಭಾವೇನ ನಿರೋಧಾ ಪಿ ಶಿವೈಕತಾ ॥

ಎಂಬ ರೇಣುಕಭಗವತ್ಪಾದರ ಉಪದೇಶವಾಣಿಯಂತೆ ಅವಿರಳ ಶಿವೋಹಂಭಾವಸಿದ್ಧಿಯೊದಗಿ

ಲಿಂಗಶಬ್ದವಾಚ್ಯನಾದ ಜೀವನು ಲಿಂಗಶಬ್ದವಾಚ್ಯ ಪರ ಶಿವಸಮುದ್ರದಲ್ಲಿ ಸಮರಸನಾಗುವುದೇ ವೀರಶೈವಸುತದ ಪರಮಧ್ಯೇಯವು.

ಒಳದೇಶದ ವೃತ್ತಾಂತಗಳು.

ಅಖಿಲ ಹಿಂದೂಸ್ಥಾನದ ಸಾಬೂನು ತಯಾರು ಮಾಡುವವರ ಸಂಘದವರು ತಮ್ಮ ವಾರ್ಷಿಕ ಸಮ್ಮೇಳನವನ್ನು ಮುಂದಿನ ಈಸ್ಟರ್ ರಜಾದಿನಗಳಲ್ಲಿ ಬೆಂಗಳೂರಿನಲ್ಲಿ ನಡೆಸುವಂತೆ ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯವರು ಆ ಸಂಘದವರಿಗೆ ಆಹ್ವಾನ ಕಳುಹಿಸಿರುವರೆಂದು ತಿಳಿದುಬರುತ್ತದೆ. ನಮ್ಮ ದಿವಾನರವರಾದ ಸರ್ ಮಿರ್ಜಾ ಇಸ್ಮೈಲ್‌ರವರು ಆಗಿನ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರೆಂಬ ವಾರ್ತೆಯಿದೆ.

ರಾಜಧಾನಿಯಲ್ಲಿ ಇರ್ವಿಂರಸ್ತೆ ಮತ್ತು ದೊಡ್ಡಪೇಟೆ ರಸ್ತೆ ಇವೆರಡೂ ಸಂಧಿಸುವ ಚೌಕದಲ್ಲಿ ಮುಖ್ಯ ಪೋಲೀಸು ತಾಣ್ಯಕ್ಕಾಗಿ ಕಟ್ಟಿಸಿರುವ ಭಾರಿಕಟ್ಟಡಕ್ಕೆ ಈಗಿನ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರಾದ ಖು॥ ಹಾ॥ ಮಿಲ್ಟರ್‌ರವರ ನಾಮಾಂಕಿತವು ಮೇಲೆ "ಹಾಮಿಲ್ಟರ್ ಬಿಲ್ಡಿಂಗ್" ಎಂದು ಹೆಸರಿಟ್ಟಿರುವದರಿಂದ ಅಸಮಾಧಾನಗೊಂಡ ಮಹಾಜನರು ಬಹಿರಂಗ ಸಭೆಗಳಲ್ಲಿ ತಮ್ಮ ಮನೋಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ 20ಜನರು ಸಹಿಮಾಡಿ ತಮ್ಮ ಅಸಮಾಧಾನವನ್ನು ಹೆಸ್ತ ಪತ್ರಿಕೆಗಳಿಂದ ವ್ಯಕ್ತಪಡಿಸಿರುವರು.

ಕ್ರೋಣಪೇಟೆ ತಾಲೂಕಿನಲ್ಲಿ 7 ಜನ ಕಾಂಗ್ರೆಸ್ ಸದಸ್ಯರು ಮದ್ಯಪಾನನಿರೋಧ ಪ್ರಚಾರವನ್ನು ಮಾಡುವಸಂದರ್ಭದಲ್ಲಿ ಪ್ರಜಾನೆಮ್ಮದಿಗೆ ಭಂಗಬರುವ ರೀತಿಯಲ್ಲಿ ವರ್ತಿಸಿದರೆಂದು ಅಲ್ಲಿನ ಮ್ಯಾಜಿಸ್ಟ್ರೇಟರು ಅವರುಗಳೆಲ್ಲಾ ಒಂದು ವರ್ಷಕಾಲ ಶಾಂತಿಭಂಗವನ್ನುಂಟುಮಾಡುವ ಕಾರ್ಯಗಳಲ್ಲುದ್ಯುಕ್ತರಾಗುವದಿಲ್ಲವೆಂದು ತಲಾ 250 ರೂಪಾಯಿಗಳ ಶೇವಣಿ ಕೊಡಬೇಕೆಂದು ಅಪ್ಪಣೆ ಮಾಡಿದಾಗ ಅವರಗಳು ಶೇವಣಿ ಕೊಡಲು ತಿರಸ್ಕರಿಸಿದ್ದರಿಂದ ಪ್ರತಿಯೊಬ್ಬರಿಗೂ ತಲಾ ಒಂದು ವರ್ಷ ಸಾದಾ ಶಿಕ್ಷೆ ವಿಧಿಸಿದರೆಂದು ತಿಳಿದುಬರುತ್ತದೆ.

ಅಖಿಲ ಹಿಂದೂಸ್ಥಾನದ ಆಯುರ್ವೇದ ಮತ್ತು ಯುನಾನಿ ವೈದ್ಯರ 5 ನೆಯ ಸಮ್ಮೇಳನವು ಬೆಂಗಳೂರು ನಗರದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣಶೆಟ್ಟರವರ ಪುಣ್ಯಭವನದಲ್ಲಿ ಕಳೆದ 25 ನೆಯ ತಾರೀಖು ಭಾನುವಾರ ರಿವಿನ್ಯೂ ಕಮೀಷನರ್ ಮ ಎಸ್. ಅಬ್ದುಲ್‌ವಾಜೀದ್ ರವರಿಂದ ಅರಂಭಿಸಲ್ಪಟ್ಟಿತು. ಹಿಂದೂಸ್ಥಾನದ ಎಲ್ಲ ಕಡೆಯಿಂದಲೂ ಬಂದಿದ್ದ 150 ಮಂದಿ ಆಯುರ್ವೇದ ಮತ್ತು ಯುನಾನಿ ವೈದ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ಭಸ್ಮಗ್ರಹ ಆಯುರ್ವೇದ ನಿರ್ದ್ವಾ ಬಿ. ಪಿ. ಪಂಡಿತರು ಸ್ವಾಗತವನ್ನು ಬಯಸಿದನಂತರ ಖು॥ ಎಸ್. ಅಬ್ದುಲ್ ವಾಜಿದ್ ರವರು ಭಾಷಣಪೂರ್ವಕವಾಗಿ ಅರಂಭೋತ್ಸವವನ್ನು ನೆರವೇರಿಸಿದರು.

ವರ್ತಮಾನಸಂಗ್ರಹ.

ಡ್ರಮ ಚಲನಚಿತ್ರ

ಮೈಸೂರಿನ ಸಾಬೂವು ಪಾತ್ರವಹಿಸಿರುವ "ಡ್ರಮ್" ಎಂಬ ಪ್ರಸಿದ್ಧ ಚಲನಚಿತ್ರವನ್ನು ಬೊಂಬಾಯಿ ಸೆನ್ಸರ್ ಬೋರ್ಡ್‌ನವರು ಪಾಸುಮಾಡಿದ ರೂಪದಲ್ಲಿ ಎಲ್ಲ ಪ್ರಾಂತ್ಯಗಳಲ್ಲೂ ಪ್ರದರ್ಶಿಸಲೂಡಬೆಂದು ಆಜ್ಞೆಮಾಡಲಾಗಿದೆ.

ಸಾಂಗಲಿ ಸಂಸ್ಥಾನದ ಮಂತ್ರಿಗಳು.

ಸಾಂಗಲಿ ಸಂಸ್ಥಾನದ ಅಸೆಂಬ್ಲಿಯಲ್ಲಿ ಆ ಸಂಸ್ಥಾನಾಧಿಪತಿಗಳು ಸಾಂಗಲಿ ಸಂಸ್ಥಾನದ ಮೊದಲಮಂತ್ರಿಗಳನ್ನು ನೇಮಿಸುವ ಆಜ್ಞೆಯನ್ನು ಸಾರಿದರು. ತಿರಹುಟ್ಟು ಲೋಕ ನಿಯುಕ್ತ ಸದಸ್ಯರಾದ ಶ್ರೀ ಮಹಿಷಿ ಅಶ್ವತ್ಥರಾಯರು ಮಂತ್ರಿಗಳಾಗಿ ಆರಿಸಲ್ಪಟ್ಟರು.

ಚೀನಾಮಹಿಳೆಯರಿಗೆ ಸೈನ್ಯಶಿಕ್ಷಣ

ಚೀನಾದೇಶದಲ್ಲಿ ಸಹಸ್ರಾರು ಯುವತಿಯರಿಗೆ ಸೈನ್ಯ ಶಿಕ್ಷಣ ಕೊಟ್ಟು ತರಬಿಯತ್ತು ಮಾಡುತ್ತಿದ್ದಾರೆ. ಕ್ವಾಂಗ್ಸಿ ಆಧಿಪತ್ಯದ ರಾಜಧಾನಿಯಾದ ಕ್ವೈಲೀ ಎಂಬಲ್ಲಿನ ಯುವತಿಯರೇ ವಿಶೇಷವಾಗಿ ಈ ಸೈನ್ಯಶಿಕ್ಷಣಕ್ಕೆ ಮುಂದೆ ಬರುತ್ತಿರುವದನ್ನು ನೋಡಿ ಮೇಡಂ-ಚಿಯಾಂಗ್-ಕೈ-ಷೇಕರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುತ್ತಾರೆ.

ಬತ್ತದ ಬೆಳೆಗೆ ಸರ್ಕಾರದ ಸಹಾಯ

ತಿರುವಾಂಕೂರು ಸಂಸ್ಥಾನದಲ್ಲಿ ಬೆಳೆಯುವ ಬತ್ತದ ಜಾತಿಗಳನ್ನು ಪರೀಕ್ಷೆಮಾಡಿ, ಪರಿಶೋಧನೆಗಳ ಮೂಲಕ ಅವುಗಳನ್ನು ಉತ್ತಮಪಡಿಸಿ ಹುಲುಸಾಗಿ ಬೆಳೆಯುವಂತೆ ಮಾಡುವುದಕ್ಕಾಗಿ ಇಂಡಿಯಾ ಸರ್ಕಾರದವರು ತಿರುವಾಂಕೂರು ಸರ್ಕಾರಕ್ಕೆ 20920 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಮಾರ್ಶಲ್ ಚಿಂಗಳ್ಕೈಷೇಕರ ಕಠಿಣವಾದ ಆಜ್ಞೆ

"ಯುದ್ಧದಲ್ಲಿ ವಿಲಾಸಕ್ಕಾಗಲಿ, ಆಡಂಬರಕ್ಕಾಗಲಿ ಸ್ವಚ್ಛಿ ಸೈನಿಕರು ತಮ್ಮ ಕರ್ತವ್ಯಚ್ಯುತರಾದರೆ, ಅವರಿಗೆ ದೇಹಾಂತಶಾಸನ ವಿಧಿಸಲಾಗುವದು ಮತ್ತು ಜಪಾನಿಗೆ ಕೊಡನೆ ಕಾದಿ ಗೆದ್ದ ಸಮಯದಲ್ಲಿ ಯಾರೂ, ಅಧಿಕಾರಿಗಳು ವಿಶ್ರಾಂತಿಯೆಂದು ಹಿಂದುಳಿಯಕೂಡದು" ಎಂಬುದಾಗಿ ಮಾರ್ಶಲ್ ಚಿಂಗ್‌ಕೈಷೇಕರು ಕರೋನಾಜ್ಞೆಯನ್ನು ಹೊರಡಿಸಿದ್ದಾರೆ.

ನರಬಲಿ!

ಅಸ್ಸಾಮಿಗೆ ಈಶಾನ್ಯದಲ್ಲಿರುವ ಚಿಂದ್‌ವೀ ಜಿಲ್ಲೆಯ ನಾಹೋಂಗ ಎಂಬ ಬೆಟ್ಟಗಳಲ್ಲಿರುವ ನಾಗಾ ಎಂಬ ಪಂಗಡದ ಜನರು ತಾವು ಪೂಜಿಸುತ್ತಿರುವ "ತಾಂಗ" ಎಂಬ ದೇವತೆಗೆ, 600 ರೂಪಾಯಿಗಳನ್ನು ಕೊಟ್ಟು ಪಮಾಯ್ ಗುಲಾಮನೆಂಬವನನ್ನು ಖರೀದಿಗೆ ತೆಗೆದುಕೊಂಡು ಬಲಿಕೊಟ್ಟರೆಂದೂ, ಸಾಂಡಿಯಾ ಪೋಲೀಸರವರು ತನಿಖೆ ನಡೆಸುತ್ತಿರುವರೆಂದೂ ತಿಳಿಯಬರುತ್ತದೆ.

ವಿಮಾನ ಸೌಕರ್ಯ

ಕೊಲ್ಲಾಪುರದಿಂದ ಬೊಂಬಾಯಿ ವಿಮಾನ ಸರ್ವಿಸ್ಸು ಜನವರಿ ೬ನೆಯ ತಾರೀಖಿಗೆ ಪ್ರಾರಂಭವಾಗಲಿದೆ. ಆವರೆ ಪ್ರಾರಂಭೋತ್ಸವವನ್ನು ಸ್ವತಃ ಮಹಾರಾಜರು ತಮ್ಮ ಹಸ್ತದಿಂದ ಮಾಡಲಿರುವರು. ಕೊಲ್ಲಾಪುರದಿಂದ ಬೊಂಬಾಯಿಗೆ ರಿಟರ್ನ್ ಟಿಕೆಟ್‌ವರೆ 56-0-0 ರೂಪಾಯಿಗಳು. ಹೋಗಲು ಮಾತ್ರ 35-0-0 ರೂಪಾಯಿಗಳು ಎಂದು ಗೊತ್ತುಮಾಡಲ್ಪಟ್ಟಿದೆ.

ಭಾರಿ ರೈಲ್ವೇ ಅನಾಹುತ!

ಬುಕಾರಸ್ಟ್‌ಪ್ರಾಂತ್ಯದ ಗಲರ್‌ಜಿ ಮತ್ತು ಕಿಶಿನೆಫ್ ಎಂಬ ಸ್ಟೇಷನ್ನುಗಳ ಮಧ್ಯೆ ಪ್ರಚಂಡ ಬಿರುಗಾಳಿಯೆದ್ದು ವರ್ತಮಾನವ್ಯವಸ್ಥೆಯು ಕೆಟ್ಟುಹೋದ್ದರಿಂದ ಎರಡು ರೈಲುಗಳು ಒಂದೇ ಸಾರಿಯಲ್ಲಿ ಹೊಡೆಯ ಸ್ಥಿತಿಯೊಡಗಿ ಒಂದಕ್ಕೊಂದು ಡಿಕ್ಕಿಬಡಿದುವರ ಫಲವಾಗಿ ಸುಮಾರು ೫೦ ಮಂದಿ ಪ್ರಯಾಣರೂ 320 ಜನಗಳಿಗೆ ಗಾಯಗಳಾಗಿ ನಿಜವೂ ಪ್ರಕಟಿಸಲ್ಪಟ್ಟಿದೆ.

ಚೀನಾಯುವಕನ ದೇಶಪ್ರೇಮ

ಚೀನಾದೇಶದ ಹಣದ ತೊಡಕನ್ನು ತಿಳಿದು ಅವರಿಗೆ ಸ್ವಲ್ಪ ದ್ರವ್ಯಸಹಾಯಮಾಡಬೇಕೆಂದು ಷಾಂಘಾಯಿ ಯಲ್ಲಿ ಒಬ್ಬ ಧನಿಕ ವರ್ತಕನ ಮಗನು ತನ್ನ ತಂದೆಯನ್ನು ಕೇಳಿಕೊಂಡನು. ಅದಕ್ಕೆ ತಂದೆಯು ನಿರಾಕರಿಸಲು, ಮಗನು ತಾನು ಹೊಸದಾಗಿ ಮದುವೆಯಾದ ತನ್ನ ತರುಣ ಪತ್ನಿಯೊಡನೆ ನಿರಶನವ್ರತವನ್ನವಲಂಬಿಸಲು, ತನ್ನ ಮಗನು ಮೃತನಾಗುವನೆಂದು ಹೆದರಿ ತಂದೆಯು ಚೀನಾಸರ್ಕಾರದ ಸೇನೆಗಾಗಿ ಜನರಲ್ ಚಾಂಗ್-ಕೈ-ಷೇಕರಹತ್ತಿರ 50 ಸಾವಿರ ಪೌಂಡುಗಳನ್ನು ದಾನಮಾಡಿ ಮಗನ ಇಚ್ಛೆಯನ್ನು ಪೂರೈಸಿದನು.

ಕ್ಷಾಮಪೀಡಿತರಿಗೆ ಸಹಾಯ!

ಕಲ್ಕತ್ತಾ ಮಹಿಳಾಮಂಡಲಿಯ ಕಾರ್ಯದರ್ಶಿನಿಯಾದ ಶ್ರೀಮತಿ ಅಮೃತಾರ್ಕಾ ಎಂಬ ಧರ್ಮಾತ್ಮಳು ಬಂಗಾಳಾ ಆಧಿಪತ್ಯಕ್ಕೆ ಸೇರಿದ ಹಿಸ್ಸಾರ್ ಜಿಲ್ಲೆಯ ಕ್ಷಾಮಪೀಡಿತ ಪ್ರಜೆಗಳ ಮಾನಸಂರಕ್ಷಣೆಗಾಗಿ 10 ಸಾವಿರ ಥಾನು ಬಟ್ಟೆಯನ್ನು ಕೂಡಿಸಿ ಕಳುಹಿಸಿರುತ್ತಾಳಲ್ಲದೆ, ಜಸ್ಸೋರ್ ಜಿಲ್ಲೆಯಲ್ಲಿ ಪ್ರವಾಹದ ಹಾವಳಿಗೆ ಸಿಕ್ಕಿ ಸಂಕಟಗಳಿಗೆ ಗುರಿಯಾದ ಪ್ರಜೆಗಳಿಗೋಸ್ಕರ 500 ಥಾನುಗಳಷ್ಟು ಬಟ್ಟೆಯನ್ನು ಒದಗಿಸಿರುತ್ತಾಳೆ. ಸ್ತುತ್ಯ!

ಆದರ್ಶ ರಮಣಿ

ಪತ್ನಿಯಾದವಳು ತನ್ನ ಪತಿಯ ಉದ್ಧಾರಾಗಿನಿಯೆಂದೂ ಸುಖದುಃಖಗಳಲ್ಲಿ ಸಮಭಾಗಿನಿಯೆಂದೂ ಹೇಳಲ್ಪಟ್ಟಿರುವಳು. ಆದರೆ ನನ್ಮಲ್ಲಿ ಲಾಭವಲ್ಲಿನಷಾತ್ರ ಪತ್ನಿಗೆ ಜಿರ್ಧ, ನಷ್ಟ-ಕಷ್ಟಗಳಲ್ಲಿ ಎಲ್ಲವೂ ಪತಿಗೆ ಇರುವದು. ಉಟಾಕೆ ಎಂಬಲ್ಲಿ ನಸಾಲ್ಟ್‌ಲೇಕ್ ಪಟ್ಟಣದ ರಸ್ಟೀಟರ್‌ಸ ಎಂಬ 22 ವಯಸ್ಸಿನ ತರುಣಿಯು ತಾನು ವಿವಾಹವಾಗಲು ನಿಶ್ಚಯಿಸಿಕೊಂಡಿದ್ದ ರಿಚರ್ಡ್‌ಸಾಲೆ ಎಂಬ ಮೋಟರ್ ಡ್ರೈವರಾದ ಯುವಕನು ನೇಗವಾಗಿ ಮೋಟರ್ ನಡೆಸಿದನೆಂಬುದಕ್ಕಾಗಿ 16 ದಿವಸಗಳ ಶಿಕ್ಷೆಗೆ ಗುರಿಪಡಿಸಲ್ಪಟ್ಟನೆಂಬುದನ್ನು ತಿಳಿದು ಆಬರಲ್ಲಿ ಅರ್ಧಭಾಗ ಶಿಕ್ಷೆಯನ್ನು ತಾನೂ ಅನುಭವಿಸುವದಾಗಿ ಕೇಳಿಕೊಂಡು ಅವನ ಜೊತೆಯಲ್ಲಿ ತಾನೂ 7½ ದಿವಸ ಕಾರಾಗೃಹವಾಸವನ್ನು ಅನುಭವಿಸಿ ಹೊರಬಂದಳು. ಕಷ್ಟದಲ್ಲೂ ಕೂಡಿ ಬಾಳಬಯಸುವ ಇಂಥವರಲ್ಲವೇ ಆದರ್ಶ ರಮಣಿಯರು?

ವಯಸ್ಸಿನಲ್ಲಿ ಹಿರಿಯಳೆಂದು ಹೆಂಡತಿಯನ್ನು ಬಿಟ್ಟು ಕೂರ!

ಫಿಲಿಡೆಲ್ಫಿಯಾದಲ್ಲಿ ಜೋ ಎಫ್ ಸೀಲ್ ಎಂಬಾತನು ತನ್ನ ಮಡದಿಯು ತನಗಿಂತ ವಯಸ್ಸಿನಲ್ಲಿ ಹತ್ತು ವರುಷ ಹಿರಿಯಳೆಂಬುದನ್ನು ತಿಳಿದು ಗಾಬರಿಯಾಗಿ ತಾನು ಈಗ ಬೇರೊಬ್ಬಳನ್ನು ಪ್ರೇಮಿಸುವುದಾಗಿಯೂ, ಆಕೆ ಯಾರೆಂಬುದನ್ನೂ ಆಕೆಯ ವಿವಾಹಕಾಲದಲ್ಲಿ ಈ ಪ್ರಥಮಪತ್ನಿಯು ಆಕೆಗೆ ಎಂಥ ಉಡುಗೆ ತೊಡಿಸಬೇಕೆಂಬುದನ್ನೂ ಅವಳಿಗೆ ಹೇಳಿದನು. ಇದನ್ನು ಕೇಳಿದ ಅವಳು ವಿವಾಹವಿಚ್ಛೇದನಕ್ಕಾಗಿ ದಾವೆ ಮಾಡಿದಳು. ಗಂಡನ ಕಡೆಯ ವಕೀಲರು ಹೆಂಡತಿಯ ನಿಜವಾದ ವಯಸ್ಸನ್ನು ಕೇಳಿ ಗಾಬರಿಗೊಂಡ ಗಂಡನು ಹಾಗೆ ಬೇರೆ ಮದುವೆಯನ್ನು ಮಾಡಿಕೊಳ್ಳುವದಾಗಿ ಹೇಳಿದನೆಂದರು. ಜಡ್ಜರು ಗಂಡನು ಹೆಂಡತಿಗೆ ವಾರಕ್ಕೆ 28 ಷಿಲಿಂಗ್ ಜೀವನಕ್ಕೆ ಕೊಡಬೇಕೆಂದು ತೀರ್ಮಾನಿಸಿದರು.

ಜಪಾನು ಸೂಚಿಸಿದ ಷರತ್ತುಗಳನ್ನು ಅಂಗೀಕರಿಸಲು ಚೀಣಕ್ಕೆ ಸಾಧ್ಯವಿಲ್ಲ

ಜಪಾನಿನ ರಾಜಕುಮಾರ ಕೊನೋಯರವರು ತಮ್ಮ ಹೇಳಿಕೆಯಲ್ಲಿ ಕಾಣಿಸಿದ ಶಾಂತಿಷರತ್ತುಗಳು ಅಂಗೀಕಾರಯೋಗ್ಯವಾಗಿಲ್ಲವೆಂದು ಮಾರ್ಷಲ್ ಚಿಯಾಂಗ್-ಕೈ-ಷೇಕ್‌ರವರು ತಿಳಿಸಿದರು. ಮತ್ತು ಆ ಷರತ್ತುಗಳನ್ನು ಅಂಗೀಕರಿಸಿದರೆ ಚೀಣವು ಜಪಾನಿಗೆ ಸಂಪೂರ್ಣವಾಗಿ ಶರಣಾಗತವಾಗಿಬಿಡುವಂತಾಗುವದೆಂದು ತಿಳಿಸಿದ್ದಾರೆ. ಆ ಷರತ್ತುಗಳಲ್ಲಿ, "ಚೀಣದಲ್ಲಿ ನಿರ್ದಿಷ್ಟವಾದ ಕಡೆಗಳಲ್ಲಿ ಸೈನ್ಯಗಳನ್ನಿಡಲು ಜಪಾನಿಗೆ ಹಕ್ಕಿರಬೇಕು, ಜಪಾನದು ಚೀಣದ ಯಾವದ್ರವ್ಯವೇಶದಲ್ಲಾದರೂ ಹೋಗಿ ನೆಲಸುವಂತಿರಬೇಕು" ಎಂಬುದೂ ಸೇರಿದೆ. "ಯುದ್ಧಾರಂಭಕ್ಕೆ ಮೊದಲೇ ಸೂಚಿತವಾಗಿದ್ದ ಷರತ್ತುಗಳೇ ಅಂಗೀಕಾರಯೋಗ್ಯವಾಗಿರಲಿಲ್ಲವೆಂದಮೇಲೆ ಇಷ್ಟು ಹೊಡೆದಾಡಿ ಕಷ್ಟ ನಷ್ಟಗಳನ್ನನುಭವಿಸಿ ಈಗ ಸೂಚಿಸಿರುವ ಷರತ್ತುಗಳನ್ನು ಚೀಣವು ಅಂಗೀಕರಿಸಲು ಹೇಗೆ ಸಾಧ್ಯ? ಇಷ್ಟುಕಾಲ ನಾವು ಹೊಡೆದಾಡಿದ್ದಾದರೂ ಏತಕ್ಕೆ" ಎಂದು ಚಿಯಾಂಗ್-ಕೈ-ಷೇಕರು ಹೇಳುತ್ತಾರೆ.

ಇಟಲಿಯು ಜೆಬೂತಿಯನ್ನು ವಶಪಡಿಸಿಕೊಳ್ಳುವದೇ?

ಫ್ರೆಂಚರಿಗೆ ಸೇರಿದ ಜಿಬೌತಿ ರೇವುಪಟ್ಟಣವನ್ನು ಮುತ್ತಿ ವಶಪಡಿಸಿಕೊಳ್ಳುವುದಾಗಿ ಅಬ್ಸೀನಿಯಾದಲ್ಲಿರುವ ಇಟಲಿಯ ಅಧಿಕಾರಿಗಳು ಹೆದರಿಸುತ್ತಿರುವರೆಂದು "ಆರ್ಡ್ರೆ" ಎಂಬ ಪತ್ರಿಕೆಯಲ್ಲಿ ಪ್ರಕಟನವಾಗಿದೆ. ಅದರಲ್ಲಿ "ನಾವು ಜಿಬೌತಿಯನ್ನು ಮುತ್ತಿ ಫ್ರೆಂಚರನ್ನೆಲ್ಲಾ ಸಮುದ್ರಕ್ಕೆ ತಳ್ಳಲು ಇನ್ನು ಕೊಂಚಕಾಲ ಬೇಕಾದೀತು ಅಷ್ಟೆ" ಎಂದು ಇಟಲಿ ಅಧಿಕಾರಿಗಳು ಹೇಳುತ್ತಿದ್ದಾರೆಂದು ಪ್ರಕಟನವಾಗಿದೆ. ಮತ್ತು "ಇಟಲಿ ಸೈನ್ಯಗಳು ಚಲಿಸುತ್ತಿವೆಯೆಂದು ವರ್ತಮಾನಬಂದಿದೆ. ಅಸ್ಸಾಬ್‌ನಿಂದ ಫ್ರೆಂಚ್ ಸೋಮಾಲಿಲ್ಯಾಂಡ್ ಕಡೆಗೆ ರಸ್ತೆಗಳನ್ನು ನಿರ್ಮಿಸಲಾಗಿದೆ, ಬಹುಶಃ ಯುದ್ಧಸಾಮಗ್ರಿಗಳನ್ನು ಸಾಗಿಸುವದಕ್ಕಾಗಿಯೇ ಈ ರಸ್ತೆಗಳ ತಯಾರಿಯಾಗಿರಬೇಕು" ಎಂದು ಆ ಪತ್ರಿಕಾಕಾರರು ತಿಳಿಸಿರುತ್ತಾರೆ. ಫ್ರೆಂಚ್ ನೌಕಾಬಲಕ್ಕೆ ಸೇರಿದ "ಡಿಬರ್‌ವಿಲೆ" ಎಂಬ ಹಡಗು ಬೇರೆರ್‌ನಿಂದ ಜಿಬೌತಿಗೆ ಪ್ರಯಾಣಮಾಡಿತು. ಫ್ರಾನ್ಸ್ ದೇಶದ ಅಧಿಕಾರವರ್ಗವು ಮಾತ್ರ ಈ ವರ್ತಮಾನವು ನಿರಾಧಾರವಾದುದೆಂದು ತಿಳಿಸಿದೆ.

ರಾಜಕೋಟೆಯ ಪ್ರಜೆಗಳಿಗೆ ಆನಂದ, ಸತ್ಯಾಗ್ರಹನಿಂತಿತು.

ಕಳೆದ 25ನೆಯ ತಾರೀಖು ಸಾಯಂಕಾಲ ಸರ್ದಾರ್ ಪಟೇಲರು ರಾಜಕೋಟೆಯ ಥಾಕೂರ್ ಸಾಹೇಬರ ಆಹ್ವಾನದಂತೆ ಅವರನ್ನು ಕಂಡು ಸಾತಂತತೆ ನಡೆಸಿದರು. ಮತ್ತು ಬೆಳಗಿನ ಝಾವ 2 ಗಂಟೆ ವೇಳೆಗೆ ಒಂದು ಒಪ್ಪಂದಕ್ಕೆ ಬಂದರು. ಒಪ್ಪಂದದ ಮುಖ್ಯ ಷರತ್ತುಗಳು ಹೀಗಿರುವುದಾಗಿ ತಿಳಿದುಬಂದಿದೆ---(1) ಪ್ರಜಾಪರಿಷತ್ತಿನ ಸದಸ್ಯರೇ ಹೆಚ್ಚಾಗಿರುವ ಒಂದು ಸಮಿತಿಯನ್ನು ನೇಮಕಮಾಡಲು ಥಾಕೂರ್ ಸಾಹೇಬರು ಒಪ್ಪಿರುತ್ತಾರೆ. ರಾಜಕೋಟೆ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಕೊಡುವ ವಿಚಾರವನ್ನು ಈ ಸಮಿತಿಯು ತತ್‌ಕ್ಷಣ ವಿಚಾರಮಾಡಿ ಆದಷ್ಟು ಜಾಗ್ರತೆ ವರದಿಯನ್ನೊಪ್ಪಿಸುವುದು. (2) ಥಾಕೂರ್ ಸಾಹೇಬರು ತಮ್ಮ ವರಮಾನದಲ್ಲಿ ಬಹಳ ಮಟ್ಟಿಗೆ ಕಡಿಮೆ ಮಾಡಿಕೊಳ್ಳಲು ಒಪ್ಪಿದ್ದಾರೆ. (3) ಎಲ್ಲ ಶಾಸನ ಬಾಣಗಳನ್ನು ತತ್‌ಕ್ಷಣ ಹಿಂದಕ್ಕೆ ತೆಗೆದುಕೊಳ್ಳಲಾಗುವುದು. ಮತ್ತು ಸತ್ಯಾಗ್ರಹಿಗಳ ಮೇಲೆ ಹೂಡಲ್ಪಟ್ಟಿರುವ ಮೊಕದ್ದಮೆಗಳನ್ನು ರದ್ದುಮಾಡಲಾಗುವುದು. ಎಲ್ಲ ರಾಜಕೀಯ ಬಂದಿಗಳನ್ನು ಬಿಡುಗಡೆಮಾಡಲಾಗುವುದು. (4) ಪರಿಷತ್ತು ಸತ್ಯಾಗ್ರಹ ಚಳುವಳಿಯನ್ನು ನಿಲ್ಲಿಸುವದು.

ಶ್ವೇತವರ್ಣಳ್ಳಿ ಹೆದರದ ಜಡ್ಜರು!

ಒಂದು ಮುನ್ಸಿಫ್ ಕೋರ್ಟ್‌ಮುಂದೆ ಯೂರೋಪಿಯ ಅಧಿಕಾರಿಯೊಬ್ಬನ ಸಾಕ್ಷ್ಯವಾಗಬೇಕಿತ್ತು. ಆದರೆ ಮುನ್ಸಿಫರು ಆಗಲೇ ಒಂದು ದಾವಾ ನಿರ್ಣಯವನ್ನು ಆರಂಭಿಸಿ ನಡೆಸುತ್ತಿದ್ದರು. ಮಧ್ಯದಲ್ಲಿ ಬಂದ ಈ ಯೂರೋಪಿಯನ್ನನು, ತನ್ನ ಸಾಕ್ಷ್ಯವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಮುನ್ಸಿಫರನ್ನು ಕೇಳಿದನು. ಮುನ್ಸಿಫರು ನಡೆಸುತ್ತಿದ್ದ ವಿಚಾರಣೆ ಮುಗಿಯುವವರೆಗೂ ಅದು ಸಾಧ್ಯವಿಲ್ಲವೆಂದರು. ಅದಕ್ಕೆ ಆತನು 'ಈತನ ಹೇಳಿಕೆಯನ್ನು ಕೂಡಲೆ ತೆಗೆದುಕೊಳ್ಳಬೇಕು" ಎಂದು ಕಲೆಕ್ಟರು ಕೊಟ್ಟಿದ್ದ ಪತ್ರವನ್ನು ತೋರಿದನು. ಆದರೂ ಮುನ್ಸಿಫರು ಕೈಗೆ ತೆಗೆದುಕೊಂಡಿರುವದನ್ನು ಮಧ್ಯದಲ್ಲಿ ನಿಲ್ಲಿಸಲು ನಿರಾಕರಿಸಿದರು. ಇದರಿಂದ ಕುಪಿತನಾದ ಆ ಶ್ವೇತವರ್ಣೀಯನು ಕೋರ್ಟಿನ ಹೊರಗೂ ಒಳಗೂ ಮನ ಬಂದಂತೆ ಮಾತನಾಡಲುಪಕ್ರಮಿಸಲು, ಮುನ್ಸೀಫರು "ಕಂಟೆಪ್ಟ್ ಆಫ್ ಕೋರ್ಟ್" ಎಂಬ ಶಿಕ್ಷಣಕ್ಕೆ ಆತನನ್ನು ಗುರಿಪಡಿಸಿ 50 ರೂಪಾಯಿ ಜುಲ್ಮಾನೆ ವಿಧಿಸಿ ಜುಲ್ಮಾನೆ ಕಟ್ಟಿಸಲು ಕಚ್ಚಿದರೆ ಆತನ ಮೋಟಾರ್ ಕಾರನ್ನು ಆಟಾಚ್ ಮಾಡುವಂತೆ ಅಧ್ಯಣೆ ಮಾಡಿದರು. ಇದರಿಂದ ಎಚ್ಚೆತ್ತ ಯೂರೋಪಿಯನ್ನನು ಕೋರ್ಟಿನ ಕ್ಷಮೆ ಬೇಡಿದ್ದಲ್ಲದೆ ನಡೆಯುತ್ತಿದ್ದ ದಾವಾ ವಿಚಾರಣೆ ಮುಗಿದಮೇಲೆ ತನ್ನ ಸಾಕ್ಷ್ಯವನ್ನು ಕೊಟ್ಟು ತೊಲಗಿದನು.

ಇಂಗ್ಲೆಂಡ್ ದೇಶದ ಮಹಾಕವಿಯಾದ ವಿಲಿಯಂ ಷೇಕ್ಸ್‌ಪಿಯರ್ ಜೀವನ ಚರಿತ್ರೆ

ಲೇಖಕರು :—ಕನ್ನಡಕವಿ, ಆಸ್ಥಾನವಿದ್ವಾ ಅನಂತಪ್ಪ ರಾಮರಾಯರು.

೧. ನೆಯ ಅಧ್ಯಾಯ

೧. ಮಹಾಕವಿಯ ಜನ್ಮಸ್ಥಾನ; ಮಾತಾಪಿತೃಗಳ ಗುಣಾತಿಶಯ

ಇಂಗ್ಲೆಂಡ್ ದೇಶದ ಮಧ್ಯಭಾಗದಲ್ಲಿ ವಾರ್ವಿಕ್ ಷೈರ್ ಎಂದು ಕರೆಯಲ್ಪಡುವ ಒಂದು ಡಿಸ್ಟ್ರಿಕ್ಟ್ ಉಂಟು. ಇಲ್ಲಿ ಅರ್ವೆ ಎಂದು ಹೆಸರು ಹೊಂದಿದ ಒಂದು ನದಿಯು ಉತ್ತರದಿಕ್ಕಿನಲ್ಲಿ ಹುಟ್ಟಿ, ದಕ್ಷಿಣದಿಕ್ಕಿಗೆ ಪ್ರವಹಿಸಿಕೊಂಡು ಹೋಗುತ್ತಿರುವುದು. ಗಂಭೀರವಾಗಿ ಹರಿಯುತ್ತಿರುವ ಈ ನದಿಯು ಆ ಡಿಸ್ಟ್ರಿಕ್ಟಿಗೆ ಒಂದು ಅಲಂಕಾರಪ್ರಾಯವಾಗಿಯೂ, ರೈತರ ವ್ಯವಸಾಯಕ್ಕನುಕೂಲವಾಗಿಯೂ ಇರುವುದು. ಈ ನದಿಯ ತೀರದಲ್ಲಿ ಸ್ಟ್ರಾಟ್ ಫರ್ಡ್ ಎಂಬ ಅಭಿಧಾನವುಳ್ಳ ಒಂದು ಗ್ರಾಮವಿರುವುದು. ಈ ಗ್ರಾಮವು ವಾರ್ವಿಕ್‌ಷೈರಿಗೆ ಕೆಲವು ಮೈಲಿಗಳ ದೂರದಲ್ಲಿದೆ. ಅರ್ವೆ ಎಂಬ ನದಿಯು ಈ ಗ್ರಾಮದಲ್ಲಿ ಪ್ರವಹಿಸುತ್ತಿರುವುದರಿಂದ ಈ ಗ್ರಾಮದ ಉಭಯಪಾರ್ಶ್ವಗಳಲ್ಲಿಯೂ ನಾನಾವಿಧವಾದ ತರು ಸಮುದಾಯದಿಂದಲೂ, ಅಲ್ಲಲ್ಲಿ ಫಲಪುಷ್ಪಗಳಿಂದ ನಿಬಿಡೀಕೃತವಾದ ತಾಲತೆಗಳಿಂದಲೂ ಆ ಗ್ರಾಮವು ಕಂಗೊಳಿಸುತ್ತಿರುವುದು. ಅಲ್ಲಲ್ಲಿ ಉಚ್ಚಟಿಸುರಾವ ಹುಲ್ಲಾವಲುಗಳು ರಮಣೀಯವಾಗಿ ಕಂಗೊಳಿಸುತ್ತಾ ನೋಟಕರ ಚಿತ್ತಕ್ಕೆ ಆಹ್ಲಾದಕರವಾಗಿ, ಗಗನಚುಂಬಿತ ವಿಚಿತ್ರ ತೋಪುಗಳಿಂದೊಪ್ಪುತ್ತಾ ಆ ಸ್ಥಳನಿವಾಸಿಗಳ ಮನೋವಿನೋದಕರವಾಗಿರುವುದು. ಇಂತಹ ಆನಂದಕ್ಕೆ ನೆಲೆಯೆನಿಸಿದ ಈ ಪ್ರದೇಶವು ಅಸಾಧಾರಣವಾದ ಲೋಕ ವಿಖ್ಯಾತಿಯೊಂದುವ ಷೇಕ್ಸ್‌ಪಿಯರ್ ಮಹಾಕವಿಯೆನಿಸಿಕೊಳ್ಳುವ ಮಹಾಕವಿತೋದ್ಭವನ ಜನ್ಮಸ್ಥಾನೋದಯಕ್ಕೆ ಮಾತೃಸ್ಥಾನವಾಗಿದ್ದಿತು.

ಆನಂದಕ್ಕೆ ನೆಲೆವನೆಯಂತಿರುವ ಅವ್ಸ್ಟ್ರಾಟ್‌ಫರ್ಡ್ ಎಂಬ ಗ್ರಾಮದಲ್ಲಿ ವ್ಯವಸಾಯಮಾಡಿಕೊಂಡು ಕೈ ಚೀಲಗಳನ್ನು ಹಾಕುತ್ತಾ ಅವನ್ನು ವಿಕ್ರಯಿಸಿ ಬಂದ ದ್ರವ್ಯದಿಂದ ಜೀವಿಸುತ್ತಿದ್ದ ಈ ಮಹಾಕವಿಯ ತಂದೆಯಾದ ಜಾನ್ ಷೇಕ್ಸ್‌ಪಿಯರ್ ರಾಬರ್ಟ್ ಆರ್ಡನ್ ಎಂಬಾತನ ದ್ವಿತೀಯ ಪುತ್ರಿಯಾದ ಮೇರಿ ಎಂಬವಳನ್ನು ಕ್ರಿ ಶ 1557 ನೆಯ ವರುಷದಲ್ಲಿ ವಿವಾಹ ಮಾಡಿಕೊಂಡನು. ಈತನು ಹೆಚ್ಚು ಸಂಪಾದನೆಗಾಗಿ ಮೃಗಚರ್ಮ, ಉಣ್ಣೆ ಮತ್ತು ಧಾನ್ಯ ಮುಂತಾದುವುಗಳನ್ನು ವಿಕ್ರಯಿಸುತ್ತಿದ್ದನು. ಈತನಿಗೆ ತನ್ನ ಹೆಸರನ್ನು ರಾಜ ಹಾಕಾವುದಕ್ಕೂ ಬರುತ್ತಿರಲಿಲ್ಲ. ಈತನು ತನ್ನ ವೃತ್ತಿಯಿಂದ ಕ್ರಮೇಣ ಅಭಿವೃದ್ಧಿಸ್ಥಿತಿಗೆ ಬಂದು ಜನಗಳಲ್ಲಿ ಖ್ಯಾತಿಯನ್ನು ಸಂಪಾದಿಸಿಕೊಂಡು ಬರಬರುತ್ತಾ 1568ನೆಯ ವರುಷದಲ್ಲಿ ತನ್ನ ಸ್ಥಳದಲ್ಲಿ ವಿರ್ಡಿಸಿದ ಆಡಳಿತಾಧ್ಯಕ್ಷವೃದ್ಧಿಯ ಸಂಸ್ಥೆಯ ಮೇಲ್ವಿಚಾರಣಾಕರ್ತನಾಗಿ, ಆ ಸ್ಥಳದಲ್ಲಿ ನ್ಯಾಯತೀರ್ಮಾನವನ್ನು ಮಾಡುತ್ತಾ ಜನಗಳಲ್ಲಿ ಮಂಚ್ಯಿದೆಯನ್ನು ಸಂಪಾದಿಸಿಕೊಂಡಿದ್ದನು. ಈತನು ಸತ್ಯವಾದಿ, ದಯಾಮಯ ಮತ್ತು ದೇವಭಕ್ತ. ಈತನ ಪತ್ನಿಯಾದ ಮೇರಿ ಎಂಬಾಕೆಗೆ ತೌರುಮನೆಯಿಂದ ಒಳ್ಳೆಯಿಂದಾಗಿ 51 ಎಕರೆ ಜಮೀನೂ, ನಗದು ಕೆಲವುಹಣವೂ ಸೇರಿತ. ಷೇಕ್ಸ್‌ಪಿಯರ್ ತಾಯಿಯಾದ ಈ ಮೇರಿಯು ಸ್ವಂದೂಪಿಯಾಗಿ, ಗೃಹಣಿಗೆ ಬೇಕಾಗಿರುವ ಸದ್ಗುಣಗಳಿಂದ ಶೋಭಿಸುತ್ತಾ ಸಾಧುಸ್ವಭಾವಪ್ರೌಢಳಾಗಿ, ಆಶ್ಚರ್ಯಕರವಾದ ಪದ್ಯರಚನಾಶಕ್ತಿಯನ್ನು ಸಂಪಾದಿಸಿ ಹೆಳುವ ಸ್ವಭಾವಜನ್ಯಶಕ್ತಿಯನ್ನು ಪಡೆದಿದ್ದಳೆಂದು ತಿಳಿಯಬರುವುದು. ಈಕೆಯೂ, ಈಕೆಯ ಪತಿಯೂ ಸದ್ಗುಣಾಭರಣದಿಂದೊಪ್ಪುತ್ತಾ ಜನರಿಗೆ ಹಿತವಚನಗಳನ್ನಾಡುತ್ತಾ, ಜನಾನುರಾಗಕ್ಕೆ ಪಾತ್ರರಾಗಿ ಜಕ್ಕವಕ್ಕಿಗಳಂತೆ ಜೀವಿಸಿಕೊಂಡಿದ್ದರು. ಹೀಗೆ ಕೆಲವು ಕಾಲವಾದನಂತರ ಇವರಲ್ಲಿ ಮಹಾಕವಿ ಯೆನಿಸಿಕೊಳ್ಳುವ ವಿಲಿಯಂಷೇಕ್ಸ್‌ಪೀರ, ಹೆಂನ್ರಿಸ್ಟ್ರಟ್ ಎಂಬ ಬೀದಿಯಲ್ಲಿರುವ ಸಾಧಾರಣವಾದ ಒಂದು ಮನೆಯಲ್ಲಿ 1564 ನೆಯ ವರ್ಷದಲ್ಲಿ ಏಪ್ರಿಲ್ ತಿಂಗಳು 23ನೆಯ ತಾರೀಖಿನಲ್ಲಿ ಜನಿಸಿದನು. ಈ ಗೃಹವನ್ನು ನೋಡುವುದಕ್ಕಾಗಿ ಅನೇಕ ವಿದ್ವಾಂಸರೂ, ಪ್ರಸಿದ್ಧ ಪುರುಷರೂ ಸಮಸ್ತ ದೇಶಗಳಿಂದಲೂ ಈಗಲೂ ಬರುತ್ತಿರುವರು. ಪೂರ್ವದಲ್ಲಿ ಈ ಗೃಹವನ್ನು ನೋಡಲು ಬಂದವರೆಲ್ಲರೂ ಆ ಮನೆಯ ಗೋಡೆಯ ಮೇಲೆ ಸಿಸದಕಡ್ಡಿಯಿಂದ ತಮ್ಮ ಹೆಸರುಗಳನ್ನು ಬರೆಯುತ್ತಿದ್ದರು. ಈಗಲೂ ಅದಕ್ಕಾಗಿಯೇ ಅಲ್ಲಿ ಒಂದು ಪುಸ್ತಕವನ್ನಿಟ್ಟಿದ್ದಾರೆ. ಇತ್ತ ಆ ಮಗುವಿನ ಮಾತಾಪಿತೃಗಳು ಬಾಲಕನ ಬಾಲಲೀಲೆಗಳನ್ನು ನೋಡಿ ಆನಂದಪಡುತ್ತಾ ಕೆಲವು ಕಾಲವನ್ನು ಕಳೆದರು

೨ ಷೇಕ್ಸ್‌ಪಿಯರನ ಬಾಲ್ಯ 1564—1577.

ಈ ಷೇಕ್ಸ್‌ಪಿಯರನ ಮಾತಾಪಿತೃಗಳು ಹೆಪ್ರಿಸ್ಟ್ರೀಟ್ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದರು. ಇವರ ಗೃಹದಲ್ಲಿದ್ದ ವಸ್ತುಗಳು ಆಡಂಬರವಿಲ್ಲದೆ ಮಿತವಾಗಿದ್ದುವು. ಆ ಕಾಲಕ್ಕೆ ತಕ್ಕಂತೆ ವಸ್ತುಸಮುದಾಯದಿಂದ ಹೀಗೆ ಅಲಂಕರಿಸಲ್ಪಟ್ಟ ಈ ಸ್ಥಳದಲ್ಲಿ ಅವಿಶ್ರಾಂತಕೀರ್ತಿಮಣಿಯೆನಿಸಿ ವಿಖ್ಯಾತಿಗೊಂಡಿರುವ ಷೇಕ್ಸ್‌ಪಿಯರು ಜನಿಸಿದನು. ಆ ಕಾಲದಲ್ಲಿ ಶ್ರೀಮಂತರು ಮಾತ್ರ ತಮ್ಮ ಮನೆಯ ಒಳಭಾಗಗಳನ್ನು ಗೋಡೆಗಳಿಗೆ ಚಿತ್ರವಸ್ತ್ರಗಳಿಂದ ಅಲಂಕಾರಮಾಡಿಸುತ್ತಿದ್ದರು. ಆದರೆ ಈ ದಂಪತಿಗಳು ಅಸ್ಪಷ್ಟಾಗರಿಕತೆಯನ್ನರಿಯದೆಯೂ, ಮಿತವ್ಯಯಿಗಳಾಗಿಯೂ, ಬಡವರಾಗಿಯೂ ಇದ್ದುದರಿಂದ ತಮ್ಮ ಮನೆಯ ಕೊಠಡಿಗಳ ಗೋಡೆಯ ಮೇಲೆ ಕೆಂಪು ಬಟ್ಟೆಗಳನ್ನು ಮಾತ್ರ ನೇತುಹಾಕುತ್ತಿದ್ದರು. ಇವುಗಳಮೇಲೆ ವಿದ್ವಾಂಸರು ಹೇಳುತ್ತಿದ್ದ ಉದ್ದಿವಾದಗಳನ್ನು ಸೂಚಿಸುವ ವಾಕ್ಯಗಳೂ, ಮತಗ್ರಂಥದಿಂದ ನಕ್ಷತ್ರಗಳೂ, ಮನುಷ್ಯನ ಜೀವ ಚರಿತ್ರೆಗಳನ್ನು ಚೆನ್ನಾಗಿ ತೋರಿಸುವ ಆಕೃತಿಗಳೂ ಇವೇ ಮುಂತಾದುವುಗಳು ವಿಶಾಲವಾಗಿ ಬರೆಯಲ್ಪಟ್ಟಿದ್ದುವು ಷೇಕ್ಸ್‌ಪಿಯರು ಇಂತಹ ಸ್ಥಳದಲ್ಲಿ ಸಂಜನಿಸಿ, ಕ್ರಮೇಣ ಬಳೆದು ಸುತ್ತಮುತ್ತಲಿರುವ ವಸ್ತುಜ್ಞಾನವಾಗುವಷ್ಟಿಗೆ ಬಂದಮೇಲೆ, ಅಲ್ಲಲ್ಲಿ ಗೋಡೆಗಳಮೇಲೆ, ನೇತುಹಾಕಿದ್ದ ಬಟ್ಟೆಗಳಮೇಲೆ ಬರೆದಿರುವ ಚಿತ್ರಗಳನ್ನೂ ವಾಕ್ಯಗಳನ್ನೂ ನೋಡಿ ಬಾಲಕನು ಬಾಯಿಪಾಠಮಾಡಿಕೊಳ್ಳುತ್ತಿದ್ದುದರಿಂದ ಈ ಬಾಲಕನ ಮುಂದಣಜ್ಞಾನೋದಯಕ್ಕೆ ಇವು ಒಂದು ಹದಿಪಾಯದಂತಿದ್ದುವು.

೩. ವಿದ್ಯಾಭ್ಯಾಸ ಕ್ರಮ ಮತ್ತು ಬಾಲಕನ ಮನೋಧರ್ಮ.

ಕವಿಯ ಮಾತಾಪಿತೃಗಳು ಅಷ್ಟು ವಿದ್ಯಾವಂತರಲ್ಲದಿದ್ದರೂ ಮಗನಿಗೆ ವಿದ್ಯಾಭ್ಯಾಸಮಾಡಿಸಬೇಕೆಂಬ ಕುತೂಹಲವು ಇವರಿಗೆ ಹುಟ್ಟಿತು. ಸ್ಫುರದ್ರೂಪಿಯಾಗಿರುವ ಈ ಬಾಲಕನಿಗೆ ಐದನೆಯ ವರುಷವಾದುದನ್ನು ನೋಡಿ, ತಂದೆಯು ಇವನನ್ನು ತಮ್ಮೂರಿನ ಹತ್ತಿರದಲ್ಲಿದ್ದ ಒಂದು ಪಾಠಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದನು. ಈ ಪಾಠಶಾಲೆಯಲ್ಲಿ ಲ್ಯಾಟೀ ಮತ್ತು ಗ್ರೀಕ್ ಭಾಷೆಗಳನ್ನು ಕಲಿಸುತ್ತಿದ್ದರು. ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವಾಗ, ಈಗಣ ಕಾಲದ ಕಳ್ಳುಹಲಗೆಯಂತಿರುವ ಒಂದು ವಿಧವಾದ ಒಂದು ಒಣಗಿದ ಎಲೆಯಷ್ಟುತ್ತಲೂ ಮರದ ಕಟ್ಟುಗಳನ್ನು ಹಾಕಿ ಆದರಮೇಲೆ ಬಾಲಕರು ಮೊದಲು ಕಲಿತುಕೊಳ್ಳಬೇಕಾದ ದೊಡ್ಡ ಮತ್ತು ಸಣ್ಣ ಅಕ್ಷರಗಳನ್ನೂ ಕೇವು ಮಾತುಗಳನ್ನೂ ಸಾಲುಸಾಲಾಗಿ ಬರೆದು ಕೊನೆಯಲ್ಲಿ ದೇವತಾಪ್ರಾರ್ಥನೆಯನ್ನೂ ಮನೋಹರವಾದ ರೀತಿಯಲ್ಲಿ ಒರೆಯುತ್ತಿದ್ದರು ಉಪಾಧ್ಯಾಯರು ಈ ರೀತಿಯಾಗಿ ಬಾಲಕರಿಗೆ ಇಂತಹ ಪುಸ್ತಕದಲ್ಲಿ ಪ್ರಥಮತಃ ಕಲಿಸಿಕೊಡುತ್ತಿದ್ದರು ಈ ಕಟ್ಟಣ ಮೇಲ್ಭಾಗದಲ್ಲಿ ಒಂದು ರಂಧ್ರವನ್ನು ಮಾಡಿ, ಅದಕ್ಕೆ ದಾರವೆನ್ನು ಪೋಣಿಸಿ ಹುಡುಗನ ಕುತ್ತಿಗೆಗೆ ನೇತು ಹಾಕಿ ಪಾಠಶಾಲೆಗೆ ಕಳುಹಿಸಿಕೊಡುತ್ತಿದ್ದರು. ಆಗ ಈ ಬಾಲಕನ ಜತೆಯಲ್ಲಿ ಕೆಲವು ಹುಡುಗರು ಗುಂಪುಗುಂಪಾಗಿ ಪಾಠಶಾಲೆಗೆ ಹೋಗುತ್ತಿದ್ದರು. ಈ ಷೇಕ್ಸ್‌ಪಿಯರು ಮನೆಯಿಂದ ಹೊರಟಾಗ್ಗೆ ದಾರಿಯಲ್ಲಿ ಇದಿರಿಗೆ ಬರುತ್ತಿದ್ದ ಕೆಲವು ಸನ್ಯಾಸಿಗಳನ್ನೂ, ನಾಟಕದ ಹುಡುಗರನ್ನೂ ಮತ್ತು ಬಡಹುಡುಗರ ಗುಂಪನ್ನೂ ಸೇರಿ ಅವರ ಪರಿಚಯವನ್ನು ಮೊದಲು ಮಾಡಿಕೊಳ್ಳುತ್ತಿದ್ದನು ಸ್ಟ್ರಾಟ್‌ಫರ್ಡ್ ಹಳ್ಳಿಯ ಹತ್ತಿರದಲ್ಲಿ ಕೆಲವು ನಾಟಕ ಸಂಘದವರು ಆಟವಾಡುತ್ತಿದ್ದಾಗ್ಗೆ ಗಣನೀಯನಾಗಿದ್ದ ತಂದೆಯಾದ ಜಾನ್‌ಷೇಕ್ಸ್‌ಪಿಯರನ್ನೂ, ಈತನ ಹೆಂಡತಿಯನ್ನೂ ನಾಟಕಾವಲೋಕನಕ್ಕಾಗಿ ಸಂಘದವರು ಕರೆದುಕೊಂಡು ಹೋಗುತ್ತಿದ್ದರು ಇವರಿಗೆ ನಾಟಕಾವಲೋಕನದಲ್ಲಿ ಅಭಿರುಚಿಯಿತ್ತು. ಈ ಷೇಕ್ಸ್‌ಪಿಯರು ಬಾಲಕನು ತಾಯಿಯೊಡನೆ ನಾಟಕಮಂದಿರಕ್ಕೆ ಹೋಗಿ, ಅಲ್ಲಿ ನಡೆದ ಮತ್ತು ಅವಲೋಕಿಸಿದ ವಿಷಯಗಳನ್ನು ಮನಸ್ಸಿನಲ್ಲಿ ಚೆನ್ನಾಗಿ ಜ್ಞಾಪಕದಲ್ಲಟ್ಟುಕೊಂಡು ಮನೆಗೆ ಬಂದಮೇಲೆ ತಾಯಿಯೊಡನೆ ಹೇಳುತ್ತಿದ್ದನು ಈ ಬಾಲಕನು ಮೊದಲಿನಿಂದಲೂ ನಾಟಕದಲ್ಲಾಡುವ ವಿಚಿತ್ರವಾದ ವಾಕ್ಯಗಳನ್ನು ಕೇಳುವುದೂ, ವಿವಿಧ ವೇಷಗಳನ್ನು ನೋಡುವುದೂ ಇವುಗಳಿಂದ ಇವನ ಮನಸ್ಸಿನಲ್ಲಿ ಒಂದು ವಿಧವಾದ ಚಿತ್ರಬರೆದಿಟ್ಟಂತಾಗುತ್ತಿದ್ದಿತು. ಇವುಗಳನ್ನು ನೋಡಿದ ಮಾತಾಪಿತೃಗಳಿಗೆ ಇವನು ಮುಂದಕ್ಕೆ ಬಂದು ವಿಖ್ಯಾತನಾದಾನೆಂದು ಊಹಿಸುತ್ತಿದ್ದರು.

೪ ಷೇಕ್ಸ್‌ಪಿಯರ್ ಕಾಲದ ಪಾಠಶಾಲಾಕೃತ್ಯಗಳು.

ಹೀಗೆ ಕೆಲವು ಕಾಲಕಳೆದನಂತರ ಬಾಲಕನಿಗೆ ಏಳನೆಯವರುಷ ವಾಗುತ್ತಾ ಬಂದಿತು ಬಾಲಕನು ಪ್ರೀತಿಯಿಂದ ಇನ್ನೂ ಪಾಠಶಾಲೆಯಲ್ಲಿಯೇ ವಿದ್ಯಾವ್ಯಾಸಂಗ ಮಾಡುತ್ತಿದ್ದನು ಆಗಣ ಕಾಲದ ವಿದ್ಯಾಸಿಲಯವು ರಾಜನ ಸಹಾಯದ್ರವ್ಯದಿಂದಲೇ ನಡಿಸಲ್ಪಡಬೇಕಾಗಿತ್ತು. ವಿದ್ಯಾಶಾಲೆಯಲ್ಲಿ ಥಾಮಸ್ ಜಂಟ್ ಎಂಬಾತನೇ ಮೊದಲಾದವರು ಉಪಾಧ್ಯಾಯರಾಗಿದ್ದರು. ಈತನಾದರೋ, ವಿದ್ವಾಂಸನಾಗಿ ಜನಸನ್ಮಾನ್ಯನಾಗಿ, ನಮ್ಮ ಈ ಷೇಕ್ಸ್‌ಪಿಯರ್ ಬಾಲಕನಿಗೆ ಪ್ರಥಮ ಗುರುವಾಗಿದ್ದನು ವಿಖ್ಯಾತನಾದ ಈ ಬೋಧಕನ ನೂತನ ಬೋಧನಾಕ್ರಮವೇ ಈ ಬಾಲಕನ ಪುರೋಭಿವೃದ್ಧಿಗೆ ಕಾರಣವಾಗಿದ್ದಿತು. ಈ ಪಾಠಶಾಲೆಯಲ್ಲಿ ಒಬ್ಬ ಮುಖ್ಯೋಪಾಧ್ಯಾಯರೂ, ಒಬ್ಬ ಸಹಾಯೋಪಾಧ್ಯಾಯರೂ ಇರುತ್ತಿದ್ದರು. ಈ ಕಾಲದ ಸಾಗರಿಕತನದಂತೆ ಆ ವಿದ್ಯಾಸಿಲಯವು ನೋಡುವುದಕ್ಕೆ ಆಡಂಬರವಿಲ್ಲದೆ ಒಂದು ಗುಡಿಸಿಲಿನಂತಿದ್ದಿತು. ಇಂತಹ ಪಾಠಶಾಲೆಯಲ್ಲಿ ಷೇಕ್ಸ್‌ಪಿಯರು ಗ್ರೀಕ್ ಮತ್ತು ಲ್ಯಾಟೀ ಭಾಷೆಗಳನ್ನು ಕಲಿಯುತ್ತಾ, ಕಾಲಕ್ರಮೇಣ ಬುದ್ಧಿಶಾಲಿಯಾಗುತ್ತಾ ಬಳೆದನು ಬಾಲಕನು ವಿದ್ಯಾವ್ಯಾಸಂಗದಲ್ಲಿ ಅಭಿರುಚಿಹೊಂದಿ. ಶುಂಬ ಶ್ರದ್ಧೆಯಿಂದ ವ್ಯಾಸಂಗ ಮಾಡುತ್ತಾ ಬಂದನು. ಹೀಗೆ ಕೆಲವು ಕಾಲ ಕಳೆಯಿತು.

ಪಾಠಶಾಲೆಯು ಪ್ರತಿದಿವಸ ಪ್ರಾತಃಕಾಲ ೬ ಗಂಟೆಗೆ ಸರಿಯಾಗಿ ಪ್ರಾರಂಭವಾಗುತ್ತಿದ್ದಿತು. ಒಂಭತ್ತು ಗಂಟೆಯ ಹೊತ್ತಿನಲ್ಲಿ ವಿದ್ಯಾರ್ಥಿಗಳು ಸ್ವಲ್ಪ ಉಪಹಾರವನ್ನು ತೆಗೆದುಕೊಳ್ಳಲು ಉಪಾಧ್ಯಾಯರು ಕಾಲುಗಂಟೆ ವಿರಾಮವನ್ನು ಕೊಡುತ್ತಿದ್ದರು. ಪುನಃ ಪಾಠಶಾಲೆಯು ೧೧ ಗಂಟೆಯವರೆಗೂ ನಡಿಸಲ್ಪಡುತ್ತಿದ್ದಿತು. ಪುನಃ ಮಧ್ಯಾಹ್ನ ೧ ಗಂಟೆಗೆ ಸರಿಯಾಗಿ ಪಾಠಶಾಲೆಯು ಉಪಕ್ರಮವಾಗಿ ಸಾಯಂಕಾಲ ೬ ಗಂಟೆಯವರೆಗೂ ನಡಿಸಲ್ಪಡುತ್ತಿದ್ದಿತು. ಕೊನೆಯಲ್ಲಿ ಉಪಾಧ್ಯಾಯರು ಬಾಲಕರನ್ನೆಲ್ಲಾ ಒಂದುಕಡೆಯಲ್ಲಿ ಸೇರಿಸಿಕೊಂಡಿದ್ದು ದೇವತಾಪ್ರಾರ್ಥನೆಯು ನಡೆದಮೇಲೆ ಬಾಲಕರೆಲ್ಲರೂ ತಂತಮ್ಮ ಮನೆಗಳಿಗೆ ತೆರಳುತ್ತಿದ್ದರು. ವಿದ್ಯಾರ್ಥಿಗಳ ಕಾಲವು ವಿಶೇಷವಾಗಿ ಪಾಠಶಾಲೆಯಲ್ಲಿಯೇ ಕಳೆಯುತ್ತಿದ್ದಾಗ್ಗೂ, ಬಾಲಕರ ಮಾತಾಪಿತೃಗಳು—"ನಮ್ಮ ಹುಡುಗರು ಓದುವುದೇ ಇಲ್ಲ; ಆಟವಾಡುತ್ತಲೇ ಇರುವರು" ಎಂದು ಗೊಣಗುಟ್ಟುತ್ತಲಿದ್ದರು

ವಿದ್ಯಾರ್ಥಿಗಳು ಉಪಾಧ್ಯಾಯರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಉಪಾಧ್ಯಾಯರು ಆ ಕಾಲದಲ್ಲಿ ವಿಶೇಷ ಲೌಕಿಕವನ್ನರಿಯದೆ, ನಿರ್ದಯರಾಗಿ ವಿದ್ಯಾರ್ಥಿಗಳನ್ನು ಕ್ರೂರವಾಗಿ ಶಿಕ್ಷಿಸುತ್ತಿದ್ದರು ಪ್ರಾತಃಕಾಲದಲ್ಲಿ ಉಪಾಧ್ಯಾ

ಯರು ತಮಗೆ ಹಳೆಯಾಗುತ್ತಿದ್ದುದರಿಂದ ದೇಹಶಾಸ್ತ್ರಕ್ಕೆ ವಿದ್ಯಾರ್ಥಿಗಳನ್ನು ಶಿಕ್ಷಿಸುತ್ತಿದ್ದರಂತೆ! ಕೆಲವು ವೇಳೆಗಳಲ್ಲಿ ಶಿಷ್ಯರು ಶಿಕ್ಷೆಯನ್ನು ತಪ್ಪಿಸಲಾರದೆ ಮೂರ್ಛಾಗತರಾಗುತ್ತಿದ್ದರು.

೨ ನೆಯ ಅಧ್ಯಾಯ.

1. ಷೇಕ್ಸ್‌ಪಿಯರ್ ಪೂರ್ವಾಭಿವೃದ್ಧಿ ಕ್ರಮ.

ಇತ್ತ ಷೇಕ್ಸ್‌ಪಿಯರ್ ವಿದ್ಯಾಭ್ಯಾಸವನ್ನು ಮಾಡಿ ಪಾಠಶಾಲೆಯನ್ನು ಬಿಟ್ಟನಂತರ, ತನ್ನ ವಿರಾಮಕಾಲಗಳಲ್ಲಿ ಹೊಲಗಳಿಗೂ, ಕಾಡುಗಳಿಗೂ ಹೋಗಿ ಅಲ್ಲಲ್ಲಿ ಸಂಚರಿಸುತ್ತಾ, ನೋಡನೋವಾಗಿ ಬೆಳೆದ ಕೋಮಲವಾದ ಪುಷ್ಪವಾಟಿಗಳಲ್ಲಿ ಆಟವಾಡುತ್ತಾ, ದೂರದಲ್ಲಿ ಕಾಣಬರುವ ಬೆಟ್ಟಗಳ ಸಾಲುಗಳನ್ನೂ, ಅಲ್ಲಿಂದ ಪ್ರವಹಿಸುತ್ತಿರುವ ಫಲಿಗಳನ್ನೂ ಕಂಗೊಳಿಸುವ ಲತಾಮಂದಿರಗಳನ್ನೂ, ಜಿಂಕೆಯ ಸಮೂಹವನ್ನೂ, ಉನ್ನತನಾಗಿ ಬೆಳೆದಿರುವ ತರುಗಳನ್ನೂ ಮತ್ತು ಪೃಷ್ಠಿರಜನಾಕ್ಕ ಮಗಳನ್ನೂ ಮನಸಾರ ನೋಡಿ ನೋಡಿ, ಕುಳಿಸಿಕಾದಿಗಳ ಇಂಪಾದ ಸ್ವರಗ -ನ್ನು ಕೇಳುತ್ತಾ, ಮರದ ಕೆಳಗೆ ತಂಪಾದ ನೆರಳನಲ್ಲಿ ಮಲಗಿಕೊಂಡು ಆಟವಾಡ ತ್ತಿದ್ದನು. ಬಾಲಕನಿಗೆ ಈ ವಿಚಿತ್ರ ಲೀಲೆಗಳಿಂದ ಅವನ ಮನಸ್ಸು ಒಂದೊಂದು ವೇಳೆ ಆನಂದಪರವಶವಾಗುತ್ತಿದ್ದಿತಲ್ಲದೆ, ಇವುಗಳಿಂದ ಇವನ ಮನಸ್ಸು ವಿಚಿತ್ರ ಸ್ವಭಾವವುಳ್ಳದಾಗಿ, ದಿನಕ್ರಮೇಣ ಅಭಿವೃದ್ಧಿಗೆ ಕಾರಣಭೂತವಾಯಿತೆಂದು ಹೇಳುವುದಕ್ಕನುಸಾರವಾಗಿ ಅನೇಕ ವಿಧವಾಗಿ ಊಹನ. ಮೊದಲು ಮೊದಲು ರಚಿಸುತ್ತಿದ್ದ ಗ್ರಂಥಗಳಲ್ಲಿ ತಾನು ನೋಡಿದ, ಅನುಭವಿಸಿದ ಪೃಷ್ಠಿರಚನಾಕ್ಕ ಮಗಳನ್ನು ಕುರಿತು ಬರೆದಿರುವುದೇ ಒಂದು ದೃಷ್ಟಾಂತವಾಗಿರುವುದು ಇದೂ ಅಲ್ಲದೆ ಊಹನು ಒಡನಾಡಿಗಳನ್ನು ಸೇರಿ ಆಟವಾಡುತ್ತಲೂ, ಊರಲ್ಲಿ ಆಗಾಗ್ಗೆ ನಡಿಯುತ್ತಿದ್ದ ಮಹೋತ್ಸವಗಳಲ್ಲಿ ಸೇರುತ್ತಲೂ, ಸಂತೆಗಳಿಗೆ ಹೋಗಿ ಅಲ್ಲಿ ಬಂದು ಸೇರುವ ಜನ ಗಳನ್ನೂ, ಅವರು ತೆಗೆದುಕೊಂಡು ಹೋಗುವ ವಿಚಿತ್ರವಸ್ತುಗಳ ಸೃಷ್ಟಿರಚನಾಕ್ಕ ಮಗಳನ್ನೂ ನೋಡುತ್ತಲೇ ಇರುತ್ತಿದ್ದನು. ಈ ಬಾಲಕನ ತಂದೆಯು ವ್ಯವಸಾಯ ವನ್ನು ಮಾಡುತ್ತಿರುವಾಗ್ಗೆ ನಾಟ ಮತ್ತು ಸುಗ್ಗಿಕಾಲಗಳಲ್ಲಿಯೂ ನಡಿಸಬೇಕಾದ ಕಾರ್ಯಗಳಲ್ಲಿ ತಾನೂ ತಂದೆಯೊಡನೆ ಸೇರಿಕೊಂಡು ಕೈಲಾದಮಟ್ಟಿಗೂ ಸಹಾಯ ಮಾಡುತ್ತಾ ವಾಣಿಜ್ಯ ವೃತ್ತಿಯಲ್ಲಿಯೂ ತಿಳಿಮೆಯನ್ನು ಹೊಂದುತ್ತಿದ್ದನು.

ಷೇಕ್ಸ್‌ಪಿಯರ್ ಬಾಲಕನಿಗೆ 11 ನೆಯ ವರುಷವಾಗುತ್ತಾ ಬರಲು ಇವನು ಇನ್ನೂ ತಾನಾನಾಸ್ಥಳಗಳಿಗೆ ಹೋಗಿ ವಿಷಯಗಳನ್ನು ಸಂಗ್ರಹಿಸುತ್ತಿರಲು ಈ ಹುಡು ಗನಿರುವ ಹಳ್ಳಿಯ ಹತ್ತಿರ ನಾಟಕ ಸಂಘದವರು ಆಗಾಗ್ಗೆ ಬಂದು ಆಟವಾಡುತ್ತಿ ದ್ದರು. ನಾಟಕದಲ್ಲಿ ತೋರಿಸುವ ವಿಚಿತ್ರಾಭಿನಯಗಳನ್ನು ನೋಡಬೇಕೆಂಬ ಬಯಕೆಯಿಂದ ಆಗ್ಗೆ ಚಿಕ್ಕವರ್ತಿನಿಯಾಗಿದ್ದ ಇಲಿಜಬೆತ್ ಎಂಬಾಕೆಯು ಆಗಿಂ ದಾಗ್ಗೆ ಈ ನರ್ತನದ ನಾಟಕಮಂದಿರಕ್ಕೆ ಹೋಗುತ್ತಿದ್ದಳು. ವಿನೋದಕರವಾದ ನಾಟಕಗಳನ್ನು ನೋಡಲು ಜನರು ಗುಂಪುಕೂಡಿ ಶಬ್ದಮಾಡಿಕೊಂಡು ದಾರಿಯಲ್ಲಿ ಹೋಗುತ್ತಿರುವಾಗ್ಗೆ ಷೇಕ್ಸ್‌ಪಿಯರ್ ಮನಸ್ಸು ಇವರ ಗುಂಪಿನಲ್ಲಿ ಸೇರಿ ಹೋಗ ಬೇಕೆಂಬ ಇಚ್ಛೆಯು ಅಂಕುರಿಸಲಾರಂಭಿಸಿತು ಅನಂತರ ಈ ಬಾಲಕನು ನಾಟಕ ಮಂದಿರಕ್ಕೆ ಹೋಗಿ, ಅಲ್ಲಿ ನಡೆದ ವಿಷಯಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟು ಕೊಂಡು ಬರುತ್ತಿದ್ದುದರಿಂದ ನಾಟಕದಲ್ಲಿ ನಡಿಸಬೇಕಾದ ಕಾರ್ಯಗಳಲ್ಲಿಯೂ, ಇದ ರಿಂದ ಅವಲೋಕನಾರ್ಥಿಗಳ ಚಿತ್ತಕ್ಕೆ ಗೋಚರಿಸುವ ವಿಷಯಗಳಲ್ಲಿಯೂ ಸಂಪೂ ರ್ಣ ತಿಳಿವಳಿಕೆಯನ್ನು ಪಡೆಯುತ್ತಾ ಬಂದನು ಆ ಕಾಲದಲ್ಲಿ ನಾಟಕವು ಅತಿ ನ್ಯೂನ್ಯವಾದ ಸ್ಥಿತಿಯಲ್ಲಿರದೆ ಆಗತಾನೇ ಸ್ವಲ್ಪ ತಲೆ ಯೆತ್ತುವ ಸ್ಥಿತಿಯಲ್ಲಿದ್ದಿತು ಹೀಗೆ ಕೆಲವು ಕಾಲ ಕಳೆಯುತ್ತಾ ಬರಲು ಷೇಕ್ಸ್‌ಪಿಯರಿಗೆ ೧೪ ವರುಷಗಳಾದವು ಹುಡುಗನು ಪಾಠಶಾಲಾ ವ್ಯಾಸಂಗವನ್ನು ಬಿಟ್ಟು ತಂದೆಯೊಡನೆ ಸೇರಿ ವ್ಯವಸಾ ಯಾಭಿವೃದ್ಧಿಯ ಕಾರ್ಯಗಳನ್ನು ಮಾಡುವುದರಲ್ಲಿಯೇ ಇವನ ಮನಸ್ಸು ಲೀಲಾ ವಾಗುತ್ತಾ ಬರಲು ಕೆಲವು ಕಾಲ ಹೀಗೇ ಕಳೆಯಿತು.

2. ಷೇಕ್ಸ್‌ಪಿಯರನ ವಿವಾಹ 1582- ಮತ್ತು ಇವನ ಗುಣಾತಿಶಯಗಳು-

ಷೇಕ್ಸ್‌ಪಿಯರಿಗೆ ಈಗ 18 ನೆಯ ವರುಷವಾಗುತ್ತಾ ಬಂದಿತು. ಇವನು ಪ್ರಾಯಸಮರ್ಥನಾಗಲು ತಾಯಿ ವಾಸವಾಗುತ್ತಿರುವ ಹಳ್ಳಿಗೆ ಒಂದು ವೈಲಿ ದೂರದಲ್ಲಿ ವ್ಯವಸಾಯದಿಂದಲೇ ಜೀವಿಸಿಕೊಂಡಿದ್ದ ಒಬ್ಬ ರೈತನ ಮಗಳಾದ ಅನಿಹತಾವೆ ಎಂಬಾಕೆಯನ್ನು 1582 ನೆಯ ವರುಷದಲ್ಲಿ ವಿವಾಹ ಮಾಡಿಕೊಂಡನು. ಈಕೆಯು ಷೇಕ್ಸ್‌ಪಿಯರಿಂತ ವಯಸ್ಸಿನಲ್ಲಿ 8 ವರುಷ ದೊಡ್ಡವಳು. ಈಕೆಯು ಸುಬ್ಬರಡ್ಡುಪಿಯಾಗಿಯೂ, ಪತಿಯ ವಿಶ್ವಾಸಕ್ಕೆ ಪಾತ್ರಳಾಗಿಯೂ ಇದ್ದಳು. ಈ ತಾರುಣ್ಯವತಿಯು ವಿದ್ಯಾವಿಹೀನಳು ವಯೋವಂತಳಾದ ಈಕೆಯು ಪತಿಭಕ್ತೆ ಪರಾಯಣೆಯಾಗಿ ಸಂಸಾರ ಮಾಡಿಕೊಂಡಿರಲು ಕೆಲವು ವರುಷಗಳಾದಮೇಲೆ ಈಕೆಯು ಅವಳಿಜವಳಿ ಮಕ್ಕಳನ್ನು ಹೆತ್ತಳು!

ಷೇಕ್ಸ್‌ಪಿಯರು ನ್ಯಾಯಪರನಾಗಿಯೂ, ನಿಷ್ಕಳಂಕಹೃದಯನಾಗಿಯೂ, ಸದ್ವಿಷಯವಿಜಾರಪರನಾಗಿಯೂ, ವ್ಯಾಪಾರಕಾರ್ಯಾವ್ಯಗ್ರನಾಗಿಯೂ ಇದ್ದನು ಇವನು ತನ್ನ ಪೂರ್ವವಯಸ್ಸಿನಲ್ಲಿ ನಡಿಸಿದ ಕೆಲವು ಅಕೃತ್ಯಗಳಿಗಾಗಿ ಆಗಾಗ್ಗೆ ಪಶ್ಚಾತ್ತಾಪ ಪಡುತ್ತಿದ್ದನೆಂದು ಊಹನು ರಚಿಸಿರುವ ಕೆಲವು ಪದ್ಯಗಳಿಂದಲೇ ಮೆ ದ್ಯವಾಗುವುದು ಜನರು ಮನೋಹರವಾದ ವನಗಳಲ್ಲಿ ಜಿಂಕೆಯ ಮರಿಗಳನ್ನು ಪೂರ್ವದಲ್ಲಿ ಕಾಪಾಡಿಕೊಂಡಿರುತ್ತಿದ್ದರು. ಇವುಗಳೊಡನೆ ಆಟವಾಡುವುದರಲ್ಲಿ ಷೇಕ್ಸ್‌ಪಿಯರಿಗೆ ಬಹಳ ಅಭಿರುಚಿಯಿತ್ತು. ಹೀಗಿರಲು ಒಂದಾನೊಂದು ದಿವಸ ಊರಿನ ಹತ್ತಿರದಲ್ಲಿದ್ದ ಒಂದು ವನದಲ್ಲಿ ಒಬ್ಬ ದೊಡ್ಡ ಮನುಷ್ಯನು ಅನೇಕ ಜಿಂಕೆ ಗಳನ್ನು ಕಾಪಾಡಿಕೊಂಡಿದ್ದನು. ಹೀಗಿರಲು ಷೇಕ್ಸ್‌ಪಿಯರನು ಕೆಲವು ಪ್ರಾಯಸ ಮರ್ಥರಾದ ತುಂಟ ಹುಡುಗರೊಡನೆ ಸೇರಿ ಆಟವಾಡಿಕೊಂಡಿದ್ದು, ರಾತ್ರಿವೇಳೆ ಯಲ್ಲಿ ಆ ವನಕ್ಕೆ ನುಗ್ಗಿ ಅವುಗಳೊಡನೆ ಸೇರಿಕೊಂಡಿದ್ದು ತುಂಬ ಗಲಾಟೆಯನ್ನು ಮಾಡುತ್ತಿದ್ದನು ವನದಲ್ಲಿ ಕಾವಲಿದ್ದ ಜನರು ಈ ತುಂಟರನ್ನು ಹಿಡಿದು ರಾತ್ರಿ ಯೆಲ್ಲಾ ಒಂದು ಸ್ಥಳದಲ್ಲಿಟ್ಟು ಮರುದಿವಸ ಆ ವನದ ಯಜಮಾನನಬಳಿಗೆ ಕರೆ ದುಕೊಂಡು ಹೋದರು ಷೇಕ್ಸ್‌ಪಿಯರೂ ಇವರಲ್ಲಿ ಒಬ್ಬನಾಗಿದ್ದನು. ! ಇದರಿಂದ ಷೇಕ್ಸ್‌ಪಿಯರಿಗೆ ತುಂಬ ಅವಮಾನವಾಯಿತು ಇದಕ್ಕಾಗಿ ಇವನು ಯಜಮಾನನ ಮೇಲೆ ಹಾಸ್ಯರೂಪವಾಗಿರುವಂತೆ ವಿಚಿತ್ರಪದಸಮ್ಮೇಳನದಿಂದ ಕೂಡಿದ ಕವನಪದ್ಯ ಗಳನ್ನು ಮಾಡಿ, ಜನರು ಕೇಳಿದರೆ ಅವನಿಗೆ ಅಮಮಾನವಾಗಲೆಂದು ಅವುಗಳನ್ನು ಬೀದಿಬೀದಿಗಳಲ್ಲಿಯೂ ಹೇಳುತ್ತಿದ್ದನು ಈ ವಿಷಯವು ಹೋಗೋ ಅವನ ಯಜ ಮಾನನಿಗೆ ತಿಳಿಯಲು, ತನಗೆ ಶಿಕ್ಷೆಮಾಡುವನೆಂಬ ಭೀತಿಯಿಂದ, ತನ್ನ ಊರಾಚೆ ಸ್ಟ್ರಾಟ್‌ಫರ್ಡ್ ಎಂಬ ಸ್ಥಳವನ್ನು ಇವನ 28ನೆಯ ವಯಸ್ಸಿನಲ್ಲಿ ಅಂದರೆ 1586 ನೆಯ ಇಪವಿಯಲ್ಲಿ ಬಿಟ್ಟು ಲಂಡ್ ಪಟ್ಟಣಕ್ಕೆ ತಲೆತಪ್ಪಿಸಿಕೊಂಡು ಹೋದನು. ಈ ಕಾಲದಲ್ಲಿ ಊಹನ ತಂದೆಯ ಸಂಸಾರವು ಕ್ರಮೇಣ ಅಭಿವೃದ್ಧಿಯೊಂದಕ್ಕೆ ಬಂದಹಾಗೆಲ್ಲಾ ವರಮಾನದಲ್ಲಿ ಕ್ರಮೇಣ ಹ್ರಸ್ವವಾಗುತ್ತಾ ಬರುತ್ತಿದ್ದಿತು. ಈ ಕಾರಣದಿಂದ ಷೇಕ್ಸ್‌ಪಿಯರು ಲಂಡ್ ಪಟ್ಟಣಕ್ಕೆ ಬಂದಾಗ್ಗೆ ಇವನಲ್ಲಿ ಒಂದು ಕಾಸೂ ಇರಲಿಲ್ಲ ಇವನು ತನ್ನ ಜೀವನವನ್ನು ಕಳೆದುಕೊಳ್ಳಲು ಕೆಲವು ಕಾಲದ ವರೆಗೂ ಲಾಯರ ಗುಮಾಸ್ತನಾಗಿಯೂ, ಆಸ್ಪತ್ರೆಯಲ್ಲಿ ಕಾಂಪೌಂಡರಾಗಿಯೂ ಮತ್ತು ಉಪಾಧ್ಯಾಯನಾಗಿಯೂ ಇದ್ದು ಜೀವಿಸಿ ಕೊಂಡಿರುತ್ತಿದ್ದನು

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಫೂರ್ತಿ ಗ್ರಂಥಾಲಯ. ದಲ್ಲಿ ಬಹು ಮುದ್ರಾಂಕಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳ ಸ್ವರಗಳಿಲ್ಲ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳ ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಪಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿ ಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ಗಿತ ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಣಿಮಂಡಿಪಲ್ಲಿಯ ಪತ್ರಿಯೊಂದು ಗುರುವರ್ಗವೂ ಮತ್ತೆಲ್ಲ ಸಾವಿರಾರು ಶಿಷ್ಯರ ಮನೆಗಳಿರುತ್ತವ್ವು. ಆ ಮಹಾಧಿಕಾರಿಗಳು ಸಮಯಸಮಯಕ್ಕೇ ಸತ್ತುಸರ್ವಕ್ಕೇ ಒಮ್ಮೆಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರು ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಸೊತ್ತಿಲ್ಲದೆ ಹೋಗಿವೆ. ಇದನ್ನು ದೂರಪಡಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ನಿವಹಣೆಯನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಣಾಡಿಕೊಳ್ಳಬೇಕು. ಇವಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪರೋಗಿಸಿರುವದಲ್ಲದೆ ಸುಂದರವಾದ ಮತ್ತು ಭವ್ಯವಾದ ಬೈಂಡನ್ನು ಪೂರಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಶಿಕ್ಷಾರ್ಥವಾಗಿ ಅಗಸ್ತ್ಯ, ವಧೀಚ, ವ್ಯಾಸ, ಸಾನಂದ, ಪೂರ್ವಾಶ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ... ೦—೧—೬

ಹಡ್ಡು ಪೀಠಾರೋಹಣಮಾಡಿರತಕ್ಕ ಏಕರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೫ ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ವಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿಖಾನುಮಣಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೫ ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕೈಪಿಡಿಸಿದ ಸುಂದರ ಫೋಟೋ ೧೫ ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ... ೦—೦—೯

ಓಮಪತ್ತರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .. ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿಜಾಪಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅತ್ಯಪೂರ್ವವಾದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿ ಇತ್ಯಾದಿ ಕಡಿಮೆ ಆರ್ಡರುಗಳಿಗೆ ನಿ ಪಿ ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪರಿವಹವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[37] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (ಋಸೆಯ ಆವೃತ್ತಿ)	..	....	೧ ಆಣೆ
ಸನ್ಯಾಸಾಶ್ರಮವಿಮರ್ಶ (ಋಸೆಯ ಆವೃತ್ತಿ ಸಂಸ್ಕೃತ)	...	....	೧ ಆಣೆ
ಪಂಚಪಂತಿ ಸ್ತುತಿಸ್ತವಕಾರಿ (ಋಸೆಯ ಆವೃತ್ತಿ)		....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (ಲಸೆಯ ಆವೃತ್ತಿ)		....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ಋಸೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ		....	೨ ಆಣೆ
ಬಸವಾದಿನಿಜಶತಕ್ಕಪದರ್ಪಣ (ಲಸೆಯ ಆವೃತ್ತಿ)		....	೨ ಆಣೆ
ಶ್ರೀರೇಣುಕಾಚಾರ್ಯಶತಕ (ತಸೆಯ ಆವೃತ್ತಿ)		....	೨ ಆಣೆ
ಪಂಚಾಚಾರ್ಯಪ್ರಭಾಕರ		....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	...	....	೨ ಆಣೆ
ವೀರಶೈವಮತಮೀಮಾಂಸಾ	....	....	೩ ಆಣೆ
ವೀರಶೈವಾಚಾರಸಿದ್ಧಿ (ಋಸೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (ಋಸೆಯ ಆವೃತ್ತಿ)	....	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (ತಸೆಯ ಆವೃತ್ತಿ)		....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)		....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಾದ್ಯಾಂತದಿವಾಕರ (ತಸೆಯ ಆವೃತ್ತಿ)	....	....	೮ ಆಣೆ
ಸಮ್ಪೋಧರತ್ನಾವಳಿ	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೪ ಆಣೆ
ವೈದಿಕತಿನಪೂಜಾವಿಧಿ (ವೈದಿಕಸ್ವರಯುಕ್ತವಾಪ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)		....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (ತಸೆಯ ಆವೃತ್ತಿ)		....	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ..		....	೧೫ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	....	....	೧ ರೂ.
ಸಚಿತ್ರ ರೇಣುಕವಿಜಯ (ತಸೆಯ ಆವೃತ್ತಿ)	....	....	೧ ರೂ.
ವೀರಶೈವರತ್ನ (ಋಸೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವವು)		....	೧೫ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)		....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಮೇತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)		....	೮ ರೂ.
A brief life-sketch of Pandit Sri Kashinatha Shastriji (*English*)			4 As.
Shakti-Vishistadvaita *or* The Philosophical Aspect of Virasaivism (*English*)			8 As.
Speeches by Pandit Shri Kashinatha Shastriji (*English*)			12 As.
ವೀರಶೈವರತ್ನ (ಮರಾಠಿ) ...	...	...	೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		...	೧ ರೂ.
ವೀರಶೈವೇಂದುಶೇಖರ (ಸಂಸ್ಕೃತ)	...	...	೧ ರೂ.
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ)	...	...	೬ ಆಣೆ.
ನಂದಿಕೇಶ್ವರಕಾರಿಕಾ (ಸಂಸ್ಕೃತ)	...	...	೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ)	...	...	೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	...	೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಯುಕ್ತಾಶ್ರಯ ಮೋಹನಸ್ವಾ. ಪ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನವರ ಆಸ್ಥಾನ ಮಹಾವಿದ್ವಾ ವೇ ಶಿರಿ ಗುರುಪಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಢಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ಸಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಜನವರಿ ೧೯೩೯ [ಸಂಚಿಕೆ ೩೬

ವೀರಶೈವ ಧಾರ್ಮಿಕಸಭೆ, ಕೊಂದಗೋಳ

ತಾ॥ ೨೯-೧೨-೩೮ನೇ ಸಂಜೆಯ ೬ ಘಂಟೆಗೆ ಇಲ್ಲಿಯ ಕೋರಧಾನ್ಯಮಹದೆಳ್ಳಿ ಸ್ಥಾಪಿತವಾಗಿರುವ ಶ್ರೀ ಜಗದ್ಗುರು ಸಿದ್ಧಾಶ್ರಮದಲ್ಲಿ ಶ್ರೀ ಬೋರ್ಡಿಂಗಿನಲ್ಲಿ ವೇದಪಾಠಶಾಲಾಧ್ಯಾಪಕರೂ ಬಿರುದಾಂಕಿತ ವೇ॥ ಚಿದರಮಹದ ವೀರಭದ್ರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. "ಧರ್ಮರಾಜ್ಯ" ಪತ್ರಿಕೆಯ ಸಂಪಾದಕರಾದ ಶ್ರೀಯುತ ಎಂ. ವಿ. ಮಹದೆಸರು ಅಧ್ಯಕ್ಷರ ಪಟ್ಟಿಯನ್ನು ಮಾಡಿಕೊಟ್ಟು ಬೋರ್ಡಿಂಗಿನ ಕಾರ್ಯಕಲಾಪಗಳನ್ನೂ ಹಾಗೂ ಅದಕ್ಕೆ ಸಹಾಯಮಾಡಿದ ಸದ್ಗೃಹಸ್ಥರ ಉಪಕಾರವನ್ನೂ ಮನ್ನಿಸಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚರಮೂರ್ತಿಗಳವರ ನೇತೃತ್ವದಲ್ಲಿ ಉತ್ತರೋತ್ತರ ಅಭ್ಯುದಯ ಹೊಂದಲೆಂದು, ಸ್ಪಾರ್ಥಿಸಿದರು ಸಭೆಗೆ ಪೂರ್ವಪ್ರಮುಖರಿಲ್ಲದಿರೂ ಹಾಗೂ ಬೋರ್ಡಿಂಗ ಹೊಸಬರೂ ಆಗಮಿಸಿದ್ದರು ಜನಸಮುದಾಯವು ಅಧಿಕವಾಗಿತ್ತು. ಪಂಚಗೃಹ ಹಿರೇಮಠದಿಂದ ಹೊರಟ ಪಂಡಿತರ ಸುರವಣಿಗೆಯ ಮುಂದೆ ವೇತಿ ವಿದೇತಿ ವಾದ್ಯಗಳು ಬೋರ್ಡರ್ರು ಯುತ್ತಿದ್ದವು.

ಪಂಡಿತರು "ವೀರಶೈವ ಸಂಸ್ಕೃತಿ" ಎಂಬ ವಿಷಯವನ್ನೆತ್ತಿ ಕೊಂಡು ೩॥ ಘಂಟೆಗಳ ಕಾಲ ಅವಿಚ್ಛಿನ್ನವಾಗಿ ವ್ಯಾಖ್ಯಾನವ ನ್ನಿತ್ತರು. ಪಂಡಿತರ ವ್ಯಾಖ್ಯಾನಸರಣಿ ವಿಷಯ ಪ್ರತಿಪಾದನೆ ಗಳಿಗಾಗಿ ಜನರು ಆಶ್ಚರ್ಯ ಆನಂದದಿಂದೊಡಗೂಡಿ ಮೇಲೆ ಮೇಲೆ ಕರತಾಡಗಳನ್ನು ಮಾಡುತ್ತ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸುತ್ತಿದ್ದರು.

ವೇ॥ ಪಿ.ಆರ್ಯ್. ಹಿರೇಮಠ ಹೈಕೋರ್ಟು ವಕೀಲ ಹುಬ್ಬಳ್ಳಿ ಇವರು ವೀರಶೈವ ಪ್ರಸಿದ್ಧ ಧರ್ಮಸಾಹಿತ್ಯಗಳಾದ ಪಂಚಾಕ್ಷರ ಶಾಸ್ತ್ರಿಗಳ ಸಿಧನದ ಬಗ್ಗೆ ವಿಷಾದಕರವಾದ ರೀತಿಯನ್ನು ಸಭೆಯು ಮುಂದಿಟ್ಟರು. "ಖಂದಗೋಳದ ಈ ವೀರಶೈವ ಮಹಾಜನ ಸಭೆಯು ಸರ್ವಾನುಮತದಿಂದ ಶ್ರೀ ವೇ॥ ಪಂ॥ ಪಂಚಾಕ್ಷರ ಶಾಸ್ತ್ರಿಗಳವರು ಶಿರೋಳ ಹಿರೇಮಠ ಇವರು ಕೈಲಾಸವಾಸಿಗಳಾದ ಬಗ್ಗೆ ತಮ್ಮ ವಿಷಾದವನ್ನು ತೂಡಿಸಿ ಅವರ ಕುಟುಂಬಕ್ಕೆ ತನ್ನ ಹಾರ್ದಿಕ ಸಹಾನುಭೂತಿಯನ್ನು ಪ್ರಕಟಿಸುತ್ತದೆ" ಈ ಕರಾವು ಮಂಡಿಸುವ ಕಾಲಕ್ಕೆ ಸಭಿಕರೆಲ್ಲರೂ ಎದ್ದುನಿಂತು ತಮ್ಮ ಆನು ತಾಪವನ್ನು ಪ್ರಕಟಿಸಿದರು.

ಆಮೇಲೆ ಮುದೇನೂರು ವರಕವಿ ವಾಗೀಶಶಾಸ್ತ್ರಿಯಾರ್ಯರು "ವೀರಶೈವ ಸಂಘಟನೆ" ಎಂಬ ವಿಷಯದಮೇಲೆ ಅಮೋಘ ವಾದ ಭಾಷಣವನ್ನಿತ್ತರು. ವೀರಶೈವಮಹಾಸಭೆಯ ೧೩ನೇ ಅಧಿವೇಶನದಲ್ಲಿ ನಡೆದ ಆನೇಕ ಜರ್ಜಾಸ್ಪದ ವಿಷಯಗಳನ್ನು ಸಭೆಯ ಮುಂದಿಟ್ಟು ಮಹಾಸಭೆಯ ಸುರಿಯೇನೆಂಬುದನ್ನು ಆಚ್ಛುಕಟ್ಟಾಗಿ ಖಂಡಿಸಿದರು.

ಇದಾದಬಳಿಕ ವೇ॥ ಹಿರೇಮಠ ವಕೀಲರು ಅಧ್ಯಕ್ಷರ ಆಭಾರ ವನ್ನು ಮನ್ನಿಸಿ ಸರ್ವರಿಗೂ ಪುಷ್ಪ ತಾಂಬೂಲಾದಿಗಳು ವಿನೋ ದಿಸಲ್ಪಟ್ಟನಂತರ ಜಗದ್ಗುರುಗಳ ಜಯಜಯಕಾರದೊಡನೆ ಸಭಾವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ
ಶಿವಯೋಗಯ್ಯ-ಕಂಬಾರಯ್ಯ-ಹಿರೇಮಠ.

ದುಃಖವಾರ್ತೆ

ಧಾರವಾಡ ಡಿಸ್ಟ್ರಿಕ್ಟ್ ಕಲಘಟಗಿ ತಾಲೂಕ ಬೆಲವಂತರ ಹಿರೇಮಠ ವೇ॥ ಸಿದ್ಧರಾಮೇಶ್ವರ ಸ್ವಾಮಿಗಳವರ ದರ್ಮಪತ್ನಿ ಯವರಾದ ಸಹಧರ್ಮಿಣಿಯರೂ ಸೌ॥ ಮುದಿಗೆವ್ವನವರು ತಾ॥ ೭-೧೨-೩೯ ಸೋಮವಾರ ಪ್ರಾತಃಕಾಲ ೪ ಘಂಟೆಗೆ ಲಿಂಗೈಕ್ಯರಾದರು. ಈ ಸಾಧ್ವೀ ಶಿರೋಮಣಿಯ ಅಜಾರಸಿಸ್ಥಳೂ ಪತಿಭಕ್ತಿ ಹಾಗೂ ವಿನಯಶಾಲಿನಿಯೂ ಆಗಿದ್ದಳು. ಇವರಿಗೆ ಅತ್ಯಸಮಯದಲ್ಲಿ ೩೬ ವರ್ಷಗಳಾಗಿದ್ದುವು. ಇವರಿಗೆ ನಾಲ್ಕುಮಂದಿ ಸನ್ನ ಸನ್ನ ಮಕ್ಕಳಿದ್ದಾರೆ. ಇವರ ಆಕಾಲಿಕ ವಿಯೋಗವು ಸರ್ವರಿಗೂ ಅಪಾರ ದುಃಖವನ್ನುಂಟುಮಾಡಿದೆ. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ ಶ್ರೀಮತಿ ಯವರ ಅಂತ್ಯನಿಧಿ ಸಮಯದಲ್ಲಿ ಪ್ರಭುಪೋಷಣಾರ್ಥವಾಗಿ ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು.

ಓರ್ವ ದುಃಖಿಭಾಗಿ.

"ಧರ್ಮರಾಜ್ಯ"

ಮುದೇನೂರು "ವೀರಶೈವ ಧರ್ಮಾಲಯ," ದಿಂದ ನೇಲ್ಕಂಡ ಮಾಸಪತ್ರಿಕೆಯು ಇದೀ ಕಾರ್ತಿಕ (ಬಹು ಧಾನ್ಯ) ಶು॥ 1 ರಿಂದ ಹೊರಬಿದ್ದಿವೆ. ವರಕವಿ ಶ್ರೀ ವಾಗೀಶಶಾಸ್ತ್ರಿವಾಚಾರ್ಯರ ನೇತೃತ್ವದಲ್ಲಿ ಕರ್ಣಾಟಕ ಪ್ರಾಚೀನಸಂಸ್ಕೃತಿ, ಇತಿಹಾಸ, ನೀತಿ, ರೀತಿ, ಧರ್ಮ, ಕಾವ್ಯ, ನಾಟಕ, ಕಥೆ ಮೊದಲಾದ ವಿಷಯಗಳನ್ನೊಳಗೊಂಡ, ಪಂಡಿತೋತ್ತಮರ ಹಾಗೂ ಸಮಾಜ ಮುಂದಾಳುಗಳ ಲೇಖನಗಳೂ, ಗ್ರಂಥಗಳೂ, ಪ್ರಾಚೀನ ಗ್ರಂಥಗಳೂ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವವು.

ವಾರ್ಷಿಕ ಚಂದಾ · 1-4-0.
ಪೋಷಕರಿಗೆ—(ಒಮ್ಮೆಮಾತ್ರ) 10-0-0.
ಸಹಾಯಕರಿಗೆ—(,,) 5-0-0.

ಓದಿ ಒಗೆಮಬಿಡುವ ಪತ್ರಿಕೆಯಲ್ಲ. ಕನ್ನಡ ಸಾಹಿ ತ್ಯಾಭಿಮಾನಿಗಳು ಪ್ರೋತ್ಸಾಹ ಸಹಾಯಗಳನ್ನೆಸಗುವು ದಾಗಿ ಕೋರುತ್ತೇವೆ.

ಸಂಪಾದಕ. **M V. Mathad.**
ಮುದೇನೂರು,
ಪೋ॥ ರಾಣೆಬೆನ್ನೂರು, ಜಿ॥ ಧಾರವಾಡ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ, ಮೈಸೂರು.

ಮೇಲ್ಕಂಡ ಸಂಘದ 1938–39 ನೇ ಸಾಲಿಗೆ ವೀರ ಶೈವ ವಿದ್ಯಾರ್ಥಿಗಳಿಗೆ ಕೊಡಬೇಕಾಗಿದ್ದ ವೇತನಗಳನ್ನು ಕಾರಣಾಂತರದಿಂದ ಇಮವರಿವಿಗೂ ನಿಲ್ಲಿಸಲೇಕಾಗಿ ಬಂದಿತು. ಈ ವಿಚಾರದಲ್ಲಿ ಸಂಭವಿಸಿದ್ದ ತೊಡಕುಗಳು ಈಗ ಬಿಡುಗಡೆಯಾಗಿ ಈ ಸಂಬಂಧದ ತೊಂದರೆಗಳು ನಿವಾರಣೆಯಾಗಿರುತ್ತವೆ. ಬಡವಿದ್ಯಾರ್ಥಿಗಳಿಗುಂಟಾದ ತೊಂದರೆಗಳಿಗಾಗಿ ಕವಿಟಿಯವರು ವಿಷಾದಿಸುತ್ತಾರೆ.

ಸದರಿ ಸಾಲಿನ ವೇತನಗಳನ್ನು ಶೀಘ್ರದಲ್ಲಿಯೇ ತೀರ್ಮಾನಿಸುವ ಪ್ರಯತ್ನವನ್ನು ಮಾಡಿ, ವೇತನ ಮುಂಬರಾವ ವಿದ್ಯಾರ್ಥಿಗಳಿಗೆ ತಡವಿಲ್ಲದೆ ಹಣ ಪಾವತಿ ಮಾಡಲಾಗುತ್ತದೆಂದು ಈ ಮೂಲಕ ಸಮಾಜ ಬಾಂಧವರಿಗೆ ತಿಳಿಸಿರುತ್ತೆ.

ತಾ॥ 26-12-38 ಸರಾಫ್ ಬಿ. ಬಸಪ್ಪ,
ಬೆಂಗಳೂರು ಟ್ರಜರರ್ ಮತ್ತು ಆಕ್ಟಿಂಗ್ ಸೆಕ್ರೆಟರಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ಮಹೇಶ್ವರಸ್ವಾಮಿಯ ಆರಾಧನೆ

ಬಳ್ಳಾರಿಜಿಲ್ಲಾ ಹರುಪನಹಳ್ಳಿತಾಲೂಕು ನಿಲುವಂಜಿ ಗ್ರಾಮದ ಶ್ರೀ ಮಹೇಶ್ವರಸ್ವಾಮಿ ಆರಾಧನೆಯು ಪದ್ಧತಿ ಪ್ರಕಾರ ಈ ವರ್ಷ 19-12-38 ರಿಂದ 21-12-38 ರವರಿಗೆ ಪೃಥವಿಂದಿಂದ ನಡೆಯಿತು. ಈ ಆರಾಧನೆಯು ಮಹೋತ್ಸವಕ್ಕೆ ಗ್ರಾಮದ ಮಕಸ್ಥರು, ಶೆಟ್ರು, ಬಣ್ಣಾರರು, ಯಜಮಾನರು, ಗೌಡ್ರು ಇನ್ನೂ ಸಮಸ್ತ ಮಹಾದೈವದವರ ಕೋರಿಕೆಪ್ರಕಾರ ಶ್ರೀಮಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರರ ಸವಾರಿಯು, ನವ್ಯಗ್ರಾಮಕ್ಕೆ ಆಗಮಿಸಿತು. ಭಕ್ತಮಂಡಲಿಯು ಗ್ರಾಮವನ್ನೆಲ್ಲಾ ತಳರುತೋರಣಾದಿಗಳಿಂದ ಅಲಂಕರಿಸಿ ಶ್ರೀ ಜಗದ್ಗುರುಗಳನ್ನು ಸಕಲ ಬಿರುದಾವಳಿಗಳೊಡನೆ ಅದ್ದೂ ಪಲ್ಲಕ್ಕಿಮಹೋತ್ಸವದೊಡನೆ ಬರಮಾಡಿಕೊಂಡರು. ಉತ್ಸವವು ಸದರಿ ಗದ್ದುಗೆಯನ್ನು ತಲ್ಪಿದೊಡನೆ ತೋಪುಗಳು ಹಾರಿಪಲ್ಲಟ್ಟವು. ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಂಡಿತು. ಸಾಧಾರಣವಾಗಿ 5-6 ಸಾವಿರ ಜನರು ಶ್ರೀ ಮಹೇಶ್ವರನ ಪ್ರಸಾದದಿಂದ ತೃಪ್ತರಾದರು. ಅನಂತರ ಶ್ರೀಗಳೊಂದಿಗೆ ದಯಮಾಡಿಸಿದ ಆಸಗೋಡ ಶ್ರೀ ಪಟ್ಟದಸ್ವಾಮಿಗಳವರು ಮತ್ತು ಮುದೇನೂರು ಶ್ರೀ ಸ್ವಾಮಿಗಳವರು ಶ್ರೀ ಮಹೇಶ್ವರಸ್ವಾಮಿಯ ಆರಾಧನೆಯ ಮಹಿಮೆಯನ್ನೂ ವೀರಶೈವ ಮತಾಚಾರನಿಯಮಗಳನ್ನೂ ತಮ್ಮ ಅಮೃತವಾಣಿಯಿಂದ ಬೋಧಿಸಿ ಭಕ್ತರ ಮನ ಸ್ಸನ್ನು ಆನಂದಗೊಳಿಸಿದರು. ಆ ಕಾಲದಲ್ಲಿ ಶ್ರೀಮಂತರಾದ ವೆಂಜಿಹಳ್ಳಿ ಗ್ರಾಮದಲ್ಲಿರುವ ತಲವಾಗಿಲುಮಠದ ವೇದಮೂರ್ತಿ ಕೊಟ್ರಬಸಪ್ಪಯ್ಯನವರ ಮಗ ದೊಡ್ಡ ಕೊಟ್ರಪ್ಪಯ್ಯನವರು ಹಿಂದೆ ತಮ್ಮ ತಂದೆಯವರು ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಎರಡುಸಾವಿರ ತೊಲಿ ಬೆಳ್ಳಿಯಿಂದ ಸುಂದರವಾದ ಮಕರತೋರಣವನ್ನು ಮಾಡಿಸಿಕೊಡುವುದಾಗಿ ವಾಗ್ದಾನಮಾಡಿದ್ದರೆಂದು ಶ್ರೀ ಗುರುಗಳ ಮುಖದಿಂದ ಕೇಳಿ ಸದರಿಯವರು ತಮ್ಮ ಪಿತೃಗಳ ವಾಗ್ದಾನದಂತೆ ಮಕರ ತೋರಣವನ್ನು ಮಾಡಿಸಿಕೊಡುವೆನೆಂದು ಜಗದ್ಗುರುಗಳಿಗೆ ಸಾಷ್ಟಾಂಗಮಾಡಿ ಮಹಾಸ್ವಾಮಿಗಳ ಪಾತೆಗೆ ಸಹಿಮಾಡಿ ಪ್ರಮಾದಿಸಂವತ್ಸರ ಶ್ರಾವಣಮಾಸಕ್ಕೆ ಆರ್ಪಿಸುವೆನೆಂದು ನಮಸ್ಕಾರಮಾಡಿದರು. ಭಕ್ತಿಪರಾಯಣರಾದ ಶ್ರೀಮಂತ ದೊಡ್ಡ ಕೊಟ್ರಪ್ಪಯ್ಯನವರ ಭಕ್ತಿಗೆ ಸರ್ವ ಭಕ್ತಮಂಡಳಿಯವರು ಆನಂದವನ್ನು ಹೊಂದಿ ಜಯಜಯಕಾರದೊಡನೆ ಕರತಾಡನವನ್ನು ಮಾಡಿದರು. ಇಂಥ ಗುರುಭಕ್ತರಿಗೆ ಶ್ರೀಜಗದ್ಗುರು ರೇಣುಕಾಚಾರ್ಯರು ಯಾವಾಗಲೂ ಆಯುರಾರೋಗ್ಯವಿಶ್ವರ್ಯಗಳನ್ನು ಅಶೀರ್ವದಿಸಲೆಂದು ಹಾರೈಸುತ್ತೇನೆ.

ಬಣಕಾರ ಶಂಭುಲಿಂಗಪ್ಪ,
ವಿಲೇಜ್‌ಕಮಿಟಿ, ಪ್ರೆಸಿಡೆಂಟ್,
ನಿಲುವಂಜಿ.

ಅ. ಭಾ. ವೀರಶೈವ ತರುಣ ಪರಿಷತ್ತು, ಹುಬ್ಬಳ್ಳಿ.

೩ನೆಯ ಅಧಿವೇಶನ.

ಸ್ವಾಗತಸಂಘಾಧ್ಯಕ್ಷರಾದ

ಶ್ರೀ ಪಟ್ಟದಸ್ವಾಮಿ ಹಿರೇಮಠ, ವಕೀಲ ಇವರ ಭಾಷಣ.

ವೀರಶೈವ ತರುಣ ಬಂಧುಗಳೇ, ಮಾನನೀಯ ಸಭಾಸದರೇ—

ಧರಣಿಮಂಡಲದ ಕರುನಾಡೆಂದು ಪ್ರಸಿದ್ಧಿ ಹೊಂದಿದ ಫಲವತ್ತಾದ ಕರ್ನಾಟಕಕ್ಕೆ ಕೇಂದ್ರಸ್ಥಾನದಂತೊಪ್ಪುವ ಹುಬ್ಬಳ್ಳಿಯಲ್ಲಿ ತಾವೆಲ್ಲರು ಒಳ್ಳೆ ಉತ್ಸಾಹದಿಂದ ಬಹು ದೂರದಿಂದ ಬಹುದು ಪಾಪಕ್ಷತ್ರ ಕೋಪೆಯನ್ನು ಬೆಳೆಸಿದ್ದಕ್ಕಾಗಿ ನನಗೆ ತುಂಬಾ ಆನಂದ ವೆನಿಸುತ್ತದೆ. ತಾವು ಧರತಖಂಡದ ಬೇರೆಬೇರೆ ಭಾಗಗಳಲ್ಲಿ ವಾಸ ಮಾಡಿ ಬೇರೆಬೇರೆ ವಿಚಾರ ಮತ್ತು ವಸ್ತು ಪರಿಜ್ಞಾನದಿಂದ ಕೂಡಿದ ನಿಧಿಯಾಗಿರುತ್ತೀರಿ. ಸನಾತನದ ಸವಶಕ್ತಿಯ ಸತ್ಪಕ್ತಿ ದೋಪಾದಿಯಲ್ಲಿ ನೀವು ಇರುತ್ತೀರಿ. ವೀರಶೈವಸಮಾಜದಮೇಲೆ ನನ್ನ ಶ್ರದ್ಧೆಯು ತುಂಬಾ ಇರುವುದರಿಂದ ನೀವೆಲ್ಲ ಸದರ್ಮಕ್ಕೆ ಏನೇ ಹೋರಾಡಿ ನಮ್ಮ ಧರ್ಮವನ್ನು ಪರಿತ್ಯಜಿಸದೆ, ಕಾಯ್ದುಕೊಳ್ಳಲು ಸಮರ್ಥರಿದ್ದೀರಿಂದ ಪರಸ್ಪರವಿರೋಧ ಬಿಸಿಯ ಪ ಪತ್ರ ವರ್ತನ ದಿಂದಲಭಿಸುವ ನೂತನ ಬಲವಿರ ನನ್ನ ವೀರಶೈವಸಮಾಜ ಏಳಿಗೆಯನ್ನು ಸಾಧಿಸಲಿಕ್ಕೆ ನಾವೆಲ್ಲರೂ ಈ ಧರ್ಮ ಸ್ಥಾಪನಾಚಾರ್ಯ ದಲ್ಲಿ ನೆರೆದಿದ್ದಾಗಿದೆ.

ಪರಿವರ್ತನ ಪೂರ್ವಜರಿತ್ರೆ

"ಸಂಘೇಶಕ್ತಿಃ ಕಲಾಯಿಸೆ" ಎಂಬಂತೆ ನಮ್ಮ ಸಾಮಾಜಿಕ ಅಥವಾ ರಾಷ್ಟ್ರೀಯಸಮಸ್ಯೆಗಳಾಗಬೇಕಾದರೆ ನಮ್ಮಲ್ಲಿ ಸಂಘಶಕ್ತಿಯು ಬೇಕು. ಇಂಥ ಸಂಘಶಕ್ತಿಯ ಬೆಳೆಯಬೇಕಾದರೆ ನಾವೆಲ್ಲರೂ ಒಂದುಕಡೆಗೆ ಕೂಡಿ ನನ್ನ ಸಮಾಜದ ಹಿತಾಹಿತಗಳನ್ನು ಚರ್ಚಿಸಿ ವೀರಶೈವ ಕ್ಷಮಾನ್ವಿತ ಶಕ್ತಿಯ ಮಹಾಪ್ರವಾಹವನ್ನು ಒಮ್ಮುಮುಖವಾಗಿ ಪರಿಮಂವಾಡಿ ಸೂಡುವುದೇ ವೀರಶೈವ ತರುಣರ ಪರಿಷತ್ತಿನ ಮುಖ್ಯ ಉದ್ದೇಶವಾಗಿದೆ. ತರುಣರ ಶಕ್ತಿಪ್ರವಾಹವನ್ನು ಪ್ರತಿಭಟಿಸಿ ಅವನ್ನು ಕಿಂಗಿಸುವುದು ಯಾರ ಕೈಯಿಂದಲೂ ಸಾಧ್ಯವಿಲ್ಲ "It is better to have a giant's strength but not to use it like a giant" "ರಾಕ್ಷಸನಸಪ್ಪ ಶಕ್ತಿಯನ್ನು ಗಳಿಸುವುದು ಒಳ್ಳೆದು ಆದರೆ ಅದನ್ನು ರಾಕ್ಷಸನಂತೆ ಉಪಯೋಗಿಸಬಾರದು" ಎಂಬೀ ನಾಣ್ನುಡಿಯಂತೆ ವೀರಶೈವ ತರುಣ ಶಕ್ತಿಯ ಸಮಸಮಪೋಷಣವಾಗಬೇಕೆಂದು ಮತ್ತು ಸನ್ಮಾರ್ಗದಿಂದ ಅಂಥ ಶಕ್ತಿಯ ಮಹಾಪ್ರವಾಹವು ಹರಿಯಬೇಕೆಂಬ ಸದಿಚ್ಛೆಯಿಂದಲೇನೇ ವೀರಶೈವ ತರುಣ ಮುಂದಾಳುಗಳು ದೀರ್ಘಾಲೋಚನೆ ಮಾಡಿ ವೀರಶೈವಮಹಾಸಭೆಯ ನೇತೃತ್ವದಲ್ಲಿ ಅಖಿಲಭಾರತ ವೀರಶೈವತರುಣ ಸಮ್ಮೇಲನವನ್ನು ಕರೆಯಬೇಕೆಂದು ನಿರ್ಧರಿಸಿ ಮೊದಲು ಧಾರವಾಡದಲ್ಲಿ ೧೯೩೩ನೇ ಇಸ್ವಿಯಲ್ಲಿ ಕರೆದರು. ಮೊದಲನೇ ಸಮ್ಮೇಲನಕ್ಕೆ ಶ್ರೀಯುತ ಎಸ್. ಎಸ್. ಸರದಾರ ಬಾರ್-ಅಟ್-ಲಾ ಇವರು ಅಧ್ಯಕ್ಷರಾಗಿದ್ದರು. ಆಮೇಲೆ ಎರಡನೇ ಸಮ್ಮೇಲನವು ೧೯೩೬ನೇ ಇಸವಿಯಲ್ಲಿ ವೀರಶೈವಮಹಾಸಭೆಯು ಜರುಗಿನ ಕಾಲಕ್ಕೇನೇ ರಾಯಚೂರಿನಲ್ಲಿ ಕೂಡಿಸಲ್ಪಟ್ಟಿತು. ಆವಾಗ್ಲೆ ಬಳ್ಳಾರಿಯಲ್ಲಿಯ ವೀರಶೈವ ಪ್ರಸಿದ್ಧ ಮುಂದಾಳುಗಳೂ, ಶ್ರೀಮಂತರೂ ಆದ ಶ್ರೀಯುತ ವೈ. ಮಹಾಲಕ್ಷೇಶ್ವರಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಎರಡೂ ಸಮ್ಮೇಳನಗಳು ಒಳ್ಳೇ ಯಶಸ್ವಿಯಾಗಿ ತರುಗಿದವು. ಆವಾಗ್ಲೂ ವೀರಶೈವ ತರುಣ ವೃಂದದಮೇಲೆ ಹಿಂದಿನ ಎರಡು ಸಮ್ಮೇಲನಗಳಿಂದ ಆಗಬೇಕಾಗಿದ್ದಷ್ಟು ಪರಿಣಾಮವು ಆಗಿಲ್ಲವೆಂದು ಸಹಜವಾಗಿ ಹೇಳಬಹುದು.

ವೀರಶೈವ ತರುಣರ ಧ್ಯೇಯ

ವೀರಶೈವ ತರುಣರು ದೇಶ, ಕಾಲ, ವಸ್ತು ಪರಿಸ್ಥಿತಿಗನುಗುಣವಾಗಿ ಅಲ್ಲಲ್ಲಾ ಕಾಪಾಡಿಯಲ್ಲಿಯೂಕೂಡ ಹೆಜ್ಜು ಮುಂದುವರಿದಿದ್ದಾರೆ. ಶಿಕ್ಷಣ ಹೊಂದಲಿಕ್ಕೆ ನಮ್ಮ ಸಮಾಜದಲ್ಲಿ ಅಲ್ಲಲ್ಲಿ ಸಹಾಯ ಸಾಂಕಗಳನ್ನು ವೀರಶೈವಧರ್ಮಾಭಿಮಾನಿಗಳು ಧಿರವತೆ ಮಾಡಿ ಕೊಟ್ಟಿದ್ದಾರೆ. ಹೀಗೆ ಅತುಲ ಧರ್ಮಾಭಿಮಾನದಿಂದ ಮತ್ತು ತ್ಯಾಗಬುದ್ಧಿಯಿಂದ ತಮ್ಮ ಸಂಪತ್ತಿಯನ್ನೇ ಧರ್ಮೋದ್ಧಾರಕ್ಕಾಗಿ ಧಾರಾಳವಾಗಿ ನೀಡಿದವರಲ್ಲಿ ೫॥ ಶ್ರೀಮಂತ ಶಿರಸಂಗಿ ಲಿಂಗರಾಜ ದೇಸಾಯಿಯವರು ಅಗ್ರಗಣ್ಯರಾಗಿದ್ದಾರೆ. ಶಿಕ್ಷಣ ಹೊಂದಿದಮೇಲೆ ಮುಂದೆ ಜೀವಿತದ ಮಾರ್ಗದರ್ಶಕರಾಗುವಂಥ ಮತ್ತು ಸಹಾಯ ಕಾರಿಯೋವ ಸಂಸ್ಥೆಗಳಾಗಲಿ, ಶಾಲೆತ್ತುಗಳಾಗಲಿ ತೀರಾ ಕಡಿಮೆ ಆಗಿ. ಸುಶಿಕ್ಷಿತ ತರುಣರ ಹಿತಾಹಿತಗಳ ವಿವೇಚನೆ ಮಾಡಿ ಸಮಾಜದ ಸಾಂಪತ್ತಿಕ ಸ್ಥಿತಿಯೂ ಮತ್ತು ಧಾರ್ಮಿಕ ಸ್ಥಿತಿಯೂ ಅಭಾದಿತವಾಗಿ ಬೆಳೆಯಲು ಪ್ರಯತ್ನ ನೂಡುವುದೇ ಸಮ್ಮೇಲನದಲ್ಲಿ ಕೂಡಿದ ತರುಣರ ಮುಖ್ಯ ಕರ್ತವ್ಯವಾಗಿದೆ. ಕಾಲ, ಪರಿಸ್ಥಿತಿಗೆ ತಕ್ಕಂತೆ ಪರಿಷತ್ತಿನಲ್ಲಿ ಯಾವ ನಿರ್ಣಯಗಳನ್ನು ಪೂಡಿ ಕಾರ್ಯರೂಪದಲ್ಲಿ ತರಬೇಕೆಂಬುದನ್ನು ಆಲೋಚನೆ ಮಾಡುವದು ನಮ್ಮೆಲ್ಲರ ಧ್ಯೇಯವಾಗಿದೆ. ನವ್ಯ ಪರಿಷತ್ತು ಕೇವಲ ಸಾಗ್ಮಿಗಳ ಮಳ್ಳಯುದ್ಧವಾಗಿ ಪರಿಣಮಿಸದೆ ಸಮಾಜಕ್ಕೆ ಹಿತಕರವಾವ ಕಾರ್ಯಗಳ ಬೀಜಾರೋಪಣದ ಸ್ಥಾನವೆಂಬುದಾಗಿ ಮಾಡಿ ತೋರಿಸುವುದು ನಮ್ಮ ಕೈಯಲ್ಲಿದೆ.

ನಮ್ಮೀ ಸಮಾಜವು ಬ್ರಿಟಿಷ್ ಕರ್ನಾಟಕ, ಮಹಾರಾಷ್ಟ್ರ, ಕೊಡಗು, ಆಂಧ್ರ, ಮೈಸೂರು, ನೈಜಾಮ್ ಸ್ಟೇಟ್, ಮದ್ರಾಸ್ ಇಲಾಖಾ ಮುಂತಾದ ಭಾಗಗಳಲ್ಲಿ ದಟ್ಟಾಗಿ ಹಬ್ಬಿದೆ. ನಮ್ಮ ಪರಿಶ್ರವಾದ ಸನಾತನಮತವು ವೇದಾಗಮೋಪನಿಷತ್ ಪ್ರತಿಪಾದಿತವಾಗಿದ್ದು ಒಳ್ಳೇ ಉಚ್ಚ ತತ್ವಗಳಿಂದ ಕೂಡಿದ್ದಾಗಿದೆ. ವೀರಶೈವಮತದ ತತ್ವಗಳು ಕೇವಲ ಪರಸ್ಪರರಲ್ಲಿ ಸಹಾನುಭೂತಿ ಬಂಧುತ್ವವನ್ನು ಬೆಳೆಸಿ ರಾಷ್ಟ್ರೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿರಸಂಪತ್ತಿಯನ್ನು ನೆಲೆಗೊಳಿಸಲು ಒಳ್ಳೇ ಸಹಾಯ ಕಾರಿಯಾಗಿವೆ. ಭೂತಿಕ ಮತ್ತು ಪಾರಮಾರ್ಥಿಕ ಸುಖಸಂಪತ್ತಿಗೆ ಧರ್ಮವೇ ಮೂಲಕಾರಣವಾಗಿರುವುದರಿಂದ ನಮ್ಮ ಧರ್ಮದ ಅಧಿಷ್ಠಾನವೂ, ಕಳಕಳಿಯೂ ನಮಗೆ ಇರಬೇಕು. ಒಂದಾ ನೊಂದು ಕಾಲದಲ್ಲಿ ಅಧ್ಯಾತ್ಮಿಕೋನ್ನತಿಯನ್ನು ಹೊಂದಿ ಜಗತ್ತಿಗೇನೇ ಮಾರ್ಗದರ್ಶಕವಾದದ್ದು ನಮ್ಮೀ ಆರ್ಯಾವರ್ತವಾಗಿದೆ. "ಧರ್ಮಾಣಿ ಹತೋಯಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂಬಂತೆ ಮತ್ತು "Bereft of religion men possessing enormous power over the forces of nature are like children to whom powder or explosive gasses has been given as a plaything." ಎಂದು ಶ್ರೇಷ್ಠ ತತ್ವಜ್ಞಾನಿಯಾವ ಟೋಲ್‌ಸ್ಟೋಯ್ ಇವನು ಹೇಳಿದಂತೆ ನಮ್ಮ ಧರ್ಮವನ್ನು ನಾವು ಹಕ ಮಾಡಿದ್ದಾವರೆ ನಮ್ಮನ್ನ ನಾವೇ ಹತಮಾಡಿಕೊಂಡಂತಾಗುತ್ತದೆ. ಆದ್ದರಿಂದ ನಮ್ಮ ಧರ್ಮವನ್ನು ಸಂರಕ್ಷಣೆಮಾಡುತ್ತಾ ನಮ್ಮ ಸಾಮಾಜಿಕ ರಾಷ್ಟ್ರೀಯ, ಶೈಕ್ಷಣಿಕ ಪ್ರಗತಿಯನ್ನು ಮಾಡಿಕೊಳ್ಳುವುದೇ ನಮ್ಮ ಕರ್ತವ್ಯವಾಗಿದೆ.

ವೀರಶೈವಪ್ರಜಾಪತ್ಯ ಕೇವಲ ಆಪ್ಯಾಯಕ ಸೃಷ್ಟಿಸಂಭೂತ ನೆಂದು ಶಾಸ್ತ್ರಾಗಮಗಳ ಆಧಾರವಿಮರ್ಶನದಿಂದ ನೀರ ವೈವರ ಪೌಕಿಕ ಅಚಾರವಿಚಾರಗಳಲ್ಲಿಯೂಕೂಡ ಜಾಪೆ ಬರ ಜೀರದೆಂದು ವೀರಶೈವಮತಾವಲಂಬಿಯಾದ ಪ್ರತಿಯೊಬ್ಬ ಕಾರ್ಯ ಗಾರನು ಲಿಂಗಧಾರಣ ಮಾಡಿಕೊಂಡಿರಬೇಕೆಂದು ಧರ್ಮಶಾಸನ ನಿವೆ. ಇದೇ ವೀರಶೈವ ಧರ್ಮಸಾಮ್ಯಾಹ್ಯದ ಕುರುಹು. ಲಿಂಗ ವಿಲ್ಲದವನನ್ನು ಭುವಿಯೆಂದು ಕಾಣಬೇಕೆಂದು ಶಾಸ್ತ್ರವಿನೆ ಇವರ ಪುರ್ಮನೆಗೆನೆಂದರೆ ಒಂದು ಧರ್ಮದ ಅಧಃಪಾ ರಾಷ್ಟ್ರದ ವಿಶಿಸ್ಟ ಚಿಹ್ನದಿಂದ ಕೂಡಿದ ನಸ್ತುವನ್ನು ಪ್ರತಿಯೊಬ್ಬರೂ ಧರಿಸೋಣ ದೆಂದು ಪರಸ್ಪರರನ್ನು ನೋಡಿದಾಕ್ಷಣವೇ ಸ್ವಾಭಾವಿಕವಾಗಿ ಬಂಧು ಪ್ರೇಮದ ಮೊಳಕೆಯು ಜುಪ್ಪ ವಿಸುತ್ತದೆಯಲ್ಲದೆ ಪರಸ್ಪರರಲ್ಲಿ ಸಹಜವಾಗಿ ಸಖ್ಯವನ್ನು ಬೆಳೆಸಲು ಅನುಕೂಲವಾಗುವುದು. ವೀರಶೈವರಾದ ನಾವು ಯಾವಾಗಲೂ ಲಿಂಗಧಾರಿಗಳಾಗಿರಬೇಕು.

ನಮ್ಮ ಧರ್ಮದ ಉದಾತ್ತ ತತ್ವಗಳು ಪರಧರ್ಮದವರಿಗೂ ಮತ್ತು ಪರದೇಶದವರಿಗೂ ಕೂಡ ತಿಳಿದು ನಮ್ಮ ಧರ್ಮದ ಶ್ರೇಷ್ಠತೆಯು ನೆಲೆಗೊಳ್ಳಬೇಕೆಂದು ನಮ್ಮ ತರುಣ ಬಂಧುಗಳಲ್ಲಿ ಪ್ರಯತ್ನಶೀಲರಾದ ಅನೇಕ ಸನಾತನ ಧರ್ಮಾಭಿಮಾನಿಗಳು ಇರುತ್ತಾರೆ. ಹೀಗೆ ವೀರಶೈವ ಸನಾತನತತ್ವಗಳನ್ನು ಪ್ರಚಾರಮಾಡುವವರಲ್ಲದೆ ವಿವೇಕಾನಂದ ರಾಮತೀರ್ಥರಂತೆ ಪರದೇಶಗಳಲ್ಲಿ ವೀರಶೈವ ತತ್ವಗಳ ಬೆಳಕು ಬೀಳುವಂತೆ ಮಾಡುವವರು ಅವಶ್ಯಕವಾಗಿ ಬೇಕಾಗಿದ್ದಾರೆ. ಅಂಥ ವಿಭೂತಿಗಳು ನಮಗೆ ತರುಣರಲ್ಲಿ ಅವಶ್ಯವಾಗಿ ಕೂಡಿದ ಧರ್ಮಾಭಿಮಾನಗಳಾದ ಈ ತರುಣ ವೃಂದದಿಂದಲೇನೇ ಒಂದಿಲ್ಲೊಂದು ದಿನ ಪ್ರಕಾಶಿಸುವನೆಂದು ನನ್ನ ದೃಢತರ ನಂಬಿಕೆ ಇದೆ.

ಸಮಾಜದಲ್ಲಿ ಇಬ್ಭಣ

ವೀರಶೈವಸಮಾಜದಲ್ಲಿ ಇತ್ತಿತ್ತಲಾಗಿ ಅಂತಃಕಲಹವು ಹುಟ್ಟಿ ಅದು ಗುರುವಿರಕ್ತರ ಕಲಹವೆಂಬ ಬಡಬಾಗ್ನಿಯಾಗಿ ಪರಿಣಮಿಸಿತು. ಈ ಕಲಹದ ಅಂತರಂಗ ವಿಚಾರಗಳು ಏನೇ ಇದ್ದಾಗ್ಯೂ ಸಮಾಜದಲ್ಲಿ ಪರಸ್ಪರ ವ್ಯವಹಾರಗಳಿಗೆ ಧಕ್ಕೆ ತಗಲುವಂಥ ಪ್ರಸಂಗಗಳು ಉಪ್ಪನಿಸಿದವೆ. ಮೊಟ್ಟ ಮೊದಲು ಈ ಅಂತಃಕಲಹವನ್ನ ಕೆಲವು ವೀರಶೈವರೊಳಗೆ ಅವಿಧವಿಸಿದಾಗ್ಯೂ ಕ್ರಮೇಣ ಇದೀ ವೀರಶೈವ ಸಮಾಜವನ್ನೇ ಆಕ್ರಮಿಸಿಕೊಂಡು ಎರಡು ದೊಡ್ಡ ಪಂಗಡಗಳನ್ನುಂಟುಮಾಡಿದೆ. ಒಂದುಪಕ್ಷವು ಮತ್ತೊಂದುಪಕ್ಷದವರ ಹಳ್ಳು ಬಾಧ್ಯತೆಗಳಮೇಲೆ ಆಕ್ರಮಿಸಿ ಪ್ಪನ್ನು ಮತ್ತು ಅನ್ಯಾಯವಾಗಿ ಆಚರಿಸುವದನ್ನು ತಡೆಯಲು ಈ ಕಲಹವು ಉಂಟಾಯಿತೆಂದು ಸಮಾಜದಲ್ಲಿ ಕೆಲವರ ಅಭಿಪ್ರಾಯವಿದ್ದಾಗ್ಯೂ ಇಂಥ ವಿಷಾದವು ಹೆಚ್ಚಾಗಿ ಬೆಳೆಯುವಂತೆ ಪುಟಿ ಕೊಟ್ಟಿದ್ದಾದರೆ ಸಮಾಜದ ಅವನತಿಯನ್ನೇ ನಾವು ಕರೆದಂತಾಗುತ್ತದೆ. ವೀರಶೈವ ತರುಣರು ಕಲಹ ಪ್ರಸಂಗವನ್ನೇ ಸ್ವಾಮುಖ್ಯವಾಗಿಟ್ಟುಕೊಳ್ಳದೆ ಶೋಧನ ದೃಷ್ಟಿಯಿಂದ ನಿಜವಾದ ಧರ್ಮ ಶಾಸ್ತ್ರಗಳ ಕಡೆಗೆ ಗಮನಕೊಟ್ಟು ಸದಭಿಪ್ರಾಯವನ್ನು ಪಡೆಯುವದು ಅಗತ್ಯವಾಗಿದೆ. ತರುಣರ ಅತುಲ ಪರಿಶ್ರಮದಿಂದ ಮತ್ತು ಕೋಧಕ ಬುದ್ಧಿಯಿಂದ ಹೊರಹೊಮ್ಮುವ ಜ್ಞಾನಭಂಡಾರವೆ ಜಗತ್ತಿನ ಮೂಲಧನವಾಗಿದುವದು. ವೀರಶೈವರ ಎಷ್ಟೋ ಧರ್ಮ ಗ್ರಂಥಗಳು ಸೂರ್ಯನ ಬೆಳಕು ಕಾಣದೆ ಹೂಳಿದಲ್ಲಟ್ಟಿವೆ. ವೀರಶೈವರಿಗೆ ಸಂಬಂಧಪಟ್ಟ ಪ್ರಕಟವಾಗದ ಉಗಾಸಿಕತ್ತುಗಳೂ ಶಿಲಾ ಶಾಸನಗಳೂ ತಾಮ್ರ ಶಾಸನಗಳೂ ತಾಟಿಯಲಿ ಗ್ರಂಥಗಳೂ ಹೇರಳವಾಗಿವೆ. ಇಂಥ ಪ್ರಾಚೀನ ಗ್ರಂಥಗಳನ್ನ ಪೋಧಮಾಡಿ ನಿಜವಾದ ವೀರಶೈವ ಮತ ತತ್ವಗಳನ್ನು ಪ್ರಕಟಮಾಡಿದ್ದಲ್ಲಿ ವೀರಶೈವರಲ್ಲಿ ಗುರುಗಳ ಮತ್ತು ವಿರಕ್ತರ ಬಗ್ಗೆ ಯಥಾರ್ಥ ಜ್ಞಾನವೊಹಾಗುವದು. ಮತ್ತು ಇಂಥ ಕಲಹಾಗ್ನಿಗೆ ನೀರಿರ ದೆಂತಾಗಿ ಸಮಾಜವು ಶಾಂತರೀತಿಯಿಂದ ಉಳಿಯುವದೆನ್ನ ಲಿಕ್ಕೇನೂ ಅಡ್ಡಿ ಇಲ್ಲ.

ರಾಷ್ಟ್ರೀಯ ವಿಷಯ.

ವೀರಶೈವ ತರುಣಾಗೆ ಸಾಮಾಜಿಕ ಸರ್ವ ಸಂಪತ್ತಿಯು ಅವಶ್ಯವಿದ್ದಂತೆ ರಾಷ್ಟ್ರೀಯ ಸಂಪತ್ತಿಯೂ ಕೂಡ ಅವಶ್ಯವಿದೆ. ವೀರಶೈವ ಮಹಾವಲಂಬಿಗಳವ ಸಮ್ಮುಸ್ಸು ತನ್ನ ಹೊಟ್ಟೆಯ ದ್ವಿಟ್ಟುಕೊಂಡು ಜೋಳ ಮಾಡುವ ಭಾರತಮಾತೆಯ ಅಧೋಗತಿಯು ನಮ್ಮ ಅಧೋಗತಿಯಾಗಿದೆ. ಪರರಾಷ್ಟ್ರದ ಎಡರಿನಲ್ಲಿ ಹಿಂದೂ ರಾಷ್ಟ್ರವು ತನ್ನ ಸ್ವಶಾಕ್ತಗಳಿಂದ ಮೆರೆಯುವುದು ಬಲವತವಿದ್ದಾಗ್ಯೂ ಪರಸ್ಪರ ಅಸೂಯೆ ಎಂಬ ಅಗ್ನಿಚ್ಛನಿಂದ ಬೆಂದು ತನ್ನ ಮುಖದಮೇಲೆ ಳಿಕ್ಕೆ ಬಳಿದು ಕೊಂಡಂತಾಗಿದೆ. ಬಂಧುಪ್ರೇಮವೇ ನಮ್ಮ ದೇಶದ ಏಳಿಗೆಯ ತಳಪಾಯವಾಗಿದೆ.

ಈಗಿನ ರಾಷ್ಟ್ರೀಯ ತತ್ವಗಳು ಧರ್ಮಸ್ವರೂಪದಿಂದ ಅಡಕವಾಗಿದ್ದ ವೀರಶೈವ ಮತ ತತ್ವಗಳ ಪ್ರತಿಬಿಂಬಗಳಂತೆ ಅವೆ. ರಾಷ್ಟ್ರೀಯ ತತ್ವಗಳನ್ನು ಅನುಕರಣ ಮಾಡಲು ಸಮರ್ಥರಾಗುವಂತೆ ವೀರಶೈವ ಮತ ತತ್ವಗಳು ಬೋಧಿಸಿ ಆಚರಣೆಗೆ ಹಚ್ಚಲು ಸಿದ್ಧವಾಗಿರುವಷ್ಟು ವೇರೆ ಯಾವ ಮತವೂ ಸಿದ್ಧವಾಗಿರುವದಿಲ್ಲ ವೆಂದು ಖಂಡಿತವಾಗಿ ಹೇಳಬಹುದು. ವೀರಶೈವ ಪ್ರಪಂಚವೆಂಬ ನಿಲುಗನ್ನಡಿಯಲ್ಲಿ ರಾಷ್ಟ್ರೀಯ ಪ್ರಶಾಂತದ ಸಂಪತ್ತಿ ಸಾಧನೆಯ ಛಾಯೆಯು ಕಾಣುತ್ತದೆನ್ನಲಿಕ್ಕೇನೂ ಅಡ್ಡಿ ಇಲ್ಲ.

ಭಾರತಮಾತೆಯ ಹಿತಕ್ಕಾಗಿ ದಾಸ್ಯತ್ವದ ಶೃಂಖಲೆಯಿಂದ ಬಿಡುಗಡೆ ಮಾಡುವುದಕ್ಕಾಗಿ ಯಾವತ್ತೂ ಸನದಶೀರ ಉಪಾಯ ಗಳನ್ನು ಕೈಕೊಳ್ಳುವುದು ವೀರಭಕ್ತರಾದ ನಮ್ಮ ಆದ್ಯಕರ್ತವ್ಯ ವಾಗಿದೆ. ಸ್ವದೇಶದ ಅಡಳಿತ, ಸ್ವದೇಶ ವಸ್ತು ಪ್ರಚಾರ, ಸ್ವದೇ ಶಾಭಿಮಾನ ಮತ್ತು ಸ್ವಧರ್ಮ ಇವೆಲ್ಲ ನಮ್ಮ ಹೃದಯಪಟಲ ದಲ್ಲಿ ಜುಕ್ಕೇರುವ ವಿಷಯಗಳಾಗಿವೆ. ಇವುಗಳ ಗಳತೆಯೇ ನಮ್ಮ ಗುರಿ. ಪರಸ್ಪರರಲ್ಲಿ ಬಂಧು ಶ್ರೇಷ್ಠವನ್ನು ಬೆಳೆಸಿ ಐಕ್ಯತಾ ಸಾಧನೆಯನ್ನು ಸಾಧಿಸದೇ ನಮ್ಮ ಮುಖ್ಯ ಕರ್ತವ್ಯ.

ಔದ್ಯೋಗಿಕ ವಿಷಯ

ಪಾಶ್ಚಾತ್ಯ ಸುಧಾರಣೆಗೆ ಒಳಗಾಗುವ ಪೂರ್ವದಲ್ಲಿ ಭರತ ಖಂಡವು ಔದ್ಯೋಗಿಕ ಸಂಪತ್ತಿಯಲ್ಲಿ ತಿಖರತ್ವಕ್ಕೆ ಏರಿದ್ದಿತು. ಭಾರತೀಯರ ಉದ್ಯೋಗಗಳು ಬೆಳೆದು ಪ್ರತಿಯೊಬ್ಬರು ಧನಸಂಪತ್ತಿ ಶಾರೀರಿಕಸಂಪತ್ತಿಯಿಂದ ಕೂಡಿದವರಾಗಿದ್ದರು. ಭಾರತೀಯರ ಔದ್ಯೋಗಿಕ ಅವನತಿಯು ಪಾಶ್ಚಾತ್ಯರ ಯಂತ್ರಪ್ರವೇಶಕಾಲ ದಿಂದ ಸುರುವಾಗಿದೆಯೆಂದು ತಿಳಿಯುತ್ತದೆ. ಯಂತ್ರಯುಗದಲ್ಲಿ ಭಾರತೀಯರ ಉದ್ಯೋಗಗಳಿಗೆ ಉತ್ತೇಜನವು ದೊರೆಯದ್ದರಿಂದ ಬಡತನದ ಭೂತವು ಭರತಖಂಡವನ್ನು ಸೇರಿತು. ಹಳ್ಳಿಯಲ್ಲಿ ಒಕ್ಕಲಿಗರೂ, ಸ್ತ್ರೀಯರೂ ಚಿಕ್ಕಪುಟ್ಟ ವ್ಯಾಪಾರಿಗಳೂ ಕೈಕೆಲ ಉದರಪೋಷಕ ಕೈಗಾರಿಕೆ ನೂಲುವ ಉದ್ಯೋಗಗಳು ನಿಂತುಹೋದವು. ಹೀಗಾಗಿ ಯಂತ್ರಕಲಿಯುಗದಲ್ಲಿ ವೀರಶೈವ ವೇಷಾಯಗಾರರು ಮತ್ತು ವ್ಯಾಪಾರಿ ಬಂಧುಗಳೂ ಧನಸಂಪತ್ತಿ ಯನ್ನು ಸಪ್ಪ ಮಾಡಿಕೊಂಡಿದ್ದರಿಂದ ಎಷ್ಟೊತರುಣರು ನಿರ್ವಿಣ್ಣರಾಗಿ ಹತಾಶರಾಗಿ ಬಹಳೇ ಕನಕರೀತಿಯಿಂದ ಕಾಲಕಳೆಯುತ್ತಾರೆ.

ಈ ಬಡತನದ ಬಾಧೆಯನ್ನು ಕ್ರಮೇಣ ನೀಗುವುದಕ್ಕೆ ವೀರಶೈವಕರುಗಳು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಔದ್ಯೋಗಿಕ ಸಂಘಗಳನ್ನು ಸ್ಥಾಪಿಸಿ ತದ್ವಾರಾ ಪ್ರಾಚೀನ ಉದ್ಯೋಗಗಳ ಪುನರುಜ್ಜೀವನ ಮಾಡುವುದು ಅಪೇಕ್ಷಣಿಯ.

ಧಾರ್ಮಿಕ ಶಿಕ್ಷಣ ವಿಷಯ.

ಅಂಗ್ಲ ಭಾಷಾಭಿಜ್ಞರಾದ ಎಷ್ಟೋ ವೀರಶೈವ ತರುಣರು ವೀರಶೈವ ಧರ್ಮ ಗ್ರಂಥಾವಲೋಕನ ಮಾಡುವದು ತಮ್ಮ ಸುಧಾರಣೆಯ ಪ್ರಗತಿಗೆ ಕುಂದು ಎಂದು ತಿಳಿಯುವದುಂಟು. ಇದು ಕೇವಲ ಅನ್ಯಾಯವಾಡ್ದು. ಯಾಕಂದರೆ—

"The evil from which men of our time are suffering is produced by the fact that the majority live without that which alone affords a national guidance for human activity—without religion—that religion which establishes the relation of man to All, to God and without which people stand on the plane of animals and even lower than they." ಎಂದು ಶ್ರೇಷ್ಠ ತತ್ವಜ್ಞಾನಿಯಾದ ಟೋಲ್‌ಸ್ಟೊಯ್ ಇವರು ಹೇಳಿದಂತೆ ನಾವು ಬೇಕಾದಷ್ಟು ಹೆಚ್ಚಿನ ಶಿಕ್ಷಣ ಪಡೆದಾಗ್ಯೂ ನಮ್ಮ ಆತ್ಮಬಲವನ್ನು ಬೆಳಸಿ ನಿಜಶಾಂತಿಯನ್ನು ಕೊಡುವ ಆತ್ಮ ವಿದ್ಯೆಯ ನೋಳು ನಮಗಿರದಿದ್ದರೆ ನಮ್ಮ ಜೀವನವೇ ವ್ಯರ್ಥ ಆತ್ಮಬಲವೇ ಎಲ್ಲ ಬಲಗಳ ಉಗಮ ಸ್ಥಾನವಿರುವ ಹಿಂದಿನ ಕಾಲದಲ್ಲಿ ನಮ್ಮ ಧರ್ಮದಮೇಲೆ ಪರವ ಯನ ಪೆಲ್ಲೆಯು ಆಗಾಗ್ಗೆ ಆಗುತ್ತಿದ್ದಾಗ್ಯೂ ನಮ್ಮ ಪೂರ್ವಜರು ವೀರ್ಯ ಸಾಮರ್ಥ್ಯದಿಂದ ವೀರಶೈವ ಧರ್ಮದ ದಿವ್ಯ ಗ್ರಂಥಗಳನ್ನು ಕಾಯ್ದಿಟ್ಟಿದ್ದಾರೆ. ವೀರಶೈವ ಸನಾತನ ತತ್ವಾವ ಲಂಬಿಗಳೂ ಮತ್ತು ಧರ್ಮಾಭಿಮಾನಿಗಳೂ ಆದ ಕೆಲವು ವೀರ ಶೈವ ಮಹೋದಯರು ಅಂಥ ಅತುಲ ಗ್ರಂಥಗಳನ್ನು ಕೋಧಿಸಿ ಅಚ್ಚುಹಾಕಿಸಿ ಧರ್ಮಸೇವೆ ಮಾಡಿದ್ದಾರೆ. ಮತ್ತು ಮಾಡುತ್ತಲಿರುತ್ತಾರೆ. ಅಂಥ ವೀರಶೈವ ಧರ್ಮ ಗ್ರಂಥಗಳನ್ನು ಸಂಗ್ರಹ ಮಾಡಿ ಮುಮ್ಮುಮ್ಮು ಸ್ಥಳಗಳಲ್ಲಿ ವಾಚಕಾಲಯಗಳನ್ನು ಸ್ಥಾಪಿಸಿ ಧರ್ಮದಬಗ್ಗೆ ವ

ಕರ್ನಾಟಕ ವಿಕೇಂದ್ರೀಕರಣ ವಿಷಯ.

ವೀರಶೈವರಾದ ನಾವು ಕರ್ನಾಟಕ ಪ್ರಾಂತದಲ್ಲಿ ಬಹುಸಂಖ್ಯಾತರಾಗಿ ವಾಸವಾಗಿದ್ದೇವೆ. ಹಿಂದುಸ್ಥಾನದ ಫಲವಕ್ಕಾದ ನಾಡಾದ ಕರ್ನಾಟಕವು ಮುಂಬಯಿ ಇಲಾಖೆ, ಮೈಸೂರುಸ್ಟೇಟ್ ಕೂರ್ಗ್, ಮದ್ರಾಸ ಇಲಾಖೆ ಮುಂತಾದ ಬೇರೆ ಬೇರೆ ಭಾಗಗಳಲ್ಲಿ ಹರಿದು ಹಂಚಿಹೋದ್ದರಿಂದ ವಿಶೇಷವಾಗಿ ವೀರಶೈವರ ಸಂಸ್ಕೃತಿ ಸುಧಾರಣೆಗೆ ಮತ್ತು ಸಾಮಾನ್ಯವಾಗಿ ಕರ್ನಾಟಕ ಸಂಪತ್ತಿ ಸಾಧನೆಗಳಿಗೆ ಬಹಳೇ ಧಕ್ಕೆ ತಗಲಿ ವೀರಶೈವ ಸಮಾಜವು ಇನ್ನೇ ಅಲ್ಲದೆ ವಿಶಾಲವಾದ ಕರ್ನಾಟಕವು ಎಲ್ಲ ರೀತಿಯಿಂದ ಬಹಳೇ ಹಿಂದುಳಿದ ಪ್ರಾಂತವಾಗಿದೆ. ಕರ್ನಾಟಕದ ಅಭ್ಯುದಯವೆಂದರೆ ವೀರಶೈವರ ಅಭ್ಯುದಯವೆಂದು ನಾವು ಧಾರಾಳವಾಗಿ ಹೇಳಬಹುದು.

ಹರಿದು ಹಂಚಿಹೋದ ಕರ್ನಾಟಕವನ್ನು ಸಂಯುಕ್ತ ಕರ್ನಾಟಕವನ್ನಾಗಿ ಮಾಡುವ ಪ್ರಯತ್ನವು ಭಾಷಾನುಗುಣವಾಗಿ ಪ್ರಾಂತಗಳನ್ನು ಹಂಚಬೇಕೆಂಬ ಈಗಿನ ತೀಕ್ಷ್ಣ ಚಳವಳಿಯು ನಡೆಯುವ ಪೂರ್ವದಲ್ಲಿಯೇ ಸುರುವಾಗಿತ್ತು. ನಮ್ಮೀ ಕರಿನಾಡು ಉಳಿದ ಸಮಾಜದ ಪ್ರಾಂತಗಳ ಕೊರತೆಯನ್ನು ದೂರಮಾಡುವದರಲ್ಲಿಯೇ ಕ್ಷೀಣವಾಗುತ್ತಾ ನಡೆದಿದೆ. ಕರ್ನಾಟಕವು ಸ್ವತಂತ್ರ ಪ್ರಾಂತವಾದಲ್ಲಿ ಭಾರತಮಾತೆಯ ಧೀರ ಪುತ್ರರಂತೆ ವೀರಶೈವರಾದ ನಾವು ಮೆರೆಯುವೆವು.

ಸಂಯುಕ್ತ ಕರ್ನಾಟಕದ ಘಟನೆಯಬಗ್ಗೆ ಎಲ್ಲಕಡೆಗೆ ಕೂಗು ಕೇಳಬರುತ್ತಲಿದೆ. ಸರಕಾರದವರು ಕರ್ನಾಟಕದ ವಿಕೇಂದ್ರೀಕರಣದ ಪ್ರಶ್ನೆಯನ್ನು ಒಳ್ಳೇ ಮನಮುಟ್ಟಿ ವಿಚಾರಿಸಲಿಕ್ಕೆ ತೊಡ್ಡಾಗಿದೆ. ತರುಣರಾದ ನಾವು ಈ ಬಗ್ಗೆ ಎಲ್ಲ ಭಾಗದಲ್ಲಿಯೂ ಕರ್ನಾಟಕಿಗ ಕನ್ನು ಜಾಗ್ರತಗೊಳಿಸಿ ತೀಗಾಗಲೇ ನ್ಯಾಯವಾಗಿ ನಡೆಸದೆ ಚಟುವಟಿಕೆಗೆ ಸಂಪೂರ್ಣ ಬೆಂಬಲವನ್ನೀಯುವದಲ್ಲದೆ ವಿಧಾಯಕ ಕಾರ್ಯಕ್ರಮವನ್ನು ಕೂಡಾ ಕೈಕೊಳ್ಳುವ ಗೊತ್ತುವಳಿಯನ್ನು ಮಾಡುವದು ಅಗತ್ಯವಾಗಿದೆ.

ವೀರಶೈವ ತರುಣ ಸಂಘಗಳು.

ವೀರಶೈವ ಸಮಾಜ ಸುಧಾರಣೆಗೆ ಧಾರ್ಮಿಕ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಘಗಳು ಅವಶ್ಯವಿರುವಂತೆ ತರುಣ ಸಂಸ್ಥೆಗಳು ಕೂಡಾ ಅವಶ್ಯವಿರುತ್ತವೆ. ಸಮಾಜದಲ್ಲಿ ಧಾರ್ಮಿಕ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳು ಯಶಸ್ವಿಯಾಗಿ ಜರಗಬೇಕಾದರೆ ತರುಣ ಸಂಘಗಳ ಸಹಾಯವು ಅಗತ್ಯವಾಗಿದೆ. ಸಾರ್ವಜನಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ ತರುಣ ಸಂಘದ ಬಲವು ಒಬ್ಬ ವೀರಶೈವ ವ್ಯಕ್ತಿಗೆ ಎಂದೂ ಬರಲಾರದು. ಇಂಥ ಸಂಘಗಳ ಕಾರ್ಯಕ್ಕೆ ಪ್ರತಿಗಾಮಿಯಾಗಿ ಹೋಗುವುದು ಸಾಮಾನ್ಯ ಮನುಷ್ಯರಿಗೆ ಬಹಳೇ ದುಸ್ತರವಾಗುತ್ತದೆ

ತರುಣ ಸಂಘವು ಹುಟ್ಟುಹಿಸಿದ ಕೆಲಸಮಾಡುವ ಸಂಸ್ಥೆಯಾಗಿದ್ದು ಅಂಥ ಹುರುಪು ಧಾರ್ಮಿಕ ಮತ್ತು ನೈತಿಕ ತತ್ವಗಳಿಂದ ಅಚ್ಚಾದಿತವಾದದ್ದಿರಬೇಕು. ಇಲ್ಲವಾದರೆ ಸಂಘಗಳ ಕಟ್ಟು ಪದ ಲುಪ್ತ ತೀವ್ರವಾಗಿ ಕಳಚಿಹೋಗುವ ಪ್ರಸಂಗ ಬರುತ್ತದೆ. "The most fatal error that ever happened in the world was the seperation of political and ethicol seience" ಎಂದು ಪ್ರಸಿದ್ಧ ಕವಿ ಶೆಲೆ ಇವರು ಹೇಳಿದಂತೆ ತರುಣ ಸಂಘಗಳ ಉದ್ದೇಶ ಮತ್ತು ಚಟುವಟಿಕೆಗಳು ಯಾವಾಗಲೂ ನೈತಿಕ ತತ್ವಗಳ ಆವಲಂಬನವಾಗಿರಬೇಕು. ಈಗಿನ ಪಾಶ್ಚಿಮಾತ್ಯ ವಾತಾವರಣದ ಶೆಳವಿಗೆ ಬಿದ್ದು ವೀರಶೈವ ಧರ್ಮದ ವಿಶಿಷ್ಟ ತತ್ವಗಳ ವಿರೋಧವಾಗುವಂಥ ಆಚರಣೆಯನ್ನು ನಾವು ಇಟ್ಟುಕೊಂಡ್ದಾದರೆ ನಮ್ಮ ಕಾರ್ಯಗಳು ಎಂದೂ ಸುಲಲಿತವಾಗಿ ಸಾಗಲಾರವು. ಇನ್ನೇ ಅಲ್ಲದೆ ಪರಂಪರಾಗತ ಸಾಮಾಜಿಕ, ಧಾರ್ಮಿಕ ತತ್ವಗಳ ಚ್ಯುತಿಯಾಗಿ ಸಮಾಜದಲ್ಲಿ ಅಸಮಾಧಾನಕಾರಕ ವಾತಾವರಣವು ಬೆಳೆಯುವದು.

ನಮ್ಮೀ ವೀರಶೈವ ತರುಣ ಪರಿಷತ್ತಿನಲ್ಲಿಯೇ ಅಬಿಲ ಭಾರತ ವೀರಶೈವ ತರುಣ ಸಂಘವನ್ನು ಸಾಪಿಸಿ ಅನೇಕ ಮುಖಾಂತರವಾಗಿ ಬೇರೆ ಬೇರೆಪ್ರಾಂತಗಳಲ್ಲಿ, ಜಿಲ್ಲೆಗಳ್ಲಿ, ತಾಲೂಕುಗಳಲ್ಲಿ ಮತ್ತು ಹಳ್ಳಿಗಳಲ್ಲಿ ವೀರಶೈವ ತರುಣ ಸಂಘಗಳನ್ನು ಸ್ಥಾಪಿಸುವದು ತೀಗಿನ ಕಾಲಕ್ಕೆ ನಳ್ಳೇ ಅವಶ್ಯವಾಗಿದೆ ಈ ಎಲ್ಲ ತರುಣ ಸಂಘಗಳು ಅ. ಭಾ. ವೀರಶೈವ ತರುಣ ಸಂಘದ ಆಜ್ಞೆಗೆ ಅಧೀನವಾಗಿ ಈ ಮಹಾಸಂಘದಲ್ಲಿ ನಿರ್ಣಯಿಸಿದ ಕಾರ್ಯಗಳನ್ನು ಮಾತ್ರ ಬೇರೆ ಬೇರೆ ಕಡೆಯ ವೀರಶೈವ ತರುಣ ಸಂಘಗಳು ಕೈಕೊಳ್ಳತಕ್ಕದ್ದು. ಈ ಪ್ರಕಾರವಾಗಿ ವೀರಶೈವ ತರುಣಸಂಘಗಳ ಸಂಘಟನೆಯಲ್ಲಿ ವೀರಶೈವ ತರುಣರಲ್ಲಿ ಇನ್ನೇ ಅಲ್ಲದೆ ಸಮಾಜದಲ್ಲಿ ಒಳ್ಳೇ ಜಾಗೃತಿಯಾಗುತ್ತದೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ. (ಇತ್ಯಾದಿ)

॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಶ್ರೀ ನಾವದಗಿ ರೇವಪ್ಪಜವರ ಪುಣ್ಯತಿಥಿ ಸಮಾರಂಭವೂ, ಹಂದಿತ ವೀರಭದ್ರಶಾಸ್ತ್ರಿಗಳವರ ಶುಭಾಗಮನವೂ.

ಸೈಜಾಂಸ್ಟೇಟ್ ಭಾಲಕ ಕಾಲೂಕು ನಾವದಗಿ ಗ್ರಾಮದಲ್ಲಿ ದೇವಪ್ಪ ನವರೆಂಬ ಶಿವಭಕ್ತರಿರು ಜನ್ಮಿಸಿ ಪೂರ್ವಜನ್ಮ ಸಂಸ್ಕಾರ ಬಲದಿಂದ ಗುರುಶಿಷ್ಯರ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಕಾಲ ಕಳೆಯುತ್ತಿದ್ದರು. ಇವರ ಮಜ್ಜಾಚಿ ಕರಜ್ಜೆ ಗುರುಗಳು ಪ್ರತಿ ನ್ವರಾಗಿ ಲಿಂಗಾಂಗ ಸಾಮರಸ್ಯವನ್ನು ಬೋಧಿಸಿದರು. ಅಂದಿನಿಂದ ಈ ಮಹನೀಯರು ಗುರುಲಿಂಗಜಂಗಮರನ್ನು ತಪ್ಪದೆ ಭಕ್ತಿಶ್ರದ್ಧಾ ಪೂರ್ವಕವಾಗಿ ಇಷ್ಟ ತೃಪ್ತಿಯಾಗುವಂತೆ ಜಂಗಮರನ್ನು ತೃಪ್ತಿಪಡಿಸುತ್ತಿದ್ದರು. ಈ ಕೈಯಾಚರಣೆಯಲ್ಲಿ ಎಷ್ಟು ವಿಘ್ನಬಾಧೆಗಳು ಬಂದರೂ ತಪ್ಪದೆ ಮಾಡುತ್ತಿದ್ದರು. ಇವರನ್ನು ಎಷ್ಟೋಜನ ಯಾಚಕರು ಲಗ್ನ-ಪೋಷನ ಮುಂತಾದ ಕಾರ್ಯಕ್ಕೆ ಬೇಡುತ್ತಿದ್ದರು. ಮಹನೀಯರು ಸುನಿಸ್ಸಿನಲ್ಲಿ ಸಂತೋಷದರವೆ ಬೇಡಿದಷ್ಟು ಸಂತೋಷದಿಂದ ಕೊಡುತ್ತಿದ್ದರು. ಕೊಡುವವರೆಗೆ ಲಿಂಗಾಚರನೆಮಾಡುತ್ತಿದ್ದಿಲ್ಲ. ಒಮ್ಮೊಮ್ಮೆ ಹದಿನೈದುದಿವಸ ಉಪವಾಸಮಾಡುವ ಪ್ರಸಂಗವುದುರುತ್ತಿತ್ತು. ಇಂಥ ಮಹನೀಯರು ಸದ್ಗ ಗೃಹಸ್ಥರಲ್ಲಿ ಯಾರೂ ಇಲ್ಲೆಂದರೂ ಅಡ್ಡಿ ಇಲ್ಲ ಇವರು ೧೦೫ ವರ್ಷಕ್ಕೆ ಲಿಂಗೈಕ್ಯರಾದರು, ಶಕೆ ೧೮೪೪ ಮಾರ್ಗಶೀರ್ಷ ಶುದ್ಧ ಪಕ್ಷ ೮ ದಿವಸ ಸತಿಪತಿಗಳ್ತಾಗಿಯಾದ ಲಿಂಗೈಕ್ಯರಾದರು. ಇವರ ಸಮಾಧಿಯು ಸ್ವಗ್ರಾಮದಲ್ಲಾಗಬೇಕೆಂದು ಅನೇಕ ಶ್ರೀಮಂತರೂ ಅವರ ಅನುಯಾಯಿಗಳೂ ಹೇಳಿದ ಪ್ರಕಾರ ನಾವದಗಿಗೆ ತಂದು ವಿಜೃಂಭಣೆಯಿಂದ ಸಮಾಧಿಮಾಡಿದರು. ಇಲ್ಲಿಯವರೆಗೂ ಅವರು ಕೈಕೊಂಡ ಜಂಗಮಾರಾಧನ ವ್ರತವನ್ನು ಅವರ ಧರ್ಮಪತ್ನಿಯಾದ ರೇಷ್ಮವ್ವನವರು ನಡೆಯಿಸುತ್ತಿದ್ದಾರೆ. ಇವರ ಸಮಾಧಿಯಾತ್ರೆಗೆ ಹತ್ತು ಸಾವಿರದವರೆಗೆ ಜನರು ಕೂಡಿದ್ದರು. ಆಗ್ಗೆ ಈ ಮಹನೀಯರ ಪುಣ್ಯತಿಥಿ ಸಮಾರಂಭವನ್ನು ಪ್ರತಿವರುಷವಾದರೆಯೇಕೆಂದು ಶ್ರೀಮಂತ ಕರಡಾಪ್ಪ ಪತ್ತೇಪೂರದುಬಲ್ಲಂಡಿ ಶ್ರೀಮಂತ ಮಡಿವಾಳಪ್ಪ ಬೇಗರೂಂಜೇರಿ ರಾಯಾ ಮಹಾಲಿಂಗರಾವದೇಶಮುಖ ಚಿಡಗುಪ್ಪ ಪ್ರಭುಸೆಟ್ಟಿ ಆಸ್ಥಾನ್ ವಿದ್ವಾಂಸರಾದ ಹಂಪಾಪ್ಪಾ ಮುಸ್ತಾಪೂರಕನಕಟ್ಟು-ವಾದಪ್ಪಾ ಡುಮನಗೊರವಿ-ಇವರೇ ಮುಂತಾದ ಪ್ರಮುಖರು ನಿಶ್ಚಯಿಸಿದರು. ಈ ವರ್ಷದ ಎರಡನೇ ಪುಣ್ಯತಿಥಿಯಾತ್ರೆಗೆ ಪಂಡಿತ ವೀರಭದ್ರ ಶಾಸ್ತ್ರಿಗಳು ಚಿದಲೆಮಠ ಗುರುಕುಲ ಸಿಕಿಂದ್ರಾಬಾದ ಇವರನ್ನು ಕರೆಯಿಸಬೇಕೆಂದು ನಿಶ್ಚೈಸಿದರು. ಶ್ರೀಮಂತ ಕರಡಾಪ್ಪ ಪತ್ತೇ ಪೂರ ಇವರು ತಮ್ಮ ಸ್ವಂತ ಖರ್ಚಿನಿಂದ ಸ್ವಾಮಿಗಳ ಭಾವಚಿತ್ರವನ್ನು ಬರೆಯಿಸಿ ಗುಡಿಯಲ್ಲಿ ಕಟ್ಟಿಸಿದರು. ಖಾಸದಿಕೆ ತಸಿವಾದ ಮಧ್ಯಾಹ್ನ ಪಂಡಿತರು ಆಗಮಿಸಿದರು. ಅವರ ಸ್ವಾಗತಕ್ಕೆ ಪಳಿಪೀಡ ತರುಣಸಂಘವು ಉದಗಿಗಿ ವೀರಶೈವ ಸಮಾಜದವರು ಆಗಮಿಸಿ ಸಿಶ್ಯಂಭಣಿಯಿಂದ ಸ್ವಾಗತಮಾಡಿದರು. ಮಧ್ಯಾಹ್ನ ಮೂರಕ್ಕೆ ಸಭೆಕೂಡಿತು. ಷ॥ ಬ್ರ॥ ರಾಚೋಟಿಸ್ವಾಮಿ ಪಟ್ಟಚರಮೂರ್ತಿ ಕಟ್ಟೀಮನಿ ಮೇಕರ, ಷ॥ ಬ್ರ॥ ಅಮರೇಶ್ವರಾರ್ಯ ವೇದಾಂತಾಚಾರ್ಯ ತಾಜಾನಿ ಆವರಾದಿ, ಷ॥ ಬ್ರ॥ ಗುರುಲಿಂಗಶಿವಾಚಾರ್ಯ ಪಾರಕೂದ, ಷ॥ ಬ್ರ॥ ಬಸವಲಿಂಗಸ್ವಾಮಿ-ಪಟ್ಟಾಧಿಕಾರಿ ಕಮತಾನ, ಷ॥ ಬ್ರ॥ ಬಸವಣ್ಣಪ್ಪಸ್ವಾಮಿ ಚರಮೂರ್ತಿ ಗಡವಂತಿ, ಷ॥ ಬ್ರ॥ ಬಾಲಶಾಸ್ತ್ರಿ ಪತ್ರಶಾಸ್ತ್ರಿ ಪಾಡಗೇರಿ, ಹುಲಸೂರು ಬಳವತೀರ್ಥಮಠದ ವಿರಕ್ತಸ್ವಾಮಿಗಳು ಕೂಡಿದ್ದರು. ಸುಮಾರು ೫ ಸಾವಿರ ಜನಸಂಖ್ಯೆ ಕೂಡಿತ್ತು. ಅಪ್ಪರಲ್ಲಿ ನಾಗಸಾಹಸ್ವಾಮಿ ವಕೀಲ ಇವರು ಪಂಡಿತರ ವ್ಯಾಖ್ಯಾನವಾಗುತ್ತದೆಂದು ಸೂಚಿಸಿದರು. ಬಳಿಕ ಪಂಡಿತರು ಮಾನದಿಂದ ಮಾನಸಿಕ ಈಶಸ್ತುತಿಯನ್ನು ಮಾಡಿ ಭಾಷಣವನ್ನು ಪ್ರಾರಂಭಿಸಿದರು. ಪಂಡಿತರು ತಮ್ಮ ಭಾಷಣದಲ್ಲಿ ವೀರಶೈವಧರ್ಮವು ವೈದಿಕವೆಂದೂ, ವೀರಶೈವರಲ್ಲಿ ವರ್ಣಾಶ್ರಮಗಳುಂಟೆಂದೂ, ವೀರಶೈವರ ಧರ್ಮಗ್ರಂಥಗಳು ಆಗಮಸ್ಮೃತಿಗಳೆಂದೂ ಪ್ರಮಾಣಾಯುಕ್ತಿಗಳಿಂದ ಪ್ರತಿಪಾದಿಸಿ ನಾಲ್ಕು ತಾಸುಗಳವರೆಗೆ ಭಾಷಣಮಾಡಿದರು. ಜನರು ಇವರ ಪಾಂಡಿತ್ಯಕ್ಕೆ ಮೆಚ್ಚಿ ತಮಗಾದ ಆನಂದವನ್ನು ಮೇಲಿಂದಮೇಲೆ ಕೈಚಪ್ಪಾಳೆಯಿಂದ ಸೂಚಿಸುತ್ತಿದ್ದರು. ದ್ವಾದಶಿ ಆದಿತ್ಯವಾರ ಪ್ರಾತಃಕಾಲ ಪುನಃ ಸಭೆಕೂಡಿತು. ಸಭೆಯಲ್ಲಿ ಪಂಡಿತರು ವೇಕಾವ ಶಂಕೆಮಾಡಬಹುದೆಂದು ಹೇಳಿದರು. ಉದಗಿಗಿ ತರುಣಸಂಘದ ಶಂಕರಸ್ವಾಮಿಗಳೇರ ಈತನು ವೀರಶೈವರಿಗೆ ಪರ್ಣಾಶ್ರಮಗಳಿಲ್ಲವೆಂದು ಜಿಜ್ಞಾಸಾಬುದ್ಧಿಯಿಂದ ಪ್ರಶ್ನಾಮಾಡಿದನು. ಆಮೇಲೆ ಪಂಡಿತರು ಸಪ್ರಮಾಣವಾಗಿ ಸಮಾಧಾನಹೇಳಿದರು. ನಾಗಸಾಹಸ್ವಾಮಿ ವಕೀಲ ಭಾಲಕಿ ಇವರು ಮತ್ತಾ ಪಕರ ಬಗ್ಗೆ ಜಿಜ್ಞಾಸಾಬುದ್ಧಿಯಿಂದ ಕೇಳಿದರು. ಆಮೆಲೆ ಪಂಡಿತರು ಪಂಚಾಚಾರ್ಯರೇ ಮತ್ತಾ ಪಕರೆಂದೂ ಇನ್ನುಳಿದವರಾವದರಿಲ್ಲನೆಂದೂ ವೇದ ಆಗಮ ಪ್ರಮಾಣಗಳಿಂದ ಪ್ರತಿಪಾದಿಸಿದರು. ಪಂಡಿತರ ವಕ್ತೃತ್ವಶಕ್ತಿ ಗಾಂಭೀರ್ಯ ಸಾಜನ್ಯ ಮುಂತಾದ ಗುಣಗಳು ಅವರ್ಣನೀಯವೆಂದು ಸಾಗಸಾಹ ಸ್ವಾಮಿ ವಕೀಲ ಭಾಲಕಿ ಇವರು ಸಭೆಯಲ್ಲಿ ಸ್ತುತಿಸಿದರು. ಅಲ್ಲದೆ ಪಂಡಿತರು ಪ್ರತಿವರುಷ ಪುಣ್ಯತಿಥಿಯಾತ್ರೆಗೂ ಶ್ರಾವಣಮಾಸಕ್ಕೂ ಪ್ರವಚನವನ್ನಲಾಗಿ ಅವಶ್ಯವರಬೇಕೆಂದು ವಿನಯದಿಂದ ಕೇಳಿಕೊಂದರು. ಈ ವರ್ಷದ ಪುಣ್ಯತಿಥಿಯಾತ್ರೆಗೆ ಏಳತ್ತು ಸಾವಿರ ಜನರು ಕೂಡಿದ್ದರು. ದಕ್ಷದಲ್ಲಿ ಸ್ವಾಮಿಗಳ ಫೋಟೋ ಇಟ್ಟು ಮೆರವಣಿಸಿದರು. ಈ ಯಾತ್ರೆಗೆ ಪ್ರೊತ್ಸಾಹಕೊಟ್ಟ ಶ್ರೀಮಂತ ರಿಗೂ ರೇವಪ್ಪನವರಿಗೂ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುವ.

ಬನವಣ್ಣಪ್ಪಶಾಸ್ತ್ರೀ ಮುಡಕಂದಿ.

ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು.

ದುಃಖಪ್ರದರ್ತನಸಭಾ

ವೇ॥ ಪಂ॥ ಶಿವೋಳ ಹಿರೇಮಠದ ಪಂಚಾಕ್ಷರಶಾಸ್ತ್ರಿಗಳವರು ಶಿವಾಧೀನರಾದ ನಿಮಿತ್ತ ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀಮ ಜ್ಜಗದ್ಗುರು ವಿಶ್ವಾರಾಧ್ಯ ಗುರುಕುಲ ಜಂಗಮವಾಡೀಮಠದಲ್ಲಿ ವೀರಶೈವ ವಿದ್ವತ್ಸಂಘದವರಿಂದ ಷ॥ ೨೩-೧೨-೩೮ ನೇ ಶುಕ್ರವಾರ ಮೇಲ್ಕಂಡ ದುಃಖದ್ರವರ್ತನಸಭೆಯು ನೆವೇರಿನಲ್ಲಪ್ಪಟ್ಟಿತು.

ವೀರಶೈವಸಮಾಜಕ್ಕೆ ತಿಲಕಪ್ರಾಯರೂ ಧರ್ಮೋನ್ನತಿಕಾರ್ಯ ದಲ್ಲಿ ಬದ್ಧಕಂಕಣರೂ, ಪ್ರಖ್ಯಾತ ಪತ್ರಿಕೆಗಳೂ ಲೇಖನಕಲಾ ಕೋವಿದರೂ ಆದ ಸದರಿ ಶಾಸ್ತ್ರಿಗಳ ಆಕಾಲವಿಯೋಗದಿಂದ ಇದೀ ವೀರಶೈವಸಮಾಜಕ್ಕುಂಟಾದ ಅಪಾರ ಮಃಖವನ್ನು ವಿದ್ವತ್ಸಂಘದ ಸದಸ್ಯರುಗಳು ವ್ಯಕ್ತಪಡಿಸಿದರು.

ಸದರಿ ಶಾಸ್ತ್ರಿಗಳು ಚಿಕ್ಕವಯಸ್ಸಿನಲ್ಲಿ ಸಂಸ್ಕೃತ, ಸಾಹಿತ್ಯ ಜ್ಯೋತಿಷ್ಯಾದಿಗಳನ್ನು ಅಭ್ಯಾಸಮಾಡಿ ಧರ್ಮಗ್ರಂಥಗಳಲ್ಲಿ ಪಾಂಡಿತ್ಯವನ್ನು ಪಡೆದು ಗುರುವರ್ಗದ ಜ್ಯಾತಿಕಾರ್ಯದಲ್ಲಿ ಕಟಿಬದ್ಧರಾಗಿದ್ದರು. ಮತ್ತು ಧರ್ಮೋನ್ನತಿಕಾರ್ಯಮಾಡುವುದೇ ಇವರ ಮುಖ್ಯ ಧ್ಯೇಯವಾಗಿತ್ತು. ಗುರುವರ್ಗದ ವಿಳಿಗೆಯಲ್ಲಿ ಇವರಿಗಿದ್ದ ಕಳಕಳೆಯೂ, ಭಕ್ತಿವಿಶ್ವಾಸವೂ, ಇವರು ಈ ಮರಿಗೂ ಮಾಡಿರುವ ಕಾರ್ಯಕಲಾಪಗಳಿಂದ ವ್ಯಕ್ತವಾಗುವುದು. ಇಂಥ ಸದ್ಗುಣಿಗಳನ್ನು ಕಳೆದುಕೊಂಡುದು ನಮ್ಮ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆಯೆಂದೂ ಅಶ್ರುಪೂರ್ಣ ನೇತ್ರಗಳಿಂದ ಇವರ ಗುಣಗಾನ ಮಾಡಲ್ಪಟ್ಟಿತು. ಅನಂತರ ಇವರ ಆತ್ಮಕ್ಕೆ ಜಗದೀಶನು ಶಾಂತಿಯನ್ನುಂಟುಮಾಡಿ, ಇಂಥ ಮಹಿಪ್ಪ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಪುನಃಪುನಃ ಉದಯಿಸಾಗುವಂತೆ ಕರುಣಿಸ ಲೆಂದು ಶ್ರೀ ಜಗದಾಚಾರ್ಯರನ್ನು ಸ್ಮರಿಸಿ, ಜಯಘೋಷಮಾಡಿದನೆ ಸಭೆಯು ಸಮಾಪ್ತಿಯನ್ನು ಹೊಂದಿತು.

ಓರ್ವ ಮುಖಭಾಗಿ,
ಜಂಗಮವಾಡೀಮಠ, ಶ್ರೀ ಕಾಶೀಕ್ಷೇತ್ರ.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿ ಜ್ವರ, ದಿನಬಿಟ್ಟು ಬರುವ ಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ ಕ್ಕೆ ಕ್ವೀನೀನ್‌ಗಿಂದಲೂ ಇಂಜಕ್ಷರ್‌ನಿಂದಲೂ ಬಿಡದಿರುವ ಜ್ವರವನ್ನು ನೆತ್ತಿ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜನ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಿವನೆ—ಸ್ವಪ್ನೇಂದ್ರಿಯ ಸ್ಖಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವಮ, ಮೂತ್ರದೊಡನೆ ನಸ್ಯವಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ಇವೆಲ್ಲವುದ ಬುಡವನ್ನು ಕಿತ್ತು ದಿಸಾಡುವದಲ್ಲಿವೆ ಧಾತುಪುಷ್ಟಿಕ ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0

ಪ್ಯಾಶಿಟಿಟ್ಟು ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಳಲತರದ ಹೊಟ್ಟೆಹುಳುಗಳನ್ನು ಸಾಕಪಡಿಸಿ ಜಾಡಿಸುವ ವರಿಲ್ಲಿ ಕುಖ್ಯ ದಿವಸ. ಡಜನ್ ಆ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಆಯಿಂಟ್‌ಮೆಂಟು—ಕಳಿತತರವಾದ ಹುಳ ಮೇಯುವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋನ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ನುಣ್ಣಾದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮಿ ರಿಕ್ಸ್‌ರಿನ ರೋಗದಿಂದ ಮಾಸನ ಜೋಲಾಡಿದ್ದು, ಸ್ಮೈ, ಕೈ, ಕಾಲು ಹೊರಗಿ ಕ್ಷೀಣವಾಗಿ ಬಮವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಆಯರ್ಸ್‌ಒಯಿಲ್—ಕಿವಿ ಸೋರುವದು, ವ ನೋವು ಕಿವುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಡೆಗೆ ಸಿದ್ಧಾಷಧಿ ಸೀಸೆಗೆ ರೂ. 1-0-0.

ಡಯೆರಿಯಾ ಕ್ಯೂರ್—ಆಜೀರ್ಣದ ಹೊರಡೆಗೆ ಸೀಸೆಗೆ ರೂ. 1-0 0.

ಕಂಪೌಂಡ್ ಸಿರಪ್ ವೆಸಿಳೊಜ—ಪ್ರಮೇಹ ಮೂತ್ರ ದ್ವಾರವಿಂಪ ಕಿವು, ಮೂತ್ರಜೊಯ್ಯುವಾಗ ತಡೆಯಲಾವೆದ, ತತಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವಮ, ಇವೇ ಮೊದಲಾದ ಪ್ರಮೇಹದ ಲಕ್ಷಣಗಳಉಡವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಕುಷ್ಠ ಚಿಕ್ಕು, ಹೊಸ್ಕೊಪಕಿ ರೋಗಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಭಾರ್ಗವ್ ಫಾರ್ಮಸಿ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಯ ಬ॥ ೪ (೯-೧-೧೯೩೯)

ಯಾವ ಗುರುವಾರ್ಭಾವನ ಮಹಿಮಾಪ್ರಭಾವದಿಂದ ಮತಾಚಾರ್ಯರ ಧರ್ಮಪೀಠಗಳು ಸ್ಥಾಪನೆಗೆ ಬಂದವೋ, ಯಾವ ಮಹಾತ್ಮನ ಪವಿತ್ರಪಾದವಿನ್ಯಾಸದಿಂದ ವೀರಶೈವಮತವು ಸೈಭವವು ಕರ್ಣಾಟಕ-ಆಂಧ್ರ-ಮಹಾರಾಷ್ಟ್ರಾದಿದೇಶಗಳಲ್ಲಿ ಪ್ರಕಾಶಿತವಾಯಿತೋ, ಯಾವ ಗುರುಪ್ರಭಾಕರನ ದಿವ್ಯಪ್ರಭೆಯಿಂದ ವೀರಶೈವಗುರು ವರ್ಗವು ಎಚ್ಚತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತವಾಯಿತೋ, ಯಾವ ಪರಶಿವಾವತಾರಿಯು ಪಾಮಾರಸಿಂಹವನ್ನು ಭಕ್ತ್ಯರ್ಥವಂದವು ಪೂಜಿಸಿ, ಭಜಿಸಿ, ಧ್ಯಾನಿಸಿ, ಸೇವಿಸಿ, ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು ಪಾನಮಾಡಿ ಸಮಸ್ತಮಾನವರು ಸದ್ಧರ್ಮಶೀಲರಾದರೋ, ಯಾವ ಯತಿಪುಂಗವನ ಸ್ವೈಜನಾದ ನಿರತಿಧರ್ಮವನ್ನು ನೋಡಿ ಸಮಸ್ತಮತೀಯ ಯತಿತತಿಯು ಮುಕ್ತಕಂಠದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ದುಃಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದದರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವೃಂದವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಾಭಿಧಾನವು ಪ್ರತಿಯೊಬ್ಬರ ಮುಖಕಮಲದಲ್ಲಿ ನರ್ತನಮಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ಪ್ರಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಶಿವೈಕ್ಯರಾಗಿ ಇಂದು **ಪುಷ್ಯ ಬ॥ ೪** ಮಿತಿಗೆ ೩ ವರ್ಷಗಳು ಪೂರ್ತಿಯಾದವು. **ಈ ದಿವಸ ಭರತಖಂಡದಲ್ಲಿರುವ ಸಮಸ್ತಗುರುಭಕ್ತರೂ ಶ್ರೀಜಗದ್ಗುರುಗಳವರ ಪುಣ್ಯದಿನವನ್ನು ವಿಶೇಷ ಭಕ್ತಿಯಿಂದ ಆಚರಿಸಿ ಧನ್ಯರಾದ ವಿಷಯವನ್ನು ಸರ್ವತ್ರ ಪ್ರಕಾಶಪಡಿಸುವಂತೆ ಮಾಡಬೇಕೆಂದಾಶಿಸುತ್ತೇವೆ.**

ಒಳದೇಶದ ವೃತ್ತಾಂತಗಳು.

1939 ನೆಯ ವರುಷದ ಹೊಸಕ್ಯಾಲೆಂಡರನ್ನು ನಮ್ಮ ಚಂದಾದಾರರಿಗೆ ಈ ವಾರದ ಪತ್ರಿಕೆಯ ಸಂಗಡ ಕಳುಹಿಸಿರುತ್ತೇವೆ.

ಸೌತ್ ಇಂಡಿಯನ್ ರೈಲ್ವೆಯನ್ನು ಸತ್ಯಮಂಗಲದ ಮಾರ್ಗವಾಗಿ ಮೈಸೂರು ಸ್ಟೇಟ್ ರೈಲ್ವೆಗೆ ಕೂಡಿಸಲು ಮೈಸೂರು ಸರ್ಕಾರದವರು ಒತ್ತಾಯ ಪಡಿಸಿದ್ದರಿಂದ ಈ ಮಾರ್ಗದ ನಿರ್ಮಾಣಕ್ಕೆ ಅಂದಾಜುಗಳನ್ನು ಸಿದ್ಧ ಮಾಡುವಂತೆ ರೈಲ್ವೆ ಬೋರ್ಡಿನವರು ಆಜ್ಞೆಮಾಡಿರುವುದಾಗಿ ತಿಳಿದುಬರುತ್ತದೆ.

ರಾಜಧಾನಿಯ ಬಳಿಯಿರುವ ಕ್ಷಯರೋಗದ ಆಸ್ಪತ್ರೆಯಲ್ಲಿ ರೋಗಿಗಳನ್ನು ಇಟ್ಟುಕೊಂಡು ಉಪಚರಿಸಲು ಹೆಚ್ಚಿನ ವಾರ್ಡುಗಳನ್ನು ಕಟ್ಟಿಸುವದಕ್ಕಾಗಿ ಮಾ॥ ಗುಬ್ಬಿ ವೀರಣ್ಣನವರು 1500 ರೂಪಾಯಿಗಳನ್ನೂ ಮಾ॥ ಕಾಳಪ್ಪನವರು 2000 ರೂಪಾಯಿಗಳನ್ನೂ ದಾನವಾಡಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಮುಖಂಡರಾಗಿದ್ದ ಕೆಲವರು ಆ ಸಂಸ್ಥೆಗೆ ರಾಜೀನಾಮೆ ಕೊಟ್ಟು ಸಂಸ್ಥಾನದ ಗ್ರಾಮೋದ್ಧಾರ ಕಾರ್ಯಗಳಲ್ಲಿ ಮಾತ್ರ ತೊಡಗಲಿರುವರೆಂದೂ, ಅಂಥ ಕೆಲವರು ದಿವಾನರವರನ್ನು ಭೇಟಿಮಾಡಿದಾಗ ದಿವಾನರವರು ಗ್ರಾಮಾಭಿವೃದ್ಧಿಗೆ ಬೇಕಾದಷ್ಟು ಕೊಡುವುದಾಗಿ ಭರವಸೆ ಇತ್ತರೆಂದೂ ತಿಳಿದು ಬರುತ್ತದೆ.

ಮದರಾಸು ಇರಿಗೇಷನ್ ಚೀಫ್ ಇಂಜನಿಯರಾದ ಶ್ರೀಪೌಲಿಯವರು ಕಳೆದ ನವೆಂಬರ ತಾರೀಖಿನದಿನ ರಾಜಧಾನಿಗೆ ಆಗಮಿಸಿ ಇಲ್ಲಿಯ ಚೀಫ್ ಇಂಜನಿಯರಾದ ದಿವಾನ ಬಹದ್ದೂರ್ ಎ.ವಿ. ಅಯ್ಯಂಗಾರ್, ಶ್ರೀಸಭೋಜಾ ಮುಂತಾದವರೊಡನೆ ಕೃಷ್ಣರಾಜಸಾಗರಕ್ಕೆ ಹೋಗಿ, ಕೃಷ್ಣರಾಜಸಾಗರದಲ್ಲಿ ನೀರು ಶೇಖರಿಸುವ ವಿಚಾರದಲ್ಲಿ ಮೈಸೂರು ಮತ್ತು ಮದರಾಸು ಸರ್ಕಾರಗಳಿಗಾಗಿರುವ ನಿರ್ಮಾನವನ್ನು ಕುರಿತು ಮಾತುಕತೆ ನಡೆಯಿಸಿದರು.

ನಿವೃತ್ತರಾಗಲಿರುವ ನಮ್ಮ ಪ್ರಥಮ ಸಚಿವರಾದ ಎಸ್.ಪಿ. ರಾಜಗೋಪಾಲಾಚಾರಿಯವರ ವಿಷಯಕವಾದ ಪ್ರಭುತ್ವ ಪ್ರಕಟಣೆಯೊಂದು ಈ ರೀತಿ ಹೊರಡಿಸಲ್ಪಟ್ಟಿದೆ. "ಜನವರಿ ಮೊದಲನೆಯ ತಾರೀಖಿನಿಂದ ನಾಲ್ಕು ತಿಂಗಳು ರಜ ಪಡೆದು ಅನಂತರ ನಿವೃತ್ತರಾಗಲಿರುವ ರಾಜಮಂತ್ರಿಪ್ರವೀಣ ಶ್ರೀ. ಎಸ್. ರಾಜಗೋಪಾಲಾಚಾರಿಯವರಿಗೆ ವಿರಾಮಕೊಡುವ ಅವಕಾಶದಲ್ಲಿ ಅವರು 32 ವರ್ಷಗಳಿಗೆ ಮೇಲ್ಪಟ್ಟು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯನ್ನು ಶ್ರೀಮನ್ಮಹಾರಾಜರು ಪ್ರಶಂಶಿಸಿ ಲಿಪ್ಯಪಡುತ್ತಾರೆ. ಉತ್ತಮ ಶಿಕ್ಷಣವನ್ನು ಪಡೆದ ತರುವಾಯ ಶ್ರೀ॥ ರಾಜಗೋಪಾಲಾಚಾರಿಯವರು 1906 ರಲ್ಲಿ ನಡೆದ "ಕಾಂಪಿಟೇಟೀವ್" ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಅಧಿಕಾರವೃತ್ತಿಯಲ್ಲಿ ಸೇರಿದರು. ಅಂದಿನಿಂದಿಂದುವರೆಗೆ ಅವರು ನಾನಾ ಅಧಿಕಾರಗಳಲ್ಲಿದ್ದು ಪ್ರಶಂಸಾರ್ಹವಾದ ಸೇವೆ ಸಲ್ಲಿಸಿದ್ದಾರೆ. ಇವರು ಸರ್ಕಾರದ ಅನೇಕ ಡಿಪಾರ್ಟ್‌ಮೆಂಟುಗಳ ಹುದ್ದೆಗಳಲ್ಲಿದ್ದು ಮಹತ್ವರವಾದ ಸೇವೆ ಸಲ್ಲಿಸಿದ್ದಾರೆ. 1931 ನೆಯಿಂದ 1933 ರ ವರೆಗೆ ಕೆಲವು ಕಾಲ ಸಚಿವರಾಗಿ ಕೆಲಸಮಾಡುತ್ತಿದ್ದು, 1933 ನೇ ಸಪ್ಟಂಬರ್ ತಿಂಗಳಲ್ಲಿ ಕಾಯಂ ಆಮಾತ್ಯರಾದರು. ಅವರ ಸೂಕ್ಷ್ಮ ಬುದ್ಧಿ ಮತ್ತು ಅನುಭವಗಳು ಅವರ ಮುಂದೆ ಆಗಾಗ್ಗೆ ಬರುತ್ತಿದ್ದ ಮುಖ್ಯವಾದ ರಾಜ್ಯಾಂಗ ಮತ್ತು ಆಡಳಿತ ವಿಚಾರಗಳನ್ನು ವಿಮರ್ಶೆ ಮಾಡಿ ಸರಿಯಾದ ಇತ್ಯರ್ಥಮಾಡಲು ಸಹಾಯಕಾರಿಯಾಗಿದ್ದವು. ಇವರು ಸಲ್ಲಿಸಿದ ಸೇವೆಯಿಂದ ಸಂತುಷ್ಟರಾದ ಶ್ರೀಮನ್ಮಹಾರಾಜರವರು 1934 ನೆಯ ವರ್ಷದ ದಸರಾ ಉತ್ಸವದಲ್ಲಿ "ರಾಜಮಂತ್ರಪ್ರವೀಣ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ನಿವೃತ್ತರಾಗುವ ಸಮಯದಲ್ಲಿ ಇವರು ಶ್ರೀಮನ್ಮಹಾರಾಜರವರ ಪೂರ್ಣ ವಿಶ್ವಾಸವನ್ನು ಪಡೆಯುತ್ತಿರುವರಲ್ಲದೆ, ವಿಶ್ರಾಂತಿಕಾಲವನ್ನು ದೀರ್ಘಕಾಲ ಅನುಭವಿಸಲೆಂಬ ಹಾರೈಕೆಯನ್ನು ಕೂಡ ಪಡೆದಿರುತ್ತಾರೆ.

ಮೈಸೂರಿನಲ್ಲಿ ವೈಸ್ರಾಯರವರ ಕಾರ್ಯಕ್ರಮ.

ಜನವರಿ 13ನೆಯ ತಾರೀಖು ಸಾಯಂಕಾಲ 4 ಘಂಟೆಗೆ ರೈಲ್ವೆ ಸ್ಟೇಷನ್ನಿನಲ್ಲಿಳಿದು ರೇಲ್ವೆಸ್ಟೇಷನ್ ರೋಡ್, ಕೃಷ್ಣರಾಜೇಂದ್ರ ರೋಡ್, ಆಲ್ಬರ್ಟ್‌ವಿಕ್ಟರ್ ರೋಡ್, ಸ್ಯಾಚ್ಯುಸ್ಕ್ವೇರ್, ಹಾರ್ಡಿಂಜ್ ಸರ್ಕಲ್, ಮಿರ್ಜಾ ರೋಡ್, ಮೂಲಕ ವಸಂತಮಹಲಿಗೆ ದಯಮಾಡಿಸಿ, ಅಲ್ಲಿಂದ ಕಾರಂಜಿಕೆರೆ, ನರಸಿಂಹರಾಜ ಬುಲಿವಾರ್ಡ್ ಮಾರ್ಗವಾಗಿ ಲಲಿತಮಹಲಿಗೆ ದಯಮಾಡಿಸುವರು. ತದನಂತರ 5-30 ಘಂಟೆಗೆ ಲಲಿತಾದ್ರಿರಸ್ತೆಯಮೂಲಕ ಚಾಮುಂಡಿಬೆಟ್ಟಕ್ಕೆ ಹೋಗಿ ಹಿಂತಿರುಗುವರು. ರಾತ್ರಿ 7-15ಕ್ಕೆ ಶ್ರೀಮನ್ ಮಹಾರಾಜರವರ ಸವಾರಿಯು ಲಲಿತ ಮಹಲಿಗೆ ದಯಮಾಡಿಸುವದು.

14 ನೆಯ ತಾರೀಖು ಬೆಳಿಗ್ಗೆ 10 ಘಂಟೆಗೆ ಕಾರಂಜಿಕರೆ ರೋಡ್, ಮಿರ್ಜಾ ರಸ್ತೆ, ಹಾರ್ಡಿಂಜ್ ಸರ್ಕಲ್, ಸ್ಯಾಚ್ಯುಸ್ಕ್ವೇರ್ ಕೋಟೆಯ ಉತ್ತರಬಾಗಿಲಿನಮೂಲಕ ವೈಸರಾಯರ ಸವಾರಿಯು ಆರಮನೆಗೆ ದಯಮಾಡಿಸಿ ವಿಶ್ರಾಂತಿರುಗುವುದು ಅನಂತರ 11-30 ಘಂಟೆಗೆ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿ ಮಧ್ಯಾಹ್ನ ಹಿಂತಿರುಗುವದು. ತದೇ ದಿವಸ ಸಾಯಂಕಾಲ 4-30 ಘಂಟೆಗೆ ಅರಮನೆಗೆ ದಯಮಾಡಿಸಿ ಅಲ್ಲಿಂದ 6-30 ಘಂಟೆಯವೇಳೆಗೆ ಕೃಷ್ಣರಾಜಸಾಗರಕ್ಕೆ ದಯಮಾಡಿಸಿ ಹಿಂತಿರುಗುವುದು.

15 ನೆಯ ತಾರೀಖು ಬೆಳಿಗ್ಗೆ 9-30ಕ್ಕೆ ನರಸಿಂಹರಾಜ ಬುಲಿವಾರ್ಡ್, ಕಾರಂಜಿಕೆರೆ ಏರಿ, ಮಿರ್ಜಾರಸ್ತೆ, ಹಾರ್ಡಿಂಜ್ ಸರ್ಕಲ್, ಜನರಲ್ ಪೋಸ್ಟಾಫೀಸ್, ಡಬ್ಲ್ಯೂರೋಡ್‌ಗಳಮೂಲಕ ಸೆಂಟ್ ಬಾರ್ತಲೋಮ್ಯು ಚರ್ಚಿಗೆ ದಯಮಾಡಿಸಿ ಹಿಂತಿರುಗುವದು ಅದೇ ದಿನ 11 ಘಂಟೆಗೆ ಬುಲಿವರ್ಡ್‌ರಸ್ತೆ, ಕಾರಂಜಿಕೆರೆ ಏರಿ, ನ್ಯೂ ಸಯ್ಯಾಜಿರಾವ್ ರೋಡ್, ವಾಣಿವಿಲಾಸಮಾರ್ಕೆಟ್, ವಾಣಿವಿಲಾಸರಸ್ತೆ ಮಾನಂದವಾಡಿರಸ್ತೆಮೂಲಕ ಕಾರಾಗೃಹಕ್ಕೆ ಹೋಗುವದು.

ಜನವರಿ 16 ನೆಯ ತಾರೀಖು ಮಧ್ಯಾಹ್ನ 3 ಘಂಟೆಯವೇಳೆಗೆ ಕಾಡಾಪುರದಿಂದ ಮೈಸೂರಿಗೆ ದಯಮಾಡಿಸುವದು. ಆದೇದಿವಸ ರಾತ್ರಿ 8 ಘಂಟೆಗೆ ನರಸಿಂಹರಾಜ ಬುಲಿವಾರ್ಡ್, ಕಾರಂಜಿಕೆರೆ ಏರಿ, ಮಿರ್ಜಾರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಇರ್ವಿನ್‌ರಸ್ತೆ ಮೂಲಕ ರೈಲ್ವೆಸ್ಟೇಷನ್ನಿಗೆ ದಯಮಾಡಿಸುವದು.

ಫೀನಹೋಂದಿದ ವೈಸರಾಯ್‌ರವರು ಮೈಸೂರಿಗೆ 13 ನೆಯ ತಾರೀಖು ದಯಮಾಡಿಸಿ 16 ನೆಯ ತಾರೀಖಿನ ವರಗೂ ಇಲ್ಲಿ ಇರುವ ಕಾಲದಲ್ಲಿ ಅವರ ಸವಾರಿ ದಯಮಾಡಿಸುವ ಮಾರ್ಗಗಳಲ್ಲಿ ಜನ, ಜಾನುವಾರು, ಇತರ ವಾಹನಗಳು ತಿರುಗಾಡಲು ನಿರೋಧಿಸಲ್ಪಟ್ಟಿರುವದಾಗಿ ಇಸ್ತಿಹಾರುನಾಮೆ ಹೊರಡಿಸಲ್ಪಟ್ಟಿರುತ್ತದೆ

ವರ್ತಮಾನಸಂಗ್ರಹ.

ಮದರಾಸು ಗೌರ್ನರು

ಬರುವ 13 ನೆಯ ತಾರೀಖಿನ ದಿವಸ ವೈಸರಾಯರು ಮೈಸೂರಿಗೆ ಬರುವ ಕಾಲಕ್ಕೆ ಅವರ ಸಂತೋಷಾರ್ಥವಾಗಿ ಕೆಡ್ಡಾ ಕಾರ್ಯಗಳು ನಡೆಯುತ್ತವಂತೆ! ಆದನ್ನು ನೋಡಲು ಮದರಾಸ್ ಗವರ್ನರವರೂ ಮತ್ತು ಬಿಕನೀರ್ ಮಹಾರಾಜರವರೂ ಆಹ್ವಾನಿತರಾಗಿ ಬರುತ್ತಾರೆಂದು ತಿಳಿದುಬರುತ್ತದೆ.

ಸ್ಪೇನಿನಲ್ಲೂ ಯಹೂದ್ಯರ ದ್ವೇಷ!

ಜರ್ಮನಿಯ ಸರ್ವಾಧಿಕಾರಿ ಹಿರ್ ಹಿಟ್ಲರಿನಂತೆ ಸ್ಪೇನಿನಲ್ಲಿ ಜನರಲ್ ಫ್ರಾಂಕೋ ಸಹ ಯಹೂದಿಗಳ ಮೇಲೆ ಕೈ ಎತ್ತಿರುವನು. ಯಹೂದಿ ಕುಟುಂಬಗಳ ಹಾಕರಿಯನ್ನು ಸ್ಪೇನಿನವರು ಮಾಡಬಾರದು. ಸ್ಪೇನಿನ ಯಹೂದಿಗಳ ಅಂಗಡಿಗಳಲ್ಲಿ ವ್ಯಾಪಾರ ಮಾಡಕೂಡದು ಎಂದು ಕಟ್ಟಳೆಗಳನ್ನು ಮಾಡಿ, ಇವುಗಳ ಪಾಲನೆಗಾಗಿ ಸುತ್ತುಜಾರಿಗಳನ್ನು ಏರ್ಪಡಿಸಿರುತ್ತಾನೆ.

ಹೊಸಬಗೆಯ ಗ್ರಾಮಾಫೋನ್ ಮುಳ್ಳು

ಅಮೇರಿಕೆಯ ಸಂಯುಕ್ತ ಸಂಸ್ಥಾನದವರು ಒಂದು ಸಾರೆ ಹಾಕಿದರೆ ಸುಮಾರು 2 ಸಾವಿರ ಸ್ಟೇಟುಗಳು ಮುಗಿಯುವವರೆಗೂ ಬದಲಾಯಿಸದೆ ಶುದ್ಧವಾದ ಸ್ವರವನ್ನು ಹೊರಡಿಸಬಲ್ಲ ಹೊಸ ಮಾದರಿಯ ಗ್ರಾಮಾಫೋನ್ ಮುಳ್ಳುಗಳನ್ನು ತಯಾರಿಸಿರುವರು. ಈ ಮುಳ್ಳಿನ ಕೊನೆಗೆ ನೀಲಮಣಿಯನ್ನಿಟ್ಟು ತಯಾರಿಸಿರುವರೆಂದೂ ಇವರ ಬೆಲೆ ಆ ದೇಶದಲ್ಲಿ 8 ಆಣೆ ಆಗುವದೆಂದೂ ತಿಳಿದು ಬರುತ್ತದೆ.

ಜೆಕ್ಕರು ಜರ್ಮನ್ನರ ಪೆಸ್ಟು ಹಿಡಿದರು

ಇತರ ಮಿತ್ರ ಜನಾಂಗಗಳಿಂದ ಕೈ ಬಿಡಲ್ಪಟ್ಟ ಜಿಕೋಸ್ಲೋವಾಕಿಯಾದವರು ಜರ್ಮನಿಯ ಕಾಲೊನಿಗಳ ಕೇಳಿಕೆಗೆ ತಾವು ಬೆಂಬಲವೀಯುವದಾಗಿ ಪ್ರಕಟಿಸಿರುತ್ತಾರೆ ಅಲ್ಲದೆ ತಮ್ಮಲ್ಲಿರುವ ಯಹೂದ್ಯರನ್ನೂ ಇತರ ಬೇರೆ ಜನಾಂಗದವರನ್ನೂ ಹೊರಗಟ್ಟಲು ಒಂದು ಸೂಚನೆಯನ್ನೂ ಕಂದಿದ್ದಾರೆ. ಸ್ವೇಚ್ಛಾಹಿತರೆಲ್ಲಾ ಕೈ ಬಿಟ್ಟಮೇಲೆ ಇವರು ಬಲಿಷ್ಠರೆಂಬವರ ಪೆಸ್ಟು ಹತ್ತುವವರೆಲ್ಲೇನಾ ಶ್ಚರ್ಯ!

ಚೀನಾದಲ್ಲಿ ಜಪಾನರ ಸ್ಥಿತಿ

ಈಗ ಚೀನಾಪ್ರದೇಶಗಳನ್ನು ಆಕ್ರಮಿಸಿರುವ ಜಪಾನಿಸೈನಿಕರೂ ಸೈನ್ಯಾಧಿಕಾರಿಗಳೂ ಭೀತಿಯಿಂದ ಶತ್ರುರಿಸುವಂತಾಗಿದೆ. ಜಪಾನಿಸೈನಿಕರನೇಕರು ನಿತ್ಯವೂ ಅಪ್ಪಣೆ ಕೇಳಿ ರಾಗುತ್ತಿದ್ದಾರೆ ಅವರೆಲ್ಲಿ ಹೋದರೆಂಬುದನ್ನೂ ಏನಾದರೆಂಬುದನ್ನೂ ಕಂಡವರಿಲ್ಲ. ಎಷ್ಟೋ ಜಪಾನಿ ಕಾವಲು ಸಿಪಾಯಿಗಳು ಈ ರೀತಿ ಕಾಣದಾಗಿದ್ದಾರೆ. ಚೀನಾದವರ ಈ ಗುಪ್ತಸೈನ್ಯದ ಕಾರ್ಯಕ್ರಮದಿಂದ ಜಪಾನಿ ಸೇನಾನಾಯಕರು ಆಶ್ಚರ್ಯಯುತರಾಗಿದ್ದಾರೆ.

ಅಬ್ಬೀನಿಯ

ಅಬ್ಬೀನಿಯವು ಇನ್ನೂ ಸಂಪೂರ್ಣವಾಗಿ ಇಟಲಿಗೆ ವರಣಾಗತವಾಗಿಲ್ಲವೆಂಬುದು ನಿರ್ವಿವಾದ ವಿಷಯ. ಇಟಲಿಯ ಶೂರ ಸೇನಾಪತಿಯಾದ ಗಲಿಯಾನಿ ಎಂಬಾತನನ್ನು ಅಬ್ಬೀನಿಯದ ದಂಗೆಖೋರರು ಸೆರೆಹಿಡಿದಿರುವರು ಅಬ್ಬೀನಿಯದ ಮಾಜಿ ಚಕ್ರವರ್ತಿಗಳಾದ ಹೈಲೆ ಸಲಾಸಿಯವರ ಸಮಾಪ ಬಂಧುವಾದ, ಇಮ್ಮೂರವರನ್ನು ಬಿಟ್ಟುಕೊಟ್ಟರೆ, ಇಟಲಿಯ ಸೇನಾಪತಿಯನ್ನು ತಾವು ಬಿಡುವದಾಗಿ ಇಟಲಿ ಸರ್ಕಾರಕ್ಕೆ ತಿಳಿಸಿದ್ದಾರೆ.

ಇಂಡಿಯಾದೇಶವು ಯುದ್ಧಸನ್ನದ್ಧವಾಗಬೇಕು

ಇಂಡಿಯಾದ ರಕ್ಷಣೆಗಾಗಿ ಆಯುಧ ಸಾಮಗ್ರಿಗಳನ್ನು ಹೆಚ್ಚಿಸಬೇಕು. ಜಬ್ಬಲ್ಪುರದ ಆಯುಧನಿರ್ಮಾಣಶಾಲೆಗೆ ಇನ್ನೂ 30 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅದನ್ನು ವೃದ್ಧಿಗೊಳಿಸಬೇಕು. ಕೆಲವು ಬ್ರಿಟಿಷ್ ಸೈನ್ಯಗಳನ್ನು ಬೇರೆ ಕಡೆಗೆ ಕಳುಹಿಸಬೇಕು. ಮತ್ತು ವಿಮಾನ ಬಲವನ್ನು ಹೆಚ್ಚಿಸಬೇಕು ಇತ್ಯಾದಿ ವಿಷಯಗಳನ್ನು ಚಾಟ್‌ಫೀಲ್ಡ್ ಕಮಿಟಿಯು ಶಿಫಾರಸುಮಾಡಬಹುದೆಂದು ಊಹಿಸಲಾಗಿದೆ.

ಅಪ್ಪಣೆ ಇಲ್ಲದೆ ರಷ್ಯಕ್ಕೆ ಪ್ರವೇಶಮಾಡಿದ್ದಕ್ಕೆ ದಂಡನೆ

ಬ್ರಿಟಿಷ್ ಇಂಜಿನಿಯರ್ ಮಿ| ಬಿ. ಗ್ರೊವರ್ ಎಂಬವನು ತನ್ನ ರಷ್ಯ ಪತ್ನಿಯನ್ನು ಕರೆತರಲು ಮಾಸ್ಕೋ ನಗರಕ್ಕೆ ಪಾಸ್‌ಪೋರ್ಟ್ (ಅಪ್ಪಣೆಚೀಟಿ) ಇಲ್ಲದೆ ವಿಮಾನಮೂಲಕ ಬಂದಿದ್ದರಿಂದ ಆತನಿಗೆ 1500 ರೂ. ಗಳ ಜುಲ್ಮಾನೆ ವಿಧಿಸಲ್ಪಟ್ಟಿತಲ್ಲದೆ ಆತನ ವಿಮಾನವು ಸರ್ಕಾರದವರ ವಶವಾಗಿದೆ. ಮತ್ತು ಆತನು 5 ವರ್ಷಗಳ ಕಾಲ ರಷ್ಯಕ್ಕೆ ಪ್ರವೇಶಿಸದಂತೆ ನಿಷೇಧಿಸಲ್ಪಟ್ಟಿದ್ದಾನೆ

ಜಪಾನಿನಲ್ಲಿ ಹೊಸ ಪ್ರಾಂತ್ರಿಮಂಡಲ

ರಾಜಕುಮಾರ ಕೋನೋಯೆಯವರು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟುಮೇರೆ ಬ್ಯಾರನ್ ಹಿರಾಮುರವರು ಜಪಾನಿನ ಹೊಸ ಮಂತ್ರಿಮಂಡಲವನ್ನು ರಚಿಸಿದ್ದಾರೆ. ಮಹಾಪ್ರಧಾನರಾಗಿದ್ದ ರಾಜಕುಮಾರ ಕೋನೋಯೆಯವರು ಸಹಾ ಈ ಮಂತ್ರಿವಂಡಲದಲ್ಲಿದ್ದಾರೆ. ಆದರೆ ಅವರು ಯಾವ ಖಾತೆಯ ಆಡಳಿತವನ್ನು ವಹಿಸಿಕೊಂಡಿಲ್ಲ. ಮಂತ್ರಿಮಂಡಲದಲ್ಲಿ ನಾಲ್ಕು ಮಂದಿ ಹೊಸ ಮಂತ್ರಿಗಳಿದ್ದಾರೆ. ಚೀನಾವಿಚಾರವಾಗಿ ಮುಂದೆ ಅನುಸರಿಸಲ್ಪಡಬೇಕಾದ ನೀತಿಯನ್ನು ಕುರಿತು ತಮಗೂ ಹೊಸ ಪ್ರಧಾನರಿಗೂ ಪೂರ್ಣ ಒಪ್ಪಂದವಾಗಿದೆಯೆಂದು ರಾಜಕುಮಾರ ಕೋನೋಯೆಯವರು ತಿಳಿಯಪಡಿಸಿದ್ದಾರೆ.

ಡಿ. ವೆಲರಾರವರ ಪ್ರವಾಸ

ಐರ್ಲೆಂಡಿನ ಮುಖ್ಯಾಧಿಕಾರಿಗಳಾಗಿರುವ ಮಿ|| ಡಿ.ವೇಲರಾರವರು ಬರುವ ಮೇ ತಿಂಗಳಿನಲ್ಲಿ ಅಮೇರಿಕಾಕ್ಕೆ ತೆರಳುವರೆಂದೂ ಅಲ್ಲಿ ಸ್ವಲ್ಪಕಾಲ ಪ್ರೆಸಿಡೆಂಟ್ ರೂಸ್‌ವೆಲ್ಟರ ಅತಿಥಿಗಳಾಗಿರುವರೆಂದೂ ತಿಳಿದುಬರುತ್ತದೆ.

ಕಾಶೀ ಹಿಂದೂ ವಿಶ್ವವಿದ್ಯಾನಿಲಯಕ್ಕೆ ದ್ರವ್ಯ ಸಹಾಯ ಬೇಕಾಗಿದೆ.

ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ಕಾರ್ಯದರ್ಶಿಗಳಾದ ಶ್ರೀ ವಿ. ಎ ಸುಂದರಂರವರು ಬೆಂಗಳೂರಿಗೆ ಆಗಮಿಸಿದ್ದಾರೆ. ಅವರು ತೀರ್ಥಯಾತ್ರೆಯಲ್ಲಿಯೇ ಕೋರ್ಟ ಸಂಸ್ಥಾನಕ್ಕೆ ಹೋಗಿ ಅಲ್ಲಿಯ ಮಹಾರಾಜರನ್ನೂ ದಿವಾನರನ್ನೂ ಸಂದರ್ಶಿಸಿ ಅಲ್ಲಿಂದ ಪೈದರಾಬಾದಿಗೆ ಹೋಗಿ ಅಲ್ಲಿಯ ಉಸ್ಮಾನಿಯ ವಿಶ್ವವಿದ್ಯಾನಿಲಯದವರು ಕಾಶಿ ವಿಶ್ವವಿದ್ಯಾನಿಲಯದ ಛಾನ್ಸಲರಾದ ಬಿಕನೀರ್ ಮಹಾರಾಜರಿಗೆ "ಡಾಕ್ಟರ್ ಆಫ್ ಲಾಸ್" ಎಂಬ ಗೌರವ ಪ್ರಶಸ್ತಿಯನ್ನು ಕೊಡಲು ನಡೆಸುವ ವಿಶೇಷ ಘಟಿಕೋತ್ಸವದಲ್ಲಿ ಕಾಶೀ ವಿಶ್ವವಿದ್ಯಾನಿಲಯದ ಧ್ಯೇಯದ ವಿಚಾರವಾಗಿ ಭಾಷಣ ಮಾಡುವರು. ಈ ಘಟಿಕೋತ್ಸವಕ್ಕೆ ಬರಬೇಕೆಂದು ಅವರಿಗೆ ಆಹ್ವಾನ ಬಂದಿದೆ. ಅವರು ದಕ್ಷಿಣಭಾರತಪ್ರವಾಸಕ್ಕೆ ಬಂದ ಉದ್ದೇಶವನ್ನು ಕುರಿತು ಮಾತನಾಡುತ್ತ "ಕಾಶೀ ವಿಶ್ವವಿದ್ಯಾಲಯಕ್ಕೆ ಈಗ ಅತ್ಯವಸರವಾಗಿ 50 ಸಾವಿರ ರೂಪಾಯಿಗಳಾದರೂ ಬೇಕು ಈ ವಿಶ್ವವಿದ್ಯಾನಿಲಯದ ಛಾನ್ಸಲರಾದ ಬಿಕನೀರ್ ಮಹಾರಾಜರೂ ಮತ್ತು ಪಂಡಿತ ಮದನಮೋಹನಮಾಳವೀಯರೂ ದಕ್ಷಿಣಭಾರತದಲ್ಲಿ ಪ್ರವಾಸಮಾಡಿ ದಕ್ಷಿಣಭಾರತೀಯರ ಮತ್ತು ಅರಸರ ಸಹಾಯ ಸಹಕಾರಗಳನ್ನು ಗಳಿಸಲು ನನ್ನನ್ನು ಕಳಿಸಿರುವರು. ಈ ವಿಶ್ವವಿದ್ಯಾನಿಲಯವು ಬಹಳ ವರ್ಷಗಳಿಂದ ಹಣಕಾಸಿನ ಮುಗ್ಗಟ್ಟಿನಿಂದ ಕೆಲಸ ಮಾಡುತ್ತಿದೆ. ಪ್ರತಿವರ್ಷ ಈ ವಿಶ್ವವಿದ್ಯಾಲಯಕ್ಕೆ 7 ಲಕ್ಷ ರೂ. ಗಳ ಸಾಲವಾಗುತ್ತಿದೆ. ವಿಶ್ವವಿದ್ಯಾನಿಲಯಕ್ಕೆ ಒಂದೇಸಲ ಕೊಡುವ ಮತ್ತು ಆಗಾಗ್ಗೆ ಕೊಡುತ್ತಿರುವ ಗ್ರಾಂಟುಗಳು ಬೇಕಾಗಿವೆ. ಕೆಲವು ದಿವಸಗಳಕೆಳಗೆ ಸಂಯುಕ್ತ ಪ್ರಾಂತ್ಯದ ಮಹಾಪ್ರಧಾನರು ಆ ಪ್ರಾಂತ್ಯದಪರವಾಗಿ 50 ಸಾವಿರ ರೂಪಾಯಿಗಳ ದಾನ ಮಾಡಿದರು. ಇಂಡಿಯಾ ಸರ್ಕಾರದವರು ಈ ವಿಶ್ವವಿದ್ಯಾನಿಲಯಕ್ಕೆ ಪ್ರತಿವರ್ಷ 3 ಲಕ್ಷ ರೂಪಾಯಿಗಳ ಗ್ರಾಂಟನ್ನು ಕೊಡುತ್ತಿರುವರು. ಇತರ ಪ್ರಾಂತಿಕ ಸರ್ಕಾರಗಳೂ ಸಂಯುಕ್ತ ಪ್ರಾಂತ್ಯದ ಮಾದರಿಯನ್ನನುಸರಿಸಿ ಅಖಿಲಭಾರತದ ಯುವಕರಿಗೆ ಉತ್ತಮ ಶಿಕ್ಷಣ ಕೊಡುತ್ತಿರುವ ಈ ವಿಶ್ವವಿದ್ಯಾಲಯಕ್ಕೆ ಸಹಾಯ ಮಾಡುವರೆಂದು ಭರವಸೆಯುಳ್ಳವನಾಗಿದ್ದೇನೆ" ಎಂದು ಹೇಳಿದರು. ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕಾಲಕ್ಕೆ ಮೈಸೂರು ಸರ್ಕಾರದವರು 50 ಲಕ್ಷ ರೂಪಾಯಿಗಳ ದಾನಮಾಡಿದ್ದರು. ಶ್ರೀಮನ್ಮಹಾರಾಜರವರು ವಿಶ್ವವಿದ್ಯಾನಿಲಯದ ಪ್ರಥಮ ಛಾನ್ಸಲರಾಗಿದ್ದರು.

ಸ್ವೀಕಾರ.

ಧಾರವಾಡ ಮಿ|| ಬೆಲವಂತರ ಹಿರೇಮಠದ ವೇ|| ಸಿದ್ಧರಾಮೇಶ್ವರಸ್ವಾಮಿಯವರ ಧರ್ಮಪತ್ನಿಯವರು ಶಿವಾಧೀನರಾದ ಸಮಯದಲ್ಲಿ, ಸದರಿಯವರು ಪ್ರಭಾ ಪೋಷಣಕ್ಕೋಸ್ಕರ ೨ ರೂ. ಯನ್ನು ಕೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಇಂಗ್ಲೆಂಡ್ ದೇಶದ ಮಹಾಕವಿಯಾದ ವಿಲಿಯಂ ಷೇಕ್ಸ್‌ಪಿಯರ್ ಜೀವನ ಚರಿತ್ರೆ

ಲೇಖಕರು—ಶಿವಪಡಿಸಿ, ಅಸ್ಥಾನವಿದ್ವಾನ್ ಅನವಟ್ಟಿ ರಾಮರಾಯರು.

೩. ಲಂಡನ್‌ಪಟ್ಟಣದ ಸನ 1587—93; ಆಗಣ ನಾಟಕಮಂದಿರಗಳ ಸ್ಥಿತಿ; ಷೇಕ್ಸ್‌ಪಿಯರಿನ ಮನೋವೃತ್ತಿ.

ಷೇಕ್ಸ್‌ಪಿಯರು ತನ್ನ ಹದಿನೆಂಟನೆಯ ವರುಷದಿಂದ ಸುಮಾರು 5 ವರುಷಗಳವರೆಗೂ ಅಭ್ಯಾಸಮಾಡಿದ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಸಹಾಯದಿಂದಲೂ, ಸ್ವಭಾವ ಜನ್ಯವಾದ ಕವಿತಾಶಕ್ತಿಯಿಂದಲೂ ಪದಗಳನ್ನು ಕಟ್ಟಿ ಜನಗಳಿಗೆ ತೋರಿಸುವ ಕೆಲಸದಲ್ಲಿ ಇವನ ಮನಸ್ಸು ಮೊದಲು ಪ್ರವೃತ್ತವಾಯಿತು. ಇವನು ಲಂಡನ್‌ಪಟ್ಟಣಕ್ಕೆ ಬಂದಾಗ್ಗೆ ಎಲಿಸಬತ್ ರಾಣಿಯು ಇಲ್ಲಿ ರಾಜ್ಯಭಾರ ಮಾಡಿಕೊಂಡಿದ್ದಳು. ಆ ಕಾಲದಲ್ಲಿ ಈ ಲಂಡನ್‌ಪಟ್ಟಣವು ಈಗಿನಷ್ಟು ನಾಗರಿಕತೆಯನ್ನು ಹೊಂದದಿದ್ದಾಗ್ಗೂ ಪಟ್ಟಣವು ಜನಬಾಹುಳ್ಯದಿಂದಲೂ, ವಿದ್ಯಾವಂತರಿಂದಲೂ, ವಿಹಾರಸ್ಥಾನಗಳಿಂದಲೂ ಶೋಭಿಸುತ್ತಿದ್ದಿತು. ಈ ಪಟ್ಟಣದಲ್ಲಿ ಪ್ರವಹಿಸುತ್ತಿದ್ದ ಥೇಮ್ಸ್ ಎಂಬ ನದಿಯು ಜನರ ಸೌಕರ್ಯಕ್ಕೆ ಆಧಾರಭೂತವಾಗಿಯೂ, ಪಟ್ಟಣಕ್ಕೆ ಅಲಂಕಾರಪ್ರಾಯವಾಗಿಯೂ ಇದ್ದಿತು. ಹಂಸಪಕ್ಷಿಗಳು ಈ ನದಿಯ ಉಭಯತೀರ್ಥಗಳಲ್ಲಿನ ದಡದಮೇಲೆ ಹಾರಿಬಂದು ಕುಳಿತುಕೊಳ್ಳುತ್ತಲೂ, ಪ್ರವಾಹದಲ್ಲಿ ಈಜಾಡಿಕೊಂಡು ತಂಡತಂಡವಾಗಿ ಹೋಗುತ್ತಲೂ ಇರುವುದನ್ನು ನೋಡಿದ ನೋಟಕರು ಮನೋಲ್ಲಾಸಕ್ಕೆ ಮುಖ್ಯಕಾರಣವಾಗಿತ್ತು. ಅಲ್ಲದೆ ಜನರು ದೋಣಿಗಳಲ್ಲಿ ಕುಳಿತು ವಿನೋದಪಡುತ್ತಾ ಪರಸ್ಥಳಗಳಿಗೂ ಹೋಗುತ್ತಿದ್ದರು. ಮುಖ್ಯವಾಗಿ ಈಪಟ್ಟಣವು ಎಲ್ಲಾ ಭಾಗಗಳಲ್ಲಿಯೂ ಜನ ಮನೋರಂಜನವಾಗಿದ್ದಿತು. ಇದಲ್ಲದೆ ಈ ಪಟ್ಟಣದ ಕೆಲವು ಭಾಗಗಳಲ್ಲಿ 12 ಕ್ಕೆ ಕಮ್ಮಿಯಿಲ್ಲದೆ ನಾಟಕಮಂದಿರಗಳಿರುತ್ತಿದ್ದವು ಈಗಿನಂತೆ ನಾಟಕಾಭಿನಯಕ್ಕೆ ಬೇರೆಬೇರೆ ಮಂದಿರಗಳಲ್ಲದುದರಿಂದ ಮೊದಲು ನಾಟಕದವರು ದೊಡ್ಡ ದೊಡ್ಡ ಛತ್ರಗಳಲ್ಲಿಯೂ ವಿಜನವಾದ ಕಟ್ಟಡಗಳಲ್ಲಿಯೂ ಆಟಗಳನ್ನಾಡುತ್ತಿದ್ದರಲ್ಲದೆ ಬೇರೆಬೇರೆ ಸ್ಥಳಗಳಿಗೆ ಸಾಗಿಸಲನುಕೂಲವಾದ ಬಟ್ಟೆಯ ಡೇರೆಗಳನ್ನು ಹಾಕಿಕೊಂಡೂ ಆಟವಾಡುತ್ತಿದ್ದರು.

ಕಾಲವು ಇಂತಹ ಸ್ಥಿತಿಯಲ್ಲಿರುವಾಗ್ಗೆ ಷೇಕ್ಸ್‌ಪಿಯರು ಇಲ್ಲಿಗೆ ಒಂದು ತನ್ನ ಮನೋವೃತ್ತಿಗನುಸಾರವಾದೊಂದು ನಾಟಕಮಂದಿರಕ್ಕೆ ಹೋಗಿ, ಅಲ್ಲಿದ್ದ ಜನರೊಡನೆ ಮೊದಲು ಸ್ನೇಹವನ್ನು ಬೆಳೆಯಿಸಿಕೊಂಡನು ಇವನು ನೋಡುವುದಕ್ಕೆ ಸ್ವರೂಪಿಯಾಗಿದ್ದುದರಿಂದ ಮೊದಲು ನಾಟಕದವರು ತಮ್ಮಲ್ಲಿ ಇವನಿಗೆ ಒಂದು ಚಿಕ್ಕ ಪಾತ್ರವನ್ನು ಕೊಟ್ಟು ಸಂಘಕ್ಕೆ ಸೇರಿಸಿಕೊಂಡಮೇಲೆ, ಇವನು ಇದರಲ್ಲಿ ತನ್ನ ಯೋಗ್ಯತೆಯನ್ನು ತೋರ್ಪಡಿಸಿಕೊಂಡುದರಿಂದ, ಜನರು ಈ ಹೊಸಬನಾರೆಂದು ವಿಚಾರಿಸುವಂತಾಯಿತು! ನಾಟಕದಲ್ಲಿ ಇವನಿಗೆ ಬರುತ್ತಿದ್ದ ವರಮಾನವು ಇವನ ಖರ್ಚಿಗೆ ಸಾಲದಿದ್ದುದರಿಂದ ಬೇರೆ ವೃತ್ತಿಯನ್ನನುಸರಿಸಬೇಕಾಗಿ ಬಂದಿತು

ಇಲಿಜೆಬೆತ್ ಎಂಬ ರಾಣಿಯು ಈ ಕಾಲದಲ್ಲಿ ರಾಜ್ಯವಾಳುತ್ತಿದ್ದಳೆಂದು ಹಿಂದೆ ತಿಳಿಸಿರುವುದಷ್ಟೆ. ಈ ಕಾಲದಲ್ಲಿ ಜನರು ತಂತಮ್ಮ ಕೆಲಸಗಳಿಗಾಗಿ ಹೊರಸ್ಥಳಗಳಿಗೆ ಹೋಗಿ ನೆರವೇರಿಸಿಕೊಳ್ಳಬೇಕಾಗಿದ್ದರೆ ಗಾಡಿಗಳನ್ನು ಇಟ್ಟುಕೊಳ್ಳದೆ, ಎತ್ತು ದೂರವಾದರೂ ಕಾಲುನಡೆಯಿಂದಲೇ ಹೋಗಬೇಕಾಗಿದ್ದಿತು. ಆದರೆ ಐಶ್ವರ್ಯವಂತರೂ, ಸೋಮಾರಿಗಳೂ, ಕೋವಲಶರೀರವುಳ್ಳವರೂ ಮಾತ್ರ ಅಶ್ವಾರೂಢರಾಗಿ ಪ್ರಯಾಣಮಾಡುತ್ತಿದ್ದರು. ಹೀಗಿರಲು ಜನರು ನಾಟಕಶಾಲೆಗೆ ಹೋಗುವಾಗೆ ದೊಡ್ಡ ಮನುಷ್ಯರು ತಮ್ಮ ಅಶ್ವಗಳನ್ನು ನಂಬಿಕೆಯಿಂದ ಷೇಕ್ಸ್‌ಪಿಯರ ವರಮೊಡಿ ಒಳಗೆ ಹೋಗುತ್ತಿದ್ದರು. ಜನರು ಹೊರಗೆ ಬರುವಾಗ್ಗೆ ತಮಗೆ ಮಾಡಿದ ಉಪಕಾರಕ್ಕಾಗಿ ಅವರು ಇವನಿಗೆ ಸ್ವಲ್ಪ ಹಣಸಹಾಯ ಮಾಡುತ್ತಿದ್ದರು! ಹೀಗೆ ದೊಡ್ಡ ಮನುಷ್ಯರಲ್ಲಿ ತನ್ನ ನಿಸ್ಸ್ಪೃಹತೆಯನ್ನೂ ಕೆಲಸದಲ್ಲಿ ಚಾತುರ್ಯವನ್ನೂ ತೋರ್ಪಡಿಸಿಕೊಳ್ಳುತ್ತಾ ಬಂದುದರಿಂದ, ಜನರು ಇವನಲ್ಲಿ ಪೂರ್ಣನಂಬಿಕೆಯನ್ನಿಟ್ಟುಕೊಂಡುದಂತಾಗಲ್ಲಾ, ಇವನಿಗೆ ಈ ಕೆಲಸವು ಹೆಚ್ಚಿ, ಈ ಕೆಲಸಕ್ಕಾಗಿಯೇ ತನ್ನಲ್ಲಿ ನಂಬಿಕೆಯಾದ ಕೆಲವು ಹುಡುಗರನ್ನು ಸೇರಿಸಿಕೊಂಡು ಹೆಚ್ಚು-ಸಂಪಾದನೆ ಮಾಡುತ್ತಿದ್ದನು. ಮನುಷ್ಯನು ತನ್ನ ಜೀವನವನ್ನು ಸಂಪಾದಿಸಿಕೊಳ್ಳಬೇಕಾಗಿದ್ದರೆ ತನ್ನ ಮೆಲ್ಬಟ್ಟವರಲ್ಲಿ ನಂಬಿಕೆಯನ್ನು ತೋರಿಸಿ, ಅವರ ವಿಶ್ವಾಸಕ್ಕೆ ಪಾತ್ರನಾಗಿ ಕೆಲಸಕ್ಕೆ ಪ್ರಯತ್ನಿಸಿದರೆ ಎಂತಹ ಕೆಲಸವಾದರೂ ಕ್ರಮೇಣ ಕೈಗೂಡುವುದೆಂದು ಭಾವಿಸಿ ಈ ಷೇಕ್ಸ್‌ಪಿಯರು ಈ ಮೇಲ್ಕಂಡ್ರೀತಿಯನ್ನಿಟ್ಟುಕೊಂಡು ನಡೆಯುತ್ತಿದ್ದುದರಿಂದ, ಇವನ ಪ್ರಭೋಭವೃದ್ಧಿಗೆ ಇವೇ ಹದಿನಾಯಂದಂತಿದ್ದವು.

ಈ ಕಾಲದಲ್ಲಿ ದಿ ಥಿಯೇಟರ್ ಮತ್ತು ದಿ ಕರ್ಟೆ ಎಂಬ ಹೆಸರುಳ್ಳ ಎರಡು ನಾಟಕ ಶಾಲೆಗಳು ಮಾತ್ರ ಇದ್ದುವು ಇವು ಥೇಮ್ಸ್ ನದಿಯ ಪಕ್ಕಗಳಲ್ಲಿಯೇ ಇದ್ದುದರಿಂದ ನಾಟಕಾವಲೋಕನಕ್ಕೆಗಳು ಬೇಕಾದಂಗ ಕಾಲಗಳಲ್ಲಿ ದೋಣಿಗಳಲ್ಲಿ ಕುಳಿತು ಪ್ರಯಾಣಮಾಡಿಕೊಂಡು ವಿನೋದ ಪಡುವುದಕ್ಕೆ ಅವಕಾಶವಾಗಿರುತ್ತಿದ್ದಿತು. ಇಂತಹ ಕಾಲದಲ್ಲಿ ಷೇಕ್ಸ್‌ಪಿಯರು ನಾಟಕದಲ್ಲಿ ಸೇರಿ ಚೆನ್ನಾಗಿ ಅಭಿನಯಿಸುವನೆಂತಲೂ, ಯೋಗ್ಯನಾದ ಗ್ರಂಥಕರ್ತನಾಗಿರುವನೆಂತಲೂ ತಿಳಿದ ಜನರು ಅಲ್ಲಲ್ಲಿಯೇ ಇವನ ಹೆಸರು ಕೊಡಾಡಲಾರಂಭವಾಯಿತು.

ಷೇಕ್ಸ್‌ಪಿಯರು ಇದ್ದಕಾಲಕಿಂತಲೂ ಸ್ವಲ್ಪ ಹಿಂದಣಕಾಲದಲ್ಲಿ ನಾಟಕವು ಸ್ವಲ್ಪ ಕ್ರಮದಲ್ಲಿಯೂ, ಅಭಿವೃದ್ಧಿಸ್ಥಿತಿಯಲ್ಲಿಯೂ ಇದ್ದಿತು. ಆಗಣಕಾಲದಲ್ಲಿ ನಡೆಯುತ್ತಿದ್ದ ರಾಜಕೀಯವಾದ ಬದಲಾವಣೆಗಳನ್ನೂ, ದುರ್ಗಾಧಿಪತ್ಯಗಳ ಅಧಿಕಾರಿಗಳ ಹೆಸರುಗಳನ್ನೂ ಸೂಚಿಸಿ ನಾಟಕದ ಪಾತ್ರಮುಖೇನ ನಟನೆಯಲ್ಲಿ ಹೊರಪಡಿಸಿ ತೋರ್ಪಡಿಸುತ್ತಿದ್ದರು. ಆ ಕಾಲದ ದೊಡ್ಡಮನುಷ್ಯರ ದುರ್ವ್ಯಾಪಾರಗಳು ಹೀಗೆ ಹೊಂಪಡಿಸುವುದು ಜನಗಳಲ್ಲಿ ಹಾಸ್ಯಾಸ್ಪದವಾಗಿರಲು, ಇವು ಅಧಿಕಾರಿಗಳ ಮನಸ್ಸಿಗೆ ಈ ವಿಧವು ಸರಿಬೀಳುತ್ತಿರಲಿಲ್ಲ. ಹೇಗಾರೂ ಕಾಲವು ಉತ್ತಮಸ್ಥಿತಿಗೆ ಬರಲೆಂದು ಗ್ರಂಥಕರ್ತರು ಆ ಕಾಲದ ನಡವಳಿಕೆಗಳನ್ನೇ ಸೇರಿಸಿ ಕವಿಪಗಳನ್ನು ಮಾಡಿ ಕಾಲೋಚಿತವಾದ ನಾಟಕಗಳನ್ನು ಬರೆಯುತ್ತಿದ್ದರು. ಇಂತಹ ನಾಟಕಗಳು ಸಜ್ಜನರಿಗೆ ಹಿತವಾಗಿರಲು, ಗ್ರಂಥಕರ್ತರ ಶ್ರೇಯೋಭಿವೃದ್ಧಿಯಮ್ಮು ಬಯಸುತ್ತಾ ಅವರ ಆಮೋಭಿವಾದ ಉಪಕಾರಕ್ಕೆ ತಾವು ತುಂಬ ಹಂಗಿನರಾಗಿರುವೆವೆಂದು ಜನರು ಹೇಳಿಕೊಳ್ಳುವಂತಾಯಿತು. ಇದರಿಂದ ನಾಟಕಾವಲೋಕನವು ಜನರ ಸನ್ಮಾರ್ಗ ಪ್ರವರ್ತನೆಗೆ ಮುಖ್ಯಕಾರಣವಾಗಿರುತ್ತಿದ್ದಿತು.

ಇತ್ತ ಷೇಕ್ಸ್‌ಪಿಯರು ಲಂಡನ್‌ಪಟ್ಟಣದಲ್ಲಿರುವಾಗ್ಗೆ ನಾಟಕಮಂದಿರಕ್ಕೆ ಸೇರಿಕೊಂಡು ಕಥಾನಾಯಕನ ಪಾತ್ರವನ್ನು ಧರಿಸಿ ಅಭಿನಯಿಸಿ ನೋಟಕರಿಗತ್ಯಾನಂದವನ್ನುಂಟುಮಾಡುತ್ತಿದ್ದುದರಿಂದ, ಈತನ ಹೆಸರು ಆ ಕಾಲದ ಜನರಲ್ಲಿ ತುಂಬವಾಡಿಕೆಯಾಗುತ್ತಾ ಬಂದಹಾಗೆಲ್ಲಾ ಈತನು ನಾಟವನ್ನಾಡುವುದಕ್ಕಾಗಿ ವಿಚಿತ್ರತರವಾದ ಗ್ರಂಥಗಳನ್ನು ಬರೆದುಕೊಡಲು ಮೊದಲುಮಾಡಿದನು

೪ನೆಯ ಅಧ್ಯಾಯ

೧. ಕವಿಯ ನಾಟಕಾಭಿನಯ ಮತ್ತು ಗ್ರಂಥರಚನಾಕ್ರಮ

ಷೇಕ್ಸ್‌ಪಿಯರು ತನ್ನ ಪುರೋಭವೃದ್ಧಿಗೆ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಲ್ಲಲ್ಲಿ ಕೆಲವು ನಾಟಕಮಂದಿರಗಳು ಇದ್ದವಷ್ಟೆ. ಈ ಮಂದಿರಗಳ ಯಜಮಾನರು ಸಂಘದ ಪುರೋಭವೃದ್ಧಿಗೆ ಆಧಾರಭೂತವಾದ ಗ್ರಂಥಗಳನ್ನು ಕವಿಗಳಿಂದ ಬರೆಯಿಸುತ್ತಾ, ಅಭಿನಯಜ್ಞರನ್ನು ಮಂದಿರಕ್ಕೆ ಸೇರಿಸಿಕೊಳ್ಳುತ್ತಾ ಇದ್ದರು. ಈ ಕಾಲದಲ್ಲಿ ಕ್ರಿಸ್ಟೋಫರ್‌ಮೊರ್ಲೊ ಎಂಬಾತನು ನಾಟಕರಚನೆಯಲ್ಲಿಯೂ, ಅಭಿನಯದಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದನು. ಈತನ ಬರವಣಿಗೆಯಲ್ಲಿ ತೋರ್ಪಡುವ ಮಾತಿನ ಗೌರವವು, ಅರ್ಥಪುಷ್ಟಿಯೂ ಮತ್ತು ಪದನರಚನಾಕ್ರಮವೂ ಷೇಕ್ಸ್‌ಪೀರಿನ ಬರವಣಿಗೆಗಳನ್ನು ಹೀಯಾಳಿಸುವಂತಿದ್ದುವು. ಹೀಗಿರಲು ಲಂಡನ್‌ಪಟ್ಟಣದಲ್ಲಿ 1586ನೆಯ ವರುಷದಲ್ಲಿ ಪ್ಲೇಗುವ್ಯಾಧಿಯು ಪ್ರಾರಂಭವಾಯಿತು. ಇದರಿಂದ ಜನಸಮೂಹವು ನಾಟಕಮಂದಿರದಲ್ಲಿ ಸೇರುವುದು ಅಸಂಗತವೆಂದು ಸರಕಾರದವರು ನಿರ್ಬಂಧಮಾಡಲು ನಾಟಕವಾಡುವುದು ಕೆಲವು ಕಾಲದವರೆಗೂ ಶುದ್ಧಾಂಗವಾಗಿ ನಿಲ್ಲಿಸಲ್ಪಡಬೇಕಾಗಿ ಬಂದು, ಕೆಲವು ಕಂಪೆನಿಯವರು ಆ ದೇಶದ ನಾನಾಭಾಗಗಳಿಗೆ ಹೋಗಬೇಕಾಗಿ ಬಂದಿತು. ಒಂದು ಸಂಘದವರು ಮಾತ್ರ ಸ್ಟ್ರಾಟ್‌ಫರ್ಡ್ ಎಂಬ ಸ್ಥಳಕ್ಕೆ ಬಂದಿದ್ದಾಗ್ಗೆ, ಈ ನಮ್ಮ ಷೇಕ್ಸ್‌ಪಿಯರ್ ಇದರಲ್ಲಿ ತಾನು ಸೇರಿಕೊಂಡಿದ್ದನು. ಹಿಂದೆ ಅನೇಕ ಕವಿಗಳು ಅಭಿನಯಕ್ಕೆ ತಕ್ಕ ನಾಟಕಗಳನ್ನು ಬರೆದುಕೊಡುತ್ತಿದ್ದಂತೆಯೇ ಈ ಷೇಕ್ಸ್‌ಪಿಯರೂ ನಾಟಕಗಳನ್ನು ಬರೆದುಕೊಡುತ್ತಿದ್ದುದರಿಂದ ಜನರು ಇವನ ಬರವಣಿಗೆಗಳನ್ನು ಬಹಳವಾಗಿ ಮೆಚ್ಚುತ್ತಿದ್ದರು. ಇವನು ಆ ಕಾಲದಲ್ಲಿ ವಿಶೇಷ ಪಾಂಡಿತ್ಯವುಳ್ಳ ಜಾನ್ಸ್‌ಪ್ಲೇರಿಯೂ ಎಂಬಾತನಲ್ಲಿ ಶುಶ್ರೂಷೆಮಾಡಿ ನಾಟಕದ ಬರವಣಿಗೆಗಳನ್ನು ಚೆನ್ನಾಗಿ ಕಲಿತು ತುಂಬ ಪಾಂಡಿತ್ಯವನ್ನು ಪಡೆಯುತ್ತಾ ಬರಲು, ಈತನು ಕ್ರಮೇಣ ಬರೆದ ನಾಟಕವು ಒಂದೊಂದಾಗಿ ಪ್ರಚಾರಕ್ಕೆ ಬಂದಹಾಗೆಲ್ಲಾ, ಅವುಗಳಲ್ಲಿ ತಾನೇ ನಾಯಕನ ಪಾತ್ರವನ್ನು ವಹಿಸಿಕೊಂಡು, ದಿನಚರಿಯಲ್ಲಿ ಮನುಷ್ಯನ ನಡತೆಗಳು ಹೇಗೆ ಬದಲಾಯಿಸುತ್ತಾ ಬರುತ್ತಿರುವುದೆಂಬುದನ್ನೂ ಚೆನ್ನಾಗಿ ಅಭಿನಯಿಸಿ ತೋರಿಸುತ್ತಿದ್ದನು. ಇದರಿಂದ ಆ ಕಾಲದಲ್ಲಿನ ಜನರು ವಿಲಿಯಂ ಷೇಕ್ಸ್‌ಪೀರಿಗೆ ವಿಶೇಷ ಗೌರವವನ್ನು ಕೊಡುತ್ತಾ ಬಂದರು. ಇಂತಹ ನಾಟಕಾವಲೋಕನದಿಂದ ಅನೇಕ ಜನರು ತಮ್ಮ ತಮ್ಮ ನೀಚಕೃತ್ಯಗಳನ್ನು ಬಿಟ್ಟು ಸನ್ಮಾರ್ಗವಲಂಬನೆಗೆ ನಾಟಕಾವಲೋಕನವೇ ಒಂದು ಸನ್ಮಾರ್ಗೋಪಾಯಕವಾಗಿರುವುದೆಂದು ಹೇಳಿಕೊಳ್ಳುವಂತಾಯಿತು.

೨. ಷೇಕ್ಸ್‌ಪಿಯರಿನ ಅಭಿನಯಜ್ಞಾತುರ್ಯ ಪ್ರದರ್ಶನ

ಷೇಕ್ಸ್‌ಪಿಯರನ ಯಶಸ್ಸು ಕ್ರಮೇಣ ರಾಜ್ಯದಲ್ಲಿ ಹರಡುತ್ತಾ ಬರಲು, ಈತನ ವಿಚಿತ್ರಾಭಿನಯವನ್ನು ನೋಡಬೇಕೆಂದು ಆ ಕಾಲದಲ್ಲನ್ನ ಎಲಿಜಬೆತ್ ಮಹಾರಾಣಿಗೆ ತುಂಬ ಆಶೆಯುಂಟಾಯಿತು ಆ ಕಾಲದಲ್ಲಿ ರಾಜಾಸ್ಥಾನದಲ್ಲಿ ನಾಟಕಗಳನ್ನಾಡಿಸುವುದು ವಾಡಿಯೊಗಿರಲಿಲ್ಲವಾದುದರಿಂದ, ಅಡುವ ಸ್ಥಳಕ್ಕೆ ರಾಣಿಯೇ ಹೋಗಬೇಕಾಗಿ ಬಂದಿತು. ರಾಣಿಯು ಗೋಪ್ಯವಾಗಿಹೋದುದರಿಂದ ಅಲ್ಲಿರುವವರಿಗೆ ಯಾರಿಗೂ ತಿಳಿದಿರಲಿಲ್ಲ. ದೊಡ್ಡಮನುಷ್ಯರ ಹೆಂಗಸರು ಮಾತ್ರ ನಾಟಕಾಲೆಗೆ ಹೋಗುತ್ತಿರಲಿಲ್ಲ ಹೀಗಿದ್ದಾಗ್ಗೂ ರಾಣಿಯು ವೇಷಾಂತರದಿಂದ ಹೋಗಿದ್ದಳು. ಷೇಕ್ಸ್‌ಪಿಯರು ಆ ದಿವಸ ನಾಟಕದಲ್ಲಿ ರಾಜನ ವೇಷವನ್ನು ಧರಿಸಿ ಅಭಿನಯಿಸುತ್ತಿದ್ದುದನ್ನೂ, ಈತನ ವಾಗ್ಧೋರಣಿಯಿಂದ ಪ್ರತ್ಯಕ್ಷ ರಾಜನೇ ತಾನೆಂಬ ಭಾವವನ್ನು ಶ್ರೋತೃಕರ ಮನಸ್ಸಿನಲ್ಲಿ ನೆಲಸುವಂತೆ ಅಟವಾಡುತ್ತಿರುವುದನ್ನು ನೋಡಿದ ರಾಣಿಗೆ ಬಹಳ ಸಂತೋಷವಾಗಿ ಮನಸ್ಸಿನಲ್ಲಿ—ನಾನು ಈ ಸಮಯದಲ್ಲಿ ಇವನ ಇದಿರಿಗೆ ಹೋಗಿ ನಿಂತುಕೊಂಡರೆ ನನಗೆ ಮರ್ಯಾದೆಯೂ ಇವನೋ ಇಲ್ಲವೋ ನೋಡಬೇಕು ಎಂಬ ಯೋಚನೆಯು ಹುಟ್ಟಿ ತಾನು ಕುಳಿತಿದ್ದ ಸ್ಥಳವನ್ನು ಬಿಟ್ಟು ಹಿಂಭಾಗದಿಂದ ಷೇಕ್ಸ್‌ಪಿಯರನ ಹತ್ತಿರಕ್ಕೆ ಹೋಗಿ ತನ್ನ ಕೈಯಲ್ಲಿದ್ದ ಕೈಚೀಲಗಳನ್ನು ಶಬ್ದವಾಗುವಂತೆ ರಂಗಸ್ಥಳದಲ್ಲಿ ಬಿಸಾಡಿದಳು. ಈ ಶಬ್ದವೇನೆಂದೇ ಷೇಕ್ಸ್‌ಪಿಯರು ತನ್ನ ಅಪಾಂಗವೀಕ್ಷಣೆಯಿಂದ ನೋಡಿದಾಗ್ಗೆ ಆ ಪಾರ್ಶ್ವದಲ್ಲಿ ಎಲಿಜಬತ್‌ರಾಣಿಯು ಒಂದು ಹತ್ತಿರ ನಿಂತಿದ್ದ ರೀತಿಯನ್ನು ಚೆನ್ನಾಗಿ ನೋಡಿದಾಗ್ಗೂ ಏನೆಯದವನಂತೆ ನಟಿಸಿ ತನ್ನ ಕಾರ್ಯದಲ್ಲಿ ಆಸ್ಥೆ

ನಾಗಿದ್ದನು. ಇದನ್ನು ರಾಣಿಯು ನೋಡಿ ಓಹೋ! ಈತನು ತನ್ನನ್ನು ಚೆನ್ನಾಗಿ ನೋಡಿರಲಿಕ್ಕಿಲ್ಲ; ಒಳ್ಳೆಯದು, ಈತನ ಮುಂದೆಯೇ ಹೋಗಿ ನಿಲ್ಲುವೆನು, ಏನಾಗುವುದೋ ನೋಡುವೆನೆಂದು ಯೋಚಿಸಿ ಹಾಗೆಯೇ ಮಾಡಿದಳು! ಶೇಕ್ಸ್ಪಿಯರು ಈತಳಿಯನ್ನು ಆಗ್ಗೆ ಚೆನ್ನಾಗಿ ನೋಡಬೇಕಾಯಿತು. ರಾಣಿಯೇ ಇದಿರಿಗೆ ಬಂದು ನಿಂತಿರುವಾಗ್ಗೆ ಯೇನುತಾನೆ ಆಳಿಗೆ ಅವಮಾನಪಡಿಸಲು ಸಾಧ್ಯವು! ಶೇಕ್ಸ್ಪಿಯರು ತನ್ನ ವಾತ್ಸರಣಿಯನ್ನೂ ಶಕ್ತಿಯನ್ನೂ ಅಭಿಪ್ರಾಯಗಳನ್ನೂ ಬದಲಾಯಿಸಿಕೊಂಡು ತನ್ನ ರಾಜಪ್ರ ವೇಷಕ್ಕೆ ತಂದುಂಟುಮಾಡಿಕೊಳ್ಳದೆ ಅಗ್ಗೆ "And though now bent on this highembassy, yet stoop we to take upon our Cousins glove" ಎಂಬುದಾಗಿ ಹೇಳಿಕೊಂಡು ಆ ಕಾಲಕ್ಕೆ ತನ್ನ ನಟನೆಯನ್ನು ತೋರಿಸುತ್ತಾ, ರಂಗಸ್ಥಳದಿಂದ ಒಳಕ್ಕೆ ಹೋಗಿ ಅನಂತರ ಬಹಳ ವಿಶ್ವಾಸದಿಂದ ಕಾಲುಚೀಲಗಳನ್ನು ರಾಣಿಯ ಕೈಗಿಕೊಟ್ಟನು. ರಾಣಿಯು ರಂಗದ ಒಳಭಾಗಕ್ಕೆ ಹೋದಳು. ಅನಂತರ ರಾಣಿಯು ಶೇಕ್ಸ್ಪಿಯರಳಿ ಅಭಿನಯಾದಿಗಳಿಗೆ ತುಂಬ ಸಂತೋಷಪಟ್ಟು ಮತ್ತೊಂದುಸಾರಿ ನಾಟಕಾವಲೋಕನಕ್ಕೆ ಬರುವೆನೆಂದು ಹೇಳಿ, ಅಲ್ಲಿಂದ ಹೊರಟುಹೋದಳು. ಇತ್ತ ಶೇಕ್ಸ್ಪಿಯರು ಎಲಸಬೆತ್ ರಾಣಿಯ ಮುಖ್ಯ ಅನುಗ್ರಹಕ್ಕೂ ಜನಗಳ ಶ್ಲಾಘನೆಗೂ ಪಾತ್ರನಾಗುತ್ತಾ ಬಂದನು.

ಶೇಕ್ಸ್ಪಿಯರು ಆದ್ವಿತೀಯವಾದ ಅಭಿನಯಗಳಿಂದಲೂ ನಾಟಕಗಳನ್ನು ಅನೇಕಸಾರಿ ಆಗಾಗ್ಗೆ ಆಡುತ್ತಿರಲು, ನಾಟಕಸಂಘಕ್ಕೆ ವಿಶೇಷ ದ್ರವ್ಯವು ಉತ್ಪತ್ತಿಯಾಗುತ್ತಿದ್ದಿತು. ಈ ಸಂದರ್ಭದಲ್ಲಿ ಶೇಕ್ಸ್ಪಿಯರು ಸ್ವಲ್ಪ ಸ್ವಲ್ಪ ಹಣವನ್ನು ಕೂಡಿಸಿಡುವುದಕ್ಕೆ ಪ್ರಾರಂಭಿಸಿದನು. ಜನಗಳು ಈತನ ಹೆಸರನ್ನು ಕ್ಷಾಪಿಸುವುದಕ್ಕೆ ಪ್ರಾರಂಭವಾದಮೇಲೆ ಈತನು ಆ ಕಾಲಕ್ಕೆ ತನ್ನ ಮೊತನ ನಾಟಕಗಳನ್ನು ಎರಚಿಸಿ, ಅವುಗಳಲ್ಲಿರುವ ನವರಸಗಳನ್ನು ಚೆನ್ನಾಗಿ ತಾನೇ ಅಭಿನಯಿಸಿ, ಅವಲೋಕನಾರ್ಥಿಗಳ ಮನಸ್ಸನ್ನು ಸಂತೋಷಪಡಿಸುತ್ತಿದ್ದನು. ಇದುವರೆಗೂ ಈತನು ರಚಿಸುತ್ತಿದ್ದ ನಾಟಕಗಳು ಬೇರೆ ಬೇರೆ ಭಾಷೆಗಳ ಕಥಾಧಾರವಾಗಿಟ್ಟುಕೊಂಡು, ಅವುಗಳಲ್ಲಿ ಅಕಾಲದಲ್ಲಿ ಸಂಭವಿಸುತ್ತಿದ್ದ ವಿಷಯಗಳನ್ನೆ ನೋಡಿ ಗ್ರಹಿಸಿ ಅವುಗಳನ್ನೆಲ್ಲಾ ತನ್ನ ಬರವಳಿಗೆಗಳಲ್ಲಿ ಜನಗಳಿಗೆ ಸರಿಪಡಿಸಿಕೊಳ್ಳಬೇಕೆಂಬ ಭಾವದಿಂದ ಸೇರಿಸಿ ಹೊಚಿಸುತ್ತಿದ್ದನು

೩. ಶೇಕ್ಸ್ಪಿಯರು ಮಹಾಕವಿಯ ಗ್ರಂಥಪ್ರಸಾರಣೆಯ ಪ್ರಭಾವ.

ಕಾಲವು ಇಂತಹ ಸ್ಥಿತಿಯಲ್ಲಿರುವಾಗ 1592-93 ರಲ್ಲಿ ಲಂಡನ್ ಪಟ್ಟಣದಲ್ಲಿ ಪುನಃ ಪ್ಲೇಗಿನ ಬಾಧೆಯು ಹೆಚ್ಚಿ ಜನರು ಸಾಯಲಾರಂಭವಾಯಿತು. ಇದರಿಂದ ನಾಟಕಮಂದಿರಗಳು ಪುನಃ ಮುಚ್ಚಲ್ಪಡಬೇಕಾದುವು. ಈ ಕಾರಣದಿಂದ ಶೇಕ್ಸ್ಪಿಯರಿಗೆ ಕೆಲಸವಿಲ್ಲದೆ, ಅವನು ಕಾಲಹರಣಮಾಡಬಾರದೆಂದೆಣಿಸಿ, ಈ ವಿರಾಮಕಾಲದಲ್ಲಿ ಸ್ವತಪೋಲಕಲ್ಪಿತವಾದ ನಾಟಕಗಳನ್ನು ಬರೆಯಲಾರಂಭಿಸಿದನು. 1593 ನೆಯ ವರುಷದಲ್ಲಿ "ಅಡೋನಿಸ್ ವೀನಸ್" ಎಂಬ ಗ್ರಂಥವನ್ನು ಬರೆದು ಸೌತ್ಯಾಂಪ್ಟನ್ ಅರಲ್‌ರವರಿಗೆ ಸಮರ್ಪಿಸಿದನು. ಇದನ್ನು ತನ್ನ ಬುದ್ಧಿಪೂರ್ವಕವಾದ ಮೊದಲನೆಯ ಗ್ರಂಥವೆಂದು ಕವಿಯು ಬರೆದು ಇರುತ್ತಾನೆ. ಇದು ಬಹಳವಾಗಿ ಖರ್ಚಾಗಿ ಈತನು ಜೀವಂತಕಾಲದಲ್ಲಿರುವಾಗಲೇ ಕಾಲಕಾವರ್ತಿಭೂಪಿಸಲ್ಪಟ್ಟಿತು. ಈ ಗ್ರಂಥದಿಂದ ತನಗುಂಟಾದ ಸಂತೋಷಕ್ಕಾಗಿ ೧೦ ಸಾವಿರ ರೂಪಾಯಿಗಳವರೆಗೂ, ಸೌತ್ಯಾಂಪ್ಟನ್‌ರವರು ಶೇಕ್ಸ್ಪಿಯರಿಗೆ ಬಹು ಮಾರ್ಗಾರ್ಥವಾಗಿ ಕೊಟ್ಟಿದ್ದರಿಂದ ಗ್ಲೋಬ್ ಥಿಯೇಟರಿನಲ್ಲಿ ಒಂದು ಹಿಸ್ಸೆ ಪಡೆಯುವುದಕ್ಕೆ ಅನುಕೂಲಿಸಿದಂತೆ ತಿಳಿಯಬರುತ್ತದೆ. ಶೇಕ್ಸ್ಪಿಯರು ನೂತನವಾಗಿ ಕಟ್ಟಿಸಿದ ಮನೆಯಲ್ಲಿ ಒಂದು ಪುಸ್ತಕಭಂಡಾರವನ್ನು ಇಟ್ಟು, ಇಲ್ಲಿ ತನ್ನ ಮನೋವೈತ್ತಿಗೂ, ಪುರೋಭಿವೃದ್ಧಿಗೂ ಬೇಕಾದ ಉತ್ತಕರಣಗಳನ್ನೆಲ್ಲಾ ಸೇರಿಸಿಟ್ಟುಕೊಂಡನು. ಈ ಪುಸ್ತಕಭಂಡಾರದಲ್ಲಿ Early British Legends, Mediaval Histories; Montague's Essays ಮುಂತಾದ ಅಮೋಘವಾದ ಹೊರಾರು ಗ್ರಂಥಗಳನ್ನಿಟ್ಟುಕೊಂಡು ಆದರದಿಂದ ಓದುತ್ತಿದ್ದನು. ಶೇಕ್ಸ್ಪಿಯರು ತನ್ನ ಅಮೋಘವಾದ ಬರವಣಿಗೆಗಳನ್ನು ಅನಂದಕರವಾದ ಕವಿತಾ ಚಮತ್ಕಾರದಿಂದ ಕೂಡಿದ ನವರಸಗಳಿಂದಲೂ, ತುಂಬಿಸಿ ಪ್ರಜುರಪಡಿಸುತ್ತಿರಲು, ಇವನನ್ನು ಒಬ್ಬ ದೊಡ್ಡ ಪಂಡಿತನೆಂದೂ, ಕವಿಯೆಂದೂ ಜನರು ಹೊಗಳುತ್ತಾ ಬಂದರು. ಈತನಿಗೆ ೧೬೦೨ನೆಯ ವರುಷದಿಂದ ಕವಿಶ್ರೇಷ್ಠನೆಂಬ ನಾಮಾಂಕಿತವನ್ನು ಕೊಟ್ಟು ಜನರು ಬಹು ಮರ್ಯಾದೆಯಿಂದ ಕಾಣುವಂತಾಯಿತು.

ಈ ಕವಿಯ ಹೆಸರು ತುಂಬ ಪ್ರಖ್ಯಾತಿಗೆ ಬಂದಮೇಲೆ ಮೊದಲು ಈತನ ಅಭಿನಯಕ್ಕೆ ಮೆಚ್ಚಿದ ಎಲಿಜಬೆತ್‌ರಾಣಿಯು ತನ್ನ ಆರಮನೆಯಲ್ಲಿ ಈತನಿಂದ ರಚಿತವಾದ ಭ್ರಾಂತಿವಿಲಾಸ—Comedy of Errors—ಎಂಬ ನಾಟಕವನ್ನು ಆಡಿಸಿದಳು. ರಾಣಿಯು ತುಂಬ ಸಂತೋಷಪಟ್ಟು ಈ ಕವಿಗೆ ೬ ಸಾವಿರ ರೂಪಾಯಿಗಳನ್ನು ಬಹುಮಾನಮಾಡಿದಳು. ಈ ವಿಧವಾದ ಪ್ರೋತ್ಸಾಹದಿಂದ ಕವಿಯು ೧೬೦೯ರಲ್ಲಿ ಅಮೂಲ್ಯವಾದ ಮತ್ತೊಂದು ಪುಸ್ತಕವನ್ನು ಬರೆದನು. ಈ ಗ್ರಂಥದಲ್ಲಿ 154 ಪದ್ಯಗಳಿದ್ದವು ಈ ಪುಸ್ತಕವನ್ನು ಒಬ್ಬನು ಹಿಂದೆ 5 ಆಣೆಯ ಕ್ರಯಕ್ಕೆ ಕೊಂಡುಕೊಂಡಿದ್ದನು! ಈಗ ಆ ಪುಸ್ತಕವನ್ನು ಪ್ರಚಾರಮಾಡಿದುದರಿಂದ ಅವನಿಗೆ 12 ಸಾವಿರ ರೂಪಾಯಿಗಳು ಆದಾಯವುಂಟಾಯಿತು! ಕವಿಯು ತನ್ನ ಕೃತಜ್ಞತೆಯನ್ನು ದೊಡ್ಡಮನುಷ್ಯರಲ್ಲಿ ತೋರಿಸಿ, ಜನಾನುರಂಗ ಪಾತ್ರನಾಗುತ್ತಾ ಬಂದನು. ಹೀಗೆ ಕೆಲವುಕಾಲ ಕಳೆಯಿತು. ಕಾಲವೈತ್ಯಾಸದಿಂದ ಈತನ ಮುಖ್ಯ ಪ್ರೇತಿಗೆ ಪಾತ್ರರಾಗಿ ಪುರೋಭಿವೃದ್ಧಿಯನ್ನು ಬಯಸತಕ್ಕ ಪ್ರೋತ್ಸಾಹಕರೂ, ಸ್ನೇಹಿತರೂ ಮರಣಾಧೀನರಾಗುತ್ತಾ ಬಂದುದರಿಂದ ಈ ಕವಿಯ ಮನಸ್ಸು ಕೊನೆಗೆ ತುಂಬ ಖೇದಕ್ಕೆ ಎಡೆಗೊಳ್ಳಲು, ಆ ಕಾಲದ ಜನರ ಗುಣಾತಿಶಯಗಳನ್ನೂ, ಮೋಸಗಾರಿಕೆ, ಕೃತಘ್ನತೆ, ದುರಾಶೆ, ಹುಚ್ಚುತನ ಮುಂತಾದ ದುರ್ಗುಣಗಳನ್ನೂ, ಇವುಗಳಿಂದುಂಟಾಗುವ ಫಲಿತಾಂಶಗಳನ್ನೂ ಕುರಿತು ಚೆನ್ನಾಗಿ ಸ್ಪಷ್ಟಪಡಿಸುವ ವ್ಯಸನಾತ್ಯವಾದ ಗ್ರಂಥಗಳನ್ನು ಅನೇಕವಾಗಿ ಬರೆಯುತ್ತಾ ಬಂದನು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಕಲ್ಲದೆ ಈ ಪೂಜಾವಿಧಿಯ ಅತ್ಯವಶ್ಯಕವಾದ ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇಗರ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ವಿಷಯ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ಶಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಅಭ್ರಕಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯಶಾಲಾ,
ಪೋಸ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೫ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೧—೬
ಪೃಥ್ವೀ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫ .... ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧೫ .... ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ... ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ವಿಧೀಚಣನ ಪ್ರಾರ್ಥನಾನುಸಾರವಾಗಿ ವಿಶಕಾಲದಲ್ಲಿಯೇ ಮೂರುಕೋಟಿ ಗುರುಉಪಪನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಳ್ಳ .... ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರೀ ಶಿವಾಚಾರ್ಯರ ಫೋಟೋ .... ೦—೦—೯
ಶ್ರೀಷುದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯
ಶ್ರೀಷುದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯
ಶ್ರೀಷುದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ .... ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ .... .. ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೫ .... ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ .... ೦—೦—೯
ಶ್ರೀ ಜಗದ್ಗುರು ಕೇದಾರಸಂತಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿಹಾಜಿಸುತ್ತಿರುವ ಫೋಟೋ ... ೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆನೀಂದ ರಂಭಾಪುರೀ ಜಗದ್ಗುರುಗಳ ಅದ್ದಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ಪ್ಯಾಕಿಂಗಿಗೆಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[38] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರ ಟೀ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) ...	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಬಸವಾದಿಪ್ರಮಥತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮಿಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಪೂಲವಾತ್ರ ಚಕ್ರವರ್ತಿ)	೬ ಆಣೆ
ವೀರಶೈವಮಹಾತ್ಮೆಯ	೮ ಆಣೆ
ಬಸವಾಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಪದ್ಮೋಧರತ್ನಾವಳಿ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಪಣಮು (ತೆಲುಗು)	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೪ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವವು)	೧| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
Shakti-Vishistadvaita *or* **The Philosophical Aspect of Virasaivism** (*English*)	8 As.
Speeches by Pandit Shri Kashinatha Shastriji *English*)	12 As.
ವೀರಶೈವರತ್ನ (ಮರಾಠಿ)	೧ ಕ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ...	೧ ಕ.
ವೀರಶೈವೇತಿಹಾಸ (ಸಂಸ್ಕೃತ)	೧ ಕ.
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ)	೬ ಆಣೆ
ನಂದಿಕೇಶ್ವರಕಾರಿಕಾ (ಸಂಸ್ಕೃತ)	೨ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)	೨ ಆಣೆ
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಜಗದ್ಗುರು ಮಹಾವಿದ್ವಾನ್ ವೀರ ಶಿವ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿಕೊಳ್ಳಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋಪ್ಯವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಶರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ ನೇ ಜನವರಿ ೧೯೩೯ [ಸಂಚಿಕೆ ೩೭

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿ ಮಹೋತ್ಸವ ಸೊಲ್ಲಾಪುರ.

ತಾ॥ 9-1-39 ನೆಯ ಸೋಮವಾರ ದಿವಸ 4 ಘಂಟೆಗೆ ಶ್ರೀಮಜ್ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿ ನಿಮಿತ್ತವಾಗಿ ಶ್ರೀಮಲ್ಲಿಕಾರ್ಜುನ ದೇವಾಲಯದಲ್ಲಿ ವೀರಶೈವ ಸ್ತ್ರೀಸಮಾಜದ ವತಿಯಿಂದ ಮಹೋತ್ಸವವು ಒಳ್ಳೆ ವೈಭವದಿಂದ ನೆರವೇರಿತು ಮಹಾಗುರುವಿನ ಕೃಪೆಯಿಂದ ಈ ಸಭೆಗೆ, ಹರಗುರುಭಕ್ತ ಪಾರಾಯಣರೂ, ಪರಮದಾನಿಗಳೂ, ವೀರಶೈವಾಚಾರನಿಷ್ಠರೂ ಆದ ಬಳ್ಳಾರಿ ಸಕ್ಕರೆ ಕರಡಿಪ್ಪನವರ ಮೊಮ್ಮಗಳಾದ ಶ್ರೀ ನೀಲಮ್ಮನವರು ಹರಪನಳ್ಳಿ ಇವರು ಆಗಮಿಸಿದ್ದರು. ಇವರು ತಮ್ಮ ಸದ್ವಂಶಕ್ಕನುಗುಣವಾಗಿ ಸದ್ಗುಣಿಗಳಾಗಿರುವರು. ಪ್ರಥಮದಲ್ಲಿ ಸೌ॥ ಭಾಗೀರಥಿಬಾಯಿಯವರು ಮಾತೃಶ್ರೀಯವರ ವಂಶದ ಪರಿಚಯವನ್ನು ಎಲ್ಲರಿಗೂ ತಿಳಿಯುವಂತೆ ಹೇಳಿ ಅಧ್ಯಕ್ಷಸ್ಥಾನವನ್ನು ಅಲಂಕರಿಸುವಂತೆ ಕೋರಿದರು ಸೌ॥ ಶಿವಗಂಗಾಬಾಯಿ ಭಂಗೆ ಪಂಢರಪುರ ಇವರು ಆನುಮೋದನೆ ವನ್ನಿತ್ತರು. ತರುವಾಯ ಬಾಲಿಕೆಯರು ತಮ್ಮ ಇಂಪಾದ ಸ್ವರದಿಂದ ಈಶಸ್ತುತಿ, ಜಗದಾಚಾರ್ಯರ ಸ್ತುತಿಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು ಆಮೇಲೆ ಇಂದುಕಲಾ ಗಂಭೀರೆ, ಅನ್ನಪೂರ್ಣಾ ನಿಟ್ಟೂರೆ, ಗೌರಿಬಾಯಿ ಕಟ್ಟಾಪ, ಸುಗ್ಗಲಾ ತಮಶೆಟ್ಟಿ, ಶಾಂತಾಬಾಯಿ ಭೈರೋಪಾಟೀಲ್, ಸುಗ್ಗಲಾ ಹಿಂಗಮಿರೆ ಈ ಮೊದಲಾದ ಕುಮಾರಿಯರು ತಮ್ಮ ಬಾಲಭಾಷೆಯಿಂದ, ರೇಣುಕಗೀತೆಯ ಶ್ಲೋಕಗಳೊಂದಿಗೆ ಭಾಷಣಮಾಡಿ ಸಭಿಕರನ್ನು ಆಶ್ಚರ್ಯಗೊಳಿಸಿದರು. ಆಮೇಲೆ ಸೌ॥ ಶಿವಗಂಗಾಬಾಯಿ ಭಂಗೆ, ಸೌ॥ ಗಂಗಾಬಾಯಿ ಗಂಭೀರೆ, ಸೌ॥ ಶುಕ್ಲಾಬಾಯಿ ಪಟಣೆ, ಸೌ॥ ಬಸಮ್ಮ ನಂದೀಮಠ, ಶ್ರೀ॥ ಗುರುಬಾಯಿ ಮಳಶಟ್ಟಿ ಇವರು ಗುರುಸಾರ್ವಭೌಮರ ಗುಣವರ್ಣನೆಯುಕ್ತವಾದ ಭಾಷಣಗಳನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು ಸೌ॥ ಭಾಗೀರಥಿ ಬಾಯಿಯವರು ಮಹಾಗುರುವಿನ ಗುಣವರ್ಣನೆಯು ಯುಕ್ತವಾದ. ಮತ್ತು ಗುರುದ್ರೋಹಿಗಳು ನಡೆಯಿಸಿರುವ ಕುಟಿಲಕಾರಸ್ಥಾನದ ಬಸ್ಸಿ ಭಾಷಣಮಾಡುವಾಗ್ಗೆ ನೆರೆದಂಥ ಸ್ತ್ರೀಯರು ಗುರು ನಿಂದೆಯನ್ನು ಖಂಡಿಸಲು ಪ್ರಾರಂಭಮಾಡಿದರು ಆಮೇಲೆ ಅಧ್ಯಕ್ಷ ಮಾತೃಶ್ರೀಯವರ, ನಾನು ಎಲ್ಲರ ಪಾದಧೂಳಿಯು, ನಾನು ಅಧ್ಯಕ್ಷಸ್ಥಾನಕ್ಕೆ ಯೋಗ್ಯಳಲ್ಲ ಎಂಬ ತಮ್ಮ ಮುಗ್ಧಭಾವದಿಂದ ಸ್ವಲ್ಪ ದರಲ್ಲಿಯೇ ಹೇಳಿ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ತರುವಾಯ ಸೌ॥ ಭಾಗೀರಥಿಬಾಯಿಯವರು ಅಧ್ಯಕ್ಷರ ಮತ್ತು ಬಂದಂಥ ತಾಯಿಯವರ ಮತ್ತು ಹಾರ್ಮೋನಿಯಂ ಬಾರಿಸಲು ಸಹಕಾರಿಯಾದ ಶ್ರೀ॥ ದುಬಲಗುಂಡಿ ವಾರದ ಪಾಠಶಾಲಾ ವಿದ್ಯಾರ್ಥಿಗಳ ಅಭಾರವನ್ನು ಮನ್ನಿಸಿದರು ಶ್ರೀ॥ ಪ॥ ಬ್ರ॥ ರೇಣುಕ ಶಿವಾಚಾರ್ಯರು ಹುಣಸಿಕಟ್ಟೆ ಇವರು ಗುರುಸಾರ್ವಭೌಮರ ಸ್ತೋತ್ರ ಶ್ಲೋಕಗಳನ್ನು ಮಾಡಿ ಓದಲಿಕ್ಕೆ ಕೊಟ್ಟದ್ದರಿಂದ ಅವರ ಆಧಾರ ಮಾನಿಸಿದರು ಬಳ್ಳಾರಿ ಜಿಲ್ಲಾ ಚರಪಟ್ಟಾಧಿಕಾರಿಗಳ ಸನ್ಮೇಲನದಲ್ಲಿ ಸೌ॥ ಭಾಗೀರಥಿಬಾಯಿಯವರು ಮಾಡಿದ ಪದ್ಯಗಳು ಮಹಾರಾಷ್ಟ್ರದಲ್ಲಿ ಪ್ರಚಾರವಾಗಲೆಂಬ ಸದುದ್ದೇಶದಿಂದ ಸೌ॥ ಗಂಗಾಬಾಯಿ ಗಂಭೇರೆ ಇವರು ತಮ್ಮ ಹಣದಿಂದ ಮರಾಠಿ ಲಿಪಿಯಲ್ಲಿ ಮುದ್ರಿಸಿ ಎಲ್ಲರೂ ಗುರುಸ್ತೋತ್ರಮಾಡಿ ಉದ್ಧಾರವಾಗಲೆಂದು ಸಭೆಯಲ್ಲಿ ಹಂಚಿ ಗುರುಭಕ್ತಿಗೆ ಪಾತ್ರರಾದರು ಈ ತಾಯಿಯವರ ಅಭಾರವನ್ನು ಮನ್ನಿಸಲಾಯಿತು ಬಳಿಕ ಕಾಯಿಕಪೂರ ಮಂಗಳಾರತಿಯಾಗಿ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು

ಒರ್ವ ಪ್ರತ್ಯಕ್ಷದರ್ಶಿ

ಶ್ರೀಮದುಜ್ಜಯಿನೀ ಜಗದ್ಗುರು ಸಿದ್ಧಲಿಂಗ ಶಿವಯೋಗೀಶ್ವರರ ಪುಣ್ಯತಿಥಿಸಮಾರಂಭ, ಬಳ್ಳಾರಿ.

ತಾ॥ ೪-೧-೩೯ನೆಯ ಸೋಮವಾರ ಸಾಯಂಕಾಲ ೬ಘಂಟೆಗೆ ಬಳ್ಳಾರಿ ಶ್ರೀ ಗುರುನಿವಾಸ ಸಂಸ್ಕೃತ ನಿದ್ಯಾಲಯದಲ್ಲಿ ಮಹೇನೂರು ಬ್ರಹ್ಮಶ್ರೀಯ ವರಕವಿ ಶ್ರೀ ವಾಗೀಶಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಈ ಪುಣ್ಯತಿಥಿಯ ನಿಮಿತ್ತವಾಗಿ ಸಭೆ ಸೇರಿದ್ದಿತು ಆರಂಭದಲ್ಲಿ ಶ್ರೀಜಗದ್ಗುರುಗಳವರ ಸ್ತೋತ್ರ ಗೀತೆಯು ನಡೆಯಿತು ಆಮೇಲೆ ಸೌಡಿ ಹಿರೇಮಠದ ವೇ॥ ಬಸವಲಿಂಗಶಾಸ್ತ್ರಿಗಳವರು "ಶ್ರೀಜಗದ್ಗುರುಗಳ ಗುಣಕಥನ" ಎಂಬ ವಿಷಯದಮೇಲೆ ಅಮೂಲ್ಯವಾದ ವ್ಯಾಖ್ಯಾನವನ್ನು ಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರು ಆಮೇಲೆ ರಾಮಪುರದ ಹಿರೇಮಠದ ವೇ॥ ನಾಗಭೂಷಣಶರ್ಮರು "ಶ್ರೀಜಗದ್ಗುರುಗಳವರ ತತ್ವೋಪದೇಶ" ಎಂಬ ವಿಷಯದಮೇಲೆ ಸರಸವಾದ ವಾಖ್ಯಾನವನ್ನಿತ್ತರು ಲಕ್ಕುಂಡಿ ಹಿರೇಮಠದ ವೇ॥ ಪಡಕ್ಷರಶರ್ಮರು "ಶ್ರೀಜಗದ್ಗುರುಗಳ ಕೃಪೆ ಎಂಥದು" ಎಂಬ ವಿಷಯವನ್ನೆತ್ತಿಕೊಂಡು ಮನೋಹರವಾದ ವ್ಯಾಖ್ಯಾನವನ್ನು ಮಾಡಿದರು. ಮಿಟಮೂರು ವೇ॥ ಶ್ರೀಕಂಠಶರ್ಮರು "ಶ್ರೀಜಗದ್ಗುರುಗಳವರ ಪ್ರಭುತ್ವ" ಎಂಬ ವಿಷಯದ ಮೇಲೆ ದಿವ್ಯವಾದ ಭಾಷಣವನ್ನು ಮಾಡಿದರು ನರೇಗಲ್ಲುಮಠದ ವೇ॥ ಚೆನ್ನಬಸವಶರ್ಮರು "ಶ್ರೀಜಗದ್ಗುರುಗಳ ಗುಣಗಾನ" ಎಂಬ ವಿಷಯದಮೇಲೆ ಅಮೋಘವಾದ ಭಾಷಣವನ್ನು ಮಾಡಿದರು. ಆಮೇಲೆ ಶ್ರೀ ವಾಗೀಶಶಿವಾಚಾರ್ಯರು "ಜಗದ್ಗುರುತ್ವವು ಈ ಗುರು ಸಾರ್ವಭೌಮರಲ್ಲಿದ್ದಿತು" ಎಂಬ ವಿಷಯದಮೇಲೆ ಅಮೂಲ್ಯವಾದ ವ್ಯಾಖ್ಯಾನವನ್ನು ಮಾಡಿ ಸರ್ವರನ್ನು ಆನಂದಪಡಿಸಿದರು ಆಮೇಲೆ ಶ್ರೀಜಗದ್ಗುರುಗಳವರ ಮಂಗಳನಡೆದು ಸಭಿಕರೆಲ್ಲರಿಗೂ ಪ್ರಸಾದವಿನಿಯೋಗವಾಗಿ ಸಭಾಕಾರ್ಯವು ಸಮಾಪ್ತಿಗೊಂಡಿತು

ಒಳಿ ಮರಿಯಪ್ಪ,
ಸೆಕ್ರೆಟರಿ, ಗುರುನಿವಾಸ-ಸಂಸ್ಕೃತ ಹೈಸ್ಕೂಲ್

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಪುಣ್ಯತಿಥಿ

ತಾ॥ 9-1-39 ನೆಯ ಸೋಮವಾರ ಶ್ರೀರೇಣುಕ ಸಂಘದಲ್ಲಿ ರಾತ್ರಿ ೮ ಘಂಟೆಗೆ ಶ್ರೀ॥ ಪ॥ ಗಂಗಾಧರ ಶಿವಾಚಾರ್ಯರು ದಿಗ್ಗಾವಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಮಾಡಲ್ಪಟ್ಟಿತು ಶ್ರೀಮಜ್ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಗುಣವರ್ಣನಯುಕ್ತವಾಗಿ ಶ್ರೀ॥ ಪ॥ ಬ್ರ॥ ಗುರುವೆರ್ಯ ಶಿವಾಚಾರ್ಯರು ಶುತ್ತಗಟ್ಟಿ ಶ್ರೀ॥ ಪ॥ ಬ್ರ॥ ರೇಣುಕ ಶಿವಾಚಾರ್ಯರು ಹುಣಸಿಕಟ್ಟೆ ಶ್ರೀ॥ ಅಪ್ಪಾರಾವ್ ವೀರಶೈವಮಹಾಜನ ಬೋರ್ಡಿಂಗ್ ವೈವಸ್ಥಾಪಕ, ಇವರು ಎಲ್ಲರಿಗೂ ತಿಳಿಯುವಂತೆ ಭಾಷಣಮಾಡಿ ಸಭಿಕರನ್ನು ಆನಂದಗೊಳಿಸಿದರು. ಆಮೇಲೆ ಅಧ್ಯಕ್ಷರು ಮಹಾ ಗುರುಗಳ ಗುಣವರ್ಣನೆಯನ್ನು ಒಳ್ಳೆ ಕಳಕಳಿಯಿಂದ ಮಾಡಿದರು ಆಮೇಲೆ ಶ್ರೀ॥ ರುದ್ರಯ್ಯನವರು ಕಾಳೇನಳ್ಳಿ ಇವರು ಅಧ್ಯಕ್ಷರ ಅಭಾರವನ್ನು ಮನ್ನಿಸಿದರು ಬಳಿಕ ಕಾಯಿಕಪೂರ ಮಂಗಳಾರತಿಯಾಗಿ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು

ಒರ್ವ ಗುರುಭಕ್ತ, ಸೊಲ್ಲಾಪುರ

ಲಿಂಗಧಾರಣ ವಿಧಿ.

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದ ವರಿಗೆ ಈ ವಿಧಿಯು ಮುಖ್ಯವಾಗಿರುವದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮಠಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಬೆಲೆ ೪ ಆಣೆ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಜುಕೇಷನಲ್ ಪ್ರೆಸ್, ಮೈಸೂರು.

ಹುಬ್ಬಳ್ಳಿಯಲ್ಲಿ ನಡೆದ ವೀರಶೈವ ಮಹಾ ಸಭೆಯ ವಿಜಯದೃಶ್ಯ

—

ಪ್ರೇಕ್ಷಕ—ಮಹಾ ಸಭೆಯ ಒರ್ವ ಪ್ರತಿನಿಧಿ

ಓಹೋಹೋ ! ಏನು ಮಹಾಸಭೆ !! ಪಂಢರಪುರ ಜಾತ್ರೆಗಿಂತಲೂ ಗಲಾಟೆ ! ಇದೆಂಥಾ ಅವ್ಯವಸ್ಥೆ ! ಏನು ಕೂಗಾಟ! ಏನುಚೀರಾಟ! ಮಾತು ಕೇಳಿಸದ ಮರಾಟಗರು ಓ ಪ್ರಸಿಡೆಂಟ್, ಓ ಪ್ರಸಿಡೆಂಟ್ ! ಎಂದರೆ ಕಪ್ಪಡಿಗರು ಏ ಅಧ್ಯಕ್ಷರೇ! ಏ ಅಧ್ಯಕ್ಷರೇ ! ಎನ್ನುವರು ಏ ಮಾಸ್ತರೇ ! ಏ ಮಾಸ್ತರೇ !! ಎಂದರು ಕೆಲವರು ಮೃಚ್ಛಕಟಿಕದ ಕರ್ನಾಟಕರ ಕಲಹೋದಾಹರಣೆಗೆ ಈ ದೃಶ್ಯವು ಬಲವಾದ ಸಾಕ್ಷಿಯಾಗಿದೆ ಎಂದು ಕೂಗುವರು ಕೆಲವರು.

ವೇದಾಗಮವಾದಿಗಳಾದ ವೀರಶೈವರು ಎಂದಿನಂತೆ ಇಂದೂ ಪ್ರವೇಶ ಮಾಡಲಾರದೆಂದು ನಂಬಿಕೊಂಡೇ ಸಭೆ ಸಾಗಿದ್ದಿತೆಂಬುದು ಸಭಾ ಸಂಚಾಲಕರ ಅಮಂಗಲ ಕೃತಿಯಿಂದ ಪ್ರತ್ಯಕ್ಷವಾಗಿ ತೋರಿತು ಯಾರೋ ಒಬ್ಬ ಗುರುಭಕ್ತರು ಶೀ ಜಗದ್ಗುರು ರೇಣುಕಾಚಾರ್ಯರ ಜಯಂತೀದಿನವೆಸ್ಟು ಗೌರ್ನಮೆಂಟಿನಿಂದ ರಜಾ ದಿನವನ್ನಾಗಿ ಮಂಜೂರುಮಾಡಿಸುವಂತೆ ೧೧ ಠರಾವು ಪಾಸಾಗ ಬೇಕೆಂದು ಬರೆದು ಕಳಿಸಿದರೆ ಸಭಾ ಸಂಚಾಲಕರು ಅದನ್ನು ನೋಡಿದೊಡನೆಯೇ ಗಹಗಹಿಸಿ ನಕ್ಕು ಠರಾವನ್ನು ಹಿಂದಕ್ಕೊಗೆದು ಕುಳತೇಬಿಟ್ಟರು ಅಭಿಮಾನಿಗಳಾದ ಗುರುಭಕ್ತರು ಆ ಠರಾವನ್ನು ಹೊರಗೆಡವಬೇಕೆಂದು ೧೧ ಘಂಟೆ ಪ್ರಯತ್ನಮಾಡಿದರು ಆಗ ಅವರು ಧೈರ್ಯದಿಂದ ಆಡಿದ ಮಾತುಗಳವು.— ಏನ್ರಿ ಅಧ್ಯಕ್ಷರೇ! ನಾವು ಹಳ್ಳಿಯವರೆಂದೆ. ಉದಾಸೀನನೆಂ ? ಪಟ್ಟದ ಮಂದಿ ಹಿಂದಿನಿಂದ ಕೊಟ್ಟ ಎಸ್ಟೋ ಚೀಟ್ಟಿಗಳನ್ನು ಓದಿದಿರಿ ನಮ್ಮನ್ನೇನು ಕೇಳುವಂತೆಯೇ ಇಲ್ಲ ಅಧ್ಯಕ್ಷರು.—ಕೂಡ್ರಿರಿ, ನೀವು ಕೂಡ್ರಿರಿ ನೋಡೋಣ! ಹೀಗೆ ಪಾಪ ಸಂಭಾವಿತ ಗುರುಭಕ್ತರು ಕೂತು ಎಳುವುದನ್ನು ಎಣಿಸಿದ್ದಾದರೆ ನೂರಕ್ಕೇನು ಕಡಿಮೆಯಾಗುತ್ತಿರಲಿಲ್ಲ ಅಂತೂ ಇಂತೂ ಅಧ್ಯಕ್ಷರಿಗೆ ಗುರುಭಕ್ತರ ಕಾಟ ಹೆಚ್ಚಾಗಿ ಚಾಲಕರನ್ನು ಕೇಳಿದರು:—ಎಲ್ಲಿದೇ ತಕ್ರಿ ಆವರ ಠರಾವು ಜಾಲಕರು ಹೆ! ಹೆ! ಹೆ! ಹ! ಹ! ಹ! ಎಂದು ಹಲ್ಲುಕಿಸಿದು ಕೊಟ್ಟರು. ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ಬೇಸರವಾಯಿತು ಯಾವ ಮಹಾಚಾರ್ಯರಿಂದ ವೀರಶೈವವೆಂಬ ಹೆಸರು ಈ ಮತಕ್ಕೆ ಬಂದಿತೋ ಆ ಮತದ ಹೆಸರನ್ನೇ ಇಟ್ಟುಕೊಂಡು ಚೀರಾಡುವ ಈ ಮಹಾಸಭೆಯಲ್ಲಿ ಆ ಮಹಾಚಾರ್ಯರ ನಾಮದ ಸುಳಿವೇ ಇಲ್ಲ. ಕೊನೆಗೆ ಗುರುಭಕ್ತರ ಕಾಟದಿಂದ ಈ ಠರಾವು ಸರ್ವಾನುಮತಿಯಿಂದ ಪಾಸಾಯಿತೆನ್ನಿ. ಆದರೂ ಮಹಾಸಭೆಯವರು ಅದನ್ನು ಶೀಘ್ರವಾಗಿ ಜಾರಿಗೆ ತರುವರೋ ಇಲ್ಲವೋ ನೋಡಬೇಕಾಗಿದೆ

ಪ್ರಚಾರದಲ್ಲಿ ಬರಲು ಸಾಧ್ಯವಿಲ್ಲದ ಎಸ್ಟೋ ಠರಾವುಗಳು ಹೊರಬಿದ್ದವು. ವೇದವಾದಿಗಳು ಒಂದುವೇಳೆ ವಿರೋಧಿಸಿದರೆ ಬಹುಮತದಿಂದ ಪಾಸುಮಾಡಿಕೊಳ್ಳಬೇಕೆಂಬ ಹೇತುವಿನಿಂದ ಟಿಕೀಟ್ಟಿಲ್ಲದೆ ಹಿಂಡುಗಟ್ಟಿದರೆ ಜನಗಳನ್ನು ಈ ಥೇಟರಿನಲ್ಲಿ ತುಂಬಿಸಿಬಿಟ್ಟಿದ್ದರು ಪಾಪ ! ಸಧ್ಯರಾದ ವೇದವಾದಿಗಳು ಅಧರ್ಮ ಪ್ರಚಾರವನ್ನು ನೋಡಿ ಹೆಚ್ಚಾಗಿ ಮೌನವನ್ನೇ ಧರಿಸಿದ್ದರು. ಒಂದುಕಡೆ ಸಾಲಾಗಿ ಪಟ್ಟದವರೂ ವಿರಕ್ತರೂ ಫನ್ನ ಭಾವವನ್ನು ತೊರೆದು ರೈಲುಗಾಡಿಗಳಲ್ಲಿಯೂ ನಾಟಕ ಥೇಟರುಗಳಲ್ಲಿಯೂ ದುಡ್ಡುಕೊಟ್ಟವರೆಲ್ಲರೂ ಸಮಾನವಾಗಿ ಕೂತಿರುವಂತೆ ಕೂತಿದ್ದರು. ಈ ದೃಶ್ಯವು ಅವರವರ ಮಠಗಳಲ್ಲಿ ಅವರವರ ಪೂಜ್ಯಪೀಠಗಳಮೇಲೆ ನಡೆದರೆ ಆಗ ಇವರು ದ್ವೇಷವನ್ನು ಬಿಟ್ಟಿರುವರೆಂದು ತಿಳಿದೀತು. ಮಹಾಸಭೆಯೆಂದರೆ ಇದೂ ಒಂದು ನಾಟಕದ ಥೇಟರೇ ಸರಿ ಎಂದು ನುಡಿಯುತ್ತಿದ್ದರು ಕೆಲವರು ಈ ಸಭೆಗೆ ಬಂದ ಗುರುವಿರಕ್ತರಲ್ಲಿ ಅನೇಕರು ದೊಡ್ಡ ದೊಡ್ಡ ಪಂಡಿತರಿದ್ದರೆಂದು ಕೊನೆಗೆ ಗೊತ್ತಾಯಿತು. ಅಂತೂ ಇಂತಹ ದೊಡ್ಡ ದೊಡ್ಡ ಪಂಡಿತರ ಮುಂದೆ ಕೆಲಸಕ್ಕೆ ಬಾರದ ಹೊಲಸು ಠರಾವುಗಳು ಹೇಗೆ ಪಾಸಾದವೋ? ಆಶ್ಚರ್ಯವಾಗುವುದು. ಕೊನೆಗೆ ಅಂತಹ ಗುರುವಿರಕ್ತರನ್ನೂ ನಾನು ಸಂದರ್ಶಿಸಿದೆ. ಅವರು ಹೀಗೆ ಹೇಳಿದರು " ಈ ಹಿಂದೆ ಒಂದಲ್ಲ ಎರಡಲ್ಲ ೧೨ ಸಭೆಗಳು ಸಾಗಿವೆ. ಈ ಸಾರಿ ಸಭೆಯಲ್ಲಿ ಬಂದ ಠರಾವುಗಳಿಗಿಂತಲೂ ಕೆಲಸಕ್ಕೆ ಬಾರದ ಹೊಲಸು ಠರಾವುಗಳು ಹಿಂದಿನ ಸಭೆಗಳಲ್ಲಿ ಹೆಚ್ಚಾಗಿ ಪಾಸಾಗಿವೆ. ಅವೆಲ್ಲಾ ಬಿಳಿ ಕಾಗದದಮೇಲೆ ಕರಿ ಮಸಿಯಲ್ಲವೇ ? ಇವೂನೂ ಹಾಗೆಯೇ ಸರಿ. ನಮ್ಮ ಅಭಿಪ್ರಾಯವೇನೆಂದು ಇಲ್ಲಿ ಒಬ್ಬನೂ ವಿಚಾರಿಸುವವನಿಲ್ಲ, ಒಳ್ಳೇದು ಪಾಸಾಗಿ ಮುಂದೆ ಬರಲಿ, ನೋಡೋಣ! ಹಾರ್ಮೋನಿಟ್ ಆಗ ಗೊತ್ತಾಗುತ್ತದೆ ಅಣ್ಣಗಳದು ನಮ್ಮ ಮಠಗಳ ನ್ಯೇನೋ ಗೌರ್ನಮೆಂಟ್ ವಶಮಾಡುವರಂತೆ ! ಇವರಪ್ಪ ದುಡಿದುಕೊಟ್ಟ ಆಸ್ತಿ ! ಬರಲಿ ಕೆನ್ನೆಮೇಲೆ ಆಗ ಕೈ ತೋರಿಸೋಣ!" ಮುಂತಾಗಿ ನುಡಿದರು. ಏನಿದು ಮಹಾಸಭೆಯ ಸಲುವಾಗಿ ಎಷ್ಟೋ ಜನರು ಬಂದಿಲ್ಲ ಅದೇನೋ ಸರಿ ಬಂದವರೂ ಕೂಡ ಹೀಗೆ ಈ ಸಭೆಯನ್ನು ದ್ವೇಷಮಾಡುತ್ತಾರೆಂದಮೇಲೆ ಸಹಾನುಭೂತಿಯಾರಿಗಿದೆ ತಿಳಿಯಬೇಕೆಂದು ಮಹಾರಾಷ್ಟ್ರ ಪ್ರಾಂತದವರ ಕಡೆ ಹೋದರೆ " ಹೇ ಕಾಯ ಮಹಾ ಸಭಾ? ಹಲಕಟ್ ಸಭಾ " ಎನ್ನುವರು " ಯಹ ಕ್ಯಾ ಮಹಾಸಭಾ ಧರವಾಯೆ? ಇನ್ ಸ್ವಾರ್ಥಿ ಲೋಗೋಂಕಾ ಭಾವ ಪಹಲೆ ಮಾಲೂಂ ನೆಹೀ ಹುವಾ " ಎನ್ನುವರು ಕೆಲವರು " ಇಂಥವರೆಂಬುದು ಮೊದಲೇ ಗೊತ್ತಿದ್ದರೆ ನಾವು ಬರುತ್ತಿರಲೆ ಇಲ್ಲ " ಎಂದರು ಮೈಸೂರು ಕಡೆಯವರು ಮೊಗಲಾಯಿಕಡೆಯವರು ಹೀಗಾಗಿ ಎಲ್ಲಿ ನೋಡಿದರೂ ಸಭೆಗೆ ಧಿಕ್ಕಾರವೇ ಧಿಕ್ಕಾರವಾಗಿತ್ತು ಈ ಧರ್ಮಭ್ರಷ್ಟಸಭೆಯಿಂದ ಏನೂ ಉಪಯೋಗವಿಲ್ಲ, ವ್ಯರ್ಥ ದುಡ್ಡು ಹಾಳು ಧರ್ಮ ವಿರೋಧಿಯಾದ ಈ ಸಭೆಯನ್ನು ಬಹಿಷ್ಕರಿಸಲೇಬೇಕು ಎಂಬ ಶಬ್ದಗಳೇ ಶಬ್ದಗಳು.

ಅಧ್ಯಕ್ಷರು ಸಂಪನ್ನರೆಂದು ಮಾತನ್ನು ಎಲ್ಲರೂ ಹೇಳುತ್ತಿದ್ದರು ಅವರ ವರ್ತನೆಯಿಂದಲೂ ಹಾಗೆಯೇ ತೋರಿತು ಶಾಂತಿಯು ಪಾಂಡಿತ್ಯಕ್ಕೆ ಭೂಷಣವೇನೋ ಸರಿ ಆದರೆ ಅಧ್ಯಕ್ಷರು ಸಂಕರಪಂಥಿಗಳ ಹೇಳಿಕೆಯಂತೆಯೇ ನಾಗುವಸ್ತು ಸಭ್ಯತನವನ್ನು ಆ ಸ್ಥಾನದಲ್ಲಿ ತಾಳಿದುದು ಸಭೆಯ ಯಶಸ್ವಿತ್ವಕ್ಕೆ ಬಾಧೆತಂದಿತು

ವೇದಾಗಮ ವಿರೋಧವು ಸಭೆಯಲ್ಲಿ ಅಚ್ಚಗನ್ನಡದಿಂದ ಮಂಡಿಸಲ್ಪಟ್ಟಿತು. ಸೋಗುಹಾಕಿಕೊಂಡು ಕೆಲವರು ವಿರಕ್ತರನ್ನು ಬೈಯ್ದರು ಕೆಲವರು ಗುರುಗಳನ್ನು ಬೈಯ್ದರು ಇನ್ನು ಕೆಲವರು ಗುರುವಿರಕ್ತರನ್ನು ನಾವು ಬಹಿಷ್ಕರಿಸಿ ನಮ್ಮ ಕೆಲಸವನ್ನು ಈಗ ಬಹಳ ದಿನಗಳಿಂದ ಸಾಗಿಸುತ್ತಿದ್ದೇವೆ ಎಂದರು. ಅಂತೂ ಪಾಪಂಡಿಗಳೂ, ನಾಸ್ತಿಕರೂ, ಧೂರ್ತರೂ, ವೇದಾಗಮ ವಿರೋಧಿಗಳೂ ಈ ಸಭೆಯಲ್ಲಿ ಹೆಚ್ಚಾಗಿ ಭಾಗವಹಿಸಿದ್ದರೆಂದು ನಡೆಯುತ್ತಿದ್ದ ಕಾರ್ಯದಿಂದ ಎಂತಹ ಪಾಮರನಿಗೂ ಗೊತ್ತಾಗುವಂತಿದ್ದಿತು.

ಸಭೆಯಲ್ಲಿ ಇನ್ನೂ ಬಹಳ ವಿಚಾರಗಳು ಹಾಗೆಯೇ ನಿಂತವೆಂದು ಮುಖಂಡರು ಆಡಿದರು ಕಾರಣವೇನೋ ತಿಳಿಯಲಿಲ್ಲ ಸಭೆಯೇ ಆವರದಾಗಿರುವಾಗ ಅಷ್ಟು ಕಾರ್ಯವನ್ನಾದರೂ ಅದೇಕೆ ಶೇಷಗೊಳಿಸಿದರೋ? ವೇದವಾದಿಗಳಿಗೆ ಅಂಜಿರಬೇಕೋ ? ಪಾಪ ಸೊಲ್ಲಾಪುರದ ವಕೀಲರಾದ ಕಲ್ಯಾಣಶೆಟ್ಟರ ಯಾವ ಮಾತೂ ಈ ಸಭೆಯಲ್ಲಿ ಗಡಣಿಗೆ ಬರಲಿಲ್ಲ ಅವರೇನೋ ತಮ್ಮ ಮಾನವರ ಊರೆಂದು ಅವಮಾನವನ್ನು ಸಹಿಸಿರಲೂಬಹುದು!

ಸಭೆಯಲ್ಲಿ ಯಾವಬಗೆಯ ಸಿಸ್ತೂ ಇದ್ದಿಲ್ಲ. ಲೌಡ್ ಸ್ಪೀಕರಿನಲ್ಲಿ ಮನಸ್ಸಿಗೆ ಬಂದವರೆಲ್ಲರೂ ಕೂಗಿಕೊಂಡದ್ದೇ ಕೂಗಿಕೊಂಡದ್ದು ! ಪ್ರತಿನಿಧಿಗಳ ಊಟದ ವ್ಯವಸ್ಥೆಯನ್ನಂತೂ ವರ್ಣಿಸುವಂತಿಲ್ಲ. ಶಿವಪೂಜಾಗೃಹವೆಂದು ಹೆಸರು, ಒಳಗೆ ಎನೂ ಗಂಧವಿಲ್ಲ ಅಡಿಗೆಯೋ ಬದನೆಕಾಯಲ್ಲಿ ಎಣ್ಣೆ ತೇಲಬೇಕು ಹಂಚಿಗಿಂತಲೂ ಗಟ್ಟಿಯಾವ ಸಜ್ಜಿ ರೊಟ್ಟಗಳು ಕೆಲವರ ಸೋಟಿಗಳನ್ನು ಹರಿದಿರಬೇಕು. ಇಂಥಾದ್ದರಲ್ಲಿ ಪ್ರಶಂಸಿಗಾಗಿ ಜಿಲೇಬಿಯನ್ನು ಬೇರೆ ಬಡಿಸಿದರು. ಮುಗ್ಗೆನ್ನೆ ವಾಸನೆ, ಮರುದಿನ ಎಲ್ಲರ ಗಂಟಲೂ ಹಿಡಿದು ಮಾತಿಗೊಮ್ಮೆ ಪೆಪ್ಸ್ ಗುಳಿಗೆಗಳನ್ನು ಉಪಯೋಗಿಸಬೇಕಾಗುವಂತಿದ್ದಿತು. ಈ ಭೋಜನಸುಖವನ್ನನುಭವಿಸಿದವರು ಅನೇಕರಿರಬಹುದು. ಇದನ್ನು ನೋಡಿ ಎಸ್ಟೋ ಪ್ರತಿನಿಧಿಗಳು ಹುಬ್ಬಳ್ಳಿಯ ಅನೇಕ ಮಠಗಳಲ್ಲಿಯೂ ಶ್ರೀಮಂತರ ಗೃಹಗಳಲ್ಲಿಯೂ ಪಾನಾವಳಿಗಳಲ್ಲಿಯೂ ಅತಿಥಿಗಳಾಗಬೇಕಾಯಿತು.

ಅಂತೂಇಂತು ಬಂದಿದ್ದವರೆಲ್ಲರೂ ದುಡ್ಡುದಂಡ, ಏನೂ ಪ್ರಯೋಜನವಾಗಲಿಲ್ಲವೆಂತಲೇ ರಾಗ ತೆಗೆಯುತ್ತಿದ್ದರು. ಮಹಾಸಭೆಯ ಆಕಾರವೇ ಇತ್ತೀಚೆಗೆ ಪೂರಾ ಬದಲಾಗಿದೆ ಎಂತಲೂ ಕೇವಲ ಜಂಗಮ (ಮಾಹೇಶ್ವರ) ದ್ರೋಹಿಗಳ ಗುಂಪೇ ಇದರಲ್ಲಿ ಭಾಗವಹಿಸಿ ಪೂರ್ವಪರಂಪರೆಗೆ ಧಕ್ಕೆಯನ್ನೊಡ್ಡಿರುವುದೆಂತಲೂ ಇನ್ನಾದರೂ ವೇದಮಾರ್ಗಾವಲಂಬಿಗಳಾದ ಸಕಲ ಭಕ್ತಮಾಹೇಶ್ವರರೂ ಎಚ್ಚರಗೊಂಡು ತಮ್ಮ ನಿಜಧರ್ಮೋನ್ನತಿಯನ್ನು ಬೇರೆ ಸಭೆಗಳ ದ್ವಾರಾ ಮಾಡಿಕೊಳ್ಳಬೇಕೆಂತಲೂ ಅನೇಕ ಮುಂದಾಳುಗಳು ಮಾತನಾಡಿದರು.

ಬಸವಪಂಥಿಗಳು ಕಾರ್ಯಸಾಧನೆಗಾಗಿ ಗುರುವಿರಕ್ತರ ಕಲಹವನ್ನು ಮುಂದೊಡ್ಡಿದ್ದಾರೆ. ಇವರೆಲ್ಲರೂ ಮಾಹೇಶ್ವರರಿಗೆ ಗುಡ್ ಮಾರ್ನಿಂಗನ್ನೂಕೂಡ ಮಾಡದ ಕನ್ವರ್ಟರೇ! ಇತರರಾರೂ ಇದರಲ್ಲಿ ಭಾಗವಹಿಸಿಲ್ಲ. ಇಪ್ಪತ್ತೊಂದು ಅಥವಾ ಅದಕ್ಕೂ ಹೆಚ್ಚು ಸಾವಿರ ರೂಪಾಯಿಗಳನ್ನ ಹಾಳುಮಾಡಬೇಕೆಂದು ಗುರುವಿರಕ್ತರೆಂಬ ಜಿಂಕೆಗಳಿಗೆ ಬಲೆಯನ್ನೊಡ್ಡಿದರು. ಮರಿಜಿಂಕೆಯೊಂದು ಹದನವಾದ ಹಲ್ಲಿನಿಂದ ಹೆಣೆಕೆಯ ಬಲೆಯನ್ನು ಕಡಿದು ತಿನ್ನಲು ಆರಂಭಿಸಿತು. ನಾವು ಜನ್ಮದಲ್ಲಿಯೇ ಕಾಣದ ಹೊಸ ಬಲೆಯಿದು ಬಹು ಹಸನಾಗಿದೆ ಎಂದು ಎಲ್ಲವೂ ಪೂರ್ಣವಾಗಿ ಮೆಲುಕಾಡಿಸಿದವು. ಸರಿ! ಯುಕ್ತಿಯೆಲ್ಲವೂ ನಿಷ್ಫಲವಾಯಿತು. ಮತ್ತೆ ಮುಂದಿನ ಸಭೆಯೊಳಗಾಗಿ ಈ ಬಲೆಯನ್ನು ಹೇಡಿದು ತಯಾರಿಸೋಣವೆಂದು ತಮ್ಮೊಳಗೇ ಹಾಡಿಕೊಂಡರು.

ಮಹಾಸಭೆಯಿಂದಮೇಲೆ ಇಂತಹ ಅನಂತ ದೃಶ್ಯಗಳು ನಾವೆಲ್ಲೇ ನಿಂತರೂ ನಮ್ಮ ಮುಂದೆ ಬಂದು ನಿಲ್ಲುತ್ತಿದ್ದವು. ಒಟ್ಟನಮೇಲೆ ಈ ಅನಂತ ದೃಶ್ಯಗಳ ಫಲವಾಗಿ ನನಗೆ ನೋಡಬೇಕೆಂದರೆ ಅಲ್ಲಿ ಗುರುವಿರಕ್ತರ ಕಲಹದ ಸುದ್ದಿಯೇ ಇಲ್ಲ. ಅಗಂತುಕ ಲಿಂಗಾಯಿತ ಹಾಗೂ ಅಗಂತುಕ ಜಂಗಮರ ಕಲಹವೇ ಹೆಚ್ಚಾಗಿರುವುದೆಂದು ಪ್ರತ್ಯಕ್ಷವಾಯಿತು. ಅದರಿಂದ ಗುರುಜಂಗಮರನ್ನೊಪ್ಪದ ಅಗಂತುಕ ಮಿಶ್ರ ಲಿಂಗಾಯಿತರು ತಮ್ಮ ಈ ಗುರುಜಂಗಮರೊಡವಿರುವ ಕಲಹವನ್ನು ತಮ್ಮ ವಚನಪದ್ಧತಿಯಂತೆ ಬಗೆಹರಿಸಿಕೊಳ್ಳಬೇಕಾದುದು ಅತ್ಯವಶ್ಯಕವಾಗಿದೆ. ಮುಂದಿನ ಮಹಾಸಭೆಯೊಳಗಾಗಿ ೩೧ ಸಾವಿರ ರೂ. ಗಳನ್ನು ಕೂಡಿಸಿ ತಮಗೆ ಬೇಕಾದ ಯಾವ ಪರಮತೀಯ ಶಾಸ್ತ್ರಸಂಪನ್ನನಾದ ಜಡ್ಜನನ್ನಾದರೂ ನಿಯಮಿಸಿಕೊಂಡು ಅಗಂತುಕರ ಅಂತಃಕಲಹವನ್ನು ಬಗೆಹರಿಸಿಕೊಳ್ಳಲಿ ಎಂದು ರಹಸ್ಯವಿದರು ಬಹಿರಂಗವಾಗಿ ಮಾತನಾಡಿಕೊಂಡರು.

ಇನ್ನು ಕೆಲವರು ಅಗಂತುಕ ಮಿಶ್ರ ಲಿಂಗಾಯತರಿಂದಲೇ ಕೋಲಾಹಲಕ್ಕೆ ಕಾರಣವಾಗಿದೆ, ಆದುದರಿಂದ ಅವರೊಂದುಗುಂಪು ಬೇರೆಯಿರಲಿ, ಪಾರಂಪರ್ಯವಿಡಿದುಬಂದ ಶುದ್ಧ ವೀರಶೈವರೆಲ್ಲರೂ ಪರಂಪರಾಗತ ಗುರುಜಂಗಮರನ್ನು ಮುಂದಿಟ್ಟುಕೊಂಡು ವೇದಾಗಮ ನ್ಯಾಯಾದಂತೆ ನಡೆಯುವುದಕ್ಕಾಗಿ ಪ್ರತ್ಯೇಕ ಸಭೆಯೊಂದನ್ನು ಕೂಡಿಸುವುದು ಮುಖ್ಯಕರ್ತವ್ಯವೆಂತಲೂ ಆ ಸಭೆಗೆ " ಅಖಿಲಭಾರತ ವೀರಶೈವ ಧರ್ಮಸಮ್ಮೇಲನ" ವೆಂಬ ಹೆಸರನ್ನಿಡಬೇಕೆಂತಲೂ ನಿರ್ಣಯಿಸಿಕೊಂಡು ಇಷ್ಟರಲ್ಲಿಯೇ ಪ್ರಚಾರಕಾರ್ಯವನ್ನು ಮಾಡುವೆವೆಂದೂ ಪಂಥಮಾಡಿದರು.

ಕೆಲವರು ಅಂತೂ ಇಂತೂ ಹುಬ್ಬಳ್ಳಿಯಲ್ಲಿ ಮಹಾಸಭೆ ಕೂಡಿದುದು ಕುಲವಂತರ ಅವಮಾನಕ್ಕಾದರೂ ಫಲತಃ ಅವರ ಉನ್ನತಿಗೆ ಸಾಧಕವಾದುದನ್ನಾಗಿ ನೋಡಿದರೆ ಈ ಸಾರಿಯ ಮಹಾಸಭೆಯನ್ನು ಪ್ರಶಂಸಿಸಬೇಕಾಗಿದೆ ಎಂದರು

ಪೂರ್ವಪರಂಪರೆಯನ್ನು ಹಿಡಿದು ನಡೆಯಲಿಚ್ಛೈಸುವ ಳ್ಳವರೂ ಗುರುಜಂಗಮ ಭಕ್ತರೂ ಆದ ಮಹಾರಾಷ್ಟ್ರ, ಕರ್ನಾಟಕ, ತೈಲಂಗ, ದ್ರಾವಿಡ ಮೊದಲಾದ ಪ್ರಾಂತಗಳ ವೀರಶೈವರು ಆದಷ್ಟು ತೀವ್ರವಾಗಿ ಪಂಥಮಾಡಿದ ಕಾರ್ಯದಲ್ಲಿ ಭಾಗವಹಿಸಿ " ಅಖಿಲಭಾರತ ವೀರಶೈವ

ಧರ್ಮಸಮ್ಮೇಲನವನ್ನು ಕೂಡಿಸಿ ವೇದಾಗಮ ಸಮ್ಮತವಾಗಿ ನಮ್ಮ ವೀರಶೈವಮತವನ್ನು ಸುಧಾರಿಸಿ ಸನ್ಮಾರ್ಗದಲ್ಲಿ ನಡೆದು ವೀರಶೈವವನ್ನು ತವು ಮೊದಲಿಗಿದ್ದ ಮಹೋನ್ನತ ಶಿಖರವನ್ನೇರುವಂತೆ ಯತ್ನಿಸಲೆಂದು ಆ ಕಾಲದಲ್ಲಿಯೇ ಅನೇಕರು ಅವರಿಗೆ ಶುಭವನ್ನು ಕೋರಿದರು. ಸಮಯ ದೊರತರೆ ಇನ್ನೂ ಬರೆಯಬೇಕಾದುದನ್ನು ಮುಂದುವರಿಸೋಣ ! ಕಂಡುದು ಇನ್ನೂ ಬಹಳವಿದೆ

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

ಹೊಸಪೇಟೆಯ ವಿರಕ್ತಸ್ವಾಮಿಗಳಿಗೆ ಬುದ್ಧಿವಾದ !

ವೀರಶೈವ ಮಹನೀಯರಲ್ಲಿ ವಿನಂತಿ.

ಬಳ್ಳಾರಿ ಡಿ॥ ಹೊಸಪೇಟೆಯಲ್ಲಿ ಮೊನ್ನೆ ನೊನ್ನೆ ವಿರಕ್ತಮಠದ ಅಧಿಕಾರಕ್ಕೆ ಬಂದಿರುವ ಕೊಟ್ಟೂರು ಸ್ವಾಮಿಗಳೆಂಬವರು. ಹೊಸಪೇಟೆಯು ಅವರಿಗೆ ಜನ್ಮಸ್ಥಾನವಾದುದರಿಂದ ಅಲ್ಲಿಯೇ ವಾಸಿಸಿರುವರು ಇವರು ಮೊದಲು ಈ ಗ್ರಾಮದ ವೀರಶೈವ ಮಹಾಜನರಲ್ಲಿ, ನಮ್ಮಲ್ಲಿ, ವಿರಕ್ತ, ಗುರುಸ್ಥಲ, ಎಂಬ ಭೇದಭಾವನೆಯಿರುವುದಿಲ್ಲ ನಾನು ನನ್ನ ಮಠವು ಹೀನಸ್ಥಿತಿಯಲ್ಲಿರುವುದರಿಂದ ಸುಧಾರಣೆ ವ್ಯವಸ್ಥೆ ಮಾಡುತ್ತೇನೆ ತಾವೆಲ್ಲರೂ ಸಹಕರಿಸಿ ಸಹಾಯಮಾಡಬೇಕೆಂದು ಪ್ರತಿಯೊಬ್ಬ ಜನರಲ್ಲಿ ವಿಜ್ಞಾಪಿಸಿಕೊಂಡನೇರೆಗೆ ಯಾವತ್ತು ವೀರಶೈವರು ಒಮ್ಮನಸ್ಸಿನಿಂದ ಸಹಾಯಮಾಡುತ್ತ ಈ ಸ್ವಾಮಿಗಳಲ್ಲಿ ಪ್ರೇಮಿಗಳಾಗಿದ್ದರು. ಆದರೆ ಈ ಸ್ವಾಮಿಗಳು ಹೋದತಿಂಗಳಲ್ಲಿ ತಮ್ಮ ಗೋಮುಖ ವ್ಯಾಘ್ರಬುದ್ಧಿಯನ್ನು ತೋರ್ಪಡಿಸಿಕೊಂಡರು ಅದರ ವಿವರವೇನೆಂದರೆ—ಹೊಸಪೇಟೆಯು ಪೂರ್ವದಿಂದಲೂ ಗುರುಸ್ಥಲದವರ ಮುಖ್ಯಬೀಡಾಗಿದೆ ಎಂಬುದನ್ನು ಬೇರೆ ಹೇಳಲು ಕಾರಣವಿಲ್ಲ ಇಂಥ ಗ್ರಾಮದಲ್ಲಿ ಈ ಸ್ವಾಮಿಗಳು ಭಕ್ಷಾಟನೆಗೆ ಹೊರಟು ಜಾಲಿಕಲ್ಲಟ್ಟಿಪ್ಪನವರು ಎಂಬ ಸದ್ಭಕ್ತರ ಮನೆಯಲ್ಲಿ ಭಿಕ್ಷಾಟನೆಗೆ ಹೋಗಿ, ಅವರ ಮನೆಯ ಬಾಗಿಲಮೇಲೆ ಇರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ತೆಗೆಯಿಸಿದರೆ ಒಳಗೆ ಬರುತ್ತೇವೆ ನಾವು ಈ ಚಿತ್ರದ ಕೆಳಗೆ ಬರುವುದಿಲ್ಲವೆಂದು ಹೇಳಿ ಚಿತ್ರಪಟವನ್ನು ಕೆಳಗಿಡಿಸಿ ತಮ್ಮ ಭಾವಚಿತ್ರವನ್ನು ಪೂಜಿಸಲು ಜಗಲಿಯಮೇಲೆ ಇಡಿಸಿ ಹೋಗಿದ್ದರು ಇವರು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಆ ಮನೆಯ ಯಜಮಾನ ಕಲ್ಲಟ್ಟಿಪ್ಪನವರು ಜಗದಾಚಾರ್ಯರ ಭಾವಚಿತ್ರವನ್ನು ತೆಗೆಯಿಸಿದ ಸಮಾಚಾರವನ್ನು ಕೇಳಿ ರೇಗಿ ಗದ್ದಲಮಾಡುತ್ತಿರಲು, ಯಾವತ್ತು ಗುರುಭಕ್ತ ತರುಣರು ಸ್ವಾಮಿಗೆ ಅಗೌರವ ಮಾಡದೆ ಬಿಡುವದಿಲ್ಲವೆಂದು ಕೋಪಾತುರರಾಗಿ ಹೋಗುತ್ತಿರಲು ವೀರಶೈವಮುಖಂಡರು ಧಾವಿಸಿ ಬಂದು ಬುದ್ಧಿಯಿಲ್ಲದೆ ಹುಡುಗತನದಿಂದ ಮಾಡಿದ್ದಾರೆ ನಾನೆಲ್ಲ ಬುದ್ಧಿ ಹೇಳುತ್ತೇನೆ, ಕೇಳದೆ ಇದ್ದಲ್ಲಿ ನಾವೇ ಆ ಸ್ವಾಮಿಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡುತ್ತೇವೆಂದು ತರುಣರನ್ನು ಸಮಾಧಾನಗೊಳಿಸಿ ಆ ಸ್ವಾಮಿಗಳನ್ನು ವಿಚಾರಿಸಲು ಅವರು ಭಯಪಟ್ಟು, ನಾನು ಇನ್ನು ಮುಂದೆ ಎಂದೆಂದೂ ಇಂಥ ಕೆಟ್ಟಕೆಲಸವನ್ನು ಮಾಡುವದಿಲ್ಲ, ಕ್ಷಮಿಸಬೇಕೆಂದು ಕ್ಷಮಾಪಣೆ ಕೇಳಿಕೊಂಡನೇರೆಗೆ ಕ್ಷಮಿಸಿದರು. ಅಲ್ಲದೆ ಅವರಿಗೆ ಶ್ರೀ ಮಜ್ಜಗದ್ಗುರು ಪಂಚಾಚಾರ್ಯ ಮತಸ್ಥಾಪನಾಚಾರ್ಯರಲ್ಲಿ ಸಾಯುವವರೆಗೆ ಪೂಜ್ಯಬುದ್ಧಿಯಿಂದ ಇರಬೇಕೆಂದು ಬೋಧಿಸಿದರು. ಈ ಗಲಾಟೆಯನ್ನು ಶಾಂತಗೊಳಿಸಿದ ವೀರಶೈವ ಮುಖಂಡರಿಗೆ ನಮ್ಮ ಅನಂತ ವಂದನೆಗಳು.

ವಿದ್ಯಾಹೀನರಿಂದ ಮಠುಗಳನ್ನು ಮರ್ಯಾಧಿಕಾರಕ್ಕೆ ತರುವದರಿಂದ ಇಂಥ ಅಚಾತುರ್ಯ ಕಾರ್ಯಗಳು ಜರುಗಿ ಜನಾಂಗದಲ್ಲಿ ಅಂತಃಕಲಹಗಳು ಉಂಟಾಗುವದರಿಂದ ವೀರಶೈವರು ಮಠುಗಳ ಯೋಗ್ಯತಾದಿಗಳನ್ನು ವಿಚಾರಿಸದೆ ಅಧಿಕಾರಮಾಡಬಾರದೆಂದು ವಿನಂತಿಮಾಡಿಕೊಳ್ಳುತ್ತೇವೆ

1. ಮತದ ಗಂಗಾಧರಯ್ಯ, 2 ಜಾಲಿ ಕಲ್ಲಟೆಪ್ಪ, 3. ಮೂಲಿಮತದ ಬಸಯ್ಯ, 4 ಜಾಲಿ ಕೊಟ್ರೆಪ್ಪ, 5. ಜಾಲಿ ಶಂಪಣ್ಣ, 6. ಎಸ್. ರೇವಪ್ಪ.

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

"ಕಣ್ಮರೆಯಾದ ಪ್ರವಚನಕಂಠೀರವನೇ"

ಶ್ರೀಯು ಭಾರತದೇಶವಲಯದೆ |
ಗೇಯನಾದೆಲೊ ದಿವ್ಯಜ್ಯೋತಿಯೆ |
ಕಾಯರೂಪದಿ ದೋರಿದೊಂದಿನ ದಿವ್ಯಪ್ರಭೆಯಿಂದ ||
ಹೇಯಮಾರ್ಗದ ಸ್ಥಿತಿಯ ತುಂಡಿಸಿ |
ಕಾಯಜಾರಿಯ ತಶ್ರ್ವವೇಳುತ |
ಮಾಯವಾದೆಲೊ ಸ್ಥಿತಿಯೊಳುನ್ನತಮಾದ
ಮಾರ್ಗದೊಳು ||೧||

ಪಂಚಗುರುಗಳ ಕೃಪೆಯ ಫಲದಿಂ |
ಪಂಚಶಕ್ತಿದ ತಿರುಳ ತಿಳುಹಿಸಿ |
ಪಂಚಶೀಲಗಳರವ ತೋರಿಸಿ ಜಗದಿ ತೊಳಗಿದೆ ||
ವಂಚನಿಲ್ಲದೆ ವಿಶ್ವಧರ್ಮದ |
ಸಂಚಿತವನುರಿ ಘೋಷಿಸುತ್ತಲಿ |
ಪಂಚಲಿಂಗೋದ್ಭವರ ಸಿದ್ಧಾಂತವನು ಬೀರಿದೆ ||೨||

ಚಾರುಚಂದಿರನಿಂದ ಶೋಭಿತ |
ಸಾರಮೂರ್ತಿಯಲಡಗಿದಗ್ರಜ |
ಸಾರುತಿರ್ಪುದು ಸುಜನವೃಂದವು ನಿನ್ನ ತೇಜವನು ||
ವೀರಶೈವಾಚಾರ್ಯವಂಶದೆ |
ವೀರಗೌತ್ರದೆ ಜನಿಸಿ ಭುವನದೆ |
ಧೀರಪಂಚಾಕ್ಷರಸುನಾಮಕ ಶಾಸ್ತ್ರಿಯೆನಿಸಿದೆ ||೩||

ಕ್ಷಣವು ಬಿಡದಲೆ ಸೂರ್ಯನಂತೆಯೆ |
ದಣಿವು ಇಲ್ಲದೆ ಧರ್ಮರಾಜ್ಯಕೆ |
ಚಣದೊಳುನ್ನತಪ್ರಭೆಯದೋರಿದ ಮೂರ್ತಿ
ಮರೆಯಾದೆ ||

ರೋಣಪಮಾರ್ಗದ ಕೃತಿಯ ಜನರನು |
ತಡೆಪುಗೊಳ್ಳುವ ಬಂಹದಿಂದಲಿ |
ಮಣಿಸಿ ಸನ್ಮಾರ್ಗಕ್ಕೆ ತಂದಿಹ ಮೂರ್ತಿಮರೆಯಾದೆ ||೪||

ರಸಿಕಮೂರ್ತಿಯೆ ವಂಶಿರೋಳದೆ |
ವಸುಧಿಯೊಳು ಪೆಸರಾಂತ ಮಾದಲಿ |
ಸೆಸರುಪೊಂದುತ ಪೊಂದೆ ಮೂವತ್ನಾಲ್ಕುವರ್ಷದಲಿ ||
ಲಸಿತಮಹಿಮನೆ ಕಾಲಚಕ್ರದ |
ಬಸಿದ ಸಂಕರಬಾಣದಿಂದಲಿ |
ಶಶಿಧರಾತ್ಮಜಧರ್ಮ ನಶಿಸುವದೆಂದುತಿಳಿಪುದಕೊ ||೫||

ಶಾಸ್ತ್ರದಲ್ಲಿದ್ದುದನು ಪೇಳುವ |
ಶಾಸ್ತ್ರಮಾಲಿಕೆಯಲ್ಲಿ ಬೆಳಗಿದೆ |
ಶಾಸ್ತ್ರಿ ನೀಂ ನಿಶ್ಚಲದಿ ಜೀವನ್ಮುಕ್ತನೆನಿಸಿದೆ ||
ಶಾಸ್ತ್ರಬಲದಿಂ ದೇಶಮಧ್ಯದೆ |
ಶಾಸ್ತ್ರಮಾರ್ಗವ ಪೇಳಿ ಜನರಲಿ |
ಶಾಸ್ತ್ರಸುಧೆಯಂ ಕುಡಿವಸತ್ಪಥದೋರಿಬಯಲಾದೆ||೬||

ಸ್ತ್ರೀತ್ವಧರ್ಮದೆ ಮೆಲ್ಲವಾಂಬೆಯು |
ಸ್ತ್ರೀತ್ವಧರ್ಮದೆ ಮೂಳದೇವಯ |
ಸ್ತ್ರೀತ್ವಧರ್ಮದೆ ಸೀತೆದ್ರೌಪದಿ ತಾರೆ ಮುಮ್ಮೈಯರು ||
ಸ್ತ್ರೀತ್ವಪದವನು ಪಡೆದರಾವರ |
ಸ್ತ್ರೀತ್ವಮಹಿಮೆಯ ತಿಳಿಸಿ ದೇಶದೆ |
ಸ್ತ್ರೀತ್ವಧರ್ಮವ ಬೀರಿ ಬೆಳಗಿದೆ ಬೇಗ ಲೈಲಾದೆ ||೭||

ಕೇಣಮಾದೀವೀರಶೈವದೆ |
ಮಾಣಿಕಾಮಣಿಯಂತೆ ಶೋಭಿಸಿ |
ಜಾಣಮೂರ್ತಿಯೆ ನಿನ್ನ ಪೊಂಪೆಯೊ ಸುಪ್ರಕಾಶದೊಳು ||
ರೇಣುಕಾದ್ಯಾಚಾರ್ಯರೈವರ |
ಕ್ಷಾಣಪದದ ರೂಪಿ ನೀನೆರೊ |
ಕಾಣು ಗುರುಪದಮುಟ್ಟಿಬೇಗನೆ ಪುಟ್ಟನೀಬಾರೊ ||೮||

ಜೈತ್ರನೇ ಮತಚೂತಕಾನನ |
ಜೈತ್ರನೇ ಚಿರಕೀರ್ತಿ ಪೊಂದಿದೆ |
ಮೈತ್ರಭಾವದೆ ವಿಶ್ವಜಗವನು ನೀನು ಸೆಳೆದಿರ್ದೆ ||
ಧಾತ್ರಿಯೊಳ್ ಬೆಳಗರ್ಪ ಪ್ರಭೆಯದು |
ಜೈತ್ರಮಪಸಿಸು ನಿನ್ನ ಛಾಪದಿ |
ಮೈತ್ರಿಯಿಂ ಕೋರುವೆನು ನಿನ್ನಾತ್ಮಕ್ಕೆ
ಶಾಂತಿಯನು ||೯||

ಶ್ರೀ ಪಂಚಾಕ್ಷರಶಾಸ್ತ್ರೀ ಕೀ ಜೈ !

ದುಃಖಭಾಗೀ
ಶಿವಯ್ಯ ಹಿರೇಮಠ, ಸ್ಕೂಲಮಾಸ್ತರ, ಕಾತರಕಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ದುಃಖಪ್ರದರ್ಶನಸಭೆ.
ಮುಳಗುಂದ

ಧಾರವಾಡ ಡಿ॥ ಶಿರೋಳಗ್ರಾಮದ ಹಿರೇಮಠಾಧ್ಯಕ್ಷರೇ॥ ಪಂಚಾಕ್ಷರಶಾಸ್ತ್ರಿಗಳವರು ತಾ॥ ೧೧-೧೨-೩೮ನೇ ರವಿವಾರದಿವಸ ಶಿವಾಧೀನರಾದ ಬಗ್ಗೆ ಶ್ರೀಜಗದ್ಗುರು ಅಭಿನವರೇಣುಕ ವಾಚನಾಲಯದಲ್ಲಿ ರೊಟ್ಟಿಗವಾಡ ಬೃಹನ್ಮಠಾಧ್ಯಕ್ಷ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಗೂಡಿತ್ತು. ಸಭೆಗೆ ಅನೇಕ ಗುರುಭಕ್ತರು ಆಗಮಿಸಿದ್ದರು ಅಧ್ಯಕ್ಷರು ಶಾಸ್ತ್ರಿಗಳವರ ಗುಣವರ್ಣನೆಯನ್ನು ಈ ಕೆಳಗೆ ಕಾಂತೆ ಮಾಡಿದರು. 'ಶಾಸ್ತ್ರಿಗಳು ಧರ್ಮಾಭಿವೃದ್ಧಿಕಾರ್ಯದಲ್ಲಿ ಅತ್ಯಂತ ಉತ್ಸಾಹಿಗಳೂ, ಧಾರ್ಮಿಕ ವಿದ್ಯಾವಿಶಾರದರೂ, ವೈದಿಕ ಶಕ್ತನೇತ್ರರೂ ಜ್ಯೋತಿಷ ಪಂಡಿತರೂ ಆಗಿದ್ದರಲ್ಲದೆ ಸುಪ್ರಸಿದ್ಧ ಲೇಖಕರೂ ಭಾಷಣಕಾರರೂ ಆಗಿದ್ದರು. ಇವರಲ್ಲಿ ಗುರುಭಕ್ತಿಯು ರೋಮರೋಮದಲ್ಲಿ ಪ್ರಕಾಶಿಸುತ್ತಿದ್ದುದನ್ನು ನೋಡಿದರೆ ರಾಮಾಯಣಕಾಲದ ಆಂಜನೇಯನ ನೆನಪಾಗದಿರಲಾರದು

ಇವರ ಲೇಖಗಳು ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿಯೂ, ವೀರಶೈವ ವಾಸಿಷ್ಠಪತ್ರಿಕೆಯಲ್ಲಿಯೂ ಪ್ರಕಟವಾಗುತ್ತಿರುವದನ್ನು ನೋಡಿದೊಡನೆ ಎಂಥ ನಾಸ್ತಿಕನಿದ್ದರೂ ಅವನಿಗೆ ಆಕ್ಷಣದಲ್ಲಿಯೇ ಆಸ್ತಿಕಭಾವವು ಉದಯಿಸುತ್ತಿತ್ತು ಅಲ್ಪಾಯುಷ್ಯದಲ್ಲಿಯೇ ಅಸಾಧ್ಯ ವಿದ್ವತ್ತನ್ನು ಸಂಪಾದಿಸಿ ವೀರಶೈವ ಸಮಾಜವನ್ನೇ ಚೇತರಿಸಿ ನಾಸ್ತಿಕರಿಗೆ ಅಂಕುಶಪ್ರಾಯರಾಗಿ ಹೋದ ಶಾಸ್ತ್ರಿಗಳ ಜನ್ಮವೇ ಧನ್ಯ ! ಧನ್ಯ !"

ಸರ್ವರೂ ಶ್ರೀ ಶಾಸ್ತ್ರಿಗಳವರಲ್ಲಿದ್ದ ನಿಸ್ವಾರ್ಥತೆ, ಗುರುಕಾರ್ಯದಕ್ಷತೆ, ಹರಗುರುಭಕ್ತಿಯನ್ನು ಮಾದರಿಯಾಗಿಟ್ಟುಕೊಂಡು ವರ್ತಿಸಬೇಕೆಂದು ಬೋಧಿಸಿ, ಶಾಸ್ತ್ರಿಗಳವರ ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸಲೆಂದು ಶ್ರೀ ಭಗವತ್ಪಾದ ಜಗದಾಚಾರ್ಯರನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದರು. ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ವಾಚನಾಲಯದ ಸೆಕ್ರೆಟರಿ,
ವಿರೂಪಾಕ್ಷಪ್ಪ, ಚಿನ್ನಬಸವಪ್ಪ ಗೋಣಿ

ದುಃಖಪ್ರದರ್ಶನಸಭೆ, ಧೋತ್ರಿ.

ಸೊಲ್ಲಾಪುರ ಡಿ॥ ಧೋತ್ರಿಗ್ರಾಮದ ವೀರಶೈವರುವೇ॥ ಶಿರೋಳ ಹಿರೇಮಠದ ಪಂಚಾಕ್ಷರಶಾಸ್ತ್ರಿಗಳವರ ನಿಧನಕ್ಕಾಗಿ ದುಃಖಪ್ರದರ್ಶನವನ್ನು ಮಾಡಿ ಶಾಸ್ತ್ರಿಗಳ ಗುಣಗಾನವನ್ನು ಮಾಡಿದರು ಶಾಸ್ತ್ರಿಗಳು ಮಹಾ ಪ್ರಯತ್ನಶೀಲರೂ, ಸಮಾಧಾನಿಗಳೂ ಕರ್ತವ್ಯ ದಕ್ಷರೂ ಉತ್ತಮ ಲೇಖಕರೂ, ಭಾಷಣಕಾರರೂ ಆಗಿದ್ದರಲ್ಲದೆ, ಬಸವಪಂಥಿಗಳಿಗೆ ಕುಠಾರಪ್ರಾಯರಾಗಿದ್ದರೆಂದು ಕೆಲವರು ಭಾಷಣಮಾಡಿದರು. ಪರಮೇಶ್ವರನು ಇಂತಹ ವ್ಯಕ್ತಿಗಳನ್ನು ಅನಂತಾನಂತವಾಗಿ ಉದಯಿಸುವಂತೆ ಅನುಗ್ರಹಿಸಲೆಂದು ಸರ್ವರೂ ಕೋರಿದರು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ಝುಂಪಪ್ಪ, ಗಂಗಪ್ಪ, ಬಿರಾಜದಾರ.
ವೀರಶೈವ ಧರ್ಮಸುಧಾರಣಸಂಘ, ಧೋತ್ರಿ.

ಪ್ರಶ್ನೋತ್ತರರತ್ನಮಾಲಿಕಾ

ಪ್ರ—ನಿಯತಿ ಎಂದರೇನು ?

ಉ—ಜನ್ಮಾಂತರ ಕರ್ಮರೂಪವಾದ ದೈವದಲ್ಲಿ ಈ ಕರ್ಮಕ್ಕೆ ಈ ಪ್ರಕಾರ ಫಲವಾಗತಕ್ಕದ್ದೆಂಬ ಪರಮಾತ್ಮನ ಕಟ್ಟಾಜ್ಞೆ (ಆಜ್ಞೆ)ಯು ಅಂದರೆ ಸ್ತ್ರೀಸ್ವಭಾವದಿಂದಲೆ ಕಠೋರಳಾದ ಈ ನಿಯತಿಯು ಶ್ರದ್ಧಾವಾದ ಪತಿಗೆ ಶಾಂಖೂಲವನ್ನು ಕುಟ್ಟಿಕೊಡುವ ಮಾನಸಿನಿಯಂತೆ.

[೬ನೆಯ ಪುಟವನ್ನು ನೋಡಿ]

ರಾಜಧಾನಿಗೆ ವೈಸ್ರಾಯರ ಆಗಮನ.

ವೈಸ್‌ರಾಯರವರು 13 ನೆಯ ತಾರೀಖಿನ ದಿವಸ 4-30 ಘಂಟೆಗೆ ರಾಜಧಾನಿಗೆ ಆಗಮಿಸಿದರು ವೈಸರಾಯರ ಆಗಮನಾರ್ಥವಾಗಿ ಮೈಸೂರು ರೈಲ್ವೆ ನಿಲ್ದಾಣವನ್ನು ಅಂದನಾಗಿ ರಚಿಸಲ್ಪಟ್ಟಿದ್ದಿತು ಅವರಿಗೆ ಸ್ವಾಗತಬಯಸಲು ಶ್ರೀಮನ್ಮಹಾರಾಜರು, ರಾಜಕುಮಾರ ಜಯಚಾಮರಾಜಒಡೆಯರು, ರೆಸಿಡೆಂಟರಾದ ಲೆಫ್ಟಿ ಕರ್ನಲ್ ಗಾರ್ಡನ್, ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್, ಪ್ರಧಾನ ಸಚಿವರಾದ ರಾಜಮಂತ್ರಿಪ್ರವೀಣ ಎಸ್ ಸುಬ್ಬರಾವ್, ದ್ವಿತೀಯ ಸಚಿವರಾದ ಶ್ರೀ ಕೆ ವಿ ಶಂಕರಾರ್ಯ, ವಿಶ್ವವಿದ್ಯಾನಿಲಯದ ಸ್ಥಾಪಕಪತಿಗಳಾದ ರಾಜಕಾರ್ಯಪ್ರವೀಣ ಎಸ್ ಎಸ್ ಸುಬ್ಬರಾವ್ ಪ್ರಧಾನ್ಯಾಧೀಕರಾದ ಸರ್ ಡಾಸಿರೆಲಿ, ಕರ್ನಲ್ ದೇವರಾಜ ಅರಸ, ಶ್ರೀ ಕೃಷ್ಣ ಅರಸ, ಶ್ರೀ ಎಂ ವಿಶ್ವೇಶ್ವರಯ್ಯ ರಾಜ ಅರಸ, ಸರ್ ಥಾರಲ್ಫ್ ಬಾರ್ಡಾಕ್ಸ್ ರಾಜಸಭಾಭೂಷಣ ಟಿ ತಾಂಬೂಚೆಟ್ಟಿ ಮತ್ತು ಇತರ ಪ್ರಮುಖರಿಗಳು ಹಾಜರಿದ್ದರು ರೆಸಿಡೆಂಟರ ಎಡ್ಜಿಕಾರ್ಡಿಲಾಹೆ ಗಾರ್ಡನರವರು ಶ್ರೀಮನ್ಮಹಾರಾಜರನ್ನು ವೈಸರಾಯರಿಗೆ ಪರಿಚಯಮಾಡಿಕೊಟ್ಟರು ವೈಸರಾಯರ ತಮ್ಮ ಅಧಿಕಾರಿಗಳನ್ನು ಶ್ರೀಮನ್ಮಹಾರಾಜರಿಗೆ ಪರಿಚಯಮಾಡಿಕೊಟ್ಟರು ಶ್ರೀಮನ್ಮಹಾರಾಜರು ತಮ್ಮ ಅಧಿಕಾರಿಗಳನ್ನು ವೈಸರಾಯರಿಗೆ ಪರಿಚಯಮಾಡಿಕೊಟ್ಟರು ವೈಟ್ಲೈಫ್ಸ್ ಮೆಸ್ಸರ್ಸ್ ಹಾಜರಾಗಿದ್ದ ಹ್ಯಾಲಿಸ್ ಇಂಪೆಟ್ರೋಲಿಯಮ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಸಲ್ಯೂಟ್ ಮಾಡಿದರು ಇದಾದ ಮೇಲೆ ವೈಸರಾಯರ ಆಗಮನದ ಸಮಯದಲ್ಲಿ ಗಾರ್ಡ್ ಆಫ್ ಆನರ್ ಹಾಜರಿದ್ದರು ಇನ್‌ಫೆಂಟ್ರಿಯವರ ಗಾರ್ಡ್ ಆಫ್ ಆನರ್" ಸಹ ಏರ್ಪಡಿಸಿದ್ದರ ಶ್ರೀಮನ್ಮಹಾರಾಜರ ಬಾಡಿಗಾರ್ಡ್ ಪಥ್ಯದಲ್ಲಿ ವೈಸರಾಯರು ತಮ್ಮ ಪರಿವಾರದವರೊಡನೆ ಪುರಸ್ಕಾರ ಮಾಡಲಾರಂಭಿಸಿದರು. ರೈಲ್ವೆ ನಿಲ್ದಾಣದಿಂದ ಬಳಿ ವೈಸರಾಯರನ್ನು ನೋಡುವುದಕ್ಕಾಗಿ ಅಸಾಧ್ಯ ಜನರು ನೆರೆದಿದ್ದರ ಪ್ರಯಾಣದಲ್ಲಿ ವೈಸರಾಯರೂ, ಶ್ರೀಮನ್ಮಹಾರಾಜರೂ ರೆಸಿಡೆಂಟರೂ ಮತ್ತು ವೈಸರಾಯರ ಎಡಿಟರ್ ಕಾರ್ಯದರ್ಶಿಗಳೂ ಮಂಡಿಸಿದ್ದರು ದ್ವಿತೀಯ ರಥದಲ್ಲಿ ಲೆಡಿ ಲಿನ್‌ಲಿತ್‌ಗೋ ರಾಜಕುಮಾರ ಜಯಚಾಮರಾಜ ಒಡೆಯರ್, ವೈಸರಾಯರ ರಾಜಕೀಯ ಸಲಹೆಗಾರರು ಸಹಿತರಿದ್ದರು ಮೊದಲು ವಣಿಗೆಯು ನಿಧಾನವಾಗಿ ತೆರಳಿತು ದಾರಿಯುದ್ದಕ್ಕೂ ಜನರು ಹರ್ಷಧ್ವನಿಗೈದು ಸ್ವಾಗತ ಬಯಸುತ್ತಿದ್ದರು ಇದೇ ರೀತಿ ಅಭೂತಪೂರ್ವವಾದ ವೈಭವದೊಡನೆ ಉತ್ಸವವು ಲಲಿತಮಹಲಿನ ವರೆಗೆ ನಡೆಯಿತು ಅಲ್ಲಿ ಅವರು ಬಿಡಾರಮಾಡಿದರು

ವೈಸರಾಯರ ಆಗಮನದ ಗೌರವಾರ್ಥವಾಗಿ ಲಲಿತ ಮಹಲ್ಲಿನಲ್ಲಿ ಆದಿನ ರಾತ್ರಿ ರಾಜಭೋಜನಸೇರ್ಪಟ್ಟಿದ್ದಿತು. ಈ ರಾಜಭೋಜನಕ್ಕಾಗಿ ಲಲಿತಮಹಲ್ಲನ್ನು ಚಿತ್ರವಿಚಿತ್ರವಾಗಿ ಅಲಂಕರಿಸಲಾಗಿತ್ತು ಈ ರಾಜಭೋಜನಕ್ಕೆ 100 ಜನಕ್ಕಿಂತ ಅಧಿಕವಾಗಿ ಜನರು ಆಹ್ವಾನಿತರಾಗಿದ್ದರು

ಅತಿಥಿಗಳೆಲ್ಲರೂ ಅರ್ಧಮರ್ತುಲಾಕಾರವಾಗಿ ನಿರ್ಮಿಸಿದ್ದ ತಮ್ಮ ತಮ್ಮ ಸ್ಥಾನಗಳಲ್ಲಿ, ಕುಳಿತಿದ್ದರ ಬಳಿಕ ವೈಸರಾಯರ ಮತ್ತು ಲೆಡಿ ಲಿನ್‌ಲಿತ್‌ಗೋರವರು ಲಿಫ್ಟ್ "ಮೂಲಕ ಇಳಿದು ಆಗಮಿಸಿದರು ಆಹ್ವಾನಿತರಾಗಿದ್ದ ಅತಿಥಿಗಳೆಲ್ಲರೂ ಸ್ವಸ್ಥಾನಗಳಲ್ಲಿ ನಿಂತಿದ್ದರು. ಅರ್ಧಗೋಳದಲ್ಲಿ ವೈಸರಾಯ್ ದಂಪತಿಗಳು ತೆರಳುತ್ತಿರುವಾಗ ಶ್ರೀಮನ್ಮಹಾರಾಜರ ಅಪ್ತಕಾರ್ಯದರ್ಶಿಗಳು ವೈಸರಾಯರಿಗೂ ಲೆಡಿ ಲಿನ್‌ಲಿತ್‌ಗೋರವರಿಗೂ ಅತಿಥಿಗಳನ್ನು ಪರಿಚಯಮಾಡಿಕೊಟ್ಟರು ಈ ಸಮಾರಂಭವು ಬಹು ಶಾಂತವಾಗಿತ್ತು ಸಿಡೆಂಟರು ಲಲಿತಮಹಲ್ಲಿನ ಮೆಟ್ಟಿಲಿನ ಬಳಿ ಶ್ರೀಮನ್ಮಹಾರಾಜರನ್ನು ಸಂದರ್ಶಿಸಿ ಅವರಿಗೆ ಸ್ವಾಗತಬಯಸಿ ಒಳಗೆ ಕರೆತಂದರು ಅತಿಥಿಗೆಲ್ಲರೂ ಶ್ರೀಮನ್ಮಹಾರಾಜರು ಬಂದ ಕೂಡಲೇ ಎದ್ದುನಿಂತರು. ಮಹಾರಾಜರಿಗೆ ವೈಸರಾಯರ ಎಡಭಾಗದಲ್ಲಿ ಆಸನವೊಂದನ್ನು ಕಲ್ಪಿಸಲಾಗಿತ್ತು ಶ್ರೀಮನ್ಮಹಾರಾಜರು ವೈಸರಾಯರೊಡನೆ ಮಂಡಿಸಿದನೇಲೆ ಶ್ರೀಮನ್ಮಹಾರಾಜರೊಡನೆ ಆಗಮಿಸಿದ ಸರದಾರರೂ ತಮಿಕಾರಿಗಳೂ ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು ಬಳಿಕ ಶ್ರೀಮನ್ಮಹಾರಾಜರು ಸಾರ್ವಭೌಮರ ಆರೋಗ್ಯಭಾಗ್ಯವನ್ನು ಕೋರಿದರು. ಒಂದು ಸಂಕೇತರ ಮೂಲಕ ಪೊಡಗಡೆ "ಗಾಡ್ ಸೇವ್ ದಿ ಕಿಂಗ್" ನ ಪ್ರಥಮ ಪದವು ಹಾಡಲ್ಪಟ್ಟಿತು ತೆರುವಾಯ ಕಾಫಿ, ಸಿಗರೇಟು, ಸಿಗಾರ್ ಇವುಗಳ ವಿನಿಯೋಗವು ನಡೆಯಿತು ಒಳಕ ಶ್ರೀಮನ್ಮಹಾರಾಜರನ್ನು ವೈಸರಾಯರಾದ ಲಾರ್ಡ್ ಲೀಲಿತ್‌ಗೊ ಮತ್ತು ಲೇಡಿ ಲಿನ್‌ಲಿತ್‌ಗೋರವರು ಆರೋಗ್ಯಭಾಗ್ಯವನ್ನು ಕೋರಿ ಈ ರೀತಿಯಾಗಿ ಘೋಷಣಮಾಡಿದರು—

ಶ್ರೀಮನ್ಮಹಾರಾಜರವರ ಭಾಷಣ

ವೈಸರಾಯ್ ದಂಪತಿಗಳೇ, ಮಹಿಳೆಯರೇ ಮತ್ತು ಪಾರ್ಯರೇ!

ವೈಸರಾಯ್ ದಂಪತಿಗಳನ್ನು ನಮ್ಮ ಸಂಸ್ಥಾನಕ್ಕೆ ಆಹ್ವಾನಿಸುವುದು ನನಗೆ ಸರಮಸಂತೋಷವೆನಿಸಿದೆ

ನಮಗನುಗುತ್ತಿರುವ ಪ್ರವೇಶಗಳ ಮೂಲಕ ಇಂದು ಮಧ್ಯಾಹ್ನ ತಾವು ಪ್ರಯಾಣಮಾಡಿ ಬರುವಾಗ, ತಮಗಾಗಲೇ ಸುಖಾಗಮನದ ಮೊರತಂತೆ ಭಾಸವಾಯಿತೆಂದು ನಾವು ನಂಬಿದ್ದೇವೆ ತಿಳ್ದಲೆ ತಾವು ನಡೆಸುತ್ತಿರುವ ಪ್ರಯತ್ನಗಳನ್ನು ನಾವು ಅಂಗೀಕರಿಸಿರುವುದು ಸಹ ತಮಗೆ ಗೋಚರವಾಗಿರಬೇಕ ಮೊದಲು ಕಬ್ಬು ಬೆಳೆಯವಿದ್ದ ಈ ಪ್ರದೇಶದಲ್ಲಿ ಈಗ ಅಪಾರವಾಗಿ ಕಬ್ಬು ಬೆಳೆಯುತ್ತಿದೆ ಸಕ್ಕರೆ ಕಾರ್ಖಾನೆಯು ಸ್ಥಾಪಿಸಲ್ಪಟ್ಟು ಇನ್ನೂ ದೀರ್ಘಕಾಲವಾಗಿಲ್ಲವಾದರೂ ಈ ಅಲ್ಪಾವಧಿಯಲ್ಲೇ ತಮ್ಮ ಲಕ್ಷಾಂತರ ರೂಪಾಯಿಗಳನ್ನು ವೃತ್ತಿಗೆ ಲಾಭಮಾಡಿಕೊಟ್ಟಿವೆ ಸರ್ಕಾರದ ಬಂಡಾರಕ್ಕೂ ಕೂಡ ಹಚ್ಚು ದ್ರವ್ಯವಿದಿವೆ ಅವರೆ ಸುತ್ತ ಇಪ್ಪೇ ಅಲ್ಪಕಾಲದಲ್ಲಿ ಬಹು ಮುಖ್ಯವಾದ ನಗರವೊಂದು ಸಹ ಎದ್ದಿದೆ. ಆದ್ದರಿಂದ ನಾವು ಅದನ್ನು ಹೊಸ ಜಿಲ್ಲೆಯೆಂದರೆ ಮುಖ್ಯಸ್ಥಳವಾಗಿ ಪಾಡಲಿದ್ದೇವೆ ಆ ರಸ್ತೆಯ ಅನುಭವಿರುವ ನೆನ್ನೆ, ಈಗ ರಸ್ತೆಯು ಹೋಗುವಂತಹ ರೈಲ್ವೆ ದಾರಿಯು ಪಕ್ಕದಲ್ಲಿ ಕೇವಲ ಕೆಲವು ವರ್ಷಗಳ ಹಿಂದೆ ರಸ್ತೆಯಾಗಲಿ ಮನೆಯಾಗಲಿ ಇರಲಿಲ್ಲವೆಂದು ತಿಳಿಯುವುದು ಕಷ್ಟವಾಗಿದೆ

ವೈಸರಾಯರ ಸತ್ಸಿಯವರಹೃದಯದಲ್ಲಿ ಮನೆಮಾಡಿರುವ ಬಯಕೆಯ ಸಾಧನಗಾಗಿ ಸ್ಥಾಪಿತವಾಗಿರುವ ಸಂಸ್ಥಗಳ ಬಳಿ ನುಳಿಯ ದಿನ ವೈಸೂರು ಅವರಿಗೆ ಸ್ವಾಗತ ನೀಡಲಿದೆಯೆಂದು ನಂಬಿದ್ದೇವೆ ಆ ಬಯಕೆಯೇ ಕಳೆದ ಅನೇಕ ವರ್ಷಗಳಿಂದ ನಮ್ಮ ಹೃದಯವನ್ನು ಕೂಡ ಆಕರ್ಷಿಸಿದೆ ಕ್ಷಯರೋಗದ ಆಸ್ಪತ್ರೆಯು, ಅನಾರೋಗ್ಯದಿಂದ ಸ್ವತಃ ನರಳಿದ ಪ್ರೀತಿಪಾತ್ರ ಸಹೋದರಿಯೊಬ್ಬಳ ನೆನಪನ್ನು ಹೊಸ ಹೊಸದಾಗಿ ಮಾಡಿಕೊಡುವುದಾಗಿದೆ 1927 ರಲ್ಲಿ ಕ್ಷಯರೋಗದ "ಕ್ಲಿನಿಕ್" ಸ್ಥಾಪಿಸಲಾಯಿತು ಇದರ ಮೂಲಕವೂ ಮತ್ತು ನಮ್ಮ ಶಿಶುರಕ್ಷಣ ಕೇಂದ್ರಕ್ಕೆ ಸೇರಿದಂತಿರುವ "ಸೊಲೇರಿಯಾ" ಮೂಲಕವೂ ನಗರದಲ್ಲೆಲ್ಲ ಕ್ಷಯರೋಗನಿರೋಧ ಕಾರ್ಯಗಳನ್ನು ನಡೆಸುವ ಪ್ರಯತ್ನ ಮಾಡುತ್ತಿದ್ದೇವೆ

ಯೂರೋಪಿನಲ್ಲಿ ರಾಜಕೀಯ ದಾಹವನ್ನಡಗಿಸಿಕೊಳ್ಳಲು ಅನುಸರಿಸುತ್ತಿರುವ ಹೊಸಮಾರ್ಗಗಳ ಫಲವಾಗಿ, ನಾಗರಿಕತೆಯನ್ನೇ ಧ್ವಂಸಮಾಡತಕ್ಕಂತಹ ಸಂಗ್ರಾಮದ ಸಂಭವಕ್ಕೆ ವಿಶ್ವವು ಒಳಗಾಗಿರುವ ಈ ಸಮಯದಲ್ಲಿ ಮತ್ತು ಭರತಖಂಡದಲ್ಲಿ ಹೊಸಹೊಸ ತತ್ವಗಳೆದ್ದು ತಮ್ಮ ರಾಜಕಾರಣನೈವುಣ್ಯವನ್ನು ಪರೀಕ್ಷೆ ಮಾಡುವಂತಹ ಸಮಸ್ಯೆಗಳನ್ನು ತಂದೊಡ್ಡುತ್ತಿರುವ ಕಾಲದಲ್ಲಿ ಈ ದೊಡ್ಡ ದೇಶದ ಆಗಹೋಗುಗಳನ್ನು ನೋಡಿಕೊಳ್ಳುವುದು ತಮ್ಮಪಾಲಿಗೆ ಬಿದ್ದಿದೆ ಸಂಗ್ರಾಮವು ಮುಂದೆ ಹಾಕಲ್ಪಟ್ಟಿದೆ ಆಸ್ಪೆ ಎಂದು ಆಲೋಚಿಸುವವರೂ ಇದ್ದಾರೆ ಆಸಹನೆಯಿಂದ ಕೂಡಿದ ಅದರ್ಶವಾದಿಗಳಿಗೂ ಮತ್ತು ಹಳೆಯದರ ಒಳ್ಳೆಯ ಅಂಶಗಳನ್ನುಳಿಸಿಕೊಂಡು ಹೊಸದರ ಕಡೆಗೆ ನುಂದುವರಿಯುವಂತಹ ಮಾರ್ಗವನ್ನು ಕಂಡುಹಿಡಿಯುವುದು ಅಸಾಧ್ಯವೆಂಬ ಭಾವನೆಯಿಂದ ಕೂಡಿ ಕುಳಿತಿರಲು ಬಯಸುವ "ಕಸರ್ವೆಟೀವ್" ಮನೋಭಾವವೆಯವರಿಗೂ ತೃಪ್ತಿ ಹುಟ್ಟಿಸುವಂತಹ ದಾರಿಯೊಂದನ್ನು ಭಾರತಕ್ಕೆ ಕಂಡುಹಿಡಿಯಲು ಸಾಧ್ಯವೇ—ಎಂದು ನಿರಾಶೆ ಪಡುವವರೂ ಇದ್ದಾರೆ ಅವರ ನಿರಾಶಾವಹವಾದ ಭವಿಷ್ಯಗಳನ್ನು ನಾವು ಹಿಡಿದಾಗ, "ನನ್ನ ಆಸೆಯು ಕಡಿದು ಹೋಗಿಲ್ಲ" ಎಂಬ ನಿಮ್ಮ ಮನೆತನದ ಆದರ್ಶವನ್ನು ಮನಸ್ಸಿಗೆ ತಂದುಕೊಂಡು, ಸಮಾಧಾನಪಡೆಯುತ್ತೇವೆ. ವಿಶ್ವವು ವಿನಾಶದ ಬದಿಯಲ್ಲಿ ಬಂದು ನಿಂತಿದ್ದರೂ ಯೂರೋಪಿನಲ್ಲಿ ಇನ್ನೂ ಆಶೆಯಿದೆ. ಭರತಖಂಡದಲ್ಲಿ ಕೂಡ ಅದೇ ರೀತಿ ಆಶೆಯಿರುವುದು

ಬ್ರಿಟಿಷ್ ಸಾಮಾಜ್ಯದಲ್ಲಿ ಭರತಖಂಡವು ಸಂತೋಷಪ್ರದವಾಗುದೂ ಮತ್ತು ಏಕಮತ್ಯದಿಂದ ಕೂಡಿದುದೂ ಆದ ಅಂಗವಾಗುವಂತೆ ಮಾಡುವಂತಹ ಸರ್ಕಾರವ್ಯವಸ್ಥೆಯು ದೇವರ ದಯದಿಂದ ರೂಪಿಸಲ್ಪಡುವುದನ್ನು ನಾವು ಎದುರುನೋಡುತ್ತಿದ್ದೇವೆ.

ಮಹಿಳೆಯರೇ ಮತ್ತು ಮಹಾಶಯರೇ, ತಾವುಗಳೆಲ್ಲ ವೈಸರಾಯ್ ದಂಪತಿಗಳ ಶ್ರೇಯಸ್ಪ್ರಾರ್ಥನೆಯ ಕುರುಹಾಗಿ ಮಧುಪಾನ ಮಾಡಬೇಕೆಂದು ಕೋರುತ್ತೇವೆ.

ಆನಂತರ ವೈಸರಾಯರು ಈ ರೀತಿಯಾಗಿ ಭಾಷಣ ಮಾಡಿದರು.

ವೈಸರಾಯರ ಭಾಷಣ.

ಶ್ರೀಮನ್ಮಹಾರಾಜರವರೇ, ಮಹಿಳೆಯರೇ ಮತ್ತು ಮಹಾಶಯರೇ,

ನನಗೆ ಬಹು ಆದರಪೂರ್ಣವಾದ ಮಾತುಗಳಿಂದ ಆಯುರಾರೋಗ್ಯವನ್ನು ಬಯಸಿದುದಕ್ಕಾಗಿಯೂ ಮತ್ತು ಇಂದು ನೀವೂ ನುತ್ತು ನಿಮ್ಮ ಪ್ರಜೆಗಳೂ ಇತ್ತ ಅದ್ಭುತ ಸ್ವಾಗತಕ್ಕಾಗಿಯೂ ನಾನು ನನ್ನ ಪತ್ನಿಯಪರವಾಗಿಯೂ ನನ್ನಪರವಾಗಿಯೂ ಮೊದಲು ನಿಮಗೆ ಅಭಿನಂದನೆಗಳ ವರ್ಷಿಸಬೇಕಾಗಿದೆ ತಾವು ಪೂರ್ಣಾರೋಗ್ಯದಲ್ಲಿರುವುದನ್ನು ನೋಡಲು ಮತ್ತು ಕಳೆದ ಹಲವು ವರ್ಷಗಳಲ್ಲಿ ತಮ್ಮ ಆರೋಗ್ಯಸ್ಥಿತಿಯು ನಿಜವಾಗಿ ಉತ್ತಮಗೊಂಡಿದೆಯೆಂಬುದನ್ನು ತಿಳಿಯಲು ನನಗೆ ಸಂತೋಷವೆನಿಸಿದೆ

ಶ್ರೀಮದ್ಯುವರಾಜರು ಅನಿರೀಕ್ಷಿತವಾಗಿ ರೋಗಪೀಡಿತರಾದ ಪ್ರಯುಕ್ತ ಈ ಸಂದರ್ಭದಲ್ಲಿ ಇಲ್ಲಿಗೆ ಬಾರದೆ ಹೋದುದಕ್ಕಾಗಿಯೂ, ಅವರ ಭೇಟಿಯನ್ನು ಪುನಃ ತೆಗೆದುಕೊಳ್ಳಲವಕಾಶ ಶಿಗದೆಹೋದುದಕ್ಕಾಗಿಯೂ ನಾನು ವಿಷಾದಪಡುತ್ತೇನೆ ಶ್ರೀಮದ್ಯುವರಾಜರು ಗುಣಮುಖರಾಗುತ್ತಿರುವ ವರ್ತಮಾನವನ್ನು ಕೇಳಿ ಸಂತೋಷವಾಗಿದೆ ಯುವರಾಜ ಕುಮಾರರ ಪರಿಚಯವನ್ನು ಮಾಡಿಕೊಳ್ಳುವ ಸಂದರ್ಭವನ್ನು ಒದಗಿಸಿದುದಕ್ಕಾಗಿ ನಾನು ಹರ್ಷಿಸುತ್ತೇನೆ. ಅವರಿಗೆ ಏವಾಹೆನಾಯುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ

12 ವರ್ಷಗಳ ಹಿಂದೆ ನಾನು ಬೆಂಗಳೂರಿಗೆ ಅಲ್ಪಕಾಲದ ಭೇಟಿ ಕೊಟ್ಟಿದ್ದೆನು ಆದರೆ ನಾನು ವೈಸರಾಯ್ ಆಗಿ ಭರತಖಂಡಕ್ಕೆ ಬಂದನೇಲೆ ತಮ್ಮ ಸಂಸ್ಥಾನವನ್ನು ಕಾಣುವ ಅವಕಾಶವು ದೊರೆತಿರುವುದು ಇದೇ ಪ್ರಥಮ ನಾನಿಲ್ಲಿಗೆ ಬಂದು ಇನ್ನೂ ಒಂದುದಿನ ಕೂಡ ಆಗಿಲ್ಲ ಆದರೆ, ವೈಸೂರಿನ ಸೌಂದರ್ಯವನ್ನು ಕುರಿತು ಹೊರಬಿದ್ದಿರುವ ವರದಿಗಳು ಉತ್ಪ್ರೇಕ್ಷೆಯಿಂದ ಕೂಡಿಲ್ಲವೆಂಬುದನ್ನು ಹೇಳಬಲ್ಲೆ ವ್ಯವಸಾಯ ಮತ್ತು ಕೈಗಾರಿಗಳ ಅಭಿವೃದ್ಧಿ ಮತ್ತು ಸಾರ್ವಜನಿಕ ಆರೋಗ್ಯವನ್ನು ಉತ್ತಮಪಡಿಸುವುದು—ಈ ವಿಚಾರಗಳಲ್ಲಿ ತಮ್ಮ ಸರ್ಕಾರದವರು ಕೈಗೊಂಡಿರುವ ಕೆಲಸ ಕಾರ್ಯಗಳನ್ನು ಕೊಂಚಮಟ್ಟಿಗೆ ತಿಳಿಯಲು ನಾನೀಗಲೇ ಸಮರ್ಥನಾಗಿದ್ದೇನೆ ಬೆಂಗಳೂರಿನಲ್ಲಿ ಸುತ್ತಿ ಬರುವಾಗ ನಾನು ಪ್ರತಿಧಾಯುತವಾದ ನಗರವ್ಯವಸ್ಥೆಯನ್ನೂ ಆಧುನಿಕ ಸೌಕರ್ಯಗಳಿಂದ ಕೂಡಿದ ಹೆರಿಗೆ ಆಸ್ಪತ್ರೆಯನ್ನೂ ಮತ್ತು ತಮ್ಮ ರಜತೋತ್ಸವದ ಸಂಬಂಧದಲ್ಲಿ ಕಟ್ಟಿರುವ ಬಹು ಯೋಗ್ಯವಾದ "ಟೆಕ್ನಿಲಾಜಿಕಲ್ ಇನ್‌ಸ್ಟಿಟ್ಯೂಟನ್ನೂ ಕಂಡೆನು. ಬೆಂಗಳೂರು ಈಗಾಗಲೆ ಭರತಖಂಡದ ದೊಡ್ಡ ದೊಡ್ಡ ನಗರಗಳಲ್ಲಿ ಎಂಟನೆಯಸ್ಥಾನ ಪಡೆದಿದೆ. ಅದು ಬಹಳ ವೇಗವಾಗಿ ಬೆಳೆಯುತ್ತಿರುವ ನಗರ ಮತ್ತು ಅದು ಸರಿಯಾದ ಮಾರ್ಗದಲ್ಲಿ ಬೆಳೆಯುತ್ತಿದೆಯೆಂಬುದನ್ನು ಸಹ ನಾನು ನೋಡಬಲ್ಲೆ.

ಬೇಗಬೇಗ ಅಭಿವೃದ್ಧಿ ಹೊಂದುತ್ತಿರುವ ಮೈಸೂರು ಕೈಗಾರಿಕೆಗಳನ್ನು, ಅವುಗಳಿಗೂ ಮತ್ತು ಗ್ರಾಮಾಂತರ ಪ್ರದೇಶಕ್ಕೂ ನಿಕಟ ಸಂಬಂಧವಿರುವಂತೆ ಮಾಡಲು ಮತ್ತು ಅವುಗಳಿಂದ ಗ್ರಾಮಾಂತರಗಳ ಜನರಿಗೆ ನೇರವಾಗಿ ಹೆಚ್ಚಿನ ಆರ್ಥಿಕ ಲಾಭವುಂಟಾಗುವಂತೆಮಾಡಲು ಸಂಸ್ಥಾನದ ಬೇರೆಬೇರೆಕಡೆ ಶಾಖೆಸುತ್ತಿರುವುದನ್ನು ಕಂಡು ನನಗೆ ಸಂತೋಷವಾಯಿತು. ನಿಮ್ಮ ಸಕ್ಕರೆ ಕಾರ್ಖಾನೆಯು ವ್ಯವಸಾಯಗಾರರಿಗೆ ಹೇಗೆ ಸಂಪತ್ತನ್ನೊದಗಿಸಿದೆ ಎಂಬುದನ್ನು ನಾನು ಇಂದು ಮಂಡ್ಯದಲ್ಲಿ ಕಂಡೆನು. ಜನರ ಸಂಪಾದನೆಯ ಶಕ್ತಿಯು ಹೆಚ್ಚಿರುವಂತಹ ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸಲು ತಮ್ಮ ಮನಸ್ಸಿಗೆ ಎಷ್ಟು ಹೆಮ್ಮೆಯುಂಟಾಗುವುದೆಂಬುದನ್ನು ನಾನು ಊಹಿಸಬಲ್ಲೆ.

ನನಗಾಗಿ ಕ್ಯೋಸ್‌ಪೇಟೆಯಲ್ಲಿ ವ್ಯವಸ್ಥೆಗೊಳಿಸಿದ್ದ ಗ್ರಾಮಾಂತರ ಆರೋಗ್ಯ ಮತ್ತು ರಕ್ಷಣ ಪ್ರದರ್ಶನ ಕ್ಕಾಗಿ ನಾನು ತಮಗೆ ವಿಶೇಷ ವಂದನೆಗಳನ್ನರ್ಪಿಸಬೇಕಾಗಿದೆ. ರಾಕ್‌ಫೆಲರ್ ಫೌಂಡೇಷ್ ಸಂಸ್ಥೆಯ ಸಹಕಾರದಿಂದ ವ್ಯವಸ್ಥೆಗೊಳಿಸಲ್ಪಟ್ಟಿರುವ ಆರೋಗ್ಯ ಶಿಕ್ಷಣ ಕೇಂದ್ರವು ಬಹಳ ಕುತೂಹಲವನ್ನು ಹುಟ್ಟಿಸುವುದಾಗಿದೆ. ಮಿತಿಯಿಂದ ಕೂಡಿದ ಒಂದು ಸ್ಥಳದಲ್ಲಿ ಕಾರ್ಯತಃ ಹೆಚ್ಚಿನ ಕೆಲಸಮಾಡಿ ನೋಡುವುದರಿಂದ ಮಾತ್ರವೇ ಭಾರತದ ಹಳ್ಳಿಗಾಡಿನವರ ಆರೋಗ್ಯ ಮತ್ತು ಕ್ಷೇಮ ಸನ್ನು ಫಲಪ್ರದವಾಗಿ ಉತ್ತಮಗೊಳಿಸುವುದನ್ನು ಕಲಿಯಲು ಸಾಧ್ಯ. ಮೈಸೂರು ಸಂಸ್ಥಾನದಲ್ಲಿ ಮಾತ್ರ ವಲ್ಲದೆ ಭಾರತದ ಅನೇಕ ಕಡೆಗಳಲ್ಲಿ ಕೂಡ ಸಾರ್ವ ಜನಿಕ ಆರೋಗ್ಯವನ್ನು ಉತ್ತಮಗೊಳಿಸುವ ವಿಚಾರದಲ್ಲಿ ಈ ಕೇಂದ್ರವು ಅಮೂಲ್ಯವಾದ ಮಾರ್ಗದರ್ಶಿಯಾಗ ಬೇಕು.

ಇಂದಿನ ಕಟ್ಟಕಡೆ ಕಾರ್ಯವೆಂದರೆ, ನಾನು ನಿಮ್ಮೊ ಡನೆ ವಾಹನದಲ್ಲಿ ಕುಳಿತು, ನಿಮ್ಮ ರಾಜಧಾನಿಯ ಬೀದಿ ಗಳಲ್ಲಿ ಮೆರವಣಿಗೆ ಬಂದುದು. ಬೀದಿಗಳ ಮತ್ತು ಭವನಗಳ ಸೌಂದರ್ಯಕ್ಕಾಗಿ ಮೈಸೂರು ನಗರವು ಹೆಸ ರುಗೊಂಡಿರುವುದಲ್ಲದೆ, ರೋಗಿಗಳ ಉಪಚಾರ ಸಂಸ್ಥೆ ಗಳನ್ನು ಸ್ಥಾಪಿಸಿರುವುದರಲ್ಲಿ, ಮುಖ್ಯವಾಗಿ ಉಗ್ರವ್ಯಾಧಿ ಯಾದ ಕ್ಷಯರೋಗದಿಂದ ನರಳುವವರ ಉಪಚಾರ ಕ್ಕಾಗಿ ವಿಶಾಲವಾದ ಸೌಕರ್ಯಗಳನ್ನು ಏರ್ಪಡಿಸಿರುವುದರಲ್ಲಿ ಸಹ ಮೈಸೂರು ನಗರದ ಕೀರ್ತಿ ಹಬ್ಬಿದೆ. ಈ ವ್ಯಾಧಿಯನ್ನು ಎದುರಿಸಲು ನಾವೀಗ ಭರತಖಂಡದಲ್ಲಿ ನಡೆಸುತ್ತಿರುವ ಕಾರ್ಯ ವಿಚಾರದಲ್ಲಿ ತಾವೆಷ್ಟು ಆಸಕ್ತಿ ವಹಿಸಿದ್ದೀರೆಂಬುದನ್ನು ಈಗತಾನೇ ತಿಳಿಸಿದಿರಿ. ಈ ಕೆಲಸಕ್ಕೆ ಮೈಸೂರು ಸಂಸ್ಥಾ ನವು ವಿಶೇಷಗಮನವನ್ನು ಕೊಟ್ಟಿದೆಯೆಂಬುದನ್ನು ನಾವು ಬಲ್ಲೆವು. ಈ ವ್ಯಾಧಿಯನ್ನು ಎದುರಿಸಲು ಇಷ್ಟು ಕೆಲಸ ಗಳನ್ನು ನಡೆಸಿರಬಕ್ಕಂತಹ ನಗರದಲ್ಲಿರಲು ನನ್ನ ಪತ್ನಿ ಗೂ ನನಗೂ ಬಹಳ ಸಂತೋಷವೆನಿಸಿದೆ. ನಾಳೆಯ ದಿನ ಕ್ಷಯರೋಗ ನಿವಾರಣ ಸಂಸ್ಥೆಗಳಿಗೆ ಭೇಟಿ ಕೊಡುವ ಕಾಲವು ಎಷ್ಟು ಹೊತ್ತಿಗೆ ಬಂದೀತೆಂದು ನನ್ನ ಪತ್ನಿಯವರು ಬಹಳ ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಅವರಲ್ಲೂ ಮುಖ್ಯವಾಗಿ ನಿಮ್ಮ ಸಹೋದರಿಯವರ ನಾಮಾಂಕಿತದಮೇಲೆ ಕಟ್ಟಿರುವ-ಯಾರೇ ಆಗಲಿ ಅಪೇಕ್ಷಿಸುವಂತಹ ಅತ್ಯುತ್ತಮ ಸ್ಯಾನಿಟೋರಿಯಮ್ಮಿಗೆ ಹೋಗಲು ಅವರು ಕಾತುರ ರಾಗಿದ್ದಾರೆ.

ಇದಿಷ್ಟನ್ನೂ ನಾನು ಇಂದು ನೋಡಿದೆ. ನಿಮ್ಮ ದೀರ್ಘವಾದ ಅಲ್ಪಕೆಯಲ್ಲಿ ನೊದಲಿನಿಂದ ಕೊನೆಯವರೆಗೂ ನಿಮ್ಮ ಅಪೂರ್ವವಾದ ಶ್ರದ್ಧಾಸಕ್ತಿಗಳ ಫಲವಾಗಿ ಆಗುತ್ತಿರುವ ಬದಲಾವಣೆಯನ್ನು ಮತ್ತೂ ಹೆಚ್ಚಾಗಿ ಪರಿಶೀಲಿಸಲು ಕಾಲಾವಕಾಶವಿಲ್ಲದುದಕ್ಕಾಗಿ ವಿಷಾದಪಡುತ್ತೇನೆ. ಆದರೆ ವ್ಯವಸಾಯ ಕೈಗಾರಿಕೆ, ವೈದ್ಯಕೀಯ ಮತ್ತು ಸಾರ್ವಜನಿಕ ಸೇವಾಕಾರ್ಯಗಳು ಮತ್ತು ವಿದ್ಯುತ್ಸುತ್ಪತ್ತಿಕಾರ್ಯ, ಇವುಗಳ ವಿಚಾರವಾಗಿ ನಡೆದಿರುವ ಅಭಿವೃದ್ಧಿಕಾರ್ಯಗಳಿಗೆ ಸಂಬಂಧಪಟ್ಟ ಅಂಶಗಳನ್ನು ಕೊಂಚ ಮಟ್ಟಿಗೆ ಓದುವ ಅವಕಾಶ ಸಿಕ್ಕಿತು. ನಾನು 'ರಾಯಲ್ ಕಮಿಷನ್' ಅಧ್ಯಕ್ಷನಾಗಿ ಸಂಸ್ಥಾನಕ್ಕೆ ಬಂದು ಹೋದಂದಿನಿಂದ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ನಡೆದಿರುವ ಅಭಿವೃದ್ಧಿಕಾರ್ಯಗಳ ವಿಚಾರದಲ್ಲಿ ನನಗೆ ಆಸಕ್ತಿಯಿದೆ. ನಿಮ್ಮ ವ್ಯವಸಾಯಶಾಖೆಯು ನಿಜವಾಗಿ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಮುಖ್ಯವಾಗಿ ಭತ್ತದ ಮಾದರಿ, ಸಕ್ಕರೆ, ಹತ್ತಿ ಮತ್ತು ದನಕರುಗಳು ಇವು ಗಳನ್ನು ಉತ್ತಮಗೊಳಿಸಲು ಶಕ್ತವಾಗಿರುವುದನ್ನು ನೋಡಿದೆ. ಅಪಾರ ಪ್ರಾಕೃತಿಕಸಂಪತ್ತಿನಿಂದ ತುಂಬಿ ಹೋಗಿರುವಂತಹ ಸಂಸ್ಥಾನದಲ್ಲಿ ನೀವು ಆಳುತ್ತಿರುವುದು ನಿಮ್ಮ ಅದೃಷ್ಟವೇ ಸರಿ. ಈ ಪ್ರಾಕೃತಿಕಸಂಪತ್ತುಗಳ ಪೂರ್ಣ ಉಪಯೋಗವನ್ನು ಪಡೆಯುವ ನಿಮ್ಮ ನೀತಿಯು ವಿವೇಕಯುತವಾದುದು. ಮೈಸೂರಿನಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡುವ ಕಾರ್ಯವು ಅಭಿವೃದ್ಧಿ ಯಾಗಿರುವುದೆಂತೂ ಅದ್ಭುತವಾಗಿದೆ. ಗೇರುಸೊಪ್ಪೆ, ಶಿಂಷಾ ಇವೆರಡು ಉದ್ಯಮಗಳೂ ಪೂರ್ಣಗೊಂಡರೆ ಸಂಸ್ಥಾನದಲ್ಲೆಲ್ಲ ವಿದ್ಯುಚ್ಛಕ್ತಿಯು ಅಗ್ಗವಾಗಿ ದೊರಕು ವಂತಾವುದು.

ನಾವು ಮೈಸೂರನ್ನು ಬಿಡುವಾಗ, ತಮ್ಮ ಎಚ್ಚರಿಕೆ ಯಲ್ಲಿ ಪರಿಪೋಷಿಸಲ್ಪಡುತ್ತಿರುವ ಅಪಾರ ಪ್ರಾಕೃತಿಕ ಸೌಂದರ್ಯದಿಂದೊಡಗೂಡಿದ ನಗರವೊಂದರ ಮತ್ತು ಬೇಕಾದಷ್ಟು ಪ್ರಾಕೃತಿಕ ಸಂಪತ್ತಿನಿಂದೊಡಗೂಡಿ, ಅದ್ಭುತ ರೀತಿಯಲ್ಲಿ ಆಡಳಿತ ನಡೆಸಲ್ಪಡುತ್ತಿರುವ ಸಂಸ್ಥಾನವೊಂದರ ಚಿತ್ರವನ್ನು ನಾವು ತೆಗೆದುಕೊಂಡು ಹೋಗುವೆವು.

ಇತ್ತೀಚಿಗೆ ಯೂರೋಪಿನಲ್ಲಿ ಉಗ್ರ ಪರಿಸ್ಥಿತಿಯುಂ ಟಾಗಿ, ವಿಶ್ವವು ಸಂಗ್ರಾಮದಲ್ಲಿ ಮುಳುಗುವಂತೆ ತೋರಿ ಬಂದಿದ್ದ ವಿಚಾರವಾಗಿ ತಾವು ಈ ರಾತ್ರಿ ಮಾತನಾಡಿ ದ್ದೀರಿ. ನನ್ನ ಮನೆತನದ ಆಹ್ವಾನವನ್ನು ನೆನೆಸಿಕೊಂಡು ಭವಿಷ್ಯದಲ್ಲಿ ಕೂಡ ನೀವು ಆಶೆಗಳನ್ನು ವ್ಯಕ್ತಪಡಿಸಿ ದ್ದೀರಿ.

ನಾನೂ ಭವಿಷ್ಯದ ವಿಚಾರದಲ್ಲಿ ಅದೇ ಭರವಸೆ ಯಿಟ್ಟು ಕೊಂಡಿದ್ದೇನೆ. ರಾಜಕೀಯ ಭಿನ್ನಾಭಿಪ್ರಾಯ ಗಳನ್ನು ಶಾಂತಿಯುತವಾಗಿ ಪರಿಹರಿಸಿ, ವಿಶ್ವದಲ್ಲಿ ಸಮ ತೂಕದ ಪರಿಸ್ಥಿತಿಯನ್ನು ಕಲ್ಪಿಸಬಹುದು. ದೀರ್ಘಕಾಲ ಸಹನೆಯಿಂದ ಅವಕ್ಕಾಗಿ ಕೆಲಸಪಡಬೇಕಾಗಬಹುದು ಅಷ್ಟೆ ಆದರೆ ಯುದ್ಧವನ್ನು ತಪ್ಪಿಸುವ ಬಯಕೆಯುಳ್ಳ ಎಲ್ಲ ಜನರ ಸೌಹಾರ್ದದಿಂದ ಅದನ್ನು ಸಾಧಿಸಬಹು ದೆಂಬ ವಿಚಾರದಲ್ಲೇನೇನೂ ಅನುಮಾನವಿಲ್ಲ. ಸಾರ್ವ ಭೌಮ ಸರ್ಕಾರವು ವಹಿಸಬೇಕಾದ ಪಾತ್ರವು ಬಹಳ ದೊಡ್ಡದು. ನಮ್ಮ ಬೆಂಬಲಪಮೂಲಕ ನಾವು ಭರತ ಖಂಡದಲ್ಲಿ ಈ ಕೆಲಸಕ್ಕೆ ಸಹಾಯ ನೀಡಬಹುದು. ಆ ಬೆಂಬಲವು ಲಭಿಸುವುದೆಂಬುದೇನೋ ಖಂಡಿತ. ಪರೀಕ್ಷೆಯ ಕಾಲ ಬಂದಾಗ ನೀವು ನಿಮ್ಮ ಸಂಸ್ಥಾನದ ಸರ್ವಸಂಪತ್ತನ್ನೂ ಬಲವನ್ನೂ ಸಾಮ್ರಾಜ್ಯಕ್ಕೆ ಅರ್ಪಿಸುವುದಾಗಿ ಇತ್ತೀಚೆಗೆ ಕೊಟ್ಟ ಭರವಸೆಗಾಗಿ ನಾನು ಈರಾತ್ರಿ ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸ ಬಹುಸುತ್ತೇನೆ. ಸಾರ್ವಭೌಮ ರಾಜಭಕ್ತಿಯನ್ನು ತೋರಿಸುವುದರಲ್ಲಿ ನಿಮಗಿಂತ ಹೆಚ್ಚಿನ ದೃಢತೆಯಿಂದ ಕೂಡಿದವರು ಮತ್ತಾರೂ ಇಲ್ಲವೆಂಬ ಹಿಂದೆ ನನ್ನ ಪದ ವಿಯಲ್ಲಿದ್ದವರು ಹೇಳಿದುದನ್ನೇ ನಾನೀಗ ಹೇಳಬಯ ಸುತ್ತೇನೆ.

ಮಹಿಳೆಯರೇ, ಮತ್ತು ಮಹನೀಯರೇ, ಶ್ರೀಮನ್ಮ ಹಾರಾಜರವರಿಗೆ ಆರೋಗ್ಯವು ಲಭಿಸಲೆಂದೂ ಮತ್ತು ದೀರ್ಘಕಾಲ ಅವರು ಸಂತೋಷದಿಂದ ಆಳಲೆಂದೂ ಬಯಸಿ, ಮಧುಪಾನ ಮಾಡಬೇಕೆಂದು ನಾನು ಕೋರುತ್ತೇನೆ."

ತರುವಾಯ ಹೊರಗಡೆ ರಾಷ್ಟ್ರಗೀತೆಯ ಗಾಯನ ವಾಗಿ ರಾಜಭೋಜನವು ಮುಕ್ತಾಯಗೊಂಡಿತು.

ವೈಸ್ರಾಯರವರು 14 ನೆಯ ತಾರೀಖಿನ ದಿವಸ ಶ್ರೀರಂಗಪಟ್ಟಣವನ್ನು ನೋಡಿಕೊಂಡು ಬಂದರು. ಸಾಯಂಕಾಲ ಜಗತ್ಪಿಸಲ್ಲಿ ಅತ್ಯಂತ ಖ್ಯಾತಿಪಡೆದಿರುವ ಕೃಷ್ಣರಾಜಸಾಗರವನ್ನೂ, ಮಹಾಸುಂದರವಾದ ವೃಂದಾವನವನ್ನು ಸಂದರ್ಶಿಸಿ ಆನಂದತುಂದಿಲ ಹೃದಯರಾದರು. 15 ನೆಯ ತಾರೀಖಿನದಿವಸ ಅವರು ಅನೇಗಳನ್ನು ಹಿಡಿಯುತಕ್ಕ ಕೆಡ್ಡಾಕ್ಕೆ ಪ್ರಯಾಣ ಮಾಡಿದರು. ಈ ದಿವಸ ಕೆಡ್ಡಾದಿಂದ ತಿರುಗಿ ಆಗುಮಿಸಿ, ರಾತ್ರಿ ಸ್ಪೆಷಲ್ ಟ್ರೈನಿನಲ್ಲಿ ಕೊಲ್ಲಾಪುರಕ್ಕೆ ಪ್ರಯಾಣಮಾಡುವವರಾಗಿದ್ದಾರೆ.

ವರ್ತಮಾನಸಂಗ್ರಹ.

ಪ್ರಪಂಚದ ಭಾರಿ ಗುಹೆ!

ಅಮೇರಿಕೆಯಲ್ಲಿರುವ ಸಂಟಾಗ್ರ ಎಂಬ ಗುಹೆಯೇ ಪ್ರಪಂಚದಲ್ಲಿ ಅತಿ ವಿಸ್ತಾರವಾದುದೆಂದು ಹೇಳಲಾಗಿದೆ. ಅದರ ಎತ್ತರ 11½ ಅಡಿ, ಅಗಲ 10½ ಅಡಿ, ಉದ್ದ 18 ಮೈಲು. ಈ ಗುಹಾ ಪ್ರದೇಶದಿಂದಲೇ ನ್ಯೂಯಾರ್ಕ್ ಪಟ್ಟಣಕ್ಕೆ ನೀರಿನ ನಲ್ಲಿಗಳನ್ನು ಹಾಕಿರುವರಂತೆ!

ಗಡಿನಾಡಿನ ಪರಿಸ್ಥಿತಿ

ಹಿಂದೂಸ್ಥಾನದ ವಾಯುವ್ಯ ಗಡಿಯಲ್ಲಿರುವ ಜೀರಿ ಸ್ಥಾನದ ಬೆಟ್ಟಗಾಡು ಪ್ರದೇಶದಲ್ಲಿ ನೇರಿಕೊಂಡು ತಮ್ಮ ಕಡೆಯವರಿಂದ ದರೋಡೆ ಮತ್ತು ಜನಗಳನ್ನು ಅಪಹರಿಸಿಕೊಂಡು ಹೋಗುವದು ಮೊದಲಾದ ದುಷ್ಕೃತ್ಯಗಳನ್ನು ನಡೆಸುತ್ತಿರುವ ಇಫಿಫಕೇರನನ್ನು ಹಿಡಿದು ಶಿಕ್ಷಿಸಲು ಇಂಡಿಯಾ ಸರ್ಕಾರದಸೈನಿಕರು ನಡೆಸುತ್ತಿರುವ ಪ್ರಯತ್ನ ಗಳೆಲ್ಲವೂ ಇನ್ನೂ ನಿಷ್ಫಲವಾಗಿವೆ. ಆದರೆ ಈಗ ಆ ಪ್ರದೇಶದಲ್ಲಿ ವಿಶೇಷವಾಗಿ ಮಂಜುಸುರಿಯುತ್ತಿರುವುದ ರಿಂದ ಆ ಪ್ರದೇಶದವರಿಗೆ ಆಹಾರಸಾಮಗ್ರಿಗಳೊದಗು ವದು ಕಷ್ಟವಾಗಿರುವದರಿಂದ ತೊಂದರೆಗೊಳಗಾದ ಜೀರಿ ಜನಾಂಗದ ಮುಖಂಡರುಗಳು ಸಭೆಸೇರಿ ಇಫೀಫಕೇರನು ಬ್ರಿಟಿಷ್ ಸರ್ಕಾರಕ್ಕೆ ವಿರೋಧವಾಗಿ ದುಷ್ಕೃತ್ಯಗಳನ್ನು ನಡೆಸುವದನ್ನು ಬಿಟ್ಟು ಅವರೊಡನೆ ಸಂಧಿಮಾಡಿಕೊಳ್ಳ ಬೇಕೆಂದು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿರುತ್ತಾರೆ. ಆ ಪ್ರದೇಶದ ಸರ್ಕಾರದ ಅಧಿಕಾರಿಗಳೂ ಈ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಿರುವುದಲ್ಲದೆ ಆ ಮುಖಂಡರುಗಳ ಸಮ್ಮೇಳನಗಳಲ್ಲೂ ಆಗಾಗ್ಗೆ ಭಾಗವಹಿಸುತ್ತಲಿದ್ದಾರೆ.

ಪೊಲಿಟಿಕಲ್ ಏಜಂಟರನ್ನು ಕೊಂದರು

ರಾಣಾಪುರ ಸಂಸ್ಥಾನದಲ್ಲಿಯ ಒಂದು ಹಳ್ಳಿಯಲ್ಲಿ ಕಳ್ಳತನದ ಆಪಾದನೆಯಮೇಲೆ ರಾಣಪುರ ಪ್ರಜಾ ಮಂಡಲದ ಕೆಲವು ಸದಸ್ಯರನ್ನು ರಾಣಪುರದ ಪೋಲೀಸಿನವರು ದಸ್ತಗಿರಿಮಾಡಿದರು. ಇದರಿಂದ ಜನರಲ್ಲಿ ಕೋಪವುಂಟಾಯಿತು. ಆಗ್ಗೆ ಪ್ರಜಾಮಂಡಲವು ಅಕ್ರಮ ಕೂಟವೆಂದು ಸಾರಲ್ಪಟ್ಟಿದ್ದರಿಂದ ಪ್ರಜೆಗಳು ಕೋಪ ಗೊಂಡರು. ಪಕ್ಕದ ಸಂಸ್ಥಾನದ ನಯಘರ್ ಸಂಸ್ಥಾನದಲ್ಲಿ ವಿಚಾರಮಾಡಿದ್ದ ಒಂಸ್ಸ ಸಂಸ್ಥಾನಗಳ ಪೊಲಿಟಿಕಲ್ ಏಜಂಟರಾದ ಮೇಜರ್ ಬಜಗೆಟ್‌ಯವರಿಗೆ ಈ ಸುದ್ದಿ ಮುಟ್ಟಲು ಕೂಡಲೆ ಅವರು ರಾಮಪುರಕ್ಕೆ ಹೊರ ಟುಬಂದರು. ಒಬ್ಬ ಸುಬೇದಾರನನ್ನು ಜೊತೆಗೆ ಕರೆದು ಕೊಂಡು ಜನರ ಮುಂದೆ ಬಂದು ನಿಂತರು. ಮತ್ತು ಅರ ಮನೆಯ ಕಡೆ ಹೋಗುತ್ತಿದ್ದ ಗುಂಪನ್ನು ಚದುರಿಸಬೇ ಕೆಂದು ಆಜ್ಞಾಪಿಸಿದರು. ಆದರೆ ಗುಂಪು ಇನರ ಆಜ್ಞೆಯನ್ನು ಲೆಕ್ಕಿಸದೆ ಕೈಯಲ್ಲಿ ಹಿಡಿದಿದ್ದ ಲಾಟಿಗಳ ಸಮೇತ ಉದ್ರೇಗಗೊಂಡು ಮುಂದುವರಿಯಲಾರಂಭಿಸಿದ್ದಲ್ಲದೆ ಪೊಲಿಟಿಕಲ್ ಏಜಂಟರಮೇಲೆ ಕೈಮಾದಲೆತ್ನಿಸಿತು. ಇದಕ್ಕಾಗಿ ಏಜಂಟರು ರಿವಾಲ್ವರಿನಿಂದ ಎರಡು ಸಾರೆ ಗುಂಡು ಹಾರಿಸಿದರು. ಇದರಿಂದ ಸಂಪೂರ್ಣ ಉದ್ರೇಕಗೊಂಡ ಜನರು ಅವರನ್ನು ಮುತ್ತಿ ಗಾಯಗೊಳಿಸಿದರು. ಜನರ ಏಟಿನಿಂದ ಅವರು ಅಲ್ಲೇ ಮೃತರಾದರು.

ಸ್ವೀಕಾರ.

ಸೊಲ್ಲಾಪುರ ಶಹರ ನಿವಾಸಿಗಳಾದ ಮಾ॥ ರಾ॥ ರುದ್ರಪ್ಪ, ನುಲ್ಲಪ್ಪ, ಧನಕೆಟ್ಟೆ ಇವರು ಶ್ರೀಕಾಶೀಕ್ಷೇತ್ರಕ್ಕೆ ಹೋಗಿ, ನೀರಶ್ಯೆವಮತ ಪದ್ಧತಿಪ್ರಕಾರವಾಗಿ ಅಲ್ಲಿ ಅನೇಕ ಧರ್ಮಕಾರ್ಯಗಳನ್ನುಮಾಡಿ, ತಮ್ಮ ಜನ್ಮ ಸಾಫಲ್ಯವನ್ನು ಮಾಡಿಕೊಂಡ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ 10 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

[೩ನೆಯ ಪುಟದಿಂದ ಮುಂದುವರಿದುದು.]

ಪ್ರಾಣಿಗಳಂ ಮರ್ದಿಸಿ ಕೃತಾಂತನೆಂಬ ನಾಯಕನಿಗೆ ಸಮರ್ಪಿಸುವಳು. ಕ್ರಿಯಾಶಕ್ತಿಸಹಾಯಕನಾದ ಈ ಕಾಲಪುರುಷನಾದರೋ ರವಿ ಚಂದ್ರರೆಂಬ ದೀಪಗಳ ಸಹಾಯದಿಂದ ಗ್ರಾಸಯೋಗ್ಯವಾದ ಪದಾರ್ಥವು ಎಲ್ಲಿ ಏನು ಇದೆಯೋ ಎಂದು ನೋಡುತ್ತ "ಕುಂಬಾರನಿಗೆ ವರ್ಷ ದೊಳ್ಪಿಂಗೆ ನಿಮಿಷ" ವೆಂಬ ಲೋಕೋಕ್ತಿಗಳನು ಸಾರವಾಗಿ ದಿನಂಬ ಬೀಜಗಳಂ ಶುಕದಂತೆ ಬ್ರಹ್ಮ ಸೃಷ್ಟವಾದ ಪ್ರಾಣಿಗಳಂ ನುಂಗುವೆಂಬ ವ್ಯಾಪಾರ ಒಂದನ್ನೇ ಬಲ್ಲನು. ವಾಚಕಪ್ರಿಯರೇ! ಬಾಲ್ಯದಿಂ ಮೊಳಕೆಯಾಗಿ ಯೌವನದಿಂ ಚಿಗುರೊಡೆದು ವೃದ್ಧಾಪ್ಯದಿಂ ಪುಷ್ಪಿತವಾಗಿ ಬಂಧು ಬಾಂಧವರೆಂಬ ಭ್ರಮರಗಳಂ ತುಂಬಿರುವ ನಿತ್ಯರೋದನವಾದ ಈ ಶರೀರವೃಕ್ಷದೋಳ್ ಮೃತ್ಯುವೆಂಬ ಫಲವು ತಲೆದೋರುತ್ತಿರುವಲ್ಲಿ ಜನ್ಮಾಂತರ ಕರ್ಮವಳಯದುದರಿಂದಲೂ, ಗತಿಪ್ರದವಾದ ಪುಣ್ಯಕರ್ಮವಿಲ್ಲದುದರಿಂದಲೂ ನಿರಾಧಾರವಾಗಿ ನಡೆಯಲಾದ ದೇಹವು ಬಾಲ್ಯಾರಭ್ಯದಿಂ ಕಡೆತನಕ ಬೀಳುವುದನ್ನೇ ನೋಡುತ್ತಿರುವದು ಸಕಲಪುರುಷಾರ್ಥಸಾಧನ ರೂಪವಾದ ಕಾಂತಿಯಿಂ ಹೊಳೆಯುವ ಈ ದೇಹರತ್ನವು ಪ್ರತಿಜನ್ಮದಲ್ಲಿಯೂ ನಾಶವೆಂಬ ಕೆಸರು ಹಳ್ಳದಲ್ಲಿ ಎಲ್ಲಿ ಬೀಳುವದೋ ಗೊತ್ತಾಗುವದಿಲ್ಲವು ಮತ್ತು ಈ ಕಾಯಸರಸ್ಸಿನಲ್ಲಿ ಯೌವನರಸವು ಪೋಗುವಲ್ಲಿ ಅನಾಯಾಸವಾದ ಪದವಿಯ ಸಾಧನೆ (ಆತ್ಮಜ್ಞಾನ) ಇಲ್ಲದೆ ವ್ಯರ್ಥವಾಗಿ ಆಯುಸ್ಸೆಂಬ ಹಂಸವು ಹಾರಿ ಹೋಗುವದು ಅಲ್ಲದೆ ಸಾಯುವುದಕ್ಕೋಸ್ಕರವೇ ಹುಟ್ಟುವದು ಹುಟ್ಟಲೋಸುಗವೇ ಸಾಯುವುದೆಂಬ ಈ ನಿಯಮವುಳ್ಳ ಈ ಸಂಸಾರಪರಂಪರೆಯಲ್ಲಿ ಏನೊಂದೂ ಸುಖವಿಲ್ಲವು ಆದ ಪ್ರಯುಕ್ತ ಇಂದು ನಾಳೆನ್ನದೆ ಪದ್ಮರುಗಳನ್ನಾಶ್ರಯಿಸಿ ಆತ್ಮಜ್ಞಾನವನ್ನು ಸಂಪಾದಿಸಿ ಸಹಜಾನಂದ ಸಾಮ್ರಾಜ್ಯವನ್ನು ಹೊಂದುವದು ಜಾಣತನವಾಗಿರುವದು.

ಪ್ರ–ಶಮವೆಂದರೇನು?

ಉ–ಅಂತಃಕರಣದಲ್ಲಿ ಬ್ರಹ್ಮೇತರ ವಸ್ತುಗಳಂ ಪರಿಗ್ರಹಿಸದಿರುವಿಕೆಯು ಪ್ರಜೆಗಳು ರಾಜನನ್ನನುಸರಿಸುವಂತೆ ಇಂದ್ರಿಯಗಳು ಅಂತಃಕರಣವನ್ನನುಸರಿಸುವುದರಿಂದ ಮನವು ಸಂಕಲ್ಪ ರಹಿತವಾದೊಡನೆಯೇ ಇಂದ್ರಿಯಗಳು ತಮ್ಮತಮ್ಮ ವಿಕಲ್ಪಗಳಂ ಬಿಡುವವು ಆದ್ದರಿಂದ ಶಮಯುಕ್ತನಾದ ಪುರುಷನು ಶತ್ರುಗಳಂ ನಿರ್ನಾಮ ಮಾಡಿ ಅಖಂಡ ಸಾಮ್ರಾಜ್ಯವಂ ಪಡೆದವನಂತೆಯೂ, ಅಮೃತಪಾನವಂ ಮಾಡಿದವನಂತೆಯೂ ನಿತ್ಯತೃಪ್ತನಾಗುವನು. ಸೂರ್ಯನು ರಾತ್ರಿಯ ದುಃಖಗಳನ್ನೇ ಪರಿಹರಿಸುವನು ಚಂದ್ರನು ಹಗಲಿನ ದುಃಖಗಳನ್ನೇ ಪರಿಹರಿಸುವನು ಈ ಶಮವಾದರೋ ಉದಯಿಸುವಲ್ಲಿಯೇ ಸಮಸ್ತದುಃಖ ಆಸೆ, ಮನೋವ್ಯೆಥೆ ಇತ್ಯಾದಿ ಬಾಧೆಗಳೆಲ್ಲವೂ ಚಂದ್ರೋದಯದಿಂ ಕತ್ತಲೆಯಂತೆ ನಿಶ್ಶೇಷವಾಗಿ ನಾಶವಾಗುವವು ಸುಂದರನಂ ಕಾಮಿನಿಯಂತೆ ಶಮಶಾಲಿಯನ್ನು ನೋಡ್ಪ ಲಕ್ಷ್ಮಿಯು ವರಿಸುವೆಳಾದ್ದರಿಂದ, ಅವನ ಮನಸ್ಸಿನಲ್ಲಿ ಸ್ವಯಂಪ್ರಕಾಶವಾದ ಪರಮಾರ್ಥವು ಸ್ಫುರಿಸುವದು ಈ ಶಾಂತಯುಕ್ತನು, ಪ್ರಾಣ ಪ್ರಿಯಳೊಡನೆ ಅಂತಃಪುರದಲ್ಲಿ ಹಂಸತೂಲಿಕಾ ತಲ್ಪದಲ್ಲಿ ವಿಹರಿಸುವ ಚಕ್ರವರ್ತಿಗಿಂತಲೂ ಅಧಿಕವಾಗಿ ಸಂತೋಷಯುಕ್ತನಾಗುವನು. ಮತ್ತು ಈತನಲ್ಲಿ ಪರಮಾತ್ಮನ ಪ್ರೇಮಕಟಾಕ್ಷವೆಂಬುದಾಗುವಂತೆ ಎಂತಹ ತಪಸ್ವಿಯಲ್ಲಿಯೂ ಉಂಟಾಗುವುದಿಲ್ಲವು. ಈತನು ತಪಿಸದಿರುವ ರವಿಯೆಂತಲೂ, ಕಳಂಕವಿಲ್ಲದ ಚಂದ್ರನೆಂತಲೂ, ದಹನದೋಷವಿಲ್ಲದ ಅಗ್ನಿಯೆಂತಲೂ ಜನರಿಂದ ಸ್ತುತಿಸಲ್ಪಡುವನು ಇವನು ಮಾಡಿದ ಸತ್ಕಾರಗಳನ್ನು ಸತ್ಸಂಪ್ರದಾಯವೆಂದು ಜನಗಳು ಗ್ರಹಿಸುವರಲ್ಲದೆ ಇವನ ವಾಕ್ಯನೇ ವೇದವಾಕ್ಯವೆಂದು ಮನ್ನಿಸುವರು. ಇವನ ದರ್ಶನವಾದರೆ ಸಾಕೆಂದು ರಾಜಾಧಿರಾಜರೂ ಸಹ ಅಪೇಕ್ಷಿಸುತ್ತಿರುವಲ್ಲಿ ಇವನ ವೈಭವವೇ ವೈಭವವು. ಇಂತಹ ಶಾಂತಿಗುಣಕ್ಕೆ, ಸಂಸಾರ ರೋಗಕ್ಕೆ ದಿವ್ಯೌಷಧವಾದ ವಿಚಾರವೇ ಮೂಲವಾಗಿರುವದು. ಆದ್ದರಿಂದ ಇದಕ್ಕಿಂತಲೂ ಮೊದಲನೆಯದಾಗಿ ಅದನ್ನೇ ಪರಿಗ್ರಹಿಸತಕ್ಕದ್ದು. ಇಂತಹ ವಿಚಾರವಿಲ್ಲದವನು ಕೆಸರುಳ್ಳಿರುವ ಕಪ್ಪೆ, ಮಲದಲ್ಲಿರುವ ಹುಳು ಅಂಧಕೂಪದಲ್ಲಿರುವ ಹಾವು ಇವುಗಳಗಿಂತಲೂ ನಿಕೃಷ್ಟವೆನಿಸುವನು. ಆದ್ದರಿಂದ ವಿಚಾರವಂತನೇ 'ಮನುಷ್ಯ' ನೆಂಬ ಪದಕ್ಕೆ ಯೋಗ್ಯನೆನಿಸುವನು

ಪ್ರ–ಜನರಲ್ಲಿ ಅಹಂಕಾರವು ಏತಕ್ಕಾಗಿ ಹುಟ್ಟುವುದು?

ಉ–ಉತ್ಪಾತದಂತೆ ಆವರ ನಾಶಕ್ಕಾಗಿ ಅಂದರೆ ಈ ಜಗತ್ತಿನಲ್ಲಿ ಮಾಯಾಮಯವಾದ ಜಾಳಿಗೆಯಂಬೀಸಿರುವ ಈ ಅಹಂಕಾರದಿಂದಲೇ ದೈನ್ಯವು, ಅಪತ್ತುಗಳು, ಮನೋವ್ಯಥೆಗಳು, ರಾಗಗಳು, ರೋಗಗಳು, ದುಃಖಗಳು ಸಹ ಉಂಟಾಗಿರುವುವು ಈ ಅಹಂಕಾರವು ಶಮವೆಂಬ ಚಂದ್ರನಿಗೆ ರಾಹುವಾಗಿಯೂ, ಸದ್ಗುಣವೆಂಬ ಕಮಲಕ್ಕೆ ಹಿಮವೃಷ್ಟಿಯಾಗಿಯೂ, ಸರ್ವತ್ರ ಸಮಭಾವವೆಂಬ ಮೋಡಗಳಿಗೆ ಶರತ್ಕಾಲವಾಗಿರುವದು ಅಹಂಕಾರದಿಂದ ತಿಂದದ್ದು, ಕೊಟ್ಟದ್ದು, ಕರ್ಮಗಳಾಡಿದ್ದು ಈ ಎಲ್ಲವೂ ನಿಷ್ಫಲವಾಗುವವು. ಅಹಂಕಾರವಿರುವ ಪರ್ಯಂತ ತಿಪ್ಪೆಯಲ್ಲಿ ಬಿದ್ದ ಕಡ್ಡಿಯಂತೆ ಆಸೆಯು ಪ್ರಕಾಶಿಸುವದು ಈ ಆಸೆಯು ನಾಶವಾಗಲು ಮದ್ಯಘಟದಿಂ ಉತ್ತಮ ವರ್ಣದವನಂತೆಯೂ ಸರ್ಪಗಳಂ ಮಾರ್ಗಸ್ಥನಂತೆಯೂ ಅಹಂಕಾರವು ನಾಶವಾಗುವದು. ಮುಖ್ಯವಾಗಿ ದುಷ್ಟಸೇನೆಗಳಂತೆಯೂ ಶಮಂ ಪಿಡಿದಿರುವರನ್ನೇ ಕೆಡಿಸುವ ನಾರಿಯಂತೆಯೂ ಹಿತಶತ್ರುವೂ ಸರ್ವಾನರ್ಥಕ್ಕೆ ಕಾರಣವೂ ಆದ ಈ ಅಹಂಕಾರವಂ ಸರ್ವವಿಧದಿಂದಲೂ ತ್ಯಜಿಸುವದು ತ್ತಮ. ಅಹಂಕಾರವೆಂಬುದು ಇದ್ದಲ್ಲಿ ನಾನು ದುಃಖಿ ಎಂಬ ಪ್ರಸಕ್ತಿಯುಂಟಾಗುವದು, ಅದೇ ಇಲ್ಲದಿರುವಲ್ಲಿ ದುಃಖಪ್ರಸಕ್ತಿಯೂ ಇಲ್ಲದಿರುವುದರಿಂದ ನಿರಹಂಕಾರವೇ ಸರ್ವೋತ್ತಮವಾಗಿರ್ಪುದು

ಪ್ರ–ಪ್ರಾಣವೆಂದರೇನು? ಅದರ ನಿರೋಧದಿಂದೇನಾಗುವದು?

ಉ–ಭೂಮಿಯ ಉದರದ ಜಲಬಂತೆ ದೇಹನಾಡಿಗಳಲ್ಲಿ ವ್ಯಾಪಿಸಿಕೊಂಡಿರುವ ವಾಯುವೇ ಪ್ರಾಣವು. ನದಿಗಳೆರಡೂ ಸೇರುವಲ್ಲಿ ಜಲಗ್ರಹಣವಾಗುವಂತೆ ವಾಸನೆಯು ದೃಢವಾಗಿ ಪ್ರಾಣದೊಂದಿಗೆ ಸೇರಲು ಪ್ರಾಣಕ್ಕೆ ಚಲನೆಯುಂಟಾಗುವದು. ಆಗ ಪ್ರಧಾನ ಚಕ್ರದಿಂ ಯಂತ್ರದಂತೆ ಈ ಪ್ರಾಣವು ಚಲಿಸಲು ಕಲ್ಪಿಸೋನ್ಮುಖವಾಗಿ ಉಂಟಾದ ಜ್ಞಾನವೇ ಚಿತ್ತವೆನಿಸುವದು ತೈಲಕ್ಕೆ ತಿಲದಂತೆಯೂ, ಪರಿಮಳಕ್ಕೆ ಪುಷ್ಪದಂತೆಯೂ, ಚಿತ್ತಕ್ಕೆ ಪ್ರಾಣವೇ ಆಧಾರವಾಗಿರುವುದರಿಂದ ಪ್ರಾಣ ನಿರೋಧದಿಂ ಚಿತ್ತಕ್ಕೆ ನಿರೋಧವಾಗುವದು. ಚಿತ್ತನಿರೋಧವಾಗಲು ಸೂರ್ಯಾಸ್ತಮಾನದಿಂ ಪ್ರಾಣಿಗಳಂತೆ ಅಜ್ಞಾನಮಯವಾದ ಸಂಸಾರವೇ ಶಾಂತವಾಗುವದು. ದೀಪಪ್ರಕಾಶಗಳಂತೆ ಚಿತ್ತಪ್ರಾಣಗಳು ಅಬಿನ್ನವಾಗಿರುವುದರಿಂದ ಒಂದರ ನಾಶದಿಂ ಮತ್ತೊಂದು ನಷ್ಟವಾಗುವದು. ಕ್ರಿಯಾಶಕ್ತಿ ಸ್ವರೂಪವಾದ ಪ್ರಾಣದ ಚಲನವಿಲ್ಲದೆ ಮನವು ಚಲಿಸದು. ಅದು ಚಲಿಸದೆ ಬಾಹ್ಯಜ್ಞಾನವಾಗುವದಿಲ್ಲ. ಬಾಹ್ಯಜ್ಞಾನವಿರುವವರೆಗೆ ದುಃಖವು ತಪ್ಪದಾದ್ದರಿಂದ ಪುಂಡನಂ ಕಾರಾಗೃಹವಂ ಸೇರಿಸುವಂತೆ ಕೊಂದೆಕೊಂದೆಗೆ ನೆಗೆಯುವ ಅತಿಚಪಲವಾದ ಮಂಗನಂತಿರುವ ಮನವಂ ಹೃದಯಾಕಾಶದಲ್ಲಿ ನಿಲ್ಲಿಸಲು ಎಳೆಗರುವಿನ ಬಂಧನದಿಂ ಹಸುವಿನಂತೆ ಪ್ರಾಣವು ಹಸ್ತಗತವಾಗುವದು. ಆಗ ಬಂಧಿತನಾದ ಮಾನವಂತನಿಗೆ ಪಕ್ಕಾತ್ತಾಪದಂತೆ ಮನಸ್ಸಿಗೆ ವಿಚಾರಜಂಭ್ರೋದಯವಾಗುವದು. ಪದನಂತರದಲ್ಲಿ ವ್ಯಾಕುಲನಾದ ಕುಲಜಾತನನ್ನು ಸಂತೈಸಲು ಬರುವ ವೃದ್ಧನಂತೆ ಮನವು ವಿಚಾರಿಸುವ ಸ್ಥಳದಲ್ಲಿಯೇ ನಾಮರೂಪ ವಿಕಾರರಹಿತನೂ ತರಂಗನಿರ್ಮಲಪ್ರಕಾಶ ಕಾಲತ್ರಯಾತ್ಮಕನೂ ಆಗಿರುವ ಪರಶಿವನು ಪ್ರಕಾಶಿಸುವನು. ಹೀಗೆ ಚಂದ್ರೋದಯದಿಂ ಕತ್ತಲೆಯಂತೆ ಆ ದಿವ್ಯಪ್ರಕಾಶದಿಂದ ಬಾಹ್ಯವಾಸನೆಯೆಳಲು ನಿತ್ಯಾನಂದ ಸ್ವರೂಪವಾದ ಮೋಕ್ಷವು ಸಿದ್ಧವಾಗುವದು. ಇದೇ ಪ್ರಾಣನಿರೋಧದಿಂದಾಗುವ ಫಲವು ಮತ್ತು ಸರ್ವರಸಗಳಿಗೂ ರಸವಾಗಿ, ಸರ್ವತೇಜಗಳಿಗೂ ತೇಜವಾಗಿ, ಸರ್ವಕಾಮಗಳಿಗೂ ಕಲ್ಪವೃಕ್ಷವಾಗಿರುವ ಹೃದಯಾಕಾಶ ಚಂದ್ರನ ಚಂದ್ರಿಕಾನಿಹಾರಸುಖವಂ ತಿಳಿದವನೇ ಜೀವನ್ಮುಕ್ತ ನೆನಿಸುವನು.

"ಧರ್ಮರಾಜ್ಯ"

ಮುದೇನೂರು "ವೀರಶೈವ ಧರ್ಮಾಲಯ" ದಿಂದ ಮೇಲ್ಕಂಡ ಮಾಸಪತ್ರಿಕೆಯು ಇದೇ ಕಾರ್ತಿಕ (ಬಹುಧಾನ್ಯ) ಶು|| 1 ರಿಂದ ಹೊರಬಿದ್ದಿವೆ ವರಕವಿ ಶ್ರೀ ವಾಗೀಶಶಾಸ್ತ್ರಿವಾಜ್ಞಾರ್ಯರ ನೇತೃತ್ವದಲ್ಲಿ ಕರ್ನಾಟಕ ಪ್ರಾಚೀನಸಂಸ್ಕೃತಿ, ಇತಿಹಾಸ, ನೀತಿ, ರೀತಿ, ಧರ್ಮ, ಕಾವ್ಯ, ನಾಟಕ, ಕಥೆ ಮೊದಲಾದ ವಿಷಯಗಳನ್ನೊಳಗೊಂಡ, ಪಂಡಿತೋತ್ತಮರ ಹಾಗೂ ಸಮಾಜ ಮುಂದಾಳುಗಳ ಲೇಖನಗಳೂ, ಗ್ರಂಥಗಳೂ, ಪ್ರಾಚೀನ ಗ್ರಂಥಗಳೂ, ಈ ಪತ್ರಿಕೆಯಲ್ಲಿ ವ್ಯಕಟಿಸಲ್ಪಡುವವು.

ವಾರ್ಷಿಕ ಚಂದಾ : ೧–೪–೦.

ಪೋಷಕರಿಗೆ—(ಒಮ್ಮೆಮಾತ್ರ) 10–೦–೦.

ಸಹಾಯಕರಿಗೆ—(,,) 5–೦–೦

ಒಂದಿ ಒಗೆದುಬಿಡುವ ಪತ್ರಿಕೆಯಲ್ಲ ಕನ್ನಡ ಸಾಹಿತ್ಯಾಭಿಮಾನಿಗಳು ಪ್ರೋತ್ಸಾಹ ಸಹಾಯಗಳನ್ನೆಸಗುವುದಾಗಿ ಕೋರುತ್ತೇವೆ.

ಸಂಪಾದಕ : **M. V. Mathad.**

ಮುದೇನೂರು,

ಪೋ|| ರಾಣೆಬೆನ್ನೂರು, ಜಿ|| ಧಾರವಾಡ.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಜಳ ಜ್ವರ, ವಿಪರಬ್ಬು ಬರು ಪಜ್ವರ, ೩ ದಿವ ಸಕ್ಕೊಮ್ಮೆ ಬರುವಜ್ವರ, ಕ್ವಿನಾನ್ಸಾಂದಲೂ ಇಂಜಕ್ಷನ್ಸಾಂದಲೂ ಬಿಡದಿರುವ ಜ್ವರವನ್ನು ನೆಡ್ಡೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜನ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸೆವನೆ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ವಲನ, ಧಾತುಳಕೆಕೊಳ್ಳುವದು, ಮೂತ್ರದೊಡನೆ ನಪ್ಪವಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ಇವೆಲ್ಲದ ಬುದವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿಕ ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟಿ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಹುಳುಗಳನ್ನು ನಾಶಪಡಿಸಿ ಜಾಡಿಸುವ ದರಿಲ್ಲಿ ಮುಖ್ಯ ಔಷಧಿ. ಡಜನ್ ಆ. 0-5-0 100 ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಮು—ಕರಿಣತರವಾದ ಹುಳ ಮೇಯುವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಜ್ಞಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ 3-8-0, ಸಣ್ಣದು ರೂ. 1-14-0.

ಬೇಬಿ ಟೋರ್—ಬಾಲ್ಯಾವ್ಯಾಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಯಿ ರೆಗ್ರಹಣಿ ರೋಗದಿಂದ ಮಾಂಸ ಜೋಲುಬಿದ್ದು ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಈಯರ್ ಒಯಿಲ್—ಕಿವಿ ಸೋರುವದು, ವ ನೋವೆ ಕಿವುಡು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಕಡಿಗೆ ಸಿದ್ಧೌಷಧ ಸೀಸೆಗೆ ರೂ. 1-0 0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಡಿಗೆ ಸೀಸೆಗೆ ರೂ. 1-0 0.

ಕಂಪೌಂಡ್ ಸಿರಪ್ ವೆಸಿಕೂಲ—ಪ್ರಮೇಹ ಮೂತ್ರ ದ್ವಾರದಿಂ ಕೀವು, ಮೂತ್ರಾಶಯಕ್ಕಾವಾಗ ತಡೆಯಲಾರದೆ, ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇವೇ ಮೊದಲಾದ ಪ್ರಮೇಹ ಲಕ್ಷಣಗಳು ಬಂದವನ್ನು ಕೆಲವೆ ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವನು. ಸೀಸೆಗೆ ರೂ. 3-8-0, ರೂ. 1-14-0.

ತುದ್ದ ಟಿಕ್ಕು, ಹೊಮ್ಮೊಪಥಿ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

[೨೫] **ಮಲೇರಿಯಾನ ಕಂಪೆನಿ, ಹಂಪನಕಟ್ಟೆ (21) ಮಂಗಳೂರು, ದ. ಕ.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಏದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಸೇಲ್ಕಂಡ ಪುಸ್ತಕವನ್ನು ಹೊಸ ವಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಅಮದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಪಂಕಜಾರಂಭಕ್ಕಾಗಿ ಬಂದ ತಮ್ಮ ಶಿಷ್ಯರನ್ನು ಕಾಣಾಡಿಕೊಳ್ಳಬೇಕು. ಇವಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೦ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ಕಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ಕಯದಲ್ಲಿ ದೊರೆಯುವವು

ಔಷಧಿ ಹೆಸರು	ಕೂಪ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮುಕ್ತಸಿಂಧೂರ	೧	೪—೦—೦
ಶಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ತುಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹತ್ತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಇಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೩—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜತ ಸೂರ್ಯವುಟಿ	೧	೧—೦—೦
ಶಿಲಾಜತ ಅಗ್ನಿವುಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವತೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್, ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸದೇಕಲ್ಲದೆ ಸ್ವರಹೀನವಾಗಿ ಉಚ್ಚರಿಸವಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಅದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾತ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾತೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನು ಕಂಡು ಡಿತೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರವಮ್ಮ ಭವ್ಯವಾಣ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರವರೆಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೪ ಆಣೆ ಪ್ರತ್ಯೇಕ.

ಮ್ಯಾನೇಜರ್,—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಆಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಆಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯಃ ಸೀಕಾರೋದ್ಭವಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಷ್ಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಂದಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಪ್ರಾಚೀನ ಪ್ರಾಚೀನವಾದ ಗೋಪುರದ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಕೇದಾರಸಂತಾನದ ಆತ್ಯಂತ ಸುಂದರವಾದ ಗೋಪುರದ ಫೋಟೋ .. ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಮಾನರಾಗಿರುವ ಫೋಟೋ ... ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅದ್ದೂರಿಯ ಮೆರವಣಿಗೆಯ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ಪ್ಯಾಸಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಸಿದ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[39] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ

ಪಂಚವಿಂಶತಿ ಪ್ರಸ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) ... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .. ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ ... ೨ ಆಣೆ

ಬಸವಾದಿಸಿಜತತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯರತಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ . ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತಮಾನಾಂಸಾ ... . ೩ ಆಣೆ

ವೀರಶೈವಾಚಾರವಿಧಿ (೨ ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಾಧ್ಯಾಂತದಿವಾಕರ (೩ನೆಯ ೪ವೃತ್ತಿ) .... ೪ ಆಣೆ

ಸದ್ಯೋಧರತ್ನಾವಳಿ .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು) ೪ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಆತ್ಯಂತ ಸುಂದರಮುದ್ರಣ) ೧೩ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೩ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೩ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧೩ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .. .... ೧೩ ಆಣೆ

ಶ್ರೀಕರಭಾಷ್ಯಂ (ಚತುಸ್ಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೩ನೆಯ ಒವೃತ್ತಿ, ೭೦ಮಹತ್ವದ ಫೋಟೋಗಳಿರುವುವು) .... ೧| ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .. ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ... . ೨ ರೂ

ವೀರಶೈವಸಿದ್ಧಾಂತಸುಧಾಕರ .... ೨ ರೂ

ಶಿವಾಷ್ಟೋತ್ತರಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೪ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* The Philosophical Aspect of Virasaivism (*English*) .... 8 As.

Speeches by Pandit Shri Kashinatha Shastriji (*English*) 12 As.

ವೀರಶೈವರತ್ನ (ಮರಾಠಿ) ... . ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) .. ೧ ರೂ.

ವೀರಶೈವೇಂದುಶೇಖರ (ಸಂಸ್ಕೃತ) ... ... ೧ ರೂ.

ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) .. ... ೬ ಆಣೆ.

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ.

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ... ... ೨ ಆಣೆ.

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಿಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ನೇ ತಿರಿ ಗುರುಪಂಚಾಕ್ಷರಿಶಾಸ್ತ್ರಿಗಳವರಿಂದ ಮುದ್ರಿಸಿಕೊಳ್ಳಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರಪರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು--ಆಸ್ಥಾನ ಮಹಾವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ ನೇ ಜನವರಿ ೧೯೩೯ [ಸಂಚಿಕೆ ೩೮

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರೊಡಕ್ಷನ್ನಿನಲ್ಲಿ ಇವರು ೧೪ ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಮುದೇನೂರು ಮಳೇಮಠ, ಇವರು ರಚಿಸಿರುವರು. ಇವರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವವು. ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ ಪುಟಗಳು 176. **ಬೆಲೆ 8 ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKI-VISHISTADVAITA
OR
THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book. No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಲಿಂಗಧಾರಣ ವಿಧಿ.

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದ ಪರಿಗೆ ಈ ವಿಧಿಯು ಮುಖ್ಯವಾಗಿರುವದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಅಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಬೆಲೆ ೪ ಆಣೆ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಹೊಸನಗರ ತಾ॥ ಹುಮಚದ ಹೋಬಳಿ ಬನಸಟ್ಟಿ ಕೊಪ್ಪದ ಮ॥ ರಾ॥ ಶಿವಪ್ಪಗೌಡರು ಶಿವಾಧೀನರಾದ ಪ್ರಯುಕ್ತ ನಡೆಯಿಸಿದ ಗಣಾರಾಧನ ಸಮಯದಲ್ಲಿ ಕಾರ್ಯದರ್ಶಿಗಳಾದ ಮ॥ ರಾ॥ ಸಿದ್ದಪ್ಪ ಗೌಡರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೨ ರೂ. ಯು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಯೂರೋಪಿನಲ್ಲಿ ಯುದ್ಧಾರಂಭವಾಗಬಹುದು

ಬ್ರಿಟನ್ನಿನಲ್ಲಿ ಅಮೆರಿಕೆಯ ರಾಯಭಾರಿಗಳಾಗಿರುವ ಶ್ರೀ ಕೆನ್ನೆಡಿಯವರು ಅಮೆರಿಕದ ಎರಡು ಶಾಸನ ಸಭೆಗಳ ಸದಸ್ಯರಿಂದ ಕೂಡಿದ ಸೈನ್ಯ ಸಮಿತಿಯ ಮುಂದೆ ಯೂರೋಪಿನ ಸದ್ಯದ ಪರಿಸ್ಥಿತಿಯನ್ನು ಕುರಿತು ಕೊಟ್ಟ ಹೇಳಿಕೆಯಲ್ಲಿ "ಬರುವ ವಸಂತ ಕಾಲದಲ್ಲಿ ವಿಶ್ವದ ಘೋರ ಸಂಗ್ರಾಮವು ಯೂರೋಪಿನಲ್ಲಿ ಆರಂಭವಾಗ ಬಹುದಾಗಿದೆ. ಜರ್ಮನಿಯು ಉಕ್ರೇನ್ ಪ್ರಾಂತ್ಯವನ್ನು ಆಕ್ರಮಿಸುವದಾಗಲಿ, ಇಲ್ಲವೇ ಇಟಲಿಯು ಟ್ಯೂನಿಸ್ ಪ್ರಾಂತ್ಯವನ್ನು ಆಕ್ರಮಿಸುವದಾಗಲೀ ಈ ಘೋರ ಸಂಗ್ರಾಮಕ್ಕೆ ಕಾರಣವಾಗಬಹುದು" ಎಂದು ಹೇಳಿದರು. ಫ್ರಾನ್ಸ್ ದೇಶದಲ್ಲಿ ರಾಯಭಾರಿಗಳಾಗಿರುವ ಶ್ರೀ ಬುಲೆಟ್ ರವರೂ ಈ ಅಭಿಪ್ರಾಯವನ್ನು ಸಮರ್ಥಿಸಿರುವರೆಂದು ತಿಳಿದುಬಂದಿದೆ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಸತ್ಯಶೋಧ.

(ಲೇ—ಮಹಾದೇವಪ್ಪ, ಕುಂಬಾರ ಸೂಳ್ಯ.)

ಮಹಾಶಯರೇ !

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಪುರುಷಾರ್ಥಗಳು ನಾಲ್ಕುಂಟು. ಇವು ವಿಹಿಕ, ಪಾರಮಾರ್ಥಿಕ ಗತಿಗಳಿಗೆ ಸಾಧನೆಗಳಾಗಿರುವವು. ಈ ನಾಲ್ಕು ಪುರುಷಾರ್ಥಗಳಲ್ಲಿ ಧರ್ಮವೆಂಬ ಮೊದಲನೆಯ ಪುರುಷಾರ್ಥವು ಉಳಿದ ಪುರುಷಾರ್ಥಗಳಿಗೆ ತಳಹದಿಯಾಗಿರುವದು ಧರ್ಮದಿಂದ ದ್ರವ್ಯ ಲಾಭವೂ, ದ್ರವ್ಯದಿಂದ ಐಯಕೆಯ ಸಫಲತೆಯೂ ಕೊನೆಗೆ ಮೋಕ್ಷವೂ ಸಿದ್ಧಿಸುವುದರಿಂದ ಧರ್ಮದ ಅವಶ್ಯಕತೆಯು ಅತ್ಯಂತವಾಗಿರುವದು. ಈ ಕಾರಣದಿಂದಲೇ ಧರ್ಮವನ್ನು ಬಿಡಬಾರದೆಂದು ಮಹಾತ್ಮರು ಹೇಳುತ್ತಿರುವರು. ಯಾವ ಪುರುಷನು ಧರ್ಮವನ್ನು ಬಿಟ್ಟು ಲೋಭದಿಂದ ದ್ರವ್ಯದ ಆಶೆಯನ್ನು ಮಾಡುತ್ತಾನೆಯೋ ಅವನು ಬಂಗಾರದ ರಾಶಿಯನ್ನು ಬಿಟ್ಟು ಕೆಲಸಕ್ಕೆ ಬಾರದ ಕವಡೆಯನ್ನು ಸಂಗ್ರಹಿಸಿದವನೆಂದು ನೀತಿಯಿರುವದು. ಈ ಧರ್ಮವು ನಿಜರೂಪದಿಂದ ಆಚರಿಸಲ್ಪಟ್ಟರೆ ಮಾತ್ರ ಆಚರಿಸಿದವನಿಗೆ ಉಭಯ ಲೋಕದಲ್ಲಿಯೂ ಜೊತೆಯಲ್ಲಿದ್ದು ಸರ್ವ ಸಿದ್ಧಿಯನ್ನುಂಟುಮಾಡಿಕೊಡುವದು. ಇದರ ಸಹಾಯದಿಂದಲೇ ಮಹಾ ಮಹಾ ಋಷಿಗಳು ಸಂಸಾರಿಗಳಿದ್ದರೂ ತಾವಾನುಗ್ರಹ ಸಮರ್ಥರಾಗಿ ಭವಬಾಧೆಯಿಂದ ದೂರಾಗಿರುವರು ಜಗದಾದಿಯಿಂದಲೂ ನಿತ್ಯನೈಮಿತ್ತಿಕಾದಿರೂಪದಿರದ ಧರ್ಮವು ನಮ್ಮನ್ನು ಕಾಯುತ್ತ ಬಂದಿದೆ. ನಾವು ಹೇಗೆ ಹೇಗೆ ಧರ್ಮಕ್ಕೆ ಶರಣಾಗತರಾಗುತ್ತೇವೋ ಹಾಗೆ ಹಾಗೆ ಧರ್ಮವು ಕಾಮಧೇನುವಿನಂತೆ ನಮಗೆ ಸಕಲಲೋಕದ ಗೆಳೆತನವನ್ನೂ ಸುಖಭೋಗವನ್ನೂ ಉಂಟುಮಾಡುತ್ತಿರುವದು. ಸರ್ವ ಕಾರ್ಯಗಳಲ್ಲಿಯ ಇಷ್ಟಾರ್ಥಸಿದ್ಧಿಗೂ ಜಯಕ್ಕೂ ಧರ್ಮವು ಬೀಜವಾಗಿರುವದು ಯೋಗಿಗಳಾಗಲಿ, ಭೋಗಿಗಳಾಗಲಿ ಯಾರು ಯಾರು ತನ್ನನ್ನು ಆಶ್ರಯಿಸುವರೋ ಅವರವರನ್ನು ಆಯಾಯ ರೂಪದಿಂದಲೇ ಧರ್ಮವು ಸಫಲ ಜೀವಿಗಳನ್ನು ಮಾಡತಕ್ಕದ್ದಾಗಿದೆ ಇದರ ಅಧಾರದಿಂದಲೇ ಲೋಕದಲ್ಲಿ ಮತಗಳು ಸ್ಥಾಪಿಸಲ್ಪಟ್ಟಿರುವವು ಪ್ರತಿಯೊಂದು ಮತದವರು ಧರ್ಮವನ್ನು ಆಶ್ರಯಿಸಿ ಇಹಲೋಕ ಪರಲೋಕಗಳ ಸುಖವನ್ನು ದೊರಕಿಸಿಕೊಳ್ಳುವರು ದೇಹಯಾತ್ರೆಗೆ ಕೈ ಕೊಂಡ ಉದ್ಯೋಗವು ಧರ್ಮದ ಆಶ್ರಯದಲ್ಲಿಯೇ ಜೀವಿಸುತ್ತಿರುತ್ತದೆ ಆ ಉದ್ಯೋಗವು ಹಲವು ರೂಪವಾಗಿ ಪರಿಣಮಿಸಿದಂತೆ ಅವುಗಳ ಸಾಧನಸಾಮಗ್ರಿಯು ಭಿನ್ನ ಭಿನ್ನವಾಗಿರುವದು. ಆಯಾಯ ಉದ್ಯೋಗಿಗಳು ತಮ್ಮ ತಮ್ಮ ಸಾಧನ ಸಾಮಗ್ರಿಗಳನ್ನಿಟ್ಟುಕೊಂಡು ಉದ್ಯೋಗಗಳನ್ನು ಸಾಧಿಸಿ ಲಾಭದಿಂದ ಶರೀರವನ್ನು ರಕ್ಷಿಸುತ್ತಿರುವರು. ಇದರ ಮೇಲಿಂದ ಒಂದು ಶರೀರರಕ್ಷಣೆಗೆ ಹಲವು ಉದ್ಯೋಗಗಳೂ ಅವುಗಳ ಲಾಭವೂ ಅವಶ್ಯಕಗಳಾಗಿರುತ್ತವೆ ಮೊದಲು ಒಕ್ಕಲಿಗನು ಭೂಮಿಯ ಆಧಾರದಿಂದ ಹತ್ತಿಯನ್ನು ಬೆಳೆಯುತ್ತಾನೆ. ಬೇರೊಬ್ಬನು ಆ ಹತ್ತಿಯನ್ನು ಕಾಳಿನಿಂದ ಬೇರ್ಪಡಿಸಿ ಅರಳೆಯನ್ನು ತಯಾರುಮಾಡುವನು. ಮತ್ತೊಬ್ಬನು ಆ ಅರಳೆಯನ್ನು ಬೇರೊಂದು ಸಾಧನದಿಂದ ಎಳೆಯನ್ನು ಮಾಡುವನು ಆ ಎಳೆಯನ್ನು ಜೋಡಿಸಿ ಮತ್ತೊಬ್ಬನು ಬಟ್ಟೆಯನ್ನು ನೇಯುವನು. ಮತ್ತೊಬ್ಬನು ಆ ಬಟ್ಟೆಯನ್ನು ಶರೀರದ ಅಳತೆಗೆ ತಕ್ಕಂತೆ ಕತ್ತರಿಸಿ ಹೊಲಿದು ಕೊಡುವನು ಹೀಗೆ ಅನೇಕೋದ್ಯೋಗಿಗಳಿಂದ ಸಿದ್ಧವಾದ ವಸ್ತುವು ಒಂದು ಶರೀರರಕ್ಷಣೆಗೆ ಸರ್ವಾಂಗ ಸುಂದರವಾಗಿ ಸಿದ್ಧವಾಗುವದು ಭೂಮಿಯ ಆಧಾರದಿಂದಾದ ಹತ್ತಿಯು ಕ್ರಮೇಣ ಅನಂತ ವಿಧವಾದ ಅನಂತ ಹೆಸರುಗಳನ್ನು ತಾಳಿ ಕೊನೆಗೆ ಬೇಕು ಬೇಕಾದ ರೂಪದಿಂದ ಶರೀರವನ್ನು ಅಲಂಕಾರಗೊಳಿಸುತ್ತದೆ. ಹೀಗೆ ಶರೀರವನ್ನು ಅಲಂಕಾರಗೊಳಿಸುವ ಹತ್ತಿಯ ಭಿನ್ನ ಭಿನ್ನ ರೂಪದ ಸಿದ್ಧತೆಯು ಸಾಮಗ್ರಿಗಳು ಬೇರೆ ಬೇರೆ ಇದ್ದು ಅವುಗಳ ಯೋಜನೆಯು ಆಯಾಯ ರೂಪದ ಸಿದ್ಧತೆಗೆ ಯೋಗ್ಯವಲ್ಲದ ರಂಟೆ ಕುಂಟೆಗಳು ನೂಲಿನವನಿಗೂ ನೂಲಿನ ಯಂತ್ರಗಳು ಬಟ್ಟೆಯವನಿಗೂ ಬಟ್ಟೆಯ ಯಂತ್ರಗಳು ಬೇರೆ ಬೇರೆ ಇದ್ದು ಅವುಗಳ ಯೋಜನೆಯು ಆಯಾಯ ರೂಪದ ಸಿದ್ಧತೆಗೆ ಯೋಗ್ಯವಲ್ಲದ ಮತ್ತೊಂದಾಗಿರುವದು. ಹೀಗೆ ಒಂದಲ್ಲ ಒಂದು ಉದ್ಯೋಗಕ್ಕೆ ಸಂಬಂಧಪಟ್ಟ ಸಾಮಗ್ರಿ

ತಿರಸ್ಕಾರವೆಂದರೆ ಶಿವ ತಿರಸ್ಕಾರವೇ ಆಗಿದೆ. ಇದರಿಂದ ತನಗಾಧಾರವಾದ ಧರ್ಮವನ್ನು ಕೆಟ್ಟು ಮಟ್ಟದಿಂದ ತಾನೇ ತ್ಯಾಜ್ಯತಾಗಿ ನೆರಳವನ್ನೇ ಹೊಂದುವನು. ಗುರುವು ಒಬ್ಬರು ಮಾಡಿದ ವಸ್ತುವಲ್ಲ. ಪರಶಿವನ ಪ್ರತ್ಯಕ್ಷರೂ ಶವಾಗಿರುವನು ಅಕ್ಷತೆಯಿಂದ ಸ್ವರ ದೇಶಗಳು ವಿಕರೂಪಗಳಾಗಿದ್ದರೂ ಪರಶಿವಪ್ರಭಾವದಿಂದ ಅಯಾಯ ವಸ್ತುಗಳಲ್ಲಿ ಭಿನ್ನಭಿನ್ನವಾದ ತೇಜಸ್ಸು ಸ್ಥಾಪಿಸಲ್ಪಟ್ಟಿರುವದು. ಕಲ್ಲುಗಳು ಒಂದೇ ಜಾತಿಯವಾಗಿದ್ದರೂ ಕಲ್ಲಿನ ಜಾತಿಯದಾದ ರತ್ನದಲ್ಲಿ ಮಾತ್ರ ತೇಜೋವಿಶೇಷವಿರುತ್ತಿರುವದರಿಂದ ಲೋಕಮಾನ್ಯವಾಗಿರುತ್ತದೆ. ಎಲ್ಲ ಕಟ್ಟೆಗೆಗಳಲ್ಲಿ ಅಗ್ನಿ ಕಲೆಯು ಇದ್ದರೂ ಬನ್ನೀಕಟ್ಟೆಗೆಯಲ್ಲಿ ಮಾತ್ರ ಅತ್ಯಂತ ಪ್ರಸ್ಫುರಿತವಾಗಿರ್ದು ಯಾಜ್ಞಿಕರು ಅದನ್ನೇ ತಮ್ಮ ನಿತ್ಯ ನೈಮಿತ್ತಿಕ ಕಾರ್ಯಗಳಲ್ಲಿ ಪ್ರಧಾನವಾಗಿಟ್ಟುಕೊಂಡು ಕೃತಾರ್ಥರಾಗುತ್ತಿರುವರು ಅದಂತೆ ಅನಾದಿಕಾಲದಿಂದಲೂ ಪರಶಿವ ತೇಜೋವಿಶೇಷ ಕಲಾಧರಿತನಾದ ಗುರುವಿನ ಆಶ್ರಯದಿಂದಲೇ ಧರ್ಮಸಿದ್ಧಿಯನ್ನು ಪಡೆದು ಪರ್ವರೂಪ ಸಾಮಿಗಳಾಗಬೇಕಾಗಿರುವದು. ಕೆಲ ನೊತನ ವಿಚಾರಿಗಳು ನಮಗೇಕೆ ಗುರುವಾಗಲಿಕ್ಕೆ ಬರುವದಿಲ್ಲ? ಗುರುತ್ವವೆಂಬುದು ಇಂಥವರಿಗೇ ಎಂದು ನಿರ್ದಿಷ್ಟವಾಗಿದೆಯೇನು? ಎಂದು ಆ ಗುರುತ್ವವನ್ನು ಕಸಿದುಕೊಳ್ಳುವಂತೆ ಸಾಹಸಪಡಲಿಕ್ಕೆ ಹತ್ತಿದ್ದಾರೆ ಇದನ್ನು ನೋಡಿದರೆ ಈ ಅಲ್ಪ ಸಾಹಸಿಗಳು ರತ್ನದ ತೇಜಃಕಳೆಯನ್ನು ಕಿತ್ತು ಸುಟ್ಟು ಸುಣ್ಣದ ಹರಳನ್ನಲ್ಲಿ ತುಂಬಿ ಧರಿಸಿಕೊಳ್ಳಲಿಕ್ಕೆ ಯತ್ನಿಸಿದಂತೆಯೇ ಸರಿ. ಮತ್ತು ಈ ಕ್ಷಣಿಕ ವಿಚಾರಿಗಳು ಜಮೀನಿನ ತಾರತಮ್ಯಗಳನ್ನು ನೋಡದೆ ಬೀಜಗಳನ್ನು ಬಿತ್ತಿ ಬೆಳೆಯನ್ನು ಉಣ್ಣಬಹುದು. ಕಟ್ಟಿಗೆಯಿಂದ ಮಾತ್ರದಲ್ಲಿ ಬೆಂಕಿಯುಂಟೆಂದು ಕಳ್ಳಿಯ ಕಟ್ಟಿಗೆ ಮುಂಡಿಯ ಕಟ್ಟಿಗೆ ಹೂಲಿಯ ಬೆಂಡು ಮುಂತಾದುವುಗಳೊಡನೆ ಸರಗಾಡಿ ಬಂದ ಎಮ್ಮೆಯ ಮುಂದಿನ ಬಡದಂಟುಗಳನ್ನು ತಿಕ್ಕಿ ಬೆಂಕಿಯನ್ನು ಮಾಡಿ ತಾವು ಧನ್ಯರಾಗಬಹುದು. ಶಿವಶಿವ! ಇವರ ಪ್ರಗಲ್ಭತೆಯನ್ನು ವಿಚಾರಮಾಡುತ್ತ ಹೋದರೆ ವಿಚಿತ್ರವೆನಿಸುತ್ತದೆ. ಪರಶಿವನು ಮನುಷ್ಯನ ವಿಚಾರವು ಕೆಡಬಾರದೆಂಬುದಕ್ಕೆ ಉದಾಹರಣಾರ್ಥವಾಗಿ ತನ್ನ ಸೃಷ್ಟಿಯಲ್ಲಿ ಎಷ್ಟು ವಸ್ತುಗಳನ್ನು ನಿರ್ಮಾಣಮಾಡಿದ್ದಾನೆಂಬುದನ್ನು ವಿಚಾರಮಾಡಬಾರದೆ? ಯಾವನು ವಿರುದ್ಧವಾಗಿ ವರ್ತಿಸಬೇಕೆಂದಿರುವನೋ ಅವನೇ ಮತವನ್ನು ಬಿಟ್ಟುಹೋಗುವನಲ್ಲದೆ ಮತವು ಹೋಗಲಾರದು. ಮತವಿದ್ದ ಮೇಲೆ ಶಿವನಿರ್ದಿಷ್ಟ ಮತದ ಗುರುಧರ್ಮಗಳ ಸಂಪತ್ತು ಸ್ಥಿರವಾಗಿಯೇ ಇರುವುದು. ಮುಂಗೈಯ ಕಂಕಣಕ್ಕೆ ಕನ್ನಡಿಯೇಕೆ? ಇಟ್ಟುಕೊಂಡ ಹೆಂಗಸು ಇನ್ನೆಷ್ಟು ದಿವಸ ವಶದಲ್ಲಿರಬಹುದು! ಯಾರಿಗೂ ತಿಳಿಯದೋ? ಮನುಷ್ಯತ್ವ ಯಾವ ಅವಸ್ಥೆಯಲ್ಲಿದ್ದರೂ ವಿಚಾರತಪ್ಪಿ ನಡೆಯಬಾರದು ಸುವಿಚಾರದಿಂದ ಲಾಭವಾದಂತೆ ವಿಚಾರ ಹೀನತೆಯಿಂದ ಲಾಭವಾಗಲಾರದು. ವಿಚಾರವೆಂಬುದು ಸಂಪ್ರದಾಯ ಶುದ್ಧರಿಗೆ ಭೂಷಣವಲ್ಲದೆ ಹಿಂದುಮುಂದಿನ ಸಂಬಂಧವಿಲ್ಲದೆ ಮಧ್ಯದಲ್ಲಿ ಕುಣಿಯುವ ವಸ್ತುವಿನಂತಿರುವವರಿಗೆ ಭೂಷಣವೆನಿಸಲಾರದು. ಧರ್ಮ ಮತ್ತು ಧರ್ಮ ಸ್ಥಾಪಕ ಗುರುಗಳನ್ನು ಬಿಟ್ಟು ಗತಿಯನ್ನು ಕಾಣಬೇಕೆಂದರೆ ಅಂತಹ ಗತಿಯು ಯಾವದಿರಬಹುದು? ವಿಚಾರ ಶೂನ್ಯರಾಗಿ ದುರ್ಮಾರ್ಗಿಗಳ ಬೆನ್ನಹತ್ತಿದರೆ ಅವರ ಕರ್ಮಕ್ಕೆ ಯಾರೇನು ಮಾಡಬೇಕು? ಯಾರ ಕರ್ಮವು ಹೇಗಿದೆಯೋ ಅದರ ಫಲವನ್ನವರು ಉಣ್ಣಲಿಕ್ಕೆ ಬೇಕು ಶುಭವಿರುವವರಿಗೂ ಶುಭ ಸಂಬಂಧವನ್ನು ಹೊಂದಿರಬಹುದು. ಶುಭವು ತೀರಿದ ಮರುದಿನವೇ ತನ್ನ ಪೂರ್ವ ಕರ್ಮದ ಫಲವನ್ನೇ ಅನುಭವಿಸಕ್ಕವನಾಗುತ್ತಾನೆ. ಧಾರ್ಮಿಕ ಲೌಕಿಕ ಕ್ರಿಯೆಗಳು ಮನುಷ್ಯನ ಐಹಿಕಾಮುಷ್ಮಿಕ ಫಲಕ್ಕೆ ಕಾರಣವಾಗಿರುತ್ತವೆ. ಒಂದನ್ನು ಬಿಟ್ಟು ಒಂದು ಜಗಲುವಂತೆ ಇಲ್ಲ ಎರಡಕ್ಕೂ ಧರ್ಮವೇ ಆಧಾರವಾಗಿರುವದು ಮನುಷ್ಯನು ತನ್ನ ದುಷ್ಟ ಕರ್ಮದ ಫಲವನ್ನ ಹೇಗೆ ಅನುಭವಿಸುವನೋ ಅದರಂತೆ ಧರ್ಮವನ್ನು ನ್ಯತ್ಯಾಸಗೊಳಿಸಿದವನು ನ್ಯತ್ಯಾಸಗೊಳಿಸಬೇಕೆಂದಿರುವವನೂ ಅಧೋಗತಿಯನ್ನು ಹೊಂದುವರೆಂಬುದನ್ನು ಯಾರೂ ಮರೆಯಬಾರದು. ಕ್ಷಯರೋಗಿಯು ಎದುರಿನಲ್ಲಿ ಪೌಷ್ಟಿಕ ಪದಾರ್ಥಗಳು ಬೇಕಾದಷ್ಟು ಕಂಗೊಳಿಸುತ್ತಿದ್ದರೂ ನೋಡಿದರೆ ಅತಾರೋಗ್ಯವಾದೀತೆಂಬ ಭಯದಿಂದ ಆಹಾರವನ್ನು ಮುಂದಿಟ್ಟುಕೊಂಡು ಕುಳಿತ ಚಿತ್ರದ ಗೊಂಬೆಯಂತೆ ಆ ಕ್ಷಯರೋಗಿಯು ತನ್ನ ಪೂರ್ವಕರ್ಮದ ಫಲವನ್ನೇ ಅನುಭವಿಸುತ್ತಿರುವಂತೆ ಗುರು ಧರ್ಮಹೀನರಿಗೆ ಧರ್ಮತತ್ವಗಳ ಸುಖಾನುಭವವೆಲ್ಲಿ? ಹೆಸರು ತೆಗೆದ ಕೂಡಲೆ ಅವರ ಕರ್ಮಬಂಧವು ಕಣ್ಣಿಗೆ ಪರಿಯನ್ನೇ ತರುವದೆಂದು ಹೇಳಲು ಅಭ್ಯಂತರವಿಲ್ಲ ಧರ್ಮದ್ರೋಹಿಗಳ ಅವಸ್ಥೆಯು ಇನ್ನೂ ಎಂತೆಂತಹ ದುರವಸ್ಥೆಯನ್ನು ತರುವದೋ ಇಂದು ಗಣಿಸಲು ಸಾಧ್ಯವಿಲ್ಲ. ಮನುಷ್ಯಗುಣಗಳು ಸತ್ಯಪೂತವಾಗಿದ್ದರೆ ಮಾನವೆತೆಯನ್ನುಂಟುಮಾಡುತ್ತವೆ. ಕೆಟ್ಟುವಾಗಿದ್ದರೆ ಅನೇಕ ತರಹದ ಪೆಟ್ಟಗಳನ್ನು ತಿನ್ನಿಸುತ್ತವೆ. ಇದಕ್ಕೆ ಸದ್ಗುಣಗಳಿಂದ ಮನ್ನಣೆ ಹೊಂದುವವರೂ ದುರ್ಗುಣಗಳಿಂದ ಸಿಕ್ಕಸಿಕ್ಕಲ್ಲಿ ಸಿಕ್ಕಸಿಕ್ಕಂತೆ ಅಪಮಾನ ಹೊಂದುವವರೂ ಸಾಕ್ಷೆಗಳಾಗಿರುವರು ಇಂಥವರು ಬದುಕಿದ್ದರೂ ಅಷ್ಟೇ ಸತ್ತರೂ ಅಷ್ಟೇ! ಯೋಗ್ಯ ಮಾರ್ಗವನ್ನು ಹಿಡಿದುಹೋದರೆ ಸರಿ ಮಾರ್ಗಶ್ರಮವು ತಿದ್ದರೂ ಆ ಮಾರ್ಗವು ಅವನನ್ನು ಮೈ ಕೈಗಳನ್ನು ನೋಯಿಸದೆ ಸುಖವಾಗಿ ತೆಗೆದುಕೊಂಡು ಹೋಗುವದು ಸ್ವಲ್ಪ ಮಾರ್ಗವನ್ನು ಬಿಟ್ಟನೆಂದರೆ ಎಂತಹ ಯಂತ್ರವಾಹನವನ್ನು ಹತ್ತಿಕೊಂಡಿದ್ದರೂ ಅದು ತನ್ನನ್ನು ಬಿಟ್ಟವನನ್ನು ಕೊಂದೇಬಿಡುವದು. ಇಲ್ಲವೇ ಕುಟಿ ಕಟವಾಯಿಗಳನ್ನು ಹರಿದಾಗಲೀ ಕೈಕಾಲುಗಳನ್ನು ಮುರಿದಾಗಲೀ ವಿರೂಪಗೊಳಿಸದೆ ಬಿಡಲಿಕ್ಕಿಲ್ಲ ಮಾರ್ಗವು ಸುಖಕ್ಕೋಸ್ಕರವೇ ನಿರ್ಮಿತವಾಗಿರುವದರಿಂದ ಲೌಕಿಕದಲ್ಲಿಯಾಗಲಿ ಧಾರ್ಮಿಕದಲ್ಲಿಯಾಗಲಿ ಮಾರ್ಗಚ್ಯುತನಾಗಬಾರದು. ಧಾರ್ಮಿಕ-ಲೌಕಿಕ ಮಾರ್ಗಗಳೆರಡೂ ಆಚಾರ್ಯರಿಂದಲೇ ಸ್ಥಾಪಿತಗೊಳಿಸಿ ಅಧಿಕಾರ ಕಾಲದಲ್ಲಿ ಆಚಾರ್ಯರಿಂದಲೇ ಉಪದಿಷ್ಟಗಳಾಗಿ ಆಚರಣೆಯಲ್ಲಿ ಬಂದಿರುವವು ಇದಕ್ಕೆ ಅನಾದಿ ಕಾಲದಿಂದಲೂ ಇದೇ ಗುರುವರ್ಗವೆಂದು ನಿರ್ದಿಷ್ಟವಾಗಿ ಅದರಿಂದಲೇ ಅಗುತ್ತ ಬಂದಿರುವ ಗರ್ಭದೀಕ್ಷಾದಿ ಅಂತ್ಯೇಷ್ಟಿ ವರೆಗಿರುವ ಸಂಸ್ಕಾರಗಳೂ ನಿತ್ಯನೈಮಿತ್ತಿಕಾದಿ ಕರ್ಮಗಳೂ ಇನ್ನೂ ಅನೇಕ ಧಾರ್ಮಿಕ ಲೌಕಿಕ ಕ್ರಿಯಾಚರಣಗಳೂ ನಿದರ್ಶನಗಳಾಗಿರುವವು ಇಲ್ಲವಾದರೆ ಮಾಡಿಕೊಂಡ ಹೆಂಡರು ಬೇಕುಬೇಕಾದವರನ್ನು ಗಂಡರನ್ನಾಗಿ ವರಿಸುವದಕ್ಕೆ ಒಪ್ಪಿಗೆಯನ್ನು ಕೊಡಬಹುದಾದೀತು. ಈ ಲೋಕಯಾತ್ರೆಗೆ ಧರ್ಮಸಹಾಯವುಳ್ಳ ಲೌಕಿಕವೂ ಪರಲೋಕಯಾತ್ರೆಗೆ ಕೇವಲ ಧರ್ಮವೂ ಅವಶ್ಯಕವಾಗಿದ್ದರೂ ಗುರೂಪದಿಷ್ಟ ಲೌಕಿಕ ಯಾತ್ರಾಚರಣವು ಮುಂದುವರಿದು ಸಂಸಾರಿಗಳೆಲ್ಲರೂ ಅದರಲ್ಲಿ ಬಲ್ಲಿದರಾದರು ಧಾರ್ಮಿಕಾಚರಣವು ಪ್ರತಿನಿತ್ಯವೂ ಗುರುವಿನಿಂದಲೇ ತಿಳಿಯಬೇಕಾದುದಿದ್ದು ಕಾಲದೋಷದಿಂದ ಬೋಧದುಂಡಿಮೆಯಾಗಿ ಧರ್ಮಚರಣದಲ್ಲಿ ಶಿಥಿಲ ಪ್ರವೃತ್ತಿಯು ಹುಟ್ಟಬಹುದೆ ಅದರ ರುಚಿಯು ಶಿಗದೆ ಹೋಗಿರುವದು. ಇದಕ್ಕೆ ಗುರುವರ್ಗದ ಅಜಾಗರೂಕತೆಯೇ ಕಾರಣವಾಗಿರುತ್ತದೆಂದು ಹೇಳಲು ಅಡ್ಡಿಯಿಲ್ಲ

ಧಾರ್ಮಿಕ ಬಲವಿಲ್ಲದೆ ಹೋದರೆ ಲೌಕಿಕದಲ್ಲಿ ಸಿದ್ಧಿಯನ್ನು ಕಾಣಲು ಸಾಧ್ಯವಿಲ್ಲವಷ್ಟೆ! ಧರ್ಮದ ಸಹಾಯವನ್ನು ಸುಖಾನೆಕ್ಷೆಯು ತೆಗೆದುಕೊಳ್ಳಲಿಕ್ಕೆ ಬೇಕು ವಿಕೃತ ಪರಿಣಯದಲ್ಲಿ ಬಂದಿರುವ ಲೌಕಿಕವು ಒಮ್ಮೊಮ್ಮೆ ಶೈಥಿಲ್ಯೋನ್ಮುಖವಾಗಿದ್ದರೂ ಲೌಕಿಕರು ಅದನ್ನು ತಿದ್ದಿಕೊಳ್ಳಲು ಯತ್ನಿಸಿ ಸಿದ್ಧಿಯನ್ನು ಕಾಣಬಹುದು. ಅವರಿಚಿತವಾದ ಧರ್ಮದ ಮರ್ಮವು ಲೌಕಿಕರಿಗೆ ತಿಳಿಯಲು ಸಾಧ್ಯವಿಲ್ಲ ಅಕಸ್ಮಿಕವಾಗಿ ಉಂಟಾದ ಆ ಧರ್ಮದ ಶೈಥಿಲ್ಯ ನಿವಾರಣಕ್ಕೆ ಧರ್ಮಗುರುಗಳೇ ಮುಂದುವರಿಯಬೇಕು ಅಂದರೆ, ಧರ್ಮದ ಸ್ವರೂಪವು ಪರಿಶುದ್ಧವದು ಪ್ರಕೃತದಷ್ಟಿ, ಧಾರ್ಮಿಕ ಲೌಕಿಕಾಚರಣಗಳ ಶೈಥಿಲ್ಯದಿಂದ ಸಮಾಜವು ಅವನತಿಯನ್ನು ಹೊಂದಲುನ್ಮುಖವಾಗಿರುವಲ್ಲಿ ವೈದಿಕರು, ಲೌಕಿಕರು, ಕೂಡಿ ಸಮಾಜ ಸುಧಾರಣೆಯನ್ನು ಮಾಡಲು ಪ್ರಯತ್ನಿಸುವದೊಳ್ಳೆಯದು. ಈ ಉದ್ದೇಶದಿಂದಲೇ ಉದಯಿಸಿದ ಮಹಾಸಭೆಯು ನಿಜವಾದ ತನ್ನ ಉದ್ದೇಶವನ್ನು ಸಫಲಮಾಡಿಕೊಳ್ಳದೆ. ವೃಥಾ ಧನವ್ಯಯಕ್ಕೆ ಅವಕಾಶವನ್ನು ಕೊಟ್ಟಿದೆಯೆಂದು ಹೇಳಲು ವಿಷಾದವಾಗುತ್ತದೆ ಕಾಮಧೇನುವು ವಿಷವನ್ನು ಹಿಂಡಿತೆಂದರೆ ಮಾಡಬೇಕೇನು? ಅದರ ರೋಗವು ಪರೀಕ್ಷಕರಾದ ಆಚಾರ್ಯ ಪಂಡಿತರಿಗೆ ಗೊತ್ತಿರುವದರಿಂದ ಅವರ ಕೃಪೆಯನ್ನು ಪಡೆಯುವದು ಮೊದಲನೆಯ ಕರ್ತವ್ಯವಾಗಿದೆ. ಈ ವಿಷಯವನ್ನು ಸಮಾಜ ಪ್ರಮುಖರು ಧ್ಯಾನಕ್ಕೆ ತಂದು ಯೋಗ್ಯರೀತಿಯಿಂದ ಕಾರ್ಯವನ್ನು ಮಾಡಿದಕ್ಕದ್ದು ಉಚಿತವಾಗಿದೆ ಸಮಾಜ ಸುಧಾರಣೆಯೆಂದರೆ, ಮಾಸ್ತರರೂ ವಿದ್ಯಾರ್ಥಿಗಳೂ ಆಗಿ ಆಡುವ ಬಾಲಕರ ಆಟದಂತಲ್ಲ ಸ್ವಾರ್ಥಸಾಧಕರು ಮಾಡುವ ಅನುಚಿತ ಕಾರ್ಯದಲ್ಲಿ ಭಾಗವನ್ನು ವಹಿಸುವವರಿಗೆ ಧರ್ಮದ್ರೋಹ. ಗುರುದ್ರೋಹ, ಶಿವದ್ರೋಹಗಳು ಜನ್ಮ ಜನ್ಮಾಂತರ ಶಪ್ತಾಗಳಾಗಿ ಪರಿಣಮಿಸುವವೆಂಬುದನ್ನು ನಿಜವಾದ ವೀರಶೈವರು ಗಟ್ಟಿಯಾಗಿ ತಿಳಿಯಲಿಕ್ಕೆ ಬೇಕು. ಧರ್ಮದ ವ್ಯತ್ಯಾಸವು ಕಿಂಚಿನ್ಮಾತ್ರವಾದರೂ ಸಂಭವಿಸಿದರೆ ಅಪಥ್ಯದಿಂದ ರೋಗಿಯು ಸ್ಮಶಾನ ಯಾತ್ರೆಯನ್ನು ಹೊಂದಿದಂತೆ ಸಮಾಜವು ನಾಶೋನ್ಮುಖವಾಗುವದು. ಸರ್ವಾಂಗಸುಂದರವಾದ ನಮ್ಮೀ ಮತವು ಇಷ್ಟು ಹೀನಾವಸ್ಥೆಗೆ ಬರಬೇಕಾದರೆ, ಆರ್ಯ ಪುಂಗವರ ಮಾರವೆಯಲ್ಲಿ ಅನಧಿಕಾರಿಗಳು ಮೆಲ್ಲಮೆಲ್ಲನೆ ಒಳನುಗ್ಗಿ ನಿಜವಾದ ಆಚಾರ್ಯರ ಧರ್ಮಶರಣೆಯನ್ನು ಕುತಂತ್ರಿಕದಿಂದ ಲೋಪಗೊಳಿಸಲಿಕ್ಕೆ ಹತ್ತಿದ್ದೇ ಕಾರಣವಾಗಿದೆ. ಶರಣಿಯು ಭಿನ್ನಭಿನ್ನವಾಗಿ ತತ್ವದ ರಹಸ್ಯವನ್ನು ಗೊತ್ತಿಲ್ಲದವರಿಗೆ ಅದರಲ್ಲಿ ವಿಪರೀತ ಮತಿಯು ಬರಲಿಕ್ಕೆ ಹತ್ತಿದೆ ಇನ್ನಾದರೂ ಸಮಾಜದವರು ಒಮ್ಮನಸ್ಸಿನಿಂದ ಧರ್ಮಪತಿಗಳನ್ನಾಶ್ರಯಿಸಿ ನಿಜಧರ್ಮಾಚರಣದಿಂದ ಕೃತಾರ್ಥರಾಗಬೇಕಾಗಿ ಕೋರುವೆನು ಆಚಾರ್ಯರ ಕೃಪಾಬಲವು ದೊರೆಯಿತೆಂದರೆ ನಿರಾಕ್ಷೇಪವಾಗಿ ಮತವು ತನ್ನ ದಾರಿಯನ್ನು ಹಿಡಿಯುವುದು. ಇಲ್ಲವಾದರೆ ಎಷ್ಟು ಕೋಟಿ ಸಭೆಗಳನ್ನು ಮಾಡಿದರೂ ಅವುಗಳಿಂದ ಯಾವುದೂ ವ್ಯವಹಾರಕ್ಕೆ ಸಮಾನವಾಗುವವೆಂಬುದನ್ನು ಯಾರೂ ಮರೆಯಬಾರದು

॥ ಸತ್ಯಮೇವ ಜಯತೇ ॥

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಶ್ರುತೀದಂತು ॥

ಮತಾಭಿಮಾನ.

ಲೇ—ಸಿದ್ಧಲಿಂಗಾರ್ಯ ಶಿವೇಮಹ, ಹೊಂಬಳ.

ಮತಾಭಿಮಾನವೆನ್ನುವದು ಶ್ರುತಿಯೊಳ್ಪ ಮಾನವನಿಗೂ ಮುಖ್ಯವಾಗಿರಬೇಕು ಮತಾಭಿಮಾನವಿಲ್ಲದವನು ಪಶುವಿಗೆ ಸಮಾನನೆನಿಸುವನು. ತಾನು ಜನಿಸಿದ ಮತದಲ್ಲಿದ್ದುಕೊಂಡು ಆ ಮತಾಚಾರ್ಯರು ಹಾಕಿಕೊಟ್ಟಿರುವ ನಿಯಮಗಳನ್ನು ಪಾಲಿಸುವದು ಆ ಮತೀಯನ ಆದ್ಯ ಕರ್ತವ್ಯವಾಗಿರುವದು. ಅದುದರಿಂದಲೇ " ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥ " ಎಂದು ಮಹಾತ್ಮ ಸಾರಿರುವರು. ಈ ಕಾಲದಲ್ಲಿ ಕೆಲವರು ಮತಾಭಿಮಾನಕ್ಕೆ ತಿಲಾಂಜಲಿಯನ್ನು ಕೊಟ್ಟು ಯಾವುದೋ ಒಂದು ದುರುದ್ದೇಶದಿಂದ ಸ್ಪೃಶ್ಯಾಸ್ಪೃಶ್ಯ ಭೇದವನ್ನು ತೊಡೆದುಹಾಕಬೇಕೆಂದು ಹೇಳಿಸುತ್ತ ಸನಾತನ ಧರ್ಮಧ್ವಜವನ್ನುರುಳಿಸಲು ಪ್ರಯತ್ನಪಡುತ್ತ, ಕಾಂಗ್ರೆಸ್ಸಿನ ಧ್ಯೇಯವನ್ನು ಮರೆತು ಅದರ ಮರೆಯಲ್ಲಿ ನಿಂತುಕೊಂಡು ಧರ್ಮವಿರುದ್ಧ ಕಾರ್ಯಗಳನ್ನು ಮಾಡಹತ್ತಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಕೆಲಜನ ಹಂಡಬಂಡ ಸಂಕರ ಜಾತಿಯವರು ಧನಾಶೆಯ ಬಲೆಯೊಳಗೆ ಬಿದ್ದು ಸನ್ಯಾಸಿಗಳೆದುರಿಗೆ ಮತಾಚಾರ್ಯರ ನಿಂದೆಯನ್ನುಮಾಡುತ್ತ ಉದರಪೋಷಣಮಾಡಿಕೊಳ್ಳುತ್ತಿರುವರು. ಇವರಿಗೆ ಯಜಮಾನನು ಯಾವ ಶಿಕ್ಷೆಯನ್ನು ವಿಧಿಸುವನೋ ತಿಳಿಯದಾಗಿದೆ. ಇನ್ನಾದರೂ ಸಾಂಕರ್ಯವಾದಿಗಳು ತಮ್ಮ ಪಾಪಮಾರ್ಗವನ್ನು ಬಿಟ್ಟು ಸನ್ಮಾರ್ಗದಲ್ಲಿ ಪ್ರವರ್ತಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕು. ಸನಾತನ ಶುದ್ಧ ಸಂಪ್ರದಾಯದ ವೀರಶೈವರು ಈ ಸಂಕರವಾದಿಗಳ ಬಲೆಗೆ ಬೀಳದೆ ಅವರ ವಕ್ರಮಾರ್ಗವನ್ನು ಖಂಡಿಸಿ ಅವರಿಗೆ ಬುದ್ಧಿಯು ಬರುವಂತೆ ಮಾಡಬೇಕು. ಈ ವಕ್ರಮಾರ್ಗಾಗಾಮಿಗಳನ್ನು ತೀವ್ರವಾಗಿ ಖಂಡಿಸಿದ ಹೊರತು ಇವರು ದಾರಿಗೆ ಬರುವಂತಿಲ್ಲ ಇಶ ಸರ್ವರೂ ಲಕ್ಷ್ಯ ವನ್ನೀಯಬೇಕೆಂದು ಪ್ರಾರ್ಥನೆ.

ಪಂಚಾಚಾರ್ಯಪ್ರಭಾ.

೧೯೩೯ ನೆಯ ಜನವರಿ ತಾ॥ ೨೩ ನೇ ಸೋಮವಾರ.

ಗುರು ಭಕ್ತಿ.

ಅಖಿಲಮಾನವರ ಉದ್ಧಾರಕ್ಕಾಗಿ ವೈದಿಕಧರ್ಮಗಳೂ ಆ ಧರ್ಮಗಳನ್ನು ಪ್ರಚಾರಮಾಡುವ ಆಚಾರ್ಯರೂ ಪ್ರಪಂಚದಲ್ಲಿ ಅವತರಿಸಿದರು. ಯಾವ ಮಾನವನಿಗೆ ವೇದೋಕ್ತವಾದ ಧರ್ಮಗಳಲ್ಲಿಯೂ ಆಚಾರ್ಯರಲ್ಲಿಯೂ ಶ್ರದ್ಧೆಯಿಲ್ಲವೋ ಅವನು ಭಗವಂತನ ಕೃಪೆಗೆ ದೂರನಾಗುವನು. ವೈದಿಕಧರ್ಮವನ್ನು ಬೋಧಿಸುವ ಆಚಾರ್ಯರಿಗೂ ಭಗವಂತನಿಗೂ ಅತಿನಿಕಟ ಸಂಬಂಧ ವಿರುತ್ತದೆ. ಸೃಷ್ಟಿ, ಸ್ಥಿತಿ, ಸಂಹಾರಕರ್ತನಾದ ಪರಮೇಶ್ವರನು ಋಗಾದಿ ವೇದಗಳ ಮೂಲಕವಾಗಿಯೂ ಜಗನ್ಮಂಗಳ ಮೂಲಕವಾಗಿಯೂ ಮಾನವಧರ್ಮಗಳನ್ನು ಬೋಧಿಸಿ ತನ್ನ ಪೂರ್ಣಾಂಶಗಳಿಂದ ಆಚಾರ್ಯರನ್ನು ಅವತಾರಮಾಡಿಸಿ ಅವರ ಸಂರಕ್ಷಕತ್ವಗಳಿಂದ ಧರ್ಮವನ್ನು ಪರಿಪಾಲನೆಯನ್ನು ಮಾಡಿಸುವನು. ಅವರೇ ಮೂಲಾಚಾರ್ಯರೆನಿಸಿಕೊಳ್ಳುತ್ತಾರೆ. ಪ್ರತಿಯೊಂದು ಸಂತತಲ್ಲಿಯೂ ಮೂಲಾಚಾರ್ಯರು ಇದ್ದೇ ಇರುತ್ತಾರೆ ವೀರಶೈವ ಮತದಲ್ಲಿ ಮೂಲಾಚಾರ್ಯರೆಂದರೆ ಶ್ರೀ ರೇಣುಕಾದಿ ಪಂಚಾಚಾರ್ಯರಾಗಿದ್ದಾರೆ. ಈ ಮತದಲ್ಲಿ ಜನಿಸಿದ ಚಿಕ್ಕ ಮಗು ಚಾರಿ ಮೊದಲುಗೊಂಡ ಸಿದ್ಧಾಂತಿಯವರೆಗೂ ಇರುವ ಸಕಲ ಮಾನವರಿಗೂ ಪಂಚಾಚಾರ್ಯರೇ ಗುರುಗಳಾಗಿರುತ್ತಾರೆ. ಅವೈದಿಕಮತಸ್ಥರಿಗೆಲ್ಲಾ ಶ್ರೀ ರೇಣುಕಾಚಾರ್ಯರೇ ಮೂಲಗುರುಗಳಾಗಿರುವಂತೆಯೂ, ಪಶುಪಾಶ್ಯೈವಮತದವರಿಗೆಲ್ಲಾ ರಾಮನಾಜಾಚಾರ್ಯರೇ ಮೂಲಗುರುಗಳಾಗಿರುವಂತೆಯೂ, ವೀರಶೈವಸನಾತನಸ್ಥರಿಗೆಲ್ಲಾ ಶ್ರೀ ರೇಣುಕಾದಿಪಂಚಾಚಾರ್ಯರೇ ಮೂಲಗುರುಗಳಾಗಿರುತ್ತಾರೆ. ವೀರಶೈವಮತದ ಧರ್ಮಕರ್ಮಗಳಿಗೆಲ್ಲಾ ಈ ಮೂಲಾಚಾರ್ಯರೇ ಅಧಿಕಾರಿಗಳಾಗಿರುವುದರಿಂದ ಪ್ರತಿಕ್ಷಣದಲ್ಲಿಯೂ ಪ್ರತಿಯೊಬ್ಬ ಲಿಂಗಾಂಗಿಯೂ ಈ ಜಗದ್ಗುರುಗಳ ನಾಮಸ್ಮರಣೆಯಿಂದ ಪವಿತ್ರನಾಗಬೇಕಾಗಿದೆ ಇದಕ್ಕೆ ವಿರುದ್ಧವಾಗಿ ಅನೇಕರು ತಾವು ವಿಶಾಲ ಸ್ವತಂತ್ರವಿದ್ವಾಂಸರೆಂದು ಹೇಳಿಕೊಂಡು ವೀರಶೈವಸನಾತನದಲ್ಲಿ ಜನ್ಮವನ್ನು ಎತ್ತಿದ್ದರೂ, ಆಚಾರ್ಯರು ಅನುಗ್ರಹಿಸಿದ ಲಿಂಗವನ್ನು ಕೊರಳಿದಲ್ಲಿ ಧರಿಸಿದ್ದರೂ, ಅವರು ಬೋಧಿಸಿದ ಸಂತ್ರವನ್ನೇ ಜಪಿಸುತ್ತಿದ್ದರೂ, ಅಂಥ ಮೂಲಗುರುಗಳಲ್ಲಿ ಅಶ್ರದ್ಧೆಯನ್ನು ತೋರಿಸುತ್ತಿರುವುದು ವಿಷಾದಕರವಾಗಿದೆ.

ವೀರಶೈವಮತದಲ್ಲಿರುವ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬ ನಾಲ್ಕು ತರಗತಿಗಳ ಆವನವನ ಉಪಾಸನಾಸಾಮರ್ಥ್ಯಾನುಸಾರವಾಗಿ ಒಬ್ಬನಲ್ಲೇ ಸಂಘಟಿಸುತ್ತವೆ. ಸಾಮಾನ್ಯವಾಗಿ ಗುರುಕುಲವಾಸ ಮಾಡಿ ದೀಕ್ಷೋಪನಯನಾದಿಗಳಿಂದ ಪರಿಶುದ್ಧನಾಗಿ ಅಧ್ಯಯನಾಸಕ್ತನಾಗಿರುವನೇ ಬ್ರಹ್ಮಚಾರಿಯು ಇವನು ಗುರುವಿನ ಆಜ್ಞೆಯಿಂದ ಧರ್ಮಪತ್ನೀಸ್ವೀಕಾರ ಮಾಡಿದರೆ ಗೃಹಸ್ಥನೆನಿಸುವನು. ಈತನೇ ಗುರುವಿನ ಆಜ್ಞೆಯನ್ನು ಪಡೆದು ತನ್ನ ಪುತ್ರರಿಗೆ ಸಂಸಾರಭಾರವನ್ನೆಲ್ಲಾ ವಹಿಸಿ ಅರಣ್ಯದಲ್ಲಿದ್ದು ಕಂದಮೂಲಾಹಾರಾದಿಗಳಿಂದ ಜೀವಿಸುತ್ತಿದ್ದರೆ ವಾನಪ್ರಸ್ಥನೆನಿಸುವನು. ಹಿಂದಿನ ಮೂರು ಆಶ್ರಮಗಳನ್ನು ತ್ಯಾಗಮಾಡಿ ಕೇವಲ ಗುರುನಿಂದುಪರಿಶ್ಚವಾದ ಮಹಾಮಂತ್ರಧ್ಯಾನಾಸಕ್ತನಾಗಿರುವವನೇ ಸನ್ಯಾಸಿಯೆನಿಸುವನು. ಹೀಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಶಿಷ್ಯರ ಹೃದಯಕ್ಷೇತ್ರದೊಳಗೆ ಬ್ರಹ್ಮಚರ್ಯಾಶ್ರಮದಲ್ಲಿ ಬಿತ್ತಿದ ಮಂತ್ರಬೀಜವು ಉಪಾಸನಾಶಕ್ತಿಯಿಂದ ಬೆಳೆಯುತ್ತ ಶಿವಸಾಕ್ಷಾತ್ಕಾರವೆಂಬ ಮಹಾಫಲವನ್ನು ಯಾವನು ಪಡೆಯುವನೋ ಅವನೇ ನಿರಾಭಾರಿಯೆಂದೂ ಲಿಂಗಾರೂಢನೆಂದೂ ಶಿವಯೋಗಿಯೆಂದೂ ಲಿಂಗಾವಧೂತನೆಂದೂ ಅನಂತನಾಮಗಳಿಂದ ಕರೆಯಿಸಿಕೊಳ್ಳಲ್ಪಡುವನು. ಇದರಿಂದ ತಾನು ಯಾವ ಆಶ್ರಮವನ್ನು ಸ್ವೀಕರಿಸಿದರೂ ಗುರುವಿನ ಮಂತ್ರೋಪದೇಶವನ್ನಾಗಲಿ ಗುರುವಿನಲ್ಲಿಟ್ಟ ಭಕ್ತಿಯನ್ನಾಗಲಿ ಗುರುವಿನಿಂದ ಧರಿಸಿದ ಲಿಂಗವನ್ನಾಗಲಿ ಗುರುವಿನಿಂದ ಬಂದ ಪಂಚಾಚಾರಾಷ್ಟಾವರಣಗಳನ್ನಾಗಲಿ ಬಿಡುವಂತಿಲ್ಲವು. ಶಾಸ್ತ್ರದೃಷ್ಟಿಯಿಂದ ವಿಚಾರಮಾಡಿನೋಡಿದರೆ ಬಾಲ್ಯ ವಸ್ಥೆಯಲ್ಲಿರುವ ಬ್ರಹ್ಮಚಾರಿಗಳಿಗಿಂತಲೂ ಗೃಹಸ್ಥನಲ್ಲಿಯೂ ವಿಷಯಲಂಪಟನಾದ ಆ ಗೃಹಸ್ಥನಿಗಿಂತಲೂ ನಿರ್ಜನಸೋಷ್ಠಿಯಲ್ಲಿ ಮಿತಾಹಾರಿಯಾಗಿ ಪರಶುದ್ಧನಾಗಿರುವ ವಾನಪ್ರಸ್ಥನಲ್ಲಿಯೂ, ಆಂಥ ವಾನಪ್ರಸ್ಥನಿಗಿಂತಲೂ ಸರ್ವಸಂಗಪರಿತ್ಯಾಗಿ ನೂಡಿದ ಸನ್ಯಾಸಿಯಲ್ಲಿಯೂ ಉತ್ತರೋತ್ತರ ವಿಶೇಷ ಭಕ್ತಿಯು ನೆಲೆಗೊಳ್ಳಬೇಕು.

ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ ।
ತಥಾ ಗುರುವರೇ ಕುರ್ಯಾದುಪಚಾರಾನ್ ದಿನೇದಿನೇ ॥

ಎಲೈ ವಿರಕ್ತಶಿಖಾಮಣಿಯಾದ ಅಗಸ್ತ್ಯಮಹರ್ಷಿಯೇ! ನೀನು ಸರ್ವಕರ್ತನಾದ ಯಾವ ಪರಮೇಶ್ವರನನ್ನು ಪ್ರತಿದಿನವೂ ಹೇಗೆ ಉಪಚರಿಸುವಿಯೋ, ಹಾಗೆಯೇ ಲಿಂಗರೂಪನಾದ ಪರಮೇಶ್ವರನನ್ನು ನಿನ್ನ ಹಸ್ತದಲ್ಲಿ ಆನುಗ್ರಹಿಸಿದ ಗುರುವನ್ನೂ ಉಪಚರಿಸು.

ಅಶ್ರತ್ಯಕ್ಷೋ ಮಹಾದೇವಃ ಸರ್ವೇಷಾಸುಕ್ಷಮಾಯಯಾ ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಮುಕ್ತಿಸಿದ್ಧಯೇ ॥

ಅಪ್ರತ್ಯಕ್ಷನಾದ ಪರಶಿವನು ಗುರುರೂಪದಿಂದ ಪ್ರತ್ಯಕ್ಷನಾಗಿ ಬಂದು ಮನುಷ್ಯನನ್ನು ಅನುಗ್ರಹಿಸುವನೆಂದು ಶ್ರೀರೇಣುಕಾಚಾರ್ಯರು ಬೋಧಿಸಿರುವರು.

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।

ಎಂದು ಶ್ವೇತಾಶ್ವತರೋಪನಿಷತ್ತು ಸಹ ಇದೇ ಅರ್ಥವನ್ನೇ ಬೋಧಿಸಿರುವುದರಿಂದ ವೀರಶೈವಮತದಲ್ಲಿ ಜನ್ಮವೆತ್ತಿದ ಸಕಲಾಶ್ರಮಿಗಳೂ ಶ್ರೀ ರೇಣುಕಾದಿ ಮೂಲಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನು ತೋರಿಸುತ್ತ ಅವರವರ ಆಶ್ರಮಾನುಸಾರವಾಗಿ ಧರ್ಮನಿಷ್ಠರಾಗುತ್ತ ಧನ್ಯರಾಗಿ, ವೀರಶೈವಮತಶ್ರೇಯಸ್ಸನ್ನು ತಮ್ಮ ಹೆಸರನ್ನು ಅಜರಾಮರಪಡಿಸಿಕೊಳ್ಳಬೇಕು. ತಾಯಿಯನ್ನು ಬಿಟ್ಟು ಕರುವಿನಂತೆ ಗುರುವನ್ನು ಬಿಟ್ಟು ಅಂಬಲಿಸಿದ ಸೌಖ್ಯವು ಎಂದೂ ನೂರೆಯದು. ಆದಕಾರಣ ಪ್ರತಿಯೊಂದು ಶಾಖೆಯುಪವರೂ ಪೀಠಕ್ಷೇತ್ರಮೂಲಭೂತರಾದ ಮೂಲಾಚಾರ್ಯರಲ್ಲಿ ಅನಾಧಾರಣವಾದ ಭಕ್ತಿಯನ್ನು ಸ್ನಿಗ್ಧವಾದ ಸದ್ಗತಿಯನ್ನು ಪಡೆದು ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಈಗ ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರಾಗಿರುವ ಮಿ॥ ಹ್ಯಾಮಿಲ್ಟ್ಯಾರವರು ಒರುವ ಏಪ್ರಿಲ್ ತಿಂಗಳಿನಲ್ಲಿ ನಿವೃತ್ತರಾಗುವರು. ಇವರ ಸ್ಥಾನಕ್ಕೆ ಸಂಯುಕ್ತಸ್ಥಾಂತ್ಯದ ಡೆಪ್ಯೂಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಗಿರುವ ಶ್ರೀ ಪೀಲ್‌ರವರನ್ನು ನೇಮಕಮಾಡಲಾಗುವುದೆಂದು ತಿಳಿದುಬಂದಿದೆ.

ಮೈಸೂರು ರಾಜಕೀಯ ಸುಧಾರಣಾ ಸಮಿತಿಯವರಿಗೆ ಸಂಸ್ಥಾನದ ಹಲವು ಜಿಲ್ಲಾಜೋಡ್ರುಗಳಿಂದ, ಜಿಲ್ಲಾಜೋಡ್ರು ಚುನಾವಣೆಗಳನ್ನು ಮುಂದುವರಿಸಬೇಕೆಂದು ಒಂದ ಪ್ರಾರ್ಥನೆಯನ್ನು ಮನ್ನಿಸಿ ಮೈಸೂರು ಸರ್ಕಾರದವರು ಈಗಿನ ಜಿಲ್ಲಾಜೋಡ್ರುಗಳ ಅವಧಿಯನ್ನು ಒಂದು ವರ್ಷಕಾಲ ಅಂದರೆ 1940 ನೇ ವರ್ಷದ ಮೇ ತಿಂಗಳು 31 ನೆಯ ತಾರೀಖಿನವರೆಗೆ ಹೆಚ್ಚಿಸಿದ್ದಾರೆ.

ಮೈಸೂರು ಸಂಸ್ಥಾನದೊಳಕ್ಕೆ ಪ್ರದರ್ಶನಕ್ಕಾಗಿ ಬರುವ ಚಲನಚಿತ್ರಗಳ ದೋಷಗಳನ್ನು ವಿಮರ್ಶಿಸಿ ಅವುಗಳು ಪ್ರಜೆಗಳಿಗೆ ಪ್ರದರ್ಶನಯೋಗ್ಯವೇ ಎಂದು ಪರೀಕ್ಷಿಸಿ ನಿರ್ಧರಿಸುವುದಕ್ಕಾಗಿ ಏರ್ಪಟ್ಟಿರುವ ಸಮಿತಿಗೆ ಸರ್ಕಾರದ ಅಧಿಕಾರಿಗಳ ಜೊತೆಗೆ ಮಿಸ್. ಎಂ. ಪಿಲ್ಲೈಡ್ಜ್, ಮಿಸೆಸ್, ಶಂಕರನಾರಾಯಣರಾವ್ ಮಿ॥ ರಾಮಚಂದ್ರರಾವ್ ಸಿಂಧ್ಯ ಮಿ॥ ಮಿರ್ಜಾ ಅಜೀಜುಲ್ಲಾ ಬೇಗ್ ಮತ್ತು ಮಿ॥ ಸಿ. ಬಾಲಾಜಿರಾವ್, ಇವರುಗಳನ್ನು ಸದಸ್ಯರುಗಳ ನ್ನಾಗಿ ನೇಮಕಮಾಡಿರುತ್ತಾರೆ.

ಪೋಲೀಸ್ ಇನ್ಸ್ಪೆಕ್ಟರಾದ ಮಿ॥ ಎ. ಶೇಷಯ್ಯರ್ ಎಂಬವರು ಶಿವನೊಗ್ಗದ ಅಡ್ವೋಕೇಟರಾದ ಮಿ॥ ರಾ॥ ನಾರಾಯಣ ಭಟ್ಟರೆಂಬುವರನ್ನು ಆ ಊರಿನ ಒಂದು ಹೋಟಲಿನಲ್ಲಿ ಬೆತ್ತದಿಂದ ಹೊಡೆದರೆಂದೂ ಆದಕ್ಕಾಗಿ ಅವರಿಂದ ತಮಗೆ ಪರಿಹಾರ ತೊಡಿಸಬೇಕೆಂದು ಮಿ॥ ರಾ॥ ಭಟ್ಟರು ಹೂಡಿದ್ದ ಮೊಕದ್ದಮೆಯನ್ನು ಮುನ್ಸೀಫರು ವಜಾಮಾಡಿದ್ದರು. ಈ ತೀರ್ಮಾನದ ಮೇಲೆ ಅಪೀಲು ಮಾಡಿದಾಗ ಸಬಾರ್ಡಿನೇಟ್ ಜಡ್ಜ್ ಮಿ॥ ರಾ॥ ಆರ್. ಪುಟ್ಟರಾಜೇ ಅರಸಿನವರು ವಿಚಾರಣೆ ನಡೆಸಿ ಪ್ರತಿವಾದಿಯು ವಾದಿಗೆ 100 ರೂಪಾಯಿ ಪರಿಹಾರವನ್ನೂ ಎರಡು ಕೋರ್ಟುಗಳ ಖರ್ಚನ್ನೂ ಕೊಡ ತಕ್ಕದೆಂದು ತೀರ್ಮಾನಮಾಡಿದರು.

ಕಳೆದ 12 ನೆಯ ತಾರೀಖು ಗುರುವಾರ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಗೌರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಬಿಡಾರ ಮಾಡಿದ್ದ ಬಿಕಾನೀರ್ ಮಹಾರಾಜರವರು ವೈಸರಾಯರವರ ಆಗಮನ ಕಾಲದಲ್ಲಿ ನಡೆದ (ಜೆಡ್ಡಾ ಆಪರೇಷನ್) ಕಾಡಾನೆಗಳನ್ನು ಹಿಡಿಯುವ ವಿಧಾನ ಪ್ರದರ್ಶನವೇ ಮೊದಲಾದ ದೃಶ್ಯಗಳನ್ನು ನೋಡಿ ಸಂತೋಷಿಸಿ ಕಳೆದ 20 ನೆಯ ತಾರೀಖು ಶುಕ್ರವಾರ ಮಧ್ಯಾಹ್ನ ಪ್ರಯಾಣ ಮಾಡಿದರು. ರಾಜಧಾನಿಗೆ ಆಗಮಿಸಿದಾಗಲೂ ಮತ್ತು ಪ್ರಯಾಣ ಬೆಳಸಿದಾಗಲೂ ನಮ್ಮ ಶ್ರೀಮನ್ಮಹಾರಾಜರು ರೈಲ್ವೆ ನಿಲ್ದಾಣಕ್ಕೆ ಹೋಗಿ ಅವರನ್ನು ಸ್ವಾಗತಿಸಿ ಕರೆತಂದು ಮತ್ತೆ ರೈಲ್ವೆನಿಲ್ದಾಣದವರೆಗೆ ಹೋಗಿ ಬೀಳ್ಕೊಟ್ಟರು. ಮತ್ತು ಮರ್ಯಾದಾರ್ಥವಾಗಿ ಎರಡು ಸಂದರ್ಭಗಳಲ್ಲೂ 19 ತೋಪುಗಳು ಹಾರಿಸಲ್ಪಟ್ಟವು.

ತುಮಕೂರು ಮಂಡಿಪೇಟೆಯಲ್ಲಿರುವ ಹಾಜಿ ಮಹಮ್ಮದ್ ಹಾಜಿ ಈಸಾ ಸೇಟರ ಮಂಡಿಗೆ ಕಳೆದ 12 ನೇ ತಾರೀಖಿನ ರಾತ್ರಿ ೧॥ ಗಂಟೆ ಸಮಯದಲ್ಲಿ ಕಳ್ಳನೊಬ್ಬನು ಹೆಂಚನ್ನು ತೆಗೆದು ಒಳಕ್ಕೆ ಇಳಿದು ಅಲ್ಲೇ ಮಲಗಿದ್ದ ಮಂಡಿ ಮಾಲಿಕರನ್ನೆಬ್ಬಿಸಿ ಕಬ್ಬಿಣಪೆಟ್ಟಿಗೆಯ ಬೀಗದಕೈಯನ್ನು ಕೇಳಿದನು. ಅವರು ಬೀಗದಕೈಯನ್ನು ಕೊಡದಿರಲು ಕೈಲಿದ್ದ ಕತ್ತಿಯಿಂದ ಅವರ ಹಣೆಗೆ ಹೊಡೆದನು. ಅಷ್ಟರಲ್ಲಿ ಗಲಭೆಯಾದ್ದರಿಂದ ಎಚ್ಚತ್ತ 3 ಮಂದಿ ಸೇವಕರೊಡನೆ ಸೇಟರು ಹೊರಕ್ಕೆ ಬಂದು ಭಾಗಿಲಿಗೆ ಬೀಗಹಾಕಿದರು. ಈ ಗಲಾಟೆಯನ್ನು ತಿಳಿದ ಪೋಲೀಸರು ಸಬ್-ಇನ್ಸ್ಪೆಕ್ಟರವರೊಡನೆ ಬಂದು ಒಳಗಿನಿಂದ ಮಾಳಿಗೆನೇಲೆ ಹತ್ತುತ್ತಿದ್ದ ಕಳ್ಳನನ್ನು ಬೆದರಿಸಲು ಆಕಾಶಕ್ಕೆ ಗುಂಡುಹಾರಿಸಲಾಗಿ ಕಳ್ಳನು ಕೆಳಕ್ಕೆ ಇಳಿದನು. ಆನಂತರ ಬೆಳಗಾಗುವವರೆಗೂ ಅವನೊಡನೆ ಚರ್ಚಿಸುತ್ತಿದ್ದು ಅವನನ್ನು ಬಂಧಿಸಿದರು. ಕಳ್ಳನ ಹೆಸರು ಸೈಯದ್ ಮಹಮದ್- ಅವನು ಬೊಂಬಾಯಿ, ಪೂನಾ, ಮದರಾಸ್, ಬೆಂಗಳೂರು ಮೊದಲಾದ ದೇಶಗಳಲ್ಲೆಲ್ಲಾ ಕಳ್ಳತನಗಳನ್ನು ನಡೆಸಿ 5-6 ಸಲ ಶಿಕ್ಷಿಸಲ್ಪಟ್ಟಿರುವನೆಂದೂ ಮದರಾಸ್ ಸೆಂಟ್ರಲ್ ಜೈಲಿನಿಂದ ಅವನನ್ನು ಜನವರಿ 1 ನೆಯ ತಾರೀಖಿನದಿನ ಬಿಡುಗಡೆಮಾಡಲಾಗಿತ್ತೆಂದೂ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

50 ವರ್ಷ ತೀರ್ಥಯಾತ್ರೆ

ಪಶ್ಚಿಮ ಆಫ್ರಿಕದ ಕಾನೋ ಎಂಬಲ್ಲಿಂದ ಹೊರಟ ಒಬ್ಬ ಯಾತ್ರಿಕನು ತನ್ನ 50 ವರ್ಷಗಳ ಕಾಲಡೆಗೆಯ ಪ್ರಯಾಣವನ್ನು ಮುಗಿಸಿ ಪೂರ್ವ ಆಫ್ರಿಕದ ಜಿದ್ದಾ ಎಂಬಲ್ಲಿಗೆ ಬಂದು ಸೇರಿದ್ದಾನೆ. ಈತನ ಈಗಿನ ವಯಸ್ಸು 120 ವರ್ಷಗಳು ಮಾತ್ರ. ಈಗ ಈತನು ವಿಮಾನದ ಮೂಲಕ ತನ್ನ ಸ್ವಗೃಹಕ್ಕೆ ಹಿಂತಿರುಗಲು ಬಯಸಿದ್ದಾನೆ.

ರಾಜಕೋಟೆ ದಿವಾನರ ರಾಜೀನಾಮೆ

ರಾಜಕೋಟೆಯ ದಿವಾನರಾದ ಸರ್ ವ್ಯಾಟ್ರಿಕ್ ಕ್ಯಾಡಲ್ ರವರು ತಮ್ಮ ದಿರ್ವಾ ಪದವಿಗೆ ರಾಜೀನಾಮೆ ಕೊಟ್ಟರು. ಇವರು ಬೊಂಬಾಯಿಗೆ ಹೋಗಿ ಅಲ್ಲಿಂದ ಕೊಲಂಬೋ ನಗರಕ್ಕೆ ಪ್ರಯಾಣ ಮಾಡುವರು. ಸಿಲೋನಿನಲ್ಲಿ ಸ್ವಲ್ಪಕಾಲವಿದ್ದು ವಿಶ್ರಾಂತಿ ಪಡೆದು ಅನಂತರ ಇಂಗ್ಲೆಂಡಿಗೆ ಪ್ರಯಾಣ ಮಾಡುವರು. ಸೀನಿಯರ್ ಸಚಿವರಾದ ಶ್ರೀ ನುನಿಕ್‌ಲಾಲ್ ಪಟೇಲ್‌ರವರು ದಿವಾನರ ಆಡಳಿತ ಸೂತ್ರಗಳನ್ನು ವಹಿಸಿದ್ದಾರೆ.

ವಿದೇಶಿನೌಕೆಗಳಿಗೆ ಜಪಾನರ ಅಜ್ಞೆ!

ಜಪಾನರ ಅಡಳಿತದಲ್ಲಿರುವ ಬಂದರುಗಳಿಗೆ ಸಾಮಾನುಗಳನ್ನೂ ಪ್ರಯಾಣಿಕರನ್ನೂ ಹೊತ್ತುತರುವ ಎಲ್ಲ ನೌಕೆಗಳೂ ಜರ್ಮಾಧ್ವಜವನ್ನಾಗಲಿ ಅಥವಾ ಆಕ್ರಮಿಸಲ್ಪಟ್ಟಿರುವ ಪ್ರದೇಶಕ್ಕೆ ಸಂಬಂಧಿಸಿದ ಚೀನಾಧ್ವಜವನ್ನಾಗಲಿ ಹಾರಿಸಬೇಕೆಂದು ಜರ್ಮಾ ಅಧಿಕಾರಿಗಳು ಅಜ್ಞೆ ಮಾಡಿದ್ದಾರೆ.

ಕಾಂಗ್ರೆಸ್ಸಿನವರಲ್ಲೇ ಹೊಡೆದಾಟ!

ತ್ರಿಪುರಿ ಕಾಂಗ್ರೆಸ್ ಚುನಾವಣೆಗಳ ಸಂಬಂಧವಾಗಿ ಕಾಣ್ಪುರದಲ್ಲಿ ಕೆಲವು ಕಾಂಗ್ರೆಸ್ ಸದಸ್ಯರಲ್ಲಿ ಜಗಳವುಂಟಾಗಿ ಹೊಡೆದಾಟಗಳು ನಡೆದು ಅನೇಕ ಸದಸ್ಯರಿಗೆ ಗಾಯಗಳಾದವು. ಗಲಭೆ ನಡೆದದ್ದರಿಂದ ವೋಟುಗಳನ್ನು ತೆಗೆದುಕೊಳ್ಳುವ ಕಾರ್ಯವನ್ನು ನಿಲ್ಲಿಸಬೇಕಾಯಿತು. ಇಬ್ಬರು ಗಾಯಗೊಂಡವರನ್ನು ಆಸ್ಪತ್ರೆಗೆ ಕಳುಹಿಸಲಾಗಿದೆ.

ಇಟಲಿ ರೈತರ ಪ್ರಾರ್ಥನೆ

ಫ್ರಾನ್ಸಿನ ದಕ್ಷಿಣ ಭಾಗದಲ್ಲಿ 10 ಲಕ್ಷ ಇಟಲಿ ರೈತರು ನೆಲಸಿ ಒಂದು ಸಂಪೂರ್ಣ ಪ್ರದೇಶವನ್ನೇ ತಮ್ಮದಾಗಿ ಮಾಡಿಕೊಂಡಿದ್ದಾರೆ. ಅವರೆಲ್ಲ ಸಭೆ ಸೇರಿ, ಫ್ರಾನ್ಸ್ ಮತ್ತು ಇಟಲಿ ದೇಶದ ಪ್ರಜೆಗಳು ಸಹೋದರ ಭಾವದಿಂದ ವರ್ತಿಸಬೇಕೆಂದೂ ಸ್ಪೇನಿನ ಕಲಹದಲ್ಲಿ ಇಟಲಿಯು ಕೈ ಹಾಕಕೂಡದೆಂದೂ ಸೂಚಿಸುವ ನಿರ್ಣಯಗಳನ್ನು ಮಾಡಿ ಇಟಲಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಸರ್ಕಾರವು ಕಾಲವನ್ನು ತನ್ನ ಅಂಕೆಯಲ್ಲಿಡಲು ಪ್ರಯತ್ನಿಸುವುದು

ಪ್ಯಾರಿಸ್ಸಿನಲ್ಲಿ ಛೇಂಬರ್ ಮತ್ತು ಸೆನೆಟ್ ಸಭೆಗಳಲ್ಲಿ ಬಡ್ಜೆಟ್ಟಿನ ವಿಷಯವಾಗಿ ದೀರ್ಘ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ಆ ಸ್ಥಳಗಳ ಗಡಿಯಾರಗಳು ನಿಲ್ಲಿಸಲ್ಪಟ್ಟವು. 20 ಗಂಟೆಗಳ ನಂತರ ಚರ್ಚೆ ಮುಗಿದು ಇತ್ಯರ್ಥವಾದ ಮೇಲೆ ನಡೆಸಲ್ಪಟ್ಟವು. ಅಂದೇ ಚರ್ಚೆಗಳೆಲ್ಲ ಮುಗಿದು ಆ ಬಡ್ಜೆಟ್ ಶಾಸನರೂಪವಾಗಿ ಬಾರದೇ ಕಾರಣ ಕಾಲವು ಮುಂದಕ್ಕೆ ಹೋಗದಂತೆ ಗಡಿಯಾರಗಳು ನಿಲ್ಲಿಸಲ್ಪಟ್ಟವು.

ಕಾಶೀ ಹಿಂದೂ ವಿಶ್ವ ವಿದ್ಯಾಲಯಕ್ಕೆ ಹೈದರಾಬಾದ್ ಸರ್ಕಾರದ ದಾನ

ಹೈದರಾಬಾದ್ ಉಸ್ಮಾನಿಯಾ ವಿಶ್ವ ವಿದ್ಯಾಲಯದ ವಿಶೇಷ ಘಟಿಕೋತ್ಸವವು ಕಳೆದ 9 ನೆಯ ತಾರೀಖಿನ ದಿವಸ ನಡೆದು ಬಿಕಾನೀರ್ ಮಹಾರಾಜರಿಗೆ "ಡಾಕ್ಟರ್ ಆಫ್ ಲಾಸ್" ಎಂಬ ಗೌರವ ಪ್ರಶಸ್ತಿಯು ಕೊಡಲ್ಪಟ್ಟಿತು. ಆ ಸಮಯದಲ್ಲಿ ಕಾಶಿ ನಗರದ ಹಿಂದೂ ವಿಶ್ವ ವಿದ್ಯಾಸಿಲಯಕ್ಕೆ ಒಂದು ಲಕ್ಷ ರೂಪಾಯಿಗಳನ್ನು ದಾನ ನೂಡಿರುವದಾಗಿ ವಿಶ್ವ ವಿದ್ಯಾಸಿಲಯದ ಸ್ಥಾನಪತಿಗಳ ತಿಳುಹಿದರು.

ಹಡಗು ಅನಾಹುತ

'ಕ್ಯಾಬೆಸ್ಟಾರ್' ಎಂಬ ಈಸ್ಟರ್ನ್ ಸ್ಟೀಮ್ ನಾವಿಗೇಷನ್ ಕಂಪನಿಗೆ ಸೇರಿದ ಹಡಗು ಕಳೆದ 8 ನೆಯ ತಾರೀಖಿನದಿನ ಹತ್ತಿ ಮತ್ತು ದವಸವನ್ನು ತುಂಬಿಕೊಂಡು ಬೊಂಬಾಯಿಂದ ಕಲ್ಲಿಕೋಟೆಗೆ ಪ್ರಯಾಣಮಾಡಿದುದು ಪತ್ತೆಯಿಲ್ಲದೆ ಹೋಗಿತ್ತು. ಅದು ನಾವಿಕರೊಂದಿಗೂ ಸಾಮಾನಿನೊಂದಿಗೂ ಸಮುದ್ರದಲ್ಲಿ ಮುಳುಗಿಹೋಗಿರುವಂತೆ ತೋರುತ್ತದೆ. ಬೊಂಬಾಯಿಗೆ ಬರುತ್ತಿದ್ದ ಇನ್ನೊಂದು ಹಡಗಿಗೆ ಬೊಂಬಾಯಿನಿಂದ 150 ಮೈಲುಗಳಾಚೆ ಒಬ್ಬ ನಾವಿಕನ ಮೃತ ದೇಹವು ಸಮುದ್ರದಲ್ಲಿ ತೇಲುತ್ತಿದ್ದುದು ಕಾಣಬಂದಿತು. ಬೊಂಬಾಯಿಗೆ ಬಂತಿರುಗಿದ ಮತ್ತೊಂದು ಹಡಗಿಗೆ ಯಾವುದೋ ಹಡಗಿನ ಹಾಸ್‌ಮಾಸ್ತಿನ ಭಾಗವೊಂದು ಕಿಕ್ಕಿತು. ಅದು 'ಕ್ಯಾಬೆಸ್ಟಾರ್' ಹಡಗಿನದೆಂದು ಊಹಿಸಲಾಗಿದೆ. ಮುಳುಗಿದ ಹಡಗಿನಲ್ಲಿ 28 ಮಂದಿ ನಾವಿಕರೂ ಇಬ್ಬರು ಪ್ರಯಾಣಿಕರೂ ಇದ್ದರೆಂದು ತಿಳಿದುಬರುತ್ತದೆ.

ತ್ರಿಪುರಿ ಕಾಂಗ್ರೆಸ್ಸಿಗಾಗಿ ರಜಾ

ತ್ರಿಪುರಿ ಕಾಂಗ್ರೆಸ್ಸಿಗೆ ಹೋಗಿಬರಲು ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಅನುಕೂಲವಾಗುವ ದೆಕ್ಕೋಸ್ಸರ ಜಬ್ಬಲ್ಪುರದ ಡಿಸ್ಟ್ರಿಕ್ಟ್ ಕೌನ್ಸಿಲಿನ ಚೇರ್ಮನ್ನರವರು ಕೌನ್ಸಿಲಿನ ಶಾಲೆಗಳೆಲ್ಲಕ್ಕೂ, ಕಾಂಗ್ರೆಸ್ ನಡೆಯುವ ಕಾಲದಲ್ಲಿ 2 ವಾರಗಳ ರಜಾ ಮಂಜೂರು ಮಾಡಿರುತ್ತಾರೆ. ಅಲ್ಲದೆ ವಿದ್ಯಾ ಮಂದಿರದ ಯೋಜನೆಯಲ್ಲಿ ಶಿಕ್ಷಣ ಪಡೆಯುವಂತೆ ಕೆಲವು ಉಪಾಧ್ಯಾಯರುಗಳನ್ನು ಅತ್ತ ಕಳುಹಲು ನಿರ್ಧರಿಸಿರುವರಂತೆ!

ರಷ್ಯಾದಲ್ಲಿ ಅದ್ಭುತ ಯುದ್ಧ ಸಿದ್ಧತೆ!

ಜರ್ಮನಿ, ಇಟಲಿ, ಜಪಾನ್ ದೇಶಗಳ ಭೀತಿಯಿಂದ ರಷ್ಯಾದೇಶವು ಅದ್ಭುತವಾದ ಯುದ್ಧ ಸಿದ್ಧತೆಯನ್ನು ಮಾಡಲಾರಂಭಿಸಿದೆ. ಪ್ರಸ್ತುತ ಆ ದೇಶದಲ್ಲಿ 3 ಕೋಟಿ ಜನ ಕಾಲಾಳುಗಳೂ, 33 ಸಾವಿರ ಜನ ನಾವಿಕರೂ ಸಿದ್ಧರಿರುವರಂತೆ! ಇದಲ್ಲದೆ 6೦ ಸಾವಿರ ವಿಮಾನಗಳನ್ನು ರಚಿಸಿರುವರಂತೆ! ೧೧೨ ಸಬ್ ಮೆರಿನ್ನುಗಳೂ, ೧೩೦ ಫಾಸ್ಟ್ ಟಾರ್ಪೆಡೋ ದೋಣಿಗಳೂ ಇರುವವಂತೆ! ಪಾಶ್ಚಾತ್ಯದೇಶಗಳಲ್ಲಿ ಎತ್ತನೋಡಿದತ್ತ ಯುದ್ಧ ಸಿದ್ಧತೆಯೇ ತೋರಹತ್ತಿದೆ.

ಬ್ರಿಟಿಷ್ ಹಡಗನ್ನು ಆಕ್ರಮಿಸಲು ಪ್ರಯತ್ನ

ಕಳೆದ10 ನೆಯ ತಾರೀಖಿನದಿನ ಷಾಂಗೈ ನಗರದ ಕಡೆಗೆ ಹೊರಟಿದ್ದ 'ಹ್ಯಾಂಪೊ' ಎಂಬ ಸಣ್ಣ ಬ್ರಿಟಿಷ್ ಹಡಗೊಂದನ್ನು ಯಾವುದೋ 4 ಸಣ್ಣ ಹಡಗುಗಳು ಮುತ್ತಿ ಮಿಷ ಒಂದೂಕಗಳಿಂದ ಗುಂಡು ಹಾರಿಸಿದವು. ಅಷ್ಟರಲ್ಲಿ ಹಡಗಿನ ನೈರ್‌ಲೆಸ್ ಆಪರೇಟರು ಸಹಾಯಕ್ಕಾಗಿ ಆಶುವಾರ್ತಾ ಸಮಾಚಾರವನ್ನು ಕಳುಹಿಸಿದ್ದರಿಂದ ಬ್ರಿಟನ್ನಿಗೆ ಸೇರಿದ "ಟರ್ನ್" ಎಂಬ ಸಂಗ್ರಾಮ ನೌಕೆಯು ತತ್‌ಕ್ಷಣ ಆ ಸ್ಥಳಕ್ಕೆ ಬರಲು ಆಕ್ರಮಣ ಮಾಡಿದ್ದ 4 ಹಡಗುಗಳೂ ಕತ್ತಲೆಯಲ್ಲಿ ಕಣ್ಮರೆಯಾಗಿ ಓಡಿಹೋದವು. ಅವುಗಳನ್ನು ಗುರ್ತಿಸಲಾಗಲಿಲ್ಲ.

ನಾಯಿಗಳ ಸೈನ್ಯ

ಯುದ್ಧಕಾಲದಲ್ಲಿ ಸೈನಿಕರಿಗೆ ಸಹಾಯನಾಗುವ ದೊಡ್ಡ ಶ್ವಾನಸೈನ್ಯವೊಂದನ್ನು ಜರ್ಮನಿಯಲ್ಲಿ ತರಬೇತು ಮಾಡುತ್ತಿದ್ದಾರೆ. ತಂತಿ ಸಮಾಚಾರಗಳನ್ನು ಕಳುಹಿಸಲು ಅಸಾಧ್ಯವಾದ ಕಡೆಗಳಿಗೆ ಶೀಘ್ರವಾಗಿ ಸುದ್ದಿ ಕಳುಹಿಸಲು ಈ ನಾಯಿಗಳಿಂದ ಬಹಳ ಸಹಾಯವಾಗುವುದಂತೆ! ಇವುಗಳಿಗೆ ಗಾಯಗೊಂಡವರಿಗೆ ಬೇಕಾದ ಸಹಾಯಮಾಡುವುದು, ಒಂದು ಕಡೆಯಿಂದ ಇನ್ನೊಂದೆಡೆಗೆ ಸುದ್ದಿ ಒಯ್ಯುವುದು ಮುಂತಾದ ವಿದ್ಯೆಗಳನ್ನು ಕಲಿಸುತ್ತಿದ್ದಾರೆ. ಫ್ರಾನ್ಸೂ ಸಹ ಈ ರೀತಿ ನಾಯಿಗಳ ಸೈನ್ಯವಿಡಲು ಪ್ರಾರಂಭಮಾಡಿದೆ.

ರೈಲ್ವೆ ಅನಾಹುತ!

ಪೌರಾ-ಡೆಹರಾಡೂನ್ ಎಕ್ಸ್‌ಪ್ರೆಸ್ ರೈಲ್ವೆಗಾಡಿಯು ಕಳೆದ 12ನೆಯ ತಾರೀಖಿನದಿನ ಕಂಬಿತಪ್ಪಿ ಉರುಳಿ ಅನೇಕ ಪ್ರಾಣಾಪಾಯಗಳಾದವು. ಇ. ಐ. ರೈಲ್ವೆ ಜನರಲ್ ಮ್ಯಾನೇಜರು ಅನಾಯಪೊದಗಿದ ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಯಾರೋ ದುರಾತ್ಮರು ಈ ಅನಾಹುತವನ್ನುಂಟುಮಾಡಬೇಕೆಂಬ ದುರುದ್ದೇಶದಿಂದ ಕಂಬಿಗಳನ್ನು ಕಿತ್ತಿರುವದಾಗಿ ಸುದ್ದಿ ಕಳುಹಿಸಿದರು. ಈ ದುಷ್ಕೃತ್ಯಕ್ಕೆ ನಡೆಸಿದವರನ್ನು ಪತ್ತೆಹಚ್ಚಿಕೊಟ್ಟವರಿಗೆ 5 ಸಾವಿರ ರೂಪಾಯಿಗಳ ಬಹುಮಾನಕೊಡುವದಾಗಿ ಪೂರ್ವಬಂಗಾಳಾ ರೈಲ್ವೆಯವರು ಪ್ರಕಟಿಸಿದ್ದಾರೆ. ಉದ್ದೇಶಪೂರ್ವಕ ಕಂಬಿಗಳನ್ನು ಕಿತ್ತುಹಾಕಿದ್ದೇ ಈಗ ನಡೆದಿರುವ ಅನಾಹುತಕ್ಕೆ ಕಾರಣವೆಂದು ರೈಲ್ವೆಗಳ ಸೀನಿಯರ್ ಗೌರ್ನಮೆಂಟ್ ಇನ್‌ಸ್ಪೆಕ್ಟರವರೂ ಮತ್ತು ಬಿಹಾರ್ ಪೋಲೀಸಿನವರೂ ಒಪ್ಪಿಕೊಂಡಿದ್ದಾರೆ. ರೈಲು ಉರುಳಿದಮೇಲೆ ಬೆಂಕಿಹತ್ತಿಕೊಂಡು ಮಳೆಬಿದ್ದರೂ ಸಹ ಆರದೆ ಸುಮಾರು 38 ಗಂಟೆಗಳ ಕಾಲ ಉರಿಯಿತು. ಗಾಯಗೊಂಡ 25 ಮಂದಿಯನ್ನು ಗಯಾ ಆಸ್ಪತ್ರೆಗೆ ಸಾಗಿಸಿದರು. ಸತ್ತವರ ಸಂಖ್ಯೆಯು ಇನ್ನೂ ಸರಿಯಾಗಿ ತಿಳಿದುಬಂದಿಲ್ಲ.

ಮಂಗಗಳಿಂದ ಮನುಷ್ಯರಿಗೆ ಏಡಿಗಳು ಶಿಕ್ಷದಾಗಿದೆ.

ಮಲಯಾದ್ವೀಪಸ್ತೋಮದಲ್ಲಿರುವ ಕಪಿಗಳು ಸಮುದ್ರತೀರದಲ್ಲಿ ಏಡಿಗಳ ಬೇಟೆಗಾರಂಭಿಸಿವೆ. ಅಲ್ಲದೆ ಮನುಷ್ಯರಿಗಿಂತ ಈ ಬೇಟೆಯಲ್ಲಿ ಇವುಗಳೇ ಹೆಚ್ಚು ಚಮತ್ಕಾರವುಳ್ಳವುಗಳೆಂಬುದನ್ನೂ ಕೋರ್ಪಡಿಸಿವೆ. ಇದರಿಂದ ಅಲ್ಲಿನಪರಿಗೆ ಏಡಿಗಳೇ ಶಿಕ್ಷದಂತಾಗಿದೆ. ಸಮುದ್ರವು ಇಳಿಯುವ ಸಮಯದಲ್ಲಿ ಸಾವಿರಾರು ಮಂಗಗಳು ಸಮುದ್ರತೀರಕ್ಕೆ ಬಂದು ಅಲ್ಲಿರುವ ಏಡಿಗಳ ಬಿಲದೊಳಕ್ಕೆ ತಮ್ಮ ಬಾಲವನ್ನು ತುರುಕಿ ಆಲ್ಲಾಡಿಸಿ ಏಡಿಗಳನ್ನು ಭ್ರಾಂತಿಗೊಳಿಸಿ ಅವುಗಳು ಮೇಲಕ್ಕೆ ಬರುವಂತೆ ಮಾಡಿ, ಅವು ಮೇಲಕ್ಕೆ ಬಂದೊಡನೆ ಫಕ್ಕನೆ ಅವುಗಳನ್ನು ಹಿಡಿದು ತಿಂದುಬಿಡುತ್ತವೆ.

ನಿಜಾಂ ಸರ್ಕಾರ

ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನವರು ಹೈದರಾಬಾದಿನಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿರುವದರಿಂದ ಹೊರಗಡೆಯಿಂದ ಹೈದರಾಬಾದಿಗೆ ಬಂದು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಗೆ ಹೋಗಿರುವ ಮತ್ತು ಶಿಕ್ಷೆ ವಿಧಿಸಲ್ಪಡಲು ಕಾದಿರುವ ಬಂದಿಗಳೆಲ್ಲರನ್ನೂ ಯಾವ ಪರತ್ವುಗಳನ್ನೂ ಹಾಕದೆ ಬಿಡುಗಡೆ ಮಾಡಬೇಕೆಂದು ಹೈದರಾಬಾದ್ ಸರ್ಕಾರವು ನಿರ್ಧರಿಸಿದೆ.

ಕಳೆದ ಹೈದರಾಬಾದ್‌ಸ್ಟೇಟ್ ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಭಾಗವಹಿಸಿ ಶಿಕ್ಷೆ ಹೊಂದಿದ್ದ ಹೈದರಾಬಾದು ನಗರದ ಮತ್ತು ಒಳನಾಡಿನ 70 ಮಂದಿ ವಕೀಲರಿಗೆ ಅಲ್ಲಿಯ ಹೈಕೋರ್ಟಿನ ನ್ಯಾಯಾಧೀಶರು ಅವರುಗಳಿಗೆ ಕೊಟ್ಟಿರುವ ಸನ್ನದನ್ನು ಯಾಕೆ ಕಿತ್ತುಕೊಳ್ಳಬಾರದೆಂಬುದಕ್ಕೆ ಕಾರಣವನ್ನು ತೋರಿಸಬೇಕೆಂದು ನೋಟೀಸು ಕೊಟ್ಟಿರುತ್ತಾರೆ. ಅವರುಗಳ ವಿಚಾರಣೆಯು ಮುಂದೆ ನಡೆಯಲಿದೆ.

ರಂಗೂನಿನ ಪರಿಸ್ಥಿತಿ.

ಬರ್ಮದ ಮುಖ್ಯಪಟ್ಟಣವಾದ ರಂಗೂನಿನಲ್ಲಿ ಇನ್ನೂ ವಿದ್ಯಾರ್ಥಿಗಳ ಮುಷ್ಕರನೆಯಿತ್ತಿದೆ. ಇದೇ ಕಾಲದಲ್ಲೇ 2 ಸಾವಿರಕ್ಕಿಂತ ಹೆಚ್ಚುಮಂದಿ ಆಹಾರಕ್ಕೂ ಗತಿಯಿಲ್ಲದ ಬಡಜನರು ತಮ್ಮ ಕುಂದುಕೊರತೆಗಳನ್ನು ಸರಕಾರಕ್ಕೆ ತಿಳಿಸಲು 200 ಮೈಲಿಗಳಿಗಿಂತ ಹೆಚ್ಚು ದೂರದಿಂದ ಕಾಲ್ನಡೆಯಲ್ಲೇ ಬಂದಿದ್ದಾರೆ. ಇಗೀಗ ರಸ್ತೆ ಮತ್ತೂ ಯೂನಿವರ್ಸಿಟಿ ಆವರ್ನೂ ಇವುಗಳು ಸಂಧಿಸುವ ಸ್ಥಳದಲ್ಲಿ 10 ಸಾವಿರಕ್ಕಿಂತ ಹೆಚ್ಚು ಮಂದಿ ಸೇರಿ ಈ ಕ್ಷುಧಾಪೀಡಿತರಿಗೆ ಸ್ವಾಗತವಿತ್ತರು. ಈ 2000ಜನ ಕ್ಷುಧಾತುರರಲ್ಲಿ 1032 ಜನರುಎಣ್ಣೆಗಣಿಗಳ ಕೆಲಸಗಾರರು. ಗಣಿಗಳಲ್ಲಿ ಕೆಲಸಗಾರರಿಗೆ ಹೆಚ್ಚು ಕೂಲಿ ಕೊಡಬೇಕೆಂದೂ ಮೇಲ್ತರದ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದೂ ಅವರ ಬೇಡಿಕೆ. ಉಳಿದವರು ಕಾಂಟ್ರಾಕ್ಟಿಲ್ಲೆಯ ವ್ಯವಸಾಯಗಾರರು ಅವರಲ್ಲಿ 80 ಮಂದಿಯಷ್ಟು ಬೌದ್ಧಸನ್ಯಾಸಿಗಳೂ, 60 ಮಂದಿ ಸ್ತ್ರೀಯರೂ ಇದ್ದಾರೆ. ಕಂದಾಯ ಕಡಿಮೆಮಾಡಬೇಕು. ವ್ಯವಸಾಯಗಾರರಿಗೆ ಹೆಚ್ಚಿನ ಸೌಕರ್ಯವೊದಗಿಸಬೇಕೆಂದು ಕೇಳಿಕೊಳ್ಳಲು ಅವರು ಬಂದಿದ್ದಾರೆ.

ಹೆಂಗಸರು ಮಕ್ಕಳು ನದಿಯಪಾಲಾದರು!

ಕಲ್ಕತ್ತೆಯಬಳಿ ಹೂಗ್ಲಿನದಿಯನ್ನು ದೋಣಿಯಲ್ಲಿ ದಾಟುವಾಗ ನಡುವೆ ಒಂದು ನಡುಗಡ್ಡೆ ಇರುವದರಿಂದ ಒಂದುಕಡೆಯಿಂದ ಇನ್ನೊಂದುಕಡೆಗೆ ಹೋಗುವವರು ತಾವು ಇರಿವಕಡೆಯ ದೋಣಿಯಿಂದ ಈ ನಡುಗಡ್ಡೆಯಲ್ಲಿಳಿದು ಇನ್ನೊಂದುಕಡೆಗೆ ಹೋಗಿ ಬೇರೆ ದೋಣಿಯನ್ನು ಹತ್ತಿ ಆಚೆಕಡೆಗೆ ಹೋಗುವುದು ವಾಡಿಕೆಯಾಗಿದೆ. ಕಳೆದ 8ನೆಯ ತಾರೀಖು ಸಾಯಂಕಾಲ ಎಂದಿನಂತೆ ಎರಡುಕಡೆಯ ದೋಣಿಗಳೂ ಜನರನ್ನು ತಂದು ಈ ನಡುಗಡ್ಡೆಯಲ್ಲಿ ಇಳಿಸಿದಾಗ, ಇವ್ಯಕ್ತಿದ್ದಂತೆ ನದಿಯಲ್ಲಿ ಅಲೆಗಳೆದ್ದು ನೀರು ಭೂಪ್ರದೇಶವನೇರಿ ಹೊರಳಲು ಜನರು ಗಾಬರಿಗೊಂಡು ಎಲ್ಲರೂ ಒಂದೇ ದೋಣಿಗೆ ನುಗ್ಗಿದರು. ಈ ಜನರ ತುಳಿದಾಟನುಗ್ಗಾಟದಲ್ಲಿ ದೋಣಿಯು ಮುಳುಗಿತು. ಅದರಲ್ಲಿ ಆಗಲೇ ಹತ್ತಿದ್ದ 20 ಜನರು ನೀರಿನಲ್ಲಿ ಮುಳುಗಿದರು. ಅವರಲ್ಲಿ 8 ಮಂದಿಯನ್ನು ಕಷ್ಟದಿಂದ ಕಾಪಾಡಿದರು. ಉಳಿದವರು ಪತ್ತೆ ಇಲ್ಲದಾದರು.

ಇದು ವೀರಶೈವ ಮಹಾಸಭೆಯೋ?

ಹೋದ ತಿಂಗಳಲ್ಲಿ ವೀರಶೈವ ಮಹಾಸಭೆಯು ಹುಬ್ಬಳ್ಳಿಯಲ್ಲಿ ಜರುಗಿತಷ್ಟೆ! ಆದರೆ ಹಿಂದೆ ನಡೆದ ಸಭೆಗಳಗೂ ಈ ಸಭೆಗೂ ಮಹದಂತರವುಂಟು. ಹಿಂದಿನ ಸಮಾಜ ಪ್ರಮುಖರು ಯಾವ ಉದಾತ್ತ ಶತ್ಪಗಳಿಂದ ಇದನ್ನು ಸ್ಥಾಪನಮಾಡಿದರೋ ಅವರ ಎಲ್ಲ ಶತ್ಪಗಳೂ ಈ ಸಭೆಯಿಂದ ಪಾತಾಳಕ್ಕೊತ್ತಲ್ಪಟ್ಟು ನೂತದ್ದೆಲ್ಲ ಹಂಜಿಯಾಯಿತೆಂಬಂತೆ ಆಯಿತು. ಸಭೆಯ ಕಾರ್ಯಕ್ರಮವನ್ನು ನೋಡಿದರೆ ಕೇವಲ ಕಾಂಗ್ರೆಸ್ ಸಭೆಯಂತೆ ಕಂಡಿತು. ಸಭೆಯ ಕಾರ್ಯನಿರ್ವಾಹಕ ಮಂಡಲಿಯವರು ತೋರಿಕೆಗೆ ಮಾತ್ರ ಗುರುವಿರಕ್ತರ ಕಲಹ ನಿವಾರಣೆಯೆಂಬುದನ್ನು ಇಟ್ಟುಕೊಂಡಿದ್ದು, ಅಂತರಂಗದಲ್ಲಿ ತಮ್ಮ ಮತಲಬಯನ್ನು ಸಾಧಿಸಿಕೊಳ್ಳುವದೇ ಅವರ ಗುರಿಯಾಗಿದ್ದಿತು. ಹುಬ್ಬಳ್ಳಿಯಂಥ ದೊಡ್ಡ ಪಟ್ಟಣದಲ್ಲಿ ನಡೆದ ಮಹಾಸಭೆಯಲ್ಲಿ ಅಲ್ಲಿಯ ದೊಡ್ಡದೊಡ್ಡ ವ್ಯಕ್ತಿಗಳೇ ಸಭೆಯಲ್ಲಿ ಕಣ್ಣಿಗೆ ಕಾಣಿಸಲಿಲ್ಲ ಧಾರವಾಡದವರೂ ಸಭೆಗೆಬಂದಿರಲಿಲ್ಲ. ಸಭೆಯಲ್ಲಿ ನೋಡಿದಕಡೆಗೆಲ್ಲಾ ಕೇವಲ ಹಂಡಬಂಡ ಜಾತಿಸಂಕರವಾದಿ ಜನರೇ ತುಂಬಿದ್ದರು ಕಾರ್ಯನಿರ್ವಾಹಕ ಮಂಡಲಿಯವರು ತಮಗೆ ಬೇಕಾದ ಜನರನ್ನೇ ಸದಸ್ಯರನ್ನಾಗಿ ಮಾಡಿಕೊಂಡಿದ್ದರಲ್ಲದೆ ಅಧ್ಯಕ್ಷರನ್ನು ಸಹ ತಮ್ಮ ಅನುಕೂಲದವರನ್ನೇ ಆರಿಸಿಕೊಂಡಿದ್ದರು ಮಹಾಸಭೆಯ ಕಾರ್ಯಕ್ರಮವು ಒಂದೇ ಸವನೆ ಮೂರುದಿವಸ ನಡೆದರೂ ಆದರಲ್ಲಿ ಏನೊಂದೂ ಪುರುಷಾರ್ಥವಿದ್ದಿಲ್ಲ ಭಾಷಣಕಾರರು ಯಾರೂ ಧಾರ್ಮಿಕ ವಿಷಯಗಳಮೇಲೆ ಭಾಷಣಮಾಡಲಿಲ್ಲ ಮಾಡುವವರಿದ್ದರೂ ಅವರಿಗೆ ಭಾಷಣ ಸ್ವಾತಂತ್ರ್ಯವಿದ್ದಿಲ್ಲ ಇಡೀ ಮಹಾಸಭೆಯಲ್ಲಿ ಸ್ವಾಗತಸಂಘದ ಅಧ್ಯಕ್ಷರ, ಮತ್ತು ಮಹಾಸಭೆಯ ಅಧ್ಯಕ್ಷರ ಎರಡೇ ಭಾಷಣಗಳು ಇವು ತೀರಿದಮೇಲೆ ರಂಗಾವುಗಳ ಸುರಿಮಳೆಯೇ ಸುಳಿ! ಸೂಚಕರು, ಅನುವೆದಕರು, ಕೈಚಪ್ಪಾಳೆ ತಾಳುವವರು, ಇವರದೇ ಗಲಾಟೆ! ಅಧ್ಯಕ್ಷರು ಮೇಲಕ್ಕೆ ಏಳುವದು, ಸಾಲ್ಕು ಜನರು ಚಪ್ಪಾಳೆ ಹಾಕಿದ ಕೂಡಲೆ, ಈ ರಂಗಾವು ಏನಾಯಿತೆಂದು ತಿಳಿಯುತ್ತಿನೆ ಎಂದು ಕೂಡುವದು. ಇದೇ ನಡೆದಿತ್ತು ಚಿಪ್ಪಾಳೆಯಾರ್ ಹಾಕಬೆ'ಕೆಂಬ ನಿರ್ಬಂಧ ವಿದ್ದಿಲ್ಲ. ಯಾವ ಉದ್ದೇಶದಿಂದ ಮಹಾಸಭೆಯನ್ನು ಕೂಡಿಸಿದ್ದರೋ, ಯಾವದರ ಬಲದಿಂದ ತಮ್ಮ ಪಕ್ಷವು ಮತ್ತಷ್ಟು ಬಲಗೊಳ್ಳುವದೆಂದು ತಿಳಿದು ಆ ಸಭೆಯಲ್ಲಿ "ವೀರಶೈವರಲ್ಲದವರು ವೀರಶೈವವತಕ್ಕೆ ಬರಲಿ. ಅವೆಕ್ಷೆ ಪಟ್ಟರೆ, ಅವರನ್ನು ದೀಕ್ಷೆಮಾಡಿ. ಅವರ ಕೂಡ ಬಳಕೆಮಾಡಬೇಕೆಂಬ" ರೂಢಿ ಪಾಸುಮಾಡಿಕೊಂಡರು. ಬಸವಪಂಥಿಗಳು ಮಾತ್ರ ಹಿರಿಹಿರಿಹಿಗ್ಗಿ, ತಮ್ಮ ಹಂಡಬಂಡ ಜಾತಿ-ಸಾಂಕರ್ಯ ಕಾರ್ಯಕ್ಕೆ ಕಳಕೆಯೇರಿತು ಎಂದು ತಿಳಿದರು ಮಹಾಸಭೆಯು ಯಾವ ಪಕ್ಷದವರ ವತಿಯಿಂದ ಕೂಡಿತ್ತೋ ಆದೆ ಹುಂಗಡದ ಕೆಲ ಜನರಿಗೆ ಇದು ನರಿದೊರಲಿತ್ತು ಕೆಲವರು ಇಲ್ಲಿಯವರೆಗೆ ಸಮಾಜದಲ್ಲಿ ಈ ಸಭೆಯ ತಿಮ್ಮತ್ತು ಎಷ್ಟು ಇತ್ತೋ ಅದೆಲ್ಲವೂ ಇವತ್ತಿಗೆ ಮೊರಿತು ಈ ಮಹಾಸಭೆಯು ಸಮಾಜದಲ್ಲಿ ಮತ್ತಿಷ್ಟು ಫ್ಲೋಭೆಯನ್ನುಂಟುಮಾಡಿತೆಂದು ಅಲ್ಲಿಲ್ಲಿ ಮಾತಾಡುವದು ಕಂಡುಬಂದಿತು ಸಮಾಜದವರು ಈ ಸಭೆಯ ಆನಿಷ್ಟ ಠರಾವುಗಳನ್ನು ಆಕಬರಿಗೆ ಗಿಂತಲೂ ಕದೆಯಾಗಿ ತಿಳಿಯಬೇಕೆಂದು ನುಡಿಯ ತ್ತಿದ್ದರು ಅಂತೂ ಮಹಾಸಭೆಯು ರಾಷ್ಟ್ರೀಯ ಸಭೆಯಾಗಿ ಪರಿಣಮಿಸಿ ಸಮಾಜದ ದಿಡ್ಡನ್ನು ಹಾಳು ಮಾಡಿದ್ದಲ್ಲದೆ, ಸಮಾಜದಲ್ಲಿ ಮತ್ತಿಷ್ಟು ಒಡಕನ್ನುಂಟುಮಾಡಿತು. ಹಿಂದಿನ ಮಹಾಸಭೆಗಳ ರಿಪೋರ್ಟು, ಅವುಗಳ ಠರಾವುಗಳನ್ನು ನೋಡಿದರೆ ಪ್ರತಿಯೊಬ್ಬ ವೀರಶೈವನು ಅಭಿಮಾನಪಡತಕ್ಕದ್ದಾಗಿದೆ. ಈಗಿನ ಮಹಾಸಭೆಯು ಧರ್ಮ ಬಾಹಿರವಾಗಿ ಜರುಗಿತು ಎಷ್ಟೋ ಜನರು ತಿಳಿಯದೆ ಮೊದಲು ಅಭಿಮಾನಕ್ಕೆ ಬಿದ್ದು ಧರ್ಮದ ಕಳಕಳೆಯಿಂದ ಸ್ವಾಗತ ಸಂಘದ ಸದಸ್ಯರಾದರು. ಹಿಂದಿನಿಂದ ಅವರಿಗೆ ಚೆನ್ನಾಗಿ ತಿಳಿಯಿತು. ಪೇಕ್ಷಕರಾದರೂ ಹಿಂದಿನಿಂದ ಪಶ್ಚಾತ್ತಾಪ ಪಟ್ಟರು. ಪರಮತೀಯರು ಈ ಸಭೆಯ ಆಮಂಗಲ ಕೃತಿಯನ್ನು ನೋಡಿ ಕೈಹೊಡೆದು ನಕ್ಕರು. ಧಾರ್ಮಿಕ ವಿಷಯಗಳನ್ನು ಸುಧಾರಿಸುವುದಕ್ಕಾಗಿ ಹಿಂದಿನ ಮಹನೀಯರು ಮಹಾಸಭೆಯನ್ನು ಸ್ಥಾಪಿಸಿದರು. ಈಗ ಇದು ಜಾತಿಸಂಕರರ ಕೈಯ್ಯಲ್ಲಿ ಸಿಕ್ಕಿರುವದು. ಮಂಗನ ಕೈಯ್ಯಲ್ಲಿ ಮಾಣಿಕ ಸಿಕ್ಕಂತಾಯಿತಲ್ಲವೇ? ಎಂದು ಬಹು ಜನರು ಮರುಗಿದರು. ಇದನ್ನು ಪ್ರತಿಭಟಿಸಲು ಕೂಡಲೆ ಸಕಾತನ ವೀರಶೈವಧರ್ಮಸಮ್ಮೇಲನವನ್ನು ಕೂಡಿಸಿಯೇ ತೀರಬೇಕೆಂದು ಬಹುಜನರು ಪ್ರತಿಜ್ಞೆ ಮಾಡಿದರು.

ಓರ್ವ ಮಹಾಸಭೆಯ ಸ್ವಾಗತಸಂಘದ ಸದಸ್ಯ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಗಣಾರಾಧನೆ.

ಹೊಸನಗರದ ತಾಲ್ಲೂಕು ಹುಮುಚಿದ ಹೋಬಳಿ ಬನಸೆಟ್ಟಿಕೊಪ್ಪದ ನಿವಾಸಿಗಳೂ, ಗುರುಲಿಂಗಜಂಗಮ ಪ್ರೇಮಿಗಳೂ, ಪರೋಪಕಾರಿಗಳೂ ಆದ ಮ॥ ರಾ॥ ಶಿವಪ್ಪಗೌಡರವರು ಈ ಹಿಂದೆ ತಮ್ಮ ಸ್ವಗೃಹದಲ್ಲಿ ಶಿವಾಧೀನರಾದರು. ಮೃತಿಹೊಂದಿದವರ ಸದ್ಗತಿಪ್ರಾಪ್ತಿ ಸೊಸ್ಕರವಾಗಿ, ಭೂರುದ್ರಗಣಸಂತರ್ಪಣೆಯ ಕಾರ್ಯವನ್ನು ಏರ್ಪಡಿಸಿ ಶ್ರೀಮನ್ಮಳಲೀ ಬೃಹನ್ಮಠಾಧ್ಯಕ್ಷರಾದ ಶ್ರೀಗುರು ನಾಗಾರ್ಜುನಶಿವಾಚಾರ್ಯಸ್ವಾಮಿಗಳವರನ್ನು ಬಿಜಯಂಗೈಸಿಕೊಂಡು ಬಂದು (ತಾ॥ ೧೨-೧-೬೯) ಗುರುವಾರ ಪ್ರಾತಃಕಾಲ ಶ್ರೀ ರುದ್ರಾಭಿಷೇಕವೂ, ಮಧ್ಯಾಹ್ನ ಮಹಾಪಾದಪೂಜೆಯೂ, ಹಾಗೂ ಭಕ್ತ ಮಾಹೇಶ್ವರರ ಸಂತರ್ಪಣೆಯೂ ಬಹು ವೈಭವದಿಂದ ನಡೆದು ಇದೇ ದಿನ ರಾತ್ರಿ ೧೦ ಘಂಟೆಯಿಂದ ಶ್ರೀಗಳವರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬೀ ಶಿವರುದ್ರಶಾಸ್ತ್ರಿಗಳವರಿಂದ ಶಂಚಾಕ್ಷರೀಮಹಿಮೆ ಎಂಬ ಶಿವಸಂಕೀರ್ತನೆಯು ಸರ್ವಜನಾಹ್ಲಾದಕರಮಾಗಿ ಅನುವಾದಮಾಡಲ್ಪಟ್ಟಿತು ಅಧ್ಯಕ್ಷರಾದ ಶ್ರೀಗುರುಸ್ವಾಮಿಗಳವರು ಸಮಯೋಚಿತವಾದ ಉಪದೇಶವಾಕ್ಯಗಳನ್ನು ಅಪ್ಪಣೆಕೊಡಿಸಿದ ತರುವಾಯ ಆಕಸ್ಮಿಕವಾಗಿ ಇಲ್ಲಿಗೆ ಆಗಮಿಸಿ ಸಭಾಲಂಕೃತರಾಗಿದ್ದ ಹೋದಿಗೆರೆ ಹಿರೇಮಠದ ವೇ॥ ಸದಾಶಿವಶಾಸ್ತ್ರಿಗಳವರು ಕೀರ್ತನ ಸಂವಿಧಾನ ರಸಭಾವಪ್ರದರ್ಶನ ಪದ್ಯೋದ್ಗನಶಕ್ತಿಗಳಿಗಾಗಿ ಕೀರ್ತನಕೇಸರಿಯವರನ್ನು ವಿಶೇಷವಾಗಿ ಪ್ರಶಂಸಿಸಿದರು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷ ಮೊಡನೆ ಸಭೆಯು ವಿರಮಿಸಲ್ಪಟ್ಟಿತು ಈ ಸಮಾರಂಭಕ್ಕಾಗಿ ಸುತ್ತಮುತ್ತಣ ಗ್ರಾಮಗಳಿಂದ ಬಂಧುಮಿತ್ರಾದಿಯಾಗಿ ಬಹುಜನರು ಆಹ್ವಾನಿತರಾಗಿದ್ದರು. ಕಾರ್ಯದರ್ಶಿಗಳಾದ ಮ॥ ರಾ॥ ಸಿದ್ದಪ್ಪಗೌಡರವರ ನಯ ವಿನಯ ಭಕ್ತಿಪೂರಿತವಾದ ಅತಿಥಿಸತ್ಕಾರದ ವಿಶಕ್ಷಣತೆಯನ್ನು ಎಷ್ಟು ವರ್ಣಿಸಿದರೂ ತೀರದು.

ಓರ್ವ ಧರ್ಮಾಭಿಮಾನಿ

ಕೀರ್ತನಕಾರರಿಗೆ ಪದವೀ ಪ್ರದಾನ.

ತಾ॥ 16. 1. 39ನೇ ಸೋಮವಾರ ಏಕಾದಶೀ ಪ್ರಯುಕ್ತ ಮೈಸೂರು ದೊಡ್ಡಪೇಟೆ ಶ್ರೀಮತ್ಪಂಚಾಚಾರಮೇಶ್ವರೀ ದೇವಸ್ಥಾನದಲ್ಲಿ ಅನೇಕ ವಿದ್ವಜ್ಜನರ ಸಮ್ಮುಖದಲ್ಲಿ ವೇ॥ ಬ್ರ॥ ಶ್ರೀ॥ ಕೆ. ಗುಂಡಪ್ಪಶಾಸ್ತ್ರಿಗಳು 'ದ್ರೌಪದಿ ಪ್ರತಾಪ' ವೆಂಬ ಕೀರ್ತನವನ್ನು ಸುಶ್ರಾವ್ಯವಾಗಿ ನಡೆಯಿಸಿ ನೆರೆದ ಸಭಿಕರನ್ನೆಲ್ಲಾ ಆನಂದತುಂದಿಲರನ್ನಾಗಿ ಮಾಡಿದರು. ಆ ದಿವಸ ನೆರೆದ ವಿದ್ವಜ್ಜನಸಮೂಹದಲ್ಲಿ ಧಾರವಾಡದ ಹರಿಕಥಾರತ್ನಾಕರ ಕವಿಭೂಷಣ ಕೀರ್ತನ ಶಿರೋಮಣಿ ಶ್ರೀಯುತ ಪಂಡಿತ ಶಾರದಾಮೋಹನ ರವರೂ ದಯ ಮಾಡಿಸಿದ್ದರು. ಅವರು ಕೀರ್ತನಕಾರರ ಮೇಜುವಾದ ಗಾನ, ಭಾವಗರ್ಭಿತವಾದ ಧಾರಣಗಳಿಂದ ಸಂತುಷ್ಟಾಂತರಂಗರಾಗಿ ಸಭಿಕರ ಅನುಮತಿಯಿಂದ ಕೀರ್ತನಕಾರರಿಗೆ 'ಕೀರ್ತನಶರಭ' ಎಂಬ ಬಿರುದನ್ನು ಅನುಗ್ರಹಿಸಿ ಆಶೀರ್ವದಿಸಿದರು. ಧರತಭೂಮಿಯಲ್ಲಿ ಇಂತಹ ಕೀರ್ತನಕಾರರು ಇನ್ನೂ ಹೆಚ್ಚಾಗಿ ಬೆಳೆಯಲೆಂದು ಹಾರೈಸುವ. ಪ್ರತ್ಯಕ್ಷದರ್ಶಿ

ಮೈಸೂರು ಇಂಡಸ್ಟ್ರೀಸ್ ಕಂಪನಿ, ಲಿಮಿಟೆಡ್.

ಬಾಳೆಹೊನ್ನೂರು ಶ್ರೀ ಜಗದ್ಗುರುಗಳವರ ಮೇಲಿನ ವಿಜಂಟರಾಗಿದ್ದ ಕಂಪೆನಿಯ ಪಾಲಿಸಿದಾರರಾದ ದಿವಂಗತ ಶ್ರೀ ಹೆಚ್. ಎಂ. ರಾಘವಾಂಕಯ್ಯನವರ ಪಾಲಿಸಿ ಮೊಬಲಗು ಮೂರು ಸಾವಿರ ರೂಪಾಯಿಗಳನ್ನು ಅವರ ಕುಮಾರರಿಗೆ ಇದೇ ೨೨-೧-೬೯ ನೇ ಭಾನುವಾರ ಮೊಳಕಾಲ್ಮುರು ತಾಲ್ಲೂಕು ರಾಂಪುರದ ಟ್ರಾವಲರ್ಸ್ ಬಂಗಲೆಯಲ್ಲಿ ಸಭೆಯೊಂದನ್ನು ನೆರೆಯಿಸಿ ಹಣವನ್ನು ಪಾವತಿ ಮಾಡಲು ಏರ್ಪಡಿಸಲಾಗಿದೆ ಈ ಸಭೆಯ ಅಗ್ರಾಸನವನ್ನು ವಹಿಸಲು ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರೂ ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರೂ ಆದ ಶ್ರೀಮಾನ್ ಜೆ. ಮುಹಮ್ಮದ್ ಇಮಾಂ, ಬಿ.ಎ., ಬಿ.ಎಲ್., ಅವರು ದಯವಿಟ್ಟು ಒಪ್ಪಿರುತ್ತಾರೆ. ದಯವಿಟ್ಟು ಈ ಸಭೆಗೆ ದಯಮಾಡಿಸಬೇಕಾಗಿ ಕೋರುತ್ತೇನೆ.

ಇಂತು ವಿಶ್ವಾಸವಿರುವ,
ರಾಂಪುರ. ತಮ್ಮ ವಿಶ್ವಸನೀಯ.
ತಾ॥ ೧೬-೧-೧೯೬೯ ಆಗ್ರಸೈಜರ್,
ಮೈಸೂರು ಇಂಡಸ್ಟ್ರೀಸ್ ಕಂಪೆನಿ, ಲಿ.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೈನ್‌ಸಿರಲೂ ಇಂಜಕ್ಷನ್‌ಗಳಿಲೂ ಬಿಡದಿರುವ ಜ್ವರವನ್ನು ಗೆದ್ದ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ರಜಿಗೆ ರೂ. 9-12-0, ರೂ. 16-8-0

ಕಂಪೌಂಡ್ ಸಿರಪ್ ಸಾಲಸಪರಿಲ್ಲ—ಸ್ವಚ್ಛೇಂದ್ರಿಯ, ಸ್ವಲನ, ಶೀಘ್ರಸ್ವಲನ ಧಾತುಕಳಕೊಳ್ಳುವದು, ಮೂತ್ರದಿಬಿದನೆ ನಿಸ್ಪಷ್ಟವಾಗುವದು, ವೀರ್ಯಕ್ಷಯ, ಕೆಳಗಾಜಧಾತು, ಇನ್ನಿಲ್ಲದ ಬೊಡವನ್ನು ಕೆತ್ತು ಬಿಸಾಡಿ-ಪದಲ್ಲಿದ್ದ ಧಾತುಪುಷ್ಟಿಕ ರಸಾಯನ ಪಾಗಿರುತ್ತದೆ. ಸೀಸೆಗೆ ರೂ 3-8-0 ಮತ್ತು 1-14-0

ಸೈಣ್ಯಾತಿಸಟ್ಟೆ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಹುಳುಗಳನ್ನು ನಾಶಪಡಿಸಿ ಜಾಡಿಸಿದ ದರಲ್ಲಿ ಮುಟ್ಟು ಔಷಧಿ. ಗುಜಸ್ ೪. 0-6-0 100ಕ್ಕೆ ರೂ 2-0-0

ರಿಂಗ್ ವರ್ಮ್ ಬಾಮು—ಕರಿಜತರವಾದ ಹುಳ ಪೀಯುವುದು, ಗಜಕರ್ಣ, ಹುಳಕಜ್ಜಿಗೂ ಉತ್ತಮ. ಆಣೆ 5.

ಕುದ್ಮ ಟಿಕ್ಕು, ಹೊನ್ಮೊಪಥಿ ಔಷಧಿಗಳು ಸಮೃದ್ಧಿ ದೊರೆಯುತ್ತವೆ. ಕ್ಯಾಟಲಾಗ್ ಬರೆಯಿರಿ.—ಧರ್ಮಾರ್ಥ.

[21] ಮಲೇರಿಯಾನ ಕಂಪೆನಿ, ಹಂಪನಕಟ್ಟೆ (21) ಮಂಗಳೂರು, ದ.ಕ.

ಕೆಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಪಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋ—ಬಾಲ್ಯಾವಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮರೆಗ್ರಹಣಿ ರೋಗದಿಂದ ಮೂಸ ಜೋಲುಬಿದ್ದು, ಮೈ ಕೈ ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಈಯರ್ ಆಯಿಲ್—ಕಿವಿ ನೋವುವದು, ವ ನೋಪ್ಪೆ ಕಿವುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣಹವಾಕಜೆಗೆ ಸಿದ್ಧಾಷಧಿ ಸೀಸೆಗೆ ರೂ. 1-0 0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಜೆಗೆ ಸೀಸೆಗೆ ರೂ. 1-0 0.

ಕೆಂಪೌಂಡ್ ಸಿರಪ್ ನೆಫ್ರೋಜ—ಪ್ರಮೇಹ ಮೂತ್ರ ದ್ವಾರದಿಂದ ವೀಷ್ಯ, ಮೂತ್ರಹೊಯ್ಯುವಾಗ ತತೆಯಲಾರದೆ, ಕರಿಂ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಶಾಮರ್ಥ್ಯವಿಲ್ಲದಿರುವಮ್ಮ ಇನೇ ಮೊದಲಾದ ಪ್ರಮೇಹದ ಲಕ್ಷಣಗಳ ಬುಡವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ಪಿಲ್ಲುಸುವಮ. ಸೀಸೆಗೆ ರೂ. 3-8-0, ರೂ. 1-14 0.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮತ್ತೆ ಸಾವಿರಾರು ಶಿಷ್ಯರ ಮನೆಗಳಿರುತ್ತಿವೆ, ಆ ಮಹಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯುಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿದಿದುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪ್ರಸ್ತಕವನ್ನು ಹೊಸ ವಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯುಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ನಂಬಿಕಾರಂಪಕ್ಕವಾಗಿ ಬಂಪ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ನುತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗುತ್ತಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತ್ರಿನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಸುಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿಕ್ಕಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಉಸ್ತಭಸ್ಮ	೧	೦—೮—೦
ಸುಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೩—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪುಚಿಪ್ಪಿನ ಭಸ್ಮ	೧	೦—೮—೦
ಗಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,
ಪೋಸ್, ಒಲಿಮಠ, ಬೆಲಾ ಗಡಿವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾತ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ವ್ಯಾಜೇನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಒರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ವೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿತ್ತದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್.—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೫ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚ, ವ್ಯಾಸ, ಸಾನಂದ, ಮೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪಡೆಸಿಕೊಡುವ ಫೋಟೋ ಸೈಜು ೧೦ × ೧೪ ಬೆಲೆ .... ೦—೧—೬

ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧೫ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಪಡಿಸಿದ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರನಿವಾಸಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲವಿರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಸ್ವಾಮಿಗಳ ಅತ್ಯಂತ ಸುಂದರವಾದ ಫೋಟೋ ೧೫ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ರಮ್ಯವಾಗಿ ಕಟ್ಟಿರುವ ಸುಂದರ ಫೋಟೋ ೧೫ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಾಲಯದ ಅತ್ಯಂತ ಸುಂದರವಾದ ಗೋಪುರದ ಫೋಟೋ .. ೦—೦—೯

ಹಿಮವತ್ಪರ್ವತದ ಮೇಲಿರುವ ಕೇದಾರೇಶ್ವರ ಶ್ರೀ ಕೇದಾರನಾಥಾಲಯದ ಮುಂದಿರುವ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಲಕ್ಷ್ಮಣಾಚಾರ್ಯರು ವಿನಂತಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟ್‌ನಲ್ಲಿರುವ [illegible] ಜಗದ್ಗುರುಗಳವರ ಆಶ್ರಮಕ್ಕೆ ಸುಮೋಟ್ಸಿಸರುವ ಫೋಟೋ ೦—೦—೯

ಸೂಚನೆ—ಒಮ್ಮೆ ಬಿಡಿಸಿಟ್ಟಿರುವ ಕಾಲೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಿಂತ ಮೇಲೆ ತಂಬಿಕೊಳ್ಳುವವರಿಗೆ ಫೋಟೋ ಪಾರ್ಸಲ್‌ಗೆ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪರಿವಾರವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[40] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪ್ರವರ [illegible] .... ೧ ಆಣೆ

ಸನ್ಯಾಸಾಶ್ರಮವಿಮರ್ಶ ತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ೧ ಆಣೆ

ಪಂಚಪೀಠಿಕಾ ಪ್ರಸ್ಥಾನ [illegible] (೩ನೆಯ ಆವೃತ್ತಿ) .... ೧ ಆಣೆ

ಶ್ರೀವೀರಶೈವಸಿದ್ಧಾಂತಸಾರ [illegible] (೮ನೆಯ ಆವೃತ್ತಿ) .. ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ [illegible] ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರಾವಳಿ ... ೨ ಆಣೆ

ಬಸವಾದಿಶಿವಶರಣರ [illegible] (೩ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಾಷ್ಟಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ ... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ ... . ೨ ಆಣೆ

ವೀರಶೈವಮತಮಾಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಭರತಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೮ ಆಣೆ

ಬಸವಾಧ್ವಾಂತದಿವಾಕರ (೩ನೆಯ ಆವೃತ್ತಿ) .... ೮ ಆಣೆ

ಪದ್ಯೋಧರತ್ನಾವಳಿ .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಪಣಮು (ತೆಲುಗು) ೯ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೩ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ... ೧೩ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೩ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೩ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .. .... ೧೩ ಆಣೆ

ಶ್ರೀಕರಧಾಮ್ಯಂ (ಚತುಸ್ಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೩ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು) .... ೧। ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* The Philosophical Aspect of Virasaivism (*English*) .... 8 As

Speeches by Pandit Shri Kashinatha Shastriji *English*) 12 As

ವೀರಶೈವಕಲ್ಪ (ಮರಾಠೀ) ... ... ೧ ರೂ

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ

ವೀರಶೈವೇಂದ್ರಶೇಖರ (ಸಂಸ್ಕೃತ) ... ... ೧ ರೂ

ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) ... ... ೬ ಆಣೆ

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ... ... ೨ ಆಣೆ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ಶೆಟ್ಟಿ ಶಿವಶಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಸಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧½ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ನೇ ಜನವರಿ ೧೯೩೯ [ಸಂಚಿಕೆ ೩೯

ಶ್ರೀ॥ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ನವಸ್ತೋತ್ರರತ್ನಮಾಲಿಕಾ

ಶ್ರೀಗಾರೀರಮಣಾಜ್ಞಯಾ ಕ್ಷಿತಿತಲೇ ಸ್ಪ್ರಾದುರ್ಭವಲ್ಲೀಲಯಾ ।
ಹಾತುಂ ಲೋಕಮಿಮಂ ಜಗದ್ಗುರವರಶ್ರೀದಾರುಕಾರ್ಯೋತ್ಸವಪರಃ
ಯಃ ಕ್ಷೇತ್ರೇಜ್ಜಯನೀಪುರೇ ಸನುಭವತ್ಸದ್ಧರ್ಮಪೀಠಾಧಿಪಃ ।
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೧॥

ಭಕ್ತೈಃ ಪೂಜಿತಪಾದಪದ್ಮಯುಗಲಃ ಕಾಷಾಯವಸ್ತ್ರಾನ್ವಿತೋ ।
ರುದ್ರಾಕ್ಷಾಭರಣೈರ್ವಿಭೂಷಿತವಪುರ್ಧರ್ಮತ್ರಿಪುಂಡ್ರಾಂಕಿತಃ ॥
ಧರ್ತ್ತೇ ದೀಪ್ತಕಮಂಡಲುಂ ಕರತಲೇ ಪಾಲಾಪದಂಗಃ ಜಯ ।
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೨॥

ಪೂರ್ಣೇಂದುರ್ವರವೀರಕೈವಸಮಯಾಂಭೋರಾಶಿಸಂವರ್ಧನೇ ।
ಪೂರ್ವಾದಿಪ್ರಬಲೇಭಗಂಡದಲನೇ ಕಂಠೀರವಃ ಕ್ರೌರ್ಯಸು ॥ [ಯ
ಶಿಷ್ಯೇಭ್ಯೋ ನಿಗಮಾಗಮಾರ್ಥಮಖಿಲಾ ಸಂಬೋಧಯಾಮಾಸ
ತ್ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೩॥

ದುರ್ವಾರೇಂದ್ರಿಯಸಂಚಯಂ ಚ ಪ್ರಬಲಾನ್ ಕಾಮಾದಿಶತ್ರೂನ್ ಜಯ ।
ಸ್ಕೋಗೇನಾವಿರತಂ ಶಿವಾರ್ಚನಪರೋ ಬ್ರಹ್ಮೋಜಸಾ ಭಾಸ್ವರಃ ।
ಯತ್ಕಾಂತ್ಯಾದಿಗುಣಾನ್ವಿತೋ ಹ್ಯಧಜನ್ಮಸ್ಪಂಕರ್ತೃಮಾನೋ ಧೃಶಂ
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೪॥

ಯಂ ಪ್ರಾಹುಃ ಶಿವಯೋಗಿನಂ ಯತಿವರಾಃ ಕೈವಲ್ಯಕಲ್ಪದ್ರುಮಂ
ಯಂ ಪ್ರಾಹ್ತಾ ನಿಗಮಾಗಮುಜ್ಜ ಮುದಸ್ ಜ್ಞಾನೈಕರತ್ನಾಕರಃ ॥
ಯಂ ಲೋಕಾಃ ಪ್ರಬುಬೋಧಚಾರಿತವಹಸ್ಯೈಸ್ಸಾರ್ಥಚಿಂತಾ
ಮಣಿಂ ।
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೫॥

ಶ್ರುತ್ಯಾದಿಪ್ರತಿಪಾದಿತಾರ್ಥವಿಮತಾ ಭಳ್ತ್ಯಾಳವಿದ್ಧಂಸಿನಾ ।
ಯೇನಾಸ್ಮಿನ್ ಭುವನೇ ಸ್ವಕೀಯಯತಸಾ ಧರ್ತ್ತಃ ಪ್ರಬಾಧೀಕೃತಃ ।
ಸಂಸಾರಾರ್ಣವಮುನ್ನ ಭಕ್ತನಿವಹಾಸ್ತೋ ವ್ಯಾಗಾತಿಃ ಶ್ರದ್ಧಯಾ ।
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೬॥

ಭಕ್ತಾ ಭಕ್ತಿಧರಾನ್ವಿತಾನ್ಸುಮನೋದ್ರವ್ಯಾಯೆ ಯೆಸ್ಮೈ ಪ್ರಮ ।
ರ್ಯಸ್ಮಾದ್ಭೀತಿಮುಪೇತ್ಯ ಪಾಪಮಖಿಲಂ ನ್ಯಕ್ಕಾದ್ಧತಂ ಸತ್ವರಂ
ಯಸ್ಮಾನ್ಮಂತ್ರರಹಸ್ಯಮಪ್ಯಧಿಗತಂ ಶುದ್ಧಾತ್ಮನೋ ಯೋಗಿಭಿ ।
ಸ್ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೭॥

ಯಸ್ಯಾರಾಧ್ಯಪದಾಂಬುಜೇ ತಮುಮಹೋ ವಿದ್ಯಾವತಃ ಶ್ರೀಮತಃ ।
ಲೋಕೇಸ್ಮಿನ್ ಸತತಂ ಜನಾ ಗತಭಯಾಃ ಪ್ರಾಪುಃ ಸುಖಂ ಚ
ಶ್ರಿಯಂ ॥
ತ್ಕೈವಾಸೇ ಚ ಸುದುರ್ಲಭಂ ಪರತರಂ ಶಂಭೋಃ ಪದಂ ಶಾಶ್ವತಂ
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೮॥

ಯಸ್ಮಿನ್ ಸಂಯಮಿನಾಂವರೇ ಧೃತಿಧನೇ ಸ್ಥಿರಾತಪಸ್ವನಿನೇ ।
ಯೋಗೇಶ್ವರಾಗಿರೀಶಕೃಪಮನಸಾ ತೇನೇ ಶಿವೇ ಬ್ರಹ್ಮಣಿ ।
ನೇತಾರಂ ಸಮವಾಪ ಶೈವಸಮಯಃ ಸಿದ್ಧೇಶ್ವರಂ ಸದ್ಗುರುಂ ।
ತಂ ವಂದೇ ಸತತಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೯॥

ಸ್ವಾಮಿನ್ ವಿಶ್ವಗುರೋ ಕೃಪಾಜಲನಿಧೇ ಶ್ರೀಸಿದ್ಧಲಿಂಗೇಶ್ವರ ।
ಶಿಷ್ಯಸ್ತೋಮಹೃದಾರ್ತಿದೂರ ಭವತಃ ಪಾದಾರವಿಂದೇ ಮಯಾ ॥
ವಿಜ್ಞಪ್ತಾ ಸ್ತವನೋತ್ತರತ್ನವಿಲಸತ್ಕಾಂಚಿ ಪ್ರಸನ್ನೋ ಭವ ।
ಮಚ್ಚಂ ದೇಹಿ ಜಯಂ ಮನೋದಿಶಫಲಂ ಪಾಹಿ ಪ್ರಭೋ
ಮಾಂ ಸದಾ ॥

ನವಾತಿವೇಷ ಸಂಪ್ರೋಕ್ತಂ ಸಿದ್ಧಲಿಂಗಜಗದ್ಗುರೋಃ ।
ಸ್ತೋತ್ರಂ ಪಠತಿ ಯೋ ನಿತ್ಯಂ ಸ ಯಾತಿ ಪರಮಂ ಪದಂ ॥

ರಾವಬಹದ್ದೂರ ಬ್ರಹ್ಮಶ್ರೀ
ಕಾಶಿವಾಸಿಶಾಸ್ತ್ರೀ ಕಾಶ್ಯಪೇಶ್ವರಃ, ಶ್ರೀಶೈಲಜಗದ್ಗುರುಃ

ಶ್ರೀ ಜಗದ್ಗುರು ಪೀಠಸಂಸ್ಥಾನದ ಸರ್ಕೀಟಿನ ಗುರುತ್ಯಾಧಿಕಾರಿಗಳ ಶುಭಾಗಮನ, ಅಮರಾಪುರ.

ಶ್ರೀಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀಜಗದ್ಗುರು ಶ್ರೀಮನ್ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಸಕೀಟಿನ ಗುರುತ್ಯಾಧಿಕಾರಿಗಳು ದೇಶಮಧ್ಯದಲ್ಲಿ ಧರ್ಮತತ್ವವನ್ನು ಪ್ರಚುರಗೊಳಿಸುವದಕ್ಕಾಗಿ ಸಂಚರಿಸುತ್ತ ಮೆಡಕಿರಾ ತಾಲೋಕು ಅಮರಾಪುರ ಗ್ರಾಮಕ್ಕೆ ತಾ 30-12-38ನೇ ಶುಕ್ರವಾರ ದಿವಸ ದಯಮಾಡಿಸಿ-ಪೆದರೊಳಗಾಗಿ ಗ್ರಾಮದ ಮಠದ ವೀರಭದ್ರಶಾಸ್ತ್ರಿಗಳು, ಮಠದ ಮುರುಗೆಯ್ಯನವರ ಪುತ್ರರಾದ ನಂಜಯ್ಯನವರು, ಪಾಟೇಲ ಅಲಗನಗೌಡರು, ಪೂಜಾರಿಯಿತಿ ಕೋರ್ಟ್ ಪ್ರೆಸಿಡೆಂಟರಾದ ಗೊಂಚಗಾರ ಸಿದ್ಧಲಿಂಗಪ್ಪನವರು, ಪಂಚಾಯ್ತಿ ಬೋರ್ಡ್ ಮೆಂಬರಾದ ಪರಪ್ಪನ ಶಿವಪ್ಪನವರು ಮರಿಬಸಪ್ಪನವರು, ತಾಲೋಕುಬೋರ್ಡ್ ಮೆಂಬರ್ ಮುರುಘೇಂದ್ರಗೌಡರು, ಯಂ. ಶಿವಪ್ಪನವರು, ಜಡೆ ರುದ್ರಪ್ಪನವರು, ಆ ಸಣ್ಣಲಿಂಗಪ್ಪನವರು ಮುಂತಾದ ದೈವದವರೂ ಶ್ರೀಜಗದ್ಗುರು ಪಂಚಾಚಾರ್ಯ ಭಜನ ಸಂಘದವರ ಪೈಕಿ ರುದ್ರಪ್ಪನವರು, ಮಠದ ನಂಜುಡಯ್ಯನವರು, ಚಂದ್ರಯ್ಯನವರು, ಭಜನಾಸಂಘದ ಕಾರ್ಯದರ್ಶಿ ಬಾಲಪ್ಪನವರೇ ಮೊದಲಾದ ಪ್ರಮುಖರೂ ಕೂಡಿ ಮಂಗಲ ವಾದ್ಯಗಳು ಮತ್ತು ಜಗದಾಚಾರ್ಯರ ಜಯಘೋಷದೊಡನೆ ಎದುರ್ಗೊಂಡು, ಪಲ್ಲಪುಷ್ಪಹಾರಗಳನ್ನು ಸಮರ್ಪಿಸಿದ ನಂತರ ಮಹೋತ್ಸವವು ಸಕಲ ಬಿರುದಾವಳಿಗಳೊಡನೆ ಕಳಸಾರೋಹಣ ರಂಭಾಸ್ತಂಭಗಳಂದಲಂಕೃತವಾದ ರಾಜಬೀದಿಗಳಲ್ಲಿ ಹೊರಟು ಶ್ರೀ ಪ್ಯಾಟೆ ಬಸವೇಶ್ವರಸ್ವಾಮಿ ದೇವಸ್ಥಾನಕ್ಕೆ ತಲ್ಪಿತು. ಅನಂತರ ಸಭೆಯು ನಡೆಯಿತು. ಮಹಾಸಂಸ್ಥಾನ ಸರ್ಕೀಟಿನ ಸರ್ವಾಧಿಕಾರಿಗಳಾದ ಬಳ್ಳಾರಿ ತಾ॥ ಲಿಂಗಾದೇವನ ಹಳ್ಳಿ ಮಠದ ವೇ॥ ನೀಲಕಂಠಯ್ಯನವರು ಶ್ರೀಮತ್ಪಂಚಾಚಾರ್ಯರು ಯುಗಯುಗಾಂತರಗಳಲ್ಲಿ ಅವತರಿಸಿ ತೋರ್ಪಡಿಸಿದ ಮಹಿಮೆಗಳನ್ನು ಹೇಳಿ ಸರ್ವರನ್ನೂ ಸಂತೋಷಪಡಿಸಿದರು. ಅನಂತರ ಶ್ರೀಗಳವರು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಮಹಿಮಾಪ್ರಭಾವವನ್ನೂ ಅವ್ಹಾವರಣಗಳ ತತ್ವವನ್ನೂ ಬೋಧಿಸಿದರು. ಅನಂತರ ಮಹಾಸಂಸ್ಥಾನ ಸರ್ಕೀಟಿನ ಮುನಸಿಯವರಾದ ರುದ್ರಾರಾಧ್ಯ ಶಾಸ್ತ್ರಿಗಳು ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವನ್ನೂ, ಶ್ರೀಶೈಲಕ್ಷೇತ್ರದ ವಿಷಯವನ್ನೂ ಕುರಿತು ಮನೋಹರವಾಗಿ ಭಾಷಣಮಾಡಿದರು. ಅಮೇಲೆ ಜಗದ್ಗುರುಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪಂಚಾಯತಿಕೋರ್ಟ್ ಪ್ರೆಸಿಡೆಂಟ್,
ಗೊಂಚಿಗಾರ ಸಿದ್ಧಲಿಂಗಪ್ಪ.

ಕರ್ನಾಟಕ ಲಿಂ. ಎ ಸೊಸಾಯಿಟಿ ಶಾಲೆಯ ಬಕ್ಷೀಸ್ ಸಮಾರಂಭ, ಸೊಲ್ಲಾಪುರ.

ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿ ಇಂಗ್ಲೀಷ್‌ಶಾಲೆಯ ಬಕ್ಷೀಸ್ ಸಮಾರಂಭವು ತಾ॥ ೧೭-೧೧-೧೯೩೮ನೇ ದಿವಸ ಸಂಸ್ಥೆಯ ಇಮಾರತಿಯೊಳಗೆ ರ್ಯಾಂಗಲರ್ ಸಿ ಡಿ ಪಾವಟೆ ಎಜ್ಯುಕೇಶನಲ್ ಇನಸ್ಪೆಕ್ಟರ್ ಮಧ್ಯಭಾಗ ಪುಣೆ ಇವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಶ್ರೀ॥ ವಾರದ, ಶ್ರೀ॥ ನಾಗಪ್ಪ ಕಾಡಾದಿ, ಸೋಲಾಪುರ. ಮು ಪ್ರೆಸಿಡೆಂಟ್ ಶ್ರೀ ಮಡಿವಾಳಪ್ಪ ಕಾಡಾದಿ, ಶ್ರೀ॥ ಸ॥ ಬ್ರ॥ ಗುರು ಪರಾಂಡಕರ್‌ಸ್ವಾಮಿಗಳು, ಬ್ಯಾ॥ ಸರದಾರ್, ಶ್ರೀ ಝಂಜೆವಕೇಲರು, ಶ್ರೀ ಧುಮ್ಮಾವಕೇಲರು, ಶ್ರೀ ಉಂಬರಜೆ ವಕೇಲರು, ಮಿ ಲಿಮಯೆ, ಮಿ. ಮಿರ್ಜಾ, ಡಿ ಎ ಇ ನ್ಯೂ.ಇ ಹಾಯಸ್ಕೂಲ್ ಮಾಸ್ತರ್ ಮತ್ತು ಊರೊಳಗಿನ ಪ್ರಮುಖ ವ್ಯಾಪಾರಿಮಂಡಳಿಯವರು ಮತ್ತು ಶಾಲೆಯೊಳಗಿನ ವಿದ್ಯಾರ್ಥಿಗಳ ಪಾಲಕರೂ ಆಗಮಿಸಿದ್ದರು. ಪೂರ್ವದಲ್ಲಿ ಈಶಸ್ತುತಿ ಮತ್ತು ಸ್ವಾಗತ ಪದ್ಯಾನಂತರ ವಿದ್ಯಾರ್ಥಿಗಳ ಮರಾಠಿ ಮತ್ತು ಕನ್ನಡಭಾಷೆಗಳೊಳಗಿನ ಸಂವಾದವು ಪತಕೇಯವರ ನಳಿಲಿ ಮತ್ತು ಸಿದ್ರಾಮ ಫುಲಾಕೆ ಇವರ ಶಕ್ತಿಪ್ರಯೋಗವಾಯಿತು ಅಮೇಲೆ ಶಾಲೆಯ ವಿದ್ಯೋರ್ಟ್ಮನ್ನು ಶಾಲೆಯ ಹೆಡ್‌ಮಾಸ್ತರರು ಓದಿದರು ಅನಂತರ ಅಧ್ಯಕ್ಷರ ಹಸ್ತದಿಂದ ವಾರ್ಷಿಕ ಪರೀಕ್ಷೆಯೊಳಗೆ ಹೆಚ್ಚು ಮಾರ್ಕಾಗಳನ್ನು ಪಡೆದು ಮೇಲು ಬಂದ ವಿದ್ಯಾರ್ಥಿಗಳಿಗೆ ಪದಕಗಳೂ, ಪುಸ್ತಕಗಳೂ, ರೂಪಾಯಿಗಳೂ ಮತ್ತು ಬೆಳ್ಳಿಯ ಕಪ್ಪು ಮೊದಲಾದವುಗಳೂ ಕೊಡಲ್ಪಟ್ಟವು ಈ ಪ್ರಸಂಗದಲ್ಲಿ ಸೋಲಾಪುರದೊಳಗೆ ಸುಪ್ರಸಿದ್ಧ ಧರ್ಮಾಭಿಮಾನಿಗಳಾದ ಮತ್ತು ದಾನವೀರರಾದ ವಕೀಲ ಶ್ರೀ ಝುಂಜೆಯವರು ವಿದ್ಯಾರ್ಥಿಗಳಿಗೆ ಕೆಲವು ರೂಪಾಯಿಗಳನ್ನು ಪಾರಿತೋಷಕವಾಗಿ ಕೊಟ್ಟರು. ಅಮೇಲೆ ಅಧ್ಯಕ್ಷರು ವಿಚಾರಪರಿಪ್ಲುತವಾದ ಭಾಷಣವನ್ನು ಮಾಡಿದರು. ಡಾ॥ ದೇಶಮುಖರವರು ಅಧ್ಯಕ್ಷರ ಇಂಗ್ಲೀಷ್ ಭಾಷಣವನ್ನು ಮರಾಠಿಯೊಳಗೆ ಹೇಳಿದರು. ಅಮೇಲೆ ಹಾರತುರಾಯಿ ಸಮರ್ಪಣೆಯೊಡನೆ ಸಮಾರಂಭವು ಮುಗಿಯಿತು.

ಎರಡನೇದಿವಸ ಶಾಲೆಯ ಮೆಕಾನಕೀ ಥಿಯೇಟರಿನಲ್ಲಿ ಈ ಶಾಲೆಯ ವಿದ್ಯಾರ್ಥಿಗಳು "ಸಾಷ್ಟಾಂಗ ನಮಸ್ಕಾರ" ಎಂಬ ನಾಟಕವನ್ನಾಡಿ ತೋರಿಸಿದರು. ಉತ್ತಮಪಾತ್ರವಹಿಸಿದ ವಿದ್ಯಾರ್ಥಿಗಳಿಗೆ ಶ್ರೀ ಝುಂಜೇ ವಕೀಲರ ಹಸ್ತದಿಂದ ಕೆಲವು ಸದ್ಗ್ರಹಸ್ಥರು ಕೊಟ್ಟ ಪದಕಗಳನ್ನೂ ಪುಸ್ತಕಗಳನ್ನೂ ರೂಪಾಯಿಗಳನ್ನೂ ಇನಾಮುಕೊಡುವದರಲ್ಲಿ ಬಂದಿತು. ಅಧ್ಯಕ್ಷರು ಶ್ರೀ ಮಲ್ಲಿಕಾರ್ಜುನಪ್ಪ ಪಾಟೀಲ ಇವರ ೫-೬ ವರ್ಷದ ಮೊಮ್ಮಗನು ತನ್ನ ಭೂಮಿತೆಯನ್ನು ಉತ್ತಮರೀತಿಯಿಂದ ಮಾಡಿದ ಬಗ್ಗೆ ಒಂದು ರೂಪಾಯಿ ಇನಾಮು ಕೊಟ್ಟರು

ಬಕ್ಷೀಸ್ಕ್ಲರ್ಕ.

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಪುಣ್ಯತಿಥಿಮಹೋತ್ಸವ, ಹೂಲಿ.

ಸವದತ್ತಿತಾಲೂಕು ಹೆಬ್ಬಿಕೊಳಲಿಗ್ರಾಮದಲ್ಲಿ ರಾರಾಜಿಸುವ ಸಾಂಬಯ್ಯಸ್ವಾಮಿಮಠದ ಶ್ರೀ ಚರಪಟ್ಟಾಧಿಕಾರಿಗಳಾಗಿದ್ದ ಕೈ|| ಷ||ಬ್ರ|| ಬಾಲಲೀಲಾ ಸಂಗಮೇಶ್ವರಶಿವಾಚಾರ್ಯಸ್ವಾಮಿಗಳವರ ಪುಣ್ಯತಿಥಿಮಹೋತ್ಸವವು ಇದೇ ಪುಷ್ಯ ಬಹುಳ ೧೫ ಬುಧವಾರ (೧೮-೧-೩೯) ದಿವಸ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಶ್ರೀ|| ಷ|| ಬ್ರ|| ಗಳಾದ ಕಡಕೋಳ-ಸತ್ತಿಗೇರಿ-ಮುತನಾಳ ಇವರೇ ಮೊದಲಾದ ಪಟ್ಟಾಧಿಕಾರಿಗಳೂ ವೇ|| ಧರ್ಮಭೂಷಣ ಪಂ|| ಹರೀಶ್ವರಶಾಸ್ತ್ರಿಗಳು, ಗೌರೀಶಂಕರಶಾಸ್ತ್ರಿಗಳು ಕೊಂಗವಾಡ ರಾಜಶೇಖರಶಾಸ್ತ್ರಿಗಳು ಗುಳೇದ ಗುಡ್ಡ ಮೊದಲಾದ ಶಾಸ್ತ್ರಿವರ್ಗದವರೂ, ಗ್ರಾಮಾಂತರಗಳಿಂದ ಭಕ್ತಮಾಹೇಶ್ವರರೂ ಅಜಮಾಸು ೪-೬ ಸಾವಿರದವರೆಗೂ ಸೇರಿದ್ದರು.

ತಾರೀಖು ೧೬-೧-೩೯ ರ ಮಂಗಳವಾರ ಸಾಯಂಕಾಲ ೬ ಘಂಟೆಗೆ ಮಠದಲ್ಲಿ ಕಡಕೋಳ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ವೈ|| ಯುತ ಎಸ್. ಎ. ಅಂಗಡಿಯವರು, ಶ್ರೀಯುತ ಚೀಫ್ ಆಫೀಸರರಾದ ವಾಲಿಯವರು, ಸಬ್ ಇನ್ಸಪೆಕ್ಟರವಲು ಶ್ರೀಯುತ ಪಾಜ್ಜಾಪುರದ ದೇಶಪಾಂಡೆಯವರು, ವೆಂಕಟರೆಡ್ಡಿಯವರು ಅದೇ ದಿವಸ ಸಭೆಯ. ಸಮಯಕ್ಕೆ ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಯಿತು. ಆರಂಭದಲ್ಲಿ ಮುರುಗೋಡದ ಹಿರೇಕೈರಿ ಶ್ರೀಯುತ ಬಾಳಪ್ಪನವರ ಸಂಗೀತವು ಬಹು ಮನೋಹರವಾಗಿ ನಡೆಯಿತು. ರಸವತ್ತರವಾದ ಪದ್ಯಗಳನ್ನು ವಿದ್ವಾಂಸ ಪ್ರಧಿಂದ ಹಾಡಿ ಎಲ್ಲ ಜನಗಳ ಮನಸ್ಸನ್ನು ಸಂತೋಷಪಡಿಸಿದರು.

ಅನಂತರ ವೇ|| ಪಂ|| ಹರೀಶ್ವರಶಾಸ್ತ್ರಿಗಳು ಭರತ ಖಂಡದಲ್ಲಿರುವ ಪಂಚಮ ವೈದಿಕ ಲೌಕಿಕ ನಮತಾವಲಂಬಿಗಳಾದ ಸ್ತ್ರೀಯರಿಗೂ-ಪುರುಷರಿಗೂ ಧರ್ಮವು ಅವಶ್ಯಕವಾಗಿ ಬೇಕೆಂತಲೂ ದರ್ಮವು ಸರ್ವಮತದವರನ್ನು ಕಾಪಾಡಿಕೊಂಡುಬಂದಿದೆ ಒರುತ್ತಲೂ ಇದೆಯೆಂತಲೂ ಹೇಳುತ್ತ ಧರ್ಮದ ಹತ್ತು ಲಕ್ಷಣಗಳನ್ನು ಶ್ರುತಿಪಾದಿಸಿ ಪ್ರತಿಯೊಬ್ಬರು ಧೈರ್ಯ-ತಾಳ್ಮೆ-ಮನಸ್ಸನ್ನು ನಿಗ್ರಹ ಮಾಡುತ್ತ ಪರರ ವಸ್ತುಗಳನ್ನು ಕದಿಯದೆ ಪವಿತ್ರವಾದ ಆಚಾರವುಳ್ಳವರಾಗಿ ಇಂದ್ರಿಯನಿಗ್ರಹಮಾಡಿ ಬುದ್ಧಿವಂತರಾಗಿ ವಿದ್ಯಾವಂತರಾಗಿ ಸತ್ಯವಂತರಾಗಿ ಕ್ರೋಧರಹಿತರಾಗಿ ಅಧರ್ಮ-ಶತ್ರುತರಾಗಿ ಪುರುಷನು ಬ್ರಹ್ಮಚರ್ಯ ಸ್ತ್ರೀಯಳು ಪಾತಿವ್ರತ್ಯದಿಂದಿದ್ದು ತಮ್ಮ ಕರ್ತವ್ಯ ಕರ್ಮವನ್ನುಮಾಡಿ ಸಂಪಗಳಾಗಬೇಕೆಂದು ಹತ್ತು ಲಕ್ಷಣಗಳ ಬಗ್ಗೆ ಸಪ್ರಮಾಣವಾಗಿ ಮಾತನಾಡಿದರು. ಅನಂತರ ಎಸ್. ಎ. ಅಂಗಡಿಯವರು ಮತ್ತು ಪಾಜ್ಜಾಪುರದ ದೇಶಪಾಂಡೆಯವರು ಧರ್ಮದ ಆವಶ್ಯಕತೆಯ ಬಗ್ಗೆ ಹೇಳಿ ರಾಜಕೀಯ ಸುಧಾರಣೆಯು ಹೊತೆಗೆ ಧರ್ಮದ ಸುಧಾರಣೆಗೂ ಅವಕಾಶವನ್ನು ಕೊಟ್ಟು ಆಚರಣೆಯಲ್ಲಿ ತರಬೇಕೆಂಬುದಾಗಿ ಹೇಳಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು. ಅಲ್ಲಿಗೆ ಭೋಜನದ ಸಮಯವಾಗಿದ್ದರಿಂದ ಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತ. ಮಂದಿವಸ ಅಂದರೆ ತಾರೀಖು ೧೭-೧-೩೯ನೆಯ ಬುಧವಾರ ಪ್ರಾತಃಕಾಲ ಶ್ರೀಮಠದ ಕರ್ತೃ ಗದ್ದುಗೆಗೂ, ಮತ್ತು ಪರಂಧಾಮವನ್ನು ಹೊಂದಿದ ಬಾಲಲೀಲಾಸಂಗನೇಶ್ವರ ಸ್ವಾಮಿಗಳವರ ಗದ್ದುಗೆಗೂ ವಿಕಾದಶ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯನ್ನು ವಿಧ್ಯುಕ್ತವಾಗಿ ನೆರಗುಂದ ಪಾಠಕಾಲಾ ವೈದಿಕ ವಿದ್ಯಾರ್ಥಿಗಳು ಮತ್ತು ರಾಷ್ಟ್ರಗಳು ವಡೆಯಿಸಿದರು. ಉಭಯ ಗದ್ದುಗೆಗಳಿಗೂ ಮಹಾಮಂಗಳಾರತಿಯಾದನಂತರ ಪುಣ್ಯತಿಥಿಮಹೋತ್ಸವದಲ್ಲಿ ಭಾಗಿಗಳಾದ ಸರ್ವರಿಗೂ ಅನ್ನಸಂತರ್ಪಣೆಯಾಗಿ ಶ್ರೀ ಗುರುಪ್ರಸಾದದಿಂದ ಎಲ್ಲರೂ ಸಂತುಷ್ಟರಾದರು. ಅದೇ ದಿವಸ ಸಾಯಂಕಾಲ ೪ ಘಂಟೆಗೆ ಪುನಃ ಶ್ರೀಮಠದಲ್ಲಿಯೇ ಮುಕ್ತನಾಳ ಶ್ರೀ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಶೇರಿಸಲ್ಪಟ್ಟಿತು. ಆ ದಿವಸವೂ ಧರ್ಮದವಿಚಾರಗಳ ಬಗ್ಗೆ ಭಾಷಣಗಳಾದವು. ಪಂ|| ಹರೀಶ್ವರಶಾಸ್ತ್ರಿಗಳು ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ ತತ್ತ್ವಗಳನ್ನು ವಿಂಗಡಿಸಿ ಬಳಿಕ ಲಿಂಗದ ವಿಚಾರವನ್ನು ಕುರಿತು ಸಮರ್ಥವಾಗಿ ಭಾಷಣಮಾಡಿದರು. ಆಮೇಲೆ ಶ್ರೀಯುತ ಮಹದೇವಪ್ಪ ನೂಲ್ವಿ ಇವರು ಗುರುಗಳ ಕರ್ತವ್ಯವೆಂಬ ವಿಷಯದಲ್ಲಿಯೂ, ಶ್ರೀಯುತ ವೀರಭದ್ರಪ್ಪ ತೂರಮರಿ ಇವರು ಗುರುಭಕ್ತಿವಿಷಯದಲ್ಲಿಯೂ, ಶಿರೋಳ ವೆಂಕ್ಟಪ್ಪ ವೀರಬಸಯ್ಯನವರ ಮಗ ೭ ವರ್ಷದ ಬಾಲಕನು ಪರೋಪಕಾರ ವಿಷಯದಲ್ಲಿಯೂ ಬಹು ಸ್ವಾರಸ್ಯವಾಗಿ ಮಾತನಾಡಿ ಸಭಿಕರನ್ನು ಆನಂದಗೊಳಿಸಿದರು. ಆ ಮೇಲೆ ಅಧ್ಯಕ್ಷರು ಎಲ್ಲ ವಿಷಯಗಳನ್ನು ಒಂದುಗೂಡಿಸಿ ಹೇಳಿದಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಅನಂತರ ಪದ್ಧತಿಯಂತೆ ಶ್ರೀ ಬಾಲಲೀಲಾ ಸಂಗಮೇಶ್ವರ ಮಹಾಸ್ವಾಮಿಗಳ ಭಾವಪಟವನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿ ವೈಭವದಿಂದ ಮೆರವಣಿಗೆಯು ಮಾಡಲ್ಪಟ್ಟಿತು. ಉತ್ಸವವು ವೈದಿಕರ ವೇದಘೋಷದಿಂದಲೂ ಮಧ್ಯಮಧ್ಯದಲ್ಲಿ ಭಕ್ತಮಾಹೇಶ್ವರರುಉಚ್ಚರಿಸುವ ಜಯಘೋಷದಿಂದಲೂ ದೇಶೀ ಇಂಗ್ಲೀಷು ವಾದ್ಯಗಳಿಂದಲೂ ಜಯಭೇರಿಗಳಿಂದಲೂ ಶಾಂತವಾಗಿ ನಡೆದು ಮಠಕ್ಕೆ ಪುನಃ ತಲ್ಪಿದನಂತರ ಮಹಾಮಂಗಳಾರತಿಯಾಗಿ ಸರ್ವರೂ ಗುರುಪ್ರಸಾದವನ್ನು ತೆಗೆದುಕೊಂಡು ಕೃತಾರ್ಥರಾದರು.

ಮರುದಿವಸ ತಾ|| ೧೯-೧-೧೯೩೯ರ ಗುರುವಾರ ಸಾಯಂಕಾಲ ಸತ್ತಿಗೇರಿ ಶ್ರೀ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಶೇರಿತು ಆಗ್ಗೆ ಪಂ|| ಹರೀಶ್ವರಶಾಸ್ತ್ರಿಗಳು ಭಸ್ಮದ ವಿಷಯಕವಾಗಿಯೂ ದೀಕ್ಷಾ ವಿಷಯಕವಾಗಿಯೂ ಮೂರು ತಾಸುಗಳವರೆಗೆ ಗಂಭೀರವಾಗಿ ಭಾಷಣಮಾಡಿ ಸರ್ವರನ್ನು ಆನಂದಪಡಿಸಿದರು. ಅಷ್ಟಿಗೆ ಸಮಯವಾದ್ದರಿಂದ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪೌರ ಉತ್ಸವಭಾಗಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುಮಹಿಮೆ

ಮಹನೀಯರೆ! ಪರಮಾತ್ಮನಿಂದ ನಿರ್ಮಿಸಲ್ಪಟ್ಟ ಈ ಜಗತ್ತಿನಲ್ಲಿ ಸುಖವಾಗಿದ್ದು ಕಡೆಗೆ ಕೈವಲ್ಯವನ್ನು ಹೊಂದಬೇಕಾದರೆ ಗುರುವು ಅವಶ್ಯವಾಗಿ ಬೇಕೆಂಬ ಶಾಸ್ತ್ರವಚನವನ್ನು ನಾನು ಪೂರಾ ಮನಗಂಡೆನು. ಇದೇ ಸಂವತ್ಸರ ಅಶ್ವಯುಜದಿಂದ ನನಗೆ ವಿಷಮ ಜ್ವರದ ಬಾಧೆಯು ಬಹುವಾಗಿದ್ದಿತು ಆದರೆ ಬಲಿಯಷ್ಟಿ ೩ ತಿಂಗಳವರೆಗೆ ಸಿಲುಕಿ ಪೆಚ್ಚಾಡಿದೆನು. ಶರೀರವು ಕ್ಷೀಣವಾಯಿತು ಪರಾಧೀನನಾದ ನಾನು ಈ ಲೋಕದಿಂದ ಮುಕ್ತನಾಗುವೆನೆಂದು ನಿಶ್ಚಯಿಸಿದೆನು. ರೋಗಕಾಯದಲ್ಲಿ ಮುಳುಗಿರುವ ನನಗೆ ಗುರುನಾಮ ಸ್ಮರಣೆಯೆ ಬಲವತ್ತರವಾದ ಆಧಾರವಾಗಿತ್ತು. ನನಗೆ ಗುರುವಿನ ನಾಮಸ್ಮರಣೆಯೆಂದರೆ ಬಲು ಪ್ರೇಮ. ಅದರ ಸಹಾಯದಿಂದ ಎಂತಹ ಕಷ್ಟವನ್ನಾದರೂ ನೀಗುವೆನೆಂಬ ಧೈರ್ಯವು ನನ್ನಲ್ಲಿ ಸಂಪೂರ್ಣವುಂಟು. ಒಂದುದಿವಸ ಜ್ವರದ ಅತಿಶಯವಾದ ಬಾಧೆಯನ್ನು ತಾಳಲಾರದೆ "ಜಗದ್ಗುರುವೆ ರೇಣುಕಾ ಈ ವಿಧವಾದ ಕಷ್ಟವನ್ನು ಕೊಟ್ಟು ಬಳಲಿಸುವದಕ್ಕಿಂತಲೂ ನಿನ್ನ ಪಾದಕಮಲವನ್ನು ಸೇರಿಸಿಕೊಳ್ಳುವದು ಒಳ್ಳೆಯದು" ಎಂದು ಬೇಡಿಕೊಂಡೆನು. ಆದೆ ದಿವಸ ರಾತ್ರಿಯಲ್ಲಿ ದುಃಖಸಾಮ್ರಾಜ್ಯಶಾಹಿಯ ಬಲೆಯನ್ನು ಹರಿದೊಗೆದು ನನ್ನನ್ನು ಪಾರಮಾಡಲೋಸುಗ ನನ್ನ ಕನಸ್ಸಿನಲ್ಲಿ ಶ್ರೀಪದ್ಯೋಜಿತ ಸ್ವಾಮಿಗಳು ರೇಳುಗಿ ಹಿರೇಮಠ, ಶ್ರೀ ವಾಡಿವಾಳ ಸ್ವಾಮಿಗಳು ಹಿರೇಮಠ ರಂಜೇರಿ ಇವರೀರ್ವರನ್ನು ಕೂಡಿಕೊಂಡು ನನ್ನ ಸದ್ಗುರುಗಳಾದ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಬ್ರಹ್ಮನ್ನಠ ಹೋಟಗಿ ಇವರು ಬಂದು, ಮಗನೇ! ಚಿಂತಿಸಬೇಡ; ಏಳು; ನಿನ್ನಿಂದ ಇನ್ನೂ ಎಷ್ಟೋ ಕಾರ್ಯಗಳಾಗತಕ್ಕವಿವೆ. ಆದ ಕಾರಣ ನಿನಗೆ ಬಂದಿರುವ ಈ ದುರವಸ್ಥೆಯನ್ನು ದೂರಮಾಡಲು ಬಂದಿರುವೆನೆಂದು ನನ್ನ ಹಣೆಯ ಮೇಲೆ ಭಸ್ಮಧಾರಣೆಯನ್ನು ಮಾಡಿದರು. ಆಸ್ಪರಲ್ಲಿ ಒಂದು ಹೆಣ್ಣು ಪಿಶಾಚಿಯು ನನ್ನ ಸದ್ಗುರುನಾಥನಿಗೆ ಸ್ವಾಮಿಗಳೇ! ಈ ಹುಡುಗನು ನನ್ನವನು ಇವನನ್ನು ನೀವು ಸರ್ವಥಾ ಮುಟ್ಟಬೇಡಿರಿ ಅಂದಿತು. ಆದಕ್ಕೆ ನನ್ನ ಗುರುನಾಥನು ಊತನು ನಿನ್ನವನೆಂದಿಗೂ ಆಗಲಾರನು ನನ್ನ ಆಶೀರ್ವಾದದಿಂದ ಇವನನ್ನು ಈ ಮಠಕ್ಕೆ ಅಧಿಕಾರಿಯನ್ನಾಗಿಮಾಡಿರುತ್ತೇನೆ. ನೀನು ಈ ಗುರುಪುತ್ರನನ್ನು ಸರ್ವಥಾ ಮುಟ್ಟಲಾಗದು. ಇಂದು ನೀಳೆ ಮುಟ್ಟಿದರೆ ನಿನ್ನ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ. ನಡೆ ಆಚೆಗೆ ಎಂದು ನುಡಿದು, ಮಗನೆ! ಈ ಪಿಶಾಚಿಗೆ ನೀನು ಹೆದರದೆ ಗುರುನಾಮ ಧ್ಯಾನವನ್ನು ಅವಿಚ್ಛಿನ್ನವಾಗಿ ಮಾಡಿಂಡುಬದೇಶಿಸಿ ಅದೃಶ್ಯರಾಗುವಷ್ಟೊಂದೇ ತಡ ಆ ಹೆಣ್ಣು ಪಿಶಾಚಿಯು ನನ್ನ ಎದೆಯಮೇಲೆ ಕುಳಿತು —ಬಾಯಿಯನ್ನು ತೆರೆ, ನಿನ್ನಲ್ಲಿ ಪ್ರವೇಶ ಮಾಡುವೆನೆಂದು ಹೇಳಿ ಬಲಾತ್ಕಾರವಾಗಿ ನನ್ನ ಬಾಯಿಯಲ್ಲಿ ಪ್ರವೇಶಮಾಡಿತು ಸದ್ಗುರುವಿನ ಆಜ್ಞೆಯಂತೆ ಮಾಡುತ್ತಿರುವ ಗುರುನಾಮ ಧ್ಯಾನ ಬಲಾತ್ಕಾರಕ್ಕೆ ಪಿಶಾಚಿಯ ಬಲಾತ್ಕಾರಕ್ಕೂ ಆತುಲವಾದ ಯುದ್ಧವು ಪ್ರಾರಂಭವಾಯಿತು ಕಡೆಗೆ ಆ ಪಿಶಾಚಿಯ ಬಾಧೆಯನ್ನು ತಾಳಲಾರದೆ ಗುರ್ವಾಜ್ಞೆಯಂತೆ ಜಗದ್ಗುರುವಾದ ರೇಣುಕನನ್ನು ಧ್ಯಾನಿಸಿ "ಸದ್ಯೋಜಾತಮುಮೋದ್ಭೂತಂ ಸದ್ಯೋವೈಭವದಾಯಕಂ| ಸಿದ್ಧಿದಂ ಸಿದ್ಧವಂದಸ್ಯ ವಂದೇ ಶ್ರೀ ರೇಣುಕಂ ಗುರುಂ ॥ ಎಂದು ಅನನ್ಯಭಾವದಿಂದ ಪಠಿಸುತ್ತಿರಲಿಕ್ಕೆ ಆ ಪಿಶಾಚಿಯು ನನ್ನ ಬಾಯಿಯಲ್ಲಿಂದ ಹೊಟ್ಟೆಗೆ ಹಾರಿ ಕಡೆಗೆ ಸಿಡಿದುಬಿದ್ದು ಸಿಡಿಲಿನಂತೆ ಗುಡುಗುಡುಸಿ ನನ್ನ ವೈಮೇಲೆ ಬರುತ್ತಿರುವಾಗ ಮತ್ತೆ ನನ್ನ ಗುರುರಾಜನಾದ ಹೊಟ್ಟಗೀತನು ಬಂದು ಆ ಪಿಶಾಚಿಯನ್ನು ತಡೆದು ಅದಕ್ಕೆ ತಕ್ಕ ಶಿಕ್ಷೆಯನ್ನು ಕೊಟ್ಟು ಇನ್ನು ಮುಂದೆ ಗುರುಪುತ್ರನನ್ನು ಮುಟ್ಟುವದಿಲ್ಲೆನ್ನುವಂತೆ ಅದರಕಡೆಯಿಂದ ವಚನವನ್ನು ತೆಗೆದುಕೊಂಡು ಅದನ್ನು ಓಡಿಸಿದನು ಮತ್ತು ನನಗೆ "ನೀನು ಸುಖವಾಗಿ ಬಾಳು" ಎಂದು ಆಶೀರ್ವದಿಸಿ ಅದೃಶ್ಯನಾದೊಡನೆಯೇ ನನಗೆ ಎಚ್ಚರಾಯಿತು. ನೋಡುತ್ತೇನೆ ನಾನು ಮೊದಲಿರುವ ಬೇನೆಯ ಹಾಸಿಗೆಯಮೇಲೆಯೇ ಇದ್ದೆನು. ಪ್ರಾತಃಕಾಲ ಹೇಗೋ ಕಷ್ಟದಿಂದ ಎದ್ದು ಸ್ನಾನ ಪೂಜಾದಿಗಳನ್ನು ಮಾಡುವ ನನ್ನನ್ನು ನೋಡಿ ಎಲ್ಲರೂ ಆಶ್ಚರ್ಯಯುತರಾದರು. ಇದಕ್ಕೆಲ್ಲ ಕಾರಣವಾದ ಗುರುಮಹಿಮೆಯು ಯಾರಿಗೆ ಗೊತ್ತಾಗಬೇಕು? ಆ ಮೇಲೆ ಸ್ವಪ್ನದಲ್ಲಿ ನಡೆದ ವಿಷಯವನ್ನು ಸರ್ವರಿಗೂ ಹೇಳಿದೆನು. ಗುರುಮಹಿಮೆಯನ್ನು ಕೇಳಿ ನನ್ನ ಗುರುರಾಜನಾದ ಹೊಟ್ಟಿಗೀತನ್ನ ಸಕಲರೂ ಕೊಂಡಾಡಲನುವಾದರು ಆದೇ ದಿವಸ ಮೊದಲುಮಾಡಿ ಮುಂದೆ ೧೫ ದಿವಸಗಳಲ್ಲಿ ಸಂಪೂರ್ಣ ಗುಣಹೊಂದಿದೆನು. ಈಗ ಮೊದಲಿಗಿಂತಲೂ ಬಲಕಾಯನಾಗಿ ಸುಖವಾಗಿದ್ದು ಗುರುಧ್ಯಾನದಲ್ಲಿ ಕಾಲ ಕಳೆಯುತ್ತಿದ್ದೇನೆ ಗುರುಮಹಿಮೆಯು ಅಗಾಧವಾದದ್ದು! ಅದುದರಿಂದಲೇ "ನಗುರೋರಧಿಕಂ" ಎಂದು ಶ್ರುತಿಗಳು ಸಾರುತ್ತವೆ ಈಗಿನ ಕಾಲದಲ್ಲಿ ಅಲ್ಪ ಸ್ವಲ್ಪ ವಿದ್ಯೆಯನ್ನು ಕಲಿತು ಅದನ್ನು ಗುರುನಿಂದೆಯಲ್ಲಿ ಉಪಯೋಗಿಸಿ ಹಾಳಾಗುವ ಶರಣ ಶರಣೆಯರೂ ಕೂಡ ಅಕಕೇತಿಗೆ ಹೋಗಿಯಾಗ ಹತ್ತಿದ್ದಾರೆ. ಇವರಿಗೆ ಸ್ವರ್ಗಪ್ರಾಪ್ತಿಯ ಬದಲಾಗಿ ಗುರುನಿಂದೆಯ ಪಾಠಕೋಷಕವಾದ ನರಕ ಪಟ್ಟಾಭಿಷೇಕವೇ ಯಮಲೋಕದಲ್ಲಿ ಸಿದ್ಧವಾದುದು ಅದ್ದರಿಂದ ಇಂಥ ದುರ್ಜನರ ದುರ್ಬೋಧನೆಯನ್ನು ಸೇವಿಗೆ ಸಿಲುಕಿ ನರಕ ಕೂಪದಲ್ಲಿ ಹೊಳಾಡುವ ಬೋಳಕುಂಡಿಗಳೂ ಶರಣ ಶರಣೆಯರೂ ಎಚ್ಚತ್ತು ಗುರುಸ್ಮರಣೆಯಿಂದ ನಿಜವಾದ ಸುಖವನ್ನು ಹೊಂದಲೆಂದು ಕೋರುವ—

ಸಿದ್ಧಲಿಂಗಸ್ವಾಮಿಗಳು,
ಪಾರುಕ-ಶಾಪಾಮಠ, ರಂಜೇರಿ.

|| ಶ್ರೀಜಗದ್ಗುರು ರೇಣುಕಾಚಾರ್ಯಾಃ ಪ್ರಸೀದತು ||

ಶ್ರೀ ನೀಲಕಂಠೇಶ್ವರ ರೈಸ್‌ಮಿಲ್ ಮತ್ತು ಇಂಡಸ್ಟ್ರಿಯಲ್ ವರ್ಕ್ಸ್, ಬನ್ನೂರು.

ಬೆಂಗಳೂರು ನಿವಾಸಿಗಳಾದ ಶ್ರೀಮಾನ್ ಮಂತಿ ಎಸ್. ರುದ್ರಯ್ಯನವರು ಇದೇ ಬಹುಧಾನ್ಯಸಂವತ್ಸರದ ಮಾರ್ಗಶೀರ್ಷ ಶು|| ೫ ಭಾನುವಾರ (27-11-38) ಶುಭಮುಹೂರ್ತದಲ್ಲಿ "ಶ್ರೀ ನೀಲಕಂಠೇಶ್ವರ ರೈಸ್

ಮಿಲ್ ಮತ್ತು ಇಂಡಸ್ಟ್ರಿಯಲ್ ವರ್ಕ್ಸ್" ಎಂಬ ಅಭಿಧಾನದಿಂದ ವ್ಯಾರಂಭೋತ್ಸವವನ್ನು ಒಳ್ಳೆ ವಿಜೃಂಭಣೆಯೊಡನೆ ನೆರವೇರಿಸಿದರು

ಈ ಮಿಲ್ಲಿನಲ್ಲಿ ಅಕ್ಕಿ ಮತ್ತು ಕಡ್ಲೆಕಾಯಿಬೀಜ ತಯಾರಿ ಆಗುವದು. ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನಲ್ಲಿ ಕಬ್ಬಿನ ಗಾಣಗಳ ತಯಾರಿ ಮತ್ತು ರಿಪೇರಿ ನಡೆಯುವದು. ಅಲ್ಲದೆ ಕೊಪ್ಪರಿಕೆಗಳು ತಯಾರಾಗುವವು ಮತ್ತು ರಿಪೇರಿ ಆಗುವವು ಮಿಷನರಿಗೆ ಬೇಕಾದ ಇತರ ಸಾಮಾನುಗಳು ಒಳ್ಳೆ ಗ್ಯಾರಂಟಿಯಿಂದ ತಯಾರಾಗುತ್ತವೆ.

ಈ ಮಿಲ್ ಪೂರ್ವದಲ್ಲಿ ಶ್ರೀ ಲೇಟ್ ಜ್ಞಾ ರಿಕ್ಕಿಯವರದಾಗಿದ್ದಿತು ಶ್ರೀ|| ರುದ್ರಯ್ಯನವರು ಇದನ್ನು ಬಹು ಸಾಹಸಪಟ್ಟು ಧೈರ್ಯದಿಂದ ಬೀದಿಮಾಡಿ, ಇಲ್ಲಿ ಅನೇಕ ಬಿಲ್ಡಿಂಗ್‌ಗಳನ್ನೂ, ಹೊಸ ಮಿಲ್‌ಗಳನ್ನೂ ಸ್ಥಾಪಿಸಿರುವುದನ್ನು ನೋಡಿ ಸರ್ವರೂ ಸಂತೋಷಪಡುತ್ತಿರುವರು. ಈಗಾಗಲೇ ಇಲ್ಲಿಗೆ ಭತ್ತ, ಕಡ್ಲೆಕಾಯಿ ವಿಶೇಷವಾಗಿ ಬರುತ್ತಿದೆ. ಅಕ್ಕಿ, ಕುಸುವಲಕ್ಕಿ ವಗೈರೆ ತಯಾರಾದ ಮಾಲು ಹಡಪ್ಪಳಗಳಿಗೆ ಭಾರಿಯಾಗಿರವಾನೆಯಾಗುತ್ತಲಿದೆ ಇದರಿಂದ ಒನ್ನೂರು ಗ್ರಾಮವು ಮೊದಲಿಗಿಂತಲೂ, ಈ ಮಿಲ್ ಸ್ಥಾಪನೆಯಾದಮೇಲೆ ಮಾದರಿ ಗ್ರಾಮದಂತೆ ಕಂಗೊಳಿಸುತ್ತಿರುವುದು ಇಲ್ಲಿ ರೈತರಿಗೆ ಮುಖ್ಯವಾಗಿ ಬೇಕಾಗಿರುವ ತೀನೆಗೂಬ್ಬರಗಳು, ಕಡಲೆಹಿಂಡಿಪುಡಿ, ಹೊಂಗೆಹಿಂಡಿಪುಡಿ, ರಾಗಿ ವಗೈರೆ ಬಿಕರಿಗೆ ವಿಪರ್ತಟ್ಟುಮಾಡಿದ್ದಾರೆ

ಪ್ರೊ:—N. ರುದ್ರಯ್ಯನವರು ತುಮಕೂರಲ್ಲಿಯೂ ಸಹ ಶ್ರೀ ಶ್ರೀಕಂಠೇಶ್ವರ ರೈಸ್‌ಮಿಲ್ ಮತ್ತು ಎಕ್ಸ್ಪೆಲರ್ (ಎಂಜಿಮಿರ್ಷ) ಇವುಗಳನ್ನು ಸ್ಥಾಪಿಸಿ ಅಲ್ಲಿ ಭಾರಿಯಾಗಿ ವ್ಯಾಪಾರ ಉದ್ಯಮಗಳನ್ನು ನಡೆಸಲು ವ್ಯಾಪಾರದ ಕೋಠಿಯನ್ನು ನಿರ್ಮಿಸಿದ್ದಾರೆ. ಅಲ್ಲದೆ ಮೈಸೂರು ಮಂಡ್ಯ ಸಕ್ಕರೆ ಕಂಪನಿಯ ಹೋಲ್‌ಸೇಲ್ ಡೀಲರ್ಸ್‌ರವರಾಗಿರುತ್ತಾರೆ ಇವರ ವ್ಯಾಪಾರ ಉದ್ಯಮದ ಸಾಹಸವು ವರ್ಣನಾತೀತವಾಗಿರುವದು. ವೀರಶೈವ ಜನಾಂಗದಲ್ಲಿ ಮುಖ್ಯವಾದ ವಾಣಿಜ್ಯವು ಈ ಮಹನೀಯರಿಂದ ಪ್ರಖ್ಯಾತಿಗೊಂಡಿದೆ ಬನ್ನೂರಲ್ಲಿ ಮಿಲ್ಲು ವ್ಯಾಪಾರ ಉದ್ಯಮವನ್ನು ನೋಡಿ ಘನಸರ್ಕಾರದವರು ಇಲ್ಲಿಗೆ ಎಲೆಕ್ಟ್ರಿಕ್ ದೀಪದ ವಿಪರ್ತಟ್ಟನ್ನು ಇಷ್ಟರಲ್ಲೇ ಮಾಡುವರಾಗಿದ್ದಾರೆ. ಶ್ರೀಜಗದೀಶ್ವರನು ಶ್ರೀ|| ಎಸ್. ರುದ್ರಯ್ಯನವರಿಗೆ ಇದಕ್ಕಿಂತಲೂ ಬುದ್ಧಿ, ಸಾಹಸ ಸಾಮರ್ಥ್ಯಗಳನ್ನೂ ಆಯುರಾರೋಗ್ಯವನ್ನೂ ಕೊಟ್ಟು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಓರ್ವ ಹಿತಚಿಂತಕ.

ವಿಜಿಲಕರ್ಣಾಟಕಾಯುರ್ವೇದ ಮಂಡಳದ ಕಾರ್ಯವ್ಯವಸ್ಥೆಯ ಬಗ್ಗೆ ಕಾರ್ಯದರ್ಶಿಗಳ ಪ್ರಾರ್ಥನೆ.

ನಿಖಿಲ ಕರ್ಣಾಟಕಾಯುರ್ವೇದ ಮಂಡಲವು ಸ್ವಾರಂಭವಾಗಿ 16 ವರ್ಷಗಳಾದವು. ಅದು ಅಂದಿನಿಂದಲೂ ಯಥಾಶಕ್ತಿ ವೈದ್ಯಜಾಂಧವರ ಸೇವೆ ಮಾಡುತ್ತಿದೆಯಾದರೂ ಅಷ್ಟೊಂದು ಹೇಳಿಕೊಳ್ಳುವ ಮಟ್ಟಿಗಿಲ್ಲ ಕಳೆದ ವರ್ಷದಲ್ಲಿ ಮಂಡಳದ ನಿಯಮಾವಳಿಯನ್ನು ಪುನಃ ಅಚ್ಚು ಹಾಕಿಸಿ ಪ್ರಕಟಿಸಲಾಯಿತು. ಕಳೆದ ವರ್ಷದ ವೈದ್ಯಸದಸ್ಯರ ಸಂಖ್ಯೆಯೂ ಸಮ್ಮೇಳನದಲ್ಲಿ ಅವರುಗಳು ತೋರಿಸಿದ ಉತ್ಸಾಹವೂ ತೃಪ್ತಿಕರವಾಗಿಯೂ ತುಂಬಾ ಆಶಾಜನಕವಾಗಿಯೂ ಇದ್ದವು. ನಾವು ಈಗ ಗೊಸವರ್ಷಕ್ಕೆ ಕಾಲಿಟ್ಟಿದ್ದೇವೆ. ಪ್ರಪಂಚದಲ್ಲಿ ಇತರ ಎಲ್ಲಾ ಜಾತಿಜನಾಂಗವೂ ಸಂಸ್ಥೆಗಳಾ ಎಚ್ಚೆತ್ತು ತಮ್ಮ ತಮ್ಮ ಶ್ರೇಯಭಿವೃದ್ಧಿಯ ಮೂಲಕ ಅಖಿಲಲೋಕದ ಕಲ್ಯಾಣಕ್ಕಾಗಿ ಮುಂದೆ ನುಗ್ಗುತ್ತಿರುವಾಗ ನಾವೂ ಸಹ ನಮ್ಮ ಕರ್ತವ್ಯವನ್ನು ಮಾಡದಿರುವುದು ಅತ್ಯಸ್ಥಾನವು ಮಾತ್ರವಲ್ಲದೆ ಸಾಹಕರವೂ ಎಂದರೆ ತಪ್ಪಲ್ಲ.

ಆದ್ದರಿಂದ ಮಂಡಳದ ಕಾರ್ಯಕ್ರಮಪತ್ರವನ್ನು ಕರ್ನಾಟಕದ ಮೂಲಕಾದ್ಯಂತವೂ ಸರಿಯಾಗಿ ಜಾರಿಗೆ ತರಬೇಕಾದರೆ ಸರ್ವವ್ಯಾಪಿಯಾದ ಮತ್ತು ಸಿಸ್ತಿನಿಂದ ಕೂಡಿದ ಉಪಸಂಸ್ಥೆಗಳಾಗಬೇಕು ಎಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಇದಕ್ಕಾಗಿ ಎಲ್ಲ ವೈದ್ಯ ಸದಸ್ಯರೂ ಮುಖ್ಯವಾಗಿ ಆಯಾ ಪ್ರಾಂತದ ಸ್ಥಾಯಿ ಸದಸ್ಯರೂ ಚುರುವಟಿಕೆಯನ್ನು ಹೊಂದಿ ಎಷ್ಟು ಸಾಧ್ಯವೋ ಅಷ್ಟು ಉತ್ತಮವಾದ ಅಂಗಸಂಸ್ಥೆಗಳನ್ನು ಅಲ್ಲಲ್ಲಿ ರಚಿಸಿ ಮಂಡಳದ ಉದ್ದೇಶಕಾರ್ಯಗಳಿಗೆ ಎರವಾಗಲೇ ಬೇಕು.

ಸಾಮಾನ್ಯವಾಗಿ ವೈದ್ಯರ ಆರ್ಥಿಕಸ್ಥಿತಿಯನ್ನರಿತು, ಅವರು ಮಂಡಳದ ವೈದ್ಯಸದಸ್ಯರಾಗಲು ಕೊಡಬೇಕಾಗಿರುವ ಎಂಡು ರೂ. ಚಿಂದಾದಿಂದಲೆ ಒಂದು ಯುಕ್ತವಾದ ಭಾಗವನ್ನು ಆಯಾ ಪ್ರಾಂತಿಕ ಸಂಸ್ಥೆಯ ಕಾರ್ಯಗಳಿಗಾಗಿ ಬಿಟ್ಟು, ಹೆಚ್ಚು ಚಿಂದಾ ಹಣದ ಹೊರೆಯಿಲ್ಲದೆಯೇ ಮಂಡಳದ ಮತ್ತು ಪ್ರಾಂತಿಕ ಸಂಸ್ಥೆಯ ಸದಸ್ಯರಾಗಿರಲು ಅನುಕೂಲಪಡಿಸಬೇಕೆಂಬ ಆಲೋಚನೆಯನ್ನು ಬರುವತಿಂಗಳ ಮೊದಲನೆಯ ವಾರದಲ್ಲಿ ನಡೆಯುಲಿರುವ ಮೊದಲನೆಯ ಸ್ಥಾಯಿ ಸಮಿತಿಯ ವಿಮರ್ಶೆಗಾಗಿ ಇಡಲಾಗುತ್ತದೆ.

ಅದುದರಿಂದ ಈ ಅನುಕೂಲದ ನಿರೀಕ್ಷಣೆಯ ಮೇಲೆ ಎಲ್ಲಾ ಕರ್ಣಾಟಕಭಾಗಗಳಲ್ಲೂ ಅದಷ್ಟು ಹೆಚ್ಚು ಉಪಸಂಸ್ಥೆಗಳಾಗಬೇಕೆಂದು ಮಂಡಳವು ಕೋರುತ್ತದೆ.

ಒಳ್ಳಾರಿ ಸಮ್ಮೇಳನದಲ್ಲಾದ ನಿರ್ಣಯಗಳು ಅತಿ ಮಹತ್ವದವೂ ಮತ್ತು ಕರ್ನಾಟಕದ ಎಲ್ಲ ಪ್ರಾಂತಗಳಿಗೂ ಅತಿ ತುರ್ತಾಗಿ ಸಂಬಂಧಿಸಿದವೂ ಆಗಿರುವುದರಿಂದ ಅವುಗಳನ್ನು ಕಾರ್ಯಕಾರಿಗಳನ್ನಾಗಿ ಮಾಡಲು ಪ್ರವಾಸವನ್ನು ಕೈಗೊಂಡಿಲ್ಲಿದೆ ಸಾಧ್ಯವಿಲ್ಲವೆಂಬುದನ್ನು ಅಧ್ಯಕ್ಷರು ಮನಗಂಡು ಅದರಂತೆ ಪ್ರವಾಸಕ್ಕಾಗಿ ವಿಪರ್ತಡಿಸಿರುತ್ತಾರೆ.

ಆಯಾ ಪ್ರಾಂತದ ವೈದ್ಯ ಸಂಸ್ಥೆಗಳ ಅಥವಾ ಪ್ರಮುಖ ವೈದ್ಯರ ನೇತೃತ್ವವೇ ಈ ಪ್ರಯತ್ನಕ್ಕೆ ಅತ್ಯವಶ್ಯಕವಾಗಿರುವುದರಿಂದ ಅಂತಹವರ ಆಹ್ವಾನವನ್ನು ಸಾಧ್ಯವಾದಷ್ಟು ಬೇಗ ಸನ್ನಿಸಲು ಸಿದ್ಧರಾಗಿರುತ್ತಾರೆ ಅಂತಹ ಆಹ್ವಾನಗಳು ಎಷ್ಟು ಬೇಗ ಬಂದರೆ ಅಷ್ಟು ಬೇಗ ಅವರ ಪ್ರವಾಸದ ವಿವರವನ್ನು ತಿಳಿಸಲು ಅನುಕೂಲಿಸುತ್ತದೆಯಾಗಿ ಈ ವಿಚಾರವನ್ನು ಮಂಡಲದ ಸದಸ್ಯರು ಮತ್ತು ಆಯಾ ಪ್ರಾಂತದ ವೈದ್ಯಾಭಿಮಾನಿಗಳ ಅವಗಾಹನೆಗೆ ತರುವುದು ನನ್ನ ಮುಖ್ಯ ಕರ್ತವ್ಯ ಎನಿಸಿದೆ. ಈ ಪ್ರಯತ್ನವನ್ನು ಅದಷ್ಟು ಫಲಕಾರಿಯನ್ನಾಗಿ ಮಾಡಬೇಕೆಂದು ಮಂಡಳದ ಪರವಾಗಿ ಕೋರುತ್ತೇನೆ.

[ವಿ. ಸೂ—1. ಕಳೆದ ವರುಷದಲ್ಲಿ ವೈದ್ಯಸದಸ್ಯರಾದ ವೈದ್ಯಮಹನೀಯರು ತಮ್ಮ ಈ ವರುಷದ ಸದಸ್ಯ ಧನ (೭ರೂ) ವನ್ನು ದಯೆಮಾಡಿ ಕೂಡಲೆ ಆಯಾಪ್ರಾಂತದ ಸ್ಥಾಯಿಸಮಿತಿಯ ಸದಸ್ಯರಿಗಾಗಲಿ, ಅಥವಾ ನೀವಾ ಮಂಡಳದ ಅಧಿಸಿಗಾಗಲಿ ತಲುಪಿಸಿ ಮಂಡಳದ ಅಧಿಕಾರಯುತವಾದ ರಶೀತಿಯನ್ನು ಪಡೆಯಬೇಕೆಂತಲೂ—

2 ವೈದ್ಯಸದಸ್ಯರಾಗಲು ಅರ್ಜಿದಾರರಾದ್ದಾಗ್ಯೂ ಇದುವರೆಗೂ ಮಂಡಳದ ಸದಸ್ಯರಾಗದಿರುವವರು ಈ ಕೂಡಲೆ ಸದಸ್ಯತ್ವವನ್ನು ಹೊಂದಬೇಕೆಂತಲೂ—

3. ಸ್ಥಾಯಿಸಮಿತಿಯ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವ ವೈದ್ಯಮಹನೀಯರು ತಮಗೆ ಮಂಡಳದ ಅಧಿಸಿನಿಂದ ಸ್ಥಾ. ಸಮಿತಿಯ ಸದಸ್ಯತ್ವದ ಪ್ರಾರ್ಥನೆಯು ತಲುಪಿದ 2 ವಾರಗಳೊಳಗಾಗಿ, ಅಂಗೀಕಾರ ಪತ್ರವನ್ನೂ ಮತ್ತು ತಮ್ಮ ಈ ವರ್ಷದ ಸದಸ್ಯ ಧನವನ್ನೂ ದಯೆಯಿಟ್ಟು ತಪ್ಪದೆ ಕಳುಹಿಸಿಕೊಡಬೇಕಾಗಿಯೂ ಮತ್ತೊಮ್ಮೆ ಪ್ರಾರ್ಥನೆ]

10-1-1939 ಎ. ಕೆ. ರಾಯಬಾಗೆಕರ್,
330, ಆಪ್ತಶ್ರೀ ರೋಡ್, ಸೆಕ್ರೆಟರಿ.
ಹುಬ್ಬಳ್ಳಿ.

ಜಹಗೀರ ಜೇವರಗಿಯ ಸಮಾಚಾರ ಜಾಹೀರ ನಿಷೇಧ

ಜಹಗೀರ ಜೇವರಗಿ ಗ್ರಾಮದಲ್ಲಿ ತಾ|| ೫-೧-೩೯ ಶನಿವಾರ ಇಲ್ಲಿಯ ಬೃಹನ್ಮಠದಲ್ಲಿ ಶ್ರೀಯುತ ವೀರಪ್ಪ ಶಿವರಾವ ಮಾಲಿ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಪ್ರಚಂಡ ಜಾಹೀರ ಸಭೆ ಸೇರಿ "ನಾಲವಾಡ ಶಿವ ಶರಣೆಯ ಇಂದ್ರವ್ವೆಳ್ಳ ಮನೆಯಲ್ಲಿ ನಡೆದ ಮಂಟಪ ಪೂಜೆಯ ನಿಜಸ್ಥಿತಿ" ದಂಡೆಮುಂಡೆಯರ ಸಹಾಯದಿಂದ ಹಿಂಡಬಂಡರು ಹೊರಡಿಸಿದ ಪುಸ್ತಕದ ನಿಷೇಧವನ್ನು ಮಾಡಲಾಯಿತು.

ದುಃಖಪ್ರದರ್ಶನ

ನೇ|| ತಿರೋಳ ಪಂಚಾಕ್ಷರ ಶಾಸ್ತ್ರಿಗಳ ಆಕಸ್ಮಿಕ ಮರಣದ ಒಗ್ಗೆ ದುಃಖಪ್ರದರ್ಶನವನ್ನು ಮಾಡಲಾಯಿತು.

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿ

ತಾ|| ೧೯-೧-೩೯ ನೇ ಸೋಮವಾರ ದಿವಸ ಇಲ್ಲಿಯ ಬೃಹನ್ಮಠದಲ್ಲಿ ಶ್ರೀಜಗದ್ಗುರು ಪಂಡಿತಾರಾಧ್ಯ ಭಜನಾಸಂಘದವರು ಶ್ರೀ ಸಿದ್ಧರಾಮಪ್ಪ ರೇವಣಸಿದ್ಧಪ್ಪ ದೇವಣಗಾವ ಇವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿದರು. ಜಗದ್ಗುರುಗಳ ಸ್ತೋತ್ರವಾದ ಮೇಲೆ ಶ್ರೀ|| ಸಿದ್ಧರಾಮಪ್ಪ ಕಾರಭಾರಿ ಇವರು ಜಗದ್ಗುರುಗಳ ಲೀಲೆಗಳ ಬಗ್ಗೆ ಭಾಷಣಮಾಡಿ ಸರ್ವರನ್ನೂ ಸಂತೋಷಪಡಿಸಿದರು. ಬಳಿಕ ಜಗದ್ಗುರುಗಳ ಜಯ ಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶಿವರಾವ ಸಿದ್ಧರಾಮಪ್ಪ ಪಾಟೀಲ.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನದಿಟ್ಟು ಬರುವಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದಿ ಸಮೀತ ಸಂಶೋಧಿಸಲಾಗಿರುತ್ತದೆ. 4 ಡೋಸ್ಸ್ ಸೀಸೆಗೆ ಆಣೆ 0-14-0, 8 ಡೋಸ್ಸ್ ಸೀಸೆಗೆ ರೂ. 1-8-0, ಡಜನಿಗೆ ರೂ. 9-12-0, ರೂ. 16-8-0.

ಕೇಶಕೌಂಡ್ ಸಿರಪ್ ಸಾಲಸವಸೆ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ವಲನ, ಧಾತುಕಳಕಳೆಯುವದು, ಮೂತ್ರಜೊನೆ ನಿಷ್ಪವಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ಇವೆಲ್ಲವು ಬಿಡಿಸುವದಲ್ಲದೆ ಧಾತುಪಾಷ್ಟಿಳ ರಸಾಯನವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಪ್ಯಾತಿಪಟ್ಟಿ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಹುಳುಗಳನ್ನು ನಾಶಪಡಿಸಿ ಹಾಗಿಸುವ ಪರಿಲ್ಲೆ ಮುಖ್ಯ ದಿವಸಿ. ಡಜನ್ ಆ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಚಾಮು—ಳರಾತರದ ತುಲ ಮೇಯುವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇಮಸ, ಪಾಸವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋನ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ ಎಲುಬುಗಳು ಮೆತ್ತಗಾಗಿ ತಾಮ ರಿಕ್ಕುಹಣೆ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಿಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಟೂಯರ್ ಓಯಿಲ್—ತಿವಿ ಸೊರುವದು, ವ ನೋವು ತಿವುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-6-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಹಡೆಗೆ ಸಿದ್ಧೌಷಧ ಸೀಸೆಗೆ ರೂ. 1-0-0.

ಡಯೆರಿಯಾ ಕ್ಯೂರ್—ಅತಿಸಾರದ ಹೊರಳಿಕೆಗೆ ಸೀಸೆಗೆ ರೂ. 1-0-0.

ಕೇಶಕೌಂಡ್ ಸಿರಪ್ ವೆಸಿಳೊಜ—ಪ್ರಮೇಹ ಮೂತ್ರ ತ್ಯಾರದಿಂದ ಕೀವು, ಮೂತ್ರಜೊಯ್ಯುವಾಗ ತಡೆಯಬಾರದೆ, ಕಣಿ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇವೇ ಮೊದಲಾದ ಪ್ರಮೇಹದ ಲಕ್ಷಣಗಳಳಿಯುವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣವಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಮುಷ್ಠಿ ಚಿಟ್ಟು, ಜೊಮ್ಮೊಪಟ್ಟಿ ದಿವಸಗಳು ನಮ್ಮಲ್ಲಿ ದೊರೆಯುತ್ತವೆ. ಇತ್ಯಾದಿಗಳಿಗೆ ಬರೆಯಿರಿ—ಧರ್ಮಾರ್ಥ.

ಮಲೇರಿಯಾನ ಕಂಪೆನಿ, ಹಂಪನಕಟ್ಟೆ (21) ಮಂಗಳೂರು, ದ.ಕ.

ಪಂಚಾಚಾರ್ಯಪ್ರಭಾ.

೧೯೩೯ ನೆಯ ಜನವರಿ ತಾ|| ೩೦ ನೇ ಸೋಮವಾರ.

ಧರ್ಮಸಂಗ್ರಹ.

ಸತ್ಯಂ ಕ್ಷಮಾ ದಯಾ ಶೌಚಂ ನಿಯಮೋ ಮಾರ್ದವಂ ತಥಾ ।
ತಪಸ್ತ್ಯಾಗೋ ಬ್ರಹ್ಮಚರ್ಯಂ ಸಂತುಷ್ಟಿರ್ಆರ್ಜವಂ ತಥಾ ।
ಧರ್ಮಾ ಏತಾದಶ ಪ್ರೋಕ್ತಾ ಭಕ್ತಾನಾಂ ಶುಭವರ್ಧನೇ ॥

ಸತ್ಯ, ಕ್ಷಮೆ, ದಯೆ, ಶೌಚ, ನಿಯಮ, ಮಾರ್ದವ, ತಪಸ್ಸು, ತ್ಯಾಗ, ಬ್ರಹ್ಮಚರ್ಯ, ಸಂತುಷ್ಟಿ, ಆರ್ಜವ ಎಂಬ ಹನ್ನೊಂದು ಧರ್ಮಗಳು ಲಿಂಗಾಂಗಿಯಾದ ಮಾನವನಿಂದ ಅವಶ್ಯ ಸಂಗ್ರಹಿಸಲ್ಪಡತಕ್ಕವುಗಳಾಗಿವೆ. ಈ ಧರ್ಮಗಳನ್ನು ಯಾವನು ಆರ್ಜಿಸುವನೋ ಅವನೇ ನಿಜವಾದ ವೀರಶೈವನು. ಇದಕ್ಕೆ ವಿರುದ್ಧವಾದ ಅಸತ್ಯ, ಅಕ್ಷಮೆ, ನಿರ್ದಯೆ, ಮುಂತಾದ ದುರ್ಗುಣಗಳು ಯಾರಲ್ಲಿರುವವೋ ಅವರು ಪವಿತ್ರವಾದೀಶೈವಮತಕ್ಕೆ ವಿರೋಧಿಗಳಾಗುತ್ತಾರೆ. ಸತ್ಯ, ಕ್ಷಮೆ, ಮುಂತಾದ ಸದ್ಗುಣಗಳು ಮಾನವಜನ್ಮಧಾರಿಗಳೆಲ್ಲರಿಗೂ ಅವಶ್ಯಕಗಳಾಗಿದ್ದರೂ, ಶಿವಲಿಂಗವನ್ನು ತಮ್ಮ ಶರೀರದಲ್ಲಿ ಎಡಬಿಡದೆ ಧರಿಸಿದ ಲಿಂಗಾಂಗಿಗಳಿಗಂತೂ ಅತ್ಯಾವಶ್ಯಕಗಳಾದ ಧರ್ಮಗಳಾಗಿವೆ. ಸುಳ್ಳನ್ನಾಡದಿರುವುದೇ ಸತ್ಯವು. ನಿಂದೆಯನ್ನು ಸಹಿಸಿಕೊಳ್ಳುವುದೇ ಕ್ಷಮೆಯು, ಪರರ ಮುಖವನ್ನು ಹೋಗಲಾಡಿಸಲಪೇಕ್ಷೆಯೇ ದಯೆಯು, ಅರುಚಿಪದಾರ್ಥಗಳ ಸಂಬಂಧವನ್ನು ಬಿಡುವುದೇ ಶೌಚವು. ತಾನು ಪ್ರಾರಂಭಿಸಿದ ಲಿಂಗಪೂಜಾದಿ ಶುಭಕಾರ್ಯವನ್ನು ಬಿಡದಿರುವುದೇ ನಿಯಮವು, ಮನೋವಾಕ್ಕಾಯಗಳಲ್ಲಿ ಕಾಠಿನ್ಯಸ್ವಭಾವವನ್ನು ಬಿಡುವುದೇ ಮಾರ್ದವವು, ಶಿವಲಿಂಗಪೂಜಾದಿಗಳಿಗೋಸುಗ ಹೆಸರು ಕೀರ್ತಿಗಳ ಆಶೆಯನ್ನು ಬಿಟ್ಟು ದೈವಗುರುಗಳ ಸೇವೆಮಾಡುವುದೇ ತಪಸ್ಸು, ಉತ್ತಮಪಾತ್ರವಲ್ಲಿ ದಾನಮಾಡುವುದೇ ತ್ಯಾಗವು, ಪರಸ್ತ್ರೀಸ್ವರ್ಣಾದಿಗಳೆಲ್ಲವೂ ಮಿಥ್ಯೆಯೆಂದು ತಿಳಿಯುವುದೇ ಬ್ರಹ್ಮಚರ್ಯವು, ಶಿವಸಿದ್ಧಿಯಿಂದ ಬಂದ ಸಂಪತ್ತಿನಲ್ಲಿಯೇ ಸಂತೋಷಗೊಳ್ಳುವುದೇ ಸಂತೃಪ್ತಿಯು, ವೃಥಾ ಕಾಲಕ್ಷೇಪ ಮಾಡದೆ ಪಕ್ಷವಾರ್ಗದಲ್ಲಿ ಪ್ರತಿದಿನವಿರುವುದೇ ಆರ್ಜವವು. ಈ ಧರ್ಮಗಳು ದೈವಸಂಬಂಧವಾದ ಧರ್ಮಗಳೆನಿಸುವವು. ಇವಕ್ಕೆ ವಿರುದ್ಧವಾದ ಅತ್ಯಾದಿ ಧರ್ಮಗಳು ಆಸುರೀಧರ್ಮಗಳೆನಿಸುವವು. ಆಸುರೀಧರ್ಮಗಳು ಯಾವ ಜೀವನಿಷ್ಠವಾದ ಸಂಬಂಧವನ್ನಾಶ್ರಯಿಸಿರುವವೋ ಆ ಜೀವವು ಕಲುಷಿತವಾಗುವುದಲ್ಲದೆ ಮುಂದೆ ನಾನಾ ವಿಧಗಳಾದ ಹೀನಜನ್ಮಗಳಲ್ಲಿ ಪ್ರವೇಶಿಸುವುದು. ಜೀವವು ಪಾದರೋ ಅಣುರೂಪವಾಗಿ ಬೆಂಡಿನಂತೆ ಭಾರವಲ್ಲದ ವಸ್ತುವಾದುದರಿಂದಲೂ, ಪರಮಾತ್ಮನ ಅಂಶಭೂತವಾದುದರಿಂದಲೂ ಪರಮಾತ್ಮಾಭಿಮುಖವಾಗಿ ಹೋಗುವ ಸ್ವಭಾವವುಳ್ಳದ್ದಾಗಿದ್ದರೂ ಅಧರ್ಮಪ್ರಭಾವದ ಸಂಬಂಧದಿಂದ ಊರ್ಧ್ವಗತಿಗೆ ಬದಲಾಗಿ ಅಧೋಗಮನವನ್ನು ಹೊಂದುತ್ತದೆ. ಸ್ವಭುತ್ವವನ್ನು ಮಾಡತಕ್ಕವನಿಗೆ ತನ್ನ ಪ್ರಭುತ್ವದ ಸ್ಥಿರತೆಗಾಗಿ ಅಮಾತ್ಯದುರ್ಗಾದಿ ಸಪ್ತಾಂಗಗಳು ಹೇಗೆ ಅವಶ್ಯಕಗಳಾಗಿವೆಯೋ ಹಾಗೆಯೇ ಶಿವಲಿಂಗಾರಾಧಕನಾದ ಶಿವಭಕ್ತನಿಗೆ ಸತ್ಯ ಕ್ಷಮಾದಿ ಏಕಾದಶಗುಣಗಳು ಅನಿವಾರ್ಯಕಗಳಾಗಿರುತ್ತವೆ. ಸಪ್ತಾಂಗಗಳಲ್ಲದ ಪ್ರಭುವು ರತ್ನರಾಜರಿಂದ ಆಕ್ರಮಿಸಲ್ಪಡುವಂತೆ ಈ ಸತ್ಯ ಕ್ಷಮಾದಿ ಸದ್ಗುಣಗಳಲ್ಲದ ಲಿಂಗಾರಾಧಕನಾದ ಭಕ್ತನು ಕಾಮಾದಿ ರತ್ರುಗಳಿಂದ ಅಪಹರಿಸಲ್ಪಡುವನು. ಸಪ್ತಾಂಗಗಳನ್ನಿಟ್ಟುಕೊಂಡು ರಾಜ್ಯಭಾರಮಾಡುವ ರಾಜನು ನಿರ್ವಿಘ್ನವಾಗಿ ತನ್ನ ಪ್ರಭುತ್ವವನ್ನು ನಿರ್ವಹಿಸಿ ಜಯಲಕ್ಷ್ಮಿಯನ್ನು ಪಡೆಯುವಂತೆ ಸತ್ಯಕ್ಷಮಾದಿಗಳೆಂಬ ಏಕಾದಶ ಧರ್ಮಗಳನ್ನು ಬಿಡದೆ ಶಿವಲಿಂಗವನ್ನು ಯಾವನು ಆರಾಧಿಸುವನೋ ಅವನೇ ಮೋಕ್ಷಲಕ್ಷ್ಮಿಯನ್ನು ಪಡೆಯುತ್ತಾನೆ. ಇಂತಹ ಮೋಕ್ಷಲಕ್ಷ್ಮಿಯನ್ನು ಪಡೆಯುವುದೇ ಮಾನವನ ಪರಮಪುರುಷಾರ್ಥವಾಗಿರುವುದರಿಂದ ಈಶ್ವರನಾಜ್ಞೆಯಿಂದ ಭೂಮಿಗವತರಿಸಿದ ಪ್ರತಿಯೊಬ್ಬ ಮತಾಚಾರ್ಯರೂ ಕೂಡ ಪ್ರಜೆಗಳನ್ನು ಉತ್ತಮಮಾರ್ಗದಲ್ಲಿ ತೆಗೆದುಕೊಂಡು ಹೋಗುವ ರಾಜನಂತೆ, ಶಿಷ್ಯರಿಗೆ ನಿಷಿದ್ಧಮಾರ್ಗದಿಂದಾಗುವ ದುಃಖವನ್ನೂ ವಿಹಿತಮಾರ್ಗದಿಂದಾಗುವ ಸುಖವನ್ನು ಬೋಧಿಸಿ ಹಿತಾಹಿತ ಮಾರ್ಗಗಳನ್ನು ಗ್ರಂಥ ಮೂಲಕ ತಿಳುಹಿಸಿರುತ್ತಾರೆ. ಅಸತ್ಯ, ಅಕ್ಷಮೆ, ನಿರ್ದಯೆ ಮುಂತಾದವುಗಳೇ ಅಹಿತಮಾರ್ಗಗಳು. ಸತ್ಯ, ಕ್ಷಮೆ, ದಯೆ ಮುಂತಾದವುಗಳೇ ಹಿತಮಾರ್ಗಗಳು. ಮಾನವನು ಹಿತಮಾರ್ಗವನ್ನು ಬಿಟ್ಟು ಕ್ರೂರವಾದ ಅಹಿತ ಮಾರ್ಗದಲ್ಲಿ ಪ್ರವೇಶ ಮಾಡಿದ್ದಾದರೆ ದಾರಿಯಲ್ಲಿ ಕ್ರೂರವಾದ ಕಾಮಕ್ರೋಧಾದಿಗಳೆಂಬ ಮಹಾಚೋರರ ಕೈಗೆ ಶಿಕ್ಕಿ ಸತ್ಯಹೀನನಾಗಿ ಸಂಕಟಪಡುತ್ತ ಅವಸಾನದಲ್ಲಿ ದುರ್ಗತಿಯನ್ನು ಹೊಂದಬೇಕಾಗುವದು. ಆದ್ದರಿಂದ ಬಾಲ್ಯಾದಾರಭ್ಯ ಪರಮಾತ್ಮ ಪ್ರೀತಿಸಾಧಕವಾದ ಸತ್ಯ, ಕ್ಷಮೆ, ದಯೆ ಮುಂತಾದ ಈ ಗುಣಗಳೇ ವ್ಯವಹಾರದಲ್ಲಿ ಬರುವಂತೆ ಅಭ್ಯಾಸಮಾಡುತ್ತ ಬಂದರೆ ಅವೇ ಗುಣಗಳೇ ಮುಂದಕ್ಕೂ ತಲೆದೋರುವುವಲ್ಲದೆ ವಿರುದ್ಧ ಗುಣಗಳು ತಲೆದೋರುವುದಿಲ್ಲವು. ಈ ಪರಿಶುದ್ಧ ಧರ್ಮಗಳಲ್ಲಿ ಯಾವನು ಯಾವಾಗಲೂ ವ್ಯವಹರಿಸುತ್ತಾನೆಯೋ ಅವನು ಲೋಕದಲ್ಲಿ ಮಾನ್ಯನಾಗುವುದಲ್ಲದೆ ಆತನ ಜನ್ಮವೂ ಕೃತಾರ್ಥವಾಗುವುದು. ಇಂತಹ ಆತ್ಮೋದ್ಧಾರಸಾಧಕಗಳಾದ ಧರ್ಮಗಳಲ್ಲಿ ಒಂದನ್ನೂ ಆರ್ಜಿಸದೆ ಯಾವಾಗಲೂ ಅಸತ್ಯ, ಅಕ್ಷಮೆ, ನಿರ್ದಯೆ ಮುಂತಾದ ದುರ್ಗುಣಗಳಲ್ಲಲ್ಲಿಯೇ ವ್ಯವಹರಿಸುತ್ತಿದ್ದರೆ ಇಹದಲ್ಲಿಯೂ ನಿಂದ್ಯನಾಗುವನಲ್ಲದೆ ಪರಕ್ಕೂ ಮೊರನಾಗುವನು. ಈ ಸದ್ಗುಣಗಳನ್ನು ಅಭ್ಯಾಸಮಾಡಿ ವ್ಯವಹರಿಸುತ್ತ ಬಂದಲ್ಲಿ ಇದಕ್ಕಿಂತಲೂ ಬೇರೆ ನೀತಿಗಳು ಜಗತ್ತಿನಲ್ಲಿಲ್ಲ. ಎಲ್ಲಾ ನೀತಿಗಳೂ ಈ ಧರ್ಮಗಳಲ್ಲಿಯೇ ಅಡಕವಾಗಿರುತ್ತವೆ. ಇಂತಹ ಪವಿತ್ರವಾದ ಸತ್ಯ, ಕ್ಷಮೆ ಮುಂತಾದ ಧರ್ಮಗಳು ಯಾರಲ್ಲಿ ಪೂರ್ಣವಾಗಿ ನೆಲೆಗೊಂಡಿರುವವೋ ಅವನೇ ಮಹಾತ್ಮನೆಂದೂ, ಭಗವತ್ಸ್ವರೂಪನೆಂದೂ ಹೇಳಲ್ಪಡುವರು. ಮೂಲಾಧಾರಗಳಾದ ಈ ಧರ್ಮಗಳನ್ನು ಸಂಗ್ರಹಿಸದೆ ಎಷ್ಟು ಭಗವಂತನಸೇವೆ ಮಾಡಿದರೂ, ಎಷ್ಟು ದಾನ-ಧರ್ಮಗಳನ್ನು ಮಾಡಿದರೂ, ಎಷ್ಟು ವೈಮನ್ಯವನ್ನು ಪಡೆದಿದ್ದರೂ ಅವೆಲ್ಲ ಹದಿಯಲ್ಲದೆ ನುನೆಯನ್ನು ಕಟ್ಟಿದಂತೆ ವ್ಯರ್ಥವಾಗುವವಲ್ಲದೆ ಫಲಕಾರಿಯಾಗುವುದಿಲ್ಲವು. ಇವುಗಳಲ್ಲಿ ಒಂದೆರಡು ಧರ್ಮಗಳನ್ನಾದರೂ ನಡೆಸು ಇವುಗಳ ಆಧಾರದಲ್ಲಿ ಚಿಲ್ಲರೆಚಿಲ್ಲರೆ ದಾನ-ಧರ್ಮಗಳನ್ನು ಮಾಡಲಿ, ಅಲ್ಪಸ್ವಲ್ಪ ವೈಮನಸ್ಯಗಳನ್ನು ಮಾಡಲಿ ಇವೆಲ್ಲವೂ ತಕ್ಕಷ್ಟು ಫಲವನ್ನು ಕೊಟ್ಟೇಕೊಡುವುವು. ಅದುದರಿಂದ ಆಸ್ತಿಕಸಂಘಾನುಯಾಯಿಗಳಾದ ಮಾನವರು ತಮ್ಮತಮ್ಮ ನಿತ್ಯಕರ್ಮಗಳ ಸಂಗಡ ಮೇಲೆ ಹೇಳಿದ ಸತ್ಯ, ಕ್ಷಮೆ, ದಯೆ, ತ್ಯಾಗ, ಬ್ರಹ್ಮಚರ್ಯಾದಿ ಧರ್ಮಗಳನ್ನು ಆರ್ಜಿಸಿ ನೀವರ ಕೃಪೆಗೆ ಪಾತ್ರರಾಗಿ ಧನ್ಯಜೀವಿಗಳಾಗಬೇಕೆಂದಾಶಿಸುತ್ತೇನೆ.

ಒಳದೇಶದ ವೃತ್ತಾಂತಗಳು.

ಕಳೆದ ೪೫ನೆಯ ತಾರೀಖು ಶುಕ್ರವಾರ ರಥಸಪ್ತಮಿ ದಿವಸಕ್ಕೆ ನಮ್ಮ ಶ್ರೀಮನ್ಮಹಾರಾಜರವರು ಪಟ್ಟಾಭಿಷಿಕ್ತರಾಗಿ 43 ವರ್ಷಗಳು ತುಂಬಿ 44 ನೆಯ ವರ್ಷವು ಪ್ರಾರಂಭವಾದುದರ ಜ್ಞಾಪಕಾರ್ಥವಾಗಿ ಆ ದಿವಸ 44 ತೋಪುಗಳು ಹಾರಿಸಲ್ಪಟ್ಟವು.

ಶ್ರೀಮನ್ಮಹಾರಾಜರವರು ಗೇರುಸೊಪ್ಪೆ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು ಕಟ್ಟಲಿರುವ ಕಟ್ಟಡದ ಕಾಮಗಾರಿಯ ಪ್ರಾರಂಭೋತ್ಸವವನ್ನು ಫೆಬ್ರವರಿ 5 ನೆಯ ತಾರೀಖಿನ ದಿವಸ ನೆರವೇರಿಸಿ ಅಸ್ತಿಭಾರಶಿಲೆಯನ್ನು ಸ್ಥಾಪಿಸುವರೆಂದು ಪ್ರಕಟವಾಗಿದೆ.

ಕೃಷ್ಣರಾಜಸಾಗರ ನಾರ್ತ್ ಬ್ಯಾಂಕ್ ಕನ್ನಂಬಾಡಿ ಶ್ರೀ ಕಣ್ವೇಶ್ವರಸ್ವಾಮಿಯ ಮತ್ತು ಶ್ರೀ ವೇಣುಗೋಪಾಲಸ್ವಾಮಿಯ ರಥೋತ್ಸವವು ಫೆಬ್ರವರಿ ತಾ|| 4-5-6 ರಲ್ಲಿ ವಿಶೇಷ ವೈಭವದಿಂದ ನೆರವೇರುವದೆಂದೂ, ಈ ಸಂದರ್ಭದಲ್ಲಿ ವನಸಗಳ ಪರಿಷೆಯು ಸೇರಿ ಉತ್ತಮರಾಸುಗಳಿಗೆ ಬಹುಮಾನವು ಕೊಡಲ್ಪಡುವದೆಂದೂ, ಭಕ್ತಾದಿಗಳು ಎಂದಿನಂತೆ ಈ ಯಾತ್ರೆಗೆ ಆಗಮಿಸಿ ಶ್ರೀ ಸಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ವ್ಯವಸ್ಥಾಪಕರು ಕೋರುತ್ತಾರೆ.

ಮೈಸೂರು ಹೈಕೋರ್ಟು ಚೀಫ್ ಜಡ್ಜರಾದ ಸರ್ ಡಾರ್ಸಿ ವೈಲಿಯವರು ಬೆಂಗಳೂರು ಯಶವಂತಪುರದ ರಸ್ತೆಯಲ್ಲಿ ಸಾಯಂಕಾಲದ ವೇಳೆಯಲ್ಲಿ ಮೋಟಿನಲ್ಲಿ ಬರುತ್ತಿದ್ದಾಗ ಯಾರೋ ದುಷ್ಟರು ಅವರ ಮೋಟಾರಿಗೆ ಕಲ್ಲು ಹೊಡೆದರು. ಇದರಿಂದ ಒಡೆದ ಮೋಟಾರಿನ ಗಾಜಿನ ಚೂರು ಜಡ್ಜರ ಮುಖಕ್ಕೆ ತಗಲಿ ಸ್ವಲ್ಪ ಗಾಯವಾಯಿತೆಂದು ಪ್ರಕಟವಾಗಿದೆ. ಸ್ವಲ್ಪ ಕತ್ತಲಾಗಿದ್ದರಿಂದ ಯಾರು ಹೊಡೆದರೆಂಬುದು ತಿಳಿಯಲಿಲ್ಲ.

ಮೈಸೂರು ರೇಸ್‌ಕೋರ್ಸ್‌ನಲ್ಲಿ ಮೋಸಮಾಡಿ ಹಣ ಪಡೆಯಲು ಪ್ರಯತ್ನಿಸಿದರೆಂದು ನಡೆದ ಮೊಕದ್ದಮೆಯಲ್ಲಿ ಎರಡನೇ ಆಪಾದಿತರಾಗಿದ್ದ ಮ|| ಎ. ಎಸ್. ಕೃಷ್ಣಯ್ಯರ್‌ರವರು ಬಿಡುಗಡೆಯಾಗಿದ್ದಾರು. ಸರ್ಕಾರದವರು ಈ ತೀರ್ಮಾನದ ಮೇಲೆ ಹೈಕೋರ್ಟಿಗೆ ಅಪೀಲುಮಾಡಿಕೊಂಡಿರುತ್ತಾರೆ. ಹೈಕೋರ್ಟಿನವರು ಈ ಅಪೀಲನ್ನು ಹಿಡಿದು ಅದು ತೀರ್ಮಾನವಾಗುವವರೆಗೂ ಮ|| ಕೃಷ್ಣಯ್ಯರ್‌ರವರನ್ನು ದಸ್ತಗಿರಿಮಾಡತಕ್ಕದ್ದೆಂದು ಅಪ್ಪಣೆ ಮಾಡಿರುವರಂತೆ!

ರಾಜಧಾನಿಯಲ್ಲಿ ಚಳುವಳಿ ಸೂಚನೆಗಳು ತಿರುಗಿ ಕಾಣಬಂದಿದ್ದರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರು, ರಂಗಾಚಾರ್ಲು ಭವನದ ಆವರಣ, ಕರ್ಜನ್‌ಪಾರ್ಕ್, ನಿಷಾದ್ ಬಾಗ್, ಅರಮನೆ ಹೊರಗಿನ ಮೈದಾನ, ದೊಡ್ಡಕೆರೆ ಅಂಗಳ ಈ ಸ್ಥಳಗಳಲ್ಲಿ ಸಾರ್ವಜನಿಕ ಸಭೆಯು ನಡೆಯದಂತೆ ಆಜ್ಞಾಪಿಸಿ ಸೆ. 144 ನೇ ಬಾಣಪ್ರಯೋಗಮಾಡಿರುತ್ತಾರೆ. ಈ ಆಜ್ಞೆಯನ್ನು ಶ್ರೀಗಳಾದ ಎಚ್. ಸಿ. ದಾಸಪ್ಪ, ರಂಗರಾಮಯ್ಯ, ಮರಿಯಪ್ಪ, ಗೋಪಾಲಕೃಷ್ಣರಟ್ಟಿ, ಎಂ ಶಂಕರಯ್ಯ ಮತ್ತು ಟಿ. ಎಸ್. ರಾಜಗೋಪಾಲಯ್ಯಂಗಾರ್ ಇವರುಗಳಮೇಲೆ ಜಾರಿಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಲಕ್ಷ್ಮೀನಿವಾಸ

೧ ಮೆರಿಕದ ಸ್ಪೋರ್ಟ್‌ನಾಕ್ಸ್ ಎಂಬಲ್ಲಿ ಒಂದು ಗುಹೆ ಇದೆ. ಇದಕ್ಕೆ ಕಬ್ಬಿಣದ ಮತ್ತು ಉಕ್ಕಿನಕೋಟೆ ಕೊತ್ತಲಗಳನ್ನು ಕಟ್ಟಿ ಭದ್ರಪಡಿಸಿದ್ದಾರೆ. ಇದು 10 ಸಾವಿರ ಚಪರಡಿ ಆಗಲವಾಗಿದೆ ಇದರಲ್ಲಿರುವ ಒಂದು ಜವಾಹರಿ ಪೆಟ್ಟಿಗೆಯಲ್ಲಿ 9 ಲಕ್ಷ ಕೋಟೆ (9 ಮಹಾಪದ್ಮ) ಡಾಲರು ಗಳಷ್ಟು ಬೆಲೆಬಾಳುವ ಚಿನ್ನವಿದೆಯಂತೆ!

ಕಣ್ಣಿನ ರೋಗಕ್ಕೆ ವೈರ್‌ಲೆಸ್ ಕಿರಣ

ಕಣ್ಣಿನಲ್ಲುಂಟಾಗುವ ಬಾಧೆಗಳಿಗೆ ಇನ್ನುಮೇಲೆ ವೈರ್‌ಲೆಸ್ ಕಿರಣಗಳ ಚಿಕಿತ್ಸೆ ನಡೆಸಬಹುದಂತೆ! ಲಂಡನ್ನಿನ ರಾಯಲ್ ಆಪ್ತಾಲ್‌ಮಿಕ್ ಆಸ್ಪತ್ರೆಯಲ್ಲಿ ಈಗ ಈ ತೆರನಾದ ಚಿಕಿತ್ಸೆ ನಡೆಸಲ್ಪಡುತ್ತಿದೆ. ವೈರ್‌ಲೆಸ್ಸಿನ ಸಣ್ಣ ಅಲೆಗಳು ಕಣ್ಣಿನ ಒಳಭಾಗಕ್ಕೆ ಪ್ರವೇಶಿಸಿ ಬಾಧೆಯನ್ನು ನಿವಾರಿಸುವವಂತೆ!

ರಾಜಕೋಟೆಯಲ್ಲಿ ಮತ್ತೆ ಸತ್ಯಾಗ್ರಹಾರಂಭ!

ರಾಜಕೋಟೆಯಲ್ಲಿ ಕೆಲವು ದಿವಸಗಳ ಕಾಲ ನೆಲಸಿದ್ದ ಶಾಂತ ಪರಿಸ್ಥಿತಿಯು ಈಗ ಬದಲಾಯಿಸಿ ಅಶಾಂತಿಯು ತಲೆಹಾಕಿದೆ. ಪ್ರಜಾಪರಿಷತ್ತಿಗೆ ಸಂಸ್ಥಾನದ ಪ್ರಜೆಗಳಾದೂ ಹಣ ಕಾಸಿನ ಅಥವಾ ಮತ್ತಾವ ವಿಧವಾದ ಸಹಾಯವನ್ನೂ ಮಾಡಲಾಗದೆಂದು ಆಜ್ಞೆ ಮಾಡಲಾಗಿದೆ. ಕೆಲಜನ ಪ್ರಮುಖರನ್ನು ದಸ್ತಗಿರಿಮಾಡಿದ್ದಾರೆ.

ಬೆಂಕಿ ಅನಾಹುತ

ಪ್ಯಾರಿಸ್ಸಿನ ಸುಂದರ ಭವನವಾದ ಮಾಂಟೆಮಾಟ್ರ ಎಂಬ ರಾತ್ರಿ ಕ್ಲಬ್ಬಿಗೆ ವಿದ್ಯುಚ್ಛಕ್ತಿ ವ್ಯವಸ್ಥೆಯು ಕೆಟ್ಟಿದ್ದರಿಂದ ಬೆಂಕಿ ಹತ್ತಿ ಇಬ್ಬರು ವೈತರಾದರು. ಇಬ್ಬರಿಗೆ ವಿಶೇಷ ಗಾಯಗಳಾಗಿವೆ. ಬೆಂಕಿ ಹತ್ತಿದಾಗ ಅಲ್ಲಿ ನೃತ್ಯವು ನಡೆಯುತ್ತಿತ್ತು. ಹತ್ತಿದ ಬೆಂಕಿಯನ್ನು ಮೊದಲಿಗೆ ಬಾಣಬಿರುಸುಗಳಿರಬಹುದೆಂದು ಅಲ್ಲಿನ ಅನೇಕರು ಭ್ರಮಿಸಿದರಂತೆ.

ಭಾರತೀಯ ಯುವಕನು ಆಕಾಶವಾರ್ತಾ ಯಂತ್ರವನ್ನು ರಚಿಸಿರುವನು

ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾದ ನರೇಂದ್ರಕುಮಾರ್ ಸಾಕ್ಸೇನಾ ಎಂಬ 19 ವರುಷ ವಯಸ್ಸಿನ ಯುವಕನು ಕೇವಲ 50 ರೂಪಾಯಿಗಳ ವೆಚ್ಚದಲ್ಲಿ ಒಂದು ರೇಡಿಯೋ ಯಂತ್ರವನ್ನು ತಯಾರಿಸಿರುವನಂತೆ! ಇಂಡಿಯಾದ ಮತ್ತು ಹೊರ ದೇಶಗಳ ಸುದ್ದಿಗಳನ್ನು ಇದರಲ್ಲಿ ಲಲಿತವಾಗಿ ಕೇಳಬಹುದೆಂದು ತಿಳಿದುಬರುತ್ತದೆ.

ಕೋಳಿಯು ಯಜಮಾನನ್ನು ಕೊಂದಿತು.

ಲೈಮಾ ಎಂಬಲ್ಲಿ ಲಾಯಿಕ್ಸಿಟೇನಿಲಾ ಎಂಬಾತನು ಕಾಳಗದ ಹುಂಜವೊಂದನ್ನು ಸಾಕಿದ್ದನು. ಜಗಳದಲ್ಲಿ ತನ್ನ ಕೋಳಿಯೇ ಗೆಲ್ಲಬೇಕೆಂದು ಅದನ್ನು ಚನ್ನಾಗಿ ಸಾಕಿದ್ದನು. ಕೋಳಿಯು ಮತ್ತಷ್ಟು ಕೋಪದಿಂದ ಹೊಡೆದಾಡಬೇಕೆಂಬುದಕ್ಕಾಗಿ ಅದರ ರೆಕ್ಕೆಗಳ ಗರಿಗಳನ್ನು ಕಿತ್ತನು. ಇದರಿಂದ ಕೋಪಗೊಂಡ ಹುಂಜವು ಅವನ ಕೈಯಿಂದ ತಪ್ಪಿಸಿಕೊಂಡು ಅವನಮೇಲೆ ಹಾರಿ ತನ್ನ ಮೊನೆಚಾದ ಉಗುರುಗಳಿಂದ ಅವನ ಎದೆಗೆ ಹೊಡೆದು ಅವನನ್ನು ಕೊಂದುಹಾಕಿತು.

ಮರದಿಂದ ಬಟ್ಟೆಯ ತಯಾರಿ

ಮರದ ಬೆಂಡನ್ನು ಕಾಗದ ತಯಾರಿಸುವದಕ್ಕೆ ಉಪಯೋಗಿಸುವದು ಎಲ್ಲರಿಗೂ ತಿಳಿದ ವಿಷಯ. ಈಗ ಮರದ ಬೆಂಡು ಸೇಕಡಾ 80 ಭಾಗ, ಸೇಕಡಾ 20 ರಷ್ಟು ಹತ್ತಿ ಇವುಗಳನ್ನು ಬೆರಸಿ ಉತ್ತಮ ತರಹೆ ಬಟ್ಟೆಗಳನ್ನು ತಯಾರಿಸಬಹುದೆಂದು ಕಂಡು ಹಿಡಿದಿದ್ದಾರೆ. ಜಪಾನಿನಲ್ಲಿ ಈ ಮಾದರಿಯ ಬಟ್ಟೆಗಳ ಉಪಯೋಗವು ಹಲವು ಕಾಲದಿಂದ ನಡೆದುಬರುತ್ತಿದೆಯೆಂದೂ ಸೈನಿಕರ ಉಡುಪುಗಳನ್ನು ಜಪಾನಿಯರು ಈ ತೆರದ ಬಟ್ಟೆಯಿಂದಲೇ ತಯಾರಿಸುತ್ತಿರುವರೆಂದೂ ತಿಳಿದುಬರುತ್ತದೆ.

ಕೋಟ್ಯಂತರವರ್ಷಗಳ ಹಿಂದಿನ ವಸ್ತುಗಳು.

ಭೂಗರ್ಭದಲ್ಲಿ ಕೋಟ್ಯಂತರವರ್ಷಗಳವರೆಗೂ ಪದಾರ್ಥಗಳು ಕೆಡದೆ ನಿಲ್ಲಬಹುದೆಂಬುದು ಈಗ ತಿಳಿದು ಬಂದಿದೆ. ಜರ್ಮನಿಯಲ್ಲಿ ಭೂಮಿಯನ್ನು ಅಗೆದಾಗ ಕೋಟ್ಯಂತರ ವರ್ಷಗಳ ಹಿಂದಿನ ವನಸ್ಪತಿಗಳ ಮತ್ತು ಪ್ರಾಣಿಗಳ ಅವಶಿಷ್ಟವು ಇಂದಿಗೂ ಕೆಡದೆ ಉಳಿದಿರುವುದು ಕಂಡುಬಂದಿತು. ಆ ಪ್ರದೇಶದಲ್ಲಿ ಇದ್ದ ಹೊಂಡಕ್ಕೆ ಪ್ರಾಣಿಗಳು ಬಿದ್ದಾಗ ಅಲ್ಲಿನ ರಸಾಯನವಸ್ತುಗಳು ಅವುಗಳನ್ನು ಇದುವರೆಗೂ ಹಾಳಾಗದಂತೆ ಉಳಿಸಿದವೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಪಾಶ್ಚಾತ್ಯವಿವಾಹದ ದುಃಸ್ಥಿತಿ!

ಅಮೆರಿಕೆಯ ಒಬ್ಬ ಹೆಂಗಸು ತನ್ನ ವಿವಾಹದ ಉಂಗುರವನ್ನು ಮಾರಿ, ಆ ಹಣದಿಂದ ರಿವಾಲ್ವರನ್ನು ಕೊಂಡು ತನ್ನ ಗಂಡನನ್ನು ಗುಂಡಿಟ್ಟು ಕೊಂದಳಂತೆ. ಇನ್ನೊಂದು ಸಂದರ್ಭದಲ್ಲಿ ಹೆಂಡತಿಯು ನಿದ್ರೆಬರುವ ಔಷಧವನ್ನು ಹೆಚ್ಚಾಗಿ ಸೇವಿಸಿ ನಿದ್ರಿಹೋಗುತ್ತಿದ್ದ ಕಾರಣಕ್ಕಾಗಿ ಅವಳ ಪತಿಯು ವಿವಾಹವಿಚ್ಛೇದನಕ್ಕೆ ದಾವಾಹಾಕಿದನು. ಜಡ್ಡುರು ಹೆಂಡತಿಯಾದವಳು ಮಾಡಬೇಕಾದ ಕರ್ತವ್ಯವನ್ನು ಮಾಡುತ್ತಿಲ್ಲವೆಂದು ವಿಚ್ಛೇದನಕ್ಕೆ ಅರ್ಜಿಕೊಟ್ಟಿರಂತೆ.

ಭಯಂಕರ ಭೂಕಂಪ

ಚಿಲ್ಲಾ ನಗರ ಮತ್ತು ಅದರ ಸುತ್ತುಮುತ್ತು ಪ್ರದೇಶದಲ್ಲಿ ಭಯಂಕರ ಭೂಕಂಪವಾಗಿ ಸುಮಾರು 30000 ಜನರು ಮರಣ ಹೊಂದಿರುವರೆಂದೂ, ಪಟ್ಟಣವೆಲ್ಲವೂ ಸಂಪೂರ್ಣ ನಾಶವಾಗಿರುವದೆಂದೂ ಚಿಲ್ಲಾ ನಗರದ ಮೇಲೆ ಹಾರಾಡಿದ ವೈಮಾನಿಕರು ತಿಳುಹಿಸಿರುತ್ತಾರೆ. ಚಿಲ್ಲಾನಿನ ಜನಸಂಖ್ಯೆ 40 ಸಾವಿರ ಆದರಲ್ಲಿ ಸಾವಿರಾರು ಜನರು ಗಾಯಗೊಂಡಿರುವರೆಂದು ಭಾವಿಸಲಾಗಿದೆ. ಅನಾಹುತದ ವಿವರಗಳನ್ನು ಅರಿಯಲು ಚಿಲಿಯ ಸರ್ಕಾರದವರು ವಿಮಾನಗಳನ್ನು ಕಳುಹಿಸಿರುವರು.

ಜರ್ಮನಿಯಲ್ಲಿ ರಾಜದ್ವೇಷ

ಈ ತಿಂಗಳು 27 ನೆಯ ತಾರೀಖಿಗೆ ಜರ್ಮನಿಯ ಮಾಜಿ ಚಕ್ರವರ್ತಿಗಳಾದ ಕೈಸರ್‌ರವರಿಗೆ 80 ವರ್ಷ ವಯಸ್ಸಾಗಿರುತ್ತು. ಆ ಕಾಲಕ್ಕೆ ನಡೆದ ವರ್ಧಂತಿ ಸಮಾರಂಭಗಳಲ್ಲಿ ಜರ್ಮನಿಯ ಸೈನ್ಯಾಧಿಕಾರಿಗಳಾರೂ ಕೈಸರರ ಆರೋಗ್ಯವನ್ನು ಬಯಸಿ ಪಾನಮಾಡಕೂಡದೆಂದೂ ಅಂಥ ಔತಣಕೂಟದಲ್ಲಿ ಇತರರಾರಾದರೂ ಆ ರೀತಿ ಪಾನಮಾಡುವುದನ್ನು ಕಂಡರೆ ಅಲ್ಲಿದ್ದ ಸೈನ್ಯಾಧಿಕಾರಿಗಳು ಆ ಸಮಾರಂಭವನ್ನೇ ಬಿಟ್ಟು ಹೊರಟುಹೋಗಬೇಕೆಂದೂ ಸರ್ಕಾರದವರು ಅಪ್ಪಣೆಮಾಡಿದ್ದರಂತೆ.

ಬ್ರಿಟಿಷರಿಗೆ ಸೇರಿರುವ ಅಮೇರಿಕೆದ ಕೆನಡಾ ಪ್ರಾಂತ್ಯವನ್ನು ಕೆನಡಾ ರಾಜ್ಯವೆಂದು ಕರೆಯಬೇಕು

ಇನ್ನು ಮುಂದೆ ಉತ್ತರಅಮೆರಿಕದ ಕೆನಡಾ ಪ್ರಾಂತ್ಯವನ್ನು "ಡೊಮಿನಿಯನ್" ಎಂದು ಕರೆಯದೆ "ಕೆನಡಾರಾಜ್ಯ" ಎಂದು ಕರೆಯಬೇಕೆಂದೂ, ಅಲ್ಲಿನಗೌರ್ನರ್ ಜನರಲ್ ಎಂಬ ಹೆಸರನ್ನು ವೈಸರಾಯ್ ಎಂದು ಬದಲಾಯಿಸಬೇಕೆಂದೂ, ಕೆನಡಾದಲ್ಲಿ ಹುಟ್ಟಿದನರನ್ನೇ ಈ ವೈಸರಾಯ್ ಪದವಿಗೆ ನೇಮಕಮಾಡಬೇಕೆಂದೂ ಕೆನಡಾ ರಾಜ್ಯಕ್ಕೆ ರಾಜಮುದ್ರೆಯನ್ನು ಕೊಡಲು ತಕ್ಕ ಶಾಸನವಾಗಬೇಕೆಂದೂ, ಇದು 'ಮಹಾ ಪ್ರಭಾನರ ಸಭೆಯಲ್ಲಿರ ಬೇಕೆಂದೂ ಸೂಚಿಸುವ ನಿರ್ಣಯವನ್ನು ಕಾಮನ್ಸ್ ಸಭೆಯ ಮುಂದೆ ತರಲಾಗಿದೆ.

ಚೀನಾ ಜಪಾ ಸಂಗ್ರಾಮ

ಪೂರ್ವತೀರದಲ್ಲಿ ಜಪಾನಿಯರು ಒಂದೇ ಸಮನೆ ಚೀನದ ರಕ್ತಹೀರುತ್ತಿರುವರು. ಚೀನಾ ಜಪಾ ಯುದ್ಧ ವಾರಂಭವಾದಲಾಗಾಯಿತು ಜಪಾ ಚಕ್ರಾಧಿಪತ್ಯದ ವಿಸ್ತರಣೆಯ ಸ್ಥಳವನ್ನು ಜಪಾನು ಚೀನದಲ್ಲಿ ಆಕ್ರಮಿಸಿಕೊಂಡಿದೆಯೆಂದು ಹೇಳಬಹುದು. ಜಪಾನಿನ ಸಂಗ್ರಾಮ ಸಚಿವರ ಹೇಳಿಕೆಯಂತೆ ಚೀನದಕಡೆ 830000 ಜನರೂ ಜಪಾನಿನಕಡೆ 51000 ಜನರೂ ನುಡಿದಿರುವರೆಂದು ಹೇಳಲಾಗಿದೆ. ಇನ್ನುಮುಂದಂತೂ ಈ ಯುದ್ಧವು ಇನ್ನೂ ಜೋರಾಗುವ ಸಂಭವವೇ ಕಾಣುತ್ತಿದೆ. ಚೀನಾಕ್ಕೆ ರಂಗೂಮೂಲಕ ಪ್ರತಿದಿನವೂ ಯುದ್ಧಸಾಮಗ್ರಿಗಳು ಸಾಗಿಸಲ್ಪಡುತ್ತಿರುವದಾಗಿ ತಿಳಿದುಬರುತ್ತದೆ.

ವಿಮಾನ ಅನಾಹುತ

ಇದೇ ಜನವರಿ 10 ನೆಯ ತಾರೀಖಿನದಿವಸ ಕರಾಚಿಯಿಂದ ಹೊರಟ ಟಪಾಲು ವಿಮಾನವು ತಾರೀಖು 11ರಲ್ಲಿ ರೇಣುಗುಂಟ ಎಂಬಲ್ಲಿ ಒಂದು ಬೆಟ್ಟಕ್ಕೆ ಡಿಕ್ಕಿ ಬಡಿಯ ವಿಮಾನ ಚಾಲಕನು ಕೂಡಲೆ ಮೃತನಾದನು. ಬಹಳ ಮಂಜು ಸುರಿಯುತ್ತಿದ್ದುದರಿಂದ ಮುಂದುಕಾಣದೆ ಈ ಅನಿಷ್ಟವು ಸಂಭವಿಸಿತು. ವಿಮಾನದಲ್ಲಿ ವಿದೇಶಗಳಿಂದ ಬಂದ 700 ಪೌಂಡು ತೂಕದ ಕಾಗದಪತ್ರಗಳಿದ್ದುವು. ಬೆಂಕಿಯು ಹತ್ತಿ ಮುಕ್ಕಾಲುಪಾಲು ಕಾಗದಗಳೆಲ್ಲಾ ಭಸ್ಮವಾದವು. ಅವುಗಳಲ್ಲಿ ಉಳಸಲ್ಪಟ್ಟ 37 ಪೌಂಡು ತೂಕದ ಕಾಗದಗಳನ್ನು ವಿಳಾಸದಾರರಿಗೆ ತಲಪಿಸುವ ಪ್ರಯತ್ನ ಮಾಡಿದ್ದಾರೆ.

ವಿಚಿತ್ರಸರೋವರ

ದಕ್ಷಿಣಅಮೆರಿಕದ ಅಂಡೀಸ್ ಪರ್ವತದ ದಕ್ಷಿಣವಲ್ಲಿರುವ ಚಿಲಿಪ್ರದೇಶದಲ್ಲಿ 50 ಚದುರಮೈಲಿ ಅಗಲವಿರುವ ಸಿನೋರೆಟೆ ಎಂಬ ಒಂದು ಸರೋವರವಿದೆ. ಆದರೆ ಈ ಧಾರಿ ಸರೋವರದಲ್ಲಿ ಈಗ ತುಂಬ ನೀರಿದ್ದರೆ ಇನ್ನೊಂದುಕ್ಷಣಕ್ಕೆ ನೀರೆಲ್ಲಾ ಒಣಗಿಹೋಗುತ್ತದೆ. ಇದರಿಂದ ಅಲ್ಲಿಯವರಿಗೆ ಭಯ-ವಿಸ್ಮಯಗಳುಂಟಾಗಿವೆ. ಇದರಿಂದ ಕೆಡಕೇನಾದರೂ ಆಗಲಿದೆಯೋ, ಭೂಕಂಪವೇನಾದರೂ ಸಂಭವಿಸುವುದೋ ಎಂದು ಸಂಶಯಪಡುತ್ತಿದ್ದಾರೆ. ಹತ್ತಿರದಲ್ಲಿರುವ ಅಗ್ನಿಪರ್ವತವು ಅಗಾಗ್ಗೆ ಬೆಂಕಿಯನ್ನು ಕಾರುವುದರಿಂದ ಭೂಮಿಯೊಳಗಿನ ಜಲಭಾಗವು ಕಡಿಮೆಯಾಗುವದರಿಂದ ಸರೋವರದ ನೀರೆಲ್ಲ ಭೂಮಿಯೊಳಕ್ಕೆ ಇಂಗಿಹೋಗುವುದೆಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಅಖಿಲ ಹಿಂದೂಸ್ಥಾನದ ದನಗಳ ಪ್ರದರ್ಶನ

ಈ ವರ್ಷ ಅಖಿಲ ಹಿಂದೂಸ್ಥಾನದ ಗೋವುಗಳ ಪ್ರದರ್ಶನವು ನಮ್ಮ ವೈಸರಾಯರವರ ಕೃಪಾಶ್ರಯದಲ್ಲಿ ದೆಹಲಿಯಲ್ಲಿ ಇರ್ವಿನ್ ಸಭಾಂಗಣದಲ್ಲಿ ಬರುವ ಫೆಬ್ರುವರಿ 13 ನೆಯ ತಾರೀಖಿನಿಂದ 18 ನೆಯ ತಾರೀಖಿನವರೆಗೆ ನಡೆಯಲಿದೆ. ಈ ಪ್ರದರ್ಶನಕ್ಕಾಗಿ ಎಲ್ಲ ಸಿದ್ಧತೆಗಳೂ ನಡೆಯುತ್ತಿವೆ. ಸುಮಾರು 700 ಗೋವುಗಳಿಗಿಂತ ಹೆಚ್ಚು ಪ್ರದರ್ಶನಕ್ಕೆ ಬರುವ ನಿರೀಕ್ಷಣೆ ಇದೆ. ಪ್ರದರ್ಶನಕ್ಕೆ ಸೇರಿಸಲ್ಪಟ್ಟ ಪ್ರತಿಯೊಂದು ಪ್ರಾಣಿಗೂ ಕಂಚಿನ ಪದಕವೊಂದು ಕೊಡಲ್ಪಡುವುದು. ಇದಲ್ಲದೆ ನಗದು ಬಹುಮಾನಗಳನ್ನೂ, ಬೆಳ್ಳಿಯಬಟ್ಟಲುಗಳನ್ನೂ ಕೊಡುವರು. ಸುಮಾರು 16 ಸಾವಿರ ರೂಪಾಯಿಗಳ ನಗದು ಬಹುಮಾನಗಳನ್ನು ಹಂಚಿಲಿರುವರು. ಈ ಪ್ರದರ್ಶನಕ್ಕೆ ತೆಗೆದುಕೊಂಡುಹೋಗುವ ಪ್ರಾಣಿಗಳಿಗೆ ರೈಲ್ವೆ ಇಲಾಖೆಯವರು ರಿಯಾಯತಿ ದರಗಳನ್ನು ಕೊಡುವರು.

ಪ್ರಯಾಣಿಕರ ಸ್ವಾತಂತ್ರ್ಯ

ಲಕ್ನೋ ಎಕ್ಸ್‌ಪ್ರೆಸ್ ರೈಲ್ವೆ ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಮಿ! ಎಸ್. ಕೆ. ಆರ್. ಆಚಾರ್ಯ ಎಂಬಾತನು ಅಪಾಯ ಸಮಯದಲ್ಲಿ ರೈಲನ್ನು ನಿಲ್ಲಿಸಬೇಕಾದಲ್ಲಿ ಎಳೆಯಲು ಇಟ್ಟಿರುವ ಸರಪಣಿಯನ್ನು ಅನಾವಶ್ಯಕವಾಗಿ ಎರಡುಸಾರಿ ಎಳೆದು ರೈಲನ್ನು 2 ಘಂಟೆಗಳಕಾಲ ತಡೆದು ನಿಲ್ಲಿಸಿದನೆಂದು ರೈಲ್ವೆಇಲಾಖೆಯವರು ಅತನಮೇಲೆ ಮೊಕದ್ದಮೆ ಮಾಡಿದ್ದರು. ಅಪಾದಿತರು ತಾವು ನಿರಪರಾಧಿಗಳೆಂದೂ ರೈಲ್ವೆ ಬಂಡಿಯಲ್ಲಿ ಜಾಗವಿದ್ದುದಕ್ಕಿಂತಲೂ ಹೆಚ್ಚುಮಂದಿ ಪ್ರಯಾಣಕರು ಸೇರಿದ್ದರಿಂದ ಆ ವಿಷಯವನ್ನು ಅಧಿಕಾರಿಗಳಿಗೆ ತಿಳುಹಿಸಿ ಪ್ರಯಾಣಿಕರಿಗೆ ಅನುಕೂಲಮಾಡಿಕೊಡಲು ತಾವು ಸರಪಣಿ ಎಳೆದುದು ನ್ಯಾಯಬದ್ಧವಾಗಿದೆ ಎಂದೂ ವಾದಿಸಿದರು. ಈ ಮೊಕದ್ದಮೆಯ ವಿಚಾರಣೆ ನಡೆಸಿದ್ದ ರುಾಸಿಯೆ ರೈಲ್ವೆ ಮ್ಯಾಜಿಸ್ಟ್ರೇಟರು, ಯಾವ ಯಾವ ಬಂಡಿಯಲ್ಲಿ ಎಷ್ಟೆಷ್ಟು ಮಂದಿ ಕುಳಿತುಕೊಳ್ಳಬೇಕೆಂಬುದನ್ನು ರೈಲ್ವೆ ಇಲಾಖೆಯವರು ನಿಬಂಧನೆ ಮಾಡಬೇಕಾದುದ ಅವರ ಕರ್ತವ್ಯ. ಅವರು ಹಾಗೆ ಗೊತ್ತುಮಾಡದಿದ್ದಲ್ಲಿ ಜುಲ್ಮಾನೆಗೆ ಗುರಿಯಾಗುವರು. ಹೀಗೆಂದು ರೈಲ್ವೆ ನಿಬಂಧನೆಯಿದೆ. ಈ ನಿಬಂಧನೆಯ ದೆಸೆಯಿಂದ ನಿಯಮಿತ ಸಂಖ್ಯೆಗಿಂತಲೂ ಹೆಚ್ಚು ಪ್ರಯಾಣಿಕರು ಬಂದು ಬಂಡಿಯಲ್ಲಿದ್ದವಲ್ಲಿ ಆ ಪೈಕಿ ಒಬ್ಬರು ಸರಪಣಿಯನ್ನೆಳೆದು ಅಧಿಕಾರಿಗಳನ್ನು ಕಾನೂನು ಅನುಸರಿಸಿ ನರ್ತಿಸುವಂತೆ ಬಲಾತ್ಕಾರಪಡಿಸಲು ಅಧಿಕಾರವಿದೆವರಾಗಿರುತ್ತಾರೆ. ಇಂಥ ಸಂದರ್ಭದಲ್ಲಿ ಸಮಾಚಾರ ತಿಳುಹಿಸುವ ಸರಪಣಿಯನ್ನು ಎಳೆಯುವದು ಅಪರಾಧವಲ್ಲವೆಂದು ತೀರ್ಮಾನ ಹೇಳಿ ಅಪಾದಿತರನ್ನು ಬಿಡುಗಡೆಮಾಡಿದರು.

ಸ್ವೀಕಾರ.

ಬೆಂಗಳೂರುನಗರನಿವಾಸಿಗಳಾದ ವೇ!! ಎ. ರುದ್ರಯ್ಯನವರು ಮೈಸೂರು ಡಿ!! ಬನ್ನೂರಿನಲ್ಲಿ ಶ್ರೀ ನೀಲಕಂಠೇಶ್ವರ ರೈಸ್‌ಮಿಲ್ ಮತ್ತು ಇಂಡಸ್ಟ್ರಿಯಲ್‌ವರ್ಕ್ಸ್ ಗಳನ್ನು ಪ್ರಾರಂಭಿಸಿದ ಶುಭಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಮಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ತಪ್ಪು ತಿದ್ದುಪಡೆ.

೧೬ ನೆಯ ತಾರೀಖಿನ ನಮ್ಮ ಪತ್ರಿಕೆಯ ಸ್ವೀಕಾರದಲ್ಲಿ ಮಿ!! ರಾಜಿ "ರುದ್ರಪ್ಪ ಮಲ್ಲಪ್ಪ ಧನಶೆಟ್ಟಿ: ಸೊಲ್ಲಾಪುರ" ಎಂದು ಮುದ್ರಿತವಾಗಿದೆ. ಅದನ್ನು "ರುದ್ರಪ್ಪ ಕಲ್ಲಪ್ಪ ಧನಶೆಟ್ಟಿ" ಎಂದು ವಾಚಕರು ಓದಿಕೊಳ್ಳಬೇಕು.

ಇಂಗ್ಲೆಂಡ್ ದೇಶದ ಮಹಾಕವಿಯಾದ ವಿಲಿಯಂ ಷೇಕ್ಸ್‌ಪಿಯರ್ ಜೀವನ ಚರಿತ್ರೆ.

ಲೇಖಕರು—ಕನ್ನಡಕವಿ, ಅಸ್ಥಾನವಿದ್ವಾ ಅನಕಟ್ಟೆ ರಾಮರಾಯರು.

4 ನೆಯ ಅಧ್ಯಾಯ

ಷೇಕ್ಸ್‌ಪಿಯರ್ ಕವಿಯ ಉಚ್ಛ್ರಾಯಸ್ಥಿತಿ. 1595—1608.

ಈ ಕವಿಯು ಬರೆದ ಗ್ರಂಥಗಳನ್ನು ಜನರು ಓದಿ ತಮ್ಮ ಅವಗಾಹನೆಗೆ ತಂದುಕೊಂಡು ತಂತಮ್ಮ ಗುಣಾತಿಶಯಗಳಲ್ಲಿ, ಆ ಕಾಲದ ನಡವಳಿಕೆಗಳಲ್ಲಿ ಎಂತಹವಾಗಿರುವುವೆಂಬುದನ್ನು ತಿಳಿದುಕೊಂಡ ಹಾಗೆಲ್ಲಾ ಕವಿಯು ತನ್ನ ಒರವಣಿಗೆಗಳನ್ನು ಕ್ರಮೇಣ ಹೆಚ್ಚಿಸುತ್ತಲೇ ಬಂದನು. ಕವಿಯು ಆ ಕಾಲಸ್ಥಿತಿಯನ್ನು ನೋಡಿ ಮತ್ತೊಂದು (Lueric) ಎಂಬ ಹೊಸ ನಾಟಕವನ್ನು ರಚಿಸಿ ಪ್ರಕಟಿಸಿದುದೇ ಕಾರಣವಾಗಿ, ಈತನ ಶ್ರಮವು ಸಾರ್ಥಕವಾಗುವಂತೆ, ಕವಿಯ ಜೀವಮಾನವೆಂಬ ಒಂದು ಪುಸ್ತಕದಲ್ಲಿ ಸ್ತೋತ್ರಾರ್ಹವಾದ "ವರಕವಿ" ಎಂಬ ಬಿರುದು ಸ್ಥಿರವಾಗಿ ನೆಲಸುವಂತಾಯಿತು! ಇದುವರೆಗೂ ಷೇಕ್ಸ್‌ಪಿಯರು ನಾಟಕದಲ್ಲಿಯೇ ಸೇರಿ ಅಭಿನಯಿಸುವುದರಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿರುವನೆಂಬ ಖ್ಯಾತಿಯನ್ನು ಪಡೆದಿದ್ದನು ಇದಿನಿಂದ ಮುಂದಕ್ಕೆ ಈ ಕವಿಯು ಯೋಗ್ಯವಾದ ನಾಟಕಸಂಘದವರಲ್ಲಿ ಸೇರಿ ಕಥಾನಾಯಕ ಪಾತ್ರಾಭಿನಯದಲ್ಲಿ ತಾನೊಬ್ಬನಾಗಿಯೂ ತಾನು ಸೇರಿದ್ದ ನಾಟಕಸಂಘದಲ್ಲಿ ಒಬ್ಬ ಪಾಲುದಾರನಾಗಿಯೂ ಇದ್ದುಕೊಂಡು, ಆ ಕಾಲಕ್ಕೆ ಬೇಕಾಗಿರುವ ನೂತನ ನವರಸ ಭಾವಗರ್ಭಿತವಾದ ಕಥೆಗಳನ್ನೇ ರಚಿಸಿ ಕೊಡುತ್ತಿದ್ದನು ಸನ್ 1595 ನೆಯ ವರುಷ ಮೊದಲುಗೊಂಡು ಸುಮಾರು 13 ವರುಷಗಳವರೆಗೂ ಬರವಣಿಗೆಗಳಿಂದ ತನ್ನ ಅತ್ಯದ್ಭುತವಾದ ಮೇಧಾಶಕ್ತಿ ಎಂತಹದ್ದೆಂದು ಜನರಿಗೆ ತೋರ್ಪಡಿಸುವುದಕ್ಕೆ ಅಮೋಘವಾದ ಈತನ ಕವನಗಳೇ ಇವನ ಯಶೋಜಯವನ್ನೂ, ವಿಶ್ವವ್ಯಸಂಪಾದನೆಯನ್ನೂ ದಾರಿಯಾಯಿತು ಈ ಕವಿಯು ತನ್ನ ಸ್ವಭಾವಜನ್ಯವಾದ ವಿದ್ಯಾಕೌಶಲ್ಯವನ್ನು ಕೊರಿಸುತ್ತಿರಲು 1598 ನೆಯ ವರುಷದಲ್ಲಿ ಈತನ ಮೊದಲನೆಯ ಮಗನು ಇಹಲೋಕ ವ್ಯಾಪಾರವನ್ನು ಬಿಟ್ಟು ಕೂಡುದರಿಂದ, ಕವಿಯ ಸಂಸಾರದ ಚಿಂತೆಗೆ ಇದೇ ಮೊದಲಾಯಿತು ಮತ್ತಿಷ್ಟಾಗಿ ಪುಸ್ತಕೋಕವು ಕವಿಯ ಮನೋವೈಕಲ್ಯವನ್ನು ಕುರಿತು, ಕಿಂಗ್ ಜಾನ್ ಎಂಬ ನಾಟಕಗ್ರಂಥದಲ್ಲಿ ಸ್ವೇಚ್ಛವಾಗಿ ಬರೆದಿರುವನು.

ಈ ಕಾಲದಲ್ಲಿಯೇ ಕವಿಯ ಬಾಂಧವರು ದೈವಾಧೀನರಾಗಲು ಮೊದಲಾಯಿತು. ಷೇಕ್ಸ್‌ಪಿಯರು ತನ್ನ ಜನ್ಮಸ್ಥಳವನ್ನು ಬಿಟ್ಟು ಹತ್ತಿರದಲ್ಲಿರುವ ಸೌತ್ ವಾರಿಕ್ ಎಂಬ ಸ್ಥಳದಲ್ಲಿ ವಾಸಮಾಡಿಕೊಂಡಿದ್ದನು ಇವನು ತನ್ನ ಜನ್ಮಸ್ಥಳದ ಮಧ್ಯಭಾಗದಲ್ಲಿ ಉತ್ಕೃಷ್ಟವಾದ ಒಂದು ದೊಡ್ಡ ಮನೆಯನ್ನೂ, ಕೆಲವು ನಿವೇಶನಗಳನ್ನೂ ೧೫೫ ಸಾವಿರ ರೂಪಾಯಿಗೆ ಕೊಂಡುಕೊಂಡನು. ಈ ಮನೆಯು ನೋಡುವುದಕ್ಕೆ ದೊಡ್ಡದಾಗಿಯೂ ಲಕ್ಷಣವಾಗಿಯೂ, ಹಿಂಭಾಗದಲ್ಲಿ ಫಲವೃಕ್ಷಗಳಿಂದ ನಿಬಿಡವಾಗಿ ವಿಶಾಲವಾದ ಒಂದು ಮಧುವನವಿದ್ದಿತು. ಇಲ್ಲಿ ಕವಿಯು ತನ್ನ ಸಂಸಾರಸಮೇತ ವಾಸಮಾಡಿಕೊಂಡು ಜನಾನುರಾಗವನ್ನು ವೃದ್ಧಿಪಡಿಸಿಕೊಳ್ಳುತ್ತಾ ಯೋಗ್ಯನೆಂಬ ಭಾವವನ್ನು ಎಲ್ಲರಿಗೂ ತೋರ್ಪಡಿಸಿಕೊಳ್ಳುತ್ತಾ ಸೌಖ್ಯದಿಂದಿದ್ದನು ಸ್ವಲ್ಪಕಾಲದಲ್ಲಿಯೇ ಕವಿಯು, ಹಿಂದೆ ರಾಜನಾಗಿದ್ದ ಹೆರಿ I & II ಇವರ ಚರಿತ್ರೆಗಳನ್ನು ನಾಟಕರೂಪವಾಗಿ ರಚಿಸಿದನು ಈ ಕಾಲದಲ್ಲಿ ನಾಟಕವು ಅಗಣ ದೊಡ್ಡಮನುಷ್ಯರ ಹೆಸರನ್ನೂ, ಅವರ ಗುಣಾತಿಶಯಗಳನ್ನೂ ಪಾತ್ರವರಿತು ಅಭಿನಯಿಸುತ್ತಿದ್ದುದರಿಂದ, ದೊಡ್ಡಮನುಷ್ಯರಿಗೆ ತುಂಬ ಅವಮಾನವಾಗಿ, ಇವರು ಈ ವಿಷಯವನ್ನು ರಾಣಿಯಾದ ಎಲಜಬತ್ತಿಗೆ ವಿಜ್ಞಾಪಿಸಿಕೊಂಡಮೇಲೆ, ಈ ಕವಿಯು ತನ್ನ ಗ್ರಂಥವನ್ನು ಪುನರಾವಲೋಕನದಲ್ಲಿ ಸ್ವಲ್ಪ ವ್ಯತ್ಯಾಸಮಾಡಿ ತೋರಿಸುತ್ತಿದ್ದನು. ಇದಾದಮೇಲೆ ವೆನಿಸ್ ದೇಶದ ವರ್ತಕ (The Merchant of Venis) ಎಂಬ ಮತ್ತೊಂದು ನಾಟಕವನ್ನು ಬರೆದುಕೊಟ್ಟು ಆಟವಾಡಿಸಿ ನೋಡುತ್ತಾ ಸಂತೋಷಪಡುತ್ತಿದ್ದನು. ಈ ಕಾಲದಲ್ಲಿಯೇ ಕವಿಯು ತನ್ನ ಅಮೋಘವಾದ ನಾಟಕಗಳನ್ನು ಬರೆದನು. ಪ್ರತಿವರುಷದಲ್ಲಿಯೂ ಕವಿಯು ಎರಡು ನಾಟಕಗಳನ್ನು ತಪ್ಪದೆ ಬರೆದು ಅಭಿನಯಿಸಲು ಸಂಘಕ್ಕೆ ಕೊಡುತ್ತಿದ್ದನು ಇದರಿಂದ ವರುಷಪೊಂದಕ್ಕೆ 24 ಸಾವಿರ ರೂಪಾಯಿಯಷ್ಟು ವರಮಾನವು ಈತನಿಗೆ ಬರುತ್ತಿದ್ದಿತು ಈತನು ಈ ಕಾಲದಲ್ಲಿ ಸುಖವಾಗಿ ಜೀವಿಸುತ್ತಾ ಆಗಿಂದಾಗ್ಗೆ ಈತನ ಹತ್ತಿರಕ್ಕೆ ಬಂದವರಿಗೆ ಧಾರಾಳವಾಗಿ ಆತಿಥ್ಯವನ್ನು ಕೊಡುತ್ತಾ, ನಾಟಕಸಂಘದವರಿಗೆ ತನ್ನ ಕೈಲಾದಮಟ್ಟಿಗೆ ಪ್ರೋತ್ಸಾಹಿಸುತ್ತಾ ಇದ್ದನು. ಕವಿಯು ತನ್ನ ಜನ್ಮಸ್ಥಳದ ಅಭಿವೃದ್ಧಿಯನ್ನು ಬಯಸುತ್ತಾ ತನ್ನ ಆಸ್ತಿಯ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಿದ್ದನು. ಹಣಸಂಪಾದನೆಗೆ ಎಷ್ಟು ಕಷ್ಟಪಟ್ಟನೆಂಬುದಕ್ಕೆ ಈತನು ಐಶ್ವರ್ಯವಂತನಾಗಿದ್ದರೂ ಇವನಿಗೆ ಇಬ್ಬರು ೧೪ ರೂಪಾಯಿಗಳನ್ನು ಕೊಡಬೇಕಾಗಿದ್ದುದಕ್ಕೆ ದಾವಾಮಾಡಿ ಕೋರ್ಟಿನಲ್ಲಿ ಸೈಸಲು ಪಡಿದನು! ಈತನು ತನ್ನ ವಿರಾಮಕಾಲದಲ್ಲಿ ಬಂದ ದೊಡ್ಡಮನುಷ್ಯರೊಡನೆಯೂ, ವಿದ್ಯಾವಂತರೊಡನೆಯೂ, ಸ್ನೇಹಿತರೊಡನೆಯೂ ಸಂಧಾಷಣೆ ಮಾಡುತ್ತಾ ಯೋಗ್ಯವಂತನೆನಿಸಿ, ಖ್ಯಾತಿಯನ್ನು ಪಡೆದುಕೊಂಡಿದ್ದನು.

ಷೇಕ್ಸ್‌ಪಿಯರ ಹತ್ತಿರಕ್ಕೆ ಜನರು ತಾವಾಗಿಯೇ ಬಂದು ಈತನ ಸ್ನೇಹವನ್ನು ಬೆಳೆಯಿಸುವುದಕ್ಕೆ, ಈತನು ನಾನಾವಿಷಯಗಳನ್ನು ಕುರಿತು ಆಪ್ತರಾಗಿ ಮಾತನಾಡುವ ವಿಜಾತೀಯವಾದ ಬುದ್ಧಿಯೂ ಸ್ವಭಾವಜನ್ಯವಾದ ಸದ್ಗುಣಗಳೂ ಇದ್ದುದೇ ಕಾರಣಗಳಾಗಿದ್ದವು. ಈ ಕಾಲದಲ್ಲಿ ಐಶ್ವರ್ಯವಂತರಾಗಿಯೂ, ಅನ್ಯಾಯದ ಬಡ್ಡಿಯನ್ನು ತೆಗೆದುಕೊಳ್ಳುವುದರಲ್ಲಿ ಖ್ಯಾತಿವಂತನಾದ ಒಬ್ಬ ದೊಡ್ಡ ಸಾಹುಕಾರನು ಈ ಕವಿಯೊಡನೆ ಪರಿಚಯವನ್ನು ಮಾಡಿಕೊಂಡಿರುವಲ್ಲಿ ಕವಿಯನ್ನು ಕುರಿತು—ಸ್ವಾಮಿ! ನಿನ್ನ ಜೀವಮಾನವು ತೀರಿದಮೇಲೆ ಜನಗಳು ನಿನ್ನ ವಿಷಯವಾಗಿ ಯಾವ ಅಭಿಪ್ರಾಯವನ್ನು ಪಡೆವರು? ಅಲ್ಲದೆ ನಿನ್ನ ಗೋರಿಯಮೇಲೆ ನಿನೆಂಬದಾಗಿ ಬರೆಯಬೇಕು? ಎಂದು ಮಂದಹಾಸದಿಂದ ಕೇಳಿದನು. ಕವಿಯು—ತೀಕಡ ಹೆತ್ತುರೂಪಾಯಿ ಬಡ್ಡಿಯನ್ನು ತೆಗೆದುಕೊಳ್ಳುವನೆಂಬ ವಿಷಯಗಳನ್ನು ಸಂಚಿಸಿ ಬರೆಯಬೇಕೆಂದು ಹೇಳಿ, ಹಾಸ್ಯಮಾಡುವನಂತೆ ಆ ಕ್ಷಣವೇ ಇವನಿದಿರಿಗೆ ಕವನವನ್ನು ಈ ರೀತಿಮಾಡಿದನು.

Ten in the hundred lies here engraved,
Tis a hundred to ten his soul is not saved :
If any man ask, who lies in this toomb,
"Oh-hoe! quoth the devil" 'tis my Johon a Coomb"

ಎಂಬುದಾಗಿ ಹೇಳಿದನು! ಹಾಸ್ಯವಾಗಿಯೂ, ಕರ್ಣಕಠೋರವಾಗಿಯೂ, ವ್ಯಸನಕರವಾಗಿಯೂ ಇರುವ ಈ ಪದ್ಯವನ್ನು ಕೇಳಿದ ಕೂಡಲೆ ಜಿಪುಣಾಗ್ರೇಸರನಾದ ಆ ಹಣಗಾರನು ತುಂಬ ವ್ಯಸನಾಕ್ರಾಂತನಾಗಿ ಈ ಕವಿಯ ವಾಕ್ಯಗಳನ್ನು ಆ ಸಾಹುಕಾರನು ತನ್ನ ಮರಣಕಾಲದವರೆಗೂ ಜ್ಞಾಪಕದಲ್ಲಿಟ್ಟುಕೊಂಡಿದ್ದನು. ಈ ಸಾಹುಕಾರನು ತನ್ನ ಮರಣಶಾಸನದಲ್ಲಿ ಈತನಿಗೆ ೧೫೦ ರೂಪಾಯಿಗಳನ್ನು ಮಾತ್ರವೇ ಉಚಿತವಾಗಿ ಕೊಡಬೇಕೆಂಬ ತನ್ನ ಉದಾರ ಗುಣವನ್ನು ಅಲ್ಲಿ ತೋರ್ಪಡಿಸಿದ್ದನು!

ಷೇಕ್ಸ್‌ಪಿಯರು 1613 ನೆಯ ವರುಷದಲ್ಲಿ ಲಂಡನ್ ಪಟ್ಟಣದ ಬ್ಲಾಕ್‌ಫ್ರೈರ್ಸ್ ಎಂಬ ಸ್ಥಳದಲ್ಲಿ ಸುಮಾರು 5 ಸಾವಿರ ರೂಪಾಯಿ ಬಾಳುವ ಒಂದು ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಅದಕ್ಕೆ ಅರ್ಧ ಹಣವನ್ನು ಕೊಟ್ಟು ಬಾಕಿ ಹಣಕ್ಕೆ ಆ ಮನೆಯ ಹಿಂಭಾಗವನ್ನು ಆಧಾರಮಾಡಿ ಪತ್ರಕ್ಕೆ ತನ್ನ ರುಜು ಹಾಕಿ ಕೊಟ್ಟನು ಈ ಕಟ್ಟಡವು ಇವನ ಹೆಸರಿದಲ್ಲಿ ಈಗಲೂ ಜ್ಞಾಪಕಾರ್ಥವಾಗಿಟ್ಟಿದ್ದಾರೆ ಈತನು ಆಗ ಬರೆದ ಬರವಣಿಗೆಯನ್ನು ಈಗಲೂ ಗಿಲ್ಡ್‌ಹಾಲ್ ಎಂಬ ಪುಸ್ತಕ ಭಂಡಾರದಲ್ಲಿ ಇಟ್ಟಿದ್ದಾರೆ: ಇತ್ತ ಕವಿಯು ವಿಶೇಷ ಪ್ರಾಬಲ್ಯಸ್ಥಿತಿಗೆ ಬಂದಿದ್ದ ದಿಗ್ಲೋಬ್ ಎಂಬ ನಾಟಕ ಮಂದಿರವು 1613 ನೆಯ ವರುಷದಲ್ಲಿ ಪ್ರಾಪ್ತವಾದ ಬೆಂಕೆಯ ಅನಾಹುತದಿಂದ ಸುಟ್ಟು ಬೂದಿಯಾಯಿತು. ಈ ಸಂದರ್ಭದಲ್ಲಿ ಈ ಕವಿಯ ಸಂಬಂಧವಾದ ಕೈಬರವಣಿಗೆಯ ಕೆಲವು ಗ್ರಂಥಗಳೂ ಭಸ್ಮೀಭೂತವಾದವು

2. ಕವಿಯಮರಣ 1616

ವೃದ್ಧಾಪ್ಯಕಾಲದಲ್ಲಿ ಷೇಕ್ಸ್‌ಪಿಯರಿಗೆ ಇಬ್ಬರು ಹೆಣ್ಣುಮಕ್ಕಳು ಮಾತ್ರ ಉಳಿದಿದ್ದರು ಇವರಿಗೆ ವಿವಾಹವಾದ ಎರಡು ತಿಂಗಳೊಳಗಾಗಿಯೇ ಕವಿಯು ತಾನು ಹುಟ್ಟಿದ ದಿವಸವೇ ಇಹಲೋಕ ವ್ಯಾಪಾರವನ್ನು ಬಿಟ್ಟನು. ಈತನಿಗೆ ಸಾಯುವಾಗ್ಗೆ ೫೨ ವರುಷಗಳಾಗಿದ್ದವು. ಈ ಕವಿಯು ಸಾಯಲು ಕಾರಣವೇನೆಂದರೆ—ಆ ಕಾಲದಲ್ಲಿ ಜನಗಳು ಮದದ್ರವ್ಯಸೇವನೆಯನ್ನು ಅಜರಾಜೆಯಲ್ಲಿಟ್ಟುಕೊಂಡಿದ್ದರು. ಒಂದಾನೊಂದು ದಿವಸ ಈ ಕವಿಯು ತನ್ನ ಸ್ನೇಹಿತರೊಡನೆ ಒಂದು ಸ್ಥಳದಲ್ಲಿ ವಿನೋದದಿಂದಿರುತ್ತಿರುವಾಗ್ಗೆ ಎಲ್ಲರೂ ಮದದ್ರವ್ಯಸೇವನೆಯನ್ನು ಮಾಡಿಕೆಯಂತೆ ಪಾನಮಾಡಿದರು. ಈತನೂ ಪಾನಮಾಡಿದನು. ಈತನು ಸ್ವಲ್ಪ ಹೆಚ್ಚಾಗಿ ಪಾನಮಾಡಿದುದರಿಂದ ಬುದ್ಧಿವೈಕಲ್ಯಹುಟ್ಟಿ, ಜ್ವರವು ವಿಪರೀತವಾಗಿ ಬಂದು, ಆ ದಿವಸ ಸಾಯಂಕಾಲವೇ ಜೀವನ್ಮುಕ್ತನಾದನು. ಈತನು ಅಸಾಧಾರಣ ಮನುಷ್ಯನಾಗಿ ಪ್ರಪಂಚಕ್ಕೆ ತನ್ನ ಮೇಧಾಶಕ್ತಿಯಿಂದ ಅಮೋಘವಾದ ಗ್ರಂಥಗಳನ್ನು ಒದಿದು, ಜನಗಳನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಹೋಪಕಾರವನ್ನು ಮಾಡಿರುವನೆಂಬ ಖ್ಯಾತಿಗೆ ಜನಗಳು ತಮ್ಮ ನೈಜಪ್ರೀತಿಯಿಂದ ಈ ಮಹಾಕವಿಯ ಶರೀರವನ್ನು ಜಾತಿ ಮರ್ಯಾದಾನುಸಾರವಾಗಿ ಅವನ ಜನ್ಮಸ್ಥಾನದ ಹತ್ತಿರದಲ್ಲಿರುವ ಒಂದು ಗುಡಿಯ ಹೊರಭಾಗದಲ್ಲಿ ದರ್ಫ ಮಾಡಿರುವರು. ಈಸ್ಥಳದಲ್ಲಿ ಕಟ್ಟಿರುವ ಗೋರಿಯಮೇಲೆ ಹಾಕಿರುವ ಒಂದು ಅಗಲವಾದ ಕಲ್ಲಿನ ಮೇಲೆ ಹೀಗೆ ಕೆತ್ತಿಸಿದ್ದಾರೆ.—

Good friend for jesus sake for bare
To digg the dust enclosed here ;
Bleste be ye man yt spares these stones
And curst be he yt moves my bones

ಈ ಬರವಣಿಗೆಯನ್ನು ಕವಿಯು ತನ್ನ ಮರಣಕ್ಕೆ ಮುಂಚಿತವಾಗಿ ಸ್ನೇಹಿತರಿಗೆ ಹೇಳಿ ಬರೆಸಿದ್ದನೆಂದು ತಿಳಿಯಲ್ಪಟ್ಟಿದೆ ಈ ಕವಿಯು ಸತ್ತ ಕೆಲವು ಕಾಲಗಳಾದಮೇಲೆ ಯಾರೂ ನನ್ನ ಗೋರಿಯನ್ನು ಕದಲಿಸಕೂಡದೆಂದು ಬರೆದಿರುವುದಕ್ಕೆ ಕಾರಣವೇನೆಂದು ಯೋಚಿಸಿ, ಕೆಲವು ನೀಚರು ಸೇರಿ ವಿಕಾರಿ, ಗುದ್ದಲಿಗಳಿಂದ ಅಗಿದು ನೋಡುವಲ್ಲಿ ಒಂದು ಅಳವಾದ ಹಳ್ಳವು ಇದ್ದಿತೇಹೊರತು ಮತ್ತೇನೂ ಕಾಣಬರಲಿಲ್ಲ. ಆ ಹಳ್ಳಪ್ರದೇಶದಿಂದ ಶವವು ಹೂಳಿದ ಸ್ಥಳವನ್ನು ಚೆನ್ನಾಗಿ ಹುಡುಕಿ ನೋಡಿದರೂ ಶವದ ಯಾವ ಭಾಗವಾಗಲಿ ಕಾಣಲಿಲ್ಲ! ಈ ಪುಂಡರು ಇದಕ್ಕೆ ಕಾರಣವನ್ನು ತಿಳಿಯಬೇಕೆಂದು ಹಗಲೂ ರಾತ್ರಿಯೂ ಗೋರಿ ಹತ್ತಿರ ಕಾವಲಿಟ್ಟು ನೋಡಿದಾಗ್ಗೂ ಏನೂ ಗೊತ್ತಾಗದೇ ಹೋದುದರಿಂದ ಕೊನೆಗೆ ಆಸೆಯನ್ನು ಬಿಟ್ಟು ಬಿಟ್ಟರು. ಅನಂತರ ಈ ಕವಿಯಮ್ಮ ಹೂಳಿದ ಸ್ಥಳದ ಹತ್ತಿರವಿರುವ ಗುಡಿಯ ಗೋಡೆಯ ಹತ್ತಿರದಲ್ಲಿಯೇ ಜಪ್ಪಯ್ಯ ಷೇಕ್ಸ್‌ಪಿಯರನ ಅಳತೆಯಂತಹ ಕಲ್ಲುವಿಗ್ರಹ

ವನ್ನು ಮಾಡಿಸಿ ಅತನ ಜ್ಞಾಪಕಾರ್ಥವಾಗಿ ಹತ್ತಿರದಲ್ಲಿ ಒಂದು ದೊಡ್ಡ ಮನೋಹರವಾದ ಕಲ್ಲಿನಮೇಲೆ ಈ ರೀತಿ ಬರೆಯಿಸಿದ್ದಾರೆ ಏನೆಂದರೆ :—

"Stranger to whom this monument is Showing
Invoke the poet's curses on malone ;
Whose meddling zeal his barbarious task displays,
And daubs his tombstone as he marred his plays"

ಈ ಕವಿಯು ಇಹಲೋಕವ್ಯಾಪಾರವನ್ನು ಬಿಡುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಅಂದರೆ ೧೬೧೬ ರಲ್ಲಿ ತನ್ನ ಕೈಯಿಂದ ರಜುಮಾಡಿದ ಉಯಿಲನ್ನು ಬರೆದಿಟ್ಟನು. ಇದು ಇನ್ನೂ ಅತನ ಜ್ಞಾಪಕಾರ್ಥವಾಗಿ ಇಟ್ಟಿದ್ದಾರಂತೆ! ಮುಖ್ಯವಾಗಿ ಈ ಕವಿಯು ಉಯಿಲನ್ನು ಬರೆದಿರುವುದರಲ್ಲಿ ವಿಶೇಷವಾದೂ ಅತನ ಹೆಸರು ಸದಾ ನೆಲಸಿರುವಂತೆ ಮಾಡುವುದಕ್ಕೆ ತನ್ನ ವಂಶೀಯರಲ್ಲಿ ಯಾರಾದರೂ ಇಬ್ಬರು ಇರಬೇಕೆಂಬ ಯೋಚನೆಯು ಇವನಿಗಿತ್ತು. ಏಕೆಂದರೆ, ಅತನ ಆಸ್ತಿಯು ವಿಶೇಷವಾಗಿದ್ದುದರಿಂದ ಅದು ಅನಾಯಕವಾಗದೆ ತನ್ನ ವಂಶೀಯರು ಅದನ್ನು ಸರಿಯಾದ ಮಾರ್ಗದಲ್ಲಿ ವಿನಿಯೋಗಿಸುತ್ತಿರಬೇಕೆಂಬುದೇ ಕವಿಯ ಆಶೆಗೆ ಮೂಲ ಕಾರಣವಾಗಿದ್ದಿತು

3. ಮಹಾಕವಿಯ ಮರಣಶಾಸನ.

ಷೇಕ್ಸಪಿಯರು ಮರಣಪಾಗುವುದಕ್ಕೆ ಒಂದು ತಿಂಗಳು ಪೂರ್ವವಾಗಿಯೇ ಅತನ ಮರಣಾನಂತರ ಆಸ್ತಿಯು ಸರಿಯಾಗಿ ವಿಭಾಗಿಸಲ್ಪಡಬೇಕೆಂದು ಸ್ವಹಸ್ತ ಲಿಖಿತವಾದ ಒಂದು ಮರಣಶಾಸನವು ಸಿಕ್ಕಿತು. ಈ ಪತ್ರವನ್ನು ಕವಿಯು ಜ್ಞಾಪಕಾರ್ಥವಾಗಿ ಈಗಲೂ ಇಟ್ಟಿದ್ದಾರೆ! ಮರಣಶಾಸನದಲ್ಲಿ ಬರೆದಿರುವಂತೆ ಅತನ ಇಬ್ಬರು ಹೆಣ್ಣುಮಕ್ಕಳಲ್ಲಿ ಹಿರಿಯವಳಿಗೆ ಹೆಚ್ಚಾದ ಆಸ್ತಿಭಾಗವನ್ನೂ, ಎರಡನೆಯ ಮಗಳಿಗೆ ನಗದಾಗಿ ಸ್ವಲ್ಪ ರೂಪಾಯಿಗಳನ್ನು, ತನ್ನ ಹಂಗಿಗೆ 1200 ರೂ ಮತ್ತು ತನ್ನ ಜನ್ಮಸ್ಥಳದಲ್ಲಿರುವ ಮನೆಯ ಒಂದು ಭಾಗವನ್ನೂ, ತನ್ನ ಹೆಂಡತಿಗೆ ತನ್ನ ಶೈಯ್ಯಾಗೃಹದಲ್ಲಿರುವ ಕಲ್ಪವೂ ಇತರ ಸಾಮಾನುಗಳೂ ಮತ್ತು ಆಗ ತಾನೆ ಹೊಸದಾಗಿ ತೆಗೆದುಕೊಂಡಿದ್ದ ಹೊಸಮನೆಯ ಮೂರನೆಯ ಒಂದು ಭಾಗವನ್ನೂ ಅತಗೆ ಕೊಡಬೇಕಾಗಿರುವುದಲ್ಲದೆ, ಸ್ಟ್ರಾಟ್‌ಫರ್ಡ್, ಬಿಶಪಟರ್ಬ್ ಮತ್ತು ನೆಲ್‌ಕೂಂಬ್ ಈ ಸ್ಥಳಗಳಲ್ಲಿರುವ ಭೂಮಿಗಳನ್ನೆಲ್ಲಾ ತನ್ನ ಹೆಂಡತಿಯ ವಶಕ್ಕೆ ಬಿಟ್ಟುಕೊಡಬೇಕು" ಎಂದು ಬರೆದಿದ್ದಿತು! ಮರಣಶಾಸನದಂತೆ ಆಸ್ತಿಗಳೆಲ್ಲಾ ಕೊಡಲ್ಪಟ್ಟವು. ಕವಿಯು ತೀರಿಹೋದ ಏಳುವರುಷಗಳವರೆಗೂ ಜೀವಿಸಿಕೊಂಡಿದ್ದ ಅತನ ಪತ್ನಿಯು ೧೬೨೩ನೆಯ ವರುಷದಲ್ಲಿ ಅತಿಯ ಒಂದನೆಯ ವರುಷದಲ್ಲಿ ಪತಿಪಾದಾರವಿಂದವನ್ನು ಸೇರಿಕೊಂಡಳು. ಅತಿಯ ಶವವನ್ನು ಪತಿಯ ಜ್ಞಾಪಕಾರ್ಥವಾಗಿ ಕಟ್ಟಿದ್ದ ಆಕೃತಿಯ ಕೆಳಭಾಗದಲ್ಲಿಯೇ ಹೂಳಿ, ಗೋರಿಮಾಡಲ್ಪಟ್ಟತು.

ಕೆಲವು ಕಾಲವಾದಮೇಲೆ ಈ ಕವಿಯ ಸಂಸಾರದ ಜನಗಳಲ್ಲಿ ಒಬ್ಬೊಬ್ಬರಾಗಿ ತೀರಿಹೋದ ಮೇಲೆ ಇವರ ಶವಗಳನ್ನೆಲ್ಲಾ ಈ ಮಹಾ ಕವಿಯ ಗೋರಿಯ ಮುಂಭಾಗಗಳಲ್ಲಿಯೇ ಸಾಲುಸಾಲಾಗಿ ಹೂಳಲ್ಪಟ್ಟವು ಷೇಕ್ಸಪಿಯರು ಮರಣವಾದ ೫೬ ವರುಷಗಳಲ್ಲಿ ಅತನ ಸಂತತಿಯವರಲ್ಲಿ ಒಬ್ಬರೂ ಉಳಿಯದೆ ಎಲ್ಲರೂ ದೈವಾಧೀನರಾದರು

4. ಷೇಕ್ಸಪಿಯರು ರಚಿಸಿದ ಗ್ರಂಥವಿಚಾರ

ಕವಿಯ ಮರಣಾನಂತರ ಸಿಕ್ಕಿದ ಅತನ ಸಂಬಂಧವಾದ ಕಾಗದಪತ್ರಗಳು ತುಂಬಿದ್ದ ೨ ಪೆಟ್ಟಿಗೆಗಳೂ, ವಾರಿಕ್ ಸ್ಥಳದಲ್ಲಿ ಪಾಸ್ತುವಾದ ಬೆಂಕೆಯ ಅನಾಹುತದಲ್ಲಿ ಸುಟ್ಟುಹೋದವು ಇದೂ ಅಲ್ಲದೆ ಭೂಮಿ ಕಾಣಿಕೆಯ ಸಂಬಂಧವಾದ ಪತ್ರಗಳೂ, ನಾಟಕ ಸಂಬಂಧವಾದ ಕಾಗದಪತ್ರಗಳೂ ಅದರಲ್ಲಿಯೇ ಇದ್ದವು ಎಂದು ತಿಳಿಯಬರುತ್ತದೆ ಕೆಲವು ಕಾಗದಪತ್ರಗಳು ಹೊರಪಡಿಸುವುದು ಆ ಕಾಲಕ್ಕೆ ಸಹಜವಾದುದಲ್ಲವೆಂದು ಭಾವಿಸಿ ಕೆಲವು ಸ್ನೇಹಿತರು ಅವುಗಳನ್ನೆಲ್ಲಾ ಈ ಕವಿಯಾತ್ಮಕೃತಿಯಂತೆ ಮಾಡಲ್ಪಟ್ಟದ್ದ ಸ್ಥಳದ ಕೆಳಭಾಗದಲ್ಲಿಟ್ಟು ಹೂತುಬಿಟ್ಟರು.

ಕವಿಯು ಇಹಲೋಕ ವ್ಯಾಪಾರವನ್ನು ಬಿಟ್ಟು ಹೋದಮೇಲೆ 7 ವರುಷಗಳಾದ ತರುವಾಯ 1623 ವರೆಗೆ ಅತನಿಂದ ರಚಿಸಲ್ಪಟ್ಟ ಇನ್ನೂ ಕೈಬರವಣಿಗೆಯಲ್ಲಿದ್ದ ಕೆಲವು ಗ್ರಂಥಗಳೆಲ್ಲಾ ಸಿಕ್ಕಲು ಅತನ ಆಪ್ತ ಮಿತ್ರರೆಲ್ಲಾ ಸೇರಿ ಕವಿಯ ಹೆಸರು ಶಾಶ್ವತವಾಗಿ ಜನೋಪಯೋಗವಾಗಲೆಂದು ಆ ಗ್ರಂಥಗಳನ್ನು ಆಚ್ಚುಹಾಕಿಸಿ ಪ್ರಚುರ ಪಡಿಸಿದರು ಈ ಉದಾರ ಗುಣವು ಕವಿಯ ಸ್ನೇಹಿತರು ಹಿಂಗೆ ಮಾಡದೆ ಹೋಗಿದ್ದರೆ ಕವಿಯ ಅಪೂರ್ವ ಗ್ರಂಥಗಳಾದ ಟೆಂಪಸ್ಟರುತ್– The Tempest , ಮ್ಯಾಕ್‌ಬೆತ್, ಮನೋರಂಜನಿ As you like it, ಮತ್ತು ಟ್ವೆಲ್ಫ್‌ತ್‌ನೈಟ್ ಈ ಗ್ರಂಥಗಳು ಹೊರಪಡದೆ ಅನ್ಯಾಯವಾಗಿ ನಾಶವಾಗಿ ಹೋಗುತ್ತಿದ್ದುವು!

ಈ ಕವಿಯು ರಚಿಸಿರುವ 37 ನಾಟಕಗಳಿಂದಲೂ, ಅತನ ಚರಿತ್ರೆಯಿಂದಲೂ ವಾಚಕ ಮಹಾಶಯರ ಹೃದಯದಲ್ಲಿ ಅತನ ಕವನಶಕ್ತಿಯೂ, ಅದ್ಭುತವಾದ ಮೇಧಾಶಕ್ತಿಯೂ ಎಂತದ್ದಾಗಿರುವುದೆಂದು ತಿಳಿದುಬರುವುದು. ಈ ಕವಿಯ ಅಸಾಧಾರಣವಾದ ಜ್ಞಾನಕ್ಕೂ, ಅಸಮಾನವಾದ ಬರವಣಿಗೆಗಳಿಗೂ ಜನಗಳು ಈಗಲೂ ಹಿಂದಿ ವಿಸ್ಮಯಹೊಂದುತ್ತಿರುವ ಈ ಕವಿಯ ಗುಣಕಥನಗಳನ್ನು ವಿಶೇಷ ಬರೆದು ತೋರಿಸುವುದಕ್ಕೆ ಸ್ಥಳ ಸಂಕೋಚದಿಂದ ಬಿಟ್ಟಿರುವೆನು. ಅತನ ಹಿಂದಣಕಾಲದಲ್ಲಿಯೂ, ಮರಣಾನಂತರದಲ್ಲಿಯೂ ಇದ್ದ ಕವಿಗಳಂತಲ್ಲದೆ ಅತನು ಅಪ್ರತಿಮನಾದ ಕನಿಯೆಂದೂ, ಕವಿಕುಲ ಸಾರ್ವಭೌಮನೆಂದೂ ವ್ಯಾತಿಯನ್ನು ಹೊಂದಿ, ಗ್ರಂಥಾವಲೋಕಿಗಳಿಗೆ ತಾನು ಇದಿರಿಗೆ ಬಂದುನಿಂತು ಮಾತನಾಡುತ್ತಿರುವಂತೆ ಮನಸ್ಸಿಗೆ ಗೋಚರವಾಗುತ್ತಿರುವನಲ್ಲವೆ? ಕವಿಗಳು ಸಾಧಾರಣವಾಗಿ ಕಾಮಿಗಳೇ ಸರಿ. ಆದರಲ್ಲಿಯೂ ನವರಸಾಲಂಕಾರಗಳನ್ನು ಚೆನ್ನಾಗಿ ತಿಳಿದು ನವರಕವಿಯೆನಿಸಿಕೊಂಡಿರಲು, ಅತನು ಕಾಮಿಯಾಗಿಯೂ ಇದ್ದನೆಂದು ಹೇಳಿದರೆ ಆಶ್ಚರ್ಯವಾಗುವುದಿಲ್ಲ. ಈ ಕವಿಯು ತುಂಬ ಆಲೋಚನಾಪರನು. ಮುಖ್ಯವಾಗಿ ಕೊನೆಯಲ್ಲಿ ಅತನು ಜೀವನಿರ್ವಾಣದ ವಿಷಯದಲ್ಲಿ ಸದಾ ಯೋಚಿಸುತ್ತಲೇ ಇರುತ್ತಿದ್ದನು

ಇಂಗ್ಲೀಷುಭಾಷೆಯು ಭೂಮಂಡಲದಲ್ಲಿ ಎಲ್ಲೆಲ್ಲಿ ವ್ಯಾಪಿಸಿರುವುದೋ ಅಂತಹ ಸಮಗ್ರ ಪ್ರದೇಶಗಳಲ್ಲಿಯೂ ಷೇಕ್ಸಪಿಯರ ಕವಿಯ ಹೆಸರು ಪ್ರಸಿದ್ಧವಾಗಿದೆ. ಅತನಿಂದ ರಚಿತವಾದ ಅನೇಕ ಗ್ರಂಥಗಳು, ನೀತಿಬೋಧಕವಾಗಿಯೂ ಮನೋಹರವಾಗಿಯೂ ಪಂಡಿತ ಪಾಮರರಂಜಕವಾಗಿಯೂ ಇರುವುದಲ್ಲದೆ ಮನುಷ್ಯಸ್ವಭಾವವನ್ನು ಚೆನ್ನಾಗಿ ವ್ಯಕ್ತಪಡಿಸಶಕ್ಯವುಗಳಾಗಿವೆ.

ಈ ಕವಿಶ್ರೇಷ್ಠನು ಮಾಡಿದ ಅನೇಕ ನಾಟಕಗಳಲ್ಲಿ ವ್ಯಸನಾಂತ್ಯವಾಗಿ ಪೂರೈಸುವ ಟ್ರಾಜಡಿ ನಾಟಕಗಳಲ್ಲಿ ಒಥೆಲೊ, ಹ್ಯಾಮ್ಲೆಟ್ ಮತ್ತು ರೋಮಿಯೋ ಅಂಡ್ ಜೂಲಿಯಟ್ ಇವೇ ಮುಖ್ಯವಾದುವು ಕಾಮೆಡಿ ಅಥವ ಸಂತೋಷಾಂತ್ಯವಾಗುವ ನಾಟಕಗಳಲ್ಲಿ ಮರ್ಚೆಂಟ್ ಆಫ್‌ವೆನಿಸ್ ಮೊದಲಾದುವೇ ಮುಖ್ಯವಾದುವುಗಳಾಗಿವೆ.

ಕವಿಯು ಈ ಪ್ರಸಂಚದ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡನಂತರ ವಿಷಯಾಪಕ್ತಿಯಲ್ಲಿ ವಿಮುಖನಾಗಿ, ಇಂದ್ರಿಯಗಳ ಶಕ್ತಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು, ತನ್ನ ಸ್ವಭಾವಜನ್ಯವಾದ ಅದ್ವಿತೀಯ ಕವಿತಾಶಕ್ತಿಯನ್ನು ಹೊಂದಿ ವಿಶ್ವರ್ಯವಂತನಾಗಿ, ರಾಜರುಗಳಲ್ಲಿ ಸ್ನೇಹವನ್ನು ಬೆಳೆಯಿಸಿಕೊಂಡಿದ್ದರೂ ಒಡವಂ ವಿಷಯದಲ್ಲಿ ಸಹಾಯವೂ, ದಯೆಯೂ, ಆಪತ್ಸಹಾಯವಾದ ಪ್ರಾಣಿಗಳಲ್ಲಿ ಮರುಕವೂ ಇವನ್ನು ತೋರಿಸುತ್ತಾ ತನ್ನ ಪೂರ್ವದ ಬಡತನವನ್ನೂ ಒಡನಾಡಿಯಂನ್ನೂ ಮರೆಯದೆ ತನ್ನ ಕೈಯಲ್ಲಾ ದಮಟ್ಟಗೂ ಪರೋಪಕಾರವನ್ನು ಮಾಡುತ್ತಲೇ ಇದ್ದನು! ಅತನು ಅಮೋಘವಾದ ತಾಂಗ್ಲೀಷು, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ೨೮೮ ಸಾವಿರ ಪದಗಳನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದನು! ಮುಖ್ಯವಾಗಿ ಯಾವ ಕಾಲ, ದೇಶ, ಜನ ಮತ್ತು ಯಾವ ಮತೀಯವರಂದರೆನು? ಅವರು ಅಮೋಘನಾದ ಗ್ರಂಥಗಳನ್ನು ರಚಿಸಿ, ಅವು ಲೋಕೋಪಕಾರವಾಗಲೆಂದು ಮಾಡುವ ಕವಿಗಳು ಮೊದಲು ಹೀನಸ್ಥಿತಿಯಲ್ಲಿದ್ದು ಕ್ರಮೇಣ ಅವರಿಗೆ ದೇವರಿಂದ ಕೊಡಲ್ಪಟ್ಟ ಕವಿತಾಶಕ್ತಿಯಿಂದಲೇ ಅವರ ಅಮೇಯವಾದ ತಿಳುವಳಿಕೆಗಳನ್ನು ಬರವಣಿಗೆಗಳ ಮುಖಾಂತರ ಲೋಕದಲ್ಲಿ ಹರಡಿ, ಜನಗಳನ್ನು ಸನ್ಮಾರ್ಗಗಾಮಿಗಳಾಗುವಂತೆ ಸಹಾಯ ಮಾಡುತ್ತಾ ಇರುವ ಕವಿಕುಲವಾದಸರೋಜಂಗಳಿಗೆ ಪ್ರೀತಿಪುರಸ್ಸರವಾಗಿ ನನ್ನ ವಂದನೆಗಳನ್ನು ಅರ್ಪಿಸಿ ಈ ಚರಿತ್ರೆಯನ್ನು ಪೂರ್ಣಮಾಡಿರುವೆನು.

ವಾಚಕಮಹಾಶಯರೇ !

ವಿನೀತವಂತಳಾದ ತಾಯಿಯು ಮಗವನ್ನು ಹೆತ್ತು ಸನ್ಮಾರ್ಗದಲ್ಲಿ ನಡೆಯುವಂತಹ ಮಾರ್ಗದಲ್ಲಿ ತರಲು ತಾಯಿಯ ಯೋಜನೆ, ಮತ್ತು ನಡೆನುಡಿಗಳೇ ಮುಖ್ಯಾಧಾರವಾಗಿವೆ. ಇದೇ ರೀತಿಯಲ್ಲಿ ಮಗನ ವಿನಾಶಕ್ಕೂ ಕಾರಣಭೂತಳಾಗಿರುವಳು ತಾಯಿಯಲ್ಲಿ ಅನೂಚಾನವಾಗಿ ಲಬ್ಧವಾದ ಪುಗುಣಗಳೂ ಅದೇ ರೀತಿಯಾಗಿವೆ. ತಾಯಿಯು ಕೈಕೊಂಡ ಕಾರ್ಯಗಳಲ್ಲಿ ವಿಧಾನ, ಖಂಡಿತ, ವಿವಾದ, ಪ್ರಯಾಸ, ಮಿತವ್ಯಯ ಶಿಕ್ಷಣ, ಯುಕ್ತಿ ಮತ್ತು ಜ್ಞಾನ ಮುಂತಾದ ಗುಣಗಳಿದ್ದರೆ ಮಕ್ಕಳೂ ಅನುಸರಿಸಿ ಅವರಲ್ಲಿ ನೆಲೆಗೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ಹೇಳುವುದಕ್ಕೆ ಅನೇಕ ಮಹನೀಯರು ರಚಿಸಿರುವ ಕಾರ್ಯಗಳಿಂದಲೇ ವೇದ್ಯವಾಗುವುದು. ಈ ವಿಷಯವನ್ನು ತಿಳಿಯದ ಮೂಢರು ಹೆಂಗಸು ಯಾವ ಕೆಲಸಕ್ಕೂ ಬಂದವಳಲ್ಲ ಎಂಬುದಾಗಿ ಸಾಮಾನ್ಯವಾಗಿ ಹೇಳುವ ವಾಡಿಕೆಯಾಗಿದೆ.

ತಾಯಿಯಲ್ಲಿ ನೆಲೆಗೊಂಡ ಗುಣವು ಮಗನಲ್ಲಿ ನೆಲಸಿ ಕಾರ್ಯದಲ್ಲಿಯೂ ತೋರಿಬರುವುದೆಂಬುದಕ್ಕೆ ಅನೇಕ ದೃಷ್ಟಾಂತಗಳಿರುವುವು ನೆಪೋಲಿಯರ್ ಬೊನೆಪಾರ್ಟನ ತಾಯಿಯು ಮಹಾ ಧೈರ್ಯವಂತಳಾಗಿ, ಲೋಕವ್ಯವಹಾರಕಾರ್ಯದಲ್ಲಿ ಬಹು ತಿಳಿವಳಿಕೆಹೊಂದಿದ್ದುದರಿಂದಲೇ, ಮಗನೂ ಮಹಾ ಧೈರ್ಯವಂತನಾಗಿ ರಾಜ್ಯವನ್ನಾಳುವಷ್ಟು ಕ್ರಮಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದನೆಂದು ಅವನ ಚರಿತ್ರೆಯಿಂದಲೇ ವೇದ್ಯವಾಗುವುದು. ಇದೇ ರೀತಿಯಾಗಿ ಷೇಕ್ಸಪಿಯರನ ಮಾತೆಯ ಸ್ವಭಾವಜನ್ಯವಾದ ಕವಿತಾಶಕ್ತಿಯನ್ನು ಹೊಂದಿದ್ದುದರಿಂದ ಷೇಕ್ಸಪಿಯರು ತಾಯಿಯಲ್ಲಿದ್ದ ಕವಿತ್ವಮಾಡುವ ಶಕ್ತಿಯನ್ನು ಹೊಂದಿ, ಅವಾರವಾದ ಅಮೇಯ ಗ್ರಂಥಗಳನ್ನು ರಚಿಸಿ, ಲೋಕೋಪಕಾರಿಯೆಂದು ಪ್ರಸಿದ್ಧಿಪಡೆದನಲ್ಲವೆ? ಇಂತಹ ಷೇಕ್ಸಪಿಯರು ಮೊದಲಿನಿಂದಲೂ ತಾಯಿಯು ವಚನಾವೈತವನ್ನು ಪೀರುತ್ತಾ, ತೋರಿಸಿದ ವರ್ತನದಲ್ಲಿ ನಡೆಯುತ್ತಾ ಬಂದುದರಿಂದ ತನ್ನ ಜೀವಿತಕಾಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾ, ಜಿತಮನಸ್ಸಿನಿಂದ ದೊಡ್ಡವರಲ್ಲಿ ವಿಧೇಯತೆಯನ್ನು ತೋರಿಸುತ್ತಾ, ಬಡತನದಲ್ಲಿದ್ದರೂ ಕಾಲವನ್ನು ಅಮೂಲ್ಯವಾದುದೆಂದು ತಿಳಿದು ಪದುಪಯೋಗಪಡಿಸುತ್ತಾ ಬಂದಪಾಗಲ್ಲಾ, ತನ್ನ ಹೃದಯಾಂತರ್ಗತವಾದ ಅಮೂಲ್ಯನಾದ ಕವಿತಾಶಕ್ತಿಯಿಂದ ಅನೇಕ ರಸಯುಕ್ತವಾದ ಗ್ರಂಥಗಳಲ್ಲಿ ತನ್ನ ವಿದ್ಯಾಸಾಮರ್ಥ್ಯವನ್ನೂ, ಲೋಕವ್ಯವಹಾರಲಕ್ಷಣಗಳನ್ನೂ, ಅನೇಕ ಬುದ್ಧಿವಾದಗಳಿಂದ ಕೂಡಿದ ಅನೇಕ ನಾಟಕಗಳನ್ನೂ ರಚಿಸಿ, ತಾನೇ ಅಟವಾಡಿ ತೋರಿಸಿ ಲೋಕಕ್ಕೆ ಉಚ್ಚುನೀಚ್ಚಾದ ಗುಣರಾಜಯಿಂದೊಪ್ಪುತ್ತಾ, ವಿಖ್ಯಾತನಾಗಿ ಬಾಳಿದ ಮಹಿಮನಂತೆಯೇ, ನಾವೂ ಅವನ ಪಥದಲ್ಲಿ ನಡೆಯುತ್ತಾ ಬರುವುದೇ ಒಳ್ಳೆಯದೆಂದು ಹೇಳಬೇಕಾಗಿಲ್ಲ. ಎಲ್ಲರೂ ಷೇಕ್ಸಪಿಯರಿನಂತೆ ಕವಿತಾಶಕ್ತಿಯನ್ನು ಹೊಂದಲಾರರು ಲೋಕದಲ್ಲಿ ಸಾಮಾನ್ಯವಾಗಿ ಪುರುಷರು ಅರ್ಹ್ಯರಿಂದ ಎಂದ ಗುಣಾತಿಶಯಗಳನ್ನು ಹೊಂದಿ, ವಿವಿಧ ಕಸಬುಗಳಲ್ಲಿ ತೊಡಗಿ ಲೋಕದಲ್ಲಿ ವಿಖ್ಯಾತರಾಗಿರುವರು ಷೇಕ್ಸಪಿಯರು ಹೇಗೆ ವಿಖ್ಯಾತನಾದನೆಂಬುದಕ್ಕೆ ಅವನ ಜೀವನಚರಿತ್ರೆಯನ್ನು [illegible] ಪರಿಶೀಲಿಸಿದರೆ ಗೊತ್ತಾಗುವುದು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತ ಅವ್ಯತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦ × ೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸಾನಂದ, ಮೊರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ ... ೦—೧—೬

ಸಮ್ಮೇ ಪೀಠಾರೋಹಣಮಾಡಿರತಕ್ಕ ಇವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ .. ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ . . ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಕಂಕಣಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .. .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀಪೀಠ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀಪೀಠ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ . . ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .. ೦—೦—೯

ಹಿಮವತ್ಪರ್ವತದ ನುಡ್ಡಿಪಲ್ಲಿ ತೋಭುನ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .. ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜಾರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಬೊಸ್ಟೇಟಿನಲ್ಲಿ ನಡೆಸಿದ ರಂಭಾಪುರೀ ಜಗದ್ಗುರುಗಳ ಆದ್ಯಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲನೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಬಿಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಆಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಲಿಂಗಸ್ವಾಮಿ ಆಂಡ್ ಕಂಪೆನಿ ಲಿಮಿಟೆಡ್,

[41] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿತಿವಾಚಾರ್ಯಶತಕ ... ೨ ಆಣೆ

ವೀರಶೈವಮತಮೀಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... .. ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಿರೀಕರಣ (೩ನೆಯ ಆವೃತ್ತಿ) .. ೬ ಆಣೆ

ಸಿದ್ಧಾಂತ ಶಿಖಾಮಣಿ (ಸೂಲಮಾತ್ರ ಚಕ್ಕಸೈಜು) .. ೬ ಆಣೆ

ವೀರಶೈವಮಹತ್ಯರು ... . ೮ ಆಣೆ

ಬಸವಾಧ್ಯಂತದಿವಾಕರ (೩ನೆಯ ೩ವೃತ್ತಿ) .... ೮ ಆಣೆ

ಸದ್ಯೋಧರತ್ನಾವಳಿ .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರ್ಯುಲವಾರಿ ಭಾಷಣಮು (ತೆಲುಗು) ೮ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ

ಶಿವಾಸೂಸ್ಯಸಿದ್ಧಾಂತದರ್ಪಣ .... ೧೨ ಆಣೆ

ಶ್ರೀಕರಭಾಷ್ಯಂ (ಚತುಸ್ಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೩ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವವು) .... ೧। ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾಪ್ಪೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* **The Philosophical Aspect of Virasaivism** (*English*) .... 8 As.

Speeches by Pandit Shri Kashinatha Shastriji *English*) 12 As.

ವೀರಶೈವರತ್ನ (ಮರಾಠಿ) ... ... ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ.

ವೀರಶೈವೇತಿಹಾಸ (ಸಂಸ್ಕೃತ) ... ... ೧ ರೂ.

ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) . ... ೬ ಆಣೆ

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಜ್ಞಾನ ನಿವಾರಣಾರ್ಥ ವೇದ ಶಿವಾಗಮ ಗುರುಪೀಠಾಚಾರ್ಯಾಗಳಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಕರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಫೆಬ್ರವರಿ ೧೯೩೯ [ಸಂಚಿಕೆ ೪೦

ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ.

(ವರಕವಿ—ಹಾಗೀಶ)

ಆಕಾಶದಿಂದ—

ವೀರಧರ್ಮಾಭಿಮಾನಿಗಳೇ! ನಾನು ಪ್ರಾಣೋತ್ಕ್ರಮಣಕಾಲದಲ್ಲಿ ಗರ್ಜಿಸಿದ್ದೆನ್ನು ಮರೆತಿರೇ? ಇದೋ ನೋಡಿ! ಆ ನಾನೇ ಅಕ್ಷಯನಾಗಿ ಅಮರನಾಗಿ ನಿಮ್ಮ ನುಡಿಯೊಡನೆ ಮತ್ತೊಮ್ಮೆ "ಪಂಚಾಚಾರ್ಯಮಹಾರಾಜಕೀ ಜೈ!" ಎನ್ನುವೆನು. ಏಳಿರಿ, ಕೂಡುವ ಕಾಲವಿದಲ್ಲ!

ಜನರಿಂದ—ಯಾರಿಮ್ಮ ಕಾಣರು ಉನ್ನತ ಹೃದಯದಿಂ ।
ಘೋರವಾಗಿ ಗರ್ಜಿಸುತಿಹರು ॥
ಭೂರಿಮಹಾತ್ಮರ ಪಂಚಾಚಾರ್ಯರ ।
ವೀರಘೋಷವಂ ಗೆಯ್ಯುವರು ॥೧॥

ಓಹೋ! ಬನ್ನಿರಿ ಇಲ್ಲಿಯೆ ಕೇಳ್ವುದು ।
ಆಹಾ! ಪಂಚಾಕ್ಷರಿದನಿಯು ॥
ಈ ಹುಡಿದಾರಿಯ ಬಿಡಿಸುವುದೆನ್ನಯ ।
ಸಾಹಸಸಾಹಸವೆನ್ನುವುದು ॥೨॥

ಏನೆಲೊ! ವೀರನಿ ನೀನೆಲ್ಲಿರುತಿಹೆ?
ಕಾನನವಿದು ಬಹುವಿಸ್ತಾರ ॥
ಮಾನಿಗಳೆಲ್ಲರು ಹುಡುಕುತ್ತಿರುವರು ।
ಕಾಣುವುದಿಲ್ಲನೆ? ರಣಧೀರ! ॥೩॥

ಆಕಾಶದಿಂದ—ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ!

ಜನರಿಂದ—ಬಾರಿ ಜಯಘೋಷವದೇನಚ್ಚರಿಯ್ಯೆ!
ಕರೆದರು ಬಯಲಿಗೆ ಬರದಿರುವೆ!

ಆಕಾಶದಿಂದ—ನರರೇ ಕೇಳಿರಿ ನಾಸ್ತಿಕಯುಗದೊಳ ।
ಗಿರಲಾರದೆ ಮರೆಯಾಗಿರುವೆ ॥೪॥

ಜನರಿಂದ—ವೇದಾಗಮ ನಿಂದೆಯು ಹೆಚ್ಚಾದುದು ।
ಪಾದಿಸುವರು ದುರ್ಮಾರ್ಗಿಗಳು ॥
ಸಾಧುಗಳೆಲ್ಲರು ಮರುಗುತ್ತಿರುವರು ।
ಮೇಧಾವಿಯೆ! ಮರೆಯಾಗದಿರು ॥೫॥

ಆಕಾಶದಿಂದ – ನಾ ಪರಿಯಾವತರಿಸೆನ್ನೈ! ನಿಸ್ಸಂಶ ।
ನೇಮವ ಬಿಡದಾಚರಿಸುತಿರಿ!
ಸೀಮೆಯೊಳೆನ್ನಯ ಸತ್ಕೃತಿಕೀರ್ತಿಯ ।
ಪೇಮಾಕ್ಷರದೊಳು ಬರೆದಿರಿರಿ! ॥೬॥

ಹೇಳಿದ ವಾಕ್ಯವ ಬರೆದಿಹ ಲೇಖನ ।
ಮೇಳುಗೊಳಿಸಿ ಮುದ್ರಿಸಿಬಿಡಿರಿ ॥
ನಾಳೆಯೆ ಹಂಡಿರಿ ನೀವ್ರಗಳೆಲ್ಲನು ।
ಕೇಳುತ್ತೆಲ್ಲವ ಅವರೊಳವೆ ॥೭॥

ನಾನೆಲ್ಲಿಯು ಹೋಗಲಲ್ಲಿಯು ।
ಸ್ವಾನುಭವಕ್ಕಾಗಡಗಿರುವೆ ॥
ಜ್ಞಾನಿಜಗದ್ಗುರು ಪಂಚಾಚಾರ್ಯರ ।
ಧಾನುಪಕಾಕೆಯ ಹಿಡಿದಿರುವೆ ॥೮॥

ಕರೆಯಿರಿ ಬದುನಿನು ತೆರೆರಿ ಮನೆಯನು ।
ಮರೆಯಲು ಬೇಡಿರಿ ಧರ್ಮವನು ॥
ಪರರಾಡುವ ಗುದುನಂದಿಯ ಕೇಳಿಯು ।
ತಿರುಗುವ ಮೂಢರ ಬೋಧಿಸಿರಿ ॥೯॥

ನೇಪವ ನಿಂದಿಸಿ ಚೀರುವ ಮರುಳರ ।
ಕೋಧಿಸಿ ತನ್ನಿರಿ ಎನ್ನೆಡೆಗೆ ॥
ಪಾವಿಸದೇಡಿರಿ ನಾನೊರೆದಿರುವಾ ।
ಹಾದಿಯನವರಿಗೆ ತೋರಿಸಿರಿ ॥೧೦॥

ವೀರಭಗತಸಿಂಗನು ಸ್ವಾತಂತ್ರ್ಯಕೆ ।
ಧಾರೆಯನೆರೆದಿಲ್ಲನೆ! ತನುವ ॥
ಸಾರಿರಿ ಹಂಗುರ ಮಾಡಿರಿ ಘೋಷವ ।
ತೋರುವೆನಲ್ಲಿಯೆ ನಮಗರುವ ॥೧೧॥

ಅಕ್ಕರಕನಂತಪಂಚಾಕ್ಷರಿಗಳು ।
ದಿಕ್ಕುದಿಕ್ಕಿನೊಳಗುದಿಸಿಹರು ।
ಮುಕ್ಕಣ್ಣನ ದಯೆಯಿಂದಲಿ ನಿಮ್ಮಯ ।
ದುಕ್ಕವನಡಗಿಸಿ ಕಾಯುವರು ॥೧೨॥

ಜನರಿಂದ—ಸರಿಸರಿ ಬರುವೆವು ನಿನ್ನನು ಮರೆಯುವ ।
ವರುವರುಷದಿ ಸ್ವಾಗತಿಸುವೆವು ॥
ಪರುಷದೆ ಪಂಚಾಚಾರ್ಯಆಯಂತಿಗೆ ।
ಕರೆಯಿಸಿ ನಿನ್ನನು ಮೆರೆಸುವೆವು ॥೧೩॥

ನಿನ್ನ ಭಮಾನವನೆಮ್ಮೊಳು ಕರುಣಿಸು ।
ಸನ್ನುತಸಾಗಿಹೆ ಲೋಕದೊಳು ॥
ಘನ್ನಜಗದ್ಗುರು ಪಂಚಾಚಾರ್ಯರ ।
ಉನ್ನತಕೀರ್ತಿಯ ಪಾಡುವೆವು ॥೧೪॥

ಮೈಸೂರಿನಲ್ಲಿ "ಇಂಡಿಯನ್ ಬ್ಯಾಂಕ್" ಎಂಬುದರ ಉಪಶಾಖೆಯೊಂದು ಶೀಘ್ರದಲ್ಲೇ ಸ್ಥಾಪಿಸಲ್ಪಡುವುದೆಂದು ತಿಳಿದು ಬರುತ್ತದೆ. ಅನೇಕ ಲಕ್ಷಾಂತರ ರೂಪಾಯಿಗಳ ಬಂಡವಾಳದಿಂದ ಇದು ನಡೆಯಲ್ಪಡುವುದು. ವ್ಯಾಪಾರ ಸ್ಥರಿಗೆ ಬೇಕಾದ ಸಕಲ ಸೌಕರ್ಯಗಳೂ ಇಲ್ಲಿ ಕೊಡಲ್ಪಡುವುದೆಂದು ತಿಳಿದು ಬಂದಿದೆ.

ಲಿಂಗಧಾರಣ ವಿಧಿ.

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದವರಿಗೆ ಈ ವಿಧಿಯು ಮುಖ್ಯವಾಗಿರುವದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮಠಾಧಿಕಾರಿಗಳು ಈ ಗ್ರಂಥವನ್ನು ಕರಿಸಿಕೊಂಡು, ಇಬರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಬೆಲೆ ೪ ಆಣೆ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಜರ್ಮನರು ಹೊಸ ಯುದ್ಧ ನೌಕೆಗಳನ್ನು ಕಟ್ಟುತ್ತಿದ್ದಾರೆ

ಬ್ರಿಟಿಷ್ ಅಧಿಪತ್ಯದಲ್ಲಿ ಎಷ್ಟು ಸಬ್‌ಮೆರೀನ್ ನೌಕಾಬಲವಿದೆಯೋ ಅಷ್ಟು ಬಲವನ್ನು ತಾವೂ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಹೊಸ ನೌಕೆಗಳನ್ನು ಕಟ್ಟಲಾರಂಭಿಸುವರೆಂದು ಪ್ರಕಟವಾಗಿದೆ. ಈಗ ಕಟ್ಟುತ್ತಿರುವ 10 ಸಾವಿರ ಟ್ಗ ಬಾರದ 2 ನೌಕೆಗಳನ್ನು ಶ್ರೇಷ್ಠ ನೌಕಾಬಲ ಕ್ಕನುಗುಣನಾದ ರೀತಿಯಲ್ಲಿ ಕಟ್ಟಲಾಗುವದಂತೆ!

ಸೈನಿನ ಪ್ರಧಾನರು ಫ್ರಾನ್ಸಿಗೆ ಬಂದಿದ್ದರು

ಸೈನಿನ ಮಹಾ ಪ್ರಧಾನರಾದ ಶ್ರೀ ನೆಗ್ರಿನರವರು ಡೆಗುಲ್ಲಾನ ಮತ್ತು ಲಿಂಕೆಲಾಸ್ ಎಂಬ ಪ್ರದೇಶಗಳಲ್ಲಿ ತಮ್ಮ ಗಡಿಯನ್ನು ದಾಟಿ ಫ್ರಾನ್ಸ್ ದೇಶಕ್ಕೆ ಬಂದಿದ್ದರೆಂದೂ, ಫ್ರಾನ್ಸಿನ ಅಧಿಕಾರಿಗಳೊಡನೆ ಮಾತುಕತೆ ನಡೆಸಲು ಅವರು ಹಲವು ಸಾರಿ ಫ್ರಾನ್ಸ್ ದೇಶಕ್ಕೆ ಗೋಸ್ಕರವಾಗಿ ಬಂದಿದ್ದರೆಂದೂ ಹೇಳಲಾಗಿದೆ.

ಸುಶಿಕ್ಷಿತ ನಿರುದ್ಯೋಗಿಗಳಿಗೆ ಸಹಾಯ

ಮದರಾಸ್ ಪ್ರಾಂತ್ಯದಲ್ಲಿರುವ ಸುಶಿಕ್ಷಿತರಾದ ನಿರುದ್ಯೋಗಿಗಳಿಗೆ ಯಾವರೀತಿ ಸಹಾಯ ಮಾಡಬೇಕೆಂಬುದನ್ನು ಅಲ್ಲಿಯ ಸರ್ಕಾರದವರು ಪರಿಶೀಲಿಸುತ್ತಿದ್ದಾರೆ. ಕೆಲಸವಲ್ಲಿರುವ ಪದವೀಧರರುಮೇಲೆ ಪ್ರತಿ ವರ್ಷ ಒಂದು ರೂಪಾಯಿನಂತೆ ತೆರಿಗೆ ಹಾಕಬೇಕೆಂದು ಬಂದಿರುವ ಸೂಚನೆಯೂ ಪರಿಶೀಲಿಸಲ್ಪಡುತ್ತಿದೆ ಎಂದು ಮದರಾಸ್ ಕೂಲಿಗಾರ ಖಾತೆಯ ಸಚಿವರು ಕೌನ್ಸಿಲ್ ಸಭೆಯಲ್ಲಿ ಹೇಳಿದರು.

ಯೋಗೀಶ್ವರ ಅರವಿಂದಘೋಷರ ಯೋಗ ಮತ್ತು ಅದರ ಉದ್ದೇಶ

ಪೂರ್ಣಯೋಗದ ಗುರಿಯು ವೈಯಕ್ತಿಕ ಮೋಕ್ಷವಾಗಿರದೆ ಸಮಸ್ತ ಮಾನವಕೋಟಿಯ ದಿವ್ಯಜೀವನದ ಉದಯನೇ ಅದರ ಉದ್ದೇಶವಾಗಿದೆ

ಅಜ್ಞಾನದ ಆನಂದವನ್ನು ಭೋಗಿಸುವ ಇಚ್ಛೆಯುಂಟಾದಾಗ ದೇವನು ಜಗತ್ತಿನಲ್ಲಿ ವಿಷಮ ಪರಿಸ್ಥಿತಿಯನ್ನುಂಟುಮಾಡುತ್ತಾನೆ

ಅಂಥ ಕಾಲದಲ್ಲಿಯೂ ದಿವ್ಯ ಜೀವನದ ಮೂಲಸೂತ್ರವನ್ನು ಎಲ್ಲಿಯಾದರೂ ಒಂದು ದೇಶದಲ್ಲಿ ಕಾಯ್ದಿಡುತ್ತಾನೆ ನಿಶ್ಚಿತಪಕ್ಷಕ್ಕೆ ಚತುರ್ಯುಗಗಳಿಂದಲೂ ಹಿಂದುಸ್ಥಾನಕ್ಕೆ ಆ ಪಟ್ಟವು ಬಂದಿದೆ

ಸತ್ಯಸ್ಥಿತಿಯ ಅಭಿವೃದ್ಧಿಯು ಜಗತ್ತಿನಲ್ಲಿ ಉಂಟಾಗಬೇಕಾದಂಗ ಹಿಂದುಸ್ಥಾನದ ಯೋಗಿಗಳು ಮಾನವ ಕೋಟಿಯು ಜೀವನ ಕ್ಷೇತ್ರದಲ್ಲಿ ಕಾಲಿಡುವರು ಆದರೆ ಆದರ ಹ್ರಾಸಕಾಲದಲ್ಲಿ ಅವರು ಜೀವನಕ್ಕೆ ವಿಮುಖರಾಗಿರುವರು

ಸತ್ಯಸ್ಥಿತಿಯ ಚತುರ್ಯುಗಗಳ ಕ್ರಮದಿಂದ ಹ್ರಾಸವೃದ್ಧಿಗಳನ್ನು ಹೊಂದುವದು ಕಲಿಯುಗವು ಪರಮ ಹ್ರಾಸದ ಕಾಲವಾಗಿದ್ದರೂ ಕೃಷ್ಣಯುಗದ ಪೂರ್ವಸಿದ್ಧತೆಯು ಕಾಲವು ಇದೇ ಆಗಿದೆ

ದಿವ್ಯಸತ್ಯ ಹಾಗು ನಿಜಸಾಮರಸ್ಯಗಳ ಪುನಃ ಪ್ರತಿಸ್ಥೆಯನ್ನು ಹುಡುಕುವುದು ಮಾತ್ರ ಮಾಡಬಲ್ಲದಾಗಿದೆ ಮನಸ್ಸಿನ ಹೊರಗಿನ ಯಾವ ಬದಲಾವಣೆಗಳಿಂದಲೂ ಅದು ಶಕ್ಯವಿರದೆ ಮಾನವನ ಸಂಪೂರ್ಣ ಜೀವಸತ್ತೆಯ ಒಳಗಿನಿಂದ ಬರಬೇಕು ಮಾತ್ರ ಅದು ಸಾಧ್ಯವದೆ ಇದಕ್ಕೆ ಆತ್ಮಸಮರ್ಪಣ ಯೋಗವೇ ಪರಮೋಪಾಯ ಪ್ರಸ್ತುತ ಇನ್ನುಳಿದ ಯಾವ ಯೋಗಗಳಿಂದಲೂ ಆ ಧ್ಯೇಯವು ಸಾಧಿಸದ

ಪೂರ್ಣಯೋಗದ ಮೂಲಸೂತ್ರವು—ಸಗುಣ ನಿರ್ಗುಣ ಪರಬ್ರಹ್ಮದ ಸರ್ವಾಂತರ್ಯಾಮಿತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವದು

ಆತ್ಮಸಮರ್ಪಣವು ಸರ್ವಾಂತರ್ಯಾಮಿಯ ಸಿರಬೇಕಾದದ್ದೇ ಈ ಯೋಗದ ಮುಖ್ಯ ಸಾಧನವು

ಮಾನವನು ಈ ಯೋಗದಲ್ಲಿ ತನ್ನ ಅಲ್ಪವಿಷಯದಿಂದ ನಡೆಯಬೇಕಿಲ್ಲ ದೇವನ ಸಮಸ್ತ ಸನಾತನ ಸಾಮರ್ಥ್ಯವಿಶೇಷಗಳ ಪೂರ್ಣಯಾವ ಸಾಮರ್ಥ್ಯವನ್ನು ಸಹ ಸಿದ್ಧಿಸಿಕೊಳ್ಳಬೇಕಾದರೂ ಪೂರ್ಣಯೋಗದ ಪ್ರಾರಂಭದಲ್ಲಿ ಇದಕ್ಕೆ ಅವಶ್ಯವಿರುವ ಪ್ರಾಥಮಿಕ ಸಾಧನೆಯ ಪ್ರಕಾರವು

ಪೂರ್ಣಯೋಗದ ಮೆಟ್ಟಿಲುಗಳು—(೧) ಆತ್ಮಸಮರ್ಪಣದ ಸಕಲವು ಪ್ರಕಾಶನ ಸಾಧನವಾಗಿದೆ ಮಾನವನು ತನ್ನ ಸಮಸ್ತ ಸತ್ತೆ ವಿಭಿನ್ನಗಳನ್ನೆ ಸಂಪೂರ್ಣವಾಗಿ ಸಮರ್ಪಿಸಲಿಕ್ಕೆ ಬೇಕು ದೇವನ ಚೈತನ್ಯವು ತನ್ನಲ್ಲಿ ಅವತರಿಸಲಿಕ್ಕೆ ಬೇಕು ಎಂಬ ದೊಂದೆ ಆತನ ಅಕಾಂಕ್ಷೆಯಾಗಿರಬೇಕು

(೨) ಸಾಧಕನ ಒಳಗಿನ ಅಸಿರಿ ಸ್ಥಿತಿಯ ಅಸಾಮ್ಯ ಆಶುದ್ಧಿಗಳನ್ನು ವಿಶ್ವಶಕ್ತಿಯ ಜ್ವಾಲೆಯಿಟ್ಟು ಹೊರದೂಡಿಹತ್ತುವದರಿಂದ ಬಹಿ ವಿಧದ ದೈಹಿಕ ಮಾನಸಿಕ ಅಸ್ವಸ್ಥತೆಗಳು ಆ ಕಾಲದಲ್ಲಿ ಉಂಟಾಗುವದು ಅನಿವಾರ್ಯವಾಗಿರುವದರಿಂದ ಆಗ ಸಾಧಕನು ಧೈರ್ಯದಿಂದ ಸಾಕ್ಷಿಭಾವದಿಂದ ಇರಬೇಕಾದದ್ದು ಇದೇ ಎರಡನೇ ಮೆಟ್ಟಿಲು ವಿಶ್ವ ಸಂದೇಶವೇ ಈ ಯುಗದ ಮುಖ್ಯ ಆಶಯವಾಗಿರುವದರಿಂದ ಅದು ಹಡಿಕೆ ಹಾಕಿದ ಕಾಲದಲ್ಲಿ ಧೀರತನವೂ ಸತ್ಯಾರ್ಪಣ ಸಮರ್ಪಣಕ್ಕೆ ಸಹಾಯಕಗಳಾಗಿವೆ ಗೀತೆಯಲ್ಲಿ ಹೇಳಿದ 'ಮಾಮೇಕಂ ಶರಣಂವ್ರಜ ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚ' ಎಂಬ ಮಾತನ್ನು ಮರೆಯದಿರು

ಸಾಕ್ಷೀಭಾವಕ್ಕೆ ತನ್ನನ್ನು ತಾನು ಅರಿಯುವ ಆಗತ್ಯವಿದೆ ಚಿತ್ತವೂ, ಮನಸ್ಸೂ, ಬುದ್ಧಿಯೂ, ಅಹಂಕಾರವೂ ಪುರುಷನ ಅಧಾರಗಳ ಪರಿಚಿತ ವಿಭಾಗಗಳಾಗಿವೆ ಬುದ್ಧಿಯಮೇಲೆ ಇನ್ನೂ ದಿವ್ಯಬುದ್ಧಿ ಅಥವಾ ವಿಜ್ಞಾನ ಮತ್ತು ಆನಂದ ಮುಂತಾದ ಅಪರಿಚಿತ ವಿಭಾಗಗಳೂ ಇವೆ ಅವುಗಳಲ್ಲಿ ನಮಗೆ ಜಾಗ್ರತಿಯುಂಟಾಗಬೇಕು ನಮ್ಮ ಜೀವನವೆಲ್ಲ ಆ ಕೇಂದ್ರಗಳಿಂದ ನಡೆಯಬೇಕು ಇದೇ ಆ ಪೂರ್ಣಯೋಗದ ಪರಮಾವಸ್ಥೆ

(೩) ಈ ಯೋಗದ ಮೂರನೆ ಮೆಟ್ಟಿಲೆಂದರೆ ಸರ್ವವಸ್ತುಗಳನ್ನು ದೇವರೆಂದು ಗ್ರಹಿಸುವದು. ಮೊದಲಿಗೆ ನಾಮರೂಪಗಳಿಂದ ಅತೀತವಾದ ಒಂದು ಸರ್ವಾಂತರ್ಯಾಮಿ ತತ್ವವು ಗೋಚರವಾಗುವದು ಆಗ "ಬ್ರಹ್ಮಸತ್ಯಂ ಜಗನ್ಮಿಥ್ಯಾ" ಎಂಬ ಅನುಭವವು ಬರುವದು ಅನಂತರ ನಮ್ಮ ಅತ್ಯವಿಕಾಸದ ಪ್ರಗತಿಯು ಮುಂದುವರಿದ ಹಾಗೆ ಜಗತ್ತೂ ಕೂಡ ಪರಬ್ರಹ್ಮದ ಸತ್ಯಪ್ರಕಟನೆಯೆ ಆಗಿದೆಯೆಂದು ಅನುಭವವಾಗುವದರಿಂದ "ಸರ್ವಂಖಲ್ವಿದಂಬ್ರಹ್ಮ" ಎಂಬ ತತ್ವಕ್ಕೆ ಮೆಟ್ಟುವೆವು. ಆಗ "ಆತ್ಮಾನಂ ಸರ್ವಭೂತೇಷು ಸರ್ವಭೂತಾನಿ ಚಾತ್ಮನಿ" ಎಂಬ ಅನುಭವವು ನಮಗೆ ಸಾಭಾವಿಕವಾಗುವದು ಆದರೆ ಇಷ್ಟಕ್ಕೇ ಮುಗಿಯುಲಿಲ್ಲ ಸಮಸ್ತವೂ ಈಶ್ವರನ ದಿವ್ಯಲೀಲೆಯೆಂದು ಅನುಭವವಾಗುವುದು ಈ ಯೋಗದ ಚರಮಾವಸ್ಥೆಯಾಗಿದೆ

ಆದರೆ "ಬ್ರಹ್ಮಸತ್ಯಂಜಗನ್ಮಿಥ್ಯಾ" ದ ಜಾತಿಯ ಅನುಭವಕ್ಕೆ ನಿಂತು ಬಿಟ್ಟರೆ ಕೊನೆಗೆ ಬೌದ್ಧರ ಮಹಾಶೂನ್ಯದ ಸ್ಥಲವು ಹತ್ತುವದು ಆದರೆ ನಮಗೆ ಇವೆರಡನ್ನೂ ಮೀರಿರುವ ಅಗಾಧ ಈಶ್ವರನನ್ನು ಸಾಕ್ಷಾತ್ಕರಿಸಿ ಕೊಳ್ಳುವುದು ಅಗತ್ಯವಾತದೆ

ಮೂರನೆ ಮೆಟ್ಟಿಲಲ್ಲಿ ನಡೆಯತಕ್ಕ ಸಾಧನ ಕ್ರಮದಲ್ಲಿ, ಸರ್ವವಸ್ತುಗಳಲ್ಲಿ ಸರ್ವಾಂತರ್ಯಾಮಿತ್ವವನ್ನು ಅನುಭವಿಸುವುದ ಆ ಸರ್ವ ವಸ್ತುಗಳೆಂದರೆ ಮೊದಲಿಗೆ ಚರಾಚರಜೀವ ವಸ್ತುಗಳಾಗಿದ್ದು ಮುಂದೆ ನಿಜೀವ ವಸ್ತುಗಳಲ್ಲಿಯೂ ನಾವು ಸರ್ವಾಂತರ್ಯಾಮಿತ್ವವನ್ನು ಅನುಭವಿಸುವೆವು ಅಷ್ಟಕ್ಕೆ ಸಾಲದ—ಸರ್ವ ಆಗುಹೋಗುಗಳಲ್ಲಿಯೂ ಆತನನ್ನು ಅನುಭವಿಬೇಕಾಗಿದ್ದು ಈ ಪ್ರತಿಯ ಸಾಧನೆಯ ಪರಮಾವಸ್ಥೆಯು

ಇವುಗಳಲ್ಲಿ ಜಡವಾಗಿದೆಯೆಂದು ಕಾಣುವ ವಿಶ್ವವು ನಿಜವಾಗಿಯೂ ಜಡವಾಗಿರದೆ ಅದು ಚೈತನ್ಯಮಯವಾಗಿದೆಯೆಂಬ ಅನುಭವವು ನನಗೆ ಬಂದಾಗ "ಕೋಮೋಹಃ ಕಃ ಶೋಕಃ' ಎಂಬ ಅವಸ್ಥೆಯು ಸಹಜವಾಗಿ ಬಿಡುವದರಿಂದ ನಿರಾಸಂಗ ಬ್ರಾಹ್ಮೀ ಸ್ಥಿತಿಗೆ ಬರುವೆವೆ

ನಮ್ಮ ಆತ್ಮನ ವಿಶ್ವತ್ವವೂ ದೇವನ ಸರ್ವಾಂತರ್ಯಾಮಿತ್ವವೂ ನಮಗೆ ಸಜೀವ ವಸ್ತುಗಳಲ್ಲಿಯಷ್ಟೆ ಅಲ್ಲದೆ ನಿಜೀವ ವಸ್ತುಗಳಲ್ಲಿಯೂ ಉಂಟಾಗಬೇಕಿದೆ ಆದರೆ ಅದು ಆಗಲು ಸಂಸ್ಕಾರಮಯ ಜಡದೃಷ್ಟಿಗೆ ಆಗದೆ ಆತ್ಮದ ಪ್ರಕಾಶಮಯವಾದ ಒಣದೃಷ್ಟಿಯಾಗಬೇಕು ಆಗ 'ಈಶಾವಾಸ್ಯಮಿದಂ ಸರ್ವಂ' ಎಂಬ ಅನುಭವಕ್ಕೆ ಬರುವೆವು

ದೇವನನ್ನು ಸರ್ವವಸ್ತುಗಳಲ್ಲಿ ಮತ್ತು ಸರ್ವವ್ಯಾಪಿಗಳಲ್ಲಿ ಕಾಣಿಸಲಿಕ್ಕೆ ಸಾಲದು ಈ ಜಗತ್ತಿನಲ್ಲಿ ಸ್ವತಃ ಸಿದ್ಧವಾಗಿರುವ ಮೂರು ಅನ್ಯೋನ್ಯರಿಗೆ ನಡೆಯುವ ಸಮ್ಮಾಷಣೆಗಳ ಕೃತಿಗಳು, ವಿಚಾರಗಳು, ಅನುಸಿಸಿಕೆಗಳು ಇವುಗಳಲ್ಲೆಲ್ಲ ಆತನನ್ನು ಕಾಣಲಿಕ್ಕೆ ಬೇಕು ಇದಕ್ಕೆ ಎರಡು ಮಾತಿನ ಆಗತ್ಯವಿದೆ ನಿನ್ನ ಸರ್ವ ಕೃತಿಗಳ ಫಲವನ್ನು ಆತನಿಗೆ ಬಿಟ್ಟುಕೊಡುವುದು ಒಂದು. ನಿನ್ನ ಸರ್ವ ಕೃತಿಗಳ ಹೊಣೆಯನ್ನು ಆತನಿಗೆ ಬಿಟ್ಟುಕೊಡುವುದು ಎರಡನೆಯದು ಹೀಗೆಂದರೆ ಫಲದ ನಿಷಯಲ್ಲಿ ನಿರ್ಲಕ್ಷ್ಯವುಂಟಾಗಬೇಕೆಂದಲ್ಲ ಆದರೆ ಹಾಗೆ ಅನ್ನದೆ ನಿನ್ನ ಜೀವನದೊಡೆಯನ ಅಪೇಕ್ಷೆಯಿಂದ ಕರ್ತವ್ಯವೆಂದು ಕಾರ್ಯವನ್ನೆಸಗುತ್ತ ದೇವನಿಷ್ಠೆಯಿಂದ ಬಾಳಿದ ಫಲಕ್ಕೆ ಸಮರ್ಪಿಸುತ್ತ ಇರಬೇಕು ನಿನ್ನ ಇಷ್ಟಕ್ಕೆ ಬಿಟ್ಟಿದ್ದನ್ನ ಬದಿಗೊತ್ತಿ ದೇವನಿಷ್ಟೆಯೆಂಬ ದನ್ನ ಅರಿತುಕೊಳ್ಳಲಿಕ್ಕೆ ಇಚ್ಛಿಸು ನಿನ್ನ ಕರ್ತವ್ಯಾನ ಸ್ಥಳಸಂರಚನೆಗಾಗಿ ಯಾವುದು ಅಗತ್ಯವಾದದ್ದೋ ಯಾವುದ ಸರಿಯಾದದ್ದೋ ಅದು ತಾನಾಗಿಯೆ ಆಗಬೇಕದು. ಜಗತ್ಸೆಲ್ಲ ಆಳುವ ಮಹಾಶಕ್ತಿಗೆ ಕಾಪ್ಯಶಕ್ತಿಗೆ ನಿನ್ನಚ್ಚರಿಯೂ ಬುದ್ಧಿ ಇದೆ ನಿನ್ನ ಸಿದ್ಧಿಶಕ್ತಿ ಆಗಬೇಕಿಲ್ಲ

ಆದರೆ ಕರ್ತವ್ಯವೆಂದರೇನು? ಡ್ಯೂಟಿ ಎಂದು ಕೆಲವರು ಹೇಳಿಯಾರು, ಆದರೆ 'ಡ್ಯೂಟಿ'ಯೆಂದರೆ ಜನಗಳು ಯಾವುದಕ್ಕೆ ಸರಿಯಾದುದ್ದೆಂದೂ, ನಿಂತಿಕರವಾದದ್ದೆಂದೂ ತಿಳಿದಿದ್ದಾರೆಯೋ, ಅಥವಾ ಜನಾಂಗಕ್ಕೆ ರಾಷ್ಟ್ರಕ್ಕೆ ಅಥವಾ ಮಾನವಕೋಟಿಗೆ ಹಿತಕರವಾದದ್ದೆಂದೂ ಸರಿಯಾದದ್ದೆಂದೂ ಭಾವಿಸುವರೋ ಅಂಥಾದ್ದನ್ನು ಮಾಡುವುದಕ್ಕೇ ಡ್ಯೂಟಿ ಎಂಬ ಹೆಸರು. ಇದರಿಂದ ಮನುಷ್ಯನ ಸ್ವೇಚ್ಛವೃತ್ತಿಗೆ ಪ್ರತಿಬಂಧವುಂಟಾಗಿ ಆತನು ಸದ್ಗ್ರಹಸ್ಥನಾಗಬಹುದೇ ಹೊರತು ಯೋಗದ ಪೂರ್ಣತೆಗೆ ಅವನು ಮುಟ್ಟಲಾರನು ಯಾಕಂದರೆ ಇಲ್ಲಿ ಮನುಷ್ಯನು ಗುಣಗಳಿಗೆ ಅಧೀನನಾಗಿ ಉಳಿಯುವನೇ ಹೊರತು ತ್ರಿಗುಣಾತೀತನಾಗುವದಿಲ್ಲ ಅರ್ಜುನನು ಇಂಥ ಸದ್ಗುಣದ ಮೂಲಕವಾಗಿಯೇ ಯುದ್ಧ ಮಾಡುವದಕ್ಕೆ ನಿರಾಕರಿಸಿದನು ಆದರೆ ಅವನ ಯುಕ್ತಿಗೆ ವಿರೋಧವಾಗಿ ಶ್ರೀ ಕೃಷ್ಣನು ಎರಡು ವಿಚಾರಗಳನ್ನಿಟ್ಟನು ಒಂದು ಕಿಡಿಮೆಯದು, ಒಂದು ಹೆಚ್ಚಿನದು. ಬದ್ಧರಾಗಿದ್ದರೂ ಮೋಕ್ಷವನ್ನು ಅಪೇಕ್ಷಿಸುವವರಿಗಾ ಮೊದಲನೆಯದು, ಸಂಪೂರ್ಣ ಮುಕ್ತರಿಗಾಗಿ ಎರಡನೇದು ಮೊದಲನೆಯದು ಶಾಸ್ತ್ರ, ಎರಡನೆಯದು ಸಂಪೂರ್ಣ ಸಮರ್ಪಣ (ಕರ್ಮ ಹಾಗು ಕರ್ಮಫಲಗಳ ಸಮರ್ಪಣ)

ಶಾಸ್ತ್ರವು ಮನುಷ್ಯರನ್ನು ಸ್ವೇಚ್ಛಾಚಾರದಿಂದ ದೂರ ನಿಲ್ಲಿಸಿ ಕೆಲಮಟ್ಟಿಗೆ ಮೋಕ್ಷಾಧಿಕಾರಿಗಳನ್ನಾಗಿ ಮಾಡುವದು ಪೂರ್ವಕಾಲದಲ್ಲಿ ಮಾನವನ ಮನೋಧರ್ಮವನ್ನೂ ಜಗತ್ತಿನ ನಿಯಮಗಳನ್ನೂ ಅವಲಂಬಿಸಿದ ವೇದಧರ್ಮವು ಶಾಸ್ತ್ರವಾಗಿತ್ತು. ಆದರೆ ಮುಂದೆ ಅದು ಸ್ಥೂಲಸ್ವರೂಪದ ಸ್ಮೃತಿಧರ್ಮವಾಯಿತು ಮಧ್ಯಕಾಲದ ಚತುರ್ವರ್ಣರಚನೆಯು ಈಗ ಅಂಧಚಕ್ರವಾಗಿ ಮೋಕ್ಷಕ್ಕೆ ಬದಲು ಮಾನವನ ತಪೋಭಾವಕ್ಕೆ ಕಾರಣವಾಗಿದೆ ಶಾಸ್ತ್ರವು ಮನುಷ್ಯನಿಗೆ ಮುಕ್ತತ್ವದ ಸ್ಥೈರ್ಯ ಪೂರ್ವಸಿದ್ಧತೆಯನ್ನು ಮಾತ್ರ ಮಾಡಿಬಿಡುತ್ತದೆ ಶಾಸ್ತ್ರವು ಶಬ್ದಬ್ರಹ್ಮವಾಗಿದೆ ಆದರೆ ನಮಗೆ ಮುಕ್ತತೆಯ ಪೂರ್ವಸಿದ್ಧತೆಯಷ್ಟಕ್ಕೇ ತೃಪ್ತಿಯಾಗಬೇಕಾಗಿಲ್ಲ ಪ್ರತ್ಯಕ್ಷ ಮುಕ್ತತೆ ಬೇಕು ಇಂಥ ಅವಸ್ಥೆಯಲ್ಲಿ ಸಾಧಕನು ಸಮರ್ಪಣವನ್ನು ಸ್ವೀಕರಿಸಿ ಶಾಸ್ತ್ರವನ್ನು ದಾಟಿಬಿಡುತ್ತಾನೆ "ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ" ಇದೇ ಶ್ರೀಕೃಷ್ಣನ ಕೊನೆಯ ವಿಚಾರವಾದ ಸಮರ್ಪಣವು

ಕರ್ಮದ ಸಂಪೂರ್ಣ ಸಮರ್ಪಣವು ನೆಲೆಗೊಳ್ಳಬೇಕಾದರೆ ನಮ್ಮ ಕರ್ಮಗಳನ್ನೆಲ್ಲ ದೇವನಾಜ್ಞೆಯಿಂದ ಪ್ರಕೃತಿಯೇ ಮಾಡುತ್ತಾಳೆಂಬ ಅನುಭವವು ಬರಬೇಕಾಗುವದು ಆಗ ನಮ್ಮ ಕರ್ಮಗಳಲ್ಲಿ ಆ ದೇವನಿಗೆ ಸಂಬಂಧಿಸಿಬಿಡುವವು ಆಗ ನಮಗೆ ಕರ್ಮದ ಬಂಧನವಿಲ್ಲ ಈ ಅವಸ್ಥೆಗೆ ಬರುವುದಕ್ಕೆ ಮೂರು ಮೆಟ್ಟಿಲುಗಳಿವೆ

(೧) "ತ್ವಯಾ ಹೃಷೀಕೇಶ ಹೃದಿ ಸ್ಥಿತೇನ ಯಥಾ ನಿಯುಕ್ತೋಸ್ಮಿ ತಥಾಕರೋಮಿ।" "ದೇವಾ, ನನ್ನ ಹೃದಯದಲ್ಲಿದ್ದುಕೊಂಡು ನೀನು ನನ್ನನ್ನು ಹೇಗೆ ಹೇಗೆ ಪ್ರೇರಿಸುವೆಯೋ ಹಾಗೆ ಹಾಗೆ ನಾನು ಆಚರಿಸುವೆನು' ಎಂಬ ಮಾತು ನಮ್ಮ ದೈನಂದಿನ ಜೀವನದಲ್ಲಿ ಯಾವಾಗ ಒಡಮೂಡುವದೋ ಆಗ ಈ ಮೊದಲಿನದು ಮುಗಿದು ಎರಡನೇ ಮೆಟ್ಟಿಲು ಆರಂಭವಾಗುವದು

(೨) "ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ| ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಯಯಾ ॥' ದೇವನು ಸರ್ವ ಪ್ರಾಣಿಗಳ ಹೃದಯದಲ್ಲಿ ನಿಂತು ತನ್ನ ತ್ರಿಗುಣಮಯಿಯಾ ಮಾಯೆಯಿಂದ ಅವುಗಳನ್ನು ಯಂತ್ರಾರೂಢವಾದವುಗಳಂತೆ ತಿರುಗಿಸುವನು ಎಂಬ ಜ್ಞಾನವೇ ಎರಡನೇ ಮೆಟ್ಟಿಲು ಆಗ ನಾವು ನಮ್ಮಲ್ಲಿ ತ್ರಿಗುಣಗಳ ಕ್ರಿಯೆಗಳನ್ನು ಕಂಡುಕೊಳ್ಳುವಿರಿ ಆಗ 'ತಥಾಕರೋಮಿ' ಎಂಬುದಕ್ಕೆ ಬದಲು 'ಗುಣಾ ವರ್ತಂತ ಏವ' ಎಂದು ಅನ್ನುವಿರಿ ಈ ಮೆಟ್ಟಿಲಿನಲ್ಲಿ ಒಂದು ದೊಡ್ಡ ವಿಘ್ನವೇನೆಂದರೆ—ಸಾಧಪುಣ್ಯಗಳ ದ್ವಂದ್ವದಲ್ಲಿ ನೀನು ದಿಕ್ಕುಗೆಡುವಿರಿ ಆದರೆ ಒಂದು ಮಾತು ನೆನಪಿರಲಿ ಆದೇನೆಂದರೆ—ನಿಮ್ಮನ್ನು ನೀವು ಸಂಪೂರ್ಣವಾಗಿ ದೇವನ ಹಸ್ತದಲ್ಲಿ ಸಮರ್ಪಿಸಿದ ಮೇಲೆ ಪಾಪಪುಣ್ಯಗಳ ಪೀಕಲಾಟವು ನಿಮಗೆ ಬೇಡ ಭಗವಂತನು ಗೀತೆಯಲ್ಲಿ ಮಾಡಿದ ಪ್ರತಿಜ್ಞೆಯನ್ನು ನೆನೆ—"ನಮೇ ಭಕ್ತಃ ಪ್ರಣಶ್ಯತಿ" (ನನ್ನ ಭಕ್ತನಿಗೆ ನಾಶವಿಲ್ಲ) ೩ ನೇ ರನೆಯ ಮೆಟ್ಟಿಲಿನಂತರ —ದೇವನನ್ನು ಸಂಪೂರ್ಣ ಅನುಭವಿಸುವದರಿಂದ ಅಥವಾ ದೇವನ ಅನುಗ್ರಹ

ದಿಂದ ತನ್ನಿಂದ ತಾನೇ ಮೂರನೇ ವೆ.ಟ್ಟಲು ಬರುವದು. ಆಗ ಪುರುಷನು ಗುಣಾಗಳಿಂದ ಭಿನ್ನವಾಗಿ ಬರೇ ತ್ರಿಗುಣಾತೀತನಾಗುತ್ತಾನೆಂತಲ್ಲ ಆದರೆ ಪ್ರಕೃತಿಯ ಗುಣಗಳನ್ನೆಲ್ಲ ಬಳಸುತ್ತ ಇದ್ದರೂ ಅವುಗಳ ಬಂಧನದಿಂದ ದೂರವಾಗಿ ಉಳಿಯುತ್ತದೆ. ಈಗಿನ ಸತ್ವವು ಆಗ ಜ್ಯೋತಿರ್ಮಯವಾದ ಜ್ಞಾನವಾಗುವದು ಈಗಿನ ತಮಸ್ಸು ಆಗ ಅನಂತ ಶಾಂತಿಯಾಗುವದು; ಈಗಿನ ರಜಸ್ಸು ಆಗ ದೈವೀತೇಜದ ತಪೋಬಲವಾಗುವದು ಆಗ ಕರ್ಮವು ದೇವನ ಜ್ಞಾನ ಹಾಗು ದೇವನ ಇಚ್ಛೆ ಇವುಗಳನ್ನು ಅನುಸರಿಸಿದ್ದಾಗುವದು ಈ ಅವಸ್ಥೆಗೆ ಮುಟ್ಟುವ ಮುಂಚೆ ಮಾರ್ಗದಲ್ಲಿ ನಿಮಗೆ ಒಂದು ಅನುಭವ ಬರುವದು. ಅದೇನೆಂದರೆ— ನಿಮ್ಮದಲ್ಲದ ಮತ್ತು ಹೇಗಿದಲ್ಲಿಲ್ಲದ ಒಂದು ಶಕ್ತಿಯು (ಅದರೂ ನಿಮ್ಮನ್ನು ನಿನ್ನ ದೇಹವನ್ನು ಆಕ್ರಮಿಸಿದ್ದು) ನಿಮಗಾಗಿ ವಿಚಾರಮಾಡುವದು; ಕರ್ಮಮಾಡುವದು; ಇಷ್ಟೇ ಅಲ್ಲ ನಿಮ್ಮ ದೇಹ, ಮನಸ್ಸು ಮತ್ತು ಹೃದಯ ಮೊದಲಾದವುಗಳು ಆ ಶಕ್ತಿಯಿಂದಲೇ ಮಿಸುಕುವವು ಆ ಶಕ್ತಿಯ ಈ ಕ್ರಿಯೆಗಳಲ್ಲೆಲ್ಲ ನೀವು ದನಂದಪಡುವಿ ಇಷ್ಟೆ ಆದರೆ ಅದರ ಮೇಲೆ ನಿನ್ನ ಬಾಧ್ಯತೆಯಾಗಲಿ, ನಿನ್ನ ಮೇಲೆ ಅದರ ಬಾಧ್ಯತೆಯಾಗಲಿ ಇರಲಾರದು ನಿನ್ನ ಕರ್ಮಗಳೆಲ್ಲ ಇಲ್ಲಿಗೆ ಕರಗುವವು. "ಕರ್ಮಾಣಿ ಸ್ರವಿಲೀಯಂತೆ ಪದ್ಮಪತ್ರಮಿವಾಂಭಸಾ

ನಿನ್ನ ಮನಸ್ಸು, ಹೃದಯ, ಶರೀರ ಮುಂತಾದುವುಗಳು ನಿನ್ನವಾಗಿ ಉಳಿಯಲಾರವು. ಆಗ ಅವು ಕೇವಲ ದೇವನವು ನೀನು ದೇವನ ಕಾರ್ಯದ ಒಂದು ಜ್ಞಾನಮಯವಾದ ಆನಂದಮಯವಾದ ಸಜೀವ ಆಧಾರ ಕೇಂದ್ರವು ಮಾತ್ರ. ಇದೇ ತಚ್ಛೈತ್ಯ ಅವಸ್ಥೆ, ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯನಲಿಪ್ಯತೇ "ಯಾವನ ಪತ್ತೆಯು ಅಹಂಕಾರದಿಂದ ಸ್ವತಂತ್ರವಾಗಿದೆಯೋ, ಯಾವನ ತಿಳುವಳಿಕೆಯು ಅಲಿಪ್ತವಾಗಿದೆಯೋ" ಎಂದು ವರ್ಣಿಸಲ್ಪಟ್ಟದ್ದೇ ತಚ್ಚೈತ್ಯವಸ್ಥೆ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಯಾವುದಕ್ಕೆ ಬಹಳ ಮಹತ್ವಕೊಟ್ಟದ್ದಾನೆಯೋ ಅಂಥ ಕರ್ಮಸಮರ್ಪಣ ವೆಂಬುದು ಇದೇ. ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮಚೇತಸಾ | ನಿರಾಶೀ ನಿರ್ಮಮೋ ಭೂತ್ವಾ ಯುದ್ಧ್ಯಸ್ವ ವಿಗತಜ್ವರಃ ॥

ಅತ್ಯಂತ ಮಹತ್ವದ ಹಾಗು ಅತ್ಯಂತ ಸಂಪೂರ್ಣವಾದ ಈ ಮುಕ್ತತೆಗೆ ಮೂರು ಮಾತುಗಳ ಅಗತ್ಯವದೆ — ನಿಸ್ಪೃಹತೆ, ನಿರ್ದ್ವಂದ್ವತೆ, ನಿರಹಂಕಾರತೆ. ಅತ್ಮಸಮರ್ಪಣದ ಪ್ರಧಾನ ಶತ್ರುಗಳು ಮೂರು; ಅವು ಯಾವವೆಂದರೆ— ಸ್ಪೃಹಾ, ದ್ವಂದ್ವ, ಅಹಂಕಾರ.

ಸ್ಪೃಹಾ ಅಂದರೆ ವಿಷಯಗಳ ಮೇಲೆ ಆಸೆ. ದ್ವಂದ್ವವೆಂದರೆ ಸುಖ ದುಃಖ ಇತ್ಯಾದಿ ತಾರತಮ್ಯಗಳ ಸಂಸ್ಕಾರ. ಅಹಂಕಾರನೆಂದರೆ—'ನಾನಾ ಕರ್ತಾ' ಎಂಬಭಾವ. ನೀನು ನಿರ್ದ್ವಂದ್ವನಾದರೆ ನಿಸ್ಪೃಹನಾಗಬಲ್ಲಿ. ಆದರೆ ಇದು ಬಿಗಿಯಾದದ್ದೇನೋ ನಿಜವೆ ಯಾಕಂದರೆ ಪ್ರತಿಯೊಂದು ದ್ವಂದ್ವವು ನಮ್ಮ ಮನಸ್ಸಿನಲ್ಲಿ ಒಂದು ಬಗೆಯ ರಾಗದ್ವೇಷಗಳನ್ನು ಹುಟ್ಟಿಸುತ್ತದೆ. ನಮ್ಮ ಮನೋಧರ್ಮವು ಈ ದ್ವಂದ್ವಗಳಿಗೆ ಬಹಳ ಅನುಕೂಲವಾಗಿದ್ದ ದ್ವಂದ್ವ ಪ್ರಕಾರಗಳು (೧) ಹಸಿವು ನೀರಡಿಕೆ, ಶೀತಉಷ್ಣ, ದುಃಖ ಮತ್ತು ಸುಖ ಇವು ದೇಹದ ಮೂಲಕವಾಗಿ ಮನಸ್ಸಿನಲ್ಲಿ ಮೂಡುವವು. (೨) ಜಯ ಪರಾಜಯ, ಸಾಫಲ್ಯ-ನಿಷ್ಫಲತೆ, ಸುದೈವ-ದುರ್ದೈವ, ಹರುಷ-ದುಃಖ, ಪ್ರೇಮ ತಿರಸ್ಕಾರ ಮುಂತಾದುವುಗಳು ವಾಸನೆ ಮತ್ತು ಅಲಸಿಕೆಗಳ ಮುಖಾಂತರ ಮನಸ್ಸನ್ನು ಸ್ಪರ್ಶಿಸುವವು ಪಾಪ-ಪುಣ್ಯ, ಸಯುಕ್ತಿಕ-ಅಯುಕ್ತಿಕ, ಸರಿತಪ್ಪು ಇವು ನೈಯಾಯಿಕ ಬುದ್ಧಿಯ ಮೂಲಕವಾಗಿ ಮನಸಿಗೆ ಗೋಚರವಾಗುವವು.

ದೇವನು ಸರ್ವಾಂತರ್ಯಾಮಿಯಾಗಿದ್ದಾನೆಂಬ ಜ್ಞಾನದಿಂದಲೂ, ಈಶ್ವರನ ಜಾಗತಿಕಕಾರ್ಯ ದೇಶದಲ್ಲಿ ಇವೆಲ್ಲವುಗಳ ಅಗತ್ಯವಿದೆ ಎಂಬ ಜ್ಞಾನದಿಂದಲೂ ನಾವು ಇವುಗಳನ್ನು ಮೆಟ್ಟಿ ನಿಲ್ಲಬಲ್ಲೆವು ಭಕ್ತಿಯಿಂದಲೂ ಗೆದಿಯಬಲ್ಲೆವು. ಆದರೆ ಇಂಥ ಜ್ಞಾನ, ಇಂಥ ಭಕ್ತಿ, ಇಂಥ ಕರ್ಮ ಇವು ಆತ್ಮಸಮರ್ಪಣದ ಸಂಕಲ್ಪದಿಂದಲೂ ಅದರ ಆಚರಣೆಯಿಂದಲೂ ತಪ್ಪದೆ ನೆಲೆಗೊಳ್ಳುವವು.

ದ್ವಂದ್ವಗಳಿಗೆ ನಮ್ಮ ಅಹಂಭೋಧವು ತಳಬೇರಾಗಿದೆ ಈ ಅಹಂಕಾರವು ನಮ್ಮ ಜೀವನದಲ್ಲಿ ಹಾಗು ಸಾಧನದಲ್ಲಿ ಮೂರು ಪ್ರಕಾರದಿಂದ ಕಾಣಿಸಿಕೊಳ್ಳುವದು. ರಾಜಸಿಕ, ತಾಮಸಿಕ, ಸಾತ್ವಿಕ ರಜಸ್ಸಿಗೆ ವ್ಯಾಪಸೆಯೇ ಮೂಲ. ಫಲಾಕಾಂಕ್ಷೆಯೇ ಅದರ ಗುರಿ ನಾವು ಇದರಿಂದ ಮುಕ್ತರಾಗಲಿಕ್ಕೆ ಬೇಕು. ಮಾಕರ್ಮ ಸತ್ವಕ್ಕೆ ಸುಖ ಮತ್ತು ತಿಳುವಳಿಕೆಗಳೇ ಮೂಲ ಆದರೆ ಆ ತಿಳುವಳಿಕೆಗೆ ಅಪೂರ್ಣ ಮತ್ತು ಏಕದೇಶೀಯ ಅನುಭವಗಳೇ ಮೂಲವಾಗಿರುತ್ತವೆ. ಅದರೆ ಇವು ಮಾನವೀಯ ಉತ್ಕ್ರಾಂತಿಪ್ರಕ್ರಿಯೆಗಳೇನೋ ಅಹುದು ಆದರೂ ದೇವನು ಆಜ್ಞೆಮಾಡಿದ ಆತ್ಮ ಸಮರ್ಪಣದ ತತ್ವಕ್ಕೆ ಇವು ಬಾಧಕಗಳಾಗಿವೆ ಗೀತೆಯಲ್ಲಿ ಅರ್ಜುನನು ಕೃಷ್ಣನ ಆಜ್ಞೆಗೆ ಭಿನ್ನಾಭಿಪ್ರಾಯಗಳನ್ನು ತೋರಿಸಿದ್ದು ಈ ಸಾತ್ವಿಕತೆಯ ಫಲದಿಂದಲೇ ಇದು ಮಾನವೀಯ ರೀತಿಯಿಂದ ಎಷ್ಟೋ ಉಚ್ಚತರ ದ್ದಾಗಿದ್ದರೂ ಪೂರ್ಣಯೋಗದ ಸಾಧಕರು ಇದನ್ನು ದಾಟಲಿಕ್ಕೆ ಬೇಕು. (ಶಷೇಷ)

ಹೊಸಹೇಟೆಯಲ್ಲಿ ಶ್ರೀ ವಾಗೀಶಶಿವಾಚಾರ್ಯರ ಧಾ ಪ ಣ.

ತಾ॥ ೨೩-೧-೩೯ನೆಯ ಸೋಮವಾರ ಮತ್ತು ೨೪ ಮಂಗಳವಾರ ಹೊಸಪೇಟೆಯ ಪುರಪ್ರಮುಖರ ಕೋರಿಕೆಯಂತೆ ಮುದೇನೂರು ಬ್ರಹ್ಮನ್ಮಠದ ವರಕವಿ ಶ್ರೀ ವಾಗೀಶಶಿವಾಚಾರ್ಯರು "ವೇದಾಂತವಾಙ್ಮಯ" ಎಂಬ ವಿಷಯದಮೇಲೆ ಅತ್ಯುತ್ಕೃಷ್ಟವಾದ ವ್ಯಾಖ್ಯಾನವನ್ನು ಕ್ರಮ ಸಭೆಯು ೧ ದಿನ ಸರ್ವೇಶ್ವರ ದೇವಸ್ಥಾನದಲ್ಲಿಯೂ ಇನ್ನೊಂದು ದಿನ ಅದರ ಸಮೀಪದಲ್ಲಿಯೆ ಸ್ಕೂಲು ಕಟ್ಟಡದಲ್ಲಿಯೂ ನಡೆಯಿತು ಸಭೆಗೆ ಪುರಪ್ರಮುಖರಾದ ಮಠಸ್ಥರೂ ವರ್ತಕರೂ ಸೇರಿ ಸಾಹುಕಾರರೂ, ವಕೀಲರೂ ಶಾಲಾ ಉಪಾಧ್ಯಾಯರುಗಳೂ ಆಗಮಿಸಿ ಶೋಭೆಯನ್ನುಂಟುಮಾಡಿದ್ದರು. ಆರಂಭದಲ್ಲಿ ಸಂಸ್ಕೃತಶಾಲಾಧ್ಯಾಪಕರಾದ ಪಂ॥ ವೇ॥ ಉಜ್ಜಯಿನೀಮಠದ ಶ್ರೀ ಶಂಕರಶಾಸ್ತ್ರಿಗಳವರು ಶ್ರೀಗಳವರ ಪರಿಚಯವನ್ನು ಮಾಡುತ್ತ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಸೋಮವಾರ ಶ್ರೀಗಳವರು ಅಪ್ಪಣೆಕೊಡಿಸಿದ ವ್ಯಾಖ್ಯಾನದಲ್ಲಿ ಕೇವಲ ಜ್ಞಾನಕಾಂಡವೇ ಅಧಿಕವಾಗಿದ್ದಿತು. ಈ ವ್ಯಾಖ್ಯಾನದಲ್ಲಿ ವೇದಾಗಮಗಳ ಅದಿಕಾಲ, ಮತಗಳ ಆರಂಭ, ಆಚಾರ್ಯರೂ-ಋಷಿಗಳೂ ವೇದಾಂತದಿಂದ ಮಾಡಿದ ಲೋಕೋಪಕಾರ, ವೇದಾಂತದ ಪರಬ್ರಹ್ಮೋಪಾಸನೆಯ ಕ್ರಮ, ಜನ ಸಾಮಾನ್ಯದ ಏಕೀಕರಣ (ಐಕ್ಯ) ಕ್ಕೆ ವೇದಾಂತವು ಎಸ್ಟರಮಟ್ಟಿಗೆ ಉಪಯುಕ್ತವಾಗಿದೆ? ಮುಂತಾದ ವಿಷಯಗಳು ಅಡಕವಾಗಿದ್ದವು.

೨ನೆಯ ದಿನದ ವ್ಯಾಖ್ಯಾನದಲ್ಲಿ ವೇದಾಂತವು ಜ್ಞಾನವಾದದಿಂದ ಕರ್ಮವಾದಕ್ಕೆ ಆರಂಭವಾದ ಬಗ್ಗೆ ವೈದಿಕತ್ವವಿಚಾರದಲ್ಲಿ ಸಾಗಿರುವ ಅಪಪ್ರಚಾರ, ವೈದಿಕಮತಗಳು, ಮೂಲಮತಾಚಾರ್ಯರ ಕಾಲನಿರ್ಣಯ, ಮಹಾಭಾರತಕಾಲಕ್ಕಿಂತಲೂ ಪೂರ್ವದಲ್ಲಿದ್ದ ಕರ್ನಾಟಕ ಸಂಸ್ಕೃತಿ, ವೀರಶೈವಮತದ ಪ್ರಾಚೀನತೆ, ವೇದಕಾಲಕ್ಕಿಂತಲೂ ಪೂರ್ವದಲ್ಲಿರಬಹುದಾದ ವೀರಶೈವಮತದ ರೂಪ, ಸಮತಾವಾದದ ನಿಜವಾದ ಅರ್ಥ, ಇವೇ ಮುಂತಾದ ವಿಷಯಗಳು ಅಡಕವಾಗಿದ್ದುವು.

ಶ್ರೀಗಳವರು ವ್ಯಾಖ್ಯಾನದಲ್ಲಿ ತರುತ್ತಿರುವ ಹೊಸ ಶೋಧ, ಇತಿಹಾಸರೀತಿಯಿಂದ ಸರಿಪಡಿಸುತ್ತಿರುವ ಧರ್ಮಸಿದ್ಧಾಂತ ಮೊದಲಾದ ವಿಶೇಷ ವಿಚಾರಗಳನ್ನು ಸಭೆಯಲ್ಲಿ ಪಂ॥ ಶಂಕರಶಾಸ್ತ್ರಿಗಳವರೇ ಮೊದಲಾದವರು ಒಕ್ಕೊರಲಾಗಿ ಬಣ್ಣಿಸಿದರು.

ಶ್ರೀ ಶಿವಾಚಾರ್ಯರು "ಧರ್ಮರಾಜ್ಯ" ವೆಂಬ ಮಾಸಪತ್ರಿಕೆಯು ಹೊರಡುತ್ತಿರುವ 'ವೀರಶೈವ ಧರ್ಮಾಲಯ' ದ ಸಂಸ್ಥಾಪಕರಾಗಿರುವರೆಲ್ಲದೆ ದೊಡ್ಡ ವಿದ್ವಾಂಸರಾಗಿ ಕೇವಲ ಸಮಾಜದ ಏಕ್ಯಕ್ಕಾಗಿಯೇ ದುಡಿಯುತ್ತಿದ್ದಾರೆ ಸಮಾಜ ಮುಂದಾಳುಗಳು ಇವರ ವಿದ್ವತ್ತನ್ನು ಉಪಯೋಗಿಸಿಕೊಳ್ಳುವುದಕ್ಕೆ ಹಿಂಜರಿಯುಬಾರದು. ಇವರು ಕೇವಲ ವ್ಯಾಖ್ಯಾನಕಾರರೇ ಅಲ್ಲದೆ ಸುಪ್ರಸಿದ್ಧ ಲೇಖಕರೂ ಆಗಿದ್ದಾರೆ. ಇತ್ತೀಚಿಗೆಯೇ ಅನೇಕ ಗ್ರಂಥಗಳನ್ನು ಲಲಿತವಾದ ಕನ್ನಡ ನುಡಿಯಲ್ಲಿ ಬರೆದಿಟ್ಟಿದ್ದಾರೆ ಅವು ಮುದ್ರಣವಾಗುವುದಕ್ಕೆ ಸಮಾಜದ ಭಾಗ್ಯವಿಲ್ಲವಾಗಿದೆ. "ಧರ್ಮರಾಜ್ಯ" ಪತ್ರಿಕೆಯಮೂಲಕವಾಗಿ ಅವೆಲ್ಲವೂ ಹೊರಗೆ ಬರಲೆಂಬುದೇ ಶ್ರೀಗಳವರ ಬಯಕೆಯಾಗಿದೆ. ಅದುದರಿಂದ ಶ್ರೀಗಳವರಿಗೆ ಈ ಪತ್ರಿಕೆಯ ವಿಚಾರವಾಗಿ ಸಕಲರೂ ಸಹಾಯಕರಾಗಿ ಧರ್ಮ ಸೇವೆ ಭಾಷಾಸೇವೆಗಳ ಫಲದಲ್ಲಿ ಭಾಗಿಗಳಾಗಬೇಕು ಮುಂತಾದ ವಿಷಯಗಳಿಂದ ನೆರದ ಮಹಜನೀಯರೆಲ್ಲರಿಗೂ ತಿಳಿಯುವಂತೆ ಪಂ॥ ಶಂಕರಶಾಸ್ತ್ರಿಗಳವರು ಸಮಾರೋಪಣ ಭಾಷಣವೆಸಗಿದರು. ಶ್ರೀಗಳವರು ಇನ್ನೂ ಕೆಲವು ದಿನ ಇದೇ ಪ್ರಾಂತದಲ್ಲಿ ಸಂಚರಿಸತಕ್ಕ ವರಿದ್ದಾರೆಂತಲೂ ಇನ್ನೂ ಕೆಲವು ಕಡೆ ಇವರ ವ್ಯಾಖ್ಯಾನಗಳು ನಡೆಯತಕ್ಕವಿರುವವೆಂತಲೂ ಗೊತ್ತಾಗುವುದು. ಸಮಾಜಕಲ್ಯಾಣಕ್ಕಾಗಿ ವಿದ್ವತ್ತನ್ನು ಧಾರೆಯೆರೆಯುತ್ತಿರುವ ಇವರಿಗೆ ಜಗದೀಶ್ವರನು ಆರೋಗ್ಯಾದಿಭಾಗ್ಯಗಳನ್ನಿತ್ತು ಕಾಯಲೆಂದು ಸ್ವಾರ್ಥಿಸುತ್ತೇನೆ.

ಎಸ್ ಎಂ. ಉಮಾಪತಯ್ಯ,
ಹೊಸಪೇಟೆ

ಕೋಲಾರ ಟವರ್ ಮುನಿಸಿಪಾಲಿಟಿ 1939

ಪ್ರಸಿದ್ಧ ಪತ್ರಿಕೆ

ಬ್ರಹ್ಮರಥೋತ್ಸವ ಮತ್ತು ದನಗಳ ಪರಿಷೆ.

7-2-1939 ರಿಂದ 16-2-1939 ರವರೆಗೆ ಕೋಲಾರ ಟವರ್ನಲ್ಲಿರುವ ಶ್ರೀ ಚಾಮುಂಡೇಶ್ವರಿ ಎಂಬ ಅಭಿದಾನದಿಂದ ಪ್ರಸಿದ್ಧವಾಗಿರುವ ಶ್ರೀ ಕೋಲಾರಮ್ಮನವರ ಮೇಲ್ಮಂಡ ತಾರೀಮುಗಳಲ್ಲಿ ನಡೆಯುವ ರಥೋತ್ಸವಾದಿಗಳ ಸಂಬಂಧದಲ್ಲಿ ದನಗಳ ಪರಿಷೆ ನಡೆಯುವಂತೆ ಕೋಲಾರ ಪೌರಸಭೆಯವರು ಏರ್ಪಡಿಸಿರುತ್ತಾರೆ

1. ಈ ಸಂಬಂಧದಲ್ಲಿ ಗ್ರಾಮ ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ

2. ಜನ ಜಾನುವಾರುಗಳಿಗೆ ನೀರಿನ ಮತ್ತು ನೆರಳಿನ ವಸತಿ ಏರ್ಪಡಿಸಲಾಗಿದೆ.

3 ಪಶುವೈದ್ಯ ಸಹಾಯವು ಜಾತ್ರೆಯ ಮಾಳದಲ್ಲೇ ದೊರೆಯುವಂತೆ ಸೂಕ್ತವಾದ ಏರ್ಪಾಡು ಮಾಡಲಾಗಿದೆ.

4 ಈ ಪರಿಷೆಯು ಕೋಲಾರ ತಾಲ್ಲೂಕು ವಕ್ಕಲೇರಿ ಜಾತ್ರೆಗೂ ಮತ್ತು ಮುಳಬಾಗಲು ತಾಲ್ಲೂಕು ಅವನಿಯಲ್ಲಿ ನಡೆಯುವ ದೊಡ್ಡ ಜಾತ್ರೆಗೂ ಮಧ್ಯೆ ಬರುವುದರಿಂದ ಜಾನುವಾರುಗಳ ವ್ಯಾಪಾರಕ್ಕೆ ಅನುಕೂಲವಾದ ಸಮಯವಾಗಿದೆಯೆಂದು ಈ ಮೂಲಕ ಸೂಚಿಸಲಾಗಿದೆ.

5. ಪರಿಷೆಗೆ ಬರತಕ್ಕ ರಾಸುಗಳಮೇಲೆ ಈ ವರ್ಷ ಯಾವವಿಧವಾದ ಸುಂಕವನ್ನೂ ವಸೂಲು ಮಾಡುವು ದಿಲ್ಲ.

6 ರೈತರಿಗೂ ವ್ಯಾಪಾರಸ್ಥರಿಗೂ ತುಂಬ ಅನುಕೂಲವಾದ ಸಮಯವಾದ್ದರಿಂದ ಹೆಚ್ಚು ಹೆಚ್ಚಾಗಿ ರಾಸುಗಳನ್ನು ಪ್ರದರ್ಶನಕ್ಕೆ ತೆಗೆದುಕೊಂಡು ಬಂದು ಪೌರಸಭೆಯವರ ಪ್ರಥಮ ಪ್ರಯತ್ನವನ್ನು ಸಾರ್ಥಕಗೊಳಿಸಬೇಕೆಂದು ಅಪೇಕ್ಷಿಸಿದೆ

ಉತ್ತಮವಾದ ರಾಸುಗಳಿಗೆ ಉಪಯುಕ್ತವಾದ ಬಹುಮಾನಗಳನ್ನು ಮತ್ತು ಯೋಗ್ಯತಾಪತ್ರಗಳನ್ನು ಕೊಡುವಂತೆ ಏರ್ಪಡಿಸಿದೆ.

ಕೋಲಾರ,
27-1-1939.

ಜೆ. ಬಿ. ಮಲ್ಲಾರಾಧ್ಯ,
ಪೌರಸಭಾಧ್ಯಕ್ಷರು ಮತ್ತು
ಪ್ರದರ್ಶನ ಸಮಿತಿಯಅಧ್ಯಕ್ಷರು

ಪಂಚಾಚಾರ್ಯಪ್ರಭಾ.

೧೯೬೯ನೆಯ ಫೆಬ್ರವರಿ ೬ನೇ ಸೋಮವಾರ.

ತ್ರಿವಿಧ ವೀರಶೈವಸ್ವರೂಪ.

"ತ್ರಿವಿಧಂ ವೀರಶೈವಾಖ್ಯಂ ಅಧಿಕಾರನಿಭೇದತಃ" ಎಂಬ ಪಾರಮೇಶ್ವರಾಗಮೋಕ್ತಿಗನುಸಾರವಾಗಿ ವೀರಶೈವಮತದಲ್ಲಿ ಸಾಮಾನ್ಯವೀರಶೈವ, ವಿಶೇಷವೀರಶೈವ, ನಿರಾಭಾರವೀರಶೈವ ಎಂದು ಮೂರು ತರಗತಿಗಳುಂಟು. ಇವುಗಳನ್ನು ಅನೇಕರು ಅನೇಕವಿಧವಾಗಿ ತಿಳಿದುಕೊಂಡು ಇತ್ತೀಚೆಗೆ ಲಿಂಗ ಧರಿಸಿಕೊಂಡ ಅಗಂತುಕರನ್ನು ಸಾಮಾನ್ಯರನ್ನಾಗಿಯೂ, ಆನಾದಿಕಾಲದಿಂದ ಲಿಂಗಧಾರಿಗಳಾಗಿಬಂದವರನ್ನು ವಿಶೇಷರನ್ನಾಗಿಯೂ ಪರಸ್ಪರಿಗಳನ್ನು ನಿರಾಭಾರಿಗಳನ್ನಾಗಿಯೂ ಕರೆಯುವ ರೂಢಿಯನ್ನು ಕೆಲವೆಡೆಯಲ್ಲಿಟ್ಟುಕೊಂಡಿರುತ್ತಾರೆ ಇದು ಸಿದ್ಧಾಂತಕ್ಕೆ ವಿರೋಧವಾಗುತ್ತದೆ ಏಕೆಂದರೆ ಶಿವಾಚಾರ್ಯರಿಗೆಲ್ಲಾ ಒಬ್ಬನೇ ಜಂಗಮಕಾಲದಲ್ಲಿ ಸಾಮಾನ್ಯವೀರಶೈವನೆಂತಲೂ, ಮತ್ತೊಂದು ಕಾಲದಲ್ಲಿ ವಿಶೇಷ ವೀರಶೈವನೆಂತಲೂ. ಬೇರೊಂದುಕಾಲದಲ್ಲಿ ನಿರಾಭಾರಿ ವೀರಶೈವನೆಂತಲೂ ಹೇಳಿಕೊಳ್ಳುವಷ್ಟು ಅಜ್ಞಾನಿಯಲ್ಲಿ ಓದುವ ಒಬ್ಬ ವಿದ್ಯಾರ್ಥಿಯೇ ಜ್ಞಾನಾದಿಕ್ರಮದ ಆಯಾಮ ತರಗತಿಮಾನನೆಂಬ. ಹೇಗೆಂದರೆ ಒಬ್ಬ ಸಾಧಕನಾದ ವೀರಶೈವನೇ ಸಾಮಾನ್ಯ. ವಿಶೇಷ. ನಿರಾಭಾರಿ ಎಂಬ ನಾಮಗಳನ್ನು ಪಡೆಯುತ್ತಾನೆ ಇದರಿಂದ ಸಾಮಾನ್ಯನೇ ವಿಶೇಷನಾಗುತ್ತಾನೆ. ವಿಶೇಷನೇ ನಿರಾಭಾರಿಯಾಗುತ್ತಾನೆಯೆಂಬ ಭ್ರಮೆಪ್ರಜ್ಞಾನಗಳಿಂದ ಪ್ರಶ್ನೆ ನಾವೆಲ್ಲಿ ಸೇರಲ್ಪಟ್ಟೀವಿ ಏಕಾಗಿಯೂ ಇರಬೇಕೆಂಬ ಗತಿಯನ್ನು ಹೊಂದುತ್ತಾರೆ. ಈ ಸಾಮಾನ್ಯ. ವಿಶೇಷ. ನಿರಾಭಾರಿ ಎಂಬ ಪದ್ಧತಿಯನ್ನು ಪ್ರತಿಪಾದಿಸಿ ಲಿಂಗಾಂಗಿಗಳಾ ಇವರೆಲ್ಲರೂ ಅತ್ಯಾವಶ್ಯಕವಾಗಿ ಏಕಕಾಲದಲ್ಲಿ ಏಕಕಾರ್ಯಾರ್ಥವಾಗಿ ಯಜ್ಞದಲ್ಲಿ ಜ್ಞಾತೃ ಏಕಕಾರ್ಯಾರ್ಥವಾಗಿಲ್ಲ ಗುರುವಿನಿಂದ ಶಿವಲಿಂಗವನ್ನು ಪಡೆದು ಪ್ರಾಣಾಚಾರವನ್ನು ತಪ್ಪದೆ ನಡೆಯುವ ಸಾಮಾನ್ಯವೀರಶೈವನೇ ಸಾಮಾನ್ಯಾಚಾರಿಯಾಗಿರುತ್ತಾನೆ. ವೈಷಮ್ಯಪದಿಂದಲಿ ಏಕಕಾಲದಲ್ಲಿ ಗುರುಸಿಂಹಾಸನಾರೂಢನಾದ ಆಚಾರ್ಯನಿಂದ ಗೃಹೀತವಾದ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ ಗುರು ಸಮಿಂದ ಗೃಹೀತವಾದ ಇಷ್ಟಲಿಂಗ ಸಕ್ಷುಜ್ಞಾನದಿಂದ ಪ್ರಾಣಲಿಂಗ, ಪರಾ ಸಮರಸ ಜ್ಞಾನದಿಂದ ಭಾವಲಿಂಗ ವ್ಯವಸ್ಥಿತವಾದ ಪರಿಪೂರ್ಣತಾ ವಿಶೇಷತೆಯಿಂದ ಪ್ರಾಣಾಚಾರಗಳನ್ನೆಸಗುತ್ತಿರುವವನೇ ಸಾಮಾನ್ಯವೀರಶೈವನೆಂಬುದನ್ನು ತಿಳಿದುಕೊಳ್ಳಬೇಕು. ಶಿವದೀಕ್ಷಾಕಾಲದಲ್ಲಿ ಗುರುವಿನಿಂದ ಉಪದೇಶಿಸಲ್ಪಟ್ಟ ಉದ್ಧಾರಣ ಸದ್ಯೋಜಾತಲಿಂಗಗಳನ್ನು ನಡೆಯಿಸುತ್ತ ಲಿಂಗಲೋಪಾಪ್ತತೆಲೋಪಾದಿಗಳಿಗೆ ಅವಕಾಶವನ್ನು ಕೊಡದೆ ಅತ್ಯಾವಶ್ಯಕ ನಿಯಮಿಸುವವನೇ ವಿಶೇಷವೀರಶೈವನೆನಿಸುವನು. ಪ್ರಾಣಾಚಾರಿಯನ್ನು ಜ್ಞಾನಸಿದ್ಧಿಯನ್ನಾ ನಡೆಯಿಸಿ ಕ್ರಿಯಾಂತರದಿಗಳನ್ನೆ ನಿಷ್ಠಾವೈರಾಗ್ಯವನ್ನೆಲಂಬಿಸಿ ಬಹುದ್ರವ್ಯವಿಷಾಂತರಸ್ಪಾವರಣಗಳಿಂದ ಕೂಡಿ ಭಕ್ತಾತ್ಪೈಕ್ಯಾವತ್ಸ್ಥಲಗಳ ಸಿದ್ಧಿಯನ್ನು ಪಡೆದು ಪ್ರಾಣಲಿಂಗಿಪ್ರಸಾದವನ್ನು ತೊರೆದು ಮನೆಮಠಗಳನ್ನು ಬಿಟ್ಟು ಗಿರಿಗುಹೆಗಳಲ್ಲಿ ವಾಸಮಾಡುತ್ತ, ಕರತಲದಲ್ಲಿ ಭಿಕ್ಷೆಯೆನ್ನೆತ್ತುತ್ತ ಸರ್ವಸಂಗಪರಿತ್ಯಾಗಮಾಡಿದವನೇ ನಿರಾಭಾರಿಯೆನಿಸುವನು ಈತನೇ ಜೀವನ್ಮುಕ್ತನೆಂದೂ ಶಿವಯೋಗಿಯೆಂದೂ ಹೇಳಿಸಿಕೊಳ್ಳಲ್ಪಡುವನು. ಇಂಥ ಸಿದ್ಧಪುರುಷರನ್ನು ಸಿದ್ಧಾಂತಗ್ರಂಥಗಳು ವಿಶೇಷವಾಗಿ ಪ್ರಶಂಸೆಮಾಡಿರುತ್ತವೆ. ಈತನೇ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದ ವೀರಶೈವಧರ್ಮ ರಹಸ್ಯವನ್ನುರಿತು ಅವಿರಳ ಶಿವಾನಂದವನ್ನನುಭವಿಸುವವ ನಾಮದಿಂದ ಶ್ರೀ ಜಗದಾಚಾರ್ಯರ ಕೃಪಾನುಗ್ರಹಕ್ಕೆ ಪಾತ್ರನಾಗುತ್ತಾನೆ.

ದಂಡಕಾಪಿನಕಾಷಾಯಜಟಾಭಸ್ಮತಮಂಡಲೂನ್ ।
ಧೃತ್ವಾತಪಸಿ ತಿಷ್ಠೇಮುಂತೇ ಭೂಮ್ಯಾ ವಸಸವರ್ಜಿತಃ ।
ಆಚಮ್ಯಾಸನಯುಕ್ತಸ್ಸನ್ ಕಾಷಾಯಾಜ್ಯಾದಕಸ್ಥರೇತ್ ॥
ಕೂರ್ಚಾಂಡಜಪರಂ ಧೃತ್ವಾ ಭವೇಜ್ಜೈಷ ವಿಗಂಬರಃ ।
ಯದೃಚ್ಛಯಾ ಲಬ್ಧಭೈಕ್ಷಪ್ರಾಶನಾಸ್ಯಾದನೇ ರತಃ ।
ಕಾಯೇಚ ಜೀವಸಾ ಪಾಣಾ ಧೃತ್ವಾಭೂತ್ವಕಳಾ ।
ಕೃತ್ವಾ ಗೃಹಜುತಾದೀನಾ ಮನುಷ್ಯಾದಿಕ್ಷಣಾ ಚ ।
ನಿವಾಸಕೃತ್ಸ ಕರ್ತಾಯೋ ಪಶೇ ನಿಗುಣಾದಿಷು ।
ಜಾಂಡೋಳಿಕಾಂ ಸಮಾಮೋಹೇದಜ್ಞಾರೋಹಣವರ್ಜಿತಃ ।
ಜಾಡಾಭಾರಂಚ ಸಂಧೂಯ ಚರೇದ್ಭೈಷಲಯೇ ಸದಾ ॥

ಎಂದು ನಿರಾಭಾರಿಯ ಲಕ್ಷಣಗಳು ಅನೇಕವಾಗಿ ಸಿದ್ಧಾಂತಗ್ರಂಥಗಳಲ್ಲಿ ಹೇಳಲ್ಪಟ್ಟಿರುತ್ತವೆ. ಮೋಕ್ಷಾಪೇಕ್ಷೆಯಾದ ಮಾನವನು ಇಂಥ ನಿರಾಭಾರಿಯ ಸ್ಥಿತಿಯನ್ನು ಹೊಂದಲೇಬೇಕೆಂದು ಮತಸ್ಥಾಪಕರ ಉದ್ದೇಶವಾಗಿರುವುದರಿಂದ ಉಚ್ಚಶಿಕ್ಷಣವನ್ನೆನುಗ್ರಹಿಸಿದ ಉಸಾಧ್ಯಾಯನಲ್ಲಿ ವಿದ್ಯಾರ್ಥಿಯು ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಆ ಋಣಭಾರವನ್ನು ತೀರಿಸಲು ಆಗದಂತೆ, ಈ ಸಿದ್ಧಪುರುಷನಾದ ನಿರಾಭಾರಿಯಾದರೂ ಮೂಲಾಚಾರ್ಯರಲ್ಲಿ ಚಿರಋಣಿಯಾಗಿರಬೇಕು. ಲೋಕದಲ್ಲಿ ವೈತಾಪೈತಮತಾವಲಂಬಿಗಳಾದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ, ಆರೂಢ ಈ ಪದವಿಯನ್ನು ಕೊಂಬಿನವರೆಲ್ಲರೂ ತಮ್ಮ ತಮ್ಮ ಮತಾಚಾರ್ಯರಲ್ಲಿ ಎಷ್ಟರವಟ್ಟಿಗೆ ಅನಾಧಾರಣ ಭಕ್ತಿಯನ್ನಿಟ್ಟು ಕೃತಕೃತ್ಯರಾಗುತ್ತಿರುವರೋ ಎಂದರಿತೆ ವೀರಶೈವಮತಾವಲಂಬಿಗಳಾದ ಬ್ರಹ್ಮಚರ್ಯಾದ್ಯಾಶ್ರಮಿಗಳು ತಮ್ಮನ್ನುದ್ಧರಿಸಿದ ಸುರಕ್ಷಾಪಕರಾದ ಮೂಲಗುರುಗಳಲ್ಲಿ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು ಕೃತಕೃತ್ಯರಾಗಬೇಕು. ಲಿಂಗಾಂಗ ಸಾಮರಸ್ಯರೂಪವಾದ ಮುಕ್ತಿಯನ್ನು ಪಡೆಯಲು ಈ ಮೂರು ತರಗತಿಗಳು ಮಹಡಿಯನ್ನು ಹತ್ತುವುದಕ್ಕೆ ಹಾಕಿದ ಏಣಿಯೊಳಗಣ ಮೂರು ಕಾಲುಗಳಂತಿರುತ್ತವೆ. ಆರೋಹಕನು ಕ್ರಮಶಿಂದ ಒಂದೊಂದು ಕಾಲಿನಮೇಲೆ ಹತ್ತುತ್ತ ಹೋಗುವಂತೆ, ಸಾಧಕನು ಮೆಲ್ಲಮೆಲ್ಲನೆ ಸಾಮಾನ್ಯವೀರಶೈವ ಲಕ್ಷಣಗಳನ್ನೆಲ್ಲ ಅನುಭವಕ್ಕೆ ತಂದುಕೊಂಡು, ಮುಂದಣ ವಿಶೇಷ ವೀರಶೈವಲಕ್ಷಣಗಳನ್ನು ಅನುಷ್ಠಿಸಿ, ಕೊನೆಯದಾದ ನಿರಾಭಾರಿ ವೀರಶೈವನೆ ಯೂಮಿಕೆಯನ್ನು ಪ್ರವೇಶಿಸಿ, "ಏಕೇನ ಜನ್ಮನಾ ಮುಕ್ತೋಃ" ಎಂಬ ಶಿವೋಕ್ತಿಯನ್ನು ಆನ್ವರ್ಥಕಗೊಳಿಸಬೇಕು. ಇವನೇ ನಿಜವಾದ ವೀರಶೈವನೆಂದು ಹೇಳಿಸಿಕೊಳ್ಳುತ್ತಾನೆ ಮೋಸಪಿಂಡನಿವೃತ್ತಿಪೂರ್ವಕ ಮೋಕ್ಷ ಪಿಂಡಪ್ರಾಪಕವಾದ ಶಿವದೀಕ್ಷಾವಸರದಲ್ಲಿ ಆಚಾರ್ಯರು ಈಗಿರೇಶಿಸಿದ ಈ ಮೂರು ತರಗತಿಗಳನ್ನು ಕ್ರಮದಿಂದ ಆನುಷ್ಠಿಸುತ್ತ ಪರಿಪಕ್ವಚಿತ್ತನಾಗಿ ಲೌಕಿಕಾಭಿಮಾನವನ್ನು ತ್ಯಜಿಸಿ ದಗ್ಧಪಟದಂತೆ ಅಪಾತತಃ ದೇಹಧಾರಿಯಾಗಿರುನವನೇ ನಿರಾಭಾರಿಯೆನಿಸುತ್ತಾನೆ. ಇವನನ್ನು ಶಿವಯೋಗಿಯೆಂದೂ ಲಿಂಗಾರೂಢನೆಂದೂ ಕರೆಯುತ್ತಾರೆ. ಸಾಮಾನ್ಯ ವೀರಶೈವನಿಗಿರುವ ಗುರುಭಕ್ತಿಗಿಂತಲೂ ವಿಶೇಷ ವೀರಶೈವನಿಗಿರುವ ಗುರುಭಕ್ತಿಯು ಹೆಚ್ಚಾಗಿರುತ್ತದೆ. ಇವರೀರ್ವರಲ್ಲಿರುವ ಗುರುಭಕ್ತಿಗಿಂತಲೂ ನಿರಾಭಾರಿಗಳಿಗಿರುವ ಗುರುಭಕ್ತಿಯು ಹೆಚ್ಚಿನದಾಗಿರುತ್ತದೆ. ಪಂಚಕಲಶಸ್ಥಾಪನದ್ವಾರಾ ಶ್ರೀ ಪಂಚಾಚಾರ್ಯರ ಸಾಕ್ಷಿಯಾಗಿ ಗುರೂಪದೇಶವೆಂಬ ಸೂಕ್ಷ್ಮ ಬೀಜವು ಶಿಷ್ಯನ ಹೃದಯಭೂಮಿಯಲ್ಲಿ ಬಿದ್ದಮೇಲೆ, ಆ ಉಪದೇಶ ಬೀಜವೇ ಈ ಮೂರು ತರಗತಿಗಳಲ್ಲಿ ಕ್ರಮವಾಗಿ ಅಂಕುರಿಸಿ, ಪಲ್ಲವಿಸಿ ಫಲಿತವಾಗುತ್ತದೆ. ಈ ಮೂರು ತರಗತಿಗಳೊಳಗೆ ಯಾವ ತರಗತಿಯಲ್ಲೂ ಆ ಹಿಂದಣ ಶಿವಲಿಂಗಧಾರಣಪೂರ್ವಕ ಚಿತ್ತಿದ ಉಪದೇಶ ಬೀಜವು ಬದಲಾವಣೆಯಾಗುವುದಿಲ್ಲ ಆ ಬೀಜವನ್ನು ತೆಗೆದುಹಾಕಿ ಮತ್ತೊಬ್ಬ ಗುರುವಿನಿಂದ ಬೇರೊಂದು ಉಪದೇಶ ಬೀಜವನ್ನು ಪಡೆಯುವುದಾದರೆ ಅತನು ಖಂಡಿತವಾಗಿ ಗುರುದ್ರೋಹಿಯಾಗುತ್ತಾನೆ. ಹಾಗೆ ಯಾವ ಸಿದ್ಧಾಂತದಲ್ಲೂ ಸಾಮಾನ್ಯನಿಗೊಂದು ಉಪದೇಶವು, ವಿಶೇಷನಿಗೊಂದು ಉಪದೇಶವು, ನಿರಾಭಾರಿಗೊಂದು ಉಪದೇಶವು ಎಂದು ಹೇಳಲ್ಪಟ್ಟಿಲ್ಲ. ನಿರಾಭಾರಿಯಾದವನು ದೀಕ್ಷಾವಸರದಲ್ಲಿ ಅನುಗ್ರಹಿಸಿದ ಶಿವಲಿಂಗವನ್ನಾಗಲೀ, ಮಹಾಮಂತ್ರವನ್ನಾಗಲಿ, ಅಷ್ಟಾವರಣಪಟ್ಟಸ್ಥಲಗಳನ್ನಾಗಲಿ ಬಿಟ್ಟಿಲ್ಲ. ಹೀಗಿದ್ದರೂ ಕೆಲವೆಡೆಯಲ್ಲಿ ನಿರಾಭಾರಿಗಳಿಗೊಬ್ಬ ಗುರುವೆಂತಲೂ, ವಿಶೇಷರಿಗೊಬ್ಬ ಗುರುವೆಂತಲೂ, ಸಾಮಾನ್ಯರಿಗೊಬ್ಬ ಗುರುವೆಂತಲೂ ವಾದಿಸಹತ್ತಿದ್ದಾರೆ. ಇದು ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರ ಸಿದ್ಧಾಂತಕ್ಕೆ ಅತಿ ವಿರೋಧವಾದುದು. ಜ್ಞಾನಾಧಿಕ್ಯದಿಂದಾಗುವ ಇಂಥ ನಿರಾಭಾರಿಯ ಅಧಿಕಾರವು ಕಲಿಕಾಲಮಹಿಮೆಯಿಂದ ತಂದೆಯ ಸ್ಥಾನವನ್ನು ಮಗನು ಪಡೆಯಂತೆ, ಮನೆ ಮಕ್ಕಳನ್ನು ಕಟ್ಟಿಕೊಂಡು ದೇಕಾದಷ್ಟು ಅಸ್ತ್ರಶಾಸ್ತ್ರಿಗಳನ್ನು ಗಳಿಸಿಕೊಂಡು ಅಭಿಮಾನದಿಂದ ನಿರಾಭಾರಿಯೆಂಬ ಅಂಕಿತನಾಮವನ್ನು ಧರಿಸಿ ತಾನು ಸ್ಥಾನಬಿಡುವಕಾಲಕ್ಕೆ ತನ್ನ ಸ್ಥಾನಕ್ಕೆ ಮತ್ತೊಬ್ಬನನ್ನು ಕುಳ್ಳಿರಿಸುತ್ತಾನೆ. ಅವನ ಅವಸಾನದಲ್ಲಿ ಮತ್ತೊಬ್ಬನು ಬರುತ್ತಾನೆ. ಹೀಗೆ ನಿರಾಭಾರಿಗಳು ತಮ್ಮ ಮಕ್ಕಳ ವಿಷಯದಲ್ಲಿ ಗೃಹಸ್ಥರಿಗಿಂತಲೂ ಕಷ್ಟಯಾಗಿ ವರ್ತಿಸಹತ್ತಿದ್ದಾರೆ. ಆತ್ಮಶಕ್ತಿಯನ್ನು ಮೇಲು ಮಾಡಿ ದೇಹಶಕ್ತಿಯನ್ನು ಕೀಳುಮಾಡಿ ಕೇವಲ ಲಿಂಗವಿಹಾರಿಯಾದವನೇ ನಿಜವಾದ ನಿರಾಭಾರಿಯೆನಿಸುತ್ತಾನೆ. ಇದು ವೈರಾಗ್ಯಬಲದಿಂದ ಬರುತಕ್ಕುದಲ್ಲದೆ ದೊಡ್ಡ ದೊಡ್ಡ ಮಕ್ಕಳನ್ನು ಕಟ್ಟಿಸಿಕೊಳ್ಳುವುದರಿಂದ ಬರತಕ್ಕುದಲ್ಲ. ಇಂಥ ವಾಸ್ತವವಾದ ನಿರಾಭಾರಿಗೆ ವಾಹನಾದಿಗಳ ಅಪೇಕ್ಷೆಯಾಗಲಿ, ದ್ರವ್ಯಸಂಗ್ರಹೇಚ್ಛೆಯಾಗಲಿ, ಸ್ವಾಭಿಮಾನವಾಗಲಿ ಎಂದೂ ಇರುವುದಿಲ್ಲ. ಈಗ ಬಲಾತ್ಕಾರದಿಂದ ನಿರಾಭಾರಿಗಳೆಂದು ಹೆಸರನ್ನಿಟ್ಟುಕೊಂಡಿರುವ ಧರ್ಮಶಾಸ್ತ್ರಜ್ಞಶೂನ್ಯರಾದ ಕೆಲ ದಾಂಭಿಕ ವಿರಕ್ತರು ಮತಸ್ಥಾಪಕರಿಗಿಂತಲೂ, ಒಂದುಪಕ್ಷ ಶಿವನಿಗಿಂತಲೂ ನಾವೇ ದೊಡ್ಡವರೆಂದು ಪ್ರಲಪಿಸುತ್ತ ನವೀನ ನಾಸ್ತಿಕರಾಗಿ ಮೆರೆಯುತ್ತಿದ್ದಾರೆ. ಅಸ್ತು ! ಸಾಮಾನ್ಯರಾಗಲಿ, ವಿಶೇಷರಾಗಲಿ, ನಿರಾಭಾರಿಗಳಾಗಲಿ ಎಲ್ಲರೂ ತಮ್ಮ ಮತದ ಮೂಲಗುರುಗಳಲ್ಲಿ ಅಸಾಧಾರಣಭಕ್ತಿಯನ್ನಿಟ್ಟು ವರ್ತಿಸಿ ಶ್ರೀ ಜಗದೀಶ್ವರನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಮದ್ರಾಸಿನ ನೆಲ್ಸನ್ ಅಂಡ್ ಕೋ; ನಾರ್ಟನ್ ಅಂಡ್ ಕೋ; ಮತ್ತು ಬೆಂಗಳೂರಿನ ಮೈಸೂರು ಊದಬತ್ತಿ ಫ್ಯಾಕ್ಟರಿಯವರು ಕಳುಹಿಸಿವ 1969 ನೆಯ ಇಸ್ವಿಯ ಅತ್ಯಂತ ಸುಂದರವಾದ ಕ್ಯಾಲೆಂಡರುಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿರುತ್ತೇವೆ

ಯುವರಾಜ ಕುಮಾರ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಪತ್ನಿಯವರಾದ ಶ್ರೀಮತಿ ಸತ್ಯಪ್ರೇಮ ಕುಮಾರಿ ದೇವಿಯವರು ಕಳೆದ ತಿಂಗಳು 25 ನೆಯ ತಾರೀಖಿನದಿನಸ ತಮ್ಮ ಪಿತೃಗೃಹನಾದ ಚಿರಕಾರಿ ಸಂಸ್ಥಾನಕ್ಕೆ ಪ್ರಯಾಣಮಾಡಿದರು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದ ಡಾ|| ಡಿ ಎಸ್. ಪುಟ್ಟಣ್ಣನವರನ್ನು ಮೈಸೂರು ವಿಮಾ ಶಾಖೆಯ ಮೆಡಿಕಲ್ ಆಫೀಸರನ್ನಾಗಿಯೂ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸರ್ಜನರಾಗಿದ್ದ ಡಾ|| ಟಿ. ಶೇಷಾಚಲಂರವರನ್ನು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರನ್ನಾಗಿ ನಿಯಮಿಸಲಾಗಿದೆ.

ನಾಥಾ ಸಂಸ್ಥಾನದ ಕಿರಿಯ ಮಹಾರಾಣಿಯವರು ರಾಜಕುಮಾರರೊಡನೆಯೂ ರಾಜಕುಮಾರಿಯವರೊಡನೆಯೂ ಆರೋಗ್ಯ ನಿಮಿತ್ತವಾಗಿ ಒಂದು ತಿಂಗಳಿಂದ ಬೆಂಗಳೂರಿನಲ್ಲಿದ್ದಾರೆ. ಅವರು ಕಳೆದ 31ನೆಯ ತಾರೀಖಿನ ದಿವಸ ಪ್ರಾತಃಕಾಲ ಬೌರಿಂಗ ಆಸ್ಪತ್ರೆಗೆ ಭೇಟಿಕೊತ್ತರು. ಆಸ್ಪತ್ರೆಯ ಅಧಿಕಾರಿಗಳು ಮಹಾರಾಣಿಯವರನ್ನು ಸ್ವಾಗತಿಸಿ ಆಸ್ಪತ್ರೆಯ ಎಲ್ಲ ಭಾಗಗಳನ್ನೂ ತೋರಿಸಿದರು. ಸಂತೋಷಗೊಂಡ ಮಹಾರಾಣಿಯವರು ಮಕ್ಕಳಿಗೆ ಆಟದ ಸಾಮಾನುಗಳನ್ನೂ ತಿಂಡಿಪದಾರ್ಥಗಳನ್ನೂ ಕೊಂಡುಕೊಡುವದಕ್ಕಾಗಿ 100 ರೂಪಾಯಿಗಳನ್ನು ದಾನ ಮಾಡಿದರು.

ಶ್ರೀಮನ್ಮಹಾರಾಜರವರು ಹೋಗ್ ಜಲಪಾತದ ಬಳಿ ಕಟ್ಟಲಿರುವ ವಿದ್ಯುಚ್ಛಕ್ತಿ ಕಾರ್ಯಾಲಯದ ಶಂಕುಸ್ಥಾಪನೆ ಮಾಡಲು ಹೋಗುವೆಂಬುದಕ್ಕಾಗಿ ತಕ್ಕ ಉಸ್ತುವಾರಿ ನೋಡಿಕೊಳ್ಳಲು ಪೋಲೀಸರಪ್ಪ ಸ್ಪೆಷಲ್ ಬಸ್ಸಿನಲ್ಲಿ ಕಳುಹಿಸಿದ್ದರು. ಆ ಬಸ್ಸು ತಾಳಗುಪ್ಪೆಯ ಬಳಿ ಅಪಾಹುತಕ್ಕೊಳಗಾದ್ದರಿಂದ ಇಬ್ಬರು ಪೋಲೀಸರು ಅಲ್ಲೇ ಮೃತರಾದರು. 5 ಮಂದಿಗೆ ವಿಶೇಷ ಗಾಯಗಳಾಗಿವೆ. 22 ಜನ ಪೋಲೀಸರಿಗೆ ಅಲ್ಪಸ್ವಲ್ಪ ಗಾಯಗಳಾಗಿವೆ. ಗಾಯಗೊಂಡವರೆಲ್ಲರೂ ಸಾಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಕಠಿಣಶಿಕ್ಷೆ

ಕಲೆಕ್ಟರಾದ ಶ್ರೀ. ಎಚ್. ಸಿ. ಮೇದರವರನ್ನು ಗಾಯಗೊಳಿಸಲು ಪ್ರಯತ್ನಿಸಿದ ಅಲಿಘರದ ಅಲಿಷದ್ ಎಂಬವನನ್ನು ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸಿ ಅಪರಾಧಿಗೆ 4 ವರ್ಷಕಾಲ ಕಠಿಣಶಿಕ್ಷೆಯನ್ನು ವಿಧಿಸಿದರು.

ಅನೆಕಲ್ಲು ಮಳೆ ಅನಾಹುತ

ಝೊಂಸಿಜಿಲ್ಲೆಯಲ್ಲಿ ಅನೆಕಲ್ಲು ಮಳೆ ವಿಶೇಷವಾಗಿ ಸುರಿದು ಪೈರುಪಚ್ಚೈಗಳಿಗೆ ವಿಶೇಷ ನಷ್ಟವಾಗಿದೆಯೆಂದು ವರ್ತಮಾನ ಬಂದಿದೆ 3 ಪೌಂಡು ತೂಕಕ್ಕಿಂತ ಹೆಚ್ಚು ತೂಕದ ಕಲ್ಲುಗಳು ವಿಕಪ್ರಕಾರ ಒಂದೂವರೆಘಂಟೆಯ ವರೆಗೆ 20 ಗ್ರಾಮಗಳಲ್ಲಿ ಬಿದ್ದವೆಂದು ಹೇಳಲಾಗಿದೆ. ಅನೇಕ ದನಕರುಗಳು ಮರಣ ಹೊಂದಿದವು

ತುಲಾಧಾರ

ನೇಪಾಳಮಹಾರಾಜರ ಸೊಸೆಯಾದ ಮಹಾರಾಣೀ ಬುಲ್‌ಕುಮಾರಿದೇವಿಯವರು ಕಳೆದ ಮೆಕರಸಂಕ್ರಾತಿಯ ದಿವಸ ಕಾತಿಯಲ್ಲಿ ಗಂಗಾಸ್ನಾನ ಮಾಡಿ ವ್ರತ ಹೋಮಾದಿಗಳನ್ನೂ ದೇವ ಬ್ರಾಹ್ಮಣ ಪೂಜಾದಿಗಳನ್ನೂ ನಡೆಸಿ ಅನಂತರ ತಕ್ಕಡಿಯಲ್ಲಿ ಕುಳಿತು ತಮ್ಮ ತೂಕದ ಚಿನ್ನವನ್ನು (ಒಂದೂವರೆ ಮಣಕ್ಕೆ ಸ್ವಲ್ಪ ಹೆಚ್ಚು) ತೂಗಿ ಬ್ರಾಹ್ಮಣರಿಗೂ ಪಂಡಿತರುಗಳಿಗೂ ದಾನವಾಗಿ ಕೊಟ್ಟು ಸುಖಭೋಜನವನ್ನು ಮಾಡಿಸಿದರು

ರಾಜಕೋಟೆಯ ಪರಿಸ್ಥಿತಿ

"ಸರ್ವಾರಿದವರು ಒಪ್ಪಂದವನ್ನು ಮುರಿದ ಕಾರಣ ಜನರು ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಲು ಸತ್ಯಾಗ್ರಹವನ್ನಾರಂಭಿಸಿದ್ದಾರೆ ರಾಜಕೋಟೆಯ ವರಿಗೂ ಮತ್ತು ಕಾಥೇವಾಡದವರಿಗೂ ಈಗಿನ ಈ ಘರ್ಷಣವು ಬಹು ಕ್ರೂರವೆನಿಸುವುದೆಲ್ಲ ಸಂಶಯವಿಲ್ಲ ತನ್ನ ಕಾರ್ಯಕ್ರಮವನ್ನೆಲ್ಲಾ ಜನರು ಉತ್ಸಾಹದಿಂದ ನಡೆಸುವರೆಂಬ ನಂಬಿಕೆ ಪರಿಪತ್ತಿಗಿದೆ" ಎಂಬುದಾಗಿ ಅಲ್ಲಿನ ಪ್ರಜಾಪರಿಷತ್ತಿನವರು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ

ಜರ್ಮನಿಗೆ ಕಾಫಿಯನ್ನು ಅಮದುಮಾಡಲು ಆಜ್ಞೆ ದೊರಕಿತು

ಜರ್ಮನಿ ಪ್ರಜೆಗಳು ಅನ್ಯದೇಶಗಳಿಂದ ಕಾಫಿಯನ್ನು ತರಿಸಿಕೂಡದೆಂದು ಅಲ್ಲಿನ ಸರ್ಕಾರದವರು ಕಟ್ಟುಪ್ಪಣೆಯನ್ನು ಮಾಡಿದ್ದರು ಇದರಿಂದ ಜನರಿಗೆ ಕಾಫಿ ಸರಬರಾಜು ಸರಿಯಾಗಿ ಆಗದೆ ಬರ್ಲಿನ್ ನಗರದಲ್ಲೂ ಜರ್ಮನಿಯ ಇತರ ಊರುಗಳಲ್ಲೂ ಕಾಫಿ ಮಾರಾಟಮಾಡುವ ಅಂಗಡಿಗಳ ಮುಂದೆ ಜನರು ಸಾಲುಕಟ್ಟಿ ನಿಂತು ಶ್ರಮಪಡುತ್ತಿರುವದನ್ನು ನೋಡಿ ಈ ಕಷ್ಟನಿವಾರಣಕ್ಕಾಗಿ ಸರ್ಕಾರವರು ಕಾಫಿಯನ್ನು ಪರದೇಶಗಳಿಂದ ಅಮದು ಮಾಡಬಹುದೆಂದು ಆಜ್ಞೆಕೊಟ್ಟರು ಈಗ ಬ್ರೆಜಿಲ್ ಸರ್ಕಾರದವರು ಜರ್ಮನಿಗೆ ಕಾಫಿಯನ್ನು ಒದಗಿಸಲು ತಕ್ಕ ಏರ್ಪಾಟುಮಾಡಿರುತ್ತಾರೆ

ಚೀನಾ ಯುದ್ಧದಲ್ಲಿ ಮಡಿದ ಜಪಾನರ ಸಂಖ್ಯೆ

ಮಾರ್ಷಲ್ ಚಿಯಾಂಗ್‌ಕೈಷೇಕ್‌ರವರು ಕೌಂಮಿಂಟಾಂಗ್ ಪಕ್ಷದ ಕೇಂದ್ರ ಸಮಿತಿಯಲ್ಲಿ ಮಾಡಿದ ಭಾಷಣದಲ್ಲಿ, ಇಲ್ಲಿಯವರೆಗೆ ಜಪಾನಿನಕಡೆ 7 ಲಕ್ಷಮಂದಿ ಸೈನಿಕರೂ ಅಧಿಕಾರಿಗಳೂ ಮೃತರಾಗಿರುವರೆಂದು ಹೇಳಿದರು. ಜಪಾನು ಯುದ್ಧವನ್ನಾರಂಭಿಸಿದಾಗ ತನ್ನ ಸೈನ್ಯದಲ್ಲಿ ತೀಕಡ 30 ರಷ್ಟೇ ಸೈನ್ಯವನ್ನು ಚೀನಾದೇಶದಲ್ಲಿ ಉಪಯೋಗಿಸಿ ಉಳಿದ 70 ರಷ್ಟು ಸೈನ್ಯವನ್ನು ರಷ್ಯದೊಡನೆ ಯುದ್ಧ ನಡೆಸುವ ಸಂಭವ ಬಂದರೆ ಉಪಯೋಗಿಸುವ ಹಕ್ಕೆ 'ರಿಜರ್ವ್' ನಲ್ಲಿಡಬೇಕೆಂದು ಯೋಚಿಸಿತ್ತೆಂದೂ, ಆದರೆ ನೀರೀಕ್ಷಿಸಿದ್ದಕ್ಕಿಂತ ಎರಡರಷ್ಟು ಸೈನ್ಯವನ್ನು ಉಪಯೋಗಿಸ ಚೀನಾಗಿ ಬಂತೆಂದೂ ಹೇಳಿದರು.

ಹಿಂದೂ ಮುಸಲ್ಮಾನೀಯರ ಹೊಡೆದಾಟ

ಬಕ್ರಿದ್ ಹಬ್ಬದ ಸಂಬಂಧದಲ್ಲಿ ಗೋಹತ್ಯಮಾತಿ ದರೆಂಬ ವದಂತಿ ಹಬ್ಬಿದ್ದರಿಂದ ದೇರಾ ಇಸ್ಮಾಯಿಲ್ ಖಾನ್ ನಗರದಲ್ಲಿ ಹಿಂದೂ ಮುಸಲ್ಮಾನರಲ್ಲಿ ಭಯಂಕರ ಹೊಡೆದಾಟವಾಗಿ ಸುಮಾರು 10 ಮಂದಿ ಸತ್ತರು. 20 ಮಂದಿಗೆ ತೀವ್ರ ಗಾಯಗಳಾಗಿವೆ. ಸತ್ತವರ ಮತ್ತು ಗಾಯಗೊಂಡವರ ಪೈಕಿ ಬಹುಮಂದಿ ಹಿಂದುಗಳೆಂದು ತಿಳಿದುಬರುತ್ತದೆ. ಗಲಭೆ ವಿಚಾರವು ತಿಳಿದಕೂಡಲೆ ಗಡಿನಾಡಿನ ಪೋಲೀಸರೂ ಮನ್ಸಾರಿ ಜಿಲ್ಲೆಯಿಂದ ಸೈನಿಕರೂ, ಪೆಷಾವರ್ ನಗರದಿಂದ ಶಸ್ತ್ರಸಜ್ಜಿತ 'ರಿಸರ್ವ್' ಪಡೆಯೂ ಗಲಭೆಶಮ್ಯಳಕ್ಕೋಡಿ ಬಂದರು. ಈಗ ಪರಿಸ್ಥಿತಿಯು ಶಾಂತವಾಗಿದೆ

ರಷ್ಯಮಾಂಚುಕೋ ಗಡಿಯಲ್ಲಿ ಹೊಡೆದಾಟ

ಜನವರಿ 31 ನೆಯ ತಾರೀಖು 10ನೆ ಮುಂದಿ ರಷ್ಯ ಸೈನಿಕರು ಎಲ್ಲೆಯನ್ನು ದಾಟಿ ಗಡಿಯಲ್ಲಿರುವ ಸ್ಟೇಷ ಮೇಲೆ ಗುಂಡುಗಳನ್ನು ಹಾರಿಸಿದರೆಂದೂ ಅದಕ್ಕೆ ಪ್ರತಿಯಾಗಿ ಮಾಂಚುಕೋ ಸೈನಿಕರು ಗುಂಡು ಹಾರಿಸಿದರೆಂದೂ ಸುಮಾರು ಒಂದು ಗಂಟೆಯ ಕಾಲ ಹೊಡೆದಾಟಗಳು ನಡೆದಮೇಲೆ ರಷ್ಯ ಸೈನಿಕರು ಹಿಮ್ಮೆಟ್ಟಿದರೆಂದೂ ಹೇಳಲಾಗಿದೆ ರಷ್ಯನರ ಕಡೆ 5 ಮಂದಿ ಸೈತರಾದರೆಂದೂ 3 ಜನಗಳಿಗೆ ಗಾಯಗಳಾದವೆಂದೂ ಇವರನ್ನೆಲ್ಲ ಹಿಂದೆ ಬಿಟ್ಟು ಉಳಿದವರು ಹಿಂತಿರುಗಿದರೆಂದೂ ಹೇಳಲಾಗಿದೆ ಜಪಾನಿನ ಕಡೆ ಯಾರಿಗೂ ಅಪಾಯವಾಗಲಿಲ್ಲ ರಷ್ಯ ಸೈನಿಕರ ಈ ನಡತೆಯನ್ನು ಕುರಿತು ಮಂಚಕೋ ಸರ್ಕಾರವು ರಷ್ಯ ಸರ್ಕಾರಕ್ಕೆ ತೀವ್ರ ಪ್ರತಿಭಟನೆಯನ್ನು ಕಳುಹಿಸಿದೆ

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯ ಬಗ್ಗೆ ಗಾಂಧಿಯವರ ಹೇಳಿಕೆ

ಕಾಂಗ್ರೆಸ್ಸಿನ ಪ್ರಮುಖರಲ್ಲಿ ಇಬ್ಬಾಗ

"ಶ್ರೀ ಸುಭಾಷ್ ಚಂದ್ರಬೋಸರು ತಮ್ಮ ಪ್ರತಿಸ್ಪರ್ಧಿಗಳಾದ ಡಾ|| ಪಟ್ಟಾಭಿಸೀತಾರಾಮಯ್ಯನವರನ್ನು ಸೆದ್ದಿದ್ದಾರೆ ಆರಂಭದಿಂದಲೂ ನಾನು ಬೋಸರು ಮತ್ತೆ ಅಧ್ಯಕ್ಷರಾಗಿ ಆರಿಸಲ್ಪಡುವುದನ್ನು ವಿರೋಧಿಸುತ್ತಿದ್ದೆನೆಂದು ನಾನು ಒಪ್ಪಲೇಬೇಕು ಅವರ ಕಾರಣಗಳನ್ನು ನಾನು ವಿವರಿಸುವುದು ಅನವಶ್ಯಕ ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿರುವ ಅಂಶಗಳನ್ನಾಗಲಿ, ಅವರ ಮಾವ ಸರಣಿಯನ್ನಾಗಲಿ ನಾನು ಒಪ್ಪಲಾರೆ ಅವರು ತಮ್ಮ ಸಹ ಕೆಲಸಗಾರರ ವಿಚಾರದಲ್ಲಿ ತಿಳಿಸಿರುವ ಅಂಶಗಳು ನ್ಯಾಯವೆನಿಸುವುದಿಲ್ಲ, ಅವರ ಬಾಯಿಂದ ಅಂತಹ ಮಾತುಗಳು ಬರಬಾರದಾಗಿತ್ತು ಹೀಗಿದ್ದರೂ ಕೂಡ ಅವರಿಗೆ ಜಯವು ಲಭಿಸಿದುದಕ್ಕಾಗಿ ನಾನು ಹರ್ಷಿಸುತ್ತೇನೆ. ಮೌಲಾನಾ ಆಜಾದರು ಚುನಾವಣೆಯಿಂದ ಹಿಂದೆ ಸರಿದ ಮೇಲೆ ಡಾ|| ಪಟ್ಟಾಭಿಯವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳದಂತೆ ಸ್ಪೇದೇಸಿಸಲು ನಾನೇ ಕಾರಣನಾದುದರಿಂದ, ಈಗ ಅವ ಅಪಜಯವು ಬಹುಮಟ್ಟಿಗೆ ನನಗೆ ಅನ್ವಯಿಸುವುದಲ್ಲದೆ ಡಾ|| ಪಟ್ಟಾಭಿಯವರಿಗಲ್ಲ ನಾನು ನಿರ್ಧರವಾದ ತತ್ವಕ್ಕಾಗಿ, ನೀತಿಗಾಗಿ ಹೊಡೆದಾಡುತ್ತಿರುವವನು. ಕಾಂಗ್ರೆಸ್ ಪ್ರತಿನಿಧಿಗಳು ನನ್ನ ನೀತಿಯನ್ನೂ ತತ್ವವನ್ನೂ ಅನುಮೋದಿಸುವುದಿಲ್ಲವೆಂಬುದು ಈ ಚುನಾವಣೆಯಿಂದ ವ್ಯಕ್ತಪಟ್ಟಿತು. ಈ ಸೋಲಿನಲ್ಲೇ ನಾನು ಸಂತೋಷಪಡುವೆನು. ದೆಹಲಿಯಲ್ಲಿ ಹಿಂದೆ ನಡೆದ ಎ. ಐ. ಸಿ. ಸಿ. ಕಾಲದಲ್ಲಿ ಕಾಂಗ್ರೆಸ್ಸಿನ ಅಲ್ಪಸಂಖ್ಯಾತರು ಸಭಾ ಪರಿತ್ಯಾಗ ಮಾಡಿದರಷ್ಟೆ! ಆ ವಿಚಾರ ಕುರಿತು ಹಾಗು ಬರೆಯುತ್ತ ತಿಳಿಸಿದ ಅಂತವನ್ನು ಕಾರ್ಯಕ್ಷೇತ್ರಕ್ಕಿಳಿಸಲು ಪಕ್ಷಗಳಿದರಿಂದ ಅವಕಾಶವಾಗುವುದಾಗಿದೆ. ಶ್ರೀ ಸುಭಾಷ್ ಚಂದ್ರಬೋಸರು ಈಗ 'ಮಂದಗಾಮಿ' ಗಳಿಂದ ಆರಿಸಲ್ಪಟ್ಟ ಅಧ್ಯಕ್ಷರಲ್ಲ; ಸ್ಪರ್ಧಾಯುತವಾದ ಚುನಾವಣೆಯಲ್ಲಿ ಆರಿಸಿ ಬಂದವರು. ಅವರು ತಮ್ಮ ಅಭಿಪ್ರಾಯವನ್ನೇ ಎತ್ತಿ ಹಿಡಿಯತಕ್ಕಂತಹ ಸದಸ್ಯರನ್ನುಳ್ಳ ಮಂತ್ರಿಮಂಡಲವನ್ನು (ವರ್ಕಿಂಗ್ ಕಮಿಟಿ) ಆರಿಸಿಕೊಂಡು, ತಮ್ಮ ಕಾರ್ಯಕ್ರಮವನ್ನು ಕೊಂಚವೂ ಆತಂಕವಿಲ್ಲದೆ ಕಾರ್ಯಕ್ಷೇತ್ರಕ್ಕಿಳಿಸುವ ಅವಕಾಶವು ಈಗ ಅವರಿಗಿದೆ. ಆದರೆ ಬಹುಸಂಖ್ಯಾತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಇಬ್ಬರಿಗೂ ಅನ್ವಯಿಸುವ ಒಂದು ಅಂಶವಿದೆ. ಕಾಂಗ್ರೆಸ್ಸಿನ ಒಳ ನೈರ್ಮಲ್ಯವನ್ನು ರಕ್ಷಿಸುವುದೇ ಅದು.

"ಕಾಂಗ್ರೆಸಿನ ರಿಜಿಸ್ಟರುಗಳಲ್ಲಿ ಅನೇಕ ಸುಳ್ಳು ಹೆಸರುಗಳು ಸೇರಿರುವುದರಿಂದ ಕಾಂಗ್ರೆಸು ಬಹುಬೇಗ ಅನೀತಿಯುತವಾದ ಸಂಸ್ಥೆಯಾಗುತ್ತಿದೆಯೆಂದು ನಾನು 'ಹರಿಜನ' ಪತ್ರಿಕೆಯಲ್ಲಿ ಬರೆದೆನು ಈ ರಿಜಿಸ್ಟರುಗಳನ್ನು ಪುನರ್ವ್ಯವಸ್ಥೆಗೊಳಿಸಬೇಕೆಂದು ನಾನು ಈಗ ಹಲವು ತಿಂಗಳುಗಳಿಂದ ಸೂಚಿಸುತ್ತ ಬಂದಿದ್ದೇನೆ. ಎಚ್ಚರಿಕೆಯಿಂದ ಪರೀಕ್ಷೆ ನಡೆಸಿದ್ದಾದರೆ, ಸುಳ್ಳು ವೋಟುದಾರರಿಂದ ಆರಿಸಲ್ಪಟ್ಟಿರುವ ಈ ಪ್ರತಿನಿಧಿಗಳಲ್ಲನೇಕರು ತಮ್ಮ ಸ್ಥಾನಗಳನ್ನು ಬಿಡಬೇಕಾಗುವುದೆಂಬುದರಲ್ಲಿ ಸಂಶಯವಿಲ್ಲ ಅಂದರೆ, ಅಂತಹ ಉಗ್ರ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾನು ಸೂಚಿಸುವುದಿಲ್ಲ. ಕಾಂಗ್ರೆಸ್ ರಿಜಿಸ್ಟರುಗಳಲ್ಲಿ ಸುಳ್ಳು ಹೆಸರುಗಳಿಲ್ಲದಂತೆ ಮಾಡಿ, ಮುಂದೆ ಅನೀತಿ ತಲೆಹಾಕಲು ಸಾಧ್ಯವಿಲ್ಲದಂತೆ ಮಾಡಿದರೆ ಸಾಕು ಅಲ್ಪಸಂಖ್ಯಾತರು ಎದೆಗೆಡಲು ಏನೂ ಕಾರಣವಿಲ್ಲ. ಕಾಂಗ್ರೆಸ್ಸಿನ ಈಗಿನ ಕಾರ್ಯಕ್ರಮವಲ್ಲಿ ಅವರಿಗೆ ನಂಬಿಕೆಯಿರುವುದಾದರೆ, ಅವರು ಅಲ್ಪಸಂಖ್ಯಾತರಾಗಿರಲಿ ಬಹುಸಂಖ್ಯಾತರಾಗಿರಲಿ ಅಥವಾ ಕಾಂಗ್ರೆಸಿನಲ್ಲಿಯೇ ಇರಲಿ ಹೊರಗೇ ಇರಲಿ ಆ ಕಾರ್ಯಕ್ರಮವನ್ನು ನಡೆಸುವುದು ಸಾಧ್ಯವಿದೆಯೆಂಬುದು ಅವರಿಗೆ ವ್ಯಕ್ತಪಡುವುದು ಅದರಿಂದ ಏನಾದರೂ ಬದಲಾವಣೆಯಾಗುವುದಾಗಿದ್ದರೆ ಪಾರ್ಲಿಮೆಂಟರಿ ಕಾರ್ಯಕ್ರಮದಲ್ಲಿ ನಾತ್ರ

ಇದುವರೆಗೆ ಬಹು ಸಂಖ್ಯಾತರಾಗಿದ್ದವರಿಂದ ಕಾಂಗ್ರೆಸ್ ಮಂತ್ರಿಮಂಡಲಗಳ ಕಾರ್ಯಕ್ರಮಗಳನ್ನು ಗೊತ್ತುಮಾಡಿರುವವರೂ ಅವರೇ ಆದರೆ 'ಪಾರ್ಲಿಮೆಂಟರಿ' ಕಾರ್ಯಕ್ರಮವು ಕಾಂಗ್ರೆಸ್ ಕಾರ್ಯಕ್ರಮದ ಒಂದು ಸಣ್ಣ ಅಂಶ ಮಾತ್ರ ಕಾಂಗ್ರೆಸ್ ಮಂತ್ರಿಗಳು ದಿನ ದಿನ ಕಾಲಹಾಕಬೇಕಾಗಿದೆಯೆಂಬುದನ್ನು ಮರೆಯಬಾರದು. ಕಾಂಗ್ರೆಸ್ಸಿನವರೇ ಮಂತ್ರಿಗಳನ್ನು ಹಿಂದಕ್ಕೆ ಕರೆಯಲಿ ಅಥವಾ ಮಂತ್ರಿಗಳು ಅವರಾಗಿಯೇ ರಾಜೀನಾಮೆ ಕೊಡಲಿ ಅದು ಅವರಿಗೆ (ಮಂತ್ರಿಗಳಿಗೆ) ಮಹತ್ವದ ವಿಚಾರವಲ್ಲ.

ಶ್ರೀ ಸುಭಾಷ್ ಬಾಬುಗಳು ತಮ್ಮ ದೇಶದ ಶತ್ರುಗಳಲ್ಲ. ಅವರು ತಮ್ಮ ದೇಶಕ್ಕಾಗಿ ತೊಂದರೆಯನ್ನು ಅನುಭವಿಸಿದ್ದಾರೆ ಅವರು ತಮ್ಮದೇ ಆತ್ಯಂತ ಧೈರ್ಯಯುತವಾದ ಮತ್ತು ಪ್ರಗತಿಯುತವಾದ ನೀತಿಯೆಂದೂ ಕಾರ್ಯಕ್ರಮವೆಂದೂ ತಿಳಿದಿದ್ದಾರೆ. ಅದಕ್ಕೆ ಪೂರ್ಣ ವಿಜಯವಾಗಲೆಂದು ಅಲ್ಪಸಂಖ್ಯಾತರು ಬಯಸುವುದ ಕ್ಕಿಂತ ಹೆಚ್ಚಿಗೆ ಇನ್ನೇನೂ ಮಾಡಲುಸಾಧ್ಯ? ಅವನ್ನು ಹಿಂಬಾಲಿಸಲು ಸಾಧ್ಯವಿಲ್ಲದಿದ್ದರೆ ಅಲ್ಪಸಂಖ್ಯಾತರು (ಸರದಾರ್, ಆಜಾದ್ ಇತ್ಯಾದಿ ಮಹನೀಯರು) ಕಾಂಗ್ರೆಸ್ಸಿನಿಂದ ಹೊರಗಾಗಬೇಕು ಹಿಂಬಾಲಿಸಲು ಶಕ್ತರಾದರೆ ಬಹು ಸಂಖ್ಯಾತರಿಗೆ ಹೆಚ್ಚಿನ ಬಲ ಲಭಿಸಿದಂತಾಗುತ್ತದೆ. ಅಲ್ಪಸಂಖ್ಯಾತರು ಯಾವ ರೀತಿಯಲ್ಲೂ ಅಡಚಣೆಯನ್ನುಂಟುಮಾಡಬೇಕಾಗಿಲ್ಲ ಅವರಿಗೆ ಸಹಕರಿಸಲು ಅಸಾಧ್ಯವಾದಾಗ ಅವರು ಹಿಂದುಳಿಯಬೇಕು. ಕಾಂಗ್ರೆಸ್ ಭಾವನೆಯದ್ದು, ಆದರಿಂದ ಹೊರಗಿದಕ್ಕಿಂತ ಹಿತ ಜನರೇ ಅದರಲ್ಲಿ ಹೆಚ್ಚಿನ ಪ್ರಾತಿನಿಧ್ಯ ವಹಿಸುವರೆಂದು ನಾನು ಕಾಂಗ್ರೆಸ್ಸಿನವರಿಗೆಲ್ಲ ಎಚ್ಚರಿಕೆ ಕೊಡಬೇಕಾಗಿದೆ. ಅದ್ದರಿಂದ, ಕಾಂಗ್ರೆಸ್ಸಿನಲ್ಲಿ ಇರಲು ಸರಿಬೀಳದಿರುವವರು ಹೊರಗೆ ಬರಬಹುದು. ದ್ವೇಷರಹಿತವಾದ ಮನೋಭಾವನೆಯಿಂದ ಅವರು ಹಾಗೆ ಮಾಡಬೇಕೆಂದು; ಮತ್ತು ಹೆಚ್ಚು ಫಲಕಾರಿಯಾದ ಸೇವೆ ಸಲ್ಲಿಸುವ ನಿರ್ಧರವಾದ ಉದ್ದೇಶದಿಂದ ಅವರು ಹೊರಗೆ ಬರಬೇಕು.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಮಲ್ಲಿಕಾರ್ಜುನಾರಾಧ್ಯ ಮುದೇನೂರು,
ಮಳೆಮಠ, ತಿಪಟೂರು.

ಪ್ರ—ಪರಮಾತ್ಮಸ್ವರೂಪವು ಅಳವಟ್ಟಿರುವದೆಂಬು ದಕ್ಕೆ ಚಿನ್ಹೆಯಾವುದು?

ಉ—ವಿಷಯಭೋಗಾಂತರದಲ್ಲಿಯೂ, ವಿಷಯಲಾಭದಲ್ಲಿಯೂ, ವಿಷಯೇಂದ್ರಿಯ ಸಂಧಿಯಲ್ಲಿಯೂ, ಇಂದ್ರಿಯ ಮನಸ್ಸಂಧಿಯಲ್ಲಿಯೂ, ಜಾಗ್ರತ್ಸ್ವಪ್ನಗಳ ಸಂಧಿಯಲ್ಲಿಯೂ, ಸುಷುಪ್ತಿ ನಿರ್ವಿಕಲ್ಪಸಮಾಧಿಗಳ ಮಧ್ಯದಲ್ಲಿಯೂ, ಹೀಗೆ ಈ ಯಾವೆಶ್ಲಮಯಗಳಲ್ಲಿಯೂ ಮನಸ್ಸು ನಿಶ್ಚಲವಾಗಿರುವಿಕೆಯು. ಅಂದರೆ ಕ್ರೀಡಾಸಕ್ತಳಾದ ಪ್ರೌಢೆಯು ವಿಕಾಂತದಲ್ಲಿ ಒಂದು ಮೈಮೇಲೆ ಬಿದ್ದರೂ ಮರದ ತುಂಡಿನಂತಿರಬೇಕು ನಾನಾವಿಧ ಭಕ್ಷ್ಯಗಳು, ಭೂಮಿಯಿಮುತ್ತಿದ್ದರೂ ತಾಲಿಗೆಯಲ್ಲಿ ನೀರುಗರೆಯಬಾರದು ಹೊನ್ನಿನ ರಾಸಿಯು ಎದುರಾಗಿದ್ದರೂ ಮನಸ್ಸು ಚಲಿಸದಿರಬೇಕೆಂಬ ಭಾವವೆ: ಇಂತಹ ಜ್ಞಾನರೂಪವಾದ ಉಪಾಯವಂ ತಿಳಿದ ಮಹಾತ್ಮನಿಗೆ ಶೀತೋಷ್ಣ, ಸುಖ-ದುಃಖಾದಿಗಳ ದ್ವಂದ್ವದಿಂದಲೂ, ಇಂದ್ರಿಯಗಳ ಸನ್ನಾಹದಿಂದಲೂ, ಕಾಮಕ್ರೋಧಾದಿಗಳ ತುಳಿದಾಟದಿಂದಲೂ, ಆಧಿವ್ಯಾಧಿಗಳ ಸಂದಣಿಯಿಂದಲೂ ವ್ಯಥೆಯುಂಟಾಗುವದಿಲ್ಲವು.

ಪ್ರ—ಕಾಮ (ಆಶೆ) ಸಂತಪ್ತವಾದ ಮನಸ್ಸು ಯಾವು ದರಿಂದ ಜಯಿಸಲ್ಪಡುವದು?

ಉ—ಕಾಯದ ಕಬ್ಬಣದಿಂದ ಕಾದ ಕಬ್ಬಣದಂತೆ ಶಾಂತಯುಕ್ತವಾದ ಮನಸ್ಸಿನಿಂದ ಜಯಿಸಲ್ಪಡುವದು. (ಭಗ್ನವಾಗುವುದು)

ಪ್ರ—ವಾಪಾತಿಶಯದಿಂದಾತ್ಮವಿಚಾರದಲ್ಲಿ ಜುಗುಪ್ಸೆ ಯುಂಟಾದವರಿಗೇನೆನ್ನಿಬೇಕು?

ಉ—ಅನ್ನುವದಿನ್ನೇನು? ಸಂಸಾರವೆಂಬ ಮಹಾರಣ್ಯದೋಳ್ ಇರುವ ಕೆಲಸಕ್ಕೆ ಬಾರದ ಕಾಡುಮಗ, ಕಲ್ಲುಬಂಡೆಗಳೆಂದೂ. ಭಾರವಂ ಹೊರುವುದಕ್ಕೂ ಎಳೆಯುವುದಕ್ಕೂ ಯೋಗ್ಯವಾದ ನರಾಕೃತಿಯುಳ್ಳ ಎತ್ತು ಕತ್ತೆ-ಕೋಣಗಳೆಂದೆನ್ನಬೇಕು. ಜನನ-ಮರಣ-ಜರಾದುಃಖಮಯವಾದ ಸಂಸಾರದಲ್ಲಿ ನೆಲೆಸಿರುವ ನರರಿಗೂ ಪಶುಗಳಿಗೂ ವ್ಯತ್ಯಾಸವೆನು? ಪ್ರಿಯವಾಚಿಕರೇ! ಒಂದುವೇಳೆ ದೈವಬಲದಿಂದ ಗೃಹ-ಕ್ಷೇತ್ರ-ಧನ-ಧಾನ್ಯ ಪಶು-ಪುತ್ರಸುಖಾದಿಗಳು ಪ್ರಾಪ್ತವಾದಾಗ್ಯೂ ತತ್ವಜ್ಞಾನವಿಲ್ಲದ ನರನು ಗಾಳದ ಮಾಂಸವಂ ಗ್ರಹಿಸಿದ ಮತ್ಸ್ಯದಂತೆ ದುಃಖಕ್ಕೊಳಗಾಗುವನು.

ಪ್ರ—ಸುಖಪುರುಷನಾರು?

ಉ—ಪರಮಾರ್ಥಜ್ಞಾನದಿಂದ ಅದ್ವಿತೀಯನಾಗಿರ ತಕ್ಕವನು. ಆದರೆ ದ್ವಿತೀಯಪದಾರ್ಥ ಜ್ಞಾನವಿರುವ ವರೆಗೆ ದುಃಖವು ತಪ್ಪದಾದ್ದರಿಂದ ದುಃಖಕ್ಕೆ ತತ್ವವೂ ಸುಖಕ್ಕೆ ಮೂಲವೂ ಆದ ವೈರಾಗ್ಯವನ್ನು ಸಂಪಾದಿಸಬೇಕು. ವೈರಾಗ್ಯವಾದರೂ ಕಷ್ಟೂರಿಮೃಗವು ತನ್ನಲ್ಲಿರುವ ಸುಗಂಧವನ್ನರಿಯದೆ ಅಲ್ಲಿ ಇಲ್ಲಿ ಹುಡುಕುವಂತೆ ಹುಡುಕಿದರೆ ಪ್ರಾಪ್ತವಾಗತಕ್ಕದ್ದೂ, ಮತ್ತೊಬ್ಬರು ಕೊಡತಕ್ಕದ್ದೂ, ಮತ್ತೊಬ್ಬರಿಂದ ಕೊಳ್ಳತಕ್ಕದ್ದೂ ಅಲ್ಲವು. ಮುಖ್ಯವಾಗಿ ರೆಕ್ಕೆಬಲಿತ ಪಕ್ಷಿಯು ಸ್ವಶಕ್ತಿಯಿಂದ ಅಂತರಿಕ್ಷದಲ್ಲಿ ಹಾರಾಡುವಂತೆ ಸರ್ವಾಂಗ ಶುದ್ಧಿಪೂರ್ಣಾಂಗನು ತಾನೆ ವೈರಾಗ್ಯಶಾಲಿಯಾಗುವನು.

ಪ್ರ—ಪಾಣಿ-ಮಂತ್ರ-ಯಂತ್ರ-ಮೂಲಿಕಾಧಾರಣಾದಿ ಕ್ರಿಯೆಗಳಿಂದಾಗುವ ಸಿದ್ಧಿಗಳು ಎತರಿಂದಾಗವೆವು?

ಉ—ದೇಶ-ಕಾಲದ್ರವ್ಯ-ಕ್ರಿಯಾಯೋಗದಿಂದಾಗುವುವು ಪಾಮರರಿಗೆ ಅತ್ಯಾಶ್ಚರ್ಯಕರಗಳಾದ ಈ ಸಿದ್ಧಿಗಳು ಆತ್ಮಜ್ಞಾನಕ್ಕೆ ಉಪಯೋಗವೂ, ಆತ್ಮಜ್ಞಾನದಿಂದಿವುಗಳಿಗೆ ಸಾಧನೆಯೂ ಸಹ ಎಂದಿಗೂ ಆಗುವದಿಲ್ಲ ಆದರ್ಯುಕ್ತ ಆತ್ಮಾನುಸಂಧಾನಕ್ಕೆ ವಿಘ್ನಕಾರಿಗಳಾಗಿ ಲೌಕಿಕ ಪ್ರತಿಷ್ಠೆಗೆ ಸಾಧನಗಳಾದ ಇವುಗಳಂ ಪ್ರಾಜ್ಞರು ಅಂಗೀಕರಿಸುವದಿಲ್ಲವು. ತತ್ವಜ್ಞಾನಸಾರವಿಲ್ಲದ ಪುರುಷನನ್ನು ಜಲಬಿಟ್ಟಿದ ಕರೆಯಲ್ಲಿರುವ ಮತ್ಸ್ಯಗಳಂ ಬಕಪಕ್ಷಿಯಂತೆ ದುಃಖಗಳಾಕ್ರಮಿಸುವವು. ಆತ್ಮಸಿದ್ಧಿಯೇ ಸಿದ್ಧಿಯು.

ಪ್ರ—ಪಾರಮಾರ್ಥದೃಷ್ಟಿಯಿಂದ ಬಂಧು ಯಾರು?

ಉ—ತನಗೆ ತಾನೇ ಬಂಧುವಲ್ಲದೆ ಮತ್ತೊಬ್ಬರಾಗಲಾರರು. ಅದು ಕಾರಣ ತನ್ನ ಸ್ವರೂಪವಂ ತಿಳಿದವನೇ ಬಂಧುವೆನಿಸುವನು. ಆದರೆ ಬುದ್ಧಿವಂತನಾದವನು ಇದೆ ಯಾವದು, ಹೇಗೆ ಬಂದುದು, ಎಲ್ಲಿಂದುದಯಿಸಿತು, ಹೇಗೆ ಹೋಗುವದೆಂದು ಬಂದದ್ದೆಲ್ಲವನ್ನು ಸರ್ವದಾ ವಿಚಾರಿಸುತ್ತಿರಬೇಕಲ್ಲದೆ "ಪಾಲಿಗೆ- ಬಂದದ್ದು ಪ್ರಭುದತ್ತ ಪಂಚಾಮೃತ" ವೆಂದು ಹರ್ಷದಿಂದ ಸ್ವೀಕರಿಸಬೇಕು. ಧನವಾಗಲಿ, ಮಿತ್ರರಾಗಲಿ, ಸತಿ-ಸುತರಾಗಲಿ, ಶಾಸ್ತ್ರಗಳಾಗಲಿ, ಬಂಧುವರ್ಗವಾಗಲಿ ಯಾವದೂ ತನ್ನನ್ನುದ್ಧರಿಸಲಾರವು. ಅದ್ದರಿಂದ ನೈಷ್ಯಸುಖತ್ಯಾಗದ ಮನದಿಂ ತತ್ವಾರ್ಥವಂ ಮಥನಮಾಡುತ್ತ ತನ್ನಿಂ ತಾನುದ್ಧರಿಸಿಕೊಳ್ಳಬೇಕು. ಈ ರಹಸ್ಯದಿಂದಲೇ "ತಾನುಂಟೋ ಮೂರು ಲೋಕವುಂಟೋ" ಎಂಬ ಲೋಕೋಕ್ತಿಯೂ ಬಂದಿರುವದು. ವಾಚಕರೇ! ಯಾವುದರಿಂ ಚಿತ್ತವು ವೈರಾಗ್ಯದಿಂದ ವಿಷಯಗಳಲ್ಲಿ ಪ್ರವರ್ತಿಸದೆ ಆತ್ಮಾಕಾರವಾಗುವದೋ ಅದೇ ದಿವಸವು, ಅದೇ ಕಾಸ್ತ್ರವು, ಅವರೇ ಮಿತ್ರರೂ ಬಂಧುಬಾಂಧವರೂ ಎಂದು ತಿಳಿಯಬೇಕು.

ಪ್ರ—ರೂಪರಹಿತವಾಗಿ, ಸರ್ವವ್ಯಾಪಿಯಾಗಿ ಬೈಲೇ ಬೈಲಾಗಿರುವ ಆಕಾಶವು ಕಠ್ಯಗೆ ಕಾಣಲು ಕಾರಣ ವೇನು?

ಉ—ನೇತ್ರಗಳ ರೆಪ್ಪೆಗಳಂ ಮುಚ್ಚಲು ತೀಜೋಮಯವಾದ ಚಕ್ಷುರಿಂದ್ರಿಯವು ಹೊರಗೆ ಹೋಗುವದಕ್ಕೆ ಅವಕಾಶವಿಲ್ಲದೆ ತನ್ನ ಸ್ಥಾನವಾದ ಕರೀಗುಡ್ಡಿಯಲ್ಲಿಯೇ ನಿಲ್ಲುವದು. ಮತ್ತು ಇದೇ ರೀತಿಯಾಗಿ ರೆಪ್ಪೆಗಳಂ ತೆರೆದಿದ್ದಾಗಲೂ ಬಹು ದೂರವಾದ ಆಕಾಶದಲ್ಲಿ ಮುಂದಕ್ಕೆ ಹೋಗುವ ಶಕ್ತಿಯು ಆ ಚಕ್ಷುರಿಂದ್ರಿಯಕ್ಕೆ ಇಲ್ಲದೇ ಕರೀಗುಡ್ಡಿಯಲ್ಲಿಯೇ ನಿಂತ ನೇತ್ರಕ್ಕೆ ಕರೀಗುಡ್ಡೆಯ ಕಸ್ಪೇ ಹೊರಗಿರುವಂತೆ ಕಾಣುವದು, ಇದೇ ಕಾರಣವು. ಆದರೆ ಮುಂದೆ ಜ್ಞಾನೋತ್ತರದಲ್ಲಿ ಈ ರೆಪ್ಪೆಗಳ ತೋರಿಕೆಯ ಭಾವವೇ ಹಾರಿಹೋಗಿ ದೇದೀಪ್ಯಮಾನವಾದ ಪ್ರಕಾಶವು ಕಾಣುವದು

ಪ್ರ—ದುರ್ಲಭನಾರ ಪುರುಷನಾರು?

ಉ—ಸಮಬುದ್ಧಿಯಾದ ಪ್ರಭುವು, ಪರಾತ್ಪರವಂ ಪೇಳಿಕೊಳ್ಳಬಹ ಶೂರನು, ಲೋಕನಿಂದೆಗೆ ಒಳಗಾಗದ ಧನಿಕನು ಇವರುಗಳು ಇಲ್ಲಿ ಶೂರನೆಂದರೆ ಧರ್ಮಸಮ್ಮತವಾದ ನಡತೆಯುಳ್ಳ ರಾಜನಿಗೋಸ್ಕರವಾಗಿಯೂ, ಸತ್ಪುರುಷರ ನಿಮಿತ್ತವಾಗಿಯೂ, ಮಿತ್ರನ ನಿಮಿತ್ತವಾಗಿಯೂ, ಶರಣಾಗತ ರಕ್ಷಣಾರ್ಥವಾಗಿಯೂ ಯಥಾಶಾಸ್ತ್ರವಾಗಿ ಯುದ್ಧವಂ ಮಾಡತಕ್ಕವನು. ಇಂತಹವನು ಕೀರ್ತಿಯಂ ಸಾಧಿಸಿದವನಾದ್ದರಿಂದ ಸತ್ತಿದ್ದರೂ ಬಮಕೆಯವನೆಂದು ತಿಳಿಯತಕ್ಕದ್ದು. ಅವನಿಗೆ ಶಾಶ್ವತವಾದ ವೀರಸ್ವರ್ಗವಾಗುವದು. ಆದರೆ ಯಾವನು ದುರ್ಮಾರ್ಗಪ್ರವರ್ತಕನಾದ ರಾಜನಿಗೋಸ್ಕರವಾಗಿ ಅಯಥಾಶಾಸ್ತ್ರವಾಗಿ ಯುದ್ಧವಂ ಮಾಡುವನೋ ಅವಳು ಹೇಡಿಯೆನಿಸಿಕೊಳ್ಳುವನಲ್ಲದೆ ಅವನು ಬದುಕಿದ್ದರೂ ಸತ್ತಂತೆಯೇ ಸರಿ. ಇವನಿಗೆ ಶಾಶ್ವತವಾದ ನರಕ ಸ್ಥಾನವು ದೊರೆಯುವದು.

ಪ್ರ—ನಿತ್ಯಾನಂದವಾದ ಮೋಕ್ಷಸಾಮ್ರಾಜ್ಯವೆಂಬ ಉಪ್ಪರಿಗೆಯನ್ನೇರಲು ಸಾಧನಗಳಾದ ಸೋಪಾನಗಳಾವುವು?

ಉ—ಸುಜೇಜ್ಞಾ, ವಿಚಾರಣಾ, ತನುಮಾನಸ, ಸತ್ವಾಪತ್ತಿ, ಅಸಂಸಕ್ತಿ, ಪದಾರ್ಥಭಾವನೆ, ತುರ್ಯಗ, ಎಂಬುವುಗಳು. ಇವುಗಳಿಗೆ ಜ್ಞಾನಭೂಮಿಕೆ-ಯೋಗಭೂಮಿಕೆಗಳೆಂಬ ಸಂಜ್ಞೆಗಳುಂಟು. ಇವುಗಳನ್ನು ಸಾಧಿಸಿದವನು ನಿಂತ ಕುಂಬಾರನ ಚಕ್ರದಂತೆಯೂ, ಅಲೆಯ ಗಿಡದ ಕಡಲಿನಂತೆಯೂ, ತುಂಬಿದ ಕೊಡದಂತೆಯೂ, ಮೇಘ ನಕ್ಷತ್ರಗಳಲ್ಲದ ಗಗನದಂತೆಯೂ, ಸ್ಥಿರವಾಗಿನಿಂತ ವಾಯುವು ಗಂಧವಂ ಬಿಡುವಂತೆಯೂ, ಮತ್ತು ಬಿರುಗಾಳಿಯಿಂ ಹಾರಿಸಲ್ಪಟ್ಟ ಮೊಡದಿಂದೀಚೆಗೆ ಬಂದ ಚಂದ್ರನಂತೆಯೂ ಶಾಂತವಾಗಿಯೂ ಪ್ರಕಾಶಕಾಗಿಯೂ ಇರುವನು. ಇಲ್ಲದೆ ಈ ಭೂಮಿಕೆಗಳ ಸಿದ್ಧಿಯಂ ಮುಕ್ತಿಯಾಗಲು ಅವನಿಗೆ ಪುನರ್ಜನ್ಮವಿಲ್ಲವು.

ಪ್ರ—ಶಾಸ್ತ್ರವು ಏತರಿಂದ ಪುಟ್ಟಿರುವದು?

ಉ—ನೂಲಿನಿಂದ ಬಟ್ಟೆಯಾಗುವಂತೆ ವ್ಯವಹಾರದಿಂದ ಹುಟ್ಟಿರುವದು. ಶಾಸ್ತ್ರವು ವ್ಯವಹಾರಕ್ಕಿಂತಲೂ ಭಿನ್ನವಾಗಿಲ್ಲ. ಶಬ್ದಾರ್ಥರಂಜನೆಗಳಾದರೂ ವ್ಯವಹಾರಾರ್ಥವಾಗಿಯೇ ಪುಟ್ಟಿರುವವು. ವ್ಯವಹಾರಗಳಾದರೋ ಶಾಸ್ತ್ರವೆಂಬುವಸ್ತ್ರಕ್ಕೆ ಸೂತ್ರಗಳಂತಿರುವವು. ಜ್ಞಾನಶಕ್ತಿ ಶಾಸ್ತ್ರವೇ ಕಾರಣವಾಗಿರುವುದರಿಂದ ಶಾಸ್ತ್ರಾಭ್ಯಾಸವು ಅವಶ್ಯಕವಾಗಿರುವದು. ಹೀಗೆ ಶಾಸ್ತ್ರವಿಚಾರದಲ್ಲಿ ಮನವು ಬೀಳಲು ನೀರಿನಲ್ಲಿ ಬಿದ್ದ ಉಪ್ಪಿನ ಬೊಂಬೆಯಂತೆ ಭಾವಗಳೆಲ್ಲವೂ ಒಂದಾಗಿ ಕರಗಿ ಹೋಗುವವು.

"ವಿಭೂತಿ" ಮಾಸಪತ್ರಿಕೆ

ಶುಭ್ರಸಿದ್ಧರಾದ ಪಂಡಿತ ಚಿದಿರೆ ಮತದ ವೀರ ಭದ್ರಶಾಸ್ತ್ರಿಗಳ ಸಂಪಾದಕತ್ವದಲ್ಲಿ ಆಂಧ್ರಧಾಪೆಯಿಂದ "ವಿಭೂತಿ" ಎಂಬ ಮಾಸಪತ್ರಿಕೆಯು ಶಿವರಾತ್ರಿಗೆ ಪ್ರಕಟಿಸಲ್ಪಡುವುದು. ವಿದ್ವಾಂಸರ ಲೇಖರತ್ನಗಳಿಂದ ತುಂಬಿ ಬಹಳ ಸುಂದರವಾಗಿ ಹೊರಡುವದಿದೆ.

ಚಂದಾ ವರ್ಷಕ್ಕೆ ೩-೮-೦ ಮಾತ್ರ.

ಳಿಒಲರ, ಸಜ್ಜಾಲಾಲ್‌ಬೀದಿ, ಸಂಪಾದಕ
ಸಿಕಿಂದ್ರಾಬಾದ್, ದಖ್ಖ. "ವಿ ಭೂ ತಿ"

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವಜ್ವರ, ೨ ವ ೩ ದಿನ ಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಡೋಸ್ಸು ಸೀಸೆಗೆ ಆಣೆ 0-14-0, 8 ಡೋಸ್ಸು ಸೀಸೆಗೆ ರೂ. 1-8-0, ಡಜ್ಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಪರಿಲ್ಲ—ಸ್ವಚ್ಛೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ನಿಷ್ಪವಾಗುವದು, ವೀರ್ಯಕ್ಷಯ, ತಲೆಗಾಪಧಾತು, ಇನ್ನಿಲ್ಲದ ಬಾಡನ್ನು ತತ್ತು ಬಿಸಾಡಿವದಲ್ಲಾದ ಧಾತುಪಾಸ್ಟಿಕ ರಸಾಯನವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲಕರವ ಹೊಟ್ಟೆಯೊಳಗಿನ್ನು ನಾನಿಕಡಿಸಿ ಹಾಡಿಸುವ ದರಲ್ಲಿ ಸುಮ್ಮು ಔಷಧಿ. ಡಜನ್ ಆ. 0-5-0 100 ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಮು—ಕರಿಣಕರವಾದ ಹುಳ ಮೇಯುವುದು, ಗಜಕರ್ಜ, ಹಳಕಜ್ಜಿಗೂ ಉತ್ತಮ. ಆಣೆ 5.

ಶುದ್ಧ ಟಿಕ್ಕು, ತೊಮ್ಮೆಹಕಿ ವಿಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

ಕಂಪೌಂಡ್ ಸಿರಪ್ ಜ್ಞಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇಪಸ್ಸ, ಖಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇವಿ ಟೋಪ್—ಜಾಲ್ಮಕ್ಕಾಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ಕಾಮರಿಗ್ರಹಣ ರೋಗದಿಂದ ಮೂಂಸ ಜೋಲುದಿದ್ದು, ಮೈ-ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಈಯರ್ ಒಯಿಲ್—ಕಿವಿ ಸೋರುವದು, ನ ನೋವ ಕಿವುಡು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಸ್ಣಹೊರಕಡಿಗೆ ಸಿದ್ಧಾಷಧಿ ಸೀಸೆಗೆ ರೂ. 1-0-0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಡಿಗೆ ಸೀಸೆಗೆ ರೂ. 1-0-0.

ಕಂಪೌಂಡ್ ಸಿರಪ್ ವೆಸಿಕೋಜ—ಪ್ರಮೇಹ ಮೂತ್ರಜ್ವಾರದಿಂದ ಕೀವು, ಮೂತ್ರಜೊಯ್ಯುವಾಗ ತಡೆಯಲಾರದೆ, ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇವೇ ಮೊದಲಾದ ಪ್ರಮೇಹದ ಲಕ್ಷಣಗಳಬುಡವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪಕ್ರಿಯೊಂದು ಗುರುವರ್ಗದ ಮತ್ತೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಜರಿಗಳು ಎಷ್ಟುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೂರುಗಳು ವಿಷಯುಗಳನ್ನು ಬರೆದುಕೊಳ್ಳಲೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಹಪವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪೂರಯಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯುಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ.' ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಸಂಪೂರ್ಣವಾಗಿ ಬಂದ ತಮ್ಮ ಶಿಷ್ಯರನ್ನು ಕಾಣಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೬—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೬—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೬—೦
ನಾಗಭಸ್ಮ	೧	೦—೬—೦
ಹರ್ತಾಳಭಸ್ಮ	೧	೦—೬—೦
ಕಾಂಚನಭಸ್ಮ	೧	೦—೬—೦
ಜಸ್ತೆಭಸ್ಮ	೧	೦—೬—೦
ಮಂಡೂರಭಸ್ಮ	೧	೦—೬—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೬—೦
ಕಪರ್ದಿಭಸ್ಮ	೧	೦—೬—೦
ಸಾರಂಗದ ಕೊಡಿನ ಭಸ್ಮ	೧	೦—೬—೦
ಗೋದಂತಿಹರತಾಲಭಸ್ಮ	೧	೦—೬—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೬—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,
ಆಯುರ್ವೇದರಸಾಯನಶಾಲಾ,
ಪೋಸ್ಟ್, ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಶ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂಪ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿಯವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರನಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖರಾಕ್ಷರದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿತಿಕೇಪನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಪೂರ್ವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ ಪುಟಗಳಿಂದ ಕೂಡಿದ್ದು ಒಳ್ಳೆ ಬಿಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥಶತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಹಿಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಂಗಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೪ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸನಂದ, ಮೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೧—೬

ಸದ್ಯ: ಹೀರಾರೋಹಣಮಾಡಿರತಕ್ಕ ಏವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಸಂಡಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ಕ್ಕೆ ... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧೪ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೨—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೇಷಣನ ಪ್ರಾಥ: ನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪನನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಆಂಧ್ರಮಾಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಛರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಾಳಿತುಕೊಂಡಿರುವ ಫೋಟೋ ೦—೦—೯

ಖಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪ಕ್ಕೆ ... ... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾತ್ಮರದ ಅತ್ಯಂತ ಸುಂದರವಾದ ಫೋಟೋ ೧೪ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ಕ್ಕೆ .... ೧—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ... ೦—೦—೯

ಹಿಮವತ್ಕೇದಾರತಪ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಿರ್ಮಿಸಿದ ರಂಭಾಪುರೀ ಜಗದ್ಗುರುಗಳ ಅಷ್ಟಮಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯ ಜ್ಞಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪಥವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ತಜ್ಞ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಪ್ಪೇಕ್ಷೆಯನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[42] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	....	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	....	೨ ಆಣೆ
ಬಸವಾದಿಶಿವಶರಣರ ಸಂಕ್ಷಿಪ್ತ ಚರಿತ್ರೆ	....	....	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಪ್ರಭಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	....	೨ ಆಣೆ
ವೀರಶೈವಮತಮಿಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	....	....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಾಧ್ಯಾಂತದಿವಾಕರ (೨ನೆಯ ೨ನೃತ್ತಿ)	....	....	೮ ಆಣೆ
ಪದ್ಯೋಧರತ್ನಾವಳಿ	....	....	೮ ಆಣೆ
ಪಂಡಿತ ಶ್ರೀಲಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೨ ಆಣೆ
ಮಾಹೇಶ್ವರ ದೀಕ್ಷಾನಿಧಿ (೨ನೆಯ ಆವೃತ್ತಿ)	....	....	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	....	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	....	....	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	....	....	೧ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು)	....	....	೧| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	....	೮ ರೂ.
A brief life-sketch of Pandit Sri Kashinatha Shastriji (*English*)			**4 As.**
Shakti-Vishistadvaita *or* The Philosophical Aspect of Virasaivism (*English*)			**8 As.**
Speeches by Pandit Shri Kashinatha Shastriji *English*)			**12 As.**
ವೀರಶೈವರತ್ನ (ಮರಾಠೀ)		...	**೧ ರೂ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		...	**೧ ರೂ.**
ವೀರಶೈವೇಂದುಶೇಖರ (ಸಂಸ್ಕೃತ) ...		...	**೧ ರೂ.**
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) ...		...	**೬ ಆಣೆ**
ನಂದಿಕೇಶ್ವರಕಾರಿಕಾ (ಸಂಸ್ಕೃತ) ...		...	**೨ ಆಣೆ**
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ...		...	**೨ ಆಣೆ**
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...		...	**೩ ರೂ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಿಸ್ಟಿನಲ್ಲಿ ಆಸ್ಥಾನ ಪಂಡಿತರಿಂದ್ಯಾ ದೇವ ಕವಿ ಗುರುಪಂಚಾಕ್ಷರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ತಾವೂ ಆಚರಿಸುವದು ವಿಹಿತವೆಂದರಿಯುವದು ಸ್ತ್ರೀಯರಿಗನರ್ಹವು ಕೃಷ್ಣನು ೧೬ ಸಹಸ್ರ ಸ್ತ್ರೀಯರನ್ನು ಭೋಗಿಸಿದರೂ ಬ್ರಹ್ಮಚಾರಿಯಂತೆ! ಸ್ತ್ರೀಯಳು ತನ್ನ ಪತಿಯ ಹೊರತು ಇತರ ಪುರುಷನಲ್ಲಾಸಕ್ತಳಾದರೆ ಪಾತಿವ್ರತ್ಯಕ್ಕೆ ದೋಷಬರುವದಂತೆ! ಎಂದು ಸಭೆಗಳಲ್ಲಿ ಭಾಷಣಮಾಡುವ ಪಂಚಕಲ್ಯಾಜೆ ಹೆಣ್ಣುಗಳೂ ಉಂಟು. ಈ ವಿಷಯವು ಅಂತಹ ಹೆಂಗಳೆಯರಿಗೆ ಸಲ್ಲುವದು. ಅರ್ಯಸ್ತ್ರೀಯರಿಗದು ಬೆಂಡವೇ ಬೇಡ.

ಓ ನನ್ನ ಮಾತೃವರ್ಗವೇ! ಯಾರು ಏನೆಂದು ತಿರಸ್ಕರಿಸಿದರೂ ನೀನು ನಿನ್ನ ಪಾತಿವ್ರತ್ಯಕ್ಕೆ ತಿಲಮಾತ್ರವೂ ದೋಷ ಬಟ್ಟಿದಂತಾಚರಿಸಿ ಪರಶಿವನ ಕೃಪೆಗೆ ಪಾತ್ರವಾಗು

ನಿಂದಕರೇ! ಯಾರನ್ನಾದರೂ ನಿಂದಿಸಿರಿ. ಪರಂತು ಪತಿವ್ರತೆಯರನ್ನು ಅಲ್ಲದ ಶಬ್ದಗಳಿಂದ ನಿಂದಿಸಿ ನರಕದಲ್ಲಿಯ ರಿಯುರ್ ಟಿಕೇಟನ್ನು ಪಡೆಯಬೇಡಿರಿ. ಪತಿವ್ರತೆಯರನ್ನು ನಿಂದಿಸಿದರೆ ಅದಕ್ಕೆ ಯೋಗ್ಯಫಲವನ್ನು ಅವಶ್ಯವಾಗಿ ಪಡೆಯುವಿರಿ. ನೀವು ನನ್ನ ಬಾಂಧವರಾದ ಕಾರಣ ಅಂತಹ ದುಃಖದಲ್ಲಿ ನೀವು ಬೀಳಬಾರದೆಂದೇ ನನ್ನ ವಿನಂತಿಯು.

ಪತಿವ್ರತಾಮಾತೃಗಳ ಪಾದರಜಃಕಣ,
ಜೆ. ಜೆ. ಪಾಟೀಲ ಘೋಪ್ರೀ,
ವೀರಶೈವಧರ್ಮ ಸುಧಾರಣಾ ಸಂಘ,
ತಾ॥ ಸೋಲಾಪುರ.

ನೂಕನ ಪಟ್ಟಾಧಿಕಾರಮಹೋತ್ಸವ.

ಹಾಸನಡಿಸ್ಟ್ರಿಕ್ಟು ಮಂಜ್ರಾಬಾದುತಾಲ್ಲೂಕು ಎಸಳೂರು ಹೋಬಳಿ ಹೆಗ್ಗಡಹಳ್ಳಿಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶ್ರೀ ಸಿದ್ಧಲಿಂಗಸ್ವಾಮಿಗಳವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಕೃಪೆಯಿಂದ ಆರಿಸಲ್ಪಟ್ಟ ಶ್ರೀ ವಿಶಂಕರೇಶ್ವರಶಿವಾಚಾರ್ಯರಿಗೆ ತಾ॥ ೨೭-೧-೩೮ ನೇ ಶುಕ್ರವಾರ ಪ್ರಾತಃಕಾಲ ಅಧಿಕಾರವನ್ನು ಕೊಟ್ಟು ಮಹೋತ್ಸವವನ್ನು ಭಕ್ತಾದಿಗಳ ಸಹಾಯದಿಂದ ವಿಜೃಂಭಣೆಯಿಂದ ಜರುಗಿಸಿದರು. ಈ ಮಹೋತ್ಸವಕ್ಕೆ ಚಿಂಗಡಹಳ್ಳಿ ಚನ್ನವೀರದೇಶಿಕೇಂದ್ರಸ್ವಾಮಿಗಳು, ತೆಂಕಲುಗೂಡು ಮಠದ ಚನ್ನಬಸವಸ್ವಾಮಿಗಳು, ಊರುಮಠದ ಶಾಂತವೀರಸ್ವಾಮಿಗಳು, ಮುದ್ದಿನಕಟ್ಟೆಸ್ವಾಮಿಗಳು, ಲಕ್ಕೇದನಾಲು ಶಾಂತಮಲ್ಲಯ್ಯನವರು, ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳು, ವೇ॥ ತಲಕಾಡು ಸಿದ್ಧಮಲ್ಲಶಾಸ್ತ್ರಿಗಳು, ವೇ॥ ಎಸಳೂರು ಬಸವರಾಜಶರ್ಮರು, ಮ॥ ರಂ॥ ಕೂಚಿಳ್ಳೆ ಮಲ್ಲಪ್ಪನವರು, ಕೂಚಿಳ್ಳೆ ನಂಜಪ್ಪನವರು, ಕೆಂಚಮ್ಮನ ಹೊಸಕೋಟೆ ರೇವಣ್ಣನವರು, ಕೊಡ್ಲೀಪೇಟೆ ಹೆ॥ ಮಾ॥ ಕೆ. ಎಸ್. ಕರಿಬಸಪ್ಪನವರು ಮತ್ತು ಎಳೂರು ಷ॥ ಅ॥ ಸರ್ವಶ್ರೀ ರವರಾದ ಎಂ. ಸಿ. ನಂಜಪ್ಪನವರು, ಎಳೂರು ಮಲ್ಲೇಶಗೌಡರ ಸಹೋದರರು ಎ ಸಿ. ನಂಜಪ್ಪನವರು ನಾಡು, ಮಂದೆ, ಗ್ರಾಮಪಟೇಲರುಗಳೂ, ಶೆಟ್ಟರು, ಪಟ್ಟಣಶೆಟ್ಟರು, ಯಜಮಾನರು ದೈವದವರು ಕೆಲಿಯರೇ ಮುಂತಾಗಿ ಅನೇಕ ಭಕ್ತಾದಿಗಳೂ, ನೂರಾರು ಜನ ಮಹಿಳೆಯರೂ ನೆರೆದಿದ್ದರು. ಶಾಸ್ತ್ರೋಕ್ತವಾಗಿ ಮಂಟಪದಲ್ಲಿ ಹೋಮಾದಿ ಪೂಜೆಗಳು ನಡೆದ ಬಳಿಕ ಶ್ರೀ ಚನ್ನಬಸವಸ್ವಾಮಿಗಳು ಗುರುಗಳೀರ್ವರನ್ನು ಕರೆದುಕೊಂಡು ಬಂದು ಗದ್ದುಗೆಯ ಮೇಲೆ ಕುಳ್ಳಿರಿಸಿ ಪೀಠದಲ್ಲಿ ತಾವು ಕುಳತುಕೊಂಡರು. ವೇ॥ ಬಸವರಾಜಶರ್ಮರವರು ಜಗದಾಚಾರ್ಯರ ಗುರುಸ್ತೋತ್ರವನ್ನು ಮಾಡಿದ ಬಳಿಕ ಶ್ರೀಮತಿಯರು ಕೊಡ್ಲೀಪೇಟೆ ಪುಟ್ಟಮ್ಮ ಎಸಳೂರುಪೇಟೆ ಹಡಾಲ್ ಮಲ್ಲಮ್ಮ ಮತ್ತು ಸಣ್ಣಕ್ಕ ಇವರು ಇಂಪಾದ ಗಾನದಿಂದ ಗುರುಧ್ಯಾನರೂಪವಾದ ಹಾಡನ್ನು ಹೇಳಿದರು. ಬಳಿಕ ಷ॥ ಅ॥ ಷ॥ ರವರ ನಾದಿನಿ ಮೈಸೂರು ಎಂ. ಡಿ ನಾಗಮ್ಮನು ಬಲು ಸಾರಸ್ಯವಾಗಿ ಪದ್ಯಗಳನ್ನು ಓದಿ ಗುರುಗಳಿಗೆ ಒಪ್ಪಿಸಿದಳು. ಬಳಿಕ ಶ್ರೀ ಜಗದ್ಗುರುಗಳು ಕಳುಹಿಸಿದ ನಿರೂಪ ಮತ್ತು ಫಲ ಮಂತ್ರಾಕ್ಷತೆಯನ್ನು ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಒಪ್ಪಿಸಿದರು. ಅನಂತರ ಎಸಳೂರುಪೇಟೆ ನಿವಾಸಿ ಶ್ರೀಮಠದ ಖಾಸಾಶಿಷ್ಯ ಪಾಸನದ ಸ್ಟೂಲ್ಬ್ಯಾಸ್ಟರ್ ವೈ॥ ಹೆಚ್. ಸಿದ್ದಯ್ಯನವರು ಬಿನ್ನವತ್ತಳೆಯನ್ನು ಸಭಿಕರ ಅಪ್ಪಣೆ ಪಡೆದು ಶಿಷ್ಯಮಂಡಳಿಯಪರವಾಗಿ ಓದಿ ತಟ್ಟೆಯಲ್ಲಿಟ್ಟು ಆರ್ಪಿಸಿದರು. ಬಳಿಕ ಷ॥ ಅ॥ ಷ॥ ಎಂ ಸಿ ನಂಜಪ್ಪನವರು ಪುಷ್ಪಮಾಲೆಗಳನ್ನು ಗುರುಗಳೀರ್ವರಿಗೂ ಹಾಕಿದರು. ಮಠದ ಖಾಸಾ ಪ್ರಮುಖ ಶಿಷ್ಯರಾದ ಹದಾಲ್ ಗುರುಶಾಂತಯ್ಯನವರು ಕಳುಹಿಸಿದ ಪಟ್ಟಮಹೋತ್ಸವದ ಗುರುಕಾಣಿಕೆಯನ್ನು ಅವರ ತಮ್ಮಂದಿರು ಭಕ್ತಿಯಿಂದ ಒಪ್ಪಿಸಿದರು. ಅನಂತರ ಅನೇಕ ಭಕ್ತಾದಿಗಳು ಗುರುಕಾಣಿಕೆಯನ್ನು ಒಪ್ಪಿಸಿದರು. ತರುವಾಯ ವೈ॥ ಹೆಚ್. ಸಿದ್ದಯ್ಯನವರು ಈ ಮಹೋತ್ಸವವನ್ನು ದಕ್ಷತೆಯಿಂದಲೂ ವಿತರಣೆಯಿಂದಲೂ ಜರುಗಿಸಿದ ತೆಂಕಲುಗೂಡುಮಠದ ವೃದ್ಧರಾದ ಶ್ರೀ ಚನ್ನಬಸವಸ್ವಾಮಿಗಳ ಗುಣಕಥನವನ್ನು ಮಾಡಿದಬಳಿಕ ನೂತನಗುರುಗಳಾದ ಶ್ರೀ ವಿಶಂಕರೇಶ್ವರಶಿವಾಚಾರ್ಯರು ದಿವ್ಯವಾಣಿಯಿಂದ ಸಭೆಯವರಿಗೆ ಮನದಟ್ಟುವಂತೆ ಭಾಷಣವನ್ನು ಮಾಡಿದರು. ಮಧ್ಯಾಹ್ನ ಸಾವಿರಾರು ಜನಗಳಿಗೆ ದಾಸೋಗವಾಗಿ ಸಾಯಂಕಾಲ ೨೨ ಮಂದಿ ನಟುಗಳಿಗೆ ದೀಕ್ಷಾ ಸಂಸ್ಕಾರ ನಡೆದು ಚಿಂಗಡಹಳ್ಳಿ ಗ್ರಾಮದ ಜೇರ್ಕಿ ಕುಂಚಿಳ್ಳೆ ನಂಜಪ್ಪನವರು ಪಟೇಲ್ ಬಸಪ್ಪನವರು ವ್ಯಾಧಿಸಿಕೊಂಡಂತೆ ಉತ್ಸವವು ಮಠದಿಂದ ಹೊರಟು ವಾದ್ಯಗಳು ಘೋಗರೆಯುತ್ತ ಕೊಪ್ಪಲು ಗ್ರಾಮ ಚಿಂಗಡಹಳ್ಳಿ ಬೀದಿಯಲ್ಲಿ ಮೆರವಣಿಗೆಯಾಯಿತು. ಅತ್ಯಂತ ಶ್ರದ್ಧೆವಹಿಸಿ ನಡೆಸಿದ ಕೂಚಿಳ್ಳೆ ನಂಜಪ್ಪನವರು ಗ್ರಾಮದ ಪರವಾದ ಬಿನ್ನವತ್ತಳೆ ತೆಗೆದುಕೊಂಡು ಅವರ ಕುಟುಂಬದ ಭಕ್ತಿಗೆ ಶ್ರೀ ಗುರುವು ಆನಂದಪಟ್ಟು ಆಶೀರ್ವದಿಸಿ ರಾತ್ರಿ ಉತ್ಸವವು ಮಠಕ್ಕೆ ತಲ್ಪದ ಬಳಿಕ ಸಭೆಯು ಪ್ರಾರಂಭವಾಯಿತು. ಚಿಂಗಡಹಳ್ಳಿ ಮಠದ ಶ್ರೀ ಚನ್ನವೀರದೇಶಿಕೇಂದ್ರ ಸ್ವಾಮಿಗಳವರು ಅಧ್ಯಕ್ಷತೆಯನ್ನುವಹಿಸಿ ಭಾಷಣಮಾಡಿದರು. ತರುವಾಯ ಎಲೂರು ಷ॥ ಅ॥ ಷ॥ ಎಂ. ಸಿ. ನಂಜಪ್ಪನವರು ಗುರುಭಕ್ತಿಯ ಅವಶ್ಯಕತೆ, ಗುರುಮಹಿಮೆ, ಗುರುಶಿಷ್ಯರ ಸಂಬಂಧ, ಶಿಖಾದೀಕ್ಷಾ ವಿಚಾರ, ಮತಧರ್ಮರಹಸ್ಯ ವಿಚಾರವಾಗಿಯೂ ಹೆಗ್ಗಡಹಳ್ಳಿ ಮಠದ ಶ್ರೀಗಳವರ ಗುಣಕಥನವಿಚಾರವಾಗಿಯೂ ತೆಂಕಲುಗೂಡು ಮಠದ ಶ್ರೀಗಳವರ ದಕ್ಷತೆ ಶೀಲಸ್ವಭಾವಗಳ ವಿಚಾರವಾಗಿಯೂ ಈ ಮಠದಲ್ಲಿ ನೆರೆವಿರುವ ವಿರಕ್ತ ಪಟ್ಟಮೂರ್ತಿಗಳ ಐಕಮತ್ಯವಿಚಾರವಾಗಿಯೂ ಸ್ವಾರಸ್ಯವಾದ ಭಾಷಣಮಾಡಿದಮೇಲೆ ವೇ॥ ಬಸವರಾಜಶರ್ಮರವರು ವೀರಶೈವವ್ಯಕ್ತಿಯ ಜನ್ಮ ಸಾರ್ಥಕ್ಕೆ ಗುರುವೇ ಮೂಲಕಾರಣ ಎಂಬೀ ವಿಚಾರದಲ್ಲಿ ಭಾಷಣ ಮಾಡಿದರು. ತರುವಾಯ ವೈ॥ ಹೆಚ್. ಸಿದ್ದಯ್ಯನವರು ವೀರಶೈವ ಪಂಚಪೀಠಗಳು ಮತ್ತು ಅವುಗಳ ಮಹತ್ವ, ಮಠದ ವ್ಯಾಸ್ತ್ಯವಿಚಾರವಾಗಿ ಉಪನ್ಯಾಸ ಮಾಡಿದರು. ಆಮೇಲೆ ಕೀರ್ತನಕೇಸರಿ, ಕವಿಭೂಷಣ, ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ತಮ್ಮ ಪ್ರೌಢಿಮೆಯಿಂದ ಭಕ್ತಿಸಂಬಂಧವಾದ ಶಿವಕಥೆಯನ್ನು ಸ್ವಾರಸ್ಯವಾಗಿ ಮಾಡಿದರು. ಶನಿವಾರ ದಿವಸ ಗುರುಗಳನ್ನು ಎಸಳೂರು ಭಕ್ತಾದಿಗಳ ಪ್ರಾರ್ಥನೆಯಂತೆ ತೆಂಕಲಗೂಡು ಮಠಕ್ಕೆ ಉತ್ಸವದಿಂದ ಕರೆತಂದರು. ದೇವಾಲಯದಲ್ಲಿ ಸಭೆನೆರೆತು. ತೆಂಕಲಗೂಡು ಮಠದ ನೂತನ ಗುರುಗಳಾದ ಬಳ್ಳಾರಿ ಗುರುನಿವಾಸ ಸಂಸ್ಕೃತ ಹೈಸ್ಕೂಲು ಪ್ರಧಾನೋಪಾಧ್ಯಾಯರಾಗಿರುವ ವೇದಾಂತಾಚಾರ್ಯ ಶ್ರೀ ನೀಲಕಂಠ ಶಿವಾಚಾರ್ಯರು ಅಧ್ಯಕ್ಷಪೀಠವನ್ನಲಂಕರಿಸಿದರು. ಆದಿಯಲ್ಲಿ ಗುರುಸ್ತೋತ್ರ ನಡೆದ ಬಳಿಕ ಮಲುಗಳಲೆ ಪುಟ್ಟಯ್ಯನವರು ಎಸಳೂರಿನ ಪರವಾಗಿ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ವೈ॥ ಹೆಚ್. ಸಿದ್ದಯ್ಯನವರು ರೇಣುಕ ಮಹತ್ವವನ್ನೂ ಶ್ರೀಮದಭಿನವ ರೇಣುಕರ ವೈಭವಸಾಮ್ರಾಜ್ಯವನ್ನೂ ಶ್ರೀಮತ್ತು ರಾಜರ್ಷಿಗಳಿಂದ ಮಾನಿತರಾಗಿ ಸರ್ವಮತಿಯರಿಂದ ಪ್ರತಿಗೌರವ ಪಡೆದಿರುವ ಶ್ರೀ ಜಗದ್ಗುರು ಲೀಲಾ ಚರಿತ್ರೆಯನ್ನು ಸ್ವಾರಸ್ಯವಾಗಿ ತಿಳಿಸಿದ ಮೇಲೆ ಅಧ್ಯಕ್ಷರು ತಮ್ಮ ದಿವ್ಯವಾಣಿಯಿಂದ ಮಾನವನು ಇಹಕ್ಕೂ ಪರಕ್ಕೂ ಸಾಧನೀಭೂತವಾದ ಮೋಕ್ಷ ಹೇತುವಾದ ಭಕ್ತಿಯನ್ನು ಹೃದಯಕ್ಷೇತ್ರದಲ್ಲಿರಿಸಿ ಸರ್ವ ಸುಖವನ್ನು ಪಡೆಯುವುದು ಪರಮ ಧರ್ಮವೆಂದು ಬೋಧಿಸಿದರು. ಕೊಡ್ಲೀಪೇಟೆ ಭಕ್ತಾದಿಗಳ ಪ್ರಾರ್ಥನೆಯಂತೆ ಹೆ॥ ಮಾ॥ ಕೆ. ಎಸ್. ಕರಿಬಸಪ್ಪನವರು ಎಸ್. ಗುರುಲಿಂಗಪ್ಪನವರು ತೆಂಕಲುಗೂಡು ಮತ್ತು ಹೆಗ್ಗಡಳ್ಳಿ ಮಠದ ನೂತನ ಗುರುಗಳೀರ್ವರನ್ನು ಭಾನುವಾರ ಕೊಡ್ಲೀಪೇಟೆಗೆ ಕರೆತಂದು ಉತ್ಸವವನ್ನು ಮಾಡಿದರು. ದೇವಸ್ಥಾನದಲ್ಲಿ ಸಭೆ ನೆರೆತು. ಹೆ॥ ಮಾ॥ ಕೆ ಎಸ್ ಕರಿಬಸಪ್ಪನವರು ಬಿನ್ನವತ್ತಳೆಯನ್ನು ಒಪ್ಪಿಸಿದರು. ಬಳಿಕ ಸದರಿ ಮಾಸ್ತರ ಶಿಷ್ಯರಾದ ಕಟ್ಟಿಗೆ ನಿವಾಸಾಕ್ಷಪ್ಪನು ಗುರುಭಕ್ತಿಯಲ್ಲಿ ಸ್ತ್ರೀಯರ ಮಾನ್ಯತೆಯ ವಿಚಾರವಾಗಿ ಓದಿದಳು. ಅನಂತರ ಕೀರ್ತನಕೇಸರಿ, ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಧರ್ಮಗುಪ್ತ ಎಂಬ ಶಿವಕಥೆಯನ್ನು ಮಾಡಿದರು. ಆಮೇಲೆ ಶ್ರೀ ನೀಲಕಂಠ ಶಿವಾಚಾರ್ಯರವರು ವಿವಿಧಭಾಷಣಗಳಿಂದ ಅನೇಕ ಪುರಾಣೋಕ್ತಿಗಳನ್ನು ಉದಾಹರಿಸಿ ಗುರುಭಕ್ತಿಯು ಮತಶ್ರದ್ಧೆಯೂ ನೆಲೆಗೊಳ್ಳುವಂತೆ ಬೋಧಿಸಿದರು.

ವೈ॥ ಹೆಚ್. ಸಿದ್ದಯ್ಯ
ಮಠದ ಖಾಸಾ ಶಿಷ್ಯ, ಎಸಳೂರು ನಿವಾಸಿ.

ಜಯಂತಿಯಾಚರಣೆಯ ಆವಶ್ಯಕತೆ

ಈ ಪ್ರಪಂಚದಲ್ಲಿ ಅನೇಕ ಮತಗಳು ವಿರಾಜಿಸುತ್ತಿವೆ. ಆಯಾಯ ಮತಸ್ಥಾಪಕರ ಜಯಂತಿಗಳನ್ನು ಆಯಾಯ ಮತೀಯರು ಆಚರಿಸುವದು ಅದ್ಯಕರ್ತವ್ಯವಾಗಿದೆ. ಜಯಂತಿಯ ಪುಣ್ಯಾಚರಣೆಯಿಂದ ಮತ ಧರ್ಮಗಳ ಸೇವೆಯು ಸಲ್ಲುವದಲ್ಲದೆ ಧರ್ಮಿಕತತ್ವಗಳು ಗೊತ್ತಾಗುವವು. ಧರ್ಮವಂತರಿಗೆ ವಿಶ್ವಧರ್ಮದ ಮರ್ಮವು ಗೊತ್ತಾಗುತ್ತದೆ. ವಿಶ್ವಮತಗಳ ಧ್ಯೇಯವಾದರೂ ನಮ್ಮೀ ವೀರಶೈವಮತದ ಅಂತಿಮಧ್ಯೇಯವಾದ ಕತ್ತ್ವಮಸಿವಾಕ್ಯದ ರಹಸ್ಯವೇ ಆಗಿದೆ. ಇಂತಹ ಧ್ಯೇಯವನ್ನು ಜ್ಞಾನವನು ಸಾಧಿಸಬೇಕಾದರೆ ಮತ ಸ್ಥಾಪಕರ ಪುಣ್ಯದಿನಾಚರಣೆಯನ್ನು ತಪ್ಪದೆ ಭಕ್ತಿಯಿಂದ ಆಚರಿಸಬೇಕಾಗುತ್ತದೆ.

ಮತತತ್ವಗಳೆಂದರೆ ಮತಾಚಾರ್ಯರು ಹಾಕಿಕೊಟ್ಟ ನಿಯಮಗಳಾಗಿರುತ್ತವೆ. ಆ ನಿಯಮಗಳಂತೆ ಆಚರಿಸಿದರೆ ಜ್ಞಾನೋದಯವಾಗಿ ಸಾಯುಜ್ಯಪದವಿಯನ್ನು ಹೊಂದುವನು. ಅಂತಹ ಪವಿತ್ರ ನಿಯಮಗಳನ್ನು ಹಾಕಿಕೊಟ್ಟ ಮತಸ್ಥಾಪಕರ ಜಯಂತಿಯನ್ನು ಸರ್ವರೂ ಅವಶ್ಯವಾಗಿ ಆಚರಿಸಲೇಬೇಕು.

ಮುಂದೆ ಬರಲಿರುವ ಇದೇ ಮಾಘ ಬಹುಳ ೧೪ ಶುಕ್ರವಾರ ತಾ॥ ೧೪-೨-೧೯೩೮ ನೇ ಮಹಾಶಿವರಾತ್ರಿಯ ದಿವಸವು ಶ್ರೀಮದ್ಭಾರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಜಯಂತಿಯ ದಿನವಾದುದರಿಂದ ಪ್ರತಿಯೊಬ್ಬ ವೀರಶೈವರೂ ಆ ದಿವಸ ತಮ್ಮ ಮನೆ ಮಠಾದಿಗಳನ್ನು ತಳಿರು, ತೋರಣ ರಂಗವಲ್ಯಾದಿಗಳಿಂದ ಅಲಂಕರಿಸಿ ಶ್ರೀಜಗದ್ಗುರು ಭಗವತ್ಪಾದರ ಭಾವಚಿತ್ರಗಳನ್ನು ಷೋಡಶೋಪಚಾರಗಳಿಂದ ಪೂಜಿಸಿ ಭಜಿಸಿ ಪಲ್ಲಕ್ಕಿಯಲ್ಲಿರಿಸಿ ಮಹೋತ್ಸವವನ್ನು ನೆರವೇರಿಸಬೇಕು. ಇದೇ ನಿಜವಾದ ವೀರಶೈವರ ಧರ್ಮಾಚರಣೆಯು.

ಈ ಪ್ರಕಾರ ಪ್ರತಿಯೊಂದು ಗ್ರಾಮದವರು ಶ್ರೀ ಜಗದಾಚಾರ್ಯರ ಜಯಂತಿಯನ್ನು ಆಚರಿಸಿ ಆ ಪೂಜ್ಯಪಾದರ ಮಹೋತ್ಸವವನ್ನು ವೈಭವದಿಂದ ನೆರವೇರಿಸಿ ಪುಣ್ಯಭಾಗಿಗಳಾಗಬೇಕೆಂದೂ, ಇಂತಹ ಸದ್ಬುದ್ಧಿಯನ್ನು ಪ್ರತಿಯೊಬ್ಬರಿಗೂ ದಯಪಾಲಿಸಲೆಂದೂ ಶ್ರೀಜಗದಾಚಾರ್ಯರನ್ನೆ ಅನನ್ಯಭಕ್ತಿಭಾವದಿಂದ ಪ್ರಾರ್ಥಿಸುವ,

ವಿರೂಪಾಕ್ಷಪ್ಪ, ಚನ್ನಬಸವಪ್ಪ, ಗೋಡೆ.
ಸೆಕ್ರೆಟರಿ.
ಅ. ರೇ. ವಾಚನಾಲಯ, ಮುಳಗುಂದ.

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ.



ಭರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವುದೇ ಆಸ್ತಿಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ವೇದೋಕ್ತವಾಗಿ ಷೋಡಶೋಪಚಾರಗಳಿಂದ ಪೂಜೆಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಸೂಚನೆ.

ಪ್ರತಿವರ್ಷದ ಪದ್ಧತಿಯಂತೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನ ೨೦ ನೆಯ ತಾರೀಖಿನ ಪತ್ರಿಕೆಯು ಹೊರಡುವದಿಲ್ಲವೆಂಬ ವಿಷಯವನ್ನು ಚಂದಾದಾರರೆಲ್ಲರೂ ತಿಳಿಯತಕ್ಕದ್ದು. ಸಂ—

ವರ್ತಮಾನಸಂಗ್ರಹ.

ಐದುಜನರು ಕುಳಿತುಕೊಳ್ಳುವ ಬೈಸಿಕಲ್

ಏಕಕಾಲದಲ್ಲಿ ಒಬ್ಬರಹಿಂದೆ ಒಬ್ಬರಂತೆ 5 ಜನರು ಕುಳಿತುಹೋಗಬಲ್ಲ ಬೈಸಿಕಲ್ ತಯಾರಾಗಿದೆಯಂತೆ! ಇದು 12½ ಅಡಿ ಉದ್ದವಿದ್ದು 154 ಪೌಂಡು ತೂಕವಿರುವದು. ಐದುಜನವೂ ಒಟ್ಟಿಗೆ ಪೆಡಲ್‌ಮಾಡಿದರೆ 35 ಮೈಲಿ ವೇಗದಲ್ಲಿ ಓಡುವದಂತೆ! ಇದನ್ನು ಲಿಂಕಪ್ಲೈರಿನ ಜಾನ್‌ಸಾರ್ಜೆಂಟ್ ಎಂಬುವರು ತಯಾರಿಸಿರುವರು.

ಸಮುದ್ರ ತಳದಲ್ಲಿ ಸುರಂಗಮಾರ್ಗ

ಜಪಾನರು ಸಮುದ್ರದೊಳಗೆ ಒಂದು ಸುರಂಗಮಾರ್ಗವನ್ನು ನಿರ್ಮಿಸಿ ಜಪಾನನ್ನೂ ಕೊರಿಯವನ್ನೂ ಕೂಡಿಸಲೆತ್ನಿಸುತ್ತಿದ್ದಾರೆ. ಇದರಿಂದ ಗೋಸ್ಯವಾಗಿ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಅನುಕೂಲವಾಗುತ್ತದೆ. ಈಗಾಗಲೇ ಇದರ ಸರ್ವೆ ನಡೆದಿರುವುದಂತೆ! 150 ಮೈಲು ಉದ್ದದ ಈ ಭಾರಿಸುರಂಗಮಾರ್ಗವು ಜಪಾನಿನ ಹಿರೋನೆಸ ಎಂಬ ಪಟ್ಟಣವನ್ನೂ ಕೊರಿಯದ ಫ್ಯುಸ್ಯಾನ್ ಎಂಬ ಪಟ್ಟಣವನ್ನೂ ಕೂಡಿಸುತ್ತದೆ.

ದೀಪದಕಡ್ಡಿ ಕಾರ್ಖಾನೆಗೆ ಬೆಂಕಿಬಿತ್ತು

ತಿರುವತ್ತಿಯೂರಿನಲ್ಲಿರುವ ಪಶ್ಚಿಮಭಾರತಬೆಂಕಿಕಡ್ಡಿ ಕಾರ್ಖಾನೆಗೆ ಕಳೆದ 8 ನೆಯ ತಾರೀಖು ಮಧ್ಯಾಹ್ನ ಬೆಂಕಿಬಿದ್ದು ಕಾರ್ಖಾನೆಯ ಪೆಟ್ಟಿಗೆ ತಯಾರಿಯ ಶಾಖೆಯು ಭಸ್ಮವಾಯಿತು. ಪ್ಯಾಕಿಂಗ್ ವಸ್ತುಗಳೆಲ್ಲಾ ಸುಟ್ಟುಹೋದವು. ಯಂತ್ರಗಳು ರೂಪುಗೆಟ್ಟವು. ಸುಮಾರು ಒಂದು ಲಕ್ಷರೂಪಾಯಿಗಳ ನಷ್ಟವಾಗಿದೆಯೆಂದು ಅಂದಾಜುಮಾಡಲ್ಪಟ್ಟಿದೆ.

ಜರ್ಮನಿಯ ಹೊಸ ವಿಮಾನಗಳು

ಸ್ಪೇ ಯುದ್ಧದಲ್ಲಿ ಉಪಯೋಗಿಸಲು ಜರ್ಮನಿಯು ಹೊಸ ಬಗೆಯ ವಿಮಾನಗಳನ್ನು ನಿರ್ಮಿಸಿ ಎಂಥ ಅಪಾಯ ಒದಗಿದರೂ ತಪ್ಪುಗಳನ್ನು ಶತ್ರುಗಳ ವಶಪಡಿಸುವುದಿಲ್ಲವೆಂದು ವಚನವನ್ನು ವೈಮಾನಿಕರಿಂದ ತೆಗೆದುಕೊಂಡು ಕಳುಹಿಸುತ್ತಿರುವರಂತೆ. ಒಂದು ವೇಳೆ ವಿಮಾನವು ಶತ್ರುಗಳ ಕೈಗೆ ಸಿಕ್ಕುವ ಸಂದರ್ಭವೊದಗಿದರೆ ಕೂಡಲೆ ಅದಕ್ಕೆ ಬೆಂಕಿಹೆಚ್ಚಿಬಿಡಬೇಕಂತೆ! ಇದಕ್ಕಾಗಿ ಪ್ರತಿ ವಿಮಾನದಲ್ಲೂ ಸ್ಫೋಟಕವಸ್ತುಗಳನ್ನೂ ಸುಲಭವಾಹತ್ತಿಉರಿಯುವ ವಸ್ತುಗಳನ್ನೂ ಇಡಲಾಗಿದೆಯಂತೆ!

ಪೋಪರು ಮೃತರಾದರು

ರೋಮ್ ಕ್ಯಾಥೋಲಿಕ್ ಸಂಗಡದ ಗುರುಗಳಾದ ಪೋಪರು 9 ನೆಯ ತಾರೀಖಿನ ಮಧ್ಯಾಹ್ನ ಉಪಾಹಾರವಾದನೇಲೆ ರೋಮನಗರದ ತಮ್ಮ ಗೃಹದಲ್ಲಿ ಹೃದಯವ್ಯಾಧಿಯಿಂದ ಮೂರ್ಛೆಹೋದವರು ಎಷ್ಟು ಚಿಕಿತ್ಸೆನಡೆಸಿದರೂ ಗುಣವಾಗದೆ 10 ನೆಯ ತಾರೀಖು ಪ್ರಾತಃಕಾಲ 4-31 ಗಂಟೆಗೆ ವಿಧಿವಶರಾದರು ಮುಂದೆ ಪೋಪರಾಗಬಹುದೆಂಬ ನಿರೀಕ್ಷಣೆ ಇರುವ ಮಿಲಾನಿನ ಆರ್ಚಬಿಷಪ್ ರಾದ ಕಾರ್ಡಿನಲ್ ಪಚ್ಚರ್‌ರವರು ರೋಮನಗರಕ್ಕೆ ಬಂದಿರುವರು. ಹೊಸ ಪೋಪರ ಚುನಾವಣೆಯು ಫೆಬ್ರವರಿ 28 ನೆಯ ತಾರೀಖು ನಡೆಯಲಿದೆ. ಇಟಾಲಿಯನರಲ್ಲದ ಒಬ್ಬರನ್ನು ಆ ಪದವಿಗೆ ಆರಿಸುವುದರಮೂಲಕ 4 ಶತಮಾನಗಳಿಂದ ನಡೆದು ಬಂದಿರುವ ಸಂಪ್ರದಾಯವನ್ನು ಮುರಿಯುವ ಸಂಭವವಿದೆಯೆಂದು ಊಹಿಸಲಾಗಿದೆ.

ಶ್ರೀಮನ್ಮಹಾರಾಜರವರು ಜೋಗಿನಲ್ಲಿ ವಿದ್ಯುಚ್ಛಕ್ತಿ ಯಂತ್ರಶಾಲೆಯ ಶಂಕುಸ್ಥಾಪನೆಯನ್ನು ಮಾಡಿದಾಗ ಅಪ್ಪಣೆಕೊಡಿಸಿದ ಭಾಷಣ.

ಉಪನಿಷತ್ತಿನಲ್ಲಿರುವ "ಅನ್ನಮಾಪಃ, ಅವೃತ ಮಾಪಃ, ಸ್ವರಾಡಾಪಃ, ವಿರಾಡಾಪಃ, ಜ್ಯೋತೀಂ ಷ್ಯಾಪಃ" ಎಂಬ ಪವಿತ್ರವಾಣಿಯು ಯಾಥಾರ್ಥ್ಯ ವನ್ನು ಹೃದಯಂಗಮವಾಗಿ ಗೋಚರಮಾಡಿಕೊಡುವ ಮತ್ತೊಂದು ಸನ್ನಿವೇಶದಲ್ಲಿ ನಾವೆಲ್ಲರೂ ಈ ದಿನದ ಉತ್ಸವಕ್ಕಾಗಿ ಇಲ್ಲಿ ಸೇರಿರುವೆವು ಆ ಉಪನಿಷದ್ವಾಕ್ಯ ದಲ್ಲಿ ವರ್ಣಿತವಾಗಿರುವಂತೆ ಜಲವೇ ಆಹಾರ, ಜಲವೇ ಅಮೃತರಸ, ಜಲವೇ ಸ್ವರ್ಗೈಶ್ವರ್ಯ, ಜಲವೇ ಸರ್ವಶಕ್ತಿಮಯ ಮತ್ತು ಜಲವೇ ತೇಜಸ್ಸು

ವಿದ್ಯುಚ್ಛಕ್ತಿಯಿಂದ ಒಂದುಕೋಟಿ ರೂ-ಗಳ ಆದಾಯ

ನಮ್ಮ ಸಂಸ್ಥಾನದಲ್ಲಿ ಪ್ರತಿಯೊಂದು ಕುಟುಂಬಕ್ಕೂ ವಿದ್ಯುಚ್ಛಕ್ತಿ ಲಭಿಸುವಂತೆ ಮಾಡುವ ಸುಹತ್ತರವಾದ ವ್ಯವಸ್ಥೆಯ ಪ್ರಥಮ ಪ್ರಯತ್ನ ರೂಪವಾಗಿ ಹಿಂಡಾಪುರ ದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಇದೇ ಬಗೆಯ ಯೋಜನೆಯೊಂದರ ಸಮಾರಂಭಕ್ಕಾಗಿ ನಾವು ಇನ್ನೂ ಮೊನ್ನೆ ಮೊನ್ನೆ ಸೇರಿದ್ದಂತೆ ನೆನಸ್ಸಿಗೆ ಭಾಸವಾಗು ತ್ತಿದೆ. ಆದಾಗ್ಯೂ, ವಿದುಚ್ಛಕ್ತಿಯ ಉಪಯೋಗವು ಎಷ್ಟೆಷ್ಟು ಬೇಗ ಅಧಿಕವಾಗುತ್ತ ಬರುತ್ತಿದೆಯೆಂಬುದು ಈ ಅಲ್ಪಾವಧಿಯ ಕಾರ್ಯಕಲಾಪಗಳ ಸಮಾಲೋ ಚನೆಯಿಂದಲೇ ವ್ಯಕ್ತವಾಗುತ್ತದೆ ಹಿಂಡಾಪುರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಗಾಗಿ ನಡೆಯುತ್ತಿರುವ ವಿಸ್ತಾ ರವನ್ನು ನಾವು ಸಮಾರಂಭಣಗೊಳಿಸಿದಾಗ್ಗೆ, ವಿದ್ಯುಚ್ಛಕ್ತಿ ಯನ್ನು ಒದಗಿಸುವ ಪಟ್ಟಣಗಳ ಮತ್ತು ಗ್ರಾಮಗಳ ಸಂಖ್ಯೆಯು ೧೫೦ ಕ್ಕೂ ಮತ್ತು ವಿದ್ಯುದ್ದೀಪಗಳ ಸಂಖ್ಯೆಯು ಕೈಗಾರಿಕೆಯ ಸಂಬಂಧವೆ ವಿದ್ಯುಚ್ಛಕ್ತಿ ಯಂತ್ರಸ್ಥಾಪನೆ ಗಳ ಸಂಖ್ಯೆಯು ೩೬,೦೦೦ ಕ್ಕೂ ಏರಬಹುದೆಂದು ಸೂಚಿಸಿದ್ದೆವು. ಒಂದು ವರ್ಷದ ಅಲ್ಪಾವಧಿ ಯಲ್ಲಿ ಈ ಸಂಖ್ಯೆಗಳು ೧೭೫ ಕ್ಕೂ ಮತ್ತು ೪೦,೫೦೦ ಕ್ಕೂ ಏರಿಸೆಯೆಂಬ ಹೆಸರಜಸಕವಾದ ಆಂಶವು ಶ್ರೀ ಫೋರ್ಬ್ಸ್‌ರವರು ಶ್ರುತಪಡಿಸಿದ ವಿವರಗಳಿಂದ ವ್ಯಕ್ತ ವಾಗುತ್ತದೆ ಈ ಸಂಖ್ಯೆಗಳು ಇನ್ನೂ ಅಧಿಕತರವಾಗಿ, ಒಟ್ಟು ೨೨೫ ಕ್ಕೂ ಮತ್ತು ೫೦,೦೦೦ ಕ್ಕೂ ಹೆಚ್ಚಾಸ ಮತ್ತು ಈ ಸಮಗ್ರ ವ್ಯವಸ್ಥೆಯಿಂದ ಒಟ್ಟು ಒಂದು ಕೋಟಿ ರೂಪಾಯಿಗಳ ವಾರ್ಷಿಕ ವರಮಾನವು ಬರುವ ಕಾಲವನ್ನು ನಾವುಗಳು ತೀಕ್ಷ್ಣವಾಗಿ ಕಾಣುವೆನೆಂಬ ನಿರೀಕ್ಷೆಯನ್ನೂ ಸಹ, ಅವರು ಸೂಚಿಸಿದ್ದಾರೆ

ಆದಾಗ್ಯೂ, ಈ ದಿನ ನಾವು ಸಮಾರಂಭಣಗೊಳಿ ಸುತ್ತಿರುವ ವಿಸ್ತಾರು ತೀರ ನೂತನವೆಂದಾಗಲಿ ಅಥವಾ ಅತುರದಿಂದ ಆಲೋಚಿಸಿ ಸ್ವಾರಂಭಿಸಿದುದೆಂದಾಗಲಿ ಭಾವಿಸುವಂತಿಲ್ಲ ಇಪ್ಪತ್ತು ವರ್ಷಗಳಿಗೆ ಅಧಿಕವಾದ ಅವಧಿಯಲ್ಲಿ ಅದರ ಸಾಧಕ ಬಾಧಕಗಳ ಸಮಾಲೋ ಚನೆಯು ಸಮಗ್ರವಾಗಿ ನೆರವೇರಿದ ಬಳಿಕ ಇದನ್ನು ಕೈಕೊಳ್ಳಲಾಗಿದೆ. ಯೂರೋಪಿನ ಯುದ್ಧವು ಪ್ರಾರಂಭಿಸಿದ ತರುಣದಲ್ಲಿ-ಎಂದರೆ, ೧೯೧೫ ನೆಯ ಇಸವಿಯಲ್ಲಿ ಈ ವಿಸ್ತಾರಿನ ಪ್ರಾರಂಭರೂಪದ ಪರೀಕ್ಷಣ ಕಾರ್ಯಗಳು ಉಪಕ್ರಮವಾದವು ಆಗಿನಿಂದಲೂ ಒಂದಲ್ಲದಿದ್ದರೆ ಮತ್ತೊಂದನ್ನವಲಂಬಿಸುವಂತೆ ಬಗೆಬಗೆಯ ಯೋಚ ನೆಯ ವ್ಯವಸ್ಥೆಗಳ ಸಾಧಕ ಬಾಧಕಗಳು ಪರ್ಯಾಲೋ ಚಿತವಾಗಿವೆ ಈ ವಿಸ್ತಾರಿನ ಸಂಬಂಧದಲ್ಲಿ ಶಿಲ್ಪ ಕಾರ್ಯವೈಪುಣ್ಯದಿಂದ ಒದಗುವಂತೆ ತೋರಿದ ಅನೇಕ ತೊಂದರೆಗಳಿಗೆ ನಿವಾರಣೋಪಾಯಗಳು ನಿರ್ಧರವಾಗಿವೆ, ನನ್ನ ನೆರೆಯಪ್ರಾಂತ್ಯವಾದ ಮುಂಬಯಿ ಪ್ರಾಂತ್ಯದ ಸರ್ಕಾರದವರೊಡನೆ ಅವಶ್ಯವಾದ ಪತ್ರವ್ಯವಹಾರ ಮುಂತಾದುವು ನಡೆದಿವೆ ಜೋಗಿನ ಜಲಪಾತದ ಸೌಂದರ್ಯಕ್ಕೆ ಲೇಶಮಾತ್ರವೂ ಲೋಪಭಾರದಂತೆ ಉಳಿಸುವ ಅತ್ಯುತ್ತಮವಾದ ಮಾರ್ಗವಾವುದೆಂಬ ವಿಷ ಯದಲ್ಲಿ ತೀವ್ರಾಸಕ್ತಿಯಿಂದ ಚರ್ಚೆಗಳು ನಡೆದಿವೆ. ಇವೆಲ್ಲದರ ಪರಿಣಾಮವಾಗಿ ಈಗ ಸುವ್ಯವಸ್ಥಿತ ರೂಪಕ್ಕೆ ತಂದಿರುವ ಈ ವಿಸ್ತಾರಿನಿಂದ, ಸಾಧ್ಯವಾದಮಟ್ಟಿಗೂ ಮಿತವ್ಯಯದೊಡನೆ ಕಾರ್ಯದಕ್ಷತೆಯೂ ಮತ್ತು ಉಪ ಯುಕ್ತತೆಯೊಡನೆ ಸೌಂದರ್ಯವೂ ಸಮ್ಮಿಳಿತವಾಗಿ ಸೇರಿ ಪರಿಶೋಭಿಸಲನುಕೂಲಿಸುವುದೆಂದು ನಾವು ಹೃತ್ಪೂರ್ವಕ ವಾಗಿ ಹಾರೈಸುವೆವು

ಕೈಗಾರಿಕೆಗಳ ಅಭಿವೃದ್ಧಿ

ಕೈಗಾರಿಕೆಗಳ ಅಭಿವೃದ್ಧಿಯ ದೃಷ್ಟಿಯಿಂದ ಪರಾಮ ರ್ಶಿಸಿ ನೋಡಿದರೂ ಸಹ, ಈ ವಿಸ್ತಾರಿಗಾಗಿ ಇಷ್ಟು ದೀರ್ಘಾಲೋಚನೆಯು ನಡೆದುದು ಕಾಲವಿಳಂಬಕ್ಕೆ ಅವ ಕಾಶವಾಯಿತೆಂದು ನಾವುಗಳು ಆತಂಕ ಪಡುವುದಕ್ಕೇನೂ ಕಾರಣವಿಲ್ಲ ಏಕೆಂದರೆ ನಿಸ್ಸೆಲ್ಲರಿಗೂ ಸುವಿದಿತವಾ ಗಿಯೇ ಇರುವಂತೆ, ಕೆಲಕೆಲವು ನೂತನವಾದ ಕೈಗಾರಿಕೆ ಗಳು ಪ್ರಾರಂಭವಾಗಲು ಕಾರಣವಾಗುತ್ತದೆ ಆದ ಕಾರಣ ವಿದ್ಯುಚ್ಛಕ್ತಿಯ ಉತ್ಪತ್ತಿಯ ವಿಸ್ತಾರಿಕ್ಕು, ನಮ್ಮ ಸಂಸ್ಥಾನದ ಕೈಗಾರಿಕೆಗಳ ಬೆಳವಣಿಗೆಯ ಮಹತ್ತರ ವಾದ ಕಾರ್ಯಕಲಾಪಕ್ಕೆಗೆ ಪೂರ್ವ ದೊಂದು ಸಾಧನ ವಾಗಿ ಸಜ್ಜುಗೊಳ್ಳುವುದಾಗಿದೆ. ಏತನ್ಮಧ್ಯೆ, ಈ ವಿಸ್ತಾ ರಿನ ಸಾಧಕಬಾಧಕಗಳ ಸಂಬಂಧಪೂರ್ಣಾಲೋಚನೆಯು ನಡೆದ ಸಮಯಾ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಉಕ್ಕಿನ ಪತ್ತ ನಿರ್ಮಾಣದ ತಯಾರಿಯು ವಿಸ್ತಾರಿಕ್ಕು ಪ್ರಾರಂಭವಾಗಿ ವೃದ್ಧಿಹೊಂದಿದೆ ಭದ್ರಾವತಿಯಿಂದ ಅವಶ್ಯಕತೆಯನ್ನೂ ಅಧಿಕ ಪ್ರಮಾಣಗಳಲ್ಲಿ ಇಲ್ಲಿಗೆ ಸಾಗಿಸಿ ಇಲ್ಲಿಯ ಯಂತ್ರಕಾಲೆ ಮುಂತಾದುವುಗಳ ನಿರ್ಮಾಣ ಕಾರ್ಯಗಳಲ್ಲಿ ಅವುಗಳನ್ನು ಉಪಯೋಗಿಸಲಾಗುವುದು, ಅಲ್ಲವೆ ವಿದ್ಯುಚ್ಛಕ್ತಿಯ ಉತ್ಪತ್ತಿ ಸಂಬಂಧದಲ್ಲಿ ನಿರ್ಮಿ ತವಾಗುವ ಜಲಾಶಯದ ಅಂಗಳಾಗತಕ್ಕ ಈಗಿನ ಕಾನನ ಪ್ರದೇಶದಿಂದ ಒದಗುವ ಜೌಬೀನೆಯೂ ಸಹ ಕಟ್ಟಡದ ಕೆಲಸಗಳಿಗಾಗಿ ಉಪಯೋಗವಾಗುವುದು ನುಂದೆ ವಿದ್ಯುಚ್ಛಕ್ತಿಯ ಉತ್ಪತ್ತಿ ಯಾಗಲು ಪ್ರಾರಂಭ ವಾದಮೇಲೆ, ಆ ವಿದ್ಯುಚ್ಛಕ್ತಿಯಿಂದ ಬಿದ್ದಾವತಿಯ ಲ್ಲಿಯ ಕೈಗಾರಿಕೆಗಳ ಪುರೋಭಿವೃದ್ಧಿಗೂ ವಿಶೇಷ ಸಹಾ ಯವಾಗುವುದು

ವಿದ್ಯುಚ್ಛಕ್ತಿಯ ಉತ್ಪತ್ತಿಗಾಗಿ ಈ ವಿಸ್ತಾರಿನ್ನು ಕೈಪಿಡು ಸುವ್ಯವಸ್ಥಿತ ರೂಪಕ್ಕೆ ತರಲು ಕಾರಣವಾದ ನಮ್ಮ ಸಂಸ್ಥಾನದ ರಾಜನೀತಿಕೋವಿದರ ಮತ್ತು ಅವನ್ನು ಕಾರ್ಯರೂಪಕ್ಕೆ ತರಲು ಅನನ್ಯವಾದ ಧನಸಂ ಪತ್ತಿಯ ಮಾರ್ಗಗಳನ್ನು ಸೂಚಿಸಿದ ನಮ್ಮ ಸಂಸ್ಥಾನದ ದಿವಾನಾಳಿತ ವ್ಯವಹರಣೆಯ ಅಧಿಕಾರಿಗಳ ದೂರಾಲೋಚ ನೆಯ ವಿಷಯದಲ್ಲಿಯೂ ಈ ವಿಸ್ತಾರು ನೆರವೇರಲು ಸಾಧ್ಯವಾಗುವಂತೆ ಸಹಾಯಮಾಡಿದ ನಮ್ಮ ನೆರೆಯ ಪ್ರಾಂತ್ಯದವರ ಸ್ನೇಹಪೂರ್ವಕವಾದ ಸಹಕಾರ ವಿಷಯದ ಲ್ಲಿಯೂ ಫೋರ್ಬ್ಸ್‌ರವರು ಮತ್ತು ಅವರ ಜೊತೆ ಅಧಿಕಾರಿ ಗಳ ಕಾರ್ಯವಿಚಕ್ಷಣ ವಿಷಯದಲ್ಲಿಯೂ ನಮ್ಮ ಶ್ಲಾಘನೆ ಯನ್ನು ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುವೆವು

ಈ ದಿನ ನಾವು ಪ್ರತಿಷ್ಠಿಸತಕ್ಕ ಶಿಲೆಯಮೇಲೆ ಈ ವಿಸ್ತಾರಿನ ಸಂಬಂಧವಲ್ಲಿ ಕೆಲಸಮಾಡಿದ ಇಂಜನಿಯರು ಗಳ ಮತ್ತು ಇತರ ಅಧಿಕಾರಿಗಳ ನಾಮಧೇಯಗಳೂ ಮತ್ತು ವಿದ್ಯುಚ್ಛಕ್ತಿಯ ಉತ್ಪತ್ತಿಯ ವಿಸ್ತಾರಿಕ್ಕು ಸಮಿತಿಯ ಸದಸ್ಯರುಗಳ ನಾಮಧೇಯಗಳೂ ಇರುವು ದಕ್ಕೆ ನಾವು ಅನುಜ್ಞೆ ಕೊಡಬೇಕೆಂದು ಶ್ರೀ ಫೋರ್ಬ್ಸ್‌ರ ವರು ಬಿನ್ನವಿಸಿದ್ದಾರೆ, ಈ ವಿಚಾರದಲ್ಲಿ ನಾವು ವಿಶೇಷ ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆವು.

ಇನ್ನು ಈ ಜಲಪಾತದ ವಿದ್ಯುಚ್ಛಕ್ತಿಯ ಉತ್ಪತ್ತಿಯ ವಿಸ್ತಾರಿನ ಸಂಬಂಧವಾಗಿ ನಾವು ವಿಶೇಷ ಹರ್ಷದಿಂದ ಶಿಲಾಪ್ರತಿಷ್ಠೆ ಮಾಡಿ ಕಾರ್ಯಕ್ರಮವನ್ನು ಸಮಾರಂಭಣಗೊಳಿಸುವೆವು.

ಮೈಸೂರು ಕೆಲ್ಲೆಮೊಹಲ್ಲಾ ರಾಮಚಂದ್ರ ಅಗ್ರಹಾರದಲ್ಲಿರುವ ಮೈಸೂರು ಹಾರ್ಸ್ ರಿಜ್ಮೆಂಟ್ ಅಸಿಸ್ಟೆಂಟ್ ಕ್ವಾರ್ಟರ್ ಎಂ ಬಸವಪ್ಪನವರ ತಾಯಿ ಸುಮಾರು 90 ವರ್ಷ ವಯಸ್ಸುಳ್ಳ ಶ್ರೀಮತಿ ದೇವೀರಮ್ಮನವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ತಿಂಗಳು 19 ನೆಯ ಗುರುವಾರ ದಿವಸ ಶಿವಸಾಯುಜ್ಯವನ್ನು ಹೊಂದಿದರು. ಇವರು ಯಾವಾಗಲೂ ಗುರುಜಂಗಮ ಪ್ರೇಮಿಗಳಾಗಿಯೂ ಶಿವಭಕ್ತಿಧುರೀಣೆಯಾಗಿಯೂ ಪರೋಪಕಾರನಿರತರಾಗಿಯೂ ದೊಡ್ಡ ಮನೆತನದವರಾ ಗಿಯೂ ಇದ್ದುದರಿಂದ ಇವರ ವಿಯೋಗವು ಬಹು ಜನ ಗಳಿಗೆ ವಿಷಾದಜನಕವಾಗಿದೆ. ಆಚಾರ್ಯಭಗವತ್ಪಾದರು ಇವರ ಆತ್ಮಕ್ಕೆ ಶಾಂತಿಯನ್ನಿಯಲಿ.

ಸ್ವೀಕಾರ.

ಹಾಸನ ಡಿ|| ಮಂಜರಾಬಾದ ತಾ|| ಹೆಗ್ಗಡಹಳ್ಳಿ ಮರದ ಪಟ್ಟದ ಶ್ರೀ ಸಿದ್ಧಲಿಂಗಸ್ವಾಮಿಗಳವರು ಶ್ರೀ ಶಿವಶಂಕರಶಿವಾಚಾರ್ಯರಿಗೆ ತಮ್ಮ ಉತ್ತರಾಧಿಕಾರವನ್ನು ಅನುಗ್ರಹಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆ ಯಿಸಿದ 2 ರೂ ಗಳು, ಶ್ರೀ|| ವೈ. ಹೆಚ್. ಸಿದ್ದಯ್ಯ ನವರದ್ವಾರಾ ತಲ್ಪಿರುತ್ತವೆ.

ಧಾರವಾಡ ಟವ್ನ ನಿವಾಸಿಗಳಾದ ಮಾ|| ರಾ|| ತೂರಮರಿ ಚನ್ನವೀರಪ್ಪನವರ ಮೊಮ್ಮಗ ಚಿ|| ಶಿವಪ್ಪ ನಿಗೆ ಮಾ|| ರಾ|| ಅಂಗಡಿ ಬಸಪ್ಪನವರ ಪುತ್ರಿ ಚಿ|| ಸೌ|| ಗಂಗವ್ವಸನ್ನು ಕೊಟ್ಟು ನೆರವೇರಿಸಿದ ವಿವಾಹಮಹೋ ತ್ಸವಸಮಯದಲ್ಲಿ ವಧೂವರರಕಡೆಯವರಿಂದ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿ ಗಳು ಮಾ|| ರಾ|| ವೀರಭದ್ರಪ್ಪ ಕೂರಮರಿ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಸೊಂಡೂರು ಟವ್ನ ನಿವಾಸಿಗಳಾದ ಮಾ|| ರಾ|| ಷಣ್ಮುಖಪ್ಪನವರು ಭೋಜ, ಇವರ ಪುತ್ರಿ ಚಿ|| ಸೌ|| ಸಾರ್ವತಮ್ಮನಸ್ನು ಹುವ್ವಿನಹಡಗಲಿಯಲ್ಲಿ, ರುವ ಮಾ|| ರಾ|| ಮಜ್ಜಿಗಿ ಬಸಪ್ಪನವರ ಪುತ್ರ ಚಿ|| ವೀರಪ್ಪನಿಗೆ ಕೊಟ್ಟು ಮತ್ತು ಲೇಟ್ ವೀರಬಸ್ರಪ್ಪ ನವರು ಭೋಜ ಇವರ ಪುತ್ರಿ ಚಿ|| ಸೌ|| ರೇಣುಕದೇವಿ ಯನ್ನು ಬಳ್ಳಾರಿಯ ಲೇಟ್ ಗಾಳಿ ರುದ್ರಪ್ಪನವರ ಪುತ್ರ ಚಿ|| ಸಂಗನಬಸಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮ ಯದಲ್ಲಿ ಪ್ರಭಾಪೋಷಣಕ್ಕಾಗಿ ವರನಕಡೆಯವರಾದ ಮಾ|| ರಾ|| ಬಳ್ಳಾರಿ ಗಾಳಿ ಕರಿಬಸಪ್ಪನವರು ಸಮರ್ಪಿ ಸಿದ 1 ರೂ ಹೆಡಗಲಿ ಮಾ|| ರಾ|| ಮಜ್ಜಿಗಿ ಬಸಪ್ಪ ನವರು ಸಮರ್ಪಿಸಿದ 8 ಆಣೆ ಕನ್ಯೆ ಕಡೆಯವರಾದ ಮಾ|| ರಾ|| ಭೋಜ ಷಣ್ಮುಖಪ್ಪನವರು ಸಮರ್ಪಿಸಿದ 1 ರೂ. ಒಟ್ಟು 2-8-0 ರೂ ಗಳು ಮಾ|| ರಾ|| ಸಿ ಎಸ್. ಭೋಜ ಇವರದ್ವಾರಾ ತಲ್ಪಿರುತ್ತವೆ

ಶ್ರೀಜಗದ್ಗುರು ಕೇದಾರಮಹಾಸಂಸ್ಥಾನದ ಸರ್ವಾ ಭೌನ ಗುರುತ್ವಾಧಿಕಾರಿಯ ಲೇಟ್ ಜಗದ್ಗುರು ಶ್ರೀ ಶಿವಲಿಂಗಶಿವಾಚಾರ್ಯ ಸ್ವಾಮಿಗಳವರ ಪಟ್ಟಾಭಿಷೇಕೋತ್ಸವವು ಸಿಂಧ ನೂರು ತಾ|| ಬಳಗಾನೂರಲ್ಲಿ ವಿಜಯಪೂರ್ವಕ ನೆರ ವೇರಿದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಸಂಸ್ಥಾನದ ಮಾನ್ಯ ವೇ|| ಸಿದ್ಧಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ

ಅರಸಿಕೆರೆ ತಾ|| ದಿಬ್ಬೂರುಗ್ರಾಮದಲ್ಲಿರುವ ಮಾ|| ರಾ|| ಮಲ್ಲಪ್ಪಶೆಟ್ಟರ ಮಕ್ಕಳಾದ ಚನ್ನಬಸಪ್ಪಶೆಟ್ಟರು ನೂತನ ಗೃಹಪ್ರವೇಶಮಹೋತ್ಸವವನ್ನು ನೆರವೇರಿಸಿದ ಸಮಯ ದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ವೇ|| ಸಿ ಈಶ್ವರಶಾಸ್ತ್ರಿಗಳದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈ ಸುತ್ತೇವೆ

ಸಮುದ್ರದ ಪಾಚಿಯಿಂದ ಉಣ್ಣೆತಯಾರಿ

ಜಪಾನಿನ ಈಶಾನ್ಯ ಸಮುದ್ರತೀರಗಳಲ್ಲಿ ಸಮಾ ಬಿರು ಗಾಳಿ ಬೀಸುತ್ತಿರುವುದರಿಂದ ಸಹಸ್ರಾರು ಪೌಂಡು ತೂ ಕದ ವಾಚಿಯು ಒಣಗುಸೇರುವದು ಇದನ್ನು ಅಲ್ಲಿಯ ಕೆಲವುಭಾಗ ಆಹಾರಕ್ಕೆ ಉಪಯೋಗಿಸಿದರೂ ಅವರ್ ಹೆಚ್ಚುಭಾಗ ನಿರುಪಯೋಗವಾಗಿ ಹಾಳಾಗುತ್ತಿತ್ತು. ಈಗ ಜಪಾನೀಯರು ಇವರಿಂದ ಕೃತಕ ಉಣ್ಣೆಯನ್ನು ತ ಯಾರುಮಾಡುವದರಲ್ಲಿ ಕೃತಕೃತ್ಯರಾಗಿದ್ದಾರೆ. ಟೋಕಿ ಯೋನಗರಕ್ಕೆ ಸೇರಿದ " ಏ ಟೊಹೊಂಜಿರ್ಟ್‌ಫಿಬ್ರಿಯಲ್ ಫೈಬರ್ " ಕಂಪೆನಿಯವರು ದಿನವೊಂದಕ್ಕೆ ಈ ವಾಚಿ ಯಿಂದ ೩ಟನ್ನು ಉಣ್ಣೆಯನ್ನು ತಯಾರಿಸಬಲ್ಲ ಕಾರ್ಖಾ ನೆಯೊಂದನ್ನು ಕಟ್ಟಿರುವರು.

॥ ಓಂ ನಮೋ ಭಗವತೇ ಜಗದ್ಗುರು ರೇಣುಕಾಚಾರ್ಯಾಯ ॥

ಜೀಯಾಚ್ಛ್ರೀ ರೇಣುಕಾಚಾರ್ಯಃ ಶಿವಾಚಾರ್ಯ ಶಿರೋಮಣಿಃ।
ಯೋ ವೀರಶೈವ ಸಿದ್ಧಾಂತಾ ಸ್ಥಾಪಯಾಮಾಸ ಭೂತಲೇ ॥

ಶ್ರೀ ಮಹಾರಥೋತ್ಸವಾಹ್ವಾನ ಪತ್ರಿಕಾ

ಸ್ವಸ್ತಿ ಶ್ರೀಮನ್ನೃಪಶಾಲಿವಾಹನ ಶಕ ೧೮೬೯ನೇ ಬಹುಧಾನ್ಯ ಸಂವತ್ಸರದ ಫಾಲ್ಗುನ ಶುದ್ಧ ೧೪ ಶನಿವಾರ (ತಾ॥ 4-3-39) ಮಘಾ ನಕ್ಷತ್ರ ಶುಭಮುಹೂರ್ತದಲ್ಲಿ ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನ ಮಠದಲ್ಲಿ ಅನಾದಿಕಾಲದಿಂದಲೂ ಜರಗುತ್ತ ಬಂದಂತೆ ಈ ಸಂವತ್ಸರದಲ್ಲಿಯೂ ಶ್ರೀ ಮಹಾರಥೋತ್ಸವವು ನೆರವೇರುವುದು ಇದಕ್ಕಂಗಭೂತಗಳಾದ ವೈಷಭೋತ್ಸವ, ಅಶ್ವಾರೋಹಣೋತ್ಸವ, ಜಂಪೋಲಿ ಕೋತ್ಸವ, ಪುಷ್ಪೋತ್ಸವ, ಶಯನೋತ್ಸವ, ಪುಷ್ಪಧಾತ್ರೋತ್ಸವ, ಲಂಕಾರೋತ್ಸವ, ವಸಂತೋತ್ಸವ, ಅವಭೃತಸ್ನಾನ, ಧ್ವಜಾವರೋಹಣ ವಿಹಾರೋತ್ಸವ ಮೊದಲಾದ ನಿತ್ಯೋತ್ಸವಗಳನ್ನು ಪದ್ಧತಿಯಂತೆ ಫಾಲ್ಗುನ ಶುದ್ಧ ಲಯಿಂದ ಫಾಲ್ಗುಣ ಬಹುಳ ೮ ವರೆಗೆ ವಿಜೃಂಭಣೆಯಿಂದ ನಡೆಯಿಸಲ್ಪಡುವುದು. ಈ ವರ್ಷ ಜಗದ್ಗುರು ಮಹಾ ಸನ್ನಿಧಿಯ ಸಾನ್ನಿಧ್ಯದಲ್ಲಿ ಶಿವಮೊಗ್ಗ ಜಿಲ್ಲೆಯ ಪದ್ಧತಿಯಂತೆ ರಥೋತ್ಸವಕ್ಕಾಗಿ ಸೀರಕ್ಕೆ ದಯಮಾಡಿಸುವುದು. ಶ್ರೀ ಗುರುದೇವತಾಭಕ್ತಿನಿಷ್ಠಾಗರಿಷ್ಠರಾದ ನಿವು ಕಲಕ್ಕ ಪುತ್ರ ಮಿತ್ರಪರಿವಾರಸಮೇತ ಬಂದು ಉತ್ಸವಕಾರ್ಯಗಳಾಗಿ ಶ್ರೀ ಸ್ವಾಮಿಯ ಶ್ರೀಮುಡಿ ಗಂಧ ಪ್ರಸಾದವನ್ನೂ ಶ್ರೀ ಮಹಾಗುರು ಜಗದಾಚಾರ್ಯರ ಪವಿತ್ರಾಕ್ಷತಾಶೀರ್ವಾದ ಲಾಭವನ್ನೂ ಪಡೆದು ಸ್ವೀಕೃತ ಜೀರ್ಣೋದ್ಧಾರದ ವಿಷಯವಾಗಿಯೂ, ಕಟ್ಟಡದ ಪ್ರಾಸಿನ ವಿಷಯವಾಗಿಯೂ ನಿರಾಭಿಮಾನಿಗಳಾಗಿ ಒಂದು ಸಲಹೆಯನ್ನು ಕೊಟ್ಟು ಧನ್ಯರಾಗತಕ್ಕದ್ದು. ನಿರಂತರ ಗುರುಚರಣಾರವಿಂದ ಮಕರಂದಾಸ್ವಾದಸಿನ್ನಿಧಿಯ ಭಕ್ತರಿಗೆ ವಿಶೇಷವಾಗಿ ಸೂಚಿಸುವುದೇನಿಲ್ಲ.

ಭಾದ್ರಪದ ಶುದ್ಧ ೧೦ ಶ್ರೀಜಗದ್ಗುರು ರಂಭಾಪುರೀ
ತಾ: ೨೭-೨-೩೯ ಮಹಾಸಂಸ್ಥಾನ, ವಿಜಾಪುರ.

ಸುಖಸಾಮ್ರಾಜ್ಯ

ಲೇಖಕ—ಶ್ರೀ ವಿ ಆರ್ ಶ್ರೀಪಾದೇಶೀಕರು, ಸೋಲಾಪುರ.

ಮನಸ್ಸು ಬುದ್ಧಿ, ಚಿತ್ತ ಮತ್ತು ಅಹಂಕಾರ ಈ ಅಂತಃಕರಣಚತುಷ್ಟಯದೊಳಗೆ ಸುಖದುಃಖದ ಉತ್ಪತ್ತಿಸ್ಥಿತಿ ಮತ್ತು ಲಯವಾಗುತ್ತದೆ. ಯಾವದೇ ಒಂದು ಮಾತ. ಪೂರ್ವದಲ್ಲಿ ಮನದಲ್ಲಿ ಉಗಮವಾಗುತ್ತದೆ ಚಿತ್ತ ಅದರ ಚಿಂತನೆಯನ್ನು ಮಾಡುತ್ತದೆ. ಬುದ್ಧಿಯು ಆ ಮಾತನ್ನು ನಾಡಿತೋರಿಸಬೇಕೆಂದು ನಿಶ್ಚಯಿಸುತ್ತದೆ. ಮತ್ತು ಅಹಂಕಾರವು ಅದನ್ನು ಮಾಡಲು ಮನುಷ್ಯನಿಗೆ ಪ್ರವೃತ್ತಿಯನ್ನುಂಟುಮಾಡುತ್ತದೆ. ಈ ಎಲ್ಲ ಮಾತುಗಳ ವಿಕೀಕರಣವು ಅದಮೇಲೆ ಯಾವದೇ ಒಂದು ಕಾರ್ಯವನ್ನು ಮಾಡಲು ಪ್ರಯತ್ನಗಳು ಉದ್ಭವಿಸುತ್ತವೆ. ಆ ಪ್ರಯತ್ನಗಳು ಸಫಲಗಳಾದಮೇಲೆ ಸುಖವುಂಟಾಗುವದು, ಮತ್ತು ನಿಷ್ಫಲವಾದಲ್ಲಿ ದುಃಖವಾಗುವದು ಇದರಂತೆ ಮನುಷ್ಯಪ್ರಾಣಿಯ ಜೀವನದೊಳಗೆ ಅನೇಕ ಪ್ರಕಾರ ಸುಖದುಃಖಗಳನ್ನು ಅವುಗಳಿಗೆ ಅನುಭವಿಸಲೇ ಬೇಕಾಗುತ್ತದೆ "ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೆ" ಈ ಪ್ರಕಾರವಾಗಿ ಗೀತೆಯು ಹೇಳಿರುತ್ತದೆ. ಯಾವ ಯಾವ ವಿಷಯದ ಇಚ್ಛೆಯನ್ನು ನಾವು ಮಾಡುವೆವೋ, ಯಾವಯಾವ ವಿಷಯಗಳನ್ನು ನಾವು ಮನದೊಳಗೆ ತರುವೆವೋ ಆಯಾಯ ವಿಷಯಾನುರೂಪ ತಮ್ಮ ಬುದ್ಧಿಯಾಗಿ ಆ ವಿಷಯದ ಸ್ಥಳದಲ್ಲಿ ಮನುಷ್ಯನು ಅಸಕ್ತನಾಗುತ್ತಾನೆ. ಆಸ್ತಿಕೆಯು ಫಲಪ್ರದವಾಯಿತೆಂದಿಗೆ ಸುಖವಾಗುತ್ತದೆ. ಹಾಗೆ ಆಗದಿದ್ದರೆ ದುಃಖವಾಗುತ್ತದೆ.

ವಿಷಯಗಳು ಸುಖದುಃಖಗಳಿಗೆ ಕಾರಣಗಳಾಗಿವೆ ಆಸಕ್ತಿಯು ಮನುಷ್ಯರಿಗೆ ವಿಷಯಗಳ ನಾದ ಹಚ್ಚಿಸಿ ಸುಖದುಃಖಗಳನ್ನು ಭೋಗಿಸಲು ಹಚ್ಚುತ್ತದೆ ಉತ್ತಮ ಕಾರ್ಯದಲ್ಲಿ ನಿಷ್ಕಾಮ ಬುದ್ಧಿಯಿಂದ ಆಸಕ್ತಿ ಇರುವದು ಇದೇ ಉತ್ತಮ ಗುಣವಾಗಿರುತ್ತದೆ ಆ ಗುಣದ ಯಾವ ಅಂತಃಕರಣದೊಳಗೆ ಉದಯವಾಗುವದೋ ಆ ಅಂತಃಕರಣವು ಶುದ್ಧ ಮತ್ತು ನಿರ್ಮಲವಾಗಿದ್ದ ಮೂಲಕ ಆ ಅಂತಃಕರಣದೊಳಗೆ ಶುದ್ಧ ಮತ್ತು ನಿರ್ಮಲ ವಿಚಾರಗಳೇ ಪ್ರಾದುರ್ಭೂತಗಳಾಗಿರುತ್ತವೆ. ಹೀಗೆ ಶುದ್ಧ ಮತ್ತು ನಿರ್ಮಲ ವಿಚಾರಗಳು ಸ್ವಂತ ಕುಟುಂಬದ, ಸಮಾಜದ ಮತ್ತು ದೇಶದ ಉನ್ನತಿಗೆ ಪೋಷಕಗಳಾಗುತ್ತವೆ ಸ್ವಾರ್ಥ ಮತ್ತು ತನ್ನ ಮತಲಬಿ ವೃತ್ತಿಯು ಇವು ಯಾವಾಗಲೂ ತನಗೆ ಪಾತಕಗಳಾಗಿರುತ್ತವೆ. ಸ್ವಾರ್ಥದೃಷ್ಟಿಯು ತನ್ನ ಸಮಾಜದೊಳಗಿನ ಮತ್ತು ದೇಶದೊಳಗಿನ ಉತ್ತಮಗುಣದ ವೃತ್ತಿಯ ಪರಿಲೋಪಕ್ಕೆ ಅಡ್ಡವಾಗುತ್ತದೆ, ಮತ್ತು ಅದು ಸಮಾಜದ ಮತ್ತು ದೇಶದ ಹಾನಿಕ್ಕೆ ಕಾರಣವಾಗುತ್ತದೆ. ಇದೇ ಅಸುರೀ ಸ್ವಾರ್ಥವೃತ್ತಿಯು. ಮನುಷ್ಯರಲ್ಲಿ ಉತ್ತರೋತ್ತರವಾಗಿ ಬೆಳೆದು ಮನುಷ್ಯರಿಗೆ ಹೀನಸ್ಥಿತಿಯನ್ನುಂಟುಮಾಡುವರು ರಜ, ತಮ, ಸತ್ವಗಳೆಂದ ಕೂಡಿದ ಈ ತ್ರಿಗುಣಾತ್ಮಕವು ಸೃಷ್ಟಿಯೊಳಗೆ ಸತ್ವಗುಣಕ್ಕೆ ಪ್ರಾಧಾನ್ಯ ಕೊಡಲ್ಪಟ್ಟಿದೆ. ಶುದ್ಧ ಸತ್ವಗುಣವು ಜ್ಞಾನೋದಯವಾದ ಮೇಲೆ ಮತ್ತು ಆ ಜ್ಞಾನವು ಪರಿಪಕ್ವವಾದ ಮೇಲೆ ಮನುಷ್ಯನಿಗೆ ಸರ್ವವ್ಯಾಪಕತ್ವವನ್ನೂ ಮತ್ತು ಸಮದೃಷ್ಟಿಯನ್ನೂ ಉಂಟುಮಾಡುತ್ತದೆ. ತಮೋಗುಣವು ಇದು ವೃತ್ತಿಯೊಳಗೆ ಚಂಚಲತೆಯ ಅಧಿಕತ್ವವನ್ನು ಉಂಟುಮಾಡುತ್ತದೆ. ಅದಕಾರಣ ಮನದ ವೃತ್ತಿಯು ಬೆಳೆದು ದ್ವೇಷ, ಮತ್ಸರಾದಿಗಳ ಉಗಮವಾಗುತ್ತದೆ, ಮತ್ತು ಕಲಹವನ್ನು ಹುಟ್ಟಿಸಲು ಚೇತನೆಯನ್ನುಂಟುಮಾಡುತ್ತದೆ. ಇದೇ ಕಲಹವೇ ಕಡೆಗೆ ಎಲ್ಲರ ನಾಶಕ್ಕೆ ಕಾರಣವಾಗುತ್ತದೆ ರಜೋಗುಣವು ಇದು ಮನುಷ್ಯರಿಗೆ ಮಾಯಾಮಯವೂ ಮತ್ತು ಸ್ವಾರ್ಥಮಯವೂ ಆಗಿ ವೃಥಾ ಅಭಿಮಾನದ ಭಾಗಕ್ಕೆ ಕೆಡವಿ ಅಹಂಕಾರದ ವೃದ್ಧಿಯನ್ನುಂಟುಮಾಡುತ್ತದೆ, ಮತ್ತು ಕಡೆಗೆ ಅದೇ ಅಹಂಕಾರವೇ ರಸಾತಳಕ್ಕೆ ಒಯ್ದು ಬಿಡುತ್ತದೆ.

ಮನಸ್ಸಿನ ವೃತ್ತಿಗಳನ್ನು ಶುದ್ಧಮಾಡುವದಕ್ಕೋಸ್ಕರವಾಗಿ ಪ್ರತಿಯೊಬ್ಬರೂ ಪ್ರಯತ್ನ ಮಾಡಬೇಕು ರಜ ತಮಗಳ ತ್ಯಾಗಮಾಡಿ ಶುದ್ಧ ಸತ್ವಗುಣದ ಆಶ್ರಯವನ್ನೇ ಮಾಡಬೇಕು ಶುದ್ಧ ಸತ್ವಗುಣವೇ ತಮ್ಮ ಕುಟುಂಬದ ಸಾಮಾಜಿಕ ಮತ್ತು ರಾಷ್ಟ್ರೀಯ ಉನ್ನತಿಯನ್ನು ಮಾಡೀತು ಆ ಗುಣದ ಆಶ್ರಯವನ್ನು ಮಾಡದೆ ಇದ್ದ ಕಾರಣ ನಾವು ಮೇಲಿಂದ ಮೇಲೆ ಅವನತ ಸ್ಥಿತಿಗೆ ಹೋಗಲು ಹತ್ತಿರುವೆವು. ಈ ಅವನತ ಸ್ಥಿತಿಯನ್ನು ನಿಶ್ಚಯಮಾಡಲು ಶುದ್ಧ ಸತ್ವಗುಣದ ಆಶ್ರಯವನ್ನೇ ಮಾಡುವದರ ಕಡೆಗೆ ಎಲ್ಲರೂ ಲಕ್ಷವನ್ನು ಕೊಡುವದು ಅತ್ಯವಶ್ಯಕವಾಗಿರುತ್ತದೆ ಶುದ್ಧ ಸತ್ವಗುಣವೇ ನಮಗೆ ಪ್ರಕಾಶವನ್ನು ತೋರಿಸೀತು, ಮತ್ತು ಇದೇ ಪ್ರಕಾಶದ ಸಹಾಯದಿಂದ ಉನ್ನತಿಯ ಶಿಖರಕ್ಕೆ ಹೋಗಿ ಮುಕ್ತಿ ಸಾಮ್ರಾಜ್ಯದೊಳಗೆ ಅನಂದದಿಂದ ರೋಲಾಡೋಣ!

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಸನ್ಯಾಸಿಗಳ ಬಲೆಗೆ ಸಿಕ್ಕಬಾರದು.

ಲೇ—ಶ್ರೀ ಚರಮೂರ್ತಿಸ್ವಾಮಿಗಳು ಜೈನಾಪುರ
ಗುರುಸ್ವಾಮಿ ಹಿರೇಮಠ.

ಆಘೋರಮುಖಸಂಭೂತಮಘೋರಗುಣಪೂರಿತಂ।
ಅಘಧ್ವಾಂತಹರಂ ವಂದೇ ಏಕೋರಾಮಂ ಜಗದ್ಗುರುಂ ॥

ನಮ್ಮೀ ವೀರಶೈವಮತವನ್ನು ಜಗದಾದಿಯಲ್ಲಿ ಪರಶಿವನ ಪಂಚವಕ್ತ್ರೋದ್ಭವರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಸ್ಥಾಪಿಸಿರುತ್ತಾರೆಂಬುದು ವೇದಾಗಮೋಪನಿಷತ್ಪ್ರತಿಪಾದಿತವಾಗಿರುತ್ತದೆ ಇದನ್ನರಿಯದ ಕೆಲ ಮೂರ್ಖ ಜನರು ೧೨ ನೆಯ ಶತಮಾನದಲ್ಲಿದ್ದ ಬಸವನಿಂದ ಸ್ಥಾಪನವಾಯಿತೆಂದು ಬಡಬಡಿಸುವದೆಂತಹ ಅನ್ಯಾಯವು? ಪರಮ ಪವಿತ್ರವಾದ ಈ ವೀರಶೈವ ಧರ್ಮರಕ್ಷಣೆಗೆ ಪವಿತ್ರವಂಶೀಯ ಗುರುವರ್ಗದವರನ್ನೇ ಮೂಲಆಚಾರ್ಯರು ನಿಯಮಿಸಿರುತ್ತಾರೆ. ಹೀಗಿದ್ದೂ ಈಗೀಗ ಕೆಲ ಕೆಲವರು ನಾವೂ ಗುರುಗಳೇ, ಇದ್ದೇವೆಂದು ಜಲ್ಲಿಸುತ್ತಿರುವದು ಎತ್ತಿನಪ್ಪು ದೊಡ್ಡದಾಗಲೆತ್ತಿಸಿ ಹೊಟ್ಟೆಯೊಡೆದು ಸತ್ತ ಕಪ್ಪೆಯು ಕಥೆಯು ಈ ಗುರುಸಾಮ್ಯವನ್ನಪೇಕ್ಷಿಸುವರನ್ನು ದ್ವೇಷಿಸಿಯೇ ಬರದಂತೆ ಕಾಣುತ್ತದೆ. ಗುರುವು ಯಾವ ಕುಲದವನಾದರೂ ಅಡ್ಡಿಯಿಲ್ಲವೆಂತೆ! 'ಕುಲಕ್ಕವಾಗತಾಚಾರಂ' ಎಂದು ಅಪ್ಪಣೆಕೊಡಿಸಿದ ಶ್ರೀ ರೇಣುಕಗುರುಪುಂಗವರ ವಾಕ್ಯವು ಕುಲಕ್ಕಮವನ್ನುದ್ದೇಶಿಸಿರುತ್ತದೆ. ಈಗಲೂ ರಾಜರಾಗುವವರೂಸಹ ಒಂದು ಕುಲ, ಮನೆತನವನ್ನಾಶ್ರಯಿಸಿರುತ್ತಾರಲ್ಲದೆ, ಕಂಡಕಂಡವರು ರಾಜರಾಗಲರಿಯರು. ವಂಶದಲ್ಲಿ ವ್ಯತ್ಯಾಸವುಳ್ಳ ವ್ಯಕ್ತಿಯು ರಾಜನಾದರೆ ತನ್ನ ರಾಜ್ಯವನ್ನೇ ತೊಲಸುಮಾಡಬಹುದು. ಆದ್ದರಿಂದಲೇ ಶಕ್ಯುಲ, ಸದಾಚಾರ, ಸುವಿಚಾರಗಳು ವ್ಯಕ್ತಿಗತ ಸುಗುಣವೃದ್ಧಿಗೆ ಕಾರಣಗಳಾಗಿರುತ್ತವೆ. ಸಂಸ್ಕಾರರ ಹಾವಳಿಯಿಂದ ಸುಗುಣ ಸುವಿಚಾರಗಳು ಮೂಲಿಗೆ ಕುಳಿತರೂ ಅವುಗಳಬೆಲೆಯು ಕಡಮೆಯಾಗದು. ಪವಿತ್ರವು ಎಂದಾದರು ಪವಿತ್ರವೇ! ಅಪವಿತ್ರವು ಅಪವಿತ್ರವೇ! ಮೇಘಾಚ್ಛಾದನದಿಂದ ಸೂರ್ಯಪ್ರಕಾಶವು ಕಡಿಮೆಯಾದಂತೆ ಕಂಡರೂ ದಿವ್ಯಪ್ರಕಾಶವೇನೂ ಕಡಿಮೆಯಾಗಲ್ಲ. ಈ ಅಜ್ಞಾರನವೆಸ್ಸುದಿವಸದ್ದು? ಮೇಘಾಚ್ಛಾದಿತ ವೀರಶೈವಧರ್ಮಸೂರನನ್ನು ವಿದ್ವತ್ಪ್ರಭೆಯಿಂದ ಬೆಳಗುವ ಪಂ॥ ಶ್ರೀ॥ ಕಾಶೀನಾಥಶಾಸ್ತ್ರಿಗಳೆಂಬ ಝುಂಝುಮಾಲನು ಈಗ ಪ್ರಕಾಶಕ್ಕೆ ತರುತ್ತಿರುವದರಿಂದ ಸರ್ವಜಗತ್ತಿನ ಕಾರ್ಯಗಳು ಸುಸೂತ್ರವಾಗುತ್ತಿರುವವು. ಅದರೂ ಯಾವುದೋ ಒಂದು ಮೂಲೆಯಲ್ಲಿ ಕುಳಿತ ಕೆಲ ಗೂಬೆಗಳು ಆ ಸೂರ್ಯನನ್ನು ತಿರಸ್ಕರಿಸುವದರಿಂದಾವ ಭಯವುಂಟು?

ವೀರಶೈವ ಧರ್ಮಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯ ಪ್ರಣೀತಾಚಾರಗಳಲ್ಲಿ ನಿರತರಾದ ವರೇ ನಿಜವೀರಶೈವರೇ ಹೊರತು ಉಳಿದವರು ನಾಮಧಾರಿಗಳು. ಹೀಗಾಗಿ ವೀರಶೈವ ಧರ್ಮಬೀಜವನ್ನು ಹುರಿಯಲೆತ್ತಿಸಿದ ಈಗಿನ ಸೋಗಿನ ಸನ್ಯಾಸಿಗಳ ಸಹವಾಸದಿಂದ ಕೆಲ ವೀರಶೈವರು ಹಾಳಾಗುವದನ್ನು ಕಂಡು ಖೇದವಾಗುತ್ತದೆ ತುಪ್ಪದ ಕೊಡದನೇಲೇರಿದ ಚೇಳನ್ನು ಕೊಡೆಯಲು ತುಪ್ಪವು ಹಾಳಾಗುವದೆಂದು ಬಿಡಲು ಆ ವೃಶ್ಚಿಕವು ತನ್ನ ವಿಷವನ್ನು ತುಪ್ಪದಲ್ಲಿ ಬಿಡುವದಲ್ಲದೆ, ಬೇರೆಯವರಿಗೆ ಕಚ್ಚಿ ಗೋಳಾಡಿಸುವದು. ಹಾಗೆಯೇ ನಮ್ಮ ವೀರಶೈವ ಭಕ್ತರನ್ನಾಶ್ರಯಿಸಿ, ಕೆಲ ಜೂಲದ ಜಾಲಹಾಕುವ ಸನ್ಯಾಸಿಗಳುಂಟು. ಈ ಸನ್ಯಾಸಿಗಳನ್ನು ಆಟ್ಟುವದಕ್ಕೆ ಅವಕಾಶವಿಲ್ಲ ಪರಂತು ನಮ್ಮ ಭಕ್ತರೆಂಬ ತುಪ್ಪದಕೊಡವನ್ನಾಶ್ರಯಿಸಿದ ಸನ್ಯಾಸಿಗಳಿವು. ತುಪ್ಪವು ಹಾಳಾಗಬಾರದೆಂದು ಸುಮ್ಮನೆಬಿಡಲು ಈ ವೃಶ್ಚಿಕಗಳು ತುಪ್ಪವನ್ನು ಹಾಳುಮಾಡುವವಲ್ಲದೆ ಆ ತುಪ್ಪವನ್ನು ತಿಂದವರನ್ನೂ ಹಾಳುಮಾಡುವವು. ಆದ್ದರಿಂದ ಈ ಸನ್ಯಾಸಿ ಜೀಗುಗಳನ್ನು ಯಾರೂ ರಕ್ಷಿಸಬಾರದು. ರಕ್ಷಿಸಿದರೆ ಅವರಿಗೂ ಕಚ್ಚುವವುಗಳೇ! ನೋಡಿರಿ ಈ ಸನ್ಯಾಸಿಗಳಿಗೆ ದೀಕ್ಷೆಯನ್ನಿತ್ತು, ಲಿಂಗಧಾರಣೆಮಾಡಿ, ಶಿವಪಂಚಾಕ್ಷರೀ ಮಂತ್ರೋಪದೇಶವನ್ನುಮಾಡಿ, ಮೋಕ್ಷಗಾಮಿಗಳಾಗುವಂತೆ ಮಾಡಿದ ಪದ್ಧುರುಗಳನ್ನೇ ಈ ಸನ್ಯಾಸಿಗಳು ತಿರಸ್ಕರಿಸುವ ರೆಂದಮೇಲೆ ನಿಮ್ಮಂಥ ಭಕ್ತರನ್ನು ಬಿಡುವರೆಂದು ತಿಳಿದಿರುವಿರಾ? ಈಗ ನಿಮಗೆ ಬಹು ರುಚಿಯಾದಮಾತುಗಳಿಂದ ಸಂತೈಸುವರು ಪರಂತು ನೀವು ಸಲ್ಪ ವ್ಯತ್ಯಾಸವನಡೆದು ನೋಡಿರಿ. ಈ ಸೋಗಿನ ಸನ್ಯಾಸಿಗಳು ಹೇಗೆ ತಮ್ಮ ಲಂಗೋಟಿ ಹರಿದುಕೊಂಡು ಬೀರುವರು. ಆದ್ದರಿಂದ ವೀರಶೈವಬಾಂಧವರೇ! ನಿಮ್ಮ ಮೂಲಗುರು ಸಾರ್ವಭೌಮರಾದ ಪಂಚಾಚಾರ್ಯರಲ್ಲಿಯೇ ಭಕ್ತಿಯನ್ನಿಟ್ಟು ನಡೆಯಬೇಕು.

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ||

ಶಿವನಿ ಸಮಾಚಾರ

ಶ್ರೀ ಸಾಧುಶಂಕರ ಸ್ವಾಮಿಗಳವರು ಜ್ಞಾನಾರ್ಜನೆಗೋಸ್ಕರ ಸೇತು ಶೀತಾಚಲಪರ್ಯಂತ ಮುಖ್ಯ ಪಿಠಗಳು, ಜ್ಯೋತಿರ್ಲಿಂಗ ಸ್ಥಳಗಳಲ್ಲಿ ಸಂಚರಿಸಿ ಸದ್ಗುರುಗಳ ಸಹವಾಸದಲ್ಲಿದ್ದು ತರೀಕೆರೆ ತಾಲೂಕಿನ ಅನೇಕ ಗ್ರಾಮಗಳಲ್ಲಿ ದೇವರ ಮಹಿಮೆಯನ್ನು ಸರ್ವರಿಗೂ ಬೋಧಿಸಿ ಎಲ್ಲರನ್ನೂ ಪುನೀತರನ್ನಾಗಿ ಮಾಡಿಯೂ ಮಾಡುತ್ತಲೂ ಇದ್ದಾರೆ.

ಈಗ್ಗೆ ಒಂದು ವರ್ಷದ ಹಿಂದೆ ತಾವು ವಾಸವಾಗಿರುವ ಅಜ್ಜಂಪುರದ ಶಿವಾನಂದಾಶ್ರಮದಲ್ಲಿ ಕೆಲವು ಜನ ಬಾಲಕರಿಗೆ ಹಿಂದೆ ಗುರುಕುಲವಾಸ ಮಾಡಿ ವಿದ್ಯಾವ್ಯಾಸಂಗ ಮಾಡಿಸುತ್ತ ಇದ್ದ ಋಷಿಗಳೋಪಾದಿಯಲ್ಲಿ ತಾವೂ ಪ್ರಯತ್ನ ಮಾಡಬೇಕೆಂದು ವರಮಾತ್ಮನ ಮೇಲೆ ಭಾರ ಹಾಕಿ ಇಂಥ ಕೆಲಸಗಳಲ್ಲಿ ಮುಂದ್ದರಾದ ಸಾಹುಕಾರ್ ಸೆಟ್ಟರ ಸಿದ್ದಪ್ಪನವರೆ ಮೊದಲಾದವರನ್ನು ಸೇರಿಸಿ ಯೋಚಿಸಲಾಗಿ ಅವರಿಲ್ಲರೂ ಅದಕ್ಕೆ ನೆರವಾದರು. ಅಂದಿನಿಂದ ಇಲ್ಲಿಯವರೆಗೂ ನಾಲ್ವತ್ತು ಜನ ಬಡ ವಿದ್ಯಾರ್ಥಿಗಳು ವಾಕ್ಶಾಲೆಯಲ್ಲಿದ್ದು ಇಂಗ್ಲೀಷ್ ಕನ್ನಡ ಮೊದಲಾದುವುಗಳನ್ನು ಅಭ್ಯಾಸ ಮಾಡುತ್ತಲಿದ್ದಾರೆ. ಸ್ವಾಮಿಗಳವರು ರಾಷ್ಟ್ರಭಾಷಾ ವಿಶಾರದರಾದ್ದರಿಂದ ಎಲ್ಲಾ ಬಾಲಕರಿಗೂ ಹಿಂದಿ ಭಾಷೆಯನ್ನು ಅಭ್ಯಾಸ ಮಾಡಿಸುತ್ತಲಿದ್ದಾರೆ ಇದು ಬಹಳ ಸ್ತ್ರೋತ್ರಾರ್ಹವಾದುದು.

ಈ ವರ್ಷ ಸುಗ್ಗಿಯಲ್ಲಿ ಶ್ರೀ ಸಾಧುಶಂಕರಸ್ವಾಮಿಗಳು ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಂಚಾರ ಮಾಡಿರುವುದರಿಂದ ಈಗಾಗಲೇ ನೂರಾರು ಹಳ್ಳ ದಿನಸಿ ಜಮಾ ಆಗಿದೆ. ಈ ಸಂಸ್ಥೆಯನ್ನು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಬ್‌ಡಿವಿಷನ್ ಆಫೀಸರ್, ಆಮಲ್ದಾರ್ ವಿದ್ಯಾಭ್ಯಾಸದ ಇಲಾಖಾ ಡಿ ಇ ಓ ರವರು ಮತ್ತು ಎ. ಐ. ರವರು ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರವರು ವೈಸ್ ಪ್ರೆಸಿಡೆಂಟರವರು ಇನ್ನೂ ಅನೇಕ ಮಹನೀಯರು ಸಂದರ್ಶಿಸಿ ಸದಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ಶಿವನಿ ಅಪ್ಪರ್ ಪ್ರೈಮರಿಸ್ಕೂಲ್ ಮ|| ರಾ|| ಸೀತಾರಾಮಯ್ಯನವರು ಹೆ ಮಾಸ್ತರರಾಗಿ ಈ ಗ್ರಾಮಕ್ಕೆ ಬಂದಾಗಿನಿಂದ ಬಹಳ ಉನ್ನತ ಸ್ಥಿತಿಗೆ ಬಂದಿರುತ್ತದೆ. ಈಗಾಗಲೇ ಸರ್ಕಾರದವರು ಒಂದು ಮಾಧ್ಯಮಿಕ ಶಾಲೆಯನ್ನು ಕೊಡಲು ಯೋಚಿಸುತ್ತ ಇದ್ದಾರೆ. ಈಗ ಈ ಸ್ಕೂಲಿನಲ್ಲಿ ಸುಮಾರು (೨೫೦) ಹುಡುಗರು ಓದುತ್ತಿದ್ದಾರೆ. ಈ ಸ್ಕೂಲು ಎಲ್ಲಾ ವಿಚಾರದಲ್ಲೂ ಒಳ್ಳೆ ಮೊದರಿ ಸ್ಕೂಲಾಗಿರುತ್ತದೆ ಆಗಿನಿಂದ ಈ ಸ್ಕೂಲಿಗೆ ವರ್ಗಪಟ್ಟು ಬಂದ ಸಹಾಯೋಪಾಧ್ಯಾಯರೂ ಬಹಳ ಮುತುವರ್ಜಿವಹಿಸಿ ಏಕಮನಸ್ಕತೆಂದ ಆ ಶಾಲೆಯ ಪುರೋಭಿವೃದ್ಧಿಯನ್ನು ಬಯಸುತ್ತಿದ್ದಾರೆ. ಈ ಶಾಲೆಗೆ ಪರಸ್ಥಳದಿಂದ ಸುಮಾರು ನಲ್ವತ್ತು ಜನ ವಿದ್ಯಾರ್ಥಿಗಳು ಬರುತ್ತ ಅಭ್ಯಾಸಮಾಡುತ್ತಲಿದ್ದಾರೆ ಇವರು ಬೆಳಿಗ್ಗೆ ೯ ಘಂಟೆಗೆ ಊಟಮಾಡಿ ಬಂದವರು ಸಾಯಂಕಾಲವೇ ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ ಊಟ ಮಾಡಬೇಕು ಈ ವಿಷಯದಲ್ಲಿ ಶಾಲೆಯ ಉಪಾಧ್ಯಾಯರು ಆಗಾಗ್ಗೆ ಆಲೋಚನೆ ಮಾಡುತ್ತಿದ್ದರು ಈ ಸಮಯಕ್ಕೆ ಸರಿಯಾಗಿ ಶ್ರೀ ಸಾಧುಜಿಯವರು ಶಿವನಿ ಗ್ರಾಮಕ್ಕೆ ದಯಮಾಡಿಸಿದ್ದಾಗ್ಗೆ ಈ ವಿಷಯವನ್ನು ಕೆಲವರು ಸೇರಿ ಹೇಳಿಕೊಳ್ಳಲಾಗಿ ಅವರು ತತ್‌ಕ್ಷಣವೇ ಇನ್ನುಮುಂದೆ ಮಧ್ಯಾಹ್ನ ೧½ ಘಂಟೆ ಮೇಲೆ ಬಡ ವಿದ್ಯಾರ್ಥಿಗಳಿಗೆ ಉಪಹಾರ ಮಾಡಲು ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ತಾವೇ ವಹಿಸಿಕೊಂಡರು. ಈ ಸಮಾರಂಭದ ಪ್ರಾರಂಭೋತ್ಸವವನ್ನು ತಾ. 1-2-1939 ನೇ ಬುಧವಾರ ಪ್ರಾರಂಭ ಮಾಡಿದರು. ಈ ಪ್ರಾರಂಭೋತ್ಸವವು ಶಿವನಿ ಗೌಡರ ಬಂಗಲೆ ಮತ್ತು ಅಪ್ಪರ್ ಪ್ರೈಮರಿ ಸ್ಕೂಲ್ ಆವರಣದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಮಾರಂಭಕ್ಕೆ ಶ್ರೀ ಸಾಧುಶಂಕರಸ್ವಾಮಿಗಳವರು, ಕಡೂರು ರೇಂಜ್ ವಿದ್ಯಾಧ್ಯಾಸದ ಇಲಾಖಾ ಅ. ಇನ್‌ಸ್ಪೆಕ್ಟರ್ ಶ್ರೀ ಮಾನ್ ಬಿ. ಬಸಪ್ಪ ಬಿ. ಎಸ್. ಸಿ ಬಿ. ಟಿ ಯವರ ಪಾದಿಕೇಂದ್ರದ ಅಜ್ಜಂಪುರದ ಮ|| ರಾ|| ನಾರಾಯಣರಾಯರು ಮತ್ತು ಅಜ್ಜಂಪುರದ ಸಾಹುಕಾರ್ ಶ್ರೀಮಾನ್ ಸಿದ್ದಪ್ಪಸೆಟ್ಟರು ಇತ್ಯಾದಿ ಮಹನೀಯರು ಸೇರಿದ್ದರು ಪ್ರಥಮದಲ್ಲಿ ಅಧ್ಯಕ್ಷರ ಚುನಾವಣೆಯಾಗಿ ಅಧ್ಯಕ್ಷರು ಭಾಷಣಮಾಡಿದರು ಫೋಟೋ ಆಟಗಳು, ಆಸನಗಳು ಬಹಳ ಸಂತೋಷದಾಯಕವಾಗಿದ್ದವು.

ಅನಂತರ ಶ್ರೀ ಸಾಧುಜಿಯವರಮೇಲೆ ಶಿವನಿ ಅಪರ್ ಪ್ರೈಮರಿಸ್ಕೂಲ್ ಅ|| ಮಾಸ್ಟರ್ ವೇ|| ಎಮ್. ಎನ್. ಮೆರುಲಸಿದ್ದಯ್ಯನವರು ರಚಿಸಿದ **ನವರತ್ನಮಾಲಿಕಾ** ಎಂಬ ಪದ್ಯದಿಗಳನ್ನೂ ಅಧ್ಯಕ್ಷರಾದ ಕಡೂರ್‌ಸ್ಕೂಲ್ ಬೋರ್ಡ್ ಅಸಿಸ್ಟೆಂಟ್ ಬಸಪ್ಪನವರಮೇಲೆ **ಪಂಚರತ್ನ ಮಾಲಿಕಾ** ಎಂಬ ಪದ್ಯಗಳನ್ನೂ ಮನೋಹರವಾಗಿ ಓದಿ ಉಭಯರಿಗೂ ಒಪ್ಪಿಸಲು, ಅವರುಗಳು ಅದರಿಂದ ಸ್ವೀಕರಿಸಿದರು

ಅನಂತರ ಶ್ರೀ ಸಾಧುಜಿಯವರು ತಮ್ಮ ಅಮೃತ ವಾಣಿಯಿಂದ ಲೌಕಿಕ ಪಾರಮಾರ್ಥಿಕ ವಿಷಯವನ್ನು ಹೃದಯಂಗಮವಾಗಿ ಬೋಧಿಸಿದರು ಅನಂತರ ಅಧ್ಯಕ್ಷರ ಉಪಸಂಹಾರ ಭಾಷಣದೊಂದಿಗೆ ಸಭೆಯು ವಿಸ್ತಾರವಾಯಿತು

ಓರ್ವ ಉತ್ಸವಭಾಗಿ

ನೂತನಗೃಹಪ್ರವೇಶ

ತರೀಕೆರೆ ತಾ|| ದಿಬ್ಬೂರುಗ್ರಾಮದಲ್ಲಿರುವ ಮ|| ರಾ|| ಮಲ್ಲಪ್ಪಶೆಟ್ಟರ ಪುತ್ರ ಚನ್ನಬಸಪ್ಪಶೆಟ್ಟರು ನೂತನವಾಗಿ ಕಟ್ಟಿಸಿರುವ ಮನೆಯನ್ನು ಇದೇ ಬಹು ಧಾನ್ಯ ಸಂ|| ಮಾಘ ಶುದ್ಧ ವಶಮಿ ಸೋಮವಾರ ವಿಧಿವತ್ತಾಗಿ ಪ್ರವೇಶಮಾಡಿದರು. ಪಂಚಕಲಶಸ್ಥಾಪನ ಪೂರ್ವಕ ಗೃಹಪ್ರವೇಶವು ಜರುಗಿತು ಬಳಿಕ ಶ್ರೀ ಜಗದ್ಗುರು ರೇಣುಕಶಾಖಾನುವರ್ತಿಗಳಾದ ಸಾತನಗೆರೆ ಮಠದ ಚಿರಮೂರ್ತಿಗಳವರಿಂದ ವೀರಭದ್ರೇಶ್ವರಸ್ವಾಮಿಗೆ ವೇ|| ಸಿ ಈಶ್ವರಶಾಸ್ತ್ರಿಗಳವರ ಪೌರೋಹಿತ್ಯದಿಂದ ವೇದಾಧ್ಯಯನ ಗುರುಲಿಂಗ ಅಭಿಷೇಕವು ನಡೆಯಿತು ಅನಂತರ ಎಂ ಸಿದ್ದಮ್ಮನು ಪಂಚಾಚಾರ್ಯರ ಸ್ತೋತ್ರವನ್ನು ರಾಗರಚನೆಯಿಂದ ಹಾಡಿ ಅರತಿಯನ್ನು ಬೆಳಗಿದಳು ಬಳಿಕ ಜಗದಾಚಾರ್ಯರ ಜಯ ಘೋಷದೊಡನೆ ಕಾರ್ಯವು ಪರಿಸಮಾಪ್ತಿಗೊಂಡಿತು

ಸಿ. ಈಶ್ವರಶಾಸ್ತ್ರಿ, ದೊಡ್ಡಮೇಟಿಕುರಿಕೆ.

ಜಾಹೀರಿ ನೋಟೀಸು

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸಂಸ್ಕೃತ ವೈದಿಕ ಪಾಠಶಾಲಾ, ಸಂಸ್ಥಾ ಬಣ್ಣದಮಕ ಹಾವೇರಿ.

ಈ ಮೂಲಕ ತಿಳಿಸುವುದೇನೆಂದರೆ ಈಗಿರುವ ವಿದ್ಯಾರ್ಥಿಗಳಲ್ಲದೆ ಹೊಸದಾಗಿ ಹತ್ತು ಜನ ವಿದ್ಯಾರ್ಥಿಗಳನ್ನು ನಮ್ಮ ಪಾಠಶಾಲೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿದ ಕಾರಣ ಬರತಕ್ಕ ವಿದ್ಯಾರ್ಥಿಗಳು ಇದೇ ತಿಂಗಳು ೨೫ ನೆಯ ತಾರೀಖಿನೊಳಗಾಗಿ ಸದರಿ ಸಂಸ್ಥೆಯ ಅಧ್ಯಕ್ಷರಕಡೆಗೆ ಅರ್ಜಿಕಳಿಸಿ ಕೊಡತಕ್ಕದ್ದು. ಬರತಕ್ಕ ವಿದ್ಯಾರ್ಥಿಗಳು ಕನ್ನಡ ಅನೇ ಇಯತ್ತೆಯಲ್ಲಿ ತೇರ್ಗಡೆಯಾದ ಬಗ್ಗೆ ಸರ್ಟಿಫಿಕೇಟು ತರತಕ್ಕದ್ದು. ನಮ್ಮಲ್ಲಿಯ ಪ್ರೀಟೆಡ್ ಫಾರ್ಮಿನಿಂದ ಅರ್ಜಿ ಮಾಡಿಕೊಳ್ಳತಕ್ಕದ್ದು. ಫಾರ್ಮಿನ ಸಲುವಾಗಿ ಒಂದಾಣೆ ಟಿಕೀಟು ಕಳಿಸಿ ಕೊಟ್ಟಲ್ಲಿ ಉಚಿತವಾಗಿ ಫಾರ್ಮು ಕಳುಹಿಸಲಾಗುವದು.

ಡೊ. ಪಿ. ಭಕ್ತದನೆಕ್ಕೆಟರು
ಬಣ್ಣದಮಕ ಪಾಠಶಾಲಾ, ಹಾವೇರಿ.

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ||

ಶ್ರೀಜಗದ್ಗುರು ಹಿಮವತ್ಕೇದಾರ ಸಂಸ್ಥಾನದ ಸರ್ವಾಧಿಕಾರಿಗಳವರ ಸರ್ಕೀಟಿನ ಶುಭಾಗಮನ

ಶ್ರೀಗಳವರು ಪೀಠಪಡ್ಡತಿ ಪ್ರಕಾರ ರಾಯಚೂರು ಜಿಲ್ಲಾ ಮಾನ್ವಿ ದೇವದುರ್ಗ ತಾಲೂಕು ಪೇಟೆಗಳಿಗೆ ಮುಂತಾದ ಗ್ರಾಮಗಳನ್ನು ಪೊಕ್ಕಾಂ ಮಾಡುತ್ತ ಆಯಾಯ ಗ್ರಾಮಗಳ ಭಕ್ತಮಾಹೇಶ್ವರರುಗಳಿಂದ ಸಮರ್ಪಿಸಲ್ಪಟ್ಟ ಗುರುಕಾಣಿಕೆಯನ್ನು ಸ್ವೀಕರಿಸಿ ಸದ್ಭೋಧೆಯ ದ್ವಾರಾ ಧರ್ಮಜಾಗೃತಿಗೊಳಿಸುತ್ತ ರಾಯಚೂರು ಜಿಲ್ಲಾ ಸಿಂಧನೂರು ತಾಲೂಕು ಬಳಗಾನೂರುಗ್ರಾಮದ ದೈವದವರ ಪ್ರಾರ್ಥನಾಮೇರೆಗೆ ಆ ಗ್ರಾಮ ಮತ್ತಾ ಮಂಡಮಾಡೋಸುಗ ತಾ|| 30-1-1939 ಕ್ಕೆ ನಿರ್ಧರಿಸಿದ ಪ್ರಕಾರ ಗ್ರಾಮಪ್ರವೇಶ ಮಾಡಲು ವಾದ್ಯಸೈಭವದೊಡನೆ ಶ್ರೀ|| ಮಹಾಸ್ವಾರಿಯನ್ನು ನಿಜಯಂಗೈಸಿಕೊಂಡು ಬರುವ ಪ್ರಯತ್ನ ಮಾಡುವದೋಸುಗಾಗಿ ಬಳಗಾನೂರುಗ್ರಾಮದ ಅಮೀನ್‌ಸಾಹೇಬರು ಗ್ರಾಮದ ಪ್ರಮುಖರನ್ನು ಬರಮಾಡಿಕೊಂಡು ನೀವು ನಿಮ್ಮ ಗುರುಗಳನ್ನು ಉತ್ಸವದೊಡನೆ ಕರೆದುಕೊಂಡುಬರಬೇಕಾದರೆ ನಮ್ಮ ನೈಜಾಂ ಸರ್ಕಾರದ ರೈಸನ್ನು ದೇಕಾಗುತ್ತದೆ. ನಿಮ್ಮಲ್ಲಿದ್ದರೆ ತೋರಿಸಿ ಉತ್ಸವ ತೆಗೆಯಬೇಕು; ಇಲ್ಲವಾದರೆ ಈಗಿನ ಕಾನೂನಿನಪ್ರಕಾರ ರೈಸನ್ನು ತೆಗೆಯಿಸಿ ಉತ್ಸವ ತೆಗೆಯಬೇಕೆಂದು ತಿಳಿಸಿದರು. ಅದಕ್ಕೆ ಈ ಒಳಗಾಗಿ ಮಹಾಪೀಠಕ್ಕೆ ರಾಜಾಧಿರಾಜರು ಕೊಟ್ಟಿರುವ ಅರ್ದರುಗಳನ್ನು ಬ್ರಿಟಿಷ್ ಸರ್ಕಾರದವರು ಕೊಟ್ಟಿರುವ 72 ಪಿರುದಾವಳಿಗಳ ಅರ್ದರನ್ನು ಮತ್ತು ಇನ್ನು ಕೆಲವು ಅರ್ದರುಗಳನ್ನು ಶ್ರೀಗಳವರ ಕಡೆಯಿಂದ ತೆಗೆದುಕೊಂಡುಹೋಗಿ ವೈವದವರು ತೋರಿಸಿದಾಗ್ಗೂ ಇಸ್ಲೆ ಅಗತ್ಯವಿಲ್ಲ. ನೈಜಾಂ ಸರ್ಕಾರದಿಂದ ನುಂಜೂರಾದ ಅರ್ದರನ್ನು ತೋರಿಸಿ ಉತ್ಸವವನ್ನು ತೆಗೆಯಬೇಕೆಂದು ಅಮೀನ್ ಸಾಹೇಬರು ಮುಸ್ಸರಹಿಡಿದಿದ್ದರಿಂದ ಅಕೂಡಲೆ ಶ್ರೀಗಳವರನ್ನು ಊರಹೊರಿಗೆ ಸಿಕ್ಕಿಂತಿಮಂದಿರದಲ್ಲಿರಿಸಿ ಅರ್ದರನ್ನು ತಂದು ಉತ್ಸವ ತೆಗೆಯುತ್ತೇವೆಂದು ಪ್ರತಿಜ್ಞೆ ಮಾಡಿಕೊಂಡು ವೇ|| ನಡುವಲ ಮರದ ಪಂಪಯ್ಯನವರು, ವೇ|| ಅಜ್ಜಳ್ಳಿ ಮಠದ ಸಿದ್ಧಮಲ್ಲಿಕಾರ್ಜುನಯ್ಯನವರು, ಮಹಾಸಂಸ್ಥಾನದ ಇಲಾಖಾ ವೇ|| ಎಸ್. ಎಂ. ಚನ್ನಬಸವಶಾಸ್ತ್ರಿಗಳನರು ಸಿಂಧನೂರಿಗೆ ಹೋಗಿ ತಪಸಿಲ್ದಾರ್ ಸಾಹೇಬರ ಕಡೆಯಿಂದ ಉತ್ಸವದ ಅರ್ದರನ್ನು ತೆಗೆದುಕೊಂಡುಬಂದು ಅಮೀನ್‌ಸಾಹೇಬರಿಗೆ ತಾ|| 3 2-39 ರಲ್ಲಿ ತೋರಿಸಲು ಸದರಿ ಅಮೀನ್ ಸಾಹೇಬರು ಉತ್ಸವದ ಇತಿಹಾಜಾಂಬಗ್ಗೆ ಪೋಲೀಸರನ್ನು ಕೊಟ್ಟರು ಅವರ ಸಹಿತ ಸದರಿಗ್ರಾಮದ ಮರಮಹತ್ ದೈವದವರು, ಪರಮತ್ತರು, ಸ್ಥಳಪರಸ್ತರು ಮತ್ತು ಸಹ ಸೇರಿ ಭಕ್ತಿಭಾವದಿಂದ ಮಂಗಾಪ ಪಿರುದಾವಳಿಗಳೊಂದಿಗೆ ವಾದ್ಯಸೈಭವದೊಡನೆ ಶ್ರೀಗಳವರನ್ನು ಗ್ರಾಮದಲ್ಲಿ ವಿಜಯಂಗೈಸಿಕೊಂಡು ಬಂದರು. ಶ್ರೀಗಳವರು ಉತ್ಸವದೊಡನೆ ಆಗಮಿಸಿ ವಿರಕ್ತಮಠದಲ್ಲಿ ರಚಿಸಿದ್ದ ಭವ್ಯವಾದ ಸಿಂಹಾಸನದಮೇಲೆ ಮಂಡಿಸಿದರು ಅನಂತರ ಶ್ರೀ ಸನ್ನಿಧಿಯವರು ಕೆಲವು ಧರ್ಮಸಂಬಂಧವಾಗಿಯೂ, ಸದರಿ ಗ್ರಾಮದವರು ನೂಡಿದ ಶ್ರದ್ಧಾಭಕ್ತಿ ವಿಚಾರವಾಗಿಯೂ ತಮ್ಮ ಮಂಜುಳವಾಣಿಯಿಂದ ಅಪ್ಪಣೆಕೊಡಿಸಿದರು. ತರುವಾಯ ವೇ|| ನಿರೂಪಾಕ್ಷಶಾಸ್ತ್ರಿಗಳವರು ಗುರುಭಕ್ತಿಯಿಂದುಂಟಾಗುವ ಫಲಿತಾಂಶವನ್ನು ಪ ತಿಪಾದಿಸಿದರು. ವೇ|| ಎಸ್. ಎಂ. ಚನ್ನಬಸವಶಾಸ್ತ್ರಿಗಳು, ಭಕ್ತಾದಿಗಳು ಮಾಹಾತ್ಮ ಶ್ರದ್ಧಾಭಕ್ತಿ ಮುಂತಾದ ಧರ್ಮವಿಷಯಗಳ ಬಗ್ಗೆ ಉಪನ್ಯಾಸ ಮಾಡಿದರು. ಬಳಿಕ ಪಂಚಾಚಾರ್ಯರ ಜಯಘೋಷದೊಡನೆ ಸರ್ವರೂ ಫಲಾಶೀರ್ವಾದವನ್ನು ಪಡೆಯಲು ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಗುರುಭಕ್ತ ಬಳಗಾನೂರು.

"ಬಾಳಿನಬೆಲೆ"

(ಹಿರೇಮಠದ ಮರಿದೇವಯ್ಯ, ಮುದೇನೂರು.)

ಮಾನವನ ಬಾಳಿನ ಬೆಲೆಯನರಿಯಲು ಬಹುದೇ? ಆಕಾಶ ಪಕ್ಷಿ ನೋಡಿ ಜಗದೊಳಗಂದು। ವನದೊಳಗೆ ಬೆಳೆವ ಮರಂಗಳ ಹಿರಿಯ, ಆಕಾರದೊಳು ಅಲ್ಲಿ ತಿಳಿದ.ನೋಡಿ ॥೧॥

ಬಾಳುವದು ಬಹುಕಾಲ ಹಿರಿಯತನವ ಹೆಗ್ಗುರುತೇ? ।
ಬಾಳುವದು ಮೂರು ಕಡವಾಗಿ ಒಳಿವ ಮರವು ॥
ಬೀಳುವದು ಕೊಸೆಗೊಮ್ಮೆ ಬೀಸಿಗೊಣಗಿ ಬೆಂಡಾಗಿ ।
ಎಲೆಗಳೇ ಮೊದಲಿಲ್ಲ ಬಹು ಬೆಲೆಯು ಇದಕುಂಟೆ? ॥೨॥

ಗೆಳೆಯ, ನೋಡಲ್ಲಿ ಕಾಣುವುದು ಮಲ್ಲಿಗೆಯ ಸೌಂದರ್ಯ ಸುಧೆಯದು ಬಹಳ ಸೊಗಸಾದುದು। ಚೆಲುವ ಬೀರುತ ಬಲವಾಸೆ ಪಡೆದು ಸಿಂದಿಹುದು ಪ್ರೇಮದಾಗಾರವದು ಪರಿಕಿಸಲ್ಕೆ ॥ ತಿಳಿಯುವದು ಇಂದೆಯೋ ನಾಳೆಯೋ ಹಿರಿಯಾಯುವಿದರೆಲ್ಲು ಸತ್ಯವಿದು ತಿಳಿದು ನೋಡು । ಬೆಲೆಯುಂಟು ಈ ಜೀವನಕ್ಕೆ ಅಳಾವಿಪೊರು ಕಿರಿದಾದೊಡೇನು ಇದು ಕಣ್ತುಗಳ್ಗೆ ॥೩॥

ಸತ್ಯಯುತವಾಗಿನದ ಜೀವನಕೆ ಬೆಲೆಯಿಲ್ಲು, ಯುಗದೊರೆಗೆ ಬಾಳಿಯೂ ಫಲವಿಲ್ಲವು। ಸತ್ಯವನು ಶೋಧಿಸುವ ಬಾಳರ್ಪಣವಿರಲಿ, ಬೆಲೆಯಧಿಕವೆಂಟದಕೆ ಎಂದೆಂದಿಗೂ । ಮತ್ತೆ ಸಿಗದೀಸಮಯ-ಹಿಗೆಳೆಯ, ಳಕೆಯದಿರು ವೇಳೆಯ ಮಹತ್ವವನು ತಿಳಿವುದೊಳಿತು ! ಪತ್ತಿ ನಾಡಿನ ಸೇವನೆಗೆಯುವೀ ಬಾಳ ತಿಳಿ ಬೆಲೆಯುಳ್ಳ ಕವಂಟು ಮುಂದರಿದೆಂದಿಗೂ ॥೪॥

ಸುನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧುತ್ವ ಆದ್ಯತಲೀಲೆಗಳಿಂದ ಕೂಡಿನ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕಾರಣ ಅಗಸ್ತ್ಯ, ವಧೀಚ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯೋ ಜೀತಾವೆಯಮಾವಿರತಕ್ಕ ಏನರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ವಿಳಂಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಜ್ಜಮಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಸೀತಾಧೀಶ್ವರ ಜಗದ್ಗುರು ಶಿವಾಸಂಪಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ನಾಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವ್ವಾರೆಯ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಾಲಯದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಕೇದಾರಲಿಂಗವನ್ನು ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸ್ನಾನಾಧಿಯಲ್ಲಿ ಶ್ರೀಮಸ್ಮಹಾರಾಜರನ್ನು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನೆಲಸೀರಿನ ರಂಭಾಪುರೀ ಜಗದ್ಗುರುಗಳ ಅದ್ದೂರಿಯಲ್ಲಿಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಕೊಟೆ ತರಿಸಿಕೊಳ್ಳವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೂರ್ವಕವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೧. ವಿ. ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[43] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	....	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	....	೨ ಆಣೆ
ಉಪಪಾದಿನಿಜತತ್ವಪರ್ಪಣ (೪ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಪ್ರಭಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	....	೨ ಆಣೆ
ವೀರಶೈವಮತಮಿಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	....	....	೬ ಆಣೆ
ವೀರಶೈವಮಹಾತ್ಮರು	....	....	೪ ಆಣೆ
ಉಪಪಾಧ್ಯಾಂಶದಿವಾಕರ (೩ನೆಯ ಆವೃತ್ತಿ)	....	....	೪ ಆಣೆ
ಸದ್ಯೋಧರತ್ನಾವಳಿ	....	....	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಗಳು (ತೆಲುಗು)			೪ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....		೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....		೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....		೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	....		೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....		೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೭೦ಮಹತ್ವದ ಫೋಟೋಗಳಿರುವುವು)			೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....		೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....		೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)			೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....		೨ ರೂ.
ವೀರಶೈವಸಿದ್ಧಾಂತಸುಧಾಕರ	....		೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)			೪ ರೂ.
A brief life-sketch of Pandit Sri Kashinatha Shastriji (*English*)			4 As.
Shakti-Vishistadvaita *or* The Philosophical Aspect of Virasaivism (*English*)			8 As.
Speeches by Pandit Shri Kashinatha Shastriji *English*)			12 As.
ವೀರಶೈವರತ್ನ (ಮರಾಠಿ)			೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)			೧ ರೂ.
ವೀರಶೈವಪ್ರಶ್ನೋತ್ತರ (ಸಂಸ್ಕೃತ)			೧ ರೂ.
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ)			೬ ಆಣೆ
ನಂದಿಕೇಶ್ವರಕಾರಿಕಾ (ಸಂಸ್ಕೃತ)			೨ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)			೨ ಆಣೆ
ಲಿಂಗಧಾರಣಚಂದ್ರಿಕಾ (ಸಂಸ್ಕೃತ)			೩ ರೂ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನ ವಿದ್ವಾಂಸರಾದ ಶ್ರೀ ಶಿವಶಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋಚ್ಚರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ತರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಫೆಬ್ರವರಿ ೧೯೩೯ [ಸಂಚಿಕೆ ೪೩

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಮನಸ್ಸೇ ಚಿಂತಿಸಬೇಡ!

ವಿವೇಕ—ಚಿಂತಾಸಮಂ ನಾಸ್ತಿ ಶರೀರಶೋಷಣಂ, ಎಂಬಂತೆ ಶರೀರಶೋಷಣೆಗೆ ಚಿಂತೆಗೆ ಸಮಾನವಾದ ವಸ್ತುವೇ ಇಲ್ಲವಲ್ಲ ಎಂತಹ ಪಂಚಾಮೃತಾನ್ನವನ್ನು ಭುಂಜಿಸುತ್ತಿದ್ದರೂ ಚಿಂತೆಯೊಂದಿದ್ದರೆ ಒಲಿತು. ಮನುಷ್ಯನು ಕ್ಷೀಣಬಲಿಕ್ಕೆ ಇತರ ಉಪಾಯಗಳೇ ಬೇಡ! ನಿಶ್ಚಿಂತನಾಗಿ ಚಿಂತಿಸಿ ಪ್ರಯೋಜನವೇನು?

ಮನಸ್ಸು—ವಿವೇಕಾ! ನಾನು ನಿಶ್ಚಿಂತನಾಗಿ ಚಿಂತಿಸುವದಿಲ್ಲ; ಏನೂ ಆಯದ ನನಗೆ ಬಾರದೇ ಇರುವ ದುಃಖವು ಬಂದಿರುವದೆಂದು ಚಿಂತಿಸುವೆನು

ವಿವೇಕ—ಮನಸ್ಸೇ! ದುಃಖಗಳು ಬರದೇಕಾದರೆ ಹೇಳಿ ಕೇಳಿ ಬರುವವೇ ಹೇಗೆ? ಹಾಗೆ ಒರುವದಿದ್ದರೆ ಅವುಗಳನ್ನು ತ್ಯಾಗಿಸುವರಾರು? ದುಃಖಗಳು ಎಲ್ಲರಿಗೂ ಇವೆ ವುಗಳೇ! ಇಪ್ಪುದಿವಸ ಸುಖದ ಸಾರವನ್ನು ಹೀರಿದ ನಿನಗೆ ದುಃಖದ ಸಾರವೂ ತಿಳಿಯಬೇಕೆಂದೇ ಪರಶಿವನ್ಪ್ರೇರಿತಗಳಾದ ದುಃಖಗಳನ್ನು ಅನಂವದಿಂದ ಸ್ವಾಗತಿಸು; ನೀನು ದುಃಖಪಟ್ಟರೂ ದುಃಖಪಂಜರಿಗಳು ಬರುವವೇ? ನೀನು ಸಮಾಧಾನದಿಂದಿದ್ದರೂಬರುವವೇ? ಪರಂತು ಸಮಾಧಾನದಿಂದಿದ್ದರೆ ಹೆಚ್ಚು ತ್ರಾಸು ಆಗುವದಿಲ್ಲ

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ !
ಸುಖದುಃಖೇ ಹಿ ಮನುಷ್ಯಾಣಾಂ ಚಕ್ರವತ್ ಪರಿವರ್ತಿನೀ ॥

ಎನ್ನುವಹಾಗೆ ಸುಖದ ತರುವಾಯ ದುಃಖವೂ, ದುಃಖದ ತರುವಾಯ ಸುಖವೂ, ಕೆಳಗಿಂದ ಮೇಲೆ, ಮೇಲಿಂದ ಕೆಳಗೆ ಚಲಿಸುವ ಚಕ್ರದ ಹಲ್ಲುಗಳೋಪಾದಿಯಲ್ಲಿ ಸುಖ, ದುಃಖಗಳು ಮನುಷ್ಯರಿಗೆ ಇಪ್ಪವುಗಳೇ? ಅವುಗಳಿಗೇಕೆ ಚಿಂತಿಸಬೇಕು? ಈಗ ರಾತ್ರಿಯಾಗಿದೆಯೆಂದು ಚಿಂತಿಸುತ್ತ ಕುಳಿತರೆ ಬೆಳಗಾಗುವದೇ ಬೇಡ? ಚಿಂತಿಸದೆ ಸಮಾಧಾನದಿಂದಿದ್ದರೆ ಬೆಳಗು ಆಗುವದಿಲ್ಲವೋ? ವ್ಯರ್ಥವಾಗಿ ಕಂಠಕೋಪವೇಕೆ? "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬ ನೀತಿಯಂತೆ ನಾವು ಮಾಡಿದ ಕರ್ಮವು ಹೇಗಿದೆಯೋ ಅದಕ್ಕೆ ತಕ್ಕ ಫಲವು ಇದ್ದೇ ಇರುತ್ತದೆ ಅದನ್ನು ನಾವು ಅವಶ್ಯವಾಗಿ ಭೋಗಿಸಲೇ ಬೇಕಾಗುತ್ತದೆ ಅದ್ದರಿಂದ ಚಿಂತಿಸಬೇಡ!

ಮನಸ್ಸು—ನಾನು ಮಾಡಿದ ಕರ್ಮವಾದರೂ ಯಾವುದು? ನಾನೇನು ಯಾರನ್ನಾದರೂ ತಿರಸ್ಕರಿಸಿದೆನೋ, ಹಿಂಸಿಸಿದೆನೋ, ಪರಧನಾದಿಗಳನ್ನ ಪಹರಿಸಿದೆನೋ, ಏನೂ ಇಲ್ಲ. ಕೇವಲ ನಮ್ಮ ಸಮಾಜಕ್ಕೋಸ್ಕರ ಸಾಧ್ಯವಾಮಟ್ಟಿಗೆ ಮಡಿದದ್ದೇ ತಪ್ಪೇ?"

ವಿವೇಕ—"ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಆರ್ಷೋಕ್ತಿಯು ಸುಳ್ಳಾಗಬೇಕಾದೀತು? ಸಮಾಜಕಾರ್ಯವೆಂದರೆ ಸಾಮಾನ್ಯವಾದುದಲ್ಲ. ಅದು ಬಹು ತೊಡಕುಳ್ಳದ್ದು ಆ ತೊಡಕುಗಳ ನ್ನೆಲ್ಲ ಬಿಡಿಸುತ್ತಾ ಹೋಗುವವೇ ಸಮಾಜಕಾರ್ಯವು ಒಂದು ಪಟ್ಟಣದಿಂದ ಇನ್ನೊಂದು ಪಟ್ಟಣಕ್ಕೆ ರೈಲು ಒಯ್ಯುವ ಸಮಿತ್ತಿನಿಂದ ಕಂಬಿಗಳನ್ನು ಹಾಕುತ್ತ ನಡೆಯುವದ ಮಧ್ಯದಲ್ಲಿಯು ತಗ್ಗು ದಿನ್ನೆಗಳನ್ನು ಸರಿಪಡಿಸುವರು, ಅದೂ ಮೊಳೆ ಹಳ್ಳಗಳು ಮುಳ್ಳಿದ್ದಲ್ಲಿ ಬುದ್ದಿ ಅವುಗಳನ್ನು ಸರಿಪಡಿಸಬೇಕಾಗುತ್ತದೆ ಆ ಮುಳ್ಳಿದ್ದಲ್ಲಿ ಬುದ್ದಿ ಅವುಗಳನ್ನು ಸರಿಪಡಿಸಬೇಕಾಗುತ್ತದೆ ಆಗ ಮಾಡಿದರೆ ಆ ಸ್ಥಿಲ ಸಯ.ನಿ.ತಪ್ಪಲವನ್ನು ಕಾಣುವವ ಹಾಗೆ ಮಾಡದೆ ಆ ಸ್ಥಿಲ ಸಯ.ನಿ.ತಪ್ಪಲವನ್ನು ಕಾಣುವವ ಹಾಗೆ ಮಾಡದೆ ಪಟ್ಟಿ ಹಾಕಿದರೆ ಮುಂದೆ ಹೋಗುವವರಿಗೆ ಇಪ್ಪು ಕೈನುವನ್ನು ಪಟ್ಟಿ ಹಾಕಿದರೆ ಮುಂದೆ ಹೋಗುವವರಿಗೆ ಇಪ್ಪು ಕೈನುವನ್ನು ಪಟ್ಟಿ ನಾನು ಕೋಳ ಹಿಡಿದ್ದೇವಲಗೆ ಇಪ್ಪು ಕೈನುವನ್ನು ಪಟ್ಟಿ ನಾನು ಕೋಳ ಹಿಡಿದ್ದೇವಲಗೆ ಇಪ್ಪು ಕೈನುವನ್ನು ಪಟ್ಟಿ ಹಾಕಿ

"ವೀರಶೈವ ಮಹಾಸಭೆಯ ನಿಜದೈತ್ಯ"

ಲೇ—ಮಹಾಸಭೆಯ ಓರ್ವ ಪ್ರತಿನಿಧಿ

ಓಹೋ! ಏನು ಆ ಪ್ಯಾಯವೇಟ್ ಭೋಜನದ ವ್ಯವಸ್ಥೆ!! ಇವರಲ್ಲಿ ಎಲ್ಲರೂ ನಮ್ಮವ್ರೆ! ದುಡ್ಡು ಕೊಟ್ಟಿದ್ದರೂ ಅವರಿಗೇಕೆ ಹೀಗೆ ಬೆರೆಯಮಾಡಿಸಿದ್ದರೊ? ಅಥವಾ ಬಂಗಲೆಯ ಮಾಲೀಕರೇನಾದರೂ ಮಾಡಿಸಿರಬಹುದೆಂದು ತಿಳಿದಿದ್ದೆ, ಅಲ್ಲಿ ಹೋಗಿ ವಿಚಾರಿಸಿದ್ದರಲ್ಲಿ ಇಲ್ಲ ಎಲ್ಲವೂ ಮಹಾಸಭೆಯ ಖರ್ಚೇ ಎಂದು ಹೇಳಿದರು. ಸೂಕ್ಷ್ಮ ಪ್ರಕೃತಿಯವರು ಕೆಲವರು ಅಲ್ಲಿಯೇ ಸಲಿಸಬೇಕೆಂದು ಅತ್ಯಿತ್ತ ಅಲೆದರು ಯಾರೋ ಒಬ್ಬರು ಒಳಗಿನಿಂದ ಬಂದು ಕಣ್ಣು ಕೆಂಪಗೆ ಮಾಡಿ ಏನು ಯಾಕ್ರೆ! ಎಲ್ಲರೂ ಹಿಂಡುಗಟ್ಟಿ ಇಲ್ಲಿ ನುಗ್ಗಿದೀರಿ? ಎಂದು ಗದರಿಸಿದರು ಪಾಪ. ನಾವು ನೋಡಿದರೆ ಉಣ್ಣುವವರಿಗೆ ದೃಷ್ಟಿದೋಷವಾಗುತ್ತಿತ್ತೋ ಹೇಗೋ! ಅಲ್ಲಿಯ ಅಡಿಗೆ ಇಲ್ಲಿಯ ಅಡಿಗೆ ಒಂದಾಗಿದ್ದರೆ ಅವರು ಹಿಗೆ ಗದ್ದರಿಸಲಿಕ್ಕೂ ನಾವು ಹಾಗೆ ನೋಡಲಿಕ್ಕೂ ಸಂಬಂಧವೇ ಇರಿಲ್ಲ ನಮ್ಮ ದೃಷ್ಟಿಯು ಒಳಗಿನವರ ಬಜಾರ್‌ಗನೆಗೆ ಬಿದ್ದು ಬೊಂದೇ ತಡ, ದಡಬಡ ಕದ-ಕಿಟಕಿಗಳು ಮುಂದಕ್ಕೆ ಕಿರ್-ಕಟ್ ಎನ್ನಲಿಕ್ಕೆ ಸುರುವಾದವು. ಪಾಪ. "ಬೆಲ್ಲ ನಿನ್ನ ದಾದರೂ ಮುಚ್ಚಿ ತಿನ್ನು" ಎಂಬ ನೀತಿಯನ್ನು ಇವರು ಅನುಸರಿಸಿದರೆಂದು ತೀರ್ಮಾನಿಸಿದೆ. ಇದಕ್ಕೇಕೆ ಇವರು ಇಷ್ಟು ಬೆದರಿದರೋ ತಿಳಿಯವಾಗದೆ ನನ್ನು ಪಕ್ಷಪಾತವು ಹೊರಬಿದ್ದತೊಡಗಿತು.

ರಾತ್ರಿ ೯ ಘಂಟೆ ಸಮಯ. ವಿಷಯವಿಮಾರ್ಶಕ ಕಮಿಟಿಯಲ್ಲಿ ಅಧ್ಯಕ್ಷರು ಜಾಗವನ್ನು ಕೆಲಸ ನಡೆಯಿಸಿದ್ದಾರೆ. ಬೇರೆಯವರೂ ತಮ್ಮ ಶಿಷ್ಟಾಕಾರ ಸ್ಥಾನವನ್ನು ಸಾಗಿಸಿದ್ದಾರೆ ತಿಗಳ ನೆಕ್ಕಿದ ವಿಸೆಯವರೊಬ್ಬರು—ಕೆ! ಕೆ! ಕೆ! ತಾವೇ ವಿಜಾಪುರ ವಕೀಲರಂತೆ! ವಕೀಲರು—ಕೆ! ಕೆ! ಕೆ! ಹೌದಿ! ನೀವೊನೂ ವಕೀಲರಂತೆ! ಹೌದಿ ಹೌದು! ಎನ್ರೀ! ವಕೀಲರೆ! ಈ ಗಡ್ಡ ಬಿಟ್ಟವರಾರ್ರಿ? ಅಯ್ಯೋಯ್ಯೋ! ಅವರ ಹೆಸರೆತ್ತಬ್ಯಾಡ್ರಿ ಅವ ಮಹಾ ಅಸವಾಲದವ ನದಾನೆ ಇಲ್ಲಿ ಒಬ್ರಿ ಒಂದು ಮಾತ ಹೇಳತೀನಿ, ನೀವು ಹೋಗಿ ಅವನನ್ನ ಕೆಣಕಾರಿ ನೋಡೋಣ! ಏನೇನಂತಾನೋ ಎಂದು ಕವಿಯಲ್ಲಿ ಮಂತ್ರಗೊಸ್ಕ್ಯವನ್ನೊದಿದರು. ಆ ಕೂಡಲೆ ಆ ತಿಗಳ ನೆಕ್ಕಿದ ವಿಸೆಯವರು ಗಡ್ಡದವರ ಸಮೀಪಕ್ಕೆ ಹೋಗಿ ಏನ್ರಿ ನೀವು ಕೊಳ್ಳಾಗ ಜನಿವಾರ ಹಾಕೀರೆನ್ರಿ! ತಿಲೆಯಾಗ ಚಂಡಿಕೇನಾ ಬಿಡಿಸೀರಿ ಹೆ! ಹೆ! ಹೆ! ಎಂದರು. ಗಡ್ಡದವರು ಅದಕ್ಕುತ್ತರವಾಗಿ ಹೌದಪ್ಪ! ನೀನೆನ್ನ ಲಿಂಗಾಯಿತರೋ ಯಾರು? ಗೊತ್ತಾಗಲಿಲ್ಲದು ವೀರಶೈವರೆಂಬವರೆಲ್ಲರೂ ಜನಿವಾರವನ್ನು ಹಾಕಿತ್ತಾರೆ ಆದರೆ ಅವಕ್ಕೆ ಶಿವಸೂತ್ರವೆಂದು ನಾವು ಹೇಳಿದರೆ ಕನ್ನಡದಲ್ಲಿ ಶಿವದಾರ ಎನ್ನುತ್ತಾರೆ ನಾವೂನೂ ಹಾಕಿರಬೇಕಲ್ಲ! ಶಿಷ್ಟಾನೋ ಕೆಲವರು ವೈದಿಕಪದ್ಧತಿಯಂತೆ ಬಿಡಿಸುತ್ತಾರೆ. ಇನ್ನು ಸುಧಾರಿಸಿದವರು ಅವೈದಿಕಪದ್ಧತಿಯಂತೆಯಾದರೂ ಬಿಡಿಸಿಕೊಂಡೆ ತಿರುತ್ತಾರೆ ಆಗಲಿ ಈ ಕವಿಟಿ ಮುಗಿಯಲಿ, ಇನ್ನೂ ಹೆಚ್ಚು ಮಾತಾಡೋಣ! ಎಂದರು ಆ ತಿಗಳ ನೆಕ್ಕಿದ ವಿಸೆಯವರು. ಅಲ್ಲಿಂದ ಮೋರೆ ಕರ್ರಗೆ ಮಾಡಿಕೊಂಡು ವಿಜಾಪುರ ವಕೀಲರಲ್ಲಿಗೆ ಒಂದು ಎನ್ರಿ! ನಿಮ್ಮ ಮಾತೇ ಬರೋಬರಿ ನೋಡಿ! ಆ ಗಡ್ಡದವ ಏನ ಬೆರಕಿ ಹಾಸ್ಯ ಎಂದರು ವಿಜಾಪುರ ವಕೀಲರು—ಇವ್ಯಕೇನೆ ಸಂವ ಬೆರಕಿ ಅಂತಾ ತಿಳಿದಿರೇನು, ಇನ್ನೂ ಅವನದು ಬಹಳ ಇತಿಹಾಸ ಐತಿ, ಹ್ಯಾಂಗ ಜಸ್ತ ಹಾಕಿ ಕೂತಾನ ನೋಡ್ರಿ! ಎಂದರು ಈ ಮಹಾಪುರುಷರ ವರ್ಗಲ್ಲಿಯೇ ನಾನೂ ಕೂತಿದ್ದೆ ನೋಡ್ರಿ! ಇವರೇ ಶಾಂತಿಸ್ವಾಪಕರಂತೆ! ದೇಶಿಯವರಿಗೆ ಏನೇನೋ ಕಲಿಸಿಕೊಟ್ಟು ಜಗಳ ಹಚ್ಚುವುದು ಹೇಗಿದೆ? ಸಮಾಜದಲ್ಲಿ ಇವರೂ ಮುಖಂಡರಂತೆ! ಇಂತಹ ಮೊದುಕ ಮುಂದಾಳುಗಳೇ ಹೊಟ್ಟೆಯೊಳಗೊಂದು ಹೊರಗೊಂದು ತೋರಿಸಿ ಸಮಾಜದಲ್ಲಿ ಕಲಹವನ್ನು ಹಚ್ಚಿ ಉಪಾಯದಿಂದ ಹಣವನ್ನು ಸಂಪಾದಿಸುತ್ತಿರುವಾಗ ಇನ್ನು ಸರ್ವ-ಸಾಮಾನ್ಯರಿಂದ ಸಮಾಜದಲ್ಲಿ ಎಷ್ಟು ಅನರ್ಥಗಳು ನಡೆಯುತ್ತಿರಬಹುದೆಂಬುದನ್ನು ವಾಚಕರೇ ಊಹಿಸಬಹುದಾಗಿದೆ

ಅಂದು ಆರಂಭದಲ್ಲಿಯೇ ಸಭೆಯಲ್ಲಿ ಗಲಾಟೆಗೆ ಆರಂಭವಾಯಿತು ಬಳಯಲ್ಲಿದ್ದವರನ್ನು ವಿಚಾರಿಸಿದೆ ಅವರು ಅಂದದ್ದು:—ಬೇರೆ ಜನಗಳನ್ನು ಬಿಡುತ್ತಿದ್ದಾರೆ ಪಂಚಾಚಾರ್ಯ ಪಕ್ಷದವರು ಗಲಾಟೆ ಮಾಡುತ್ತಾರೆ ಪ್ರಸಂಗ ಬಂದರೆ ಅವರಕೂಡ ಹೊಡೆದಾಡುವುದಕ್ಕೆ ಜನರು ಬೇಕಾಗುತ್ತಾರೆ. ಎಂದು ನಿನ್ನೇ ದಿನವೇ ಆನೇಕರು ಆಲೋಚನೆ ಮಾಡಿ ಹೀಗೆ ಹಿಂಡು ಗೂಡಿಸುತ್ತಿದ್ದಾರೆನೋಡಿರಿ ಈ ಸಾಲಿಗೆಸಾಲೇ ಟಿಕೇಟು ತಂದಿಲ್ಲ ಎಂದರು ಅವರ ಮಾತನ್ನು ಕೇಳಿದೊಡನೆಯೇ ಒಬ್ಬರು:—ಯಾಕ್ರಿ ಹೀಂಗ ಅಂತೀರಿ! ಸಭೆಯೇ ನಮ್ಮದಾಗಿರುವಾಗ ಟಿಕೇಟು ಯಾತಕರಿ? ಎಂದರು ಆದಕ್ಕೆ ಬೇರೊಬ್ಬರು:—ಹೌದ್ರಿ ಸಭೆ ನಿಮ್ಮದೇ ಹೊರತು ನಮ್ಮದಲ್ಲವೆಂದೋದು ಎಂದೋ ಗೊತ್ತಾಗಿ ಹೋಗದೆ ಯಾಕೋ ಬರ್‌ಗೈಯ್ಯಿಂದ ಬಂದೀರಿ? ನಿನ್ನೆಲ್ಲಾ ಪಂಚಾಚಾರ್ಯ ಪಕ್ಷದೋರನ ಬಡೀರೆಂದು ಹೇಳಿ ಟಿಕೇಟ್‌ಲೆದೆ ಕರೆಸಿರುವಾಗಿ ಅದ್ಯಾಕರಿ ಒಡಿಗೀನೆ ತಂದಿಲ್ಲ? ಎಂಥಾ ಅಜ್ಞಾನವಪ್ಪ! ಮತ್ತೆ ಸತ್ಯಾಗ್ರಹ, ಗಾಂಧಿಯವರು ನಮ್ಮೋರು ಅಂತೀರಲ್ಲರಿ! ತುಸೆ ನಾಚಿಕ್ಯಾರಾ ಬರೋದಿಲ್ಲರ್ಯಾ? ಎಂದರು. ಹೀಗೆ ಬೋಳ ಪಂಥಿಗಳು ತಮ್ಮ ತಮ್ಮವರಿಂದಲೇ ಹಿಯಾಳಿಸಿಕೊಳ್ಳುತ್ತಿದ್ದ ದೃಶ್ಯಗಳು ಇನ್ನೂ ಅನೇಕವಾಗಿವೆ. ಮತ್ತೆ ಮುಂದಿನ ಸಂಚಿಕೆಯನ್ನು ಎದುರು ನೋಡುತ್ತಿರಬೇಕು (ಮುಂದೆ ಸಾಗುವುದು)

ವೀರಶೈವನ ಸ್ಥಾನವು ಹಿಮವಾಚಲದ ಉಚ್ಚಶಿಖರದಮೇಲಿದೆ.

ಲೇಖಕ—ಬಾಡಪ್ಪ ಶಿವಪುತ್ರಪ್ಪ ಝುಂಜಪ್ಪಗೋಳ, ಸೊಲ್ಲಾಪುರ.

ಆಯ್ಯಾ, ವೀರಶೈವನೇ! ಹಿಮವಾಂಚು ಪರ್ವತದ ಮೇಲೆ ವಾಸಮಾಡುವ ಶ್ರೀ ಶಂಕರನ ಚರಣಸಾನ್ನಿಧ್ಯದಲ್ಲಿ ನಿನ್ನ ಸ್ಥಾನವಿದೆ ನೀನು ಕೇವಲ ಶಿವಭಕ್ತನಿರದೆ ಶಿವಭಕ್ತರಲ್ಲಿ ಅಗ್ರಗಣ್ಯನಾಗಿರುವೆ ಶಿವದೇವನು ಸರ್ವ ದೇವತೆಗಳಲ್ಲಿ ಶ್ರೇಷ್ಠನಿದ್ದಾನೆ. ಅವನು ಸರ್ವಾಂಗಕ್ಕೆ ಭಸ್ಮಲೇಪನಮಾಡಿಕೊಂಡು ಹಿಮಾಚಲದ ಉಚ್ಚ ಶಿಖರಾರೂಢನಾಗಿ ತಪಶ್ಚರ್ಯೆಯಲ್ಲಿ ಮಗ್ನನಾಗಿದ್ದಾನೆ ಹಾಲಾಹಲ ವಿಷಪ್ರಾಶನಮಾಡಿ ಸಹಿಸಿಕೊಳ್ಳುವ ಅದ್ಭುತ ಶಕ್ತಿಯು ಅವನಲ್ಲಿದೆ ಅವನ ಜಡೆಯೊಳಗೆ ಶುಭ್ರಗಂಗೆಯು ವಾಸಮಾಡಿಕೊಂಡಿರುವಳು ಅವನು ಶೀತಲಚಂದ್ರನನ್ನು ತನ್ನ ಶಿರದಲ್ಲಿ ಧರಣಮಾಡಿದ್ದಾನೆ. ವಾರ್ತತೀರ್ಪಿಯನ್ನು ತನ್ನ ವಾಮೊಂಕದಲ್ಲಿ ಧರಿಸಿಕೊಂಡಿದ್ದಾನೆ ಮಂಗಲದಾಯಕನಾದ ಗಜಾನನನನ್ನು ತನ್ನ ಎರಡನೆ ಅಂಕದ ಮೇಲೆ ಧರಿಸಿದ್ದಾನೆ ಅವನ ಅಗ್ನಿನೇತ್ರವು ಚರಾಚರಪ್ರಪಂಚವನ್ನು ನಿಮಿಷಮಾತ್ರದಲ್ಲಿ ಭಸ್ಮನಾಡಿಬಿಡುತ್ತದೆ ಇಂತಹ ಸಾಮರ್ಥ್ಯಶಾಲಿಯಾದ ಶಿವದೇವನ ಭಕ್ತನು ನೀನಾಗಿರುವೆ ನಿನ್ನಲ್ಲಿ ನಿನ್ನ ದೇವರ ಸ್ವಗುಣಗಳೂ ಇರಲಿಕ್ಕೇ ಬೇಕು ನಿನ್ನ ದೇವನು ಸರ್ವ ದೇವತೆಗಳಲ್ಲಿ ಶ್ರೇಷ್ಠನಾಗಿರುವಂತೆ ನೀನು ಸಹ ಸಮಸ್ತ ಶೈವದಲ್ಲಿ ಶ್ರೇಷ್ಠನಾಗಿರುವೆ ನಿನ್ನ ಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿರುವರಲ್ಲದೆ, ಅಗಸ್ತ್ಯ ಮಹರ್ಷಿಗಳಿಗೆ ಅಷ್ಟಾವರಣ ಪಟ್ಟಸ್ಥಲ ಸಿದ್ಧಾಂತವನ್ನು ಉಪದೆಶಿಸಿದ್ದಾರೆ ಭಕ್ತಜನರಿಗೆ ಸುಜ್ಞಾನತತ್ವದ ಜ್ಞಾನಮಾಡಿಕೊಟ್ಟು ಓಂಕಾರರೂಪದಲ್ಲಿ ಲೀನವಾಗುವುದಕ್ಕೆ ಆ ಪಂಚಾನನನು ಪಂಚಾಚಾರ್ಯರ ರೂಪದಿಂದ ಭೂತಲದಲ್ಲಿ ನಿನ್ನ ಮತವನ್ನು ನೆಲೆಗೊಳಿಸಿದ್ದಾನೆ ಅವರ ಕಡೆಯಿಂದ ಶಿವಜ್ಞಾನವನ್ನು ಸಂಪಾದಿಸಿಕೊಂಡು ಜಗತ್ತನ್ನು ತ್ಯಾಗಮಾಡಿ ಓಂಕಾರರೂಪದಲ್ಲಿ ಲೀನನಾಗಿ ವಿರಕ್ತನಾಗಿರುವೆ. ನಿನ್ನ ಮತದಲ್ಲಿ ಅವಿರ್ಭವಿಸಿದ ಮಹಾಜ್ಞಾನಿಗಳಾದ ಶ್ರೀ ನಿಜಗುಣಾರಾಧ್ಯ, ಸಕಳೇಶ ಮಾದರಸ, ಕಾಶ್ಮೀರ ದೇಶಾಧಿಪತಿ, ಮಾಂಡವ್ಯಭೂಪಾಲ ಮೊದಲಾದವರು ಸಕಲ ಸಾಮ್ರಾಜ್ಯವನ್ನು ತ್ಯಜಿಸಿ ವೀರಶೈವ ಧರ್ಮ ಬೋಧಕ ಗ್ರಂಥಗಳನ್ನು ರಚಿಸಿದರು. ಶ್ರೀಕರಭಾಷ್ಯ ಕಾರರಾದ ಶ್ರೀಪತಿ ಪಂಡಿತಾರಾಧ್ಯರು ಮತ್ತು ನೀಲಕಂಠಭಾಷ್ಯಕಾರರಾದ ನೀಲಕಂಠಶಿವಾಚಾರ್ಯರು ನಿನ್ನ ಮತದಲ್ಲಿಯೇ ಉತ್ಪನ್ನರಾಗಿದ್ದಾರೆ ಜೋಳ-ಪಾಂಡ್ಯ ಮೊದಲಾದ ರಾಜರುಗಳು ನಿನ್ನ ಮತವನ್ನಂಗೀಕರಿಸಿದರು. ನಿನ್ನ ಮತಾಲಂಕಾರಭೂಷರಾದ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರವರು, ಅಥಣಿ ಸ್ವಾಮಿಗಳು ಶ್ರೀ ನಾಲತವಾಡಶರಣರು ಯೋಗಬಲ್ಲಂದಿಂದ ಪ್ರಸಿದ್ಧರಾದರು ಕೆತ್ತೂರು ಚನ್ನಮ್ಮ, ಕೆಳದಿ ಚನ್ನಮ್ಮ, ಬೆಳವಡಿ ಮಲ್ಲಮ್ಮನಂಥ ವೀರನಾರಿಯರು, ನಿನ್ನ ಮತದಲ್ಲಿಯೇ ಜನ್ಮವೆತ್ತಿ ಜಗದ್ವಿಖ್ಯಾತರಾಗಿ ಹೋದರು ಈ ಕಾಲದಲ್ಲಿ ಕೈ|| ರಾ|| ಬ|| ಅರಬಾವಿ ಶ್ರೀ ಗಿಲಗಂಚಿ, ದಿ|| ಬ|| ಪುಟ್ಟಣಶೆಟ್ಟರು ಮೊದಲಾದ ಸಮಾಜಕಾರ್ಯ ಧುರಂಧರ ವೀರರು ಜನ್ಮವೆತ್ತಿದ್ದರು. ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ಬಳ್ಳಾರಿಯಲ್ಲಿ ಪ್ರಥಮ ಪಾಠಶಾಲಾ ಸ್ಥಾಪನೆಮಾಡಿದ ಶ್ರೀ ಸಕ್ಕರಿ ಕರಡಪ್ಪನವರಂಥ ಜ್ಞಾನಿದರ್ಕಳ ಮತ್ತು ಶ್ರೀ ಮೈಸೂರು ವೀರಸೆಂಗಪ್ಪನವರಂಥ ಧರ್ಮಾಭ್ಯುದಾರಕ ಪುರುಷರು ನಿನ್ನಲ್ಲಿಯೇ ಉದ್ಭವಿಸಿದರು. ಸ್ವಮತ ಬಾಂಧವರಲ್ಲಿ ಉನ್ನತಿಗೇರಿಸಲ್ಕರ ತಮ್ಮ ಸರ್ವಸ್ವವನ್ನೇ ಧಾರೆಯೆರೆದಶ್ರೆ ಧರ್ಮವೀರ, ಶ್ರೀಮಂತ ಶಿರಸಂಗಿ ದೇಸಾಯಿಯವರು ಧರ್ಮಲಲಾಮಭೂಷರಾದರು. ಅಸಂಖ್ಯ ಧರ್ಮ ಗ್ರಂಥಗಳ ಜೀರ್ಣೋದ್ಧಾರಕ್ಕಾಗಿ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿದ ರಾ|| ಬ|| ಅಪ್ಪಾಸಾಹೇಬ ವಾರದರಂತಹವರು ಧರ್ಮಾಲಂಕಾರಭೂಷರಾದರು.

ಇಂತಹ ಉಜ್ವಲವಾದ ಮತದಲ್ಲಿ ಜನ್ಮವೆತ್ತಿದ ನೀನು ಧರ್ಮಕ್ಕೊಸ್ಕರ ಪ್ರಾಣತ್ಯಾಗ ಮಾಡುವ ವೀರನಿದ್ದು ಗುರುಲಿಂಗ ಜಂಗಮರ ತ್ಯಾಗಮಾಡ ಹತ್ತಿರುವಿ ಜ್ಞಾನ ಕೊಡುವ ಗುರುವು ಮತ್ತು ಜ್ಞಾನವನ್ನು ಪಡೆದುಕೊಂಡು ಪರಿಪೂರ್ಣನಾದ ವಿರಕ್ತ ಇವರು ತಮ್ಮ ತಮ್ಮಲ್ಲಿಯೇ ಕಲಹವನ್ನು ಬೆಳೆಯಿಸಿದ್ದರಿಂದ ನಿನಗೆ ಶೂನ್ಯತ್ವವು ಪ್ರಾಪ್ತವಾಗಿದೆ. ನೀನು ಸಂಪತ್ತಿನ ಮದದಿಂದ ನಿನ್ನಲ್ಲಿಯ ಪಂಡಿತರ ಅನಾದರ ಮಾಡಿ ಬಿಡುತ್ತಿರುವಿ ನೀನು ನಿನ್ನ ಯೋಗ್ಯತೆಯನ್ನು ತಿಳಿದುಕೊಳ್ಳದೆ ವಿಲಕ್ಷಣವಾದ ವಾತಾವರಣದಲ್ಲಿ ಹರಿದು ಹೋಗುತ್ತಿರುವಿ. ನೀನು ನಿನ್ನ ಸಂಪತ್ತನು ಜ್ಞಾನವೃದ್ಧಿಗೆ ಮಾಡದೆ ಕೆಟ್ಟ ಕೆಟ್ಟ ಮಾರ್ಗದಲ್ಲಿ ಉಪಯೋಗಿಸುತ್ತಿರುವಿ ನೀನು ಧರ್ಮಶಿಕ್ಷಣ, ಆಚಾರ ಶಿಕ್ಷಣ ಇವುಗಳಕಡೆಗೆ ದುರಾಕ್ಷ್ಯ ಮಾಡಿದ್ದರಿಂದ ನಿನ್ನ ಸ್ಥಾನವೆಲ್ಲಿದೆ ಯೆಂಬುದು ಗೊತ್ತಾಗದೆ ಹಿಮವಾಲಯದ ಉಚ್ಚಶಿಖರದ ಮೇಲಿಂದ ಮಹಾಗರ್ತದಲ್ಲಿ ಉರುಳಾಡುತ್ತ ಬಿದ್ದಿರುವಿ

ನೀನು ಶಿವನಂತೆ ಸರ್ವ ದುರ್ವಿಕಾರಗಳನ್ನು ಭಸ್ಮ ಮಾಡಿ ಸರ್ವಾಂಗಕ್ಕೆ ಭಸ್ಮವನ್ನು ಲೇಪಿಸಿಕೊಳ್ಳು. ಮಾಯಾಮಯ ಜಗತ್ತಿನ ವಿಷಯರೂಪಹಾಲಾಹಲ ವಿಷವನ್ನು ಜೀರ್ಣಗೊಳಿಸುವ ಶಕ್ತಿಯನ್ನು ಶಿವದೇವನಂತೆ ನೀನು ನಿನ್ನ ಶರೀರದಲ್ಲಿ ತಂದುಕೊಳ್ಳು. ಶಿವದೇವನ ಜಡೆಯೊಳಗಿನ ಶುದ್ಧ ಗಂಗೆಯಂತೆ ನೀನು ನಿನ್ನ ತಲೆಯಲ್ಲಿ ಶುದ್ಧ ವಿಚಾರಕ್ಕೆ ಆಶ್ರಯಕೊಡು ಶಿವದೇವನ ಮಸ್ತಕದೊಳಗಿನ ಶೀತಲ ಚಂದ್ರನಂತೆ ಅಮೃತವನ್ನು ಸವಿಸಿ ನಿನ್ನಲ್ಲಿ ಶೈತ್ಯವನ್ನು ತಂದುಕೊಳ್ಳು. ಶಿವನು ಶಕ್ತಿವಿಶಿಷ್ಟನಾದಂತೆ ನೀನು ಜ್ಞಾನಶಕ್ತಿ ವಿಶಿಷ್ಟನಾಗು ನೀನು ನಿನ್ನ ವೀರಶೈವತ್ವದಿಂದ ಅಲ್ಲಾಡಿರುವಿ ನಿನ್ನಲ್ಲಿ ಗುರುಗಳ ಗುರುತ್ವವಾಗಲಿ ವಿರಕ್ತರ ವಿರತಿಯಾಗಲಿ ಭಕ್ತರ ಭಕ್ತಿಯಾಗಲಿ ಏನೂ ಇಲ್ಲ ಒಳ್ಳೆದು ಏಳು ಗಾಬರಿಯಾಗಬೇಡ! ನೀನು ವೀರಶೈವನಿರುವದರಿಂದ ಶಿವನಾಮಸ್ಮರಣೆಯನ್ನು ಮಾಡು. ಹೃದಯದ ಮೇಲೆ ಶಿವಲಿಂಗ ಧಾರಣಮಾಡಿ ಶಿವದೇವನನ್ನು ಗುರ್ತಿಸು. ವೇದಾಗಮಾದಿಗಳ ರಹಸ್ಯವನ್ನು ತಿಳಿದುಕೊಳ್ಳು. ಶಿವನು ನಿನಗೆ ಹಿಮಾಲಯವೆಂದರೆ ಬ್ರಹ್ಮ ಪದದ ಉಚ್ಚ ಶಿಖರದ ಮೇಲೆ ತನ್ನ ಚರಣಸಾನ್ನಿಧ್ಯದಲ್ಲಿ ಸ್ಥಾನವನ್ನು ಕೊಡುವನು. ಅದೇ ನಿನ್ನ ಸ್ಥಾನವು.

ಶ್ರೀ ಧರ್ಮಾಲಂಕಾರ ಹೆಸರು

॥ ಶ್ರೀ ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಗೋಸಂರಕ್ಷಣೆಯೇ ಹಿಂದೂ ಧರ್ಮದ ತಳಹದಿಯು.

ಲೇಖಕ- ಶ್ರೀ ಜಗದ್ಗುರು ಅಭಿನವನಂಜಾಳ ವಾಜಪಾಲಯದ ಸಕ್ರೆಟರಿ ವಿರೂಪಾಕ್ಷಪ್ಪ ಚನ್ನಬಸಪ್ಪ ಗೋಣಿ, ಮುಳಗುಂದ

ಭರತಖಂಡದ ಮೂಲ ಜೀವನಾಧಾರವು ಒಕ್ಕಲತನವು. ಒಕ್ಕಲತನದ ಮೂಲವು ಗೋರಕ್ಷಣೆ ಈ ಗೋರಕ್ಷಣೆಯು ಭರತಖಂಡದ ಒಂದು ಪ್ರಧಾನ ಧರ್ಮವಾಗಿದೆ. ಧರ್ಮದ ತಳಹದಿಯೇ ಗೋರಕ್ಷಣೆಯು. ಗೋವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಬಹುಸುಲಭರೀತಿಯಿಂದ ಸಾಧಿಸುವದಕ್ಕೆ ಸಹಾಯವಾಗಿರುವದು ಇದರ ಮರ್ಮವನ್ನರಿಯದೆ ಪಾಶ್ಚಿಮಾತ್ಯರನ್ನು ಎಡಬಿಡದೆ ಅನುಸರಿಸುವ ಅಧುನಿಕ ಸುಧಾರಕರೆನಿಸಿದ ನಾವು ದಿನೇ ದಿನೇ ದೇಹದಿಂದಲೂ ಧನದಿಂದಲೂ ಮನಸ್ಸಿನಿಂದಲೂ ಕ್ಷೀಣರಾಗಹತ್ತಿರುವೆವು. ಪ್ರಾಚೀನಕಾಲದ ಈ ಭಾರತಭೂಮಿಯಲ್ಲಿ ನಮ್ಮ ಪೂರ್ವಜರ ವೈಭವವನ್ನು ಪುರಾಣೇತಿಹಾಸಗಳಲ್ಲಿ ಓದಿ ಕೇಳಿ ತಿಳಿದ ನಾವು ಈಗಿನ ಸ್ಥಿತಿಯನ್ನು ನೋಡಿದರೆ ನಮ್ಮ ಅಧಃಪತನವೆಂದೇ ಅನ್ನಬೇಕು. ಹೀಗೇಕಾಗಿರಬಹುದು!

ಆಚಾರಃ ಪರಮೋ ಧರ್ಮ ಆಚಾರಃ ಪರಮಂ ಧನಂ ।
ಆಚಾರಃ ಪರಮಾ ವಿದ್ಯಾ ಆಚಾರಃ ಪರಮಾ ಗತಿಃ ॥
ಸದಾಚಾರೇಣ ದೇವತ್ವಂ ಯತಿತ್ವಂ ಚ ವರಾನನೇ ।
ಉಪಚಾರಾತ್ ಕುಯೋನಿತ್ವಂ ಮನುಷ್ಯಾಸ್ತ್ವದ್ವಿಪರ್ಯಯಃ ಯೇ ॥
ಜ್ಞಾನಮಾಚಾರ ಹೀನೇಷು ಸರ್ವದೈವ ಸಮನ್ವಿತಂ ।
ಮುಷ್ಟಚಾಂಡಾಲ ಭಾಂಡೇಷು ಯಥಾ ಭಾಗೀರಥೀಜಲಂ ॥

ಆಚಾರವೇ ಉತ್ಕೃಷ್ಟವಾದ ಧರ್ಮವು; ಆಚಾರವೇ ಉತ್ಕೃಷ್ಟವಾದ ದ್ರವ್ಯವು; ಆಚಾರವೇ ಉತ್ಕೃಷ್ಟವಾದ ವಿದ್ಯೆಯು; ಆಚಾರವೇ ಉತ್ಕೃಷ್ಟವಾದ ಗತಿಯು; ಮನುಷ್ಯರು ಸದಾಚಾರದಿಂದ ದೇವತ್ವವನ್ನೂ ಋಷಿತ್ವವನ್ನೂ ಪಡೆಯುತ್ತಾರೆ ಆಚಾರವನ್ನು ಬಿಟ್ಟರೆ ನೀಚಜನರಾಗುವರು ಆಚಾರಹೀನರಲ್ಲಿದ್ದ ಜ್ಞಾನಕ್ಕೆ ಪವಿತ್ರತೆ ಇರುವದಿಲ್ಲ ಗಂಗಾಜಲವು ಚಾಂಡಾಲರ ಪಾತ್ರೆಯಲ್ಲಿರೋದಾದರಿಂದ ಹೇಗೆ ಅಪವಿತ್ರವೆನಿಸುವದೋ ಅದರಂತೆ ಅಪವಿತ್ರವೆನಿಸುವದು. ಈ ಪ್ರಕಾರವಾಗಿ ಧರ್ಮಶಾಸ್ತ್ರಗಳು ಮಾನವ ಪ್ರಾಣಿಯ ಉದ್ಧಾರಕ್ಕೋಸ್ಕರ ಆಚಾರವೇ ಶ್ರೇಷ್ಠವಾದ ಸಾಧನವೆಂದು ಬೋಧಿಸುವದರಿಂದ ಅಂಥ ಸದಾಚಾರಕ್ಕೆ ನಾವು ತಿಲಾಂಜಲಿಯನ್ನಿತ್ತಿರುವದರಿಂದ ನಮ್ಮ ಅಧಃಪತನದ ಹಾದಿಯನ್ನು ನಾವೇ ಶೋಧಮಾಡಿ ಹಿಡಿದಂತಾಗಿದೆ.

ನಮ್ಮ ಪೂರ್ವಜರು ಅಳಿಬಾಳಿ ಕೀರ್ತಿಶಾಲಿಗಳಾಗಿ ಹೋದ ಭಾರತವರ್ಷವೇ ಈಗಾದರೂ ಮೂರ್ತಿಮತ್ತಾಗಿರುವದು ಮತ್ತು ಅಗಿದ್ದ ನದೀ ಪರ್ವತಗಳು ಈಗಲೂ ಇರುವವು ಅದೇ ಸೂರ್ಯ ಚಂದ್ರರೇ ಆಗಿನಂತೆ ಈಗಲೂ ಮೂಡಿ ಬೇಗಿ, ಮುಳುಗುವರು ಸರ್ವ ಪ್ರಾಣಿವರ್ಗವು ಇರುವದು, ಮನುಷ್ಯರಾದರೂ ಹಿಂದಿನವರಂತೆ ಸಕಲ ಇಂದ್ರಿಯಗಳನ್ನೂ ಅವಯವಗಳನ್ನೂ ಪಡೆದಿರುವರು. ಆದರೆ ಹಿಂದಿನವರು "ಶತಾಪಾದಿ ತರಾದಪಿ" ಎಂಬಂತೆ ವೀರರಿದ್ದರು. ನಾವು ಶರ ಶಾಪಗಳೆಂದರೇನೆಂಬುದನ್ನು ಕೂಡ ಅರಿಯದವರಾಗಿದ್ದೇವೆ. ಹಿಂದಿನ ಮಹಾತ್ಮರಲ್ಲೊಬ್ಬನನ್ನು ತಡೆಯುವದು ತ್ರಿಮೂರ್ತಿಗಳಿಂದಲೂ ಸಹ ಅಸಾಧ್ಯವಾಗಿತ್ತು ಆದರೆ ಈಗ ನಮ್ಮೊಬ್ಬರನ್ನಲ್ಲ, ನವ್ಯಂಥ ಮೂರುಲಕ್ಷೆ ಜನಸಮೂಹವನ್ನು ಕೇವಲ ಒಬ್ಬ ಗೌರಕಾಯನು ತನ್ನ ಮನಸ್ಸಿಗೆ ಬಂದತ್ತ ಕುಣಿಸುತ್ತಿರುವನು ಆಹಾ! ಇನ್ನೆಷ್ಟು ಅಧಃಪತನವಾಗಬೇಕು ಹೀಗೆ ಸಹಿಸಲಸಾಧ್ಯವಾದ ಅನಿರ್ವಚನೀಯ ಅವನತಿಯ ಶೋಚನೀಯ ಸ್ಥಿತಿಯು ನಮಗೆ ಪ್ರಾಪ್ತವಾಗಿರುತ್ತದೆ ಕಾರಣವೇನಿರಬಹುದು? ಯವನರೂ ಮ್ಲೇಂಛರೂ ಪಾಖಂಡಿಗಳೂ ನಮ್ಮ ಪ್ರಾಚೀನ ವೈಭವಕ್ಕೆ ಮೋಹಕರಾಗಿ ಮೇಲಿಂದಮೇಲೆ ದಂಡೆತ್ತಿಬಂದು ಸರ್ವಸ್ವವನ್ನು ಹರಣಮಾಡಿತೊಂಡು ಹೋದದ್ದಲ್ಲದೆ ನಮ್ಮ ಜಗದ್ವಂದ್ಯ ಸನಾತನ ಧರ್ಮದ ಮೇಲೆ ತಮ್ಮ ಕುಹಕಧರ್ಮದ ವರ್ಚಸ್ಸನ್ನು ಕೆಡಹಿದರು. ಹೀಗೆ ಅನ್ಯ ಧರ್ಮೀಯ ರಾಜರುಗಳ ಅಲ್ಪ ಕೆಯ ಪ್ರಭಾವದಿಂದ ನಮ್ಮ ಧರ್ಮವನ್ನು ನಾವು ಪಾಲಿಸದಿದ್ದುದೇ ಮುಖ್ಯ ಕಾರಣವಾಗಿರುವದು ಆದರೆ ಕಾಮಾಧ್ಯನುವಾದ ಗೋಮಾತೆಯ ಸೇವೆಯನ್ನು ನಿರಾಕರಿಸಿ ಹರ-ಗುರುಭಕ್ತಿಯನ್ನು ತೊರೆದು ಸ್ವೇಚ್ಛಾಚಾರಿಗಳಾಗಿದ್ದುದೇ ಮೂಲಕಾರಣವು. ಗೋಮಾತೆಯು ಹೇಗೆ ಜಗಜ್ಜೀವನ ಧಾರಣ ಪೋಷಣೆಗೆ ಮೂಲಾಧಾರವೆಂಬುದನ್ನು ವ್ಯವಹಾರಿಕ, ಧಾರ್ಮಿಕ, ಮತ್ತು ಪಾರಮಾರ್ಥಿಕ ದೃಷ್ಟಿಯಿಂದ ವಿವೇಚಿಸುವದೇ ಈ ಚಿಕ್ಕ ಲೇಖನದ ಉದ್ದೇಶವು.

ಅಕಳು ಬಹು ಸಭ್ಯ ಪ್ರಾಣಿಯು. ಬಹಳ ಪರೋಪಕಾರಿಯು ಸದಾಶುಚಿಯಾಗಿರುವದು ಗಂಗಾಜಲದಂತೆ ಪವಿತ್ರವಾಗಿರುವದು. ಗೋಸ್ಪರ್ಶನಾತ್ರದಿಂದ ಸರ್ವವೂ ಶುದ್ಧವಾಗುವದು. ಮನುಷ್ಯನು ಪ್ರತಿದಿವಸ ತ್ರಿಕಾಲದಲ್ಲಿ ಸ್ನಾನಮಾಡಿದಾಗ್ಯೂ ಶುಚಿಯಾಗುವದಿಲ್ಲ ಗೋವನ್ನು ಪ್ರತಿದಿವಸ ಯಾರೂ ಮೈ ತೊಳೆಯುವದಿಲ್ಲ ಆದರೂ ಸದಾ ಶುದ್ಧವಿರುವದು ಉಷಃಕಾಲದಲ್ಲೆದ್ದು ಗೋದರ್ಶನವನ್ನು ಮಾಡಲೇಬೇಕೆಂದು ನಮ್ಮ ಧರ್ಮ ಕಟ್ಟಳೆಯು ಇದು ಹಾಲು, ತುಪ್ಪ, ಗೊಬ್ಬರ ಮುಂತಾದವುಗಳಿಂದ ಪರೋಪಕಾರವನ್ನು ಮಾಡುತ್ತದೆ ಹುಸುವಿನ ಹಾಲನ್ನು ಸೇವಿಸುವದರಿಂದ ತಮೋರಜೋಗುಣಗಳು ನಾಶವಾಗಿ ಶುದ್ಧ ಸತ್ವಗುಣವು ವೃದ್ಧಿಯಾಗುವದು. ಅಂಗಾಂಗಗಳು ಸದೃಢವಾಗಿ ಮನಸ್ಸಿನಲ್ಲಿ ಶಾಂತಿಯುತ್ಪನ್ನವಾಗಿ ಬೌನೆಯವರಿಗೂ ಬಾಲಕರಿಗೂ, ವೃದ್ಧರಿಗೂ, ಯುವಕರಿಗೂ ಸಮಾನವಾದ ಹಿತಕಾರಿಯಾಗಿರುವದು. ದೇಹದಲ್ಲಿದ್ದ ವಾತ ಪಿತ್ತ ಕಫಗಳನ್ನು ಸರಿಪಡಿಸಿ ಆರೋಗ್ಯವನ್ನುಂಟುಮಾಡುವದು. ಅಕಳ ತುಪ್ಪವಂತೂ ಬಹಳ ಶ್ರೇಷ್ಠವಾದದ್ದು ಇಂದ್ರಿಯಗಳನ್ನು ಬಲಪಡಿಸುವದು ಬುದ್ಧಿಯನ್ನು ವೃದ್ಧಿಮಾಡಿ ಆಯುಷ್ಯವನ್ನು ಬೆಳೆಸುವದು. ಅಕಳ ಸಗಣಿಯಿಂದಲೇ ಪ್ರತಿದಿವಸ ಮನೆಯನ್ನು ಸಾರಿಸಿ ಪವಿತ್ರಗೊಳಿಸಬೇಕೆಂದು ಆರ್ಯರ ಸಂಪ್ರದಾಯವಿರುವದು ಗೋಮಯದಿಂದ ಮೋಕ್ಷಕ್ಕೆ ಆಧಾರಭೂತವಾದ ಶುದ್ಧ ಭಸ್ಮವು ಸಿದ್ಧವಾಗುವದು

ಅಕಳಹಾಲು-ಮೊಸರು-ತುಪ್ಪ ಇವುಗಳನ್ನು ಪ್ರತಿದಿವಸ ದೇವರಿಗೆ ಪಂಚಾಮೃತಸ್ನಾನ ಮಾಡಿಸುವಾಗ್ಗೆ ಅವಶ್ಯವಾಗಿ ಉಪಯೋಗಿಸುತ್ತೇವೆ ನಾವು ಮಾಡಿದ ಪಾಪಾಚರಣೆಯಿಂದ ಮುಕ್ತರಾಗಬೇಕಾದರೆ "ಪಂಚಗವ್ಯ" ವನ್ನು ಸೇವಿಸಬೇಕಾಗುವದು. ಸ್ವರ್ಗದಲ್ಲಿಯ ದೇವತೆಗಳು ನಿತ್ಯದಲ್ಲಿ ಕುಡಿಯುವ ಅಮೃತವನ್ನು ಪರಮಾತ್ಮನು ಭೂಲೋಕದಲ್ಲಿ ನಮ್ಮೆಲ್ಲರಿಗೂ ಉಣಿಸಬೇಕೆಂದು ಅದನ್ನು ವಿದು ಸಮಭಾಗ ಮಾಡಿ ಮೂರು ಭಾಗಗಳನ್ನು ಅಕಳಲ್ಲಿಯೂ ಎರಡು ಭಾಗಗಳನ್ನು ವೃಕ್ಷಗಳಲ್ಲಿಯೂ ಶ್ರೀಹರಿಸಿರುವನು ಅಲ್ಲದೆ ಮೂಲಾನಕ್ಷತ್ರದಲ್ಲಿ ಶಿಶುಗಳು ಜನಿಸಿದರೆ ತಂದೆ ತಾಯಿಗಳಿಗೆ ಬಹಳ ಅನಿಷ್ಟ ವುಂಟಾಗುವದೆಂದು ಜ್ಯೋತಿಷ್ಯ ಶಾಸ್ತ್ರದ ಮತವು. ಆ ಅನಿಷ್ಟವನ್ನು ನಿವಾರಿಸವದಕ್ಕಾಗಿ "ಗೋಪ್ರಸವ ಶಾಂತಿ" ಯನ್ನು ಮಾಡುವರು ಕೃಷಿ ಕರ್ಮಕ್ಕಂತೂ ಗೋಮಾತೆಯೇ ಮೂಲಾಧಾರಳು ಹೀಗೆ ಅಕಳು ನಾನಾ ಪ್ರಕಾರವಾಗಿ ಜನರಿಗೆ ಉಪಕಾರವನ್ನು ಮಾಡುತ್ತಿರುವದು ಗೋರಕ್ಷಣೆಯ ಯೋಗದಿಂದ ಮಾನವನು ಶುದ್ಧ ಸಾತ್ವಿಕನಾಗುವನು ಅದ್ದರಿಂದ ಹಿಂದಿನ ಮಹರ್ಷಿ ಪುಂಗವರೂ ರಾಜಾಧಿರಾಜರೂ ಬಹಳವಾಗಿ ಗೋವುಗಳನ್ನು ಸಾಕುತ್ತಿದ್ದರು. ಪೂರ್ವದ ರಾಜಾಧಿರಾಜರ ಬಿರುದಾವಳಿಯಲ್ಲಿ ಮೊದಲನೆಯದೆಂದರೆ "ಗೋ ಬ್ರಾಹ್ಮಣ ಪ್ರತಿಪಾಲಕ" ಎಂದಿರುವದು ಆಗಿನ ಕಾಲಕ್ಕೆ ಧನವೆಂದರೆ ಗೋಧನವೇ ಧನವಾಗಿದ್ದಿತು ಗೋವು ಸರ್ವ ಪ್ರಾಣಿಗಳಲ್ಲಿ ಶ್ರೇಷ್ಠವಾದುದು ಮಾನವಪ್ರಾಣಿಯ ಜೀವನಾಧಾರವು.

ಹಿಂದಿನ ರಾಜರು ಗೋಮಾತೆಯನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ರಕ್ಷಿಸುತ್ತಿದ್ದುದರಿಂದಲೇ ಅವರು ಅತ್ಯೈಶ್ವರ್ಯಶಾಲಿಗಳಾಗಿ ತಮ್ಮ ಸ್ವತಂತ್ರತೆಯ ನಿಶಾನಿಯನ್ನು ಮೆರೆಯಿಸಿದರು. ಆ ಕಾಲದ ಜನರು ಸಕಲ ದೇವತೆಗಳ ಅವಾಸಸ್ಥಾನವಾದ ಕಾಮಧೇನುವನ್ನು ಕಂಡು ಕೃತಕೃತ್ಯರಾದ್ದು ವಸ್ತುವೆಂದು ತಿಳಿದು ಮೂಢಜನದಿಂದ ನಿಮ್ಮರುಣಿಗಳಾಗಿ ಕಷ್ಟಕಾರಿಗೆ ಮಾರಿ ಕೃತಘ್ನತೆಯನ್ನು ವ್ಯಕ್ತಪಡಿಸಿಕೊಳ್ಳುವದಲ್ಲದೆ ಘೋರ ನರಕಕುಂಡದಲ್ಲಿ ಬೀಳುತ್ತಿರುವರು ಇಂಥ ನರಾಧಮರು ಇನ್ನಾರಿರುವರು ನಾವು ಹೇಗೆ ಹೇಗೆ ಗೋಮಾತೆಯನ್ನು ಮರೆಯುತ್ತ ಹೋಗುವೆವೋ ಹಾಗೆ ಹಾಗೆ ಅಧಃಪತನವನ್ನು ಕೊಂಡವೆವು ಇನ್ನು ಮೇಲಾದರೂ ಕಣ್ಣರೆದು ನೋಡಿ ಗೋಮಾತೆಯನ್ನು ಸೇವಿಸೋಣ.

ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು

ಕೀರ್ತನಕಾರರಿಗೆ ಬಹುಮಾನ

ಕೊಡಗು ಡಿ॥ ಕೊಡಲಿಪೇಟೆ ಗ್ರಾಮದ ಪ್ರಮುಖರು ಕೀರ್ತನಕೇಸರಿ, ಕವಿಭೂಷಣೇತ್ಯಾದಿ ಬಿರುದಾಂಕಿತರಾದ ನೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರನ್ನು ಹೆಗ್ಗಡಹಳ್ಳಿಯಿಂದ ತಮ್ಮಲ್ಲಿಗೆ ಒರಮಾಡಿಕೊಂಡು ಶ್ರೀಬಸವೇಶ್ವರ ದೇವಾಲಯದಲ್ಲಿ ಮೂರುದಿವಸ ಶಿವಸಂಕೀರ್ತನೆಗೆಳನ್ನು ನಡೆಯಿಸಿದರು ಪ್ರತಿಯೊಂದು ಕೀರ್ತನೆಗೂ ಸ್ವಮತ ಪರಮತದ ಸಹಸ್ರಾರು ಜನರು ಒಂದು ಸೇರುತ್ತಿದ್ದರು ಶಾಸ್ತ್ರಿಗಳವರ ನವರಸಭರಿತವಾದ ಕೀರ್ತನ ನೈಪುಣ್ಯಕ್ಕೂ ನೈತಿಕ ಸಾಮಾಜಿಕ, ಧಾರ್ಮಿಕ, ವಿಚಾರಪೂರಿತ ಬೋಧಾಶಕ್ತಿಗೂ ಸಮಸ್ತ ಜನರೂ ಆನಂದಿಸಿದರು. ತಾ 5-2-39 ನೇ ಭಾನುವಾರ ರಾತ್ರಿ ಇಲ್ಲಿನ ಮಿಡಲ್‌ಸ್ಕೂಲ್ ॥ ಹೆ ॥ ಮಾ ॥ ಶ್ರೀಯುತ ಕರಿಒಕ್ಕಲಿನವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ರಾಜಶೇಖರವಿಳಾಸವೆಂಬ ಕೊನೆಯ ಶಿವಸಂಕೀರ್ತನೆಯನ್ನು ಅನುವಾದಮಾಡಿಸಿ ಅಧ್ಯಕ್ಷರ ಹಸ್ತದಿಂದ ಶ್ರೀಶಾಸ್ತ್ರಿಗಳವರಿಗೆ ಧನಸಮೇತವಾಗಿ ಸುವರ್ಣಪದಕವನ್ನು ಕೊಡಿಸಿ ಗೌರವಿಸಿದರು ಅಧ್ಯಕ್ಷರು ಶಾಸ್ತ್ರಿಗಳವರನ್ನು ಬಹುಮಾನಿಸುವಾಗ ಮಾಡಿದ ಭಾಷಣವು ಬಹು ಸ್ವಾರಸ್ಯವಾಗಿದ್ದಿತು. ಈ ಶಿವಸಂಕೀರ್ತನ ಕಾಲಕ್ಷೇಪದ ಸಂತೋಷ ಪೂರ್ತಾರ್ಥಮಾಗಿ ಕಾರ್ಯದರ್ಶಿಗಳಾದ ಶ್ರೀವಾಗೀಶ್ವರಲಿಂಗಪ್ಪಶೆಟ್ಟರವರು ಪಂಚಾಚಾರ್ಯ ಪ್ರಭಾ ಪೋಷಕಕ್ಕಾಗಿ ೧ ರೂ. ಸಮರ್ಪಿಸಿದರು

ಓರ್ವ ಪ್ರತ್ಯಕ್ಷದರ್ಶಿ

ಪುರಾಣಾರಂಭೋತ್ಸವ, ಹನುಮಸಾಗರ.

ಅಖಿಲ ಸಮಸ್ತ ವೀರಶೈವಧರ್ಮದವರು ತಾ॥ ೧೫-೨-೩೯ ರವಿವಾರದಿಂದ ಶ್ರೀ ರೇಣುಕವಿಜಯ ಮಹಾಪುರಾಣವನ್ನು ಶ್ರೀ ಕರಿಸಿದ್ದೇಶ್ವರಮರಡಿಮಠದಲ್ಲಿ ಪ್ರಾರಂಭಿಸಿದ್ದಾರೆ. ಪಂಡಿತ ಗಾರೀನಾಥ ಶಾಸ್ತ್ರಿಗಳು ಕಾಟಾಪುರೆ ಹಿರೇಮಠ ಇವರು ವೇದಾಗಮ ಪ್ರಮಾಣ ಪೂರಿತವಾದ ಪ್ರಾಢಿಮೆಯಿಂದಲೂ ಗಾನಮಾಧುರ್ಯದಿಂದಲೂ ಪ್ರತಿಪಾದಿಸುವ ಪ್ರವಚನಶೈಲಿಯು ವರ್ಣನಾತೀತವಾಗಿದೆ. ಎಷ್ಟೋ ದಿವಸಗಳಿಂದ ಈ ಪ್ರಾಂತವಲ್ಲಿ ಕೇಳದಿದ್ದ ಶ್ರೀಗುರು ಸಾರ್ವಭೌಮನ ಚರಿತ್ರವನ್ನು ಕೇಳಲು ಬಹುಜನರು ಭಕ್ತಿಯಿಂದ ಬರುತ್ತಿದ್ದಾರೆ ಕ್ರೈಸ್ತರಲ್ಲಿಗೆ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತದೆ ಇದೇ ಸಮಯದಲ್ಲಿ ಶ್ರೀ॥ ಪೂ॥ ಬ್ರಹ್ಮನ್ನ ಶಾಧೀಶ್ ಶ್ರೀ ಪಟ್ಟಾಧ್ಯಕ್ಷಸ್ವಾಮಿಗಳವರು ದಯಮಾಡಿಸಿ ಇಲ್ಲಿಯ ಶ್ರೀ ಕರಿಸಿದ್ದೇಶ್ವರಪುರಾಣಾಲಯಕ್ಕೆ ಶ್ರೀ ರೇಣುಕವಿಜಯವು ಪ್ರತಿಯೊಂದನ್ನು ಉಚಿತವಾಗಿ ಆಶೀರ್ವದಿಸಿದ್ದು ಬಹಳ ಸಂತೋಷದ ಸಂಗತಿಯಾಗಿದೆ. ವಿರಕ್ತಪರಂಪರೆಯ ಶ್ರೀಗುರು ಸಾರ್ವಭೌಮರ ಪುರಾಣವು ನಡೆಯುವದರಿಂದ ವೀರಶೈವರ ಐಕ್ಯಕ್ಕೆ ಅನುಕೂಲವೆಂದು ಎಲ್ಲರೂ ನಂಬಿದ್ದಾರೆ.

ಕಿ॥ ವಾ॥ ಹನುಮಸಾಗರ.

ಸೂಚನೆ

ಶ್ರೀ ಷ॥ ಬ್ರ॥ ಗುರುವೀರಸಿದ್ಧವಾಹಾರ್ಯಸ್ವಾಮಿಗಳವರು ಚಿಕ್ಕಮಣ್ಣೂರು ಹಿರೇಮಠ ಇವರು ಬೆಳವಣಿಕೆಯಲ್ಲಿ ಮುಂದಿನ ಪ್ರಮಾಥಿನಾಮಸಂವತ್ಸರ ಚೈತ್ರ ಶು॥ ಪ್ರತಿಪದೆಯ ಸಂತ್ಸೃತಾರಂಭಕಾಲೆಯನ್ನು ಸ್ವಾಮೀಜೀಗಳೆಂದು ಸಂಕಲ್ಪವೆಳ್ಳವರಾಗಿದ್ದಾರೆ. ಸಾಹಿತ್ಯ ಮತ್ತು ವ್ಯಾಕರಣಶಾಸ್ತ್ರಗಳಲ್ಲಿ ಪ್ರವೀಣರಾದ ಪಂಡಿತರು ಬೇಕಾಗಿದೆ ಆಧ್ಯಾಪಕರಾಗಬೇಕೆಯಿಚ್ಛೆಯುಳ್ಳವರು ಸೂರ್ಜಿ ರಂಜೀನೋಡಿಕೊಂಡು ಕಾರ್ಯಾರಂಭಕ್ಕಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಬೇಕು

ಸ್ವವಸ್ಥಾಪಕ, ಶ್ರೀ ವಿಜ್ಞಾರಾಧ್ಯ ಆಶ್ರಮ
ಪೋ॥ ಬೆಳವಣಿಕಿ, ಡಿ॥ ಧಾರವಾಡ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು.

ಫಾಲ್ಗುನ ಶುದ್ಧ ೧೫ (5-3-39) ಭಾನುವಾರ

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣು ಚಾರ್ಯರ ಅವತಾರವು

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ೧೫ ಭಾನುವಾರ (5-3-39) ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸ ಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕ ಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರು ರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ತರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿ ಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರ ದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆ ಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ನಮ್ಮ ಶ್ರೀಮದ್ಯುವರಾಜರವರು ಈಗ ಸಂಪೂರ್ಣ ಗುಣಹೊಂದಿರುತ್ತಾರೆ. ಒಂದು ವಾರದಿಂದ ಹೊರಗೆ ಸಂಚಾರಮಾಡುತ್ತಿರುವದಲ್ಲದೆ ಕೆಲವು ಉತ್ಸವಗಳಲ್ಲೂ ಭಾಗವಹಿಸಿದ್ದರು. ಆರ್ಕಾಟ್ ರಾಜ ಕುಮಾರಿಯ ವಿವಾಹಕ್ಕೂ ವಿಟ್ಟುಪುರಂ ಮಹಾರಾಜರು ವಿಸರ್ಜಿಸಿದ್ದ ಪ್ರದರ್ಶನದಲ್ಲಿ ಬಹುಮಾನವಿಯೋಗ ಮಾಡುವುದಕ್ಕೂ ದಯಮಾಡಿಸಿದ್ದರು. ಮಾರ್ಚಿ ಒಂದನೆಯ ತಾರೀಖಿನ ವೇಳೆಗೆ ಮೈಸೂರಿಗೆ ದಯಮಾಡಿಸಬಹುದೆಂದು ತಿಳಿದು ಬರುತ್ತದೆ.

ಸ್ವಾಮಿ ವೆಂಕಟಾದ್ರಿಅಯ್ಯರ್ ಎಂಬವರು ವಾಸವಾಗಿದ್ದ ಮೈಸೂರು ಸದ್ವಿದ್ಯಾಪಾಠಶಾಲೆಯ ಒಂದು ಕೊಠಡಿಯಿಂದ ದುರ್ಗಂಧ ಬರುವುದನ್ನು ಕಂಡು ಬಾಗಿಲನ್ನು ತೆಗೆದು ನೋಡಲು ಒಳಗೆ ಅವರ ಮೃತದೇಹವು ಗುರುತು ಹತ್ತದಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬಂದಿತು. ಅವರು ಬರೆದಿಟ್ಟಿದ್ದ ಕಾಗದದಿಂದ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವರೆಂಬುದು ತಿಳಿದುಬಂತು.

ಮೈಸೂರಿನ ದೊಡ್ಡಪೇಟೆಯಲ್ಲಿ ನೂತನವಾಗಿ ರಚಿಸಿರುವ ಪೋಲೀಸ್ ಸ್ಟೇಷನ್ನಿನಮೇಲೆ ಸರ್ಕಾರದವರು ಬರೆಸಿರುವ ಹ್ಯಾಮಿಲ್ಟ್ರ್ ಬಿಲ್ಡಿಂಗ್ ಎಂಬ ಅಕ್ಷರಾವಳಿಯನ್ನು ತೊಡೆಯುವುದಕ್ಕಾಗಿ ಸತ್ಯಾಗ್ರಹಿಗಳು ಪ್ರತಿದಿವಸವೂ ಇಬ್ಬರಾಗಿ ಸ್ಟೇಷನ್ ಮುಂಭಾಗದಲ್ಲಿ ಸಾಯಂಕಾಲದವರೆಗೂ ಕುಳಿತುಕೊಂಡು ಬರುತ್ತಲಿದ್ದಾರೆ. ಪೋಲೀಸಿನವರು ಸತ್ಯಾಗ್ರಹಿಗಳಿಗೆ ಹತ್ತಿಹೋಗಲು ಅವಕಾಶ ಕೊಡದೆ ಶಾಂತರೀತಿಯಿಂದ ನಿರೋಧಿಸುತ್ತಲಿದ್ದಾರೆ. ಈಗ ನಾಲ್ಕಾರು ದಿವಸಗಳ ಹಿಂದೆ 'ಹ್ಯಾಮಿಲ್ಟ್ರ್' ಎಂಬ ನಾಲ್ಕು ಅಕ್ಷರಗಳನ್ನು ಒರೆಸಬೇಕೆಂಬ ಉದ್ದೇಶದಿಂದ ಸುಣ್ಣದ ಮೊಟ್ಟೆಯೊಂದನ್ನು ಕಟ್ಟಿದ ಉದ್ದವಾದ ಗಳುವನ್ನೂ ಸುಣ್ಣದ ಮಡಕೆಯನ್ನೂ ಹಿಡಿದುಕೊಂಡು ಸೈನಿನಿನಬಳಿ ಸತ್ಯಾಗ್ರಹಿಗಳು ಬರಲಾಗಿ ಪೋಲೀಸಿನವರು ಅವುಗಳನ್ನು ಕಿತ್ತುಕೊಂಡು ಅಳಿಸುವುದಕ್ಕೆ ಅವಕಾಶ ಕೊಡಲಿಲ್ಲವು. ಈ ಮಧ್ಯೆ ಪರಸ್ಪರ ಸ್ವಲ್ಪ ವಾಗ್ವಾದಗಳು ನಡೆದವು. ಇತರ ಗಲಭೆಗೆ ಅವಕಾಶವಾಗಲಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾನಪತಿಗಳಾದ ರಾಜಕಾರ್ಯಪ್ರವೀಣ ಶ್ರೀ ಎ. ಎಸ್. ಸುಬ್ಬರಾಯರು ಕಳೆದ 18 ನೆಯ ತಾರೀಖು ತುಮಕೂರಿಗೆ ದಯಮಾಡಿಸಿ ಪುರಭವನದಲ್ಲಿ ಜಿಲ್ಲಾಧಿಕಾರಿಗಳೇ ಮೊದಲಾದ ಅಧಿಕಾರವರ್ಗದವರ ಮತ್ತು ಖಾಸಗಿ ಪೊಡ್ಡವನಸ್ಯರ ಸಭೆಯನ್ನು ಕೂಡಿಸಿ, ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವ್ಯಾಸಂಗವಾಡಲು ಬರುವ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ ತುಮಕೂರಿನಲ್ಲಿ ಒಂದು ಇಂಟರ್ ಕಾಲೇಜನ್ನು ಸ್ಥಾಪಿಸುವ ಅವಶ್ಯಕತೆ ಇರುವುದೆಂಬುದನ್ನು ಸೂಚಿಸಿ ಅದಕ್ಕೆ ತುಮಕೂರಿನವರ ಸಹಾಯವನ್ನು ಕೋರಿದರು. ಕಟ್ಟಡದ ವಿಷಯವಾಗಿ ಈಗ ಜಿಲ್ಲಾಬೋರ್ಡ್ ಭವನವಲ್ಲಿ ಕಾಲೇಜನ್ನು ತೆರೆಯಬಹುದೆಂದು ಸೂಚಿಸಲಾಯಿತು. ಕಾಲೇಜನ್ನು ಸ್ಥಾರಂಭಿಸಲು ನೋವಲು 50 ಸಾವಿರ ರೂಪಾಯಿ ಬೇಕಾಗುವದೆಂದೂ ಪುರಜನರು ೭೫ ಸಾವಿರ ರೂ. ಗಳ ಸಹಾಯ ಮಾಡಬೇಕೆಂದೂ ಸೂಚಿಸಿದರು ಅಲ್ಲಿ ಕೂಡಿದ್ದ ಮಹನೀಯರು ಮೊದಲನೆಯ ವರ್ಷ 15 ಸಾವಿರ ರೂ. ಗಳನ್ನೂ, ಅದರ ಮುಂದಿನವರ್ಷ 10 ಸಾವಿರ ರೂ. ಗಳನ್ನೂ ಕೊಡುವುದಾಗಿ ಸೂಚಿಸಿದರು. ಅನಂತರ ಸ್ನಾನಪತಿಗಳು ಜಿಲ್ಲಾಬೋರ್ಡು ಕಟ್ಟಡವನ್ನೂ ಮತ್ತು ಹೊಸ ಆಸ್ಪತ್ರೆಯ ಕಟ್ಟಡವನ್ನೂ ಪರಿಶೀಲಿಸಿ, ಆಸ್ಪತ್ರೆಯ ಕಟ್ಟಡವು ಮುಗಿಯುವವರೆಗೆ ಕಾಲೇಜನ್ನು ದಿಸ್ಟ್ರಿಕ್ಟ್‌ಬೋರ್ಡ್ ಕಟ್ಟಡದಲ್ಲಿ ನಡೆಯಿಸಿ ಅನಂತರ ಆಸ್ಪತ್ರೆಯ ಕಟ್ಟಡಕ್ಕೆ ಬದಲಾಯಿಸಬಹುದೆಂದು ಅಭಿಪ್ರಾಯಪಟ್ಟರು. ಈ ವಿಷಯವು ಜಿಲ್ಲೆಗೆಲ್ಲಾ ಸಂಬಂಧಿಸಿರುವದರಿಂದ ಜಿಲ್ಲೆಯ ಪ್ರಮುಖರು ಉದಾರವಾಗಿ ಸಹಾಯನೀಡಿ ಕಾಲೇಜನ್ನು ಈ ವರ್ಷನೇ ಬರುವಂತೆ ಮಾಡುತ್ತಾರೆಂದು ನಂಬಲಾಗಿದೆ.

ವರ್ತಮಾನಸಂಗ್ರಹ.

ಅನ್ಯದೇಶೀಯರಿಗೆ ಜಪಾನಿನ ಎಚ್ಚರಿಕೆ

ಷಾಂಗೈಯಿಂದ 180 ಮೈಲಿ ದಕ್ಷಿಣದಲ್ಲಿರುವ ಹೈಮೆನ್ ರೇವಿನಿಂದ 30 ಮೈಲಿಗಳ ದೂರ ಪರರಾಷ್ಟ್ರಗಳ ಹಡಗುಗಳು ಹಿಂದೆ ಸರಿಯಬೇಕೆಂದೂ, ಜಪಾನ್ ಸೈನ್ಯವು ಆಲ್ಲಿ ಯುದ್ಧವನ್ನು ಪ್ರಾರಂಭಿಸಬೇಕಾಗಿರುವುದರಿಂದ, ಆದರಿಂದ ಇತರರ ಹಡಗುಗಳಿಗೆ ತೊಂದರೆಯಾದರೆ ಅದಕ್ಕೆ ತಾವು ಬದ್ಧರಲ್ಲವೆಂದೂ ಜಪಾನು ಪ್ರಕಟಿಸಿದೆ.

ಸ್ಪೇನಿನಲ್ಲಿ ಶಾಂತಿ ಸಂಧಾನ

ಈಗಾಗಲೇ ಸ್ಪೇನಿನಲ್ಲಿ ಮೂರರಲ್ಲಿ ರಡುಭಾಗವು ದಂಗೆಕೋರ ಫ್ರಾಂಕೋನ ವಶವಾಗಿದೆ. ಇನ್ನುಮುಂದೆ ಜವನೆನ್ನೆಗುರಿಸುವುದು ಪ್ರಜಾಸರ್ಕಾರಕ್ಕೆ ಅಸಾಧ್ಯವಾಗಿ ತೋರುತ್ತಿರುವುದರಿಂದ ಸರ್ಕಾರವು ಶಾಂತಿಸಂಧಾನಕ್ಕೆ ಒಪ್ಪಿಗೆ ಕೊಡುವ ಸ್ಥಿತಿಯಲ್ಲಿದೆ. ಬಂಡಾಯಗಾರ ನಾಯಕರಲ್ಲೂ ಮತಭೇದವಿರುವುದರಿಂದ ಸಂಧಾನವು ಯಶಸ್ವಿಯಾಗಬಹುದೆಂದು ತೋರುತ್ತಿದೆ. ಈ ವಿಷಯವಾಗಿ ಸೂತು ಕತೆಗಳು ಮುಗಿದೊಡನೆ, ಸ್ಪೇನಿನಲ್ಲಿರುವ ಇಟಲಿ ಸೈನ್ಯಗಳೆಲ್ಲಾ ಇಟಲಿಗೆ ಹಿಂತಿರುಗುವನೆಂದು ರೋಂ ನಗರದ ಪತ್ರಿಕೆಯೊಂದು ತಿಳಿಸುತ್ತದೆ.

ಪ್ರಾಥಮಿಕಶಾಲಾ ಉಪಾಧ್ಯಾಯ ಸಮ್ಮೇಳನ

ಬೊಂಬಾಯಿನ ಪ್ರಾಥಮಿಕಶಾಲಾ ಉಪಾಧ್ಯಾಯರುಗಳು ಕಳೆದ 19 ನೆಯ ತಾರೀಖಿನದಿನ ಸಭೆಸೇರಿ, ತಮ್ಮ ಸಂಬಳಗಳನ್ನು ಹೆಚ್ಚಿಸುವ ವಿಚಾರದಲ್ಲಿ ಸರ್ಕಾರದವರು ಸರಿಯಾದ ಸ್ಪೀಮನ್ನು ಪಿಡ್ಡಗೊಳಿಸದೆ ಹೋದರೆ, ಮತ್ತು ಕಳೆದ 10-15 ವರ್ಷಗಳಿಂದ ಬರಬೇಕಾದ ವೇತನಗಳನ್ನು ಕೊಡದೆ ಹೋದರೆ, ಏಪ್ರಿಲ್ ಒಂದನೆಯ ತಾರೀಖಿನ ದಿನ (ಒಂದು ದಿನದ ಮಟ್ಟಿಗೆ) ತಾವುಗಳೆಲ್ಲರೂ ಉಪಾಧ್ಯಾಸಮಾಡಬೇಕೆಂದು ನಿರ್ಧರಿಸಿದರು.

ಹಿಂದುಗಳೇ ದೇಶರಕ್ಷಣೆಗೆ ಬಾಧ್ಯರು

ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ವಿ.ಡಿ. ಸಾವರ್ಕರ್‌ರವರು ಕುಲ್ಲಾದಲ್ಲಿ ಹಿಂದೂ ಧ್ವಜಾರೋಹಣ ಮಾಡಿದ ಸಮಯದಲ್ಲಿ ಮಾತನಾಡುತ್ತ ಶ್ರೀ ರಾಮಾಯಣದ ಕಾಲದಿಂದಲೂ ಎಷ್ಟೋ ರಾಷ್ಟ್ರಗಳು ಜನ್ಮ ತಾಳಿವೆ ಮತ್ತು ಅಳಿದಿವೆ. ಆದರೂ ಇದುವರಿಗೆ ಉಳಿದುದು ಹಿಂದೂ ಧ್ವಜ. ಇನ್ನು ಮುಂದಾದರೂ ಅದೇ. ಈ ದೇಶವು ಹಿಂದೂಸ್ಥಾನ. ದೇಶದ ರಕ್ಷಣೆಗೆ ಹಿಂದುಗಳೇ ಬಾಧ್ಯರು. ಇತರರೆಲ್ಲರೂ ಬರೇ ನಿವಾಸಿಗಳು ಎಂದು ನುಡಿದರು.

ಹೈನಾನ್ ದ್ವೀಪದ ಆಕ್ರಮಣ ಪ್ರಯತ್ನ

ಷಾಂಗೈನಗರಕ್ಕೆ ದಕ್ಷಿಣದಲ್ಲಿ 200 ಮೈಲು ದೂರದಲ್ಲಿರುವ ಹೈನಾನ್‌ದ್ವೀಪ ಮತ್ತು ಕೊಲ್ಲಿಯನ್ನು ಆಕ್ರಮಿಸಿಕೊಳ್ಳಲು ಜಪಾನ್‌ಸಂಗ್ರಾಮ ನೌಕೆಗಳು ಪ್ರಯತ್ನ ನಡೆಸಿದವು. ಕಳೆದ 19 ನೆಯ ತಾರೀಖಿನ ಬೆಳಗ್ಗೆ ಮಂಜುಕವಿದಿದ್ದ ಸಮಯದಲ್ಲಿ 2 ಜಪಾನ್ ಸಂಗ್ರಾಮನೌಕೆಗಳು ಬಂದರಿನ ಸಮೀಪಕ್ಕೆ ಬಂದು 100 ಮಂದಿ ಸೈನಿಕರನ್ನು ಇಳಿಸಲು ಪ್ರಯತ್ನಿಸಿದವು. ಆದರೆ ಚೀನಾದ ಕಡೆಯ ಪಿರಂಗಿಗಳು ಅಗ್ನಿಯನ್ನು ಸುರಿಸಿ ಪ್ರಯತ್ನವು ನಿಷ್ಫಲವಾಗುವಂತೆ ಮಾಡಿದವು.

ಯುದ್ಧವು ನಡೆಯುತ್ತು.

ಮಹಾರಾಜ ಕಾಲೇಜಿನ ಕನ್ನಡ ಪಂಡಿತರಾಗಿದ್ದ ಪ್ರೊ॥ ಟಿ. ಎಸ್. ನೇಕಣ್ಣಯ್ಯನವರು ಕಳೆದ 24 ನೆಯ ತಾರೀಖು ರಾತ್ರೆ ಸ್ವರ್ಗಸ್ಥರಾದರು. ಮರಣಕಾಲದಲ್ಲಿ ಅವರಿಗೆ ೫೩ ವರ್ಷ ವಯಸ್ಸಾಗಿತ್ತು. ಅವರು ಬಹುಕಾಲದಿಂದ ಮೂಲವ್ಯಾಧಿಯಿಂದ ನರಳುತ್ತಿದ್ದರು ಇದ್ದ ಕ್ಕಿದ್ದಹಾಗೆಯೇ ಹೃದಯಕ್ರಿಯೆ ದುರ್ಬಲಗೊಂಡು ದೈವಾಧೀನರಾದರು. ಶ್ರೀಯುತರಿಗೆ ಅನೇಕಮಂದಿ ಮಕ್ಕಳೂ, ವೈಭವಮಾತೆಯೂ ಸಹೋದರರೂ ಇದ್ದಾರೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಬೊಂಬಾಯಿಯಲ್ಲಿ ಪಾನನಿರೋಧ

ಬೊಂಬಾಯಿ ಅಧಿಸತ್ಯದಲ್ಲಿ ಮೂರು ವರ್ಷಕಾಲದಲ್ಲಿ ಸಂಪೂರ್ಣ ಮದ್ಯಪಾನನಿರೋಧಕಾನೂನನ್ನು ಜಾರಿಯಲ್ಲಿ ತರಬೇಕೆಂದೂ, ಬೊಂಬಾಯಿ ನಗರ ಮತ್ತು ಅದರ ಸುತ್ತಮುತ್ತಲಿನಲ್ಲಿ ಮುಂದಿನ ಆಗಸ್ಟು ತಿಂಗಳಿನಿಂದ ಸಂಪೂರ್ಣ ಪಾನನಿರೋಧ ಕಾನೂನನ್ನ ಜಾರಿಯಲ್ಲಿ ತರಲು ಬೊಂಬಾಯಿ ಮಂತ್ರಿಮಂಡಲವು ಯೋಚಿಸಿದೆ ಇದರಿಂದ ಬೊಂಬಾಯಿ ನಗರದ ಯೂರೋಪಿಯ್ ನಿವಾಸಿಗಳಲ್ಲಿ ಸ್ವಲ್ಪ ಅಸಮಾಧಾನವುಂಟಾಗಿದೆ. ಕಳೆದ ಒಂದು ವರ್ಷದಲ್ಲಿ ಬೊಂಬಾಯಿ ನಗರ ಒಂದರಲ್ಲಿ ಖರ್ಚಾದ ಪರದೇಶದ ಮದ್ಯ ಬೀರ್-ವೈನ್ ಸೀಸೆಗಳು 5096000 ಬೆಲೆ 7753000 ರೂಗಳು.

ಜಪಾನ್ ಜರ್ಮನಿ ರೈಲ್‌ರಸ್ತೆ

ಜಪಾನ್ ಜರ್ಮನಿ ರೈಲ್ವೆ ಸಂಬಂಧವನ್ನು ಕಲ್ಪಿಸುವ ಯೋಚನೆಯು ಜಪಾನ್ ಸರ್ಕಾರದ ಮುಂದಿದೆ. ಈಗ ಟೋಕಿಯೋ ನಗರದಿಂದ ಪ್ಯಾಟೋನರಿಗೂ, ಬರ್ಲಿನ್ನಿನಿಂದ ಬಾಗ್ದಾದ್‌ವರೆಗೂ ರೈಲ್ವೆ ಸೌಕರ್ಯವಿದೆ. ಉಳಿದ 3500 ಮೈಲಿಗಳಷ್ಟು ರೈಲ್ವೆ ಹಾಕಬೇಕಾಗಿದೆ. ಸದ್ಯ ಜೈನಾ ಟರ್ಕಿ ಸ್ಥಾನಸಲ್ಲಿ ಕ್ಯಾನ್‌ಫರ್‌ವರಿಗೂ ರೈಲ್ವೆ ಹಾಕಲು ಯೋಚಿಸಲಾಗಿದೆ. ಈ ರೈಲ್ವೆ ನಿರ್ಮಾಣದಿಂದ ಉತ್ತರಚೀನಾವೆಲ್ಲವೂ ಜಪಾನರಿಗೆ ಸೇರುವದಾಗಿದೆ. ಆದರೆ ಸೋವಿಯಟ್ ಸರ್ಕಾರದವರು ಚೀನಾ ತುರ್ಕಿ ಸ್ಥಾನದಲ್ಲಿ ನೆಲಸಿರುವುದರಿಂದ ಸೈನ್ಯ ಸಹಾಯವಿಲ್ಲದೆ ಅಲ್ಲಿ ಯಾವ ಕಾರ್ಯವೂ ಸಾಗದೆಂದು ತಿಳಿದು ಆ ಪ್ರದೇಶದಲ್ಲಿ ಮಿಲಿಟರಿ ಸಂಗ್ರಹದ ಪ್ರಯತ್ನವು ನಡೆಯುತ್ತಿದೆ.

ಮದರಾಸ್ ಪ್ರಾಂತದ ಬಜೆಟ್

ಕಳೆದ 20ನೆಯ ತಾರೀಖಿನದಿನ ಮಹಾಪ್ರಧಾನರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಅಸೆಂಬ್ಲಿಸಭೆಯಲ್ಲಿ ಮದರಾಸ್ ಪ್ರಾಂತದ ಆಯವ್ಯಯ ಪಟ್ಟಿಯನ್ನೊಪ್ಪಿಸಿದರು. ಅದರಲ್ಲಿ 16234500 ರೂಗಳ ಆದಾಯವನ್ನು ನಿರೀಕ್ಷಿಸಲಾಗಿದೆ: 16,40,72,000 ರೂಗಳ ವೆಚ್ಚಕ್ಕೆ ದಾರಿ ತೋರಲಾಗಿದೆ. ಈ ಹೆಚ್ಚು ವೆಚ್ಚಕ್ಕೆ ಹಣವೊದಗಿಸಲು, ತಂಬಾಕುತೆರಿಗೆ, ವಿನೋದತೆರಿಗ ಮತ್ತು ಮಾರಾಟದ ಸರಕುಗಳಮೇಲೆ ಹಾಕುವ ಸುಂಕ ಇವುಗಳಿಂದ ಸರಿಪಡಿಸಲಾಗುವುದು. ಈ ತೆರಿಗೆಗಳನ್ನು ಹಾಕಲು ಸರ್ಕಾರದವರು ಮಸೂದೆಗಳನ್ನು ತರುವರು. ಈ ಹೊಸ ಬಾಬುಗಳಿಂದ 20 ಲಕ್ಷ ರೂಪಾಯಿಗಳ ಆದಾಯ ಬರುವ ನಿರೀಕ್ಷಣೆಇದೆ. ಪಾನನಿರೋಧಕಾರ್ಯವನ್ನು ಉತ್ತರ ಆರ್ಕಾಟ್ ಜಿಲ್ಲೆಗೂ ವಿಸ್ತರಿಸಲಾಗುವದು. ಸರ್ಕಾರಕ್ಕೆ ಇದರಿಂದ ಒಟ್ಟು 65 ಲಕ್ಷ ರೂ ಗಳ ನಷ್ಟವಾಗುವದು.

ಸ್ವೀಕಾರ.

ಬಳ್ಳಾರಿ ಡಿ॥ ಸೋಂಡೂರು ಟವನ್ ನಿವಾಸಿಗಳಾದ ಮೆ॥ ರಾ॥ ಭೋಜ ವಣ್ಣಿಮಪ್ಪನವರ ಪುತ್ರ ಚಿ॥ ಅಡಿವಪ್ಪನಿಗೆ ನವಲಗುಂದ ಮೆ॥ ರಾ॥ ಜಂಪಣ್ಣಶೆಟ್ಟರ ಪುತ್ರಿ ಚಿ॥ ಸೌ॥ ಶಂಶೀಲಮ್ಮನನ್ನು ತಂದು, ಮತ್ತು ತಮ್ಮ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ಹುಬ್ಬಿನಹೆಡಗಲಿ ಮೆ॥ ರಾ॥ ಮುಜ್ಜಿಗಿ ಬಸಪ್ಪನವರ ಪುತ್ರ ಚಿ॥ ವೀರಪ್ಪನಿಗೆ ಕೊಟ್ಟು ಸ್ವಗೃಹದಲ್ಲಿ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭುಪ್ರೇಷಣಕ್ಕೋಸರ ಸಮರ್ಪಿಸಿದ 2 ರೂ. ಗಳು ಮೆ॥ ರಾ॥ ಚನ್ನಪ್ಪ ಭೋಜ ಇವರದ್ವಾರಾ ತಲ್ಪಿರುತ್ತವೆ.

ಕೊಡಗು ಡಿ॥ ಕೊಡ್ಲಿಪೇಟೆಯಲ್ಲಿ ನೆರವೇರಿದ ಶಿವಕೀರ್ತನಸಮಯದಲ್ಲಿ ಪ್ರಭಾಪ್ರೇಷಣಕ್ಕಾಗಿ ಮೆ॥ ರಾ॥ ಗುರುಲಿಂಗಸ್ವಪೆಟ್ಟರು ಸಮರ್ಪಿಸಿದ 1 ರೂ. ಯು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದೆ ಹಾಕ್ಕಿ ಸುತ್ತೇವೆ.

ಶ್ರೀಮಜ್ಜಗದ್ಗುರು ಪಂಡಿತಾರಾಧ್ಯ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವಗಳು, ಸೊಲ್ಲಾಪುರ.

ವಾರ್ಷಿಕ ಪದ್ಧತಿಯಂತೆ ಈ ವರ್ಷವಾಪರೂ ಮಾಘ ಬಹುಳ ೦೩ ಶುಕ್ರವಾರದಿವಸ ಶ್ರೀ ಸಿದ್ಧೇಶ್ವರ ಪ್ರಾಸಾದಿಗೆ ಭಜನಮಂಡಳಿಯ ವತಿಯಿಂದ ಶ್ರೀಮಲ್ಲಿಕಾರ್ಜುನದೇವಾಲಯದಲ್ಲಿ ಶ್ರೀ ಉಭಯ ಜಗದ್ಗುರ್ವಾಚಾರ್ಯರ ಜಯಂತ್ಯುತ್ಸವವು ಬಲ್ಲೇ ಉತ್ಸುಕತೆಯಿಂದ ಜರುಗಿಸಲ್ಪಟ್ಟಿತು

ಜಯಂತ್ಯುತ್ಸವ ನಿಮಿತ್ತವಾಗಿ, ವೇ॥ ಪಂ॥ ಶ್ರೀ ಜಗದೀಶಶಾಸ್ತ್ರಿಗಳವರು ನಾಲ್ಕಾವ. ಶ್ರೀಮದ್ವೀರಶೈವ ವಾಂಙ್ಮಯ ಸಂಸ್ಕೃತ ಪಾಠಶಾಲಾಧ್ಯಾಪಕರು, ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಹೋಟಿ ವೀ॥ ಶ್ರೀಗಳ ಮತ್ತು ಪಂಡಿತಾಗ್ರಗಣ್ಯರಾದ ವೇ॥ ಪಂ॥ ಮಲ್ಲಿಕಾರ್ಜುನಶಾಸ್ತ್ರಿಗಳು ಮಂಗಳೂರು ಇವರ ಭಾಷಣಗಳಾದವು. ಅನಂತರ ಅಧ್ಯಕ್ಷರಾದ ಪಂಡಿತರು ಕ್ಷೀರಪಲ್ಲಿ ವ್ಯಾಪ್ತವಾದ ಪ್ರಸ್ತವನ್ನು ಒಪ್ಪಿ ಕೊಂಚಲಮಹಿಮೆಯು ಪ್ರತ್ಯೇಕವಾಗಿ ಹಸ್ತದಲ್ಲಿ ಗಟ್ಟಿಗೊಂಡು ಕಾಣುವಂತೆ ಮಾಡಿದರೆ, ಆ ಸ್ಫುಟದ ಸ್ವಾದವನ್ನು ಪಂಡಿತಾಮಲರಲ್ಲಿರುವಿಗೂ ಸರಿಯಾದ ರುಚಿಯನ್ನಿತ್ತು ತದ್ವಾರಾ, ದೇವಪ್ರಸ್ತಿಯನ್ನುಂಟು ಮಾಡುವಹಾಗೆ ನಮ್ಮ ವೀರಶೈವ ಮತಸಾಕರು ಜಗತ್ತಿನಲ್ಲಿ ವ್ಯಾಪ್ತವಾದ ಬ್ರಹ್ಮವನ್ನು ತಮ್ಮ ದಿವ್ಯಶಕ್ತಿಯ ಬಲದಿಂದ ಈ ಇಷ್ಟಲಿಂಗಸ್ವರೂಪದಲ್ಲಿ ತಂದು ಕೊಟ್ಟಿದ್ದಾರ ತದ್ವಾರಾ ನಿಜಸಾಕ್ಷಾತ್ಕಾರವನ್ನು ನಮ್ಮ ಹಸ್ತಗತವಾಗಿಸಿದ್ದಾರ ಇಂತಹ ಶಕ್ತಿಯು ವೀರಶೈವೇತರರಾದ ಯಾವ ಆಚಾರ್ಯರಲ್ಲಿಯೂ ಕಂಡುಬರುವುದಿಲ್ಲ ಆದ್ದರಿಂದ ನಾವು ನಮ್ಮ ಮತಸ್ಥಾಪಕರ ಜಯಂತ್ಯುತ್ಸವಗಳನ್ನು ಇಷ್ಟಕ್ಕೂ ಹೆಚ್ಚಾಗಿ ವೈಭವದಿಂದ ನೆರವೇರಿಸುವುದು ಮಂತ್ರಾಗಿ ಒಲ್ಲೇ ಹಾಸ್ಯಧೋರಣೆಯದಲ್ಲೂ ಅತಿಶಯೋಕ್ತಿಯಾಗಲಿಂದಲೂ ಉಪದೇಶಿಸಿದರು. ಬಾಜಾಸಾಹೇಬ ಬರ್ಗೆ ಪಾಟೀಲ ಮ್ಯೂಸಿಯಲ್ ಕಾಸ್ಟೆಬಲರು, ಶ್ರೀಯುತ ವೀರಣಸಿದ್ಧಪ್ಪಾ ಹಿರೇಹಬ್ಬು ಇವರೇ ಮೊದಲಾದ ಪ್ರಮುಖರು ಅತ್ಯಂತ ಭಕ್ತಿಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವರು

ಶ್ರೀ॥ ಷ॥ ಬ್ರ॥ ವೀಸಿಕರ್ಣಶಿವಾಚಾರ್ಯರು, ಹುಬ್ಬಳ್ಳಿಮಠದ ೦೦ ಶಿವಾಚಾರ್ಯರ ಪರಿವಿಡ್ಡಿಯೂ ಪುಷ್ಪಾಕ್ಷತೆ ಜಗದ್ಗುರು ಜಯಂತ್ಯುತ್ಸವದ ಪ್ರೀತ್ಯರ್ಥ, ಇಲ್ಲಿಯ ಸುಪ್ರಸಿದ್ಧ ಪುಷ್ಪಾರ್ಚಿಗಳಾ, ಸುಚಿತಾರಿಗಳೂ, ಸಮಾಚಾರಿಗಳೂ, ಧನ ಶೌಂಡರೂ, ಸದ್ಭಾವಂತರೂ ಆದ ಶ್ರೀಯುತ ಚಂಡಪ್ಪಾ ಮಂಜೇ ವಕೀಲರ ಆಧ್ಯಕ್ಷತೆಯ ಪ್ರ ಸಭೆಸೇರಿ ಬಲ್ಲೇ ಉತ್ಸವ ಜಾಗರಣದಲ್ಲಿ ಅರಂಭದಲ್ಲಿ ವೇ॥ ಪಂ ಪಾಠಶಾಲಾಸಂಸ್ಥಾಪಕರು ಹೇಳಿದ್ದೇನೆಂದರೆ ನಮ್ಮ ಧರ್ಮಸ್ಥಾಪಕರು ನಮ್ಮಲ್ಲೇ ಮಾಡಿದ ಉಪಕಾರವನ್ನು ನಾವೆಲ್ಲ ಜನ್ಮಗಳನ್ನು ಹೊತ್ತ ಕೆಲಸಿದರೂ ತೀರದಾಗಿದ ಈಗ ನಾವಾಚರಿಸುವ ಜಯಂತ್ಯುತ್ಸವವು ಆ ಪೂಜ್ಯರ ಶ್ರೀತ್ಯರ್ಥವಲ್ಲಿ ನಮ್ಮ ಜನ್ಮೋದ್ಧಾರವ ಕುರಿತಾಗಿದೆ ಎಂದು ಮುಂತಾ ಹೇಳಿದರು.

ವೇ॥ ಪಂ॥ ಶ್ರೀ ಗಂಗಾಧರಶಾಸ್ತ್ರಿಗಳವರು— ಭವೇಕ ಜನ್ಮನಾ ಮುಕ್ತಿರ್ನಾರಾಣಾಂತಾ ಮಹೇಶ್ವರೆ ಎಂಬಿವಮ್ಮ ಸೂಕ್ತಿಯ ಮೋಕ್ಷವನ್ನು ನಮಗೆ ಲಭಿಸುವಲ್ಲು ಆಚಾರಾಲಯವನ್ನು ನಮ್ಮ ಆಚಾರ್ಯ ಭಗವತ್ಪಾದರು ಮಾಡಿದ್ದಾರೆಂದು ಹೇಳಿದರು.

ಆಮೇಲೆ ಸೊಲ್ಲಾಪುರ ಭಗದರ್ಲಿಲ್ಲಾ ಪ್ರಮಿನ್ನ ವಕೀಲರೆಂದು ಖ್ಯಾತಿಯನ್ನು ಸಂಪಾದಿಸಿದ ಶ್ರೀ ಜಗದೀಶರಾವ ಪೆಕಟಾಂಬ ಶಾಸ್ತ್ರಿಗಳು ಭಾಷಣವನ್ನ ಮಾಡಿದರು ಸಭಾಚಾರವಂತ ಸಭೆಯಿಂದ ನಮ್ಮ ಮತಾಚಾರ್ಯರ ಸಿರಿಯಮವನ್ನು ಲಲಿಸಿತ್ತು ಕೇವಲ ವೀರಶೈವ ಇತ್ಯೆವನ್ನು ಕಾಣದೆ ಅದರಿಂದ ಹೇಗೆ ನೋಕ್ಷವು ಲಭಿಸುವುದೋ ಹೋಗಿಯು ಹಾಸ್ಯರೆರೆ ಅಭಿಪ್ರಾಯದಂತೆ ವೀಸಾದವನ್ನು ಕೊಂಡಿದೆ ಪಶ್ಯವನ್ನು ಮಾಡಿದಿದ್ದರೆ ಹೇಗೆ ನೋಕ್ಷವಿಂದ ಮುಕ್ತನಾದಾನು? ಇತ್ಯಾದಿಯಾಗಿ ಭಾಷಣಮಾಡಿದರೆ.

ಅನಂತರ ಸದಾಚಾರಿಗಳು, ಪ್ರಸಿದ್ಧವ್ಯಾಪಾರಿಗಳು, ವಿದ್ಯಾಮಂತರೂ ಆದ ಶ್ರೀಯುತ ಸಿದ್ಧಾಸುಪ್ಪಾ ಧನ್ನಾ ವಕೀಲರು ಸೊಲ್ಲಾಪುರ ಜಿಲ್ಲಾ ಲೋಕಲ್‌ಬೋರ್ಡ ಚೇರಮನ್ನರು ಹೇಳಿದ್ದೇನೆಂದರೆ ವ್ಯಾಪಾರಿಯು ತನ್ನ ಯೋಗ್ಯತೆಯನ್ನು ವಿಸಿರಿ ಬೆಳೆಸಿಕೊಳ್ಳ ಹೋಗಿ, ವರ್ಷಾಂತ್ಯದಲ್ಲಿ ಲೆಕ್ಕದ ಬುಕ್ಕನ್ನು ನೋಡಿ ದುಃಖಿಸುವಹಾಗೆ ನಮ್ಮ ಮತಾಚಾರ್ಯರು ಧರ್ಮಾಚಾರ್ಯರು ಹಾಕಿಕೊಟ್ಟ ನಿಯಮಗಳನ್ನು ಲಕ್ಷಿಸದೆ ಮಂತ್ರಾಚರಗಳನ್ನು ಬೆಳೆಯಿಸಿಕೊಳ್ಳ ನಮ್ಮ ಧರ್ಮವು ವೃದ್ಧಿಯಾಗಲೆಂದು ಪ್ರಯತ್ನ ಪಟ್ಟರೆ ಹೇಗೆ ಸಾಧ್ಯವಾಗುತ್ತೆ? ಇವಮ್ಮಿಚಾರ್ಯರಿ ಉಪದೇಶವಂತಾಚರಿಸುವಿಕೆಯೆ ಜಯಂತಿಯ ಮುಖ್ಯೋದ್ದೇಶವಿರುತ್ತದೆಂದು ಭಾಷಣಮಾಡಿದರು

ಹೋಟಿ ಶ್ರೀಗಳು—

ಅಂಧಪಂಗುವದಿಕ್ಕೊನ್ಮಸಾಜೇಕ್ಷೇ ಜ್ಞಾನಕರ್ಮಣೇ।
ಫಲೋತ್ಪತ್ತಾ ವಿರತ್ವಸ್ತು ತಸ್ಮಾತ್ತದ್ವಯಮಪೇಕ್ಷತೆ ॥

ಎಂಬುವ ಶ್ರೀರೇಣುಕ ಗೀತಾಸುಸಾರವಾಗಿ ವೀರಶೈವರಿಗೆ, ಜ್ಞಾನ, ಕರ್ಮಗಳೆರಡೂ ಬೇಕಾಗಿವೆ, ಎಂದು ಬೋಧಿಸಿದರು. ಬಳಿಕ ಭೋಜನಾದಿಪ್ರಸ್ತಾ ಮಲಂಗೆಯಾಸ್ತವರು—ಗುರುವರ್ಗದವರ ಆಜ್ಞಾಪಾಲನೆಯು ಮಹಾಲಭ ಇಹರು ಗುರುಸ್ಥಾನವನ್ನು ಅಲ್ಪಮಿಸಹತ್ತಿರುವರು. ಗುರುವರ್ಗವು ಜಾಗರೂಕವಾಗಿ ಶಿಷ್ಯರ ಉಂದು ಕೊರತೆಗಳನ್ನು ನಿರೀಕ್ಷಿಸಿ ಉಪದೇಶವನ್ನೀಯಬೇಕು. ಎಂದು ಹೇಳಿದರು.

ಸಾ॥ ಭಾಗೀರಥೀಬಾಯಿ ಕಟಾಪ— ನಮ್ಮ ಆಚಾರ್ಯರು ಸಂಳುಚಿತ ಬುದ್ಧಿಯವರಲ್ಲಿ ಅಂತೆಯೇ ಯೂರೋಪ್, ಅಫ್ರಿಕಾ ಮುಂತಾದ ದೇಶವರಿಯಾದ್ಧಾರಕ್ಕೋಸ್ಕರ ಆಯಾ ದೇಶ ಸಂಚಾರ ಮಾಡಿ ಆಯಾ ದೇಶದ ಜನರುದ್ಧಾರಕ್ಕೋಸುಗ, ಆಯಾ ವೇಷಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿದ್ದಾರೆ. ಆ ಲಿಂಗಗಳು ಈಗಲೂ ವಿರಾಜಮಾನಗಳಾಗಿವೆ ಇವನ್ನು ಪಂ॥ ಶ್ರೀ॥ ಕಾಶಿನಾಥಶಾಸ್ತ್ರಿಗಳಿಂದ ರಚಿಸಲ್ಪಟ್ಟ ವೀರಶೈವಸತ್ಯ ಬೆಂಬ ಗ್ರಂಥದಲ್ಲಿ ನೋಡಬಹುದು ಎಂದು ಹೇಳಿದರು.

ತದಂತಾಯ ಅಧ್ಯಕ್ಷ ಮಹಾಶಯರು ಹೇಳಿದ್ದೇನೆಂದರೆ ನಮ್ಮ ಇತಿ ಕರ್ತವ್ಯವೆಂದರೆ ಜನ್ಮೋದ್ಧಾರವು. ಜನ್ಮೋದ್ಧಾರಕ್ಕೆ ಜ್ಞಾನವ ಬೇಕು. ಜ್ಞಾನೋದಯಕ್ಕೆ ಶಿವಭಜನಾದಿ ಸತ್ಕರ್ಮಗಳು ಅವಶ್ಯವಿರುತ್ತವೆ ಸತ್ಕರ್ಮಾಚರಣೆಗೆ ಗುರೂಪದೇಶವೇ ಗುರಿಯಾಗಿದೆ. ಗುರೂಪದೇಶಕ್ಕೆ ಭಕ್ತಿ ವೈರಾಗ್ಯಾದಿಗಳ ಅನುಕೂಲತೆಯಿರಬೇಕು. ಸುಕೃತವು ಬೇಕು. ಸುಕೃತಕ್ಕೆ ಸತ್ಕರ್ಮ, ಸತ್ಕರ್ಮಕ್ಕೆ ಮತ್ತು ಗುರೂಪದೇಶವು ಬೇಕೇಬೇಕು. ಆದ್ದರಿಂದ ನಮ್ಮ ಗುರುಸಾರ್ವಭೌಮರಾದ ಪಂಚಾಚಾರ್ಯರಲ್ಲಿ ಅನನ್ಯ ಭಕ್ತಿಭಾವದಿಂದಾಚರಿಸಿ ಮುಕ್ತರಾಗುವುದೇ ಈ ಜಯಂತಿಯನ್ನಾಚರಿಸಿದ್ದಕ್ಕೆ ಸಾರ್ಥಕವು ಮುಂತಾಗಿ ಒಲ್ಲೇ ಪರಿಣಾಮಕಾರಿಯಾಗಿ ಭಾಷಣಸ್ವತ್ತರು ಅಧ್ಯಕ್ಷರ ಪ್ರಸ್ತಕ್ತಿಯಲ್ಲಿ ಸ್ವಾಸ್ಥ್ಯವಿಲ್ಲದಿದ್ದರೂ ಮುಳ್ಳಾಲು ತಾಸು ಭಾಷಣವನ್ನು ಮಾಡಿದ್ದು ನೋಡಿದರೆ, ಅವರಲ್ಲಿರುವ ಧರ್ಮಾದ ಕಳಕಳಿಯು ಸ್ಪಷ್ಟ ಕಾಂಡುಬರುತ್ತಿದೆ ಆಮೇಲೆ 'ಸದಾಚಾರ ಸಮಾಜ'ದ ಜಾಲಿಕೆಯರು ತಮ್ಮ ಮಧುರ ಮಧುರ ಸ್ವರದಿಂದ ಜಗದಾಚಾರ್ಯರ ಮಂಗಲವನ್ನು ಪಾಡಿದರು. 'ಅಲ್ಲಮಪ್ರಭು ಅಲೂರ' (ಪ್ರಮಜನ ಪಟ್ಟು) ಇವರು ಸರ್ವರ ಆಭಾರವನ್ನು ಮನ್ನಿಸಿದರು. ರಾಜೂರಿ ಬಿದ್ರಿ ಮುಲಂಗೆ ಮೊದಲಾದ ಪ್ರಮುಖರು ಪ್ರತಿ ವರ್ಷದಲ್ಲೂ ಶ್ರೀಜಗದಾಚಾರ್ಯ ಭಗವತ್ಪಾದರ ಕೃಪೆಗೆ ಪಾತ್ರರಾಗುವುದಕ್ಕೆ ಆ ಪೀಠವಿರುವ ಶ್ರೀ ಷ॥ ಬ್ರ॥ ವೀಸಿಕರ್ಣಶಿವಾಚಾರ್ಯರೇ ಕಾರಣರೆಂಬುವದಕ್ಕೇನೂ ಸಂಶಯವಿಲ್ಲ. ಜಗದಾಚಾರ್ಯರು ಶ್ರೀ ವೀಸಿಕರ್ಣಶಿವಾಚಾರ್ಯರಿಗೆ ಇತೋಕ್ಕಿಕಯವಾದ ಶಕ್ತಿ, ಸಾಹಸವನ್ನು ದಯಪಾಲಿಸಲೆಂದು ಪ್ರಾರ್ಥಿಸೆನು.

ಅದೇ ದಿವಸ ಸಾಯಂಕಾಲ ೭ ಘಂಟೆಗೆ ಹಿರೇಹಬ್ಬು ಇವರ ಗೃಹದಲ್ಲಿ ವಾರ್ಷಿಕ ಪದ್ಧತಿಯಂತೆ ಸ್ತ್ರೀಸಭಾಪತಿಯ ವತಿಯಿಂದ ಶ್ರೀಜಗದ್ಗುರ್ವಾಚಾರ್ಯರ ಜಯಂತ್ಯುತ್ಸವವು ಒಲ್ಲೇ ಮನೋಹರವಾಗಿ ಜರುಗಿಸಲ್ಪಟ್ಟಿತು ಸಾ॥ ಭಾಗೀರಥೀಬಾಯಿ ಕಟಾಪ, ಸಾ॥ ಸುಲೋಚನಾದೇವಿ ತಿಮಸೆಟ್ಟಿ, ಶ್ರೀಮತಿ ಗಂಗಾದೇವಿ ಕಟಾಪ, ಮುಂತಾದವರ ಭಾಷಣ, ಗೀತಗಾಯನವ ಶ್ರೀ ರತ್ನಾಬಾಯಿ ಹಿರೇಹಬ್ಬು ಈ ಮಾತೃಶ್ರೀಯವರ ಉತ್ಸವವನ್ನು ವ್ಯವಸ್ಥೆಯನ್ನಿಟ್ಟಿದ್ದರು.

ಪೋಟ್ಟೂರ, ಮೋತ್ತೂರ, ಬಂಗಾರೋಳೆ, ದಿಂಡೂರಿ, ಚಪ್ಪಳ ಗಾಂವ ಚಳ್ಳಗುರ್ಕಿಯಾನಿ, ಅಕ್ಕಲಕೋಟೆ, ದರ್ಗನಹಳ್ಳಿ, ಬೆಂಗಾವಾಣಿ, ಜಂತಿ, ಪಂಢರಪುರ, ಮಂಗಳವೇಡೆ ಮುಂತಾದ ಪಟ್ಟಣಗಳಲ್ಲಿ ಶ್ರೀಜಗದಾಚಾರ್ಯರ ಜಯಂತ್ಯುತ್ಸವಗಳು ಒಲ್ಲೇ ಉತ್ಸಾಹದಿಂದ ನೆರವೇರಿಸಲ್ಪಟ್ಟವು. ಶ್ರೀಜಗದಾಚಾರ್ಯರು ಇವರ ಸದ್ಭಕ್ತರುಗಳಿಗೆ ಆನಂದ ಸುಖಸಾಮ್ರಾಜ್ಯಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಆಚಾರ್ಯ ಸೇವಕರ ಸೇವಕ.
ಬಿ. ಜಿ. ಪಾಟೀಲ ಧೋತ್ರೀ.

ಶ್ರೀಜಗದ್ಗುರು ಪಂಡಿತಾರಾಧ್ಯರ ಜಯಂತಿ ಮಹೋತ್ಸವ, ಶಿವಪಿ.

ತರೀಕೆರೆ ತಾಲ್ಲೂಕು ಶಿವಗ್ರಾಮದಲ್ಲಿ ವಾರ್ಷಿಕ ಪದ್ಧತಿಯಂತೆ ಈ ವರ್ಷವೂ ಮೇಲ್ಕಂಡ ಜಯಂತಿ ಮಹೋತ್ಸವವು ಚಿ॥ ಶಾ॥ ಮುದ್ದೇನ ಹಳ್ಳಿ ಸೇಲ್‌ಮಹದ ಮರುಳಿಸಿದ್ಧಯ್ಯ ಮಾಸ್ತರ ಇವರ ಗೃಹದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು.

ತಾ. 17-2-1939 ನೇ ಶುಕ್ರವಾರ ಮಾಘ ಬಹುಳ ಪಾಡ್ಯದಿಂದ ಶುಕ್ರವಾರ ಸದರಿಯವರ ಗೃಹದಲ್ಲಿ ತೋರಣ ರಂಭಾಸ್ತಂಭಗಳಿಂದ ಸುಂದರವಾಗಿ ಅಲಂಕರಿಸಿದ ಮಂಟಪದಲ್ಲಿ ಶ್ರೀ ಜಗದ್ಗುರು ಲಿಂಗೋದ್ಭವ ಮೂರ್ತಿಗಳಿಗೆ ರುದ್ರಾಭಿಷೇಕಾದಿಪೂಜೆಯೂ ಶಿವಪಥಸ್ಥ ಪಂಚಾಚಾರ್ಯರ ಅಷ್ಟೋತ್ತರಗಳ ಪಠನವೂ ನಡೆದು ಅನೇಕ ವಿಧಗಳಾದ ಸ್ತೋತ್ರಗಳನ್ನು ಮಾಡುತ್ತ ಜಯಂತಿ ಕಾರ್ಯವನ್ನು ದಂಪತಿಗಳು ಬಹಳ ಭಕ್ತಿಪೂರ್ವಕವಾಗಿ ನೆರವೇರಿಸಿದರು.

ಈ ಗುರುಕಾರ್ಯದಲ್ಲಿ ಅನೇಕ ಶ್ರೀ ಗುರುಪರು ಭಾಗವಹಿಸಿದ್ದರು. ಈ ಗ್ರಾಮದ ಮಠದ ವೇ॥ ರುದ್ರಮುಖಿ ಆಯ್ಯನವರು ಮರುಳಯ್ಯನವರು ಅಗಮಿಸಿದ್ದರಲ್ಲದೆ ಪಟೇಲ್ ಮತ್ತು ಛೇರ್‌ಮನ್ ಷಾ॥ ರಾ॥ ಶಿವಪ್ಪಗೌಡರು ಬಹಳ ಮುತುವರ್ಜಿಯಿಂದ ಕಾರ್ಯವನ್ನು ನೆರವೇರಿಸಿದರು. ಇಲ್ಲಿನ ಇಂಗ್ಲಿಷ್ ಮಾಸ್ತರ್ ಮ॥ ವೀರಪ್ಪಗೌರು ಬಹಳಷ್ಟಿನಿಂದ ಕಾರ್ಯದಲ್ಲಿ ತೊಡಗಿದ್ದರು. ಶ್ರೀ ಗುರುಪ್ರಸಾದವು ಸಕಲರಿಗೂ ವಿಶೇಷವಾಗಿ ಹಂಚಲ್ಪಟ್ಟಿತು. ಶ್ರೀ ಗುರುಪ್ರಸಾದವು ಸಕಲರಿಗೂ ವಿಶೇಷೋಪಯೋಗವಾದ ಮೇಲೆ ಫಲಹಾರ ಎಳೆನೀರು ಪಾನಕ ಪಕ್ಕೆರೆಪ್ಪಕ್ಕಗಳು ವಿಶೇಷೋಪಯೋಗಿಸಲ್ಪಟ್ಟವು.

ಅನಂತರ ವೇ॥ ಮರುಳಸಿದ್ಧಯ್ಯನವರು ಸಿದ್ಧಾಂತಶಿಖಾಮಣಿಯನ್ನು ಪಠಿಸುತ್ತ ವೀರಶೈವ ಸಿದ್ಧಾಂತವನ್ನು ಶ್ರೀ ಜಗದ್ಗುರು ಪಂಚಾಚಾರ್ಯರು ಸ್ಥಾಪಿಸಿರುತ್ತಾರೆಂದೂ, ಈ ಸಿದ್ಧಾಂತರೀತಿಯಾಗಿ ಸರ್ವರೂ ಆಚಾರ್ಯರ ಶಿಕ್ಷಣಾಧೀನರಾಗಿ ಇಹ ಲೋಕಯಾತ್ರೆಯನ್ನು ನಡೆಸುತ್ತಾ ಅಂತ್ಯ ಗುರುಮೂರ್ತಿಗಳಾಗಲೆಂದಲೇ ಹೃದ್ಯ ಲೋಪದೇಶವನ್ನು ಪಡೆದು ಮುಕ್ತಿಯನ್ನು ಪಡೆಯಬೇಕೆಂದೂ ಅನೇಕ ಲೌಕಿಕ ವೈದಿಕ ಉದಾಹರಣೆಗಳಿಂದ ಬೆಳಗಿನ ಸುಮಾರು ೪ ಘಂಟೆಯ ವರೆಗೂ ವೋಧಿಸುತಿದ್ದರು. ಅನಂತರ ಎಲ್ಲರೂ ಪುನಃ ಸ್ನಾನ ಶಿವಪೂಜಾದಿಗಳನ್ನು ತೀರಿಸಿ ತೊಂಡು ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ರ ಪಟವನ್ನು ಹೂಮಾಲೆಗಳಿಂದ ಅಲಂಕರಿಸಿ ಮಹಾಮಂಗಳಾರತಿಯಾದಮೇಲೆ ಭಕ್ತಮಹೇಶ್ವರರು ಶ್ರೀಗುರುಪ್ರಸಾದವನ್ನು ಸ್ವೀಕರಿಸಿ "ಶ್ರೀ ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ" ಎಂಬ ಆಚಾರ್ಯರ ಜಯಘೋಷದೊಡನೆ ಜಯಂತಿಯ ಕಾರ್ಯವನ್ನು ಸಮಾಪ್ತಿಗೊಳಿಸಿದರು. ಓರ್ವ ಪ್ರತ್ಯಕ್ಷದರ್ಶಿ.

ಜಗದಾಚಾರ್ಯರ ಜಯಂತೀ ಮಹೋತ್ಸವ.

ಮಂಜರಾಬಾದ ತಾ॥ ಎಸಳೂರುಪೇಟೆಗ್ರಾಮದ ಮ॥ ರಾ॥ ಪಟ್ಟಣಶೆಟ್ಟರ ನಂಜುಂಡಪ್ಪನವರು, ಮ॥ ರಾ॥ ಯಜಮಾನ್ ವೈ. ಹೆಚ್. ಪ್ರಭುಪ್ಪಯ್ಯನವರು ಮಹಾತಿವರಾತ್ರಿಯದಿವಸ ಶ್ರೀ ಜಗದ್ಗುರ್ವಾಚಾರ್ಯರ ಜಯಂತೀಮಹೋತ್ಸವನ್ನು ಸಾಧ್ಯವೈಭವದೊಂದಿಗೆ ಭಕ್ತಿಪೂರ್ವಕವಾಗಿ ನೆರವೇರಿಸಿ ಧನ್ಯರಾದರು. ಇದೇ ಪ್ರಕಾರ ಚಿಂಗಡಹಳ್ಳಿಗ್ರಾಮದಲ್ಲಿ ಬೇರ್ಮಗ್ ಶಂಜಪ್ಪ ನಂಜಪ್ಪನವರು, ವರ್ಷತಕರಾದ ಆಕ್ಕಯ್ಯಮ್ಮನ ಮಲ್ಲಿಕಾರ್ಜುನಪ್ಪನವರು ಅತಿವಿಜೃಂಭಣೆಯಿಂದ ನೆರವೇರಿಸಿದರು. ಮೇಲ್ಕಂಡ ಗುರುಭಕ್ತರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ಪೆಚ್ಚಿಸಲೆಂದು ಪ್ರಾರ್ಥಿಸುವ ವೈ. ಹೆಚ್. ಸಿದ್ಧಯ್ಯ.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ವಿಸಪಟ್ಟು ಬರುವ ಜ್ವರ, ೨ ನ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವೀನೈನ್ ಸಿಂದಲೂ ಇಂಜಕ್ಷನ್‌ಸಿಂದಲೂ ಬಿಡದಿರುವ ಜ್ವರವನ್ನು ನಿಶ್ಚೆ ಸಹೇತ ಸುಧಾರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ ೦-14-0, ೪ ಔನ್ಸ್ ಸೀಸೆಗೆ ರೂ. 1-8-0, ಡಜನ್‌ಗೆ ರೂ. ೨-12-0, ರೂ. 16-8-0.

ಕಂಜೆಂಡ್ ಸಿರಪ್ ಸಾಲಸಪರಿ—ಸ್ವಪ್ನೇಂದ್ರಿಯ ಸ್ಖಲನ, ಶೀಘ್ರಸ್ಖಲನ, ಧಾತುಕ್ಷಯಕಳಿಲ್ಲುವಿಕ, ಮೂತ್ರದೊಡನೆ ವೀರ್ಯಸ್ರಾವ, ವೀರ್ಯಾಶ್ಮರಿ, ತೆಳ್ಳಗಾದಧಾತು, ಇವೆಲ್ಲದರ ಬುಡವನ್ನು ಕಿತ್ತು ಗಟ್ಟಿಪಡಿಸುವುದಕ್ಕೆ ಧಾತುಪಾಷ್ಟಿಕ ರಸಾಯನ ಇದಕ್ಕಿಂತ್ತಿಲ್ಲ. ಸೀಸೆಗೆ ರೂ. ೨-೬-೦ ಮತ್ತು 1-14-0.

ಸ್ತ್ರೀಟ್ಯಾನಿಕ್ಸ್ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆ ಗೆಳತಿ—ಸಕಲವಿಧ ಪೆಟ್ಟಿಹುಳುಗಳನ್ನು ನಾಶಪಡಿಸಿ ಹಾಡಿಸುವ ಪರಿಪೂರ್ಣ ಔಷಧಿ ಬೆಲೆ ಡಜನ್ ಬಿ. 0-3 0 100 ಕ್ಕೆ ರೂ. 2-0-0

ರಿಂಗ್ ವರ್ಮ್ ಭಾಮು—ತೀಕ್ಷ್ಣವಾದ ಹುಳ ಹೋಗುವುದು, ಗುಣಕಾರಿ. ಹುಳಕಡ್ಡಿಗೂ ಉಕ್ತಮ. ಆಣೆ 5.

ಕಂಜೆಂಡ್ ಸಿರಪ್ ಬ್ಲಾಟ್—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಪಾಸನವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ 3-8-0, ಸಣ್ಣದು ರೂ. 1-14-0.

ಟೀಬಿ ಹೋರ್—ಶ್ವಾಸಕೋಶಾಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ಹಾಸು ರೆಗ್ಗುಹಣ ರೋಗದಿಂದ ಮಾಂಸ ಹೋಲುದಿದ್ದು, ಮೈ, ಕೈ, ಕಾಲು ಸೊರಗಿ ಸ್ಪೀಣವಾಗಿ ಬರುವ ಮಳ್ಳಳಿಗೆ ಪ್ರಸಿದ್ಧ ಅಮೃತ 1-4-0

ಆಯರ್ ಒಯಿಲ್—ಕಿವಿ ಸೋರುವದು, ವ ಸೋವ ಕಿವುರು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಳದೆಗೆ ಸಿದ್ಧಾಷಧಿ ಸೀಸೆಗೆ ರೂ. 1-0 0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಳೆಗೆ ಸೀಸೆಗೆ ರೂ. 1-0-0.

ಕಂಜೆಂಡ್ ಸಿರಪ್ ವೆಜಿಟೊಜ—ಪ್ರಮೇಹ ಮೂತ್ರ ದ್ವಾರದಿಂದ ಕೀವು, ಮಧುಮೇಹಾಯ್ಯುವಾಗ ತಡೆಯಲಾರದು, ತರಿಸಿ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಾಧು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವಿಕೆ, ಇವೇ ಮೊದಲಾದ ಪ್ರಮೇಹದ ಲಕ್ಷಣಗಳು ಬುಡವನ್ನು ತೆಲುವ ಹಾಗುಗಳ್ಳಿಯೇ ರಾಮಬಾಣದಂತೆ ನಿಶ್ಚಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಶುದ್ಧ ಟೆಕ್ಕು, ಹೊಸ್ಮೊಹರಿ ವಿಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ

ವಿವಾಹ ಮಹೋತ್ಸವ, ಸೊಂಡೂರು.

ಇದೇ ವಾಹಿ ಬ॥ ೨ ನೇ ಶುಕ್ರವಾರ (೧೦-೩-೩೯) ಉದಯ ೮ ಘಂಟೆಗೆ ಸೊಂಡೂರು ಗ್ರಾಮದ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀಮಾನ್ ಭೋಜ ಪಣ್ಮುಖಪ್ಪನವರು ತಮ್ಮ ಗೃಹದಲ್ಲಿ ಮನೆ ಗುರುಗಳಾದ ವೇ॥ ಶಾರಪಟ್ಟಿಗೆ ಕಟ್ಟಿಗಿಮಠದ ಹಿರೇಮಠದ ಬಸವಯ್ಯನವರಿಂದ ತಮ್ಮ ಪುತ್ರ ಪುತ್ರಿಯರ ವಿವಾಹ ಮಹೋತ್ಸವವನ್ನು ಅತಿ ವೈಭವದಿಂದ ನೆರವೇರಿಸಿದರು. ಮಂಟಪವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಚಿತ್ರವಿಚಿತ್ರವಾದ ಮೇಲ್ಕಟ್ಟಿನಿಂದಲೂ ವಿದ್ಯುದ್ದೀಪಗಳಿಂದಲೂ ಅಲಂಕೃತವಾಗಿದ್ದಿತು. ಇವರ ಪುತ್ರರಾದ ಚಿ॥ ಅಡಿವಪ್ಪನವರಿಗೆ ಸವಳಗುಂದದ ಶ್ರೀಮಾನ್ ಜಂಘಶ್ಯಾ ಶೆಟ್ರು ಪುತ್ರಿ ಚಿ॥ ಕುಂ॥ ಸಾ॥ ಸುಶೀಲಮ್ಮನವರು ವಧುವು ಮನೆಯೊಡತಿಯೂ ಪುತ್ರಿಯಾದ ಚಿ॥ ಕುಂ॥ ಶಾ॥ ಸಾರ್ವತಮ್ಮನನ್ನು ಹೂವಿನಸಡಗುರಿ ಶ್ರೀಮಾನ್ ಮಜ್ಜಿಗಿ ಬಸಪ್ಪನವರ ಪುತ್ರ ಚಿ॥ ನೀಲಪ್ಪನವರಿಗೂ ಮತ್ತು ಚಿ॥ ಕುಂ॥ ಸಾ॥ ಪಾರ್ವತಮ್ಮನನ್ನು ಹೂವಿನಸಡಗುರಿ ಶ್ರೀಮಾನ್ ಮಜ್ಜಿಗಿ ಬಸಪ್ಪನವರ ಪುತ್ರ ಚಿ॥ ನೀಲಪ್ಪನವರಿಗೂ ಮತ್ತು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಸಿಷ್ಠ, ವ್ಯಾಸ, ಜನಮೇಜಯ, ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಶ್ರೀಮದ್ ವೀರಾರೋಹಣಾಚಾರ್ಯರಿಗೆ ಜನರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧಿವತ್ತಾಗಿ ಪ್ರಾರ್ಥನಾನುಸಾರವಾಗಿ ವಿಕಲಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಸೀಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಕೇದಾರಸಿದ್ಧಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಹಿಮವತ್ಕೇದಾರದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅದ್ದೂರಿಯಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಜಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುದಿನ್ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಹಿಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಚಿಕಿತ್ಸೆಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[45] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಪವಿತ್ರಸಿ (೫ನೆಯ ಆವೃತ್ತಿ)	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನೋತ್ತರಿಕೆ (೩ನೆಯ ಆವೃತ್ತಿ)	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	...	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಬಸವಾದಿವಿಜಿತಕ್ಷ್ವಪಣಿ (೪ನೆಯ ಆವೃತ್ತಿ)	....	೨ ಆಣೆ
ಶ್ರೀರೇಣುಕಾಚಾರ್ಯಗೀತಕ (೩ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯಪ್ರಭಾಕರ	....	೨ ಆಣೆ
ಶ್ರೀಗುರುತತ್ತ್ವಪ್ರದರ್ಶ	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಕೃತಕ	....	೨ ಆಣೆ
ವೀರಶೈವಮತನಿರಾಸ	....	೩ ಆಣೆ
ವೀರಶೈವಾಚಾರಪದ್ಧತಿ (೨ನೆಯ ಆವೃತ್ತಿ)	....	೩ ಆಣೆ
ಲಿಂಗಧಾರಣವಿ	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪ ಆಣೆ
ಶ್ರೀಸಪಂಡಿತಾರಾಧ್ಯರ ಕಾಲನಿರ್ಣಯ	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ)	....	೬ ಆಣೆ
ಸಿದ್ಧಾಂತ ಶಿಖಾಮಣಿ (ಪ್ರಮಾಣಮಾತ್ರ. ಚಿತ್ರಸಹಿತ)	....	೬ ಆಣೆ
ವೀರಶೈವಮಹತ್ವ	....	೮ ಆಣೆ
ಬಸವಾಧ್ವಾಂತದಿವಾಕರ (೩ನೆಯ ಆವೃತ್ತಿ)	....	೮ ಆಣೆ
ಸದ್ಯೋಧರತ್ನಾವಳಿ	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಷಣಮು (ತೆಲುಗು)		೬ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ಶ್ರೀಕರಧಾನ್ಯಂ (ಚತುಷ್ಪಾತ್ರೀ)	....	೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೪೦ಮಹತ್ವದ ಫೋಟೋಗಳುಂಟು)	....	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	೪ ರೂ.
A brief life-sketch of Pandit Sri Kashinatha Shastriji (*English*)		4 As.
Shakti-Vishistadvaita *or* **The Philosophical Aspect of Virasaivism** (*English*)	....	8 As.
Speeches by Pandit Shri Kashinatha Shastriji *English*)		12 As.
ವೀರಶೈವರು (ಮರಾಠಿ)		೧ ಕ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		೧ ಕ.
ವೀರಶೈವೇತಿಹಾಸ (ಸಂಸ್ಕೃತ)		೧ ಕ.
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ)		೬ ಆ.
ನಂದಿಕೇಶ್ವರಕಾರಿಕಾ (ಸಂಸ್ಕೃತ)		೪ ಆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)		೨ ಆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)		೩ ಕ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಈ ಸೂಚನೆ ಸಮಸ್ತ ಭಾರತದಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಅನ್ನಾಸ ಮಹಾವಿದ್ವಾಂಸ ಶ್ರೀ ವೀರ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿಸ್ಪಳಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಸಂಚಾರ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀವಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪಿಲಿಸಪ್ತಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮುರವರ್ ಸಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಮಾರ್ಚಿ ೧೯೩೯ [ಸಂಚಿಕೆ ೪೪

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಜಗದ್ಗುರು ವಿಶ್ವಾರಾಧ್ಯ-ಜಾಗೂ, ಜಗದ್ಗುರು ಪಂಡಿತಾರಾಧ್ಯರ ಜಯಂತೀಮಹೋತ್ಸವ.

ಶ್ರೀಕ್ಷೇತ್ರ ಕಾಶೀ

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನ ಜಂಗಮವಾಡೀ ಮಠದಲ್ಲಿ ಪದ್ಧತಿಪ್ರಕಾರ ಈ ವರ್ಷವೂ ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತೀಮಹೋತ್ಸವವು ಮಹಾಶಿವರಾತ್ರಿಯ ದಿವಸ ಅತ್ಯಂತ ವೈಭವದಿಂದ ನೆರವೇರಿತು.

ಆ ದಿವಸ ಪ್ರಾತಃಕಾಲ ಶ್ರೀಜಗದ್ಗುರು ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯರ ಲಿಂಗೋದ್ಭವಮೂರ್ತಿಗಳಿಗೆ ಮಹಾಸಂಸ್ಥಾನದ ವೈದಿಕ ವಿದ್ಯಾರ್ಥಿಗಳಿಂದ, "ಏಕಾದಶರುದ್ರ ಮಹಾರುದ್ರಾಭಿಷೇಕವೂ, ಸಹಸ್ರಲಿಲ್ವಾರ್ಚನೆಯೂ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು

ಅನಂತರ ಸಂಧ್ಯಾಕಾಲದಲ್ಲಿ, ಯಾತ್ರಾರ್ಥಿಗಳಾಗಿ ಬಂದಿದ್ದ ಎಲ್ಲಾ ಭಕ್ತಮಾಹೇಶ್ವರರಿಗೂ ಸೋಡಿಹೋಡಚಾನಗಳಿಂದಲೂ, ಶ್ರೀರುದ್ರಾಧ್ಯಯನಾದಿ ವೇದ ಘೋಷದಿಂದಲೂ, ಶಿವಪೂಜೆಯು ಮಾಡಿಸಲ್ಪಟ್ಟು, ಪ್ರಸಾದವಿನಿಯೋಗವನ್ನು ಮಾಡಲ್ಪಟ್ಟಿತು

ತಳಿರು ತೋರಣಗಳಿಂದಲೂ, ದೀಪಾಲಂಕಾರಗಳಿಂದಲೂ, ವಿವಿಧ ಪಿಷ್ಟಾದ್ಯೌಷಧಿಗಳಿಂದಲೂ, ನಾನಾವಿಧ ಪುಷ್ಪಮಾಲಿಕೆಗಳಿಂದಲೂ, ಅಲಂಕೃತವಾದ ಕೈಲಾಸ ಮಂಟಪದ ಸಾಂದರ್ಶನಕ್ಕಾಗಿ ಬೆಳಗಿನ 5 ಘಂಟೆಯಿಂದ ರಾತ್ರಿ 4 ಘಂಟೆಯ ತನಕ ಜನರು ತಂಡೋಪತಂಡವಾಗಿ ಬರುತ್ತಿದ್ದರು

ಅನಂತರ ರಾತ್ರಿ ಸುಪ್ರಸಿದ್ಧ ಸೇದಾಂತಿಗಳಾದ ವ.॥ ರಾ॥ ತಿಮ್ಮಪ್ಪಶಾಸ್ತ್ರಿಗಳವರು ಕೋಳೂರು, ಇವರು "ಮಾನವನ ಕರ್ತವ್ಯ" ಎಂಬ ವಿಷಯದ ಮೇಲೆ ಬಯ ಸ್ವಾರಸ್ಯವಾಗಿ ವ್ಯಾಖ್ಯಾನಮಾಡಿ ಸರ್ವರನ್ನೂ ಆನಂದಗೊಳಿಸಿದರು.

ತದುವಾಯ ಗುರುಕುಲ ವಿದ್ಯಾರ್ಥಿಗಳಿಂದ ಭಜನೆಯು ನಡೆದು, ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಲಿಂಗೋದ್ಭವ ಮೂರ್ತಿಗಳಿಗೆ, ಮಹಾಮಂಗಳಾರತಿ, ಪುಷ್ಪಾಂಜಲಿಗಳು ಆರ್ಪಿತವಾಗಿ ಪ್ರಸಾದವು ವಿನಿಯೋಗಿಸಲ್ಪಟ್ಟಿತು.

ಪುನಃ ತಾ। 19-2-39 ನೇ ಭಾನುವಾರ ಕುದಪವಾಡಿ ವೈಲ್ವ ಗಾರ್ಡ್ ಮಿ॥ ಪಕಾಲೆಯವರ ಆಧ್ಯಕ್ಷತೆಯಲ್ಲಿ ಜ್ಞಾನವೃದ್ಧರೂ, ವಯೋವೃದ್ಧರೂ, ಮಹಾತಪಸ್ವಿಗಳೂ ಆದ ನಿಟ್ಟೂರು ಸಾಂಬ ಸ್ವಾಮಿಯವರು ಮತ್ತು ಸದಾನಂದಬುವಾ ಜೋಡಜವಳೇಕರ್ ಇವರು ಶಿವಾಧೀನರಾಪ ನಿಮಿತ್ತ ಮಃಶಪ್ರಪರ್ಚನದ ಸಭೆಯು ಸೇರಿತು ವಿದ್ವತ್ಸಂಭೆದ ಸಪಸ್ಕರೂ ಮತ್ತು ಯಾತ್ರಾರ್ಥಿಗಳಾಗಿ ಬಂದಿದ್ದ ಮಿ॥ ರಾ॥ ವೀರನಗೌಡ ಪಾಟೀಲ್ ದತ್ತವಾಡ್ ಶಿವನ ಗಾರ ಪಾಟೀಲ್ ಸುಧಿಕಾಡ ಮುಂತಾದವರೂ ಇವರ ಗೌರವಾರ್ಥ ಮಾಯುತ್ತ ಇವರ ಆಗಲುವಿಕೆಯಿಂದ ನೀರಕ್ಷೆಯ ಮುತ್ಕೆ ಉಂಟಾದ ಮಃಸುವನ್ನು ಸೂಚಿಸಿ, ವೃತ್ತರ ಅತ್ಯಕ್ಕೆ ಶ್ರೀಜಗದ್ಗುರು ಕಾಂತಿಯನ್ನೀಯಲೆಂದು ಪ್ರಾರ್ಥಿಸಿದರು

ಪುನಃ ತಾ 20 2.39 ನೇ ಸೋಮವಾರ ಮಿ॥ ರಾ॥ ಸುಪ್ರಸಿದ್ಧ ವೇದಾಂತಿಗಳಾದ ತಿಮ್ಮಪ್ಪಶಾಸ್ತ್ರಿಗಳು ರಾಜಧಾನಿಯಲ್ಲಿ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ, ಸದರಿ ಮಿ॥ ರಾ॥ ವೀರನ್ನಗಾಡ ಪಾಟೀಲ್, ಶಿವನಗಾಡಪಾಟೀಲ್, ಇಲಾಖಾ ಕೊಲ್ಲಾಪುರ್ ಇವರು ಕಾಶೀ ವೀರಶೈವವಿದ್ವತ್ಸಂಭೆದವರು ನಡೆಯಿಸುತ್ತಿರುವ, ಧರ್ಮಸಂಬಂಧಪಾದ ಕಾರ್ಯಕಲಾಪಗಳನ್ನು ಪ್ರತ್ಯಕ್ಷನೋಡಿ, ಆಯಾ ಚಿತವಾಗಿ ಸದರಿ ವಿದ್ವತ್ಸಂಭೆಕ್ಕೆ ಪ್ರವತ್ಸಯಾಯನವಾದದ ಫಮಿತ್ತ ಸದರಿ ಪಾಟೀಲರಿಗೆ ವಿದ್ವತ್ಸಂಭೆವ ವತಿಯಿಂದ ಸತ್ಕಾರವು ನಾಡಲ್ಪಟ್ಟಿತು.

ತದುವಾಯ ಜಾನ, ಧರ್ಮ, ಪರೋಪಕಾರ ಇವುಗಳಮೇಲ ಪ್ಯಾಖ್ಯಾನಗಳು ನಡೆದು ಶ್ರೀಜಗದ್ಗುರ್ಕಿ ಜಯಘೋಷವೂ ಡನೆ ಸಭೆಯು ಸಮಾಪ್ತಿಯನ್ನು ಹೊಂದಿತು.

ಸಕ್ರೆಟರಿ.
ಕಾಶೀವೀರಶೈವವಿದ್ವತ್ಸಂಭ.

ರೇವಣಸಿದ್ಧೇಶ್ವರಬೆಟ್ಟದಲ್ಲಿ ಜಯಂತಿ.

ಕ್ಷೀರಸಮೇಪೇತಾಲೂಕು ಶ್ರೀ ರೇವಣಸಿದ್ಧೇಶ್ವರಸ್ವಾಮಿ ದೇವಸ್ಥಾನದಲ್ಲಿ ಪದ್ಧತಿಪ್ರಕಾರ ಈ ಸಾರಿ ಮಹಾಶಿವರಾತ್ರಿಯದಿವಸ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವವು ನೆರವೇರಿತು. ಜಗದ್ಗುರು ಆಚಾರ್ಯರುಗಳಿಗೆ ಶಾಸ್ತ್ರೋಕ್ತವಾಗಿ ಮಹಾರುದ್ರಾಭಿಷೇಕವನ್ನು ಬಮ ವೈಭವದಿಂದ ನೆರವೇರಿಸಿ, ನೆರೆದಿದ್ದ ನೂರಾರುಜನರು ರಾತ್ರಿಯೆ.ಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರ ಭಜನೆಯನ್ನು ನಡೆಯಿಸಿದರು. ಬೆಳಗ್ಗೆ ಸೂರ್ಯೋದಯಕ್ಕೆ ಸರಿಯಾಗಿ ಶ್ರೀ ಸ್ವಾಮಿಯವರ ಉತ್ಸವವು ಶ್ರೀ ಜಗದಾಚಾರ್ಯರ ಭಾವಚಿತ್ರದೊಡನೆ ಹೊರಟಿತು. ಉತ್ತನ ಕಾಲಕ್ಕೆ ಅನೇಕ ಭಕ್ತಾದಿಗಳು ನೆರೆದಿದ್ದರು. ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಂಡಿತು. ಮರುದಿವಸ ಭೀಮೇಶ್ವರದೇವಸ್ಥಾನದಲ್ಲಿ ಪದ್ಧತಿ ಪ್ರಕಾರ ಅನ್ನೇರಹಳ್ಳಿ ಗ್ರಾಮಸ್ಥರು, ಅಂಕನಹಳ್ಳಿಗ್ರಾಮಸ್ಥರು ಮತ್ತು ನೆಲಮಂಗಲಗ್ರಾಮಸ್ಥರು ನೂರಾರು ಜನಕ್ಕೆ ಸಂತರ್ಪಣೆಯನ್ನು ಮಾಡಿಸಿದರು. ಸಂತರ್ಪಣೆಯನ್ನು ನಡೆಸಿದ ಮಹಾಶಯರಿಗೆ ಶ್ರೀ ಜಗದ್ಗುರುಗಳವರು ಸನ್ಮಂಗಳವನ್ನೀಯಲೆಂದು ಕೋರುವ,

ಎಂ. ವಿ. ಶಿವಪ್ಪ,
ಪಾರು ಪತ್ತೇಗಾರ್.

ವಿಭೂತಿ

ಸಿಕಂದರಾಬಾದ್ ಟವನ್ ನಿವಾಸಿಗಳಾದ ವೇ॥ಚಿವ ರೆಮತದ ವೀರಭದ್ರಶಾಸ್ತ್ರಿಗಳವರು ಮೇಲ್ಕಂಡ ಮಾಸ ಪತ್ರಿಕೆಯನ್ನು ತೆಲಗುಭಾಷೆಯಲ್ಲಿ ನೂತನವಾಗಿ ಹೊರ ಡಿಸಲು ಪ್ರಾರಂಭಮಾಡಿರುತ್ತಾರೆ. ಮಹಾಶಿವರಾತ್ರಿಯ ಸಚಿತ್ರ ಸಂಚಿಕೆಯು ನಮಗೆ ತಲ್ಪಿರುತ್ತದೆ ಆಂಧ್ರ ದೇಶೀಯರಾದ ಅನೇಕಜನ ಉತ್ತಮ ಲೇಖಕರ ಲೇಖನಗಳು ಈ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವವು. ಪತ್ರಿಕೆಯು ಮಹತ್ವಲೇಖನಗಳಿಂದ ಕೂಡಿ ಸರ್ವಾಂಗಸುಂದರವಾಗಿ ವಿರಾಜಿಸುತ್ತಿರುವದು. ಶಾಸ್ತ್ರಿಗಳವರು ಈ ಪತ್ರಿಕೆಯಮೂಲಕ ಆಂಧ್ರವೀರಶೈವರನ್ನು ಮುಂಪಕ್ಕೆ ತರುವ ರೆಂದು ನಂಬಿದ್ದೇವೆ. ಶ್ರೀ ಜಗದಾಚಾರ್ಯರ ಆಶೀರ್ವಾದಬಲದಿಂದ ಪತ್ರಿಕೆಯು ಬಾಲಚಂದ್ರನಂತೆ ಅಭಿವೃದ್ಧಿ ಹೊಂದಲೆಂದೂ, ಆಂಧ್ರದೇಶೀಯರೆಲ್ಲರೂ ಈ ಪತ್ರಿಕೆಯ ಅಭಿವೃದ್ಧಿಗಾಗಿ ಸಹಾಯವನ್ನೀಯಬೇಕೆಂದೂ ಕೋರುತ್ತೇನೆ. ವಾರ್ಷಿಕಚಂದಾ 2-8-0.

ಪತ್ರಿಕೆಯವಿಳಾಸ :—

ಸಂಪಾದಕ—ವಿಭೂತಿ,
4268 ಸಜನ್‌ಲಾಲ್ ಸ್ಟ್ರೀಟ್,
ಸಿಕಂದರಾಬಾದ್. (ದಕ್ಷನ್)

ಸ್ವೀಕಾರ.

ಮಹಾಕೂಟಕ್ಷೇತ್ರದಲ್ಲಿ ಮಹಾಶಿವರಾತ್ರಿಯ ದಿವಸ ಮಿ॥ ರಾ॥ ಆಗೋಲ ಪೋಲೀಸ್ ಪಾಟೀಲ ಆಣ್ಣಾಜಿ ಗೌಡರು ಪತ್ನೀಸಮೇತರಾಗಿ ಶಿವವೀಕ್ಷೆಯನ್ನು ಹೊಂದಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೨ ರೂ. ಕನಕಗಿರಿ ಬೃಹನ್ಮಠದ ಶ್ರೀ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ರಾಯಚೂರು ಡಿ॥ ಕನಕಗಿರಿ ಬೃಹನ್ಮಠದ ಶ್ರೀ॥ ಪ॥ ಬ್ರ॥ ಪಂಚಾಕ್ಷರೀ ಶಿವಾಚಾರ್ಯರ ಆನುಷ್ಠಾನ ಸಮಾಪ್ತಿಸಮಯದಲ್ಲಿ ಮ॥ ರಾ॥ ಆಗೋಲಿ ಚಿಣ್ಣಾಜಿ ಗೌಡರು ಸಮರ್ಪಿಸಿದ ೨ ರೂ. ಯು ಕನಕಗಿರಿ ವೀರ ಶೈವಾಜನಾಲಯದ ಸೆಕ್ರೆಟರಿ ವೇ॥ ರಾಜೋಟೆ ಶರ್ಮರ ದ್ವಾರಾ ತಲ್ಪಿರುತ್ತದೆ

ಶಿವಮೊಗ್ಗಾ ಡಿ॥ ಹಾರ್ನಹಳ್ಳಿ ಗ್ರಾಮದ ಶ್ರೀ॥ ಜವಳಿ ಗುರುಬಸವಪ್ಪನವರ ಬಗ್ಗೆ ನೆರವೇರಿದ ಗರ್ಭಾರಾಧನೆಯ ಸಮಯದಲ್ಲಿ ಅವರ ಮಕ್ಕಳು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೨ ರೂ. ಯು ಗುಬ್ಬಿ ಶಿವಕಥಾಪಂಡಿತ ವೇ॥ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹನೀಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಗುರುಭಕ್ತಪುಂಗವ ಸದಾನಂದಬುವಾರವರ ನಿಧನ.

ಮಹಾರಾಷ್ಟ್ರದೇಶ ನಿವಾಸಿಗಳಾದ ಮಿ॥ ರಾ॥ ಸದಾನಂದಬುವಾ ಕೀರ್ತನಕಾರ ಜೋಡಜವಳೇಕರ್ ಇವರು ಕಳೆದ ತಿಂಗಳು ಶಿವಾಧೀನರಾದರೆಂಬ ವಿಷಯವನ್ನು ಕೇಳಿ ಅತ್ಯಂತ ವಿಷಾದವೆನಿಸುತ್ತದೆ. ಈ ಗುರುಭಕ್ತರು ಅತ್ಯುತ್ತಮ ಕೀರ್ತನಕಾರರಾಗಿದ್ದು ಮಹಾರಾಷ್ಟ್ರದೇಶ ವಲ್ಲಿ ವಿಶೇಷವಾಗಿ ವೀರಶೈವಪ್ರಾಗೃತಿಯನ್ನುಂಟುಮಾಡಿ ದರು. ಇವರು ಶ್ರೀಜಗದ್ಗುರು ಪಂಚಾಚಾರ್ಯರ ವಿಷಯ ದಲ್ಲಿ ತನ್ಮ, ಶರೀರವನ್ನು ಸವಿಸಿ ಸೇವೆಯನ್ನು ಮಾಡಿ ದರು. ಮಹಾರಾಷ್ಟ್ರದೇಶದಲ್ಲಿ ಆಚಾರ್ಯರ ವಿಜಯಧ್ವಜ ವನ್ನು ಸರ್ವತ್ರ ಮೆರೆಯಿಸಿದರು. ಇವರು ಗುರುಭಕ್ತಿಯೇ ಒಂದು ಮೂರ್ತಿಮತ್ತಾಗಿ ಅವತರಿಸಿದಂತಿದ್ದರು. ಇವರು ಕೀರ್ತನಕಾರರಾಗಿದ್ದರಲ್ಲದೆ ಉತ್ತಮ ಕವಿಗಳೂ ಆಗಿದ್ದರು. ಮಹಾರಾಷ್ಟ್ರಭಾಷೆಯಲ್ಲಿ ಕೆಲವು ಗ್ರಂಥಗಳನ್ನು ರಚಿಸಿರುವರು. ಇವರ ವಿಯೋಗದಿಂದ ಮಹಾರಾಷ್ಟ್ರ ದೇಶದ ವೀರಶೈವರಿಗೆ ದೊಡ್ಡ ಹಾನಿ ಸಂಭವಿಸಿತೆಂದು ಹೇಳಬಹುದು. ಈಕ್ಷಣಕ್ಕೆಗೆ ಉಪಾಯವಿಲ್ಲ. ಶ್ರೀ ಜಗದಾಚಾರ್ಯರು ಈ ಗುರುಭಕ್ತಪುಂಗವರ ಆತ್ಮಕ್ಕೆ ಕಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಆಟಿಗೆಗಳು

(Children's Toys)

ಲೇಖಕರು—ಶ್ರೀ ಎನ್.ಎಸ್. ನಾರಾಯಣಶಾಸ್ತ್ರಿ ಎಂ.ಎ.
ಮನಃಶಾಸ್ತ್ರಕಾಖೆ, ಮಹಾರಾಜಾ ಕಾಲೇಜು, ಮೈಸೂರು.

ಮಕ್ಕಳ ಮೇಲಿನ ಮಮತೆಯಿಂದ ಪ್ರತಿಯೊಬ್ಬರೂ ಅವುಗಳಿಗೆ ಎಂದಾದರೊಮ್ಮೆ ಆಟಿಗೆಗಳನ್ನು ಕೊಂಡು ಕೊಡುತ್ತಾರೆ. ಆನುಕೂಲಶ್ಯರು ವಿಶೇಷ ಬೆಲೆಬಾಳುವ ಆಟಿಗೆಗಳನ್ನು, ಬೆಲೆಯೇ ಮಮತೆಯ ಅಳತೆಯೋ ಅನ್ನುವಂತೆ ಕೊಂಡುಕೊಡುತ್ತಾರೆ ಉಳಿದವರು ಅನುಕೂಲಶ್ಯರ ಅನುಕರಣೆಯಲ್ಲಿ ತಮ್ಮ ಮಮತೆಯನ್ನು ಹೊರಗೆಡಹುತ್ತಾರೆ ಮಕ್ಕಳಿಗೆ ಸ್ವಾಭಾವಿಕವಾಗಿ ಆಟಿಗೆಗಳಲ್ಲಿ ಆಕರ್ಷಿಯಿದೆ. ತಂದೆತಾಯಿಗಳಿಗೆ ಅವುಗಳನ್ನು ಕೊಡಬೇಕೆಂಬ ಮಮತೆಯಿದೆ. ಇದನ್ನು ಕಂಡೇ ಕೆಲವರು ಹಣಸಿರಾಚಿಗಾ... ಕೆಲವು ಆಟಿಗೆಗಳಿಂದ ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಎಷ್ಟೇ ತೊಂದರೆಯಾದರೂ ಲಕ್ಷಿಸದೆ. ಹಣವ ಮೇಲಿನ ಆಕರ್ಷಿಯಿಂದ ಚಾತರ್ಕ ಆಟಿಗೆಗಳನ್ನ ತಯಾರು ಮಾಡಿ ಮಾರುತ್ತಿರುವರು ತಿಳುವಳಿಕೆಯಿಲ್ಲದ ತಂದೆತಾಯಿಗಳು ಅವುಗಳನ್ನೇ ಕೊಂಡುಕೊಡುವರು ಯಾವ ತೆರನಾದ ಆಟಿಗೆಗಳು ಯೋಗ್ಯವಾದುವು. ಮಕ್ಕಳ ಮನಸ್ಸಿನ ಬೆಳವಣಿಗೆಯು ಇವುಗಳಿಂದ ಹೇಗೆ ಉತ್ತೇಜನಗೊಳ್ಳುವುದು ಎಂಬುದನ್ನು ಪರಿಶೀಲಿಸಿದರೆ ಆಗ ಮಕ್ಕಳಿಗೆ ಯೋಗ್ಯವಾದ ಆಟಿಗೆಗಳನ್ನು ನಾವು ಆರಿಸಬಹುದು.

ಮಗುವು ಶಬ್ದವಿದ ಕೆಲವು ವಿನೋದಲ್ಲಿ ವಸ್ತುಗಳನ್ನು ಗಮನಿಸಿ ನೋಡುವ ಯೋಗ್ಯತೆಯನ್ನು ಪಡೆಯುತ್ತದೆ ಮೊದಲು ಸುತ್ತಲಿನ ಆಕರ್ಷಣರಹಿತವಾದ ಸನ್ನಿವೇಶದ ಪ್ರತ್ಯೇಕ ಕನ್ನ ತಾಯಿಮುಖವನ್ನು ಗಮನಿಸುವ ಯೋಗ್ಯತೆಯು ಮಗುವಿಗೆ ಒದಗುತ್ತದೆ ಈಗ ಕಣ್ಣಿನ ಸುತ್ತಲಿನ ವಸ್ತುಪಯೋಗಳನ್ನು ಬಿಗಿಹಿಡಿಯುವ ಯೋಗ್ಯತೆಯೂ ಮಗುವಿಗೆ ಬರುತ್ತದೆ ಅದುದರಿಂದ ಈ ಕಾಲದಲ್ಲಿ ಅದರ ಕಣ್ಣಿಗೆ ಭೀಲವಂತೆ ಬಣ್ಣಬಣ್ಣದ, ಪ್ರತಾಕಪೆಯಲ್ಲಿ ವಸ್ತುಗಳನ್ನು ತೊಟ್ಟಿಲಿನ ಮೇಲೆ ಅಡ್ಡವಂತೆ ಕಟ್ಟಬಹುದು ನಮ್ಮಲ್ಲಿ ಪೂರ್ವದಿಂದಲೂ ವಾಡಿಕೆಯಾಗಿದ್ದು. ಈಗ ನಾಗರಿಕರೆಂದೆನಿಸಿಕೊಂಡ ಈ ನಾಗರಿಕ ಹೆಣ್ಣುಮಕ್ಕಳ ಯಾಜಮಾನ್ಯವು ಬಂದಮೇಲೆ ಮಾಯವಾಗಿರುವ ಗಿಣಿಮಂಚವು ಅದಕ್ಕೆ ಅತ್ಯುತ್ತಮ ನಿದರ್ಶನ ಹೆಣ್ಣುಮಕ್ಕಳು ಇದನ್ನು ಸಾಧಾರಣವಾಗಿ ತಾವೇ ಮಾಡುತ್ತಿದ್ದರು. ಒಂದು ಹೌಕನೆಯ ಹಲಿಗೆಗೆ ಬಣ್ಣಬಣ್ಣದ ಬಟ್ಟೆಯನ್ನು ಹೊದಿಸಿ, ಅದಕ್ಕೆ ಬಣ್ಣಬಣ್ಣದ ಗಿಣಿಗಳನ್ನು ಮಾಡಿ, ನೇತುಹಾಕಿ, ಈ ವಂಚನೆಯನ್ನು ತೊಟ್ಟಿಲಿನ ಮೇಲೆ ಕಟ್ಟಿದ್ದರೆ ಮಗುವಿಗೆ ಗಮನವನ್ನು ಹತೋಟಿಗೆ ತರುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ

ಇನ್ನು ಕೆಲವು ಕಾಲವಾದ ಮೇಲೆ ಕೈಯಿಂದ ಗ್ರಹಣಮಾಡುವ ಯೋಗ್ಯತೆಯನ್ನು ಮಗುವು ಪಡೆಯುತ್ತದೆ. ಈ ಕಾಲದಲ್ಲಿ ಯಾವ ಪದಾರ್ಥವನ್ನಾದರೂ ಸರಿಯೆ, ಮಗುವು ಕೈಯ್ಯಲ್ಲಿ ಹಿಡಿದು ಬಾಯಿಗೆ ಒಯ್ಯುತ್ತದೆ ಇದು ಸ್ವಾಭಾವಿಕಗುಣ ಈ ಕಾಲದಲ್ಲಿ ಕೊಡುವ ಆಟಿಗೆಯೂ ಅನುಗುಣವಾಗಿರಬೇಕು ಪೂರ್ವದಲ್ಲಿ ಉಪಯೋಗಿಸುತ್ತಿದ್ದ ರಂಗಾಣಿಯು ಅತ್ಯುತ್ತಮವಾದುದು ಅದು ಗಟ್ಟಿಯಾಗಿರುತ್ತದೆ, ಮತ್ತು ಮಗುವು ಕಡಿದರೂ ಏನೂ ಅಪಾಯವಿಲ್ಲ ಈಗ ಕೊಡುವ ಆಟಿಗೆಗಳಲ್ಲಿ ಮೊನೆಚಾದ ಕೊನೆಗಳಿರಬಾರದು ಅದು ನುಡಾಸಾಗಿರಬೇಕು ಜೊಳೆಯುವಂತಿರಬೇಕು. ಈ ಎಲ್ಲ ಕಾರಣಗಳಿಂದ ಈ ಕಾಲಕ್ಕೆ ರಂಗಾಣಿಯೇ ಯೋಗ್ಯವಾದುದು ಗಿಲಿಗಿ ಅಥವಾ ಗಲಗಚ್ಚಿಯ ಶಬ್ದಮಾಡುವುದರಿಂದ ಇದನ್ನು ಕೆಲವು ಕಾಲವಾದನೆಂತೆ ಕೊಡಬಹುದು

ಸ್ಪರ್ಶವು ಮಗುವಿಗೆ ಮುಖ್ಯವಾದುದು. ಈ ಅನುಭವದ ಅನ್ವಿಭಾರದ ಮೇಲೆಯೇ ಮಕ್ಕಳ ಶಿಕ್ಷಣವು ಹೆಚ್ಚಾಗಿ ವ್ಯವಸ್ಥಿತವಾಗಿದೆ. ಬೆರಳನ್ನು ಅಡಿಸುವುದರಿಂದ ಮಗುವು ನಲಿಯುತ್ತದೆ. ಆದುದರಿಂದ ಆಟಿಗೆಯನ್ನು ಮಗುವು ಕೈಯ್ಯಲ್ಲಿ ಹಿಡಿದು ಆಡಿಸುವಂತಿರಬೇಕು ಸುಲಭವಾಗಿ ಮುರಿದು ಹೋಗಬಾರದು ಜಪಾನಿನ ಕಪೂರದ (ಸೆಲ್ಯುಲಾಯಿಡ್) ರಂಗಾಣಿ, ಗಿಲಿಗಿ ಇವು ಖಂಡಿತ ಬೇಡ ಮಗುವು ಆಟಿಗೆಯನ್ನು ಬಾಯಲ್ಲಿ ಇಟ್ಟುಕೊಳ್ಳುತ್ತಾದುದರಿಂದ ಅದು ಅಖಂಡವಾಗಿರಬೇಕು ಗೋಲಿ, ಸಾಣ್ಯಾ, ಗೋಟು ಅಡಿಕೆ ಮುಂತಾದ ಚಿಕ್ಕ ಪದಾರ್ಥಗಳನ್ನು ಈ ಕಾಲದಲ್ಲಿ ಮಗುವಿಗೆ ಕೊಡಬಾರದು. ಕೂದಲು ಅಥವಾ ಉಣ್ಣೆ ಎಂಟಿಸಿರುವ ಆಟಿಗೆಗಳನ್ನೂ ಕೊಡಬಾರದು. ಕೂದಲುಗಳನ್ನು ಕೆತ್ತುತಿಂದು ಮಕ್ಕಳಿಗೆ ಅಪಾಯವಾಗಿದೆ

ಮಗುವು ಸ್ವನ್ಯಾಪಾನವನ್ನು ಬಿಡುವ ಕಾಲದಲ್ಲಿ ಆಟಿಗೆ ಹೆಚ್ಚು ಬೇಕು ಈಗಾಗಲೇ ಮಗುವು ಅಂಬೆಗಾಲಿಡುವೆವರಿಂದ ಓಡಾಡಲು ಅನುಕೂಲವಾದ ಆಟಿಗೆ ಉತ್ತಮ ಬಣ್ಣದ ಚಂಡು ಈಗ ಸರಿಯಾದುದು ಕೆಲವು ವಿಲಕ್ಷಣವಾದ ಚೆಂಡನ್ನು ಮಕ್ಕಳಿಗೆ ತಂದು ಕೊಡುತ್ತಾರೆ ಈ ಚೆಂಡಿನ ಮೇಲೆ ಮನುಷ್ಯನ ಮುಖವನ್ನ ಚಿತ್ರಿಸಿರುತ್ತಾರೆ ಮಕ್ಕಳ ಗಮನವನ್ನು ಕಣ್ಣು ಕಿವಿ ಮುಂತಾದ ಸೂಕ್ಷ್ಮ ಅಕಾರಗಳನ್ನು ಗ್ರಹಿಸುವುದಿಲ್ಲ ಸ್ಪೂಜನೆ ಈಗ ಬೇಕಾದುದು ಈ ಚೆಂಡನ್ನು ಉದುಮಿದರೆ ಅದರಿಂದ ಶಿಳ್ಳೆಂದು ಶಬ್ದವಾಗಿ, ಆ ಮುಖದ ಚಕ್ರದ ಬಾಯಿಂದ ನಾಲಿಗೆಯು ಹೊರಕ್ಕೆ ಬರುತ್ತದೆ. ಈ ವಿಲಕ್ಷಣಗಳನ್ನು ಕಂಡು ಮಗುವು ವಿಶೇಷವಾಗಿ ಹೆದರುವುದು ದೊಡ್ಡವರಿಗೆ ನಗುವು ಒರವ ಆಟಿಗೆಯು ಮಕ್ಕಳಿಗೆ ಯೋಗ್ಯವೆಂದು ಹೇಳಲಾಗುವುದಿಲ್ಲ

ದೊಡ್ಡವರು ತಮ್ಮ ಸೌಕರ್ಯಕ್ಕಾಗಿ ಕೆಲವು ಆಟಿಗೆಗಳನ್ನು ಮಕ್ಕಳಿಗೆ ತಂದುಕೊಡುತ್ತಾರೆ ಮಕ್ಕಳು ಬಾಯಲ್ಲಿ ಸದಾ ಚೀಪುವುದಕ್ಕೆ ಅನುಕೂಲವಾಗಿರುವ ರಬ್ಬರಿನ ತುಡುವನ್ನು ಅನೇಕರು ಕೊಡುತ್ತಾರೆ ಇದರಿಂದ ಆಗುವನ್ನು ಹಾಲಿಯು ಬೇರೆ ಯಾವುದರಿಂದಲೂ ಆಗುವುದಿಲ್ಲ ಮಗುವೇನೋ ಅದನ್ನು ಚೀಪುತ್ತಾ ನಿದ್ದೆನೂಡುತ್ತದೆ ತಾಯಿಗೆ ಕೆಲಸ ಮಾಡಲು ಅನುಕೂಲ ಆದರೆ ಮಗುವಿನ ಆರೋಗ್ಯವು ಇದರಿಂದ ಕೆಡುತ್ತದೆಂಬುದನ್ನ ಅನೇಕ ವೈದ್ಯರು ಹೇಳುತ್ತಾರೆ

ಸುಮಾರು ಒಂದೂವರೆ ಎರಡು ವರ್ಷದ ಮಗುವಿಗೆ ಬೇರೆ ಆಟಿಗೆಗಳು ಬೇಕು ಈಗ ಆಟಿಗೆಗಳು ಬುದ್ಧಿಶಕ್ತಿಯೂ ಮನಸ್ಸೂ ಬೆಳೆಯುವುದಕ್ಕೆ ಅನುಕೂಲವಾಗಿರಬೇಕು ಹುಡುಗರಿಗೂ ಹುಡುಗಿಯರಿಗೂ ಬೇರೆಬೇರೆ ಆಟಿಗೆಗಳನ್ನು ಕೊಡುವುದು ಉತ್ತಮ ತೊಪ್ಪೆತೊಪ್ಪೆಯಾಗಿದ್ದರೂ ತಿರುಪತಿಯ ಚಂದನ ಬೊಂಬೆಯು ಈಗ ಯೋಗ್ಯವಾದುದು ಅದರೆ ಈ ಬೊಂಬೆಗಳಲ್ಲಿ ಮುಖ್ಯವಾದ ಅವಯವಗಳು ಎಂದರೆ ಕೈ, ಕಾಲು, ತಲೆ ಇವುಗಳನ್ನು ತಿರುಗಿಸುವ ಹಾಗೆ ಕೀಲುಗಳಿರಬೇಕು ಈಗಾಗಲೇ ಮಗುವಿನ ಕಲ್ಪನಾಶಕ್ತಿಯು ವೃದ್ಧಿಯಾಗುತ್ತದೆ ಕೈ ಕಾಲುಗಳನ್ನು ನಿಧವಿಧವಾಗಿ ತಿರುಗಿಸಿ 'ಈಗ ಓಡುತ್ತಿದೆ, ಈಗ ಆಳುತ್ತಿದೆ' ಎಂಬುದಾಗಿ ಮಗುವು ಬೊಂಬೆಯನ್ನು ವರ್ಣಿಸುತ್ತದೆ ಓಡಾಡಲು ಅನುಕೂಲವಾಗಿರುವ ಆಟಿಗೆಗಳೂ ಈಗ ಬೇಕು—ಸಣ್ಣ ಕೈಗಾಡಿ, ಕೋಲು ಕುದುರೆ, ಬಸವ ಇವೆ ನುಂತಾದುವು.

ಸುಮಾರು ಮೂರು ವರ್ಷ ಮೇಲ್ಪಟ್ಟನಂತರ ಮಗುವಿಗೆ ಬೇಕಾದ ಆಟಿಗೆಗಳೇ ಬೇರೆ ಪೋಣಿಸಲು ಅನುಕೂಲವಾದ ಬಣ್ಣದ ಮಣಿಗಳು, ಬಣ್ಣದ ಕಡ್ಡಿಗಳು, ಮರದ ಹೌಕನೆಯ ಘನಗಳು ಇವು ಮುಖ್ಯವಾದುವು ಮಣಿಗಳನ್ನು ಪೋಣಿಸುವುದು ಮಕ್ಕಳಿಗೆ ಉತ್ತಮವಾದ ಕ್ರೀಡೆ ಇದರಲ್ಲಿ ಸ್ವಾಭಾವಿಕವಾಗಿ ವರ್ಣಜ್ಞಾನವೂ ಎಣಿಕೆಯೂ ಗೊತ್ತಾಗುತ್ತದೆ ಕಡ್ಡಿಗಳನ್ನು ಬೇರೆಬೇರೆ ಆಕಾರಗಳಲ್ಲಿ ಇಡುವುದರಿಂದ ಕಲ್ಪನಾಸಾಮರ್ಥ್ಯವು ಬೆಳೆಯುತ್ತದೆ ಮರದ ಘಂಡಿಗಳು ಬಹು ಮುಖ್ಯವಾದುವು ಇವುಗಳನ್ನು ಒಂದರಮೇಲೊಂದಿಟ್ಟು ವಿಧವಿಧವಾದ ಗೋಪುರಗಳನ್ನು ಕಟ್ಟುವುದರಿಂದ, ಬುದ್ಧಿಶಕ್ತಿಯಲ್ಲಿ ಮುಖ್ಯವಾದ, ಪದಾರ್ಥಗಳ ಪರಸ್ಪರ ಸಂಬಂಧದ ಗ್ರಹಿಕೆಯು ಮಗುವಿಗೆ ಒರುತ್ತದೆ ಇವುಗಳಿಗೆ ಆಪಾಯವಿಲ್ಲದ ಬಣ್ಣಾಗಳನ್ನು ಹಚ್ಚಿದ್ದರೆ ಇನ್ನೂ ಅನುಕೂಲ ವಿಧವಿಧವಾದ ಗೋಪುರಗಳನ್ನು ಕಟ್ಟಿ ಮಗುವು ಅವುಗಳನ್ನು ಕೆಡಿಸಿ ಪುನಃ ಕಟ್ಟುವುದು. ಇದೂ ಮುಖ್ಯ. ಆಟಿಗೆಗಳನ್ನು ಹೀಗೆ ಬದಲಾಯಿಸುವ ಸೌಲಭ್ಯವಿರಬೇಕು. ಹಿಂದೆ ಹೇಳಿದಂತೆ ಮಗುವಿಗೆ ಪ್ರಪಂಚವಾದ ಕಲ್ಪನಾಶಕ್ತಿಯಿದೆ. ಗಾಳಿಗೋಪುರ ಕಟ್ಟುವುದರಲ್ಲಿ ಅವನು ನಿಸ್ಸೀಮ. ಆದರೆ ಈ ಕಾಲದಲ್ಲಿ ಅದಕ್ಕೆ ಸ್ವಲ್ಪ ಆಧಾರ ಬೇಕು. ಈ ವಯಸ್ಸಿನಲ್ಲಿ ವಿಶ್ವಾಸಗಳ ಬೊಂಬೆಗಳನ್ನು ಕೊಡಬೇಕು. ಆದರೆ ಅವು ಒಡೆದು ಹೋಗುವ, ಸುಟ್ಟು ಹೋಗುವ ಜಪಾನಿ ಸೆಲ್ಯುಲಾಯಿಡಿನ ಬೊಂಬೆಗಳಾಗಿರಬಾರದು. ಮರದಲ್ಲಿ ಮಾಡಿ, ಸ್ಕೂಲವಾದ ರೂಪವನ್ನು ಹೊಂದಿ, ಮುಖ್ಯವಾದ ಒಂದೆರಡು ಕೀಲುಗಳನ್ನು ಹೊಂದಿರಬೇಕು. ಕೈ, ಕಾಲು, ಬಾಲ ಮುಂತಾದುವುಗಳನ್ನು ತಿರುಗಿಸಿ ಪಾಣಿಯಲ್ಲಿ ಭಾವೋದ್ರೇಕವಾಗುವುದನ್ನು ಮಗುವು ಕಾಣುತ್ತದೆ. ಈ ತರದ ಆಟಿಗೆಗಳು ಮಕ್ಕಳಿಗೆ ಬಹಳ ಆನಂದದಾಯಕವಾದುವು. ಭಾವಶಿಕ್ಷಣಕ್ಕೆ ಬಹಳ ಉತ್ತಮವಾದುವು

ಕೆಲವು ಬೊಂಬೆಗಳಲ್ಲಿ, ಹೆಚ್ಚು ಹೆಚ್ಚು ಸಾದೃಶ್ಯವನ್ನು ಸಾಧಿಸುವುದಕ್ಕೋಸ್ಕರ, ಅಮುಕಿದರೆ ಕೂಗುವಂತೆ ಮಾಡಿರುತ್ತಾರೆ ಇಂತಹವುಗಳನ್ನು ದೊಡ್ಡವರು ತಮಗಾಗಿ ಚುನಾಯಿಸಿಕೊಳ್ಳುತ್ತಾರೆ ಮಗುವಿಗೆ ಸಾದೃಶ್ಯವು ಅಸ್ಟು ಬೇಡ— ಇಲ್ಲದಿದ್ದರೂ ಒಳ್ಳೆಯದೇ! ಮರದ ನಾಯಿಯನ್ನು ಹಿಡಿದುಕೊಂಡು ಮಗುವು ತಾನು 'ಬೌವ್' ಎಂದು ಕೂಗುತ್ತದೆ. ಅದು ಬಿಟ್ಟು, ಆ ನಾಯಿಯ ಹೊಟ್ಟೆಯಲ್ಲಿ ಯಂತ್ರ ವಿಟ್ಟು ಅಮುಕಿದರೆ ಕೂಗುವ ಹಾಗೆ ಇದ್ದರೆ, ತಾನು ಕೂಗಿದಮ್ಮ ಸುಖವು ಮಗುವಿಗೆ ಬರುವುದಿಲ್ಲ ಸ್ವಲ್ಪ ಆಶ್ಚರ್ಯವೇನೋ ಉಂಟಾಗುತ್ತದೆ ಆದರೆ ಈ ಯಂತ್ರಗಳೆಲ್ಲ ಸುಲಭವಾಗಿ ಹಾಳಾಗಬೇಕಷ್ಟೆ! ಆಗ ಮಗುವಿಗೆ ಅಶಾಭಂಗನಾಗುತ್ತದೆ ಹೆಚ್ಚು ಹೆಚ್ಚು ನಿಜೋಕಾದ ಆಟಿಗೆಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ತೊಂದರೆ ಮಾಡಬಹುದು ಸಾದೃಶ್ಯವನ್ನು ಸಾಧಿಸಲು ಮಗುವಿಗೆ ಕಲ್ಪನಾಶಕ್ತಿಯಿದೆ

ಏದುವರ್ಷದ ಮಗುವಿಗೇ ಬೇರೆಯ ಆಟಿಗೆಗಳು ಬೇಕು ಈಗ ಅವನು ವಿಶ್ವಾಮಿತ್ರನಂತೆ ತನ್ನದೇ ಪ್ರಪಂಚವನ್ನು ಸೃಷ್ಟಿಸುವ ಯೋಗ್ಯತೆಯನ್ನು ಹೊಂದಿದ್ದಾನೆ ಆದರೆ ಅವನ ಪ್ರಪಂಚದಲ್ಲಿ ವಸ್ತುಗಳು ಅವನು ಹೇಳಿದಹಾಗೆ ಕೇಳಬೇಕು ಸಾದೃಶ್ಯವು ಹೆಚ್ಚು ಬೇಡವೆಂದಮಾತ್ರಕ್ಕೆ ಸಾದೃಶ್ಯವನ್ನೇ ಬಿಡಬೇಕೆಂದಲ್ಲ ರೈಲುಗಾಡಿಯನ್ನು ತಂದುಕೊಟ್ಟರೆ. ಮಗುವು ಇಂಜಿನ್ ನಡೆಸುವವನಾಗುತ್ತಾನೆ ರೈಲು ಸರಿಯಾಗಿ ಓಡುವಂತಿರಬೇಕು ಹಿಂದಿನ ಗಾಡಿಗಳಲ್ಲಾ ಪ್ರತಿಸಲವೂ ಉರುಳಬೀಳುತ್ತಿದ್ದರೆ ಮಗುವಿಗೆ ರೇಗುತ್ತದೆ ನಮಗೆ ಅದು ಆಟವೆಂದು ತೋರಿದರೂ, ಅದರಲ್ಲಿ ಮುಳಗಿರುವ ಮಗುವಿಗೆ ಆಟದಲ್ಲಿ ಹೆಚ್ಚು ವಿಶ್ವಾಸವಿದೆ. ಸಂಪೂರ್ಣ ಗಮನವಿಟ್ಟು, ಉದ್ಯೋಗಕ್ಕೆ ಅಂತಲೂ ಹೆಚ್ಚಿನ ಬೆಲೆಯನ್ನು ಮಗುವು ಆಟಕ್ಕೆ ಹೆಚ್ಚುವನು.

ಮರದಲ್ಲಿ ಮಾಡಿರುವ ನಿಧವಿಧವಾದ ತುಂಡುಗಳಿರುವ ಮನೆಕಟ್ಟುವ ಸಾಮಾನಿನ ಪೆಟ್ಟಿಗೆಯನ್ನು ಈಗ ಕೊಡಬಹುದು ಇದರಲ್ಲಿ ಏನು ತರಹದವು ಇವೆ. ಇಂಗ್ಲೀಷಿನಲ್ಲಿ ಈ ಪೆಟ್ಟಿಗೆಗಳಿಗೆ ಫ್ರಾಯೆಬ್ಬಿಲ್ಡಿನ ಇನಾಮು ಎನ್ನುತ್ತಾರೆ ಫ್ರಾಯೆಬ್ಬಿಲನು ಮಕ್ಕಳ ಶಿಕ್ಷಣಕ್ಕಾಗಿ ತನ್ನ ಜೀವಮಾನವನ್ನು ಕಳೆದ ಮಹಾವ್ಯಕ್ತಿ. ಇವನು ಮಕ್ಕಳಿಗೆ ಕೊಟ್ಟಿರುವ ಇನಾಮುಗಳು ಇವು. ಇವುಗಳ ಸಹಾಯದಿಂದ ವಿಧವಿಧವಾದ ಸುಂದರ ಮಂದಿರಗಳನ್ನು ಮಗುವು ಕಟ್ಟುತ್ತದೆ ಒದ್ದಿಶಕ್ತಿಯ ಬೆಳವಣಿಗೆಗೆ ಈ ಕಾಲದಲ್ಲಿ ಇದು ಉತ್ತಮ ಸಾಧನ. ಯಂತ್ರಗಳನ್ನು ಕಟ್ಟಲು ಅನುಕೂಲವಾದ ಮೆಕ್ಕಾನೋ ಪೆಟ್ಟಿಗೆಗಳನ್ನು ಇನ್ನೂ ವಯಸ್ಸಾದ— ಎಂಟು ವರ್ಷ ಮೇಲ್ಪಟ್ಟ— ಮಕ್ಕಳಿಗೆ ಕೊಡಬೇಕು.

ಹೊಸ ಆಟಿಗೆಯನ್ನು ಕೊಡುವಾಗ ಜಾಗರೂಕರಾಗಿರಬೇಕು ಪೆಟ್ಟಿಯಲ್ಲಿ ಕೊಂಡ ಆಟಿಗೆಯನ್ನು, ನವ್ಯ ಉತ್ಸಾಹದ ಭರದಿಂದ, ಮನೆಗೆ ಬಂದ ಒಡನೆಯೇ ಮಗುವಿನ ಮುಂದೆ ಚೆಲ್ಲಬಾರದು ನೋಡನವಾದುದು, ಅಕಸ್ಮಾತ್ ಶಬ್ದಮಾಡುವುದು— ಇಂತಹ ವಸ್ತುಗಳು ಮಕ್ಕಳಿಗೆ ಭಯಪ್ರಜ್ಞೋದಕವಾದುವು ಆಟಿಗೆಗಳನ್ನು ಸರಿಯಾಗಿ ಜೋಡಿಸಿ ಕೊಡಬೇಕು ಜಾಗದಲ್ಲಿ ಇಡುವ ಹಾಗೆ ಮಗುವಿಗೆ ತೋರಿಸಿಕೊಡಬೇಕು

ಆಟವಾದಮೇಲೆ ಚಲ್ಲಾಪಿಲ್ಲಿಯಾಗಿ ಆಟಿಗೆಗಳನ್ನು ಬಿಸಾಡಬಾರದು. ಭಾವೀ ಜೀವಮಾನದಲ್ಲಿ ಇರಬೇಕಾದ ಒಂದು ಶಿಸ್ತನ್ನು ಮಗುವು ಈಗ ಕಲಿಯುತ್ತದೆ. ಈಗ ನಮ್ಮ ದೇಶದಲ್ಲಿ ಮಕ್ಕಳಿಗೆ ಆಟಿಗೆಗಳಲ್ಲಿ ಸಿಪಾಯಿಗಳಿಗೆ ಜೊಂಬೆಗಳನ್ನು ಸೇರಿಸಿವುದು ಒಳ್ಳಿತು. ತಾನು ಸೇನಾನಾಯಕನೆಂದು ಭಾವಿಸಿ ಆ ಸಿಪಾಯಿಗಳ ಪಹಾಯದಿಂದ ಮಗುವು ಭಾರೀ ಕದನಗಳನ್ನು ಗೆಲ್ಲುವನು. ಹತ್ತು ವರ್ಷ ವಯಸ್ಸಾದಮೇಲೆ ನವ್ಯದೇಶದ ಪೂಜ್ಯ ತೆವಡಿದ ಭಾರತಮಾತೆ, ಮಹಾತ್ಮಾಜೀ ಮುಂತಾದವರುಗಳ ಪ್ರತಿಕೃತಿಗಳನ್ನು ಬೊಂಬೆಗಳಲ್ಲಿ ಸೇರಿಸಿ, 'ತಾನು ಭಾರತಾಂಬೆಯ ಪುತ್ರ, ತಾನು ಎಲ್ಲರಿಗೂ ಮೇಲು' ಎಂಬ ಭಾವನೆಯು ಮೊದಲಿಂದ ಬೆಳೆದು ಒರಲು ಸಹಾಯ ಮಾಡಬೇಕು.

ಶ್ರೀ ಜಗದ್ಗುರು ವಿಶ್ವಾರಾಧ್ಯಪ್ರಸೀದತು

ಜಯಂತೀ ಮಹೋತ್ಸವ, ಕುಂದಗೋಳ

ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಹಾಗೂ ಪಂಡಿತಾರಾಧ್ಯರ ಜಯಂತೀ ಮಹೋತ್ಸವವು ತಾ॥ ೧೭-೨-೩೯ನೇ ದಿವಸ ಕುಂದಗೋಳದ ಬೃಹನ್ಮಠದಲ್ಲಿ ಶ್ರೀ ಚರಮೂರ್ತಿ ಸ್ವಾಮಿಗಳವರ ನೇತೃತ್ವದಲ್ಲಿ ಅತ್ಯಂತವೈಭವದಿಂದ ನೆರವೇರಿತು.

ಪದ್ಧತಿಯಂತೆ ಮೊದಲು ಶ್ರೀ ವಿಶ್ವಾರಾಧ್ಯರ ಹಾಗೂ ಪಂಡಿತಾರಾಧ್ಯರ ಭಾವಚಿತ್ರಕ್ಕೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ವೈದಿಕರಿಂದ ಸಾಂಗವಾಗಿ ನೆರವೇರಿತು. ಅನಂತರ ಆಚಾರ್ಯರ ಭಾವಚಿತ್ರಗಳನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿ ಪುರದ ಬೀದಿಗಳಲ್ಲಿ ಉತ್ಸವವನ್ನು ಹೊರಡಿಸಲಾಯಿತು. ಉತ್ಸವದ ಮುಂದೆ ಅನೇಕ ವಾದ್ಯಗಳು ಭೋರ್ಗರೆಯುತ್ತಿದ್ದವು. ಭಜನಾ ಸಂಘದವರು ಆಚಾರ್ಯರ ಸ್ತೋತ್ರಮಾಡುತ್ತ ವ್ಯವಸ್ಥೆಯಿಂದ ಸಾಗಿದ್ದರು. ಆಚಾರ್ಯರ ಜಯಘೋಷವು ಗಗನಮಂಡಲವನ್ನು ವ್ಯಾಪಿಸುತ್ತಿತ್ತು. ಸುಮಂಗಲೆಯರು ಮಂಗಳಕಲಶಗಳನ್ನು ಹಿಡಿದುಕೊಂಡು ಉತ್ಸವದ ಹಿಂದೆ ಸಾಗಿದ್ದರು. ಈ ದೃಶ್ಯವು ಎಂತಹ ನಾಸ್ತಿಕನಲ್ಲಿಯೂ ಆಸ್ತಿಕಭಾವನೆಯನ್ನು ನೆಲಸುವಂತೆ ನಾಡುತ್ತಿತ್ತು. ಜನರು ತಮ್ಮ ತಮ್ಮ ಮನೆಗಳಮುಂದೆ ಫಲ ಪುಷ್ಪಗಳನ್ನು ಭಕ್ತಿಯಿಂದ ಅರ್ಪಿಸುತ್ತಿದ್ದರು. ಉತ್ಸವವು ಹಿರಿಯಮಠಕ್ಕೆ ಮುಟ್ಟಬೇಕಾಗಿದ್ದರೆ ರಾತ್ರಿ ೧೨ ಘಂಟೆ ಯಾಯಿತು.

ಅನಂತರ ಕೂಡಿದ ಸಭೆಯಲ್ಲಿ ವೇ॥ ಶಿತಿಕಂಠ ಶಾಸ್ತ್ರಿಗಳು ಹಿರೇಮಠ ಹಂಚಿನಾಳ ಇವರು ಜಗದಾಚಾರ್ಯರ ಜಯಂತಿ ಮಹೋತ್ಸವದ ಬಗ್ಗೆ ಮಾತನಾಡುತ್ತ ಸಕಲ ಸಜ್ಜನರೂ ಮಾರ್ಗವಲಂಬಿಗಳು ಮತಸ್ಥಾಪಕರ ಜಯಂತಿಯನ್ನು ಭಕ್ತಿಯಿಂದ ಆಚರಿಸಿ ಮಾನವ ಜನ್ಮವನ್ನು ಸಾಫಲ್ಯಮಾಡಿಕೊಳ್ಳುವದೇ ಮಾನವನ ಅಂತಿಮ ಧ್ಯೇಯವೆಂದು ವಿವರಿಸಿದಮೇಲೆ ಹಿರೇಹಂಚಿನಾಳ ಶ್ರೀ ಸಿದ್ಧಲಿಂಗಸ್ವಾಮಿಗಳವರು ಶಿವರಾತ್ರಿಯ ಮಹತ್ವವನ್ನೂ ಲಿಂಗಪೂಜೆಯ ಮಹಿಮೆಯನ್ನೂ ಬೋಧಿಸಿದರು. ಆಚಾರ್ಯರ ಪ್ರಸಾದವು ವಿನಿಯೋಗಿಸಲ್ಪಟ್ಟನಂತರ ಜಗದ್ಗುರುಗಳ ಜಯಜಯಕಾರದೊಡನೆ ಸಭೆಯು ಸಮಾಪ್ತಿಗೊಂಡಿತು.

ಶಿವಯೋಗಯ್ಯ ಹಿರೇಮಠ

ಭೂಸನೂರು

ನಿಜಾಮ ಇಲಾಖೆಪೈಕಿ ಭೂಸನೂರಲ್ಲಿ ಶ್ರೀರೇಣುಕಾಚಾರ್ಯರ ಭಜನಾ ಸಂಘದವರ ವತಿಯಿಂದ ಶಿವರಾತ್ರಿ ದಿವಸಳುಭಯ ಜಗದಾಚಾರ್ಯರ ಜಯಂತಿ ಮಹೋತ್ಸವವು ವೈಭವದಿಂದ ನೆರವೇರಿತು ಗುರುಬಸವ ಶಿವಾಚಾರ್ಯ ಕಟ್ಟಾಚ್ಯಕ್ಷರು ಭೂಸನೂರು ಇವರ ಅಧ್ಯಕ್ಷತೆಯಲ್ಲಿ ಶ್ರೀ ವೀರಭದ್ರ ದೇವಾಲಯದಲ್ಲಿ ಪ್ರಚಂಡ ಸಭೆಯು ಕೂಡಿತು. ಭಜನೆಯ ಮಂಡಲಿಯವರು ಸ್ತ್ರೋತ್ರಪಠದಲ್ಲಿ ಗುರುಸ್ತೋತ್ರವನ್ನು ಮಾಡಿದರು. ಅಧ್ಯಕ್ಷರು ವಿದ್ವತ್ಪೂರ್ಣ ಭಾಷಣವನ್ನು ಮಾಡಿದಮೇಲೆ ಶ್ರೀ॥ ಪ॥ ಬ॥ ಪಟ್ಟಾಧ್ಯಕ್ಷರಾದ ಮಳ್ಳಸ್ವಾಮಿಗಳ ಗಂಭೀರ ವ್ಯಾಖ್ಯಾನವು ನಡೆಯಿತು. ಬಳಿಕ ಮ॥ ರಾ॥ ಚನ್ನಬಸಪ್ಪ ಮಾವಿನಾಳ ಇವರು ವರ್ಣಾಶ್ರಮದ ಬಗ್ಗೆ ಮನೋಹರವಾಗಿ ಭಾಷಣ ಮಾಡಿದರು. ಅಮೇಲೆ ಶ್ರೇಯುತ ವಿಶಲರಾವ ಹೆಡ್ಡಮಾಸ್ತರರು ಶಿವನಾಮದ ಮಹತ್ವವನ್ನು ಹೇಳಿ ಗುರುಕ್ಕಪೆಯನ್ನು ಯಾವಪ್ರಕಾರ ಸಂಪಾದನೆ ಮಾಡಬೇಕೆಂಬ ವಿಷಯವನ್ನು ಪ್ರತಿಪಾದಿಸಿ ಸಭಿಕರನ್ನ ಆನಂದಗೊಳಿಸಿದರು. ಅನಂತರ ಅಧ್ಯಕ್ಷರು ವರ್ಣಾಶ್ರಮಧರ್ಮ ಸಂಬಂಧವಾಗಿ ಶಾಸ್ತ್ರಾಧಾರದಿಂದ ಸ್ಫೂರ್ತಿದಾಯಕ ಭಾಷಣ ಮಾಡಿದರು. ಆಗ್ಗೆ ಸಭೆಯ ಜನರು ಮತಸ್ಥಾಪಕ ಶ್ರೀ ಜಗದ್ಗುರು ಪಂಚಾಚಾರ್ಯರು ಹಾಕಿಕೊಟ್ಟ ವರ್ಣಾಶ್ರಮಗಳನ್ನು ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ರಕ್ಷಣೆ ಮಾಡಬೇಕೆಂದು ಸರ್ವರೂ ಅನುಮೋದಿಸಿದರು. ತರುವಾಯ ಶ್ರೀರೇಣುಕಾಚಾರ್ಯ ಭಜನಾಸಂಘದ ಸೆಕ್ರೆಟರಿಯಾದ ವೀರಣ್ಣಪ್ಪಶಾಂತಪ್ಪ ಮಂಟಗಿ ಇವರು ಅಧ್ಯಕ್ಷರ ಆಭಾರ ಮನ್ನಿಸಿದಮೇಲೆ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಯಾಯಿತು.

ರೇವಪ್ಪವೀರಪ್ಪ, ಭೂಸನೂರು

ಶ್ರೀ ಜಗದಾಚಾರ್ಯರ ಜಯಂತಿಯೂ, ಶಿವದೀಕ್ಷಾ ಸಮಾರಂಭವೂ, ಮಹಾಕೂಟಕ್ಷೇತ್ರ.

ಕನಕಗಿರಿ ಬೃಹನ್ಮಠದ ಶ್ರೀ॥ ಪ॥ ಬ॥ ಪಂಚಾಕ್ಷರದೇವಾಚಾರ್ಯರು ಅಗೋಲಿ, ಗುಳೇದಗುಡ್ಡ ಮೊದಲಾದ ಗ್ರಾಮಗಳ ಶಿಷ್ಯಮಂಡಳಿಯಿಂದೊಡಗೂಡಿ ಶಿವರಾತ್ರಿ ದಿವಸ ಮಹಾಕೂಟಕ್ಷೇತ್ರಕ್ಕೆ ದಯಮಾಡಿಸಿದ್ದರು. ಸಾಯಂಕಾಲ ೫ ಘಂಟೆಗೆ ಶ್ರೀಗಳ ಶಿವಲಿಂಗಾನುಷ್ಠಾನವು ಪ್ರಾರಂಭವಾಗಿ ರಾತ್ರಿ ೮ ಘಂಟೆಗೆ ಸಮಾಪ್ತಿಯಾಯಿತು ಅಮೇಲೆ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಮೂರ್ತಿಗಳಿಗೆ ಶ್ರೀ ರುದ್ರಾಭಿಷೇಕವು ಮಾಡಲ್ಪಟ್ಟಿತು. ಒಳಕಲಯಾ ಜಗದ್ಗುರುಗಳ ಅಷ್ಟೋತ್ತರ ಶತನಾಮಾವಳಪೂರ್ವಕ ಬಿಲ್ವಧಾರಣವಾಯಿತು ಅಮೇಲೆ ಮಂಗಲಾರತಿಯಾಗಿ ಸಮಾಪ್ತಿಗೊಡನಂತರ ಸರ್ವ ಭಕ್ತಮಾಹೇಶ್ವರ ಸ್ತ್ರೀಪುರುಷರು ತೀರ್ಥಪ್ರಸಾದವನ್ನು ಸ್ವೀಕರಿಸಿದರು. ವೇ॥ ಗುಳೇದಗುಡ್ಡದ ಮುರುಘಯ್ಯನವರು ರಾತ್ರಿ ೩ ಘಂಟೆಯವರೆಗೂ ಶಿವಯೋಗದ ಮಹಿಮೆಯನ್ನೂ ಜಗದ್ಗುರುಗಳ ಚರಿತ್ರವನ್ನೂ ಬೋಧಿಸಿದರು. ತಾ॥ ೧೮-೨-೩೯ ನೇ ಶನಿವಾರ ಶಿವದೀಕ್ಷಾಕಾರ್ಯವು ಪ್ರಾರಂಭಿಸಲ್ಪಟ್ಟಿತು ಗುರುಭಕ್ತಿಧುರಂಧರರಾದ ಶ್ರೀಮಾ॥ ಅಣ್ಣಾಜಗೌಡರು ಪೊ॥ ಪಾ॥ ಅಗೋಲಿ ಇವರು ಪತ್ನೀಸಹಿತರಾಗಿ ಶಿವದೀಕ್ಷಾಸಂಸ್ಕಾರವನ್ನು ಹೊಂದಿದರು ತಪೋನಿಷ್ಠರಾದ ಕನಕಗಿರಿ ಶ್ರೀಗಳಿಂದ ಶಿವದೀಕ್ಷಾಸಂಸ್ಕಾರಹೊಂದಿ ಗುರುಗಳ ಅನುಗ್ರಹಕ್ಕೆ ಪಾತ್ರರಾದ ವಾಟೆಲರೇ ಧನ್ಯರು ಇವರೇ ನಿಜವಾದ ಗುರುಪುತ್ರರು ಗುರುಭಕ್ತಿನಿಷ್ಠರಾದ ಶ್ರೀಮಾ॥ ಅಗೋಲಿ ವಾಟೆಲರಿಗೂ, ಇವರ ಕುಟುಂಬವರ್ಗಕ್ಕೂ ಶ್ರೀಜಗದ್ಗುರು ಕೃಪಾಕಟಾಕ್ಷವು ಸಕಲ ಸಂಪದಗಳನ್ನು ಕೊಟ್ಟು ಅನುಗ್ರಹಿಸಲೆಂದು ಪ್ರಾರ್ಥಿಸುವ.

ಎಸ್. ಎಸ್. ಕೆಂಭಾವಿ, ಗುಳೇದಗುಡ್ಡ

ಕನಕಗಿರಿ ಶ್ರೀಗಳವರ ಅನುಷ್ಠಾನಸಮಾಪ್ತಿ

ಪುಷ್ಯ ಶುದ್ಧ ೩ ಗುರುವಾರದಿವಸ ಕನಕಗಿರಿ ಬೃಹತ್ಮಠದ ಶ್ರೀ॥ ವ॥ ಬ॥ ಪಂಚಾಕ್ಷರದೇವಾಚಾರ್ಯರ ಶಿವಲಿಂಗಾನುಷ್ಠಾನ ಸಮಾಪ್ತಿಕಾರ್ಯವು ಒಳ್ಳೆ ವಿಜೃಂಭಣೆಯಿಂದ ಸಮಾಪ್ತಿಯಾಯಿತು ಆ ದಿವಸ ಬ್ರಾಹ್ಮ ಮುಹೂರ್ತದಲ್ಲಿ ತಪಸ್ವಿಗಳ ಇಷ್ಟಲಿಂಗಕ್ಕೆ ರುದ್ರಾಭಿಷೇಕವು ನಡೆಯಿತು. ತರುವಾಯ ಮಹಾಪಾದಪೂಜೆಯು ನಡೆಯಿತು ಪಾದಪೂಜೆಗೆ ಗುರುಭಕ್ತಧುರೀಣರಾದ ಶ್ರೀ ಹಿರೇಳಪ್ಪ ಗುಗ್ಗಳಸೆಟ್ಟಿಯವರು ಕುಳಿತಿದ್ದರು. ಪರ್ಣಾಯವೇರವು ಕೈಲಾಸಸಭೆಯಂತೆ ಒಪ್ಪುತ್ತಿತ್ತು. ಶ್ರೀಗಳು ಜಟಾಧಾರಿಗಳಾಗಿದ್ದರಿಂದ ಶ್ರೀ ಶಂಕರನಂತೆ ಶೋಭಿಸುತ್ತಿದ್ದರು. ಶ್ರೀಜಗದ್ಗುರು ರೇಣುಕಾಚಾರ್ಯರ ಅಷ್ಟೋತ್ತರಶತನಾಮಾವಳಪೂರ್ವಕ ಶ್ರೀಗಳ ಪಾದಕ್ಕೆ ಬಿಲ್ವಧಾರಣವು ನಡೆದು ಸರ್ವಭಕ್ತಮಾಹೇಶ್ವರರು ತೀರ್ಥಪ್ರಸಾದವನ್ನು ತೆಗೆದುಕೊಂಡನಂತರ ಗಣಾರಾಧನೆಯು ನಡೆಯಿತು. ಶ್ರೀಗಳ ಅನುಷ್ಠಾನ ಕಾರ್ಯದಲ್ಲಿ ಇಲ್ಲಿಯ ಶ್ರೀಮಂತರಾದ ಶ್ರೇಯುತ ದೊಡ್ಡ ಬಸಪ್ಪನವರು ಭಕ್ತರ ಈ ಮಹೋದಯರು ಅನುಷ್ಠಾನದ ಆದಿಯಿಂದ ಜಂತ್ಯದವರೆಗೆ ಖರ್ಚನ್ನು ವಹಿಸಿ ಶ್ರೀ ಗುರುಸೇವೆಯನ್ನು ಭಕ್ತಿಪೂರ್ವಕ ಮಾಡಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾದರು ಈ ಕಾರ್ಯದಲ್ಲಿ ಶ್ರೇಯುತ ಹಿರೇಳಪ್ಪ, ಗುಗ್ಗಳಶೆಟ್ಟಿ, ನಾಗಪ್ಪ ತೆಗ್ಗಿನಮನಿ, ಸಂಗಪ್ಪ ಕಡಿ, ಪರಪ್ಪ ಚೆನ್ನಂಗಿ ಮೊದಲಾದ ಸಮಸ್ತ ಭಕ್ತಮಂಡಳಿಯವರು ಭಾಗಿಗಳಾಗಿ ಧನ್ಯಜೀವಿಗಳಾದರು. ಪ್ರಭಾಪೋಷಣಕ್ಕಾಗಿ ಅಗೋಲಿ ಅಣ್ಣಾಜಗೌಡರು ೧೦೦ ರೂ ಸಮರ್ಪಿಸಿದರು

ರಾಜೋಪರಮಾ ಬಿಲ್ವಂಕೊಂಡಿಮಠ, ಸೆಕ್ರೆಟರಿ, ಶ್ರೀ ವೀರಶೈವ ವಾಚನಾಲಯ, ಕನಕಗಿರಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ದುಃಖವಾರ್ತೆ

ಶಿವಮೊಗ್ಗಾ ತಿ॥ ಹಾರನಹಳ್ಳಿ ನಿವಾಸಿಗಳಾದ ಯಜಮಾ॥ ಜವೆಳಗುರುಬಸಪ್ಪನವರು ಕಳೆದ ತಾ 11-2-39 ನೇ ಶನಿವಾರ ತಮ್ಮ 84 ನೆಯ ವಯಸ್ಸಿನಲ್ಲಿ ಶಿವಸಾನ್ನಿಧ್ಯವನ್ನೈದಿದರು ಈ ಮಹೋದಯರು ಗುರುಲಿಂಗಜಂಗಮ ಸೇವಾನಿರತರೂ ಸದಾಚಾರನಿಷ್ಠರೂ ಧರ್ಮಕಾರ್ಯಪ್ರವರ್ತಕರೂ ಆಗಿದ್ದರು. ಇವರು ಈ ಹಿಂದೆ ಗ್ರಾಮಾಧ್ಯಕ್ಷಪದವಿಯನ್ನಲಂಕರಿಸಿದ್ದು, ಅನೇಕ ಜನೋಪಕ್ಕಾರಕಾರ್ಯಗಳನ್ನು ಮಾಡಿ ಯಶಸ್ವಿಗಳಾಗಿದ್ದರು. ಇವರನ್ನಳಿದು ಯಾವ ಸಾರ್ವಜನಿಕ ಸಾಮಾಜಿಕಕಾರ್ಯಗಳೂ, ಪಂಚಾಯತಿಗಳೂ ಗ್ರಾಮದಲ್ಲಿಯೂ, ಸುತ್ತು ಮತ್ತಣ ಪ್ರದೇಶಗಳಲ್ಲಿಯೂ ನಡೆಯುತ್ತಿರಲಿಲ್ಲ ಬಡವರೆಂದರೆ ಇವರಿಗೆ ಬಹು ಕನಿಕರ ಧರ್ಮಾರ್ಥವಾಗಿ ಎಷ್ಟೋ ಲಗ್ನಗಳನ್ನು ನಡೆಯಿಸಿದರು. ದೊಡ್ಡ ಜಮೀನಾದಾರರೂ, ಶ್ರೀಮಂತರೂ ಆಗಿದ್ದರೂ, ಬಹು ರಾಡಂಬರವಿಲ್ಲದೆ ಸಭ್ಯಗೃಹಸ್ಥರಂದೆನಿಸಿ ಬಾಳಿ ಜೀವಿತಕಾಲವನ್ನು ಕಳೆದರು ಪ್ರಾಚೀನ ಧರ್ಮಪದ್ಧತಿಗಳನ್ನನುಸರಿಸಿ ಆಚರಿಸಿ, ತೋರಿಸಿ, ಕೀರ್ತಿಯನ್ನು ಪಡೆದ ಮಹಾಶಯರಲ್ಲಿ ಇವರು ಒಬ್ಬರಾಗಿದ್ದರು ಶ್ರೀರಂಭಾಪುರೀಜಗದ್ಗುರುಗಳವರು ಆಗಮಿಸಿದ ಕಾಶದಲ್ಲಿ ತಮ್ಮ ವಿಶಾಲವಾದ ಗೃಹವನ್ನು ಬಟ್ಟುಕೊಟ್ಟು, ಸುಮಾರು ಒಂದೂವರೆ ತಿಂಗಳವರೆಗೂ ಮಹಾಪಾದಸೇವೆಯನ್ನು ಮಾಡಿ ಧನ್ಯರಾದರು ಈ ಭಾಗ್ಯವಂತರಿಗೆ ವೃದ್ಧ ಧರ್ಮಪತ್ನಿಯರೂ, ಗಂಡುಹೆಣ್ಣುಮಕ್ಕಳೂ ಮೊಮ್ಮಕ್ಕಳೂ ವಿಶೇಷವಾಗಿರುವರು. ಇವರು ಕಳೆದ ತಾ॥ 10-2-39 ನೇ ಶುಕ್ರವಾರ ರಾತ್ರಿ ಭೋಜನಾನಂತರ ಸುಖವಾಗಿ ಮಲಗಿ ನಿದ್ರಿಸಿ ಪದ್ಧತಿಯಂತೆ ಬೆಳಗಿನಜಾವದಲ್ಲೆದ್ದು ಹೊರಕ್ಕೆ ಬಂದು ಪುನಃ ಒಳಕ್ಕೆ ಹೋಗುವಷ್ಟರಲ್ಲಿಯೇ ಸ್ವಲ್ಪ ದೇಹಾಲಸ್ಯವಾದಂತಾಯಿತು. ಹೀಗಾದರೂ ಲಿಂಗ ಪೂಜಾದಿಗಳಿಗೆ ಭಂಗಬಾರದಂತೆ ಸಾಂಗವಾಗಿ ನೆರವೇರಿಸಿ ಜನರೊಂದಿಗೆ ಮಾತನಾಡುತ್ತಿದ್ದಹಾಗೆಯೇ ನಿಶ್ಯಬ್ದತೆಪಡೆದರು ಅನಂತರ ಅಲ್ಲಿ ನೆರೆದಿದ್ದ ಜಂಗಮ ಸಂದೋಹಕ್ಕೂ ಬಡಬಗ್ಗರಿಗೂ ಕೈ॥ ಯಜಮಾನರ ಮಕ್ಕಳೂ, ಮೊಮ್ಮಕ್ಕಳೂ, ಸಹ ಯಥಾರೀತಿ ದಾನಧರ್ಮಗಳನ್ನು ಮಾಡಿದರು. ಇದಕ್ಕೆ ಪಂಬಂಧವಾಗಿ ಕಳೆದ ತಿಂಗಳು ೧೫ನೆಯ ತಾರೀಖಿನ ಪ್ರಾತಃಕಾಲ ರುದ್ರಾಭಿಷೇಕವೂ, ಮಧ್ಯಾಹ್ನ ಗುರುಪಾದ ಪೂಜೆಯೂ, ಪ್ರಮಥ ಗಣಾರಾಧನೆಯೂ ಸಕ ಇವರ ದ್ವಿತೀಯ ಪುತ್ರರಾದ ಮ॥ ರಾ॥ ಮುದ್ದೀರಪ್ಪನವರ ಹಾಗೂ, ಮೊಮ್ಮಕ್ಕಳಾದ ಮ॥ ರಾ॥ ರುದ್ರಪ್ಪನವರ ನೇತೃತ್ವದಲ್ಲಿ ಅತಿವಿಜೃಂಭಣೆಯಿಂದ ಜರುಗಿದವು. ಈ ಸಮಾರಂಭದಲ್ಲಿ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ಕಾರ್ಯಕರ್ತೃಗಳಿಂದ ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು ಕೈ॥ ಗುರುಬಸಪ್ಪನವರ ವಿಯೋಗದಿಂದಿವರ ಕುಟುಂಬವರ್ಗದವರಿಗುಂಟಾಗಿರುವ ದುಃಖವನ್ನು ಪರಮಾತ್ಮನು ಶಮನಗೊಳಿಸಲೆಂದೂ ಮೃತರ ಆತ್ಮಕ್ಕೆ ಶಾಂತಿಯನ್ನಿಯಲೆಂದೂ ಅನನ್ಯ ಭಾವದಿಂದ ಪ್ರಾರ್ಥಿಸುವ, ಓರ್ವ ಗ್ರಾಮನಿವಾಸಿ.

ಆಟಿಗೆಗಳು

(Children's Toys)

ಲೇಖಕರು—ಶ್ರೀ॥ ಎನ್.ಎಸ್. ನಾರಾಯಣಶಾಸ್ತ್ರಿ ಎಂ.ಎ.
ಮನಃಶಾಸ್ತ್ರ ಶಾಖೆ, ಮಹಾರಾಜಾ ಕಾಲೇಜು, ಮೈಸೂರು.

ಮಕ್ಕಳ ಮೇಲಿನ ಮಮತೆಯಿಂದ ಪ್ರತಿಯೊಬ್ಬರೂ ಅವುಗಳಿಗೆ ಎಂದಾದರೊಮ್ಮೆ ಆಟಿಗೆಗಳನ್ನು ಕೊಂಡು ಕೊಡುತ್ತಾರೆ. ಅನುಕೂಲಸ್ಥರು ವಿಶೇಷ ಬೆಲೆಬಾಳುವ ಆಟಿಗೆಗಳನ್ನು, ಬೆಲೆಯೇ ಮಮತೆಯ ಅಳತೆಯೋ ಅನ್ನುವಂತೆ ಕೊಂಡುಕೊಡುತ್ತಾರೆ ಉಳಿದವರು ಅನುಕೂಲಸ್ಥರ ಅನುಕರಣೆಯಲ್ಲಿ ತಮ್ಮ ಮಮತೆಯನ್ನು ಹೊರಗೆಡಹುತ್ತಾರೆ ಮಕ್ಕಳಿಗೆ ಸ್ವಾಭಾವಿಕವಾಗಿ ಆಟಿಗೆಗಳಲ್ಲಿ ಆಶೆಯಿದೆ; ತಂದೆತಾಯಿಗಳಿಗೆ ಅವುಗಳನ್ನು ಕೊಡಬೇಕೆಂಬ ಮಮತೆಯಿದೆ. ಇದನ್ನು ಕಂಡೇ ಕೆಲವರು ಹಣಸಿರಾಚಿಗರು. ಕೆಲವು ಆಟಿಗೆಗಳಿಂದ ಮಕ್ಕಳ ಮಾನಸಿಕ ಪಟ್ಟು ದೈಹಿಕ ಬೆಳವಣಿಗೆಗೆ ಎಷ್ಟೋ ತೊಂದರೆಯಾದದ್ದೂ ಉಂಟಷ್ಟೆ. ಹಣದ ಮೇಲಿನ ಆಶೆಯಿಂದ ಅತಿತಕ್ಕ ಆಟಿಗೆಗಳನ್ನು ತಯಾರು ಮಾಡಿ ಮಾರುತ್ತಿರುವರು. ತಿಳುವಳಿಕೆಯಿಲ್ಲದ ತಂದೆತಾಯಿಗಳು ಅವುಗಳನ್ನೇ ಕೊಂಡುಕೊಡುವರು. ಯಾವ ತೆರನಾದ ಆಟಿಗೆಗಳು ಯೋಗ್ಯವಾದುವು. ಮಕ್ಕಳ ಮನಸ್ಸಿನ ಬೆಳವಣಿಗೆಯು ಇವುಗಳಿಂದ ಹೇಗೆ ಉತ್ತೇಜನಗೊಳ್ಳುವುದು ಎಂಬುದನ್ನು ಪರಿಶೀಲಿಸಿದರೆ, ಆಗ ಮಕ್ಕಳಿಗೆ ಯೋಗ್ಯವಾದ ಆಟಿಗೆಗಳನ್ನು ನಾವು ಆರಿಸಬಹುದು.

ಮಗುವು, ಹುಟ್ಟಿದ ಕೆಲವು ದಿನಗಳಲ್ಲಿ ವಸ್ತುಗಳನ್ನು ಗಮನಿಸಿ ನೋಡುವ ಯೋಗ್ಯತೆಯನ್ನು ಪಡೆಯುತ್ತದೆ ಮೊದಲು ಸುತ್ತಲಿನ ಆರ್ಥರಹಿತವಾದ ಸನ್ನಿವೇಶದ ಹಿನ್ನೆಲೆಯಲ್ಲಿ ತನ್ನ ತಾಯಮುಖವನ್ನು ಗಮನಿಸುವ ಯೋಗ್ಯತೆಯು ಮಗುವಿಗೆ ಬರುತ್ತದೆ. ಈಗ ಕಣ್ಣಿನ ಸುತ್ತಮುತ್ತಲಿನ ಮಾಂಸಖಂಡಗಳನ್ನು ಬಿಗಿಹಿಡಿಯುವ ಯೋಗ್ಯತೆಯು ಮಗುವಿಗೆ ಬರುತ್ತದೆ ಆದುದರಿಂದ ಈ ಕಾಲದಲ್ಲಿ ಆದರ ಕಣ್ಣಿಗೆ ಬೀಳುವಂತೆ ಬಣ್ಣಬಣ್ಣದ, ಪ್ರಕಾಶವುಳ್ಳ ವಸ್ತುಗಳನ್ನು ತೊಟ್ಟಿಲಿನ ಮೇಲೆ ಆಡುವಂತೆ ಕಟ್ಟಬಹುದು. ನಮ್ಮಲ್ಲಿ ಪೂರ್ವದಿಂದಲೂ ವಾಡಿಕೆಯಾಗಿದ್ದು, ಈಗ ನಾಗರಿಕರೆಂದೆನಿಸಿಕೊಂಡ ಆ ನಾಗರಿಕ ಹೆಣ್ಣುಮಕ್ಕಳ ಯಾಜಮಾನ್ಯವು ಬಂದಮೇಲೆ ಮಾಯವಾಗಿರುವ **ಗಿಣಿಮಂಚವು** ಆದಕ್ಕೆ ಅತ್ಯುತ್ತಮ ನಿದರ್ಶನ ಹೆಣ್ಣುಮಕ್ಕಳು ಇದನ್ನು ಸಾಧಾರಣವಾಗಿ ತಾವೇ ಮಾಡುತ್ತಿದ್ದರು. ಒಂದು ಹೌಕನೆಯ ಹಲಿಗೆಗೆ ಬಣ್ಣಬಣ್ಣದ ಬಟ್ಟೆಯನ್ನು ಹೊದಿಸಿ, ಅದಕ್ಕೆ ಬಣ್ಣಬಣ್ಣದ ಗಿಣಿಗಳನ್ನು ಮಾಡಿ, ನೇತುಹಾಕಿ, ಈ ಮಂಚವನ್ನು ತೊಟ್ಟಿಲಿನ ಮೇಲೆ ಕಟ್ಟಿದ್ದರೆ, ಮಗುವಿಗೆ ಗಮನವನ್ನು ಹತ್ತೋಟಿಗೆ ತರುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ.

ಇನ್ನು ಕೆಲವು ಕಾಲವಾದ ಮೇಲೆ ಕೈಯಿಂದ ಗ್ರಹಣಮಾಡುವ ಯೋಗ್ಯತೆಯನ್ನು ಮಗುವು ಪಡೆಯುತ್ತದೆ. ಈ ಕಾಲದಲ್ಲಿ ಯಾವ ಪದಾರ್ಥವನ್ನಾದರೂ ಸರಿಯೆ, ಮಗುವು ತೈಯ್ಯಲ್ಲಿ ಹಿಡಿದು ಬಾಯಿಗೆ ಒಯ್ಯುತ್ತದೆ. ಇದು ಸ್ವಾಭಾವಿಕಗುಣ. ಈ ಕಾಲದಲ್ಲಿ ಕೊಡುವ ಆಟಿಗೆಯೂ ಅನುಗುಣವಾಗಿರಬೇಕು. ಪೂರ್ವದಲ್ಲಿ ಉರಯೋಗಿಸುತ್ತಿದ್ದ **ರಂಗಾಣಿಯು** ಅತ್ಯುತ್ತಮವಾದುದು. ಅದು ಗಟ್ಟಿಯಾಗಿರುತ್ತದೆ, ಮತ್ತು ಮಗುವು ಕಡಿದರೂ ಏನೂ ಅಪಾಯವಾಗುವುದಿಲ್ಲ ಈಗ ಕೊಡುವ ಆಟಿಗೆಗಳಲ್ಲಿ ಮೊನೆಚಾದ ಕೊನೆಗಳಿರಬಾರದು. ಅದು ನುಣುಪಾಗಿರಬೇಕು. ಹೊಳೆಯುವಂತಿರಬೇಕು. ಈ ಎಲ್ಲ ಕಾರಣಗಳಿಂದ ಈ ಕಾಲಕ್ಕೆ ರಂಗಾಣಿಯೇ ಯೋಗ್ಯವಾದುದು **ಗಿಲಿಗಿ** ಅಥವಾ ಗಿಲಗಚ್ಚಿಯು ಶಬ್ದಮಾಡುವುದರಿಂದ ಇದನ್ನು ಕೆಲವು ಕಾಲವಾದಮೇಲೆ ಕೊಡಬಹುದು

ಸ್ವಶಕ್ತಿಯು ಮಗುವಿಗೆ ಮುಖ್ಯವಾದುದು. ಈ ಅನುಭವದ ಅಸ್ತಿಭಾನದ ಮೇಲೆಯೇ ಮಕ್ಕಳ ಶಿಕ್ಷಣವು ಹೆಚ್ಚಾಗಿ ವ್ಯವಸ್ಥಿತವಾಗಿದೆ. ಬೆರಳನ್ನು ಆಡಿಸುವುದರಿಂದ ಮಗುವು ನಲಿಯುತ್ತದೆ. ಆದುದರಿಂದ ಆಟಿಗೆಯನ್ನು ಮಗುವು ಕೈಯ್ಯಲ್ಲಿ ಹಿಡಿದು ಆಡಿಸುವಂತಿರಬೇಕು. ಸುಲಭವಾಗಿ ಮುರಿದು ಹೋಗದಾರದು. ಜಪಾನಿನ ಕಪೂರದ (ಸೆಲ್ಯುಲಾಯಿಡ್) ರಂಗಾಣಿ, ಗಿಲಗಿ ಇವು ಖಂಡಿತ ದೇಹ. ಮಗುವು ಆಟಿಗೆಯನ್ನು ಬಾಯಲ್ಲಿ ಇಟ್ಟುಕೊಳ್ಳುತ್ತಾದುದರಿಂದ ಅದು ಅಖಂಡವಾಗಿರಬೇಕು. ಗೋಲಿ, ನಾಣ್ಯ, ಗೋಟು ಅಡಿಕೆ ಮುಂತಾದ ಚಿಕ್ಕ ಪದಾರ್ಥಗಳನ್ನು ಈ ಕಾಲದಲ್ಲಿ ಮಗುವಿಗೆ ಕೊಡಬಾರದು. ಕೂದಲು ಅಥವಾ ಉಣ್ಣೆ ಅಂಟಿಸಿರುವ ಆಟಿಗೆಗಳನ್ನೂ ಕೊಡಬಾರದು. ಕೂದಲನ್ನು ಕೆತ್ತುತಿಂದು ಮಕ್ಕಳಿಗೆ ಅಪಾಯವಾಗಿದೆ

ಮಗುವು ಸ್ವನ್ಮಪಾನವನ್ನು ಬಿಡುವ ಕಾಲದಲ್ಲಿ ಆಟಿಗೆ ಹೆಚ್ಚು ಬೇಕು. ಈಗಾಗಲೇ ಮಗುವು ಅಂಬೆಗಾಲಿಡುವುದರಿಂದ ಓಡಾಡಲು ಅನುಕೂಲವಾದ ಆಟಿಗೆ ಉತ್ತಮ. **ಬಣ್ಣದ ಚೆಂಡು** ಈಗ ಸರಿಯಾದುದು. ಕೆಲವರು ವಿಲಕ್ಷಣವಾದ ಚೆಂಡನ್ನು ಮಕ್ಕಳಿಗೆ ಕಂದು ಕೊಡುತ್ತಾರೆ ಈ ಚೆಂಡಿನ ಮೇಲೆ ಮನುಷ್ಯನ ಮುಖವನ್ನ ಚಿತ್ರಿಸಿರುತ್ತಾರೆ ಮಕ್ಕಳ ಗಮನವು ಕಣ್ಣು ಕಿವಿ ಮುಂತಾದ ಸೂಕ್ಷ್ಮ ಆಕಾರಗಳನ್ನು ಗ್ರಹಿಸುವುದಿಲ್ಲ. ಸ್ಕೂಲಿನೆ ಈಗ ಬೇಕಾದುದು ಈ ಚೆಂಡನ್ನು ಅದುಮಿದರೆ ಅದರಿಂದ ಶಬ್ದವಾಗಿ, ಆ ಮುಖದ ಚಕ್ರದ ಬಾಯಿಂದ ನಾಲಿಗೆಯು ಹೊರಕ್ಕೆ ಬರುತ್ತದೆ. ಈ ವಿಲಕ್ಷಣಗಳನ್ನು ಕಂಡು ಮಗುವು ವಿಶೇಷವಾಗಿ ಹೆದರುವುದು. ದೊಡ್ಡವರಿಗೆ ನಗುವು ಬರುವ ಆಟಿಗೆಯು ಮಕ್ಕಳಿಗೆ ಯೋಗ್ಯನೆಂದು ಹೇಳಲಾಗುವುದಿಲ್ಲ.

ದೊಡ್ಡವರು ತಮ್ಮ ಸೌಕರ್ಯಕ್ಕಾಗಿ ಕೆಲವು ಆಟಿಗೆಗಳನ್ನು ಮಕ್ಕಳಿಗೆ ತಂದುಕೊಡುತ್ತಾರೆ ಮಕ್ಕಳು ಬಾಯಲ್ಲಿ ಸದಾ ಚೀಪುವುದಕ್ಕೆ ಅನುಕೂಲವಾಗಿರುವ ರಬ್ಬರಿನ ತುಡುವನ್ನು ಅನೇಕರು ಕೊಡುತ್ತಾರೆ ಇದರಿಂದ ಅಗುನ್ನುಪ್ಪಾನಿಯು ಬೇರೆ ಯಾವುದರಿಂದಲೂ ಆಗುವುದಿಲ್ಲ. ಮಗುವೆನೋ ಅದನ್ನು ಚೀಪುತ್ತಾ ನಿದ್ದೆಮಾಡುತ್ತದೆ. ತಾಯಿಗೆ ಕೆಲಸ ಮಾಡಲು ಅನುಕೂಲ ಆದರೆ ಮಗುವಿನ ಆರೋಗ್ಯವು ಇದರಿಂದ ಕೆಡುತ್ತದೆಂಬುದನ್ನು ಅನೇಕ ವೈದ್ಯರು ಹೇಳುತ್ತಾರೆ

ಸಮಾರು ಒಂದೂವರೆ ಎರಡು ವರ್ಷದ ಮಗುವಿಗೆ ಬೇರೆ ಆಟಿಗೆಗಳು ಬೇಕು ಈಗ ಆಟಿಗೆಗಳು ಬುದ್ಧಿಶಕ್ತಿಯೂ ಮನಸ್ಸೂ ಬೆಳೆಯುವುದಕ್ಕೆ ಅನುಕೂಲವಾಗಿರಬೇಕು. ಹುಡುಗರಿಗೂ ಹುಡುಗಿಯರಿಗೂ ಬೇರೆಬೇರೆ ಆಟಿಗೆಗಳನ್ನು ಕೊಡುವುದು ಉತ್ತಮ. **ತೊಪ್ಪೆತೊಪ್ಪೆಯಾಗಿದ್ದರೂ ತಿರುಪತಿಯ ಚೆಂದನೆ ಬೊಂಬೆಯು** ಈಗ ಯೋಗ್ಯವಾದುದು. ಆದರೆ ಈ ಬೊಂಬೆಗಳಲ್ಲಿ ಮುಖ್ಯವಾದ ಅವಯವಗಳು ಎಂದರೆ ಕೈ, ಕಾಲು, ತಲೆ ಇವುಗಳನ್ನು ತಿರುಗಿಸುವ ಹಾಗೆ ಕೀಲುಗಳಿರಬೇಕು ಈಗಾಗಲೇ ಮಗುವಿನ ಕಲ್ಪನಾಶಕ್ತಿಯು ವೃದ್ಧಿಯಾಗುತ್ತಿದೆ. ಕೈ ಕಾಲುಗಳನ್ನು ವಿಧವಿಧವಾಗಿ ತಿರುಗಿಸಿ 'ಈಗ ಹೊಡ್ತಿದೆ, ಈಗ ಒಳು ತ್ತಿದೆ' ಎಂಬುದಾಗಿ ಮಗುವು ಬೊಂಬೆಯನ್ನು ವರ್ಣಿಸುತ್ತದೆ ಓಡಾಡಲು ಅನುಕೂಲವಾಗಿರುವ ಆಟಿಗೆಗಳೂ ಈಗ ಬೇಕು—**ಸಣ್ಣ ಕೈಗಾಡಿ, ಕೋಲು ಕುದುರೆ, ಬಸವ** ಇವೆ ಮುಂತಾದುವು.

ಸುಮಾರು ಮೂರು ವರ್ಷ ಮೇಲ್ಪಟ್ಟನಂತರ ಮಗುವಿಗೆ ಬೇಕಾದ ಆಟಿಗೆಗಳೇ ಬೇರೆ ಪೋಣಿಸಲು ಅನುಕೂಲವಾದ ಬಣ್ಣದ **ಮಣಿಗಳು**, ಬಣ್ಣದ ಕಡ್ಡಿಗಳು, ಮರದ ಜೌಕನೆಯ **ಘನಗಳು** ಇವು ಮುಖ್ಯವಾದುವು. ಮಣಿಗಳನ್ನು ಪೋಣಿಸುವುದು ಮಕ್ಕಳಿಗೆ ಉತ್ತಮ ಬಾದ ಕ್ರೀಡೆ ಇದರಲ್ಲಿ ಸ್ವಾಭಾವಿಕವಾಗಿ ವರ್ಣಜ್ಞಾನವೂ ಎಣಿಕೆಯೂ ಗೊತ್ತಾಗುತ್ತದೆ. ಕಡ್ಡಿಗಳನ್ನು ಜೋರೆಬೇರೆ ಆಕಾರಗಳಲ್ಲಿ ಇಡುವುದರಿಂದ ಕಲ್ಪನಾಸಾಮರ್ಥ್ಯವು ಬೆಳೆಯುತ್ತದೆ. ಮರದ ತುಂಡುಗಳು ಅಷ್ಟು ಮುಖ್ಯವಾದುವು ಇವುಗಳನ್ನು ಒಂದರಮೇಲೊಂದಿಟ್ಟು ವಿಧವಿಧವಾದ ಗೋಪುರಗಳನ್ನು ಕಟ್ಟುವುದರಿಂದ, ಬುದ್ಧಿಶಕ್ತಿಯಲ್ಲಿ ಮುಖ್ಯವಾದ, ಪದಾರ್ಥಗಳ ಪರಸ್ಪರ ಸಂಬಂಧದ ಗ್ರಹಿಕೆಯು ಮಗುವಿಗೆ ಬರುತ್ತದೆ ಇವುಗಳಿಗೆ ಅಪಾಯವಿಲ್ಲದ ಬಣ್ಣಗಳನ್ನು ಹಚ್ಚಿದ್ದರೆ ಇನ್ನೂ ಅನುಕೂಲ. ವಿಧವಿಧವಾದ ಗೋಪುರಗಳನ್ನು ಕಟ್ಟುವುದು. ಇದೂ ಮುಖ್ಯ. ಆಟಿಗೆಗಳನ್ನು ಹೀಗೆ ಬದಲಾಯಿಸುವ ಸೌಲಭ್ಯವಿರಬೇಕು. ಹಿಂದೆ ಹೇಳಿದಂತೆ ಮಗುವಿಗೆ ಪ್ರಚಂಡವಾದ ಕಲ್ಪನಾಶಕ್ತಿಯಿದೆ. ಗಾಳಿಗೋಪುರ ಕಟ್ಟುವುದರಲ್ಲಿ ಅವನು ನಿಸ್ಸೀಮ. ಆದರೆ ಈ ಕಾಲದಲ್ಲಿ ಅದಕ್ಕೆ ಸ್ವಲ್ಪ ಆಧಾರ ಬೇಕು. ಈ ವಯಸ್ಸಿನಲ್ಲಿ ವ್ಯಾಡಿಗೆಗಳ ಬೊಂಬೆಗಳನ್ನು ಕೊಡಬೇಕು. ಆದರೆ ಅವು ಒಡೆದು ಹೋಗುವ, ಸುಟ್ಟು ಹೋಗುವ ಜಪಾನೀ ಸೆಲ್ಯುಲಾಯಿಡಿನ ಬೊಂಬೆಗಳಾಗಿರಬಾರದು. ಮರದಲ್ಲಿ ಮಾಡಿ, ಸ್ಥೂಲವಾದ ರೂಪವನ್ನು ಹೊಂದಿ, ಮುಖ್ಯವಾದ ಒಂದೆರಡು ಕೀಲುಗಳನ್ನು ಹೊಂದಿರಬೇಕು. ಕೈ, ಕಾಲು, ಬಾಲ ಮುಂತಾದುವುಗಳನ್ನು ತಿರುಗಿಸಿ ಪ್ರಾಣಿಯಲ್ಲಿ ಭಾವೋದ್ರೇಕವಾಗುವುದನ್ನು ಮಗುವು ಕಾಣುತ್ತದೆ. ಈ ತರದ ಆಟಿಗೆಗಳು ಮಕ್ಕಳಿಗೆ ಬಹಳ ಆನಂದದಾಯಕವಾದುವು. ಭಾವಲಕ್ಷಣಕ್ಕೆ ಬಹಳ ಉತ್ತಮವಾದುವು.

ಕೆಲವು ಬೊಂಬೆಗಳಲ್ಲಿ, ಹಚ್ಚು ಹೆಚ್ಚು ಸಾದೃಶ್ಯವನ್ನು ಸಾಧಿಸುವುದಕ್ಕೋಸ್ಕರ, ಅಮುಕಿದರೆ ಕೂಗುವಂತೆ ಮಾಡಿರುತ್ತಾರೆ ಇಂತಹವುಗಳನ್ನು ದೊಡ್ಡವರು ತಮಗಾಗಿ ಚುನಾಯಿಸಿಕೊಳ್ಳುತ್ತಾರೆ ಮಗುವಿಗೆ ಸಾಮ್ಯತೆಯು ಅಷ್ಟು ಬೇಡ— ಇಲ್ಲದಿದ್ದರೂ ಒಳ್ಳೆಯದೇ! ಮರದ ನಾಯಿಯನ್ನು ಹಿಡಿದುಕೊಂಡು ಮಗುವು ತಾನು 'ಬೊವ್' ಎಂದು ಕೂಗುತ್ತದೆ. ಅದು ಬಿಟ್ಟು, ಆ ನಾಯಿಯ ಹೊಟ್ಟೆಯಲ್ಲಿ ಯಂತ್ರವಿಟ್ಟು ಅಮುಕಿದರೆ ಕೂಗುವ ಹಾಗೆ ಇದ್ದರೆ, ತಾನು ಕೂಗಿದಷ್ಟು ಸುಖವು ಮಗುವಿಗೆ ಬರುವುದಿಲ್ಲ. ಸ್ವಲ್ಪ ಆಶ್ಚರ್ಯವೇನೋ ಉಂಟಾಗುತ್ತದೆ ಆದರೆ ಈ ಯಂತ್ರಗಳೆಲ್ಲ ಸುಲಭವಾಗಿ ಹಾಳಾಗಬೇಕಷ್ಟೆ! ಆಗ ಮಗುವಿಗೆ ಅಶಾಭಂಗವಾಗುತ್ತದೆ. ಹೆಚ್ಚು ಹೆಚ್ಚು ನಾಜೂಕಾದ ಆಟಿಗೆಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ತೊಂದರೆ ಮಾಡಬಹುದು. ಸಾದೃಶ್ಯವನ್ನು ಸಾಧಿಸಲು ಮಗುವಿಗೆ ಕಲ್ಪನಾಶಕ್ತಿಯಿದೆ.

ಎದುವರ್ಷದ ಮಗುವಿಗೇ ಬೇರೆಯ ಆಟಿಗೆಗಳು ಬೇಕು. ಈಗ ಅವನು ವಿಶ್ವಮಿತ್ರನಂತೆ ತನ್ನದೇ ಪ್ರಪಂಚವನ್ನು ಸೃಷ್ಟಿಸುವ ಯೋಗ್ಯತೆಯನ್ನು ಹೊಂದಿದ್ದಾನೆ ಆದರೆ ಅವನ ಪ್ರಪಂಚದಲ್ಲಿ ವಸ್ತುಗಳು ಅವನು ಹೇಳಿದಹಾಗೆ ಕೇಳಬೇಕು. ಸಾದೃಶ್ಯವು ಹೆಚ್ಚು ಬೇಡವೆಂದಮಾತ್ರಕ್ಕೆ ಸಾದೃಶ್ಯವನ್ನೇ ಬಿಡಬೇಕೆಂದಲ್ಲ ರೈಲುಗಾಡಿಯನ್ನು ತಂದುಕೊಟ್ಟರೆ. ಮಗುವು ಇಂಜಿನ್ ನಡೆಸುವನಾಗುತ್ತಾನೆ. ರೈಲು ಸರಿಯಾಗಿ ಓಡುವಂತಿರಬೇಕು. ಹಿಂದಿನ ಗಾಡಿಗಳೆಲ್ಲಾ ಪ್ರತಿಸಲ ಪ್ರಾ ಉರುಳಿಬೀಳುತ್ತಿದ್ದರೆ ಮಗುವಿಗೆ ರೇಗುತ್ತದೆ. ನಮಗೆ ಅದು ಆಟವೆಂದು ತೋರಿದರೂ, ಅದರಲ್ಲಿ ಮುಳುಗಿರುವ ಮಗುವಿಗೆ ಆಟದಲ್ಲಿ ಹೆಚ್ಚು ವಿಶ್ವಾಸವಿದೆ. ಸಂಪೂರ್ಣ ಗಮನವಿಟ್ಟು, ಉದ್ಯೋಗಕ್ಕೆ ಚಿತ್ತವೂ ಹೆಚ್ಚಿನ ಬೆಲೆಯನ್ನು ಮಗುವು ಆಟಕ್ಕೆ ಹಚ್ಚುವನು.

ಮರದಲ್ಲಿ ಮಾಡಿರುವ ನಿಧವಿಧವಾದ ತುಂಡುಗಳಿರುವ ಮನೆಕಟ್ಟುವ ಸಾಮಾನಿನ ಸೆಟ್ಟಿಗೆಯನ್ನು ಈಗ ಕೊಡಬಹುದು ಇದರಲ್ಲಿ ಏನು ತರಹದವು ಇವೆ. ಇಂಗ್ಲೀಷಿನಲ್ಲಿ ಈ ಸೆಟ್ಟಿಗೆಗಳಿಗೆ **ಫ್ರಾಯ್ಬೆಲ್ಲಿನ ಇನಾಮು** ಎನ್ನುತ್ತಾರೆ ಫ್ರಾಯ್ಬೆಲ್ಲನು ಮಕ್ಕಳ ಶಿಕ್ಷಣಕ್ಕಾಗಿ ತನ್ನ ಜೀವಮಾನವನ್ನು ಕಳೆದ ಮಹಾವ್ಯಕ್ತಿ. ಇವನು ಮಕ್ಕಳಿಗೆ ಕೊಟ್ಟರುವ ಇನಾಮುಗಳು ಇವು. ಇವುಗಳ ಸಹಾಯದಿಂದ ವಿಧವಿಧವಾದ ಸುಂದರ ಮಂದಿರಗಳನ್ನು ಮಗುವು ಕಟ್ಟುತ್ತದೆ ಬುದ್ಧಿಶಕ್ತಿಯ ಬೆಳವಣಿಗೆಗೆ ಈ ಕಾಲದಲ್ಲಿ ಇದು ಉತ್ತಮ ಸಾಧನ. ಯಂತ್ರಗಳನ್ನು ಕಟ್ಟಲು ಅನುಕೂಲವಾದ **ಮೆಕ್ಕಾನೋ** ಪೆಟ್ಟಿಗೆಗಳನ್ನು ಇನ್ನೂ ವಯಸ್ಸಾದ— ಎಂಟು ವರ್ಷ ಮೇಲ್ಪಟ್ಟ— ಮಕ್ಕಳಿಗೆ ಕೊಡಬೇಕು.

ಹೊಸ ಆಟಿಗೆಯನ್ನು ಕೊಡುವಾಗ ಜಾಗರೂಕರಾಗಿರಬೇಕು. ಪೆಟ್ಟಿಯಲ್ಲಿ ಕೊಂಡ ಆಟಿಗೆಯಾಗಲಿ, ನೆವ್ಯ ಉತ್ಸಾಹದ ಭರದಿಂದ, ಮನೆಗೆ ಬಂದ ಒಡನೆಯೇ ಮಗುವಿನ ಮುಂದೆ ಜೆಲ್ಲಾಬಾರದು ನೋಡನವಾದುದು, ಅಕಸ್ಮಾತ್ ಶಬ್ದಮಾಡುವುದು— ಇಂತಹ ವಸ್ತುಗಳು ಮಕ್ಕಳಿಗೆ ಭಯಪ್ರಚೋದಕವಾದುವು. ಆಟಿಗೆಗಳನ್ನು ಸರಿಯಾಗಿ ಹೊಡಿಸಿ ಗೊತ್ತಾದ ಮೇಲೆ ಮಗುವಿಗೆ ತೋರಿಸಿಕೊಡಬೇಕು

ಆಟವಾದಮೇಲೆ ಚಿಲ್ಲಾಪಿಲ್ಲೆಯಾಗಿ ಆಟಗೆಗಳನ್ನು ಬಿಸಾಡಿಬಾರದು ಭಾವೀ ಜೀವಮಾನದಲ್ಲಿ ಇರಬೇಕಾದ ಒಂದು ಶಿಸ್ತನ್ನು ಮಗುವು ಈಗ ಕಲಿಯುತ್ತದೆ ಈಗ ನಮ್ಮ ದೇಶದಲ್ಲಿ ನುಗ್ಗಳಿಗೆ ಆಟಗೆಗಳಲ್ಲಿ ಸಿಪಾಯಿಗಳ ಜೊಂಬೆಗಳನ್ನು ಸೇರಿಸುವದು ಒಳ್ಳೆಯದ ತಾನು ಸೇನಾನಾಯಕನೆಂದು ಭಾವಿಸಿ ಆ ಸಿಪಾಯಿಗಳ ಸಹಾಯದಿಂದ ಮಗುವು ಭಾರೀ ಕದನಗಳನ್ನ ಗೆಲ್ಲುವನು. ಹತ್ತು ವರ್ಷ ವಯಸ್ಸಾದಮೇಲೆ ನವ ದೇಶದ ಪೂಜ್ಯ ತೆವಡೆದ ಭಾರತಮಾತೆ, ಮಹಾತ್ಮಾಜೀ ಮುಂತಾದವರುಗಳ ಪ್ರತಿಕೃತಿಗಳನ್ನು ಜೊಂಬೆಗಳಲ್ಲಿ ಸೇರಿಸಿ, 'ತಾನು ಭಾರತಾಂಬೆಯ ಪುತ್ರ, ತಾನು ಎಲ್ಲರಿಗೂ ಮೇಲು' ಎಂಬ ಭಾವನೆಯು ಮೊದಲಿಂದ ಬೆಳೆದು ಒದಲು ಸಹಾಯ ಮಾಡಬೇಕು.

ಶ್ರೀ ಜಗದ್ಗುರು ವಿಶ್ವಾರಾಧ್ಯಪ್ರಸೀದತು

ಜಯಂತೀ ಮಹೋತ್ಸವ, ಕುಂದಗೋಳ

ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಹಾಗೂ ಪಂಡಿತಾರಾಧ್ಯರ ಜಯಂತೀ ಮಹೋತ್ಸವವು ತಾ॥ ೧೭ ೨-೩೮ ನೇ ದಿವಸ ಕುಂದಗೋಳದ ಬೃಹನ್ಮಠದಲ್ಲಿ ಶ್ರೀ ಚಂದ್ರಮೌಳಿ ಸ್ವಾಮಿಗಳವರ ನೇತೃತ್ವದಲ್ಲಿ ಅತ್ಯಂತವೈಭವದಿಂದ ನೆರವೇರಿತು

ಪದ್ಧತಿಯಂತೆ ಮೊದಲು ಶ್ರೀ ವಿಶ್ವಾರಾಧ್ಯರ ಹಾಗೂ ಪಂಡಿತಾರಾಧ್ಯರ ಭಾವಚಿತ್ರಕ್ಕೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ವೈದಿಕರಿಂದ ಸಾಂಗವಾಗಿ ನೆರವೇರಿತು. ಅನಂತರ ಆಚಾರ್ಯರ ಭಾವಚಿತ್ರಗಳನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿ ಪುರದ ಬೀದಿಗಳಲ್ಲಿ ಉತ್ಸವವನ್ನು ಹೊರಡಿಸಲಾಯಿತು ಉತ್ಸವದ ಮುಂದೆ ಅನೇಕ ವಾದ್ಯಗಳು ಭೋಗರ್ರೆಯುತ್ತಿದ್ದವು ಭಜನಾ ಸಂಘದವರು ಆಚಾರ್ಯರ ಸ್ತೋತ್ರಮಾಡುತ್ತ ವ್ಯವಸ್ಥೆಯಿಂದ ಸಾಗಿದ್ದರು ಆಚಾರ್ಯರ ಜಯಘೋಷವು ಗಗನಮಂಡಲವನ್ನು ವ್ಯಾಪಿಸುತ್ತಿತ್ತು. ಸುಮಂಗಲೆಯರು ಮಂಗಳಕಲಶಗಳನ್ನು ಹಿಡಿದುಕೊಂಡು ಉತ್ಸವದ ಹಿಂದೆ ಸಾಗಿದ್ದರು ಈ ದೃಶ್ಯವು ಎಂತಹ ನಾಸ್ತಿಕನಲ್ಲಿಯೂ ಆಸ್ತಿಕಭಾವನೆಯನ್ನು ನೆಲಸುವಂತೆ ನಾಡುತ್ತಿತ್ತು. ಜನರು ತಮ್ಮ ತಮ್ಮ ಮನೆಗಳಮುಂದೆ ಫಲಪುಷ್ಪಗಳನ್ನು ಭಕ್ತಿಯಿಂದ ಅರ್ಪಿಸುತ್ತಿದ್ದರು ಉತ್ಸವವು ಹಿರಿಯಮಠಕ್ಕೆ ಮುಟ್ಟಬೇಕಾಗಿದ್ದರೆ ರಾತ್ರಿ ೧೨ ಘಂಟೆ ಯಾಯಿತು.

ಅನಂತರ ಕೂಡಿದ ಸಭೆಯಲ್ಲಿ ವೇ॥ ಶಿತಿಕಂಠ ಶಾಸ್ತ್ರಿಗಳು ಹಿರೇಮಠ ಹಂಚಿನಾಳ ಇವರು ಜಗದಾಚಾರ್ಯರ ಜಯಂತಿ ಮಹೋತ್ಸವದ ಬಗ್ಗೆ ಮಾತನಾಡುತ್ತ ಸಕಲ ಸನಾತನ ಮಾರ್ಗಾವಲಂಬಿಗಳು ಮತಸ್ಥಾಪಕರ ಜಯಂತಿಯನ್ನು ಭಕ್ತಿಯಿಂದ ಆಚರಿಸಿ ಮಾನವ ಜನ್ಮವನ್ನು ಸಾಫಲ್ಯಮಾಡಿಕೊಳ್ಳುವದೇ ಮಾನವನ ಅಂತಿಮ ಧ್ಯೇಯವೆಂದು ವಿವರಿಸಿದಮೇಲೆ ಹಿರೇಹರ ಪೀಠದ ಶ್ರೀ ಸಿದ್ಧಲಿಂಗವರಿದೇವರು ಶಿವರಾತ್ರಿಯ ಮಹತ್ವವನ್ನೂ ಲಿಂಗಾಯಜೆಯ ಮಹಿಮೆಯನ್ನೂ ತೋರಿಸಿದರು ಆಚಾರ್ಯರ ಪ್ರಸಾದವು ವಿಸಿಯೋಗಿಸಲ್ಪಟ್ಟನಂತರ ಜಗದ್ಗುರುಗಳ ಜಯಜಯಕಾರದೊಡನೆ ಸಭೆಯು ಸಮಾಪ್ತಿಗೊಂಡಿತು.

ಶಿವಯೋಗಯ್ಯ ಹಿರೇಮಠ

ಭೂಸನೂರು

ನಿಜಾಮ ಇಲಾಖೆಪೈಕಿ ಭೂಸನೂರಲ್ಲಿ ಶ್ರೀರೇಣುಕಾಚಾರ್ಯರ ಭಜನಾ ಸಂಘದವರ ಪತಿಯಿಂದ ಶಿವರಾತ್ರಿ ದಿವಸಳುಛಯ ಜಗದಾಚಾರ್ಯರ ಜಯಂತಿ ಮಹೋತ್ಸವವು ವೈಭವದಿಂದ ನೆರವೇರಿತು ಗುರುಬಸವ ಶಿವಾಚಾರ್ಯ ಓಟ್ಟಾರ್ಯಧ್ಯಕ್ಷರು ಭೂಸನೂರು ಇವರ ಅಧ್ಯಕ್ಷತೆಯಲ್ಲಿ ಶ್ರೀ ವೀರಭದ್ರ ದೇವಾಲಯದಲ್ಲಿ ಪ್ರಚಂಡ ಸಭೆಯು ಕೂಡಿತು. ಭಜನೆಯ ಮಂಡಲಿಯವರು ಪ್ರಾರಂಭದಲ್ಲಿ ಗುರುಸ್ತೋತ್ರವನ್ನು ಮಾಡಿದರು. ಅಧ್ಯಕ್ಷರು ಪಿದ್ವತ್ಪೂರ್ಣ ಭಾಷಣವನ್ನು ಮಾಡಿದಮೇಲೆ ಶ್ರೀ॥ ಪ॥ ಬ॥ ಪಟ್ಟಾಧ್ಯಕ್ಷರಾದ ಮಲ್ಲಿಸ್ವಾಮಿಗಳ ಗಂಭೀರ ವ್ಯಾಖ್ಯಾನವು ನಡೆಯಿತು. ಬಳಿಕ ಮ॥ ರಾ॥ ಚನ್ನಬಸಪ್ಪ ಮಾವಿನಾಳ ಇವರು ವರ್ಣಾಶ್ರಮದ ಬಗ್ಗೆ ಮನೋಹರವಾಗಿ ಭಾಷಣ ಮಾಡಿದರು ಆಮೇಲೆ ಶ್ರೀಯುತ ವಿಶಲರಾವ ಹೆಡ್ಡ ಮಾಸ್ತರರು ಶಿವನಾಮದ ಮಹತ್ವವನ್ನು ಹೇಳಿ ಗುರುಕೃಪೆಯನ್ನು ಯಾವಪ್ರಕಾರ ಸಂಪಾದನ ಮಾಡಬೇಕೆಂಬ ವಿಷಯವನ್ನು ಪ್ರತಿಪಾದಿಸಿ ಸಭಿಕರನ್ನ ಆನಂದಗೊಳಿಸಿದರು. ಅನಂತರ ಅಧ್ಯಕ್ಷರು ವರ್ಣಾಶ್ರಮಧರ್ಮ ಸಂಬಂಧವಾಗಿ ಶಾಸ್ತ್ರಾಧಾರದಿಂದ ಸ್ಫೂರ್ತಿದಾಯಕ ಭಾಷಣ ಮಾಡಿದರು ಆಗ ಸಭೆಯ ಜನರು ಮತಸ್ಥಾಪಕ ಶ್ರೀ ಜಗದ್ಗುರು ಪಂಚಾಚಾರ್ಯರು ಹಾಕಿಕೊಟ್ಟ ವರ್ಣಾಶ್ರಮಗಳನ್ನು ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ರಕ್ಷಣೆ ಮಾಡಬೇಕೆಂದು ಸರ್ವರೂ ಅನುಮೋದಿಸಿದರು. ತರುವಾಯ ಶ್ರೀರೇಣುಕಾಚಾರ್ಯ ಭಜನಾಸಂಘದ ಸೆಕ್ರೆಟರಿಯಾದ ವೀರಣ್ಣಶಾಂತಪ್ಪ ಮಂಟಿಗ ಇವರು ಅಧ್ಯಕ್ಷರ ಆಭಾರ ಮನ್ನಿಸಿದಮೇಲೆ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಯಾಯಿತು.

ರೇವಪ್ಪವೀರಪ್ಪ, ಭೂಸನೂರು.

ಶ್ರೀ ಜಗದಾಚಾರ್ಯರ ಜಯಂತಿಯೂ, ಶಿವದೀಕ್ಷಾ ಸಮಾರಂಭವೂ, ಮಹಾಕೂಟಕ್ಷೇತ್ರ.

ಕನಕಗಿರಿ ಬೃಹನ್ಮಠದ ಶ್ರೀ॥ ಪ॥ ಬ॥ ಪಂಚಾಕ್ಷರದೇವಾಚಾರ್ಯರು ಅಗೋಲಿ, ಗುಳೇದಗುಡ್ಡ ಮೊದಲಾದ ಗ್ರಾಮಗಳ ಶಿಷ್ಯಮಂಡಲಿಯಿಂದೊಡಗೂಡಿ ಶಿವರಾತ್ರಿ ದಿವಸ ಮಹಾಕೂಟಕ್ಷೇತ್ರಕ್ಕೆ ದಯಮಾಡಿಸಿದ್ದರು. ಸಾಯಂಕಾಲ ೫ ಘಂಟೆಗೆ ಶ್ರೀಗಳ ಶಿವಲಿಂಗಾನುಷ್ಠಾನವು ಪ್ರಾರಂಭವಾಗಿ ರಾತ್ರಿ ೮ ಘಂಟೆಗೆ ಸಮಾಪ್ತಿಯಾಯಿತು ಆಮೇಲೆ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಮೂರ್ತಿಗಳಿಗೆ ಶಿ॥ ರುದ್ರಾಭಿಷೇಕವು ಮಾಡಲ್ಪಟ್ಟಿತು. ಬಳಿಕ ಆಯಾ ಜಗದ್ಗುರುಗಳ ಅಷ್ಟೋತ್ತರ ಶತನಾಮಾವಳಿಪೂರ್ವಕ ಬಿಲ್ವಧಾರಣವಾಯಿತು. ಆಮೇಲೆ ಮಂಗಲಾರತಿಯಾಗಿ ಸಮಾಪ್ತಿಗೊಂಡನಂತರ ಸರ್ವ ಭಕ್ತಮಾಹೇಶ್ವರ ಸ್ತೋಮರುವದು ತೀರ್ಥಪ್ರಸಾದವನ್ನು ಸ್ವೀಕರಿಸಿದರು ವೇ॥ ಗುಳೇದಗುಡ್ಡದ ಮುರುಘಯ್ಯನವರು ರಾತ್ರಿ ೩ ಘಂಟೆಯವರೆಗೂ ಶಿವಯೋಗದ ಮಹಿಮೆಯನ್ನೂ ಜಗದ್ಗುರುಗಳ ಚರಿತ್ರವನ್ನೂ ಜೋಡಿಸಿದರು ತಾ॥ ೧೪-೨-೩೮ ನೇ ಶನಿವಾರ ಶಿವದೀಕ್ಷಾಕಾರ್ಯವು ಪ್ರಾರಂಭಿಸಲ್ಪಟ್ಟಿತು ಗುರುಭಕ್ತಿಧುರಂಧರರಾದ ಶ್ರೀಮಾ॥ ಅಣ್ಣಾಜಿಗೌಡರು ಪೊ॥ ಪಾ॥ ಅಗೋಲಿ ಇವರು ಪತ್ನೀಸಹಿತರಾಗಿ ಶಿವದೀಕ್ಷಾಸಂಸ್ಕಾರವನ್ನು ಹೊಂದಿದರು. ತಪೋನಿಷ್ಠರಾದ ಕನಕಗಿರಿ ಶ್ರೀಗಳಿಂದ ಶಿವದೀಕ್ಷಾಸಂಸ್ಕಾರಹೊಂದಿ ಗುರುಗಳ ಅನುಗ್ರಹಕ್ಕೆ ಪಾತ್ರರಾದ ಪಾಟೀಲರೇ ಧನ್ಯರು ಇವರೇ ನಿಜವಾದ ಗುರುಪುತ್ರರು. ಗುರುಭಕ್ತಿನಿಷ್ಠರಾದ ಶ್ರೀಮಾ॥ ಅಗೋಲಿ ಪಾಟೀಲರಿಗೂ, ಇವರ ಕುಟುಂಬವರ್ಗಕ್ಕೂ ಶ್ರೀಜಗದ್ಗುರು ರೇಣುಕಾಚಾರ್ಯರು ಸಕಲ ಸಂಪದಗಳನ್ನು ಕೊಟ್ಟು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಎಸ್. ಎಸ್. ಕೆಂಭಾವಿ, ಗುಳೇದಗುಡ್ಡ

ಕನಕಗಿರಿ ಶ್ರೀಗಳವರ ಅನುಷ್ಠಾನಸಮಾಪ್ತಿ

ಪುಣ್ಯ ಶುದ್ಧ ೩ ಗುರುವಾರದಿವಸ ಕನಕಗಿರಿ ಬೃಹನ್ಮಠದ ಶ್ರೀ॥ ಪ॥ ಬ॥ ಪಂಚಾಕ್ಷರಶಿವಾಚಾರ್ಯರ ಶಿವಲಿಂಗಾನುಷ್ಠಾನ ಸಮಾಪ್ತಿಕಾರ್ಯವು ಒಳ್ಳೆ ವಿಜೃಂಭಣೆಯಿಂದ ಸಮಾಪ್ತಿಯಾಯಿತು ಆ ದಿವಸ ಬ್ರಾಹ್ಮಮುಹೂರ್ತದಲ್ಲಿ ತಪಸ್ವಿಗಳ ಇಷ್ಟಲಿಂಗಕ್ಕೆ ರುದ್ರಾಭಿಷೇಕವು ನಡೆಯಿತು ತರುವಾಯ ಮಹಾಪಾದಪೂಜೆಯು ನಡೆಯಿತು ಪಾದಪೂಜೆಗೆ ಗುರುಭಕ್ತಧುರೀಣರಾದ ಶ್ರೀ ಹಿರೇಅಪ್ಪ ಗುಗ್ಗಳಶೆಟ್ಟಿಯವರು ಕುಳಿತಿದ್ದರು. ಪರ್ಣಕುಟೀರವು ಕೈಲಾಸಸಭೆಯಂತೆ ಒಪ್ಪುತ್ತಿತ್ತು. ಶ್ರೀಗಳು ಜಟಾಧಾರಿಗಳಾಗಿದ್ದರಿಂದ ಶ್ರೀ ಶಂಕರನಂತೆ ಶೋಭಿಸುತ್ತಿದ್ದರು. ಶ್ರೀಜಗದ್ಗುರು ರೇಣುಕಾಚಾರ್ಯರ ಅಷ್ಟೋತ್ತರಶತನಾಮಾವಳಿಪೂರ್ವಕ ಶ್ರೀಗಳ ಪಾದಕ್ಕೆ ಬಿಲ್ವಧಾರಣವು ನಡೆದು ಸರ್ವಭಕ್ತಮಾಹೇಶ್ವರರು ತೀರ್ಥಪ್ರಸಾದವನ್ನು ತೆಗೆದುಕೊಂಡನಂತರ ಗಣಾರಾಧನೆಯು ನಡೆಯಿತು. ಶ್ರೀಗಳ ಅನುಷ್ಠಾನ ಕಾರ್ಯದಲ್ಲಿ ಇಲ್ಲಿಯ ಶ್ರೀಮಂತರಾದ ಶ್ರೀಯುತ ದೊಡ್ಡ ಬಸಪ್ಪನವರು ಭಕ್ತರ ಈ ಮಹೋದಯರು ಅನುಷ್ಠಾನದ ಅವಧಿಯಿಂದ ಅಂತ್ಯದವರೆಗೆ ಖರ್ಚನ್ನು ವಹಿಸಿ ಶ್ರೀ ಗುರುಸೇವೆಯನ್ನು ಭಕ್ತಿಪೂರ್ವಕ ಮಾಡಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾದರು. ಈ ಕಾರ್ಯದಲ್ಲಿ ಶ್ರೀಯುತ ಹಿರಪ್ಪ, ಗುಗ್ಗಳಶೆಟ್ಟಿ, ನಾಗಪ್ಪ ತೆಗ್ಗಿನವರು, ಸಂಗಪ್ಪ ಕಡಿ, ಪರಪ್ಪ ಚೆನ್ನಂಗಿ ಮೊದಲಾದ ಸಮಸ್ತ ಭಕ್ತಮಂಡಳಿಯವರು ಭಾಗಿಗಳಾಗಿ ಧನ್ಯಜೀವಿಗಳಾದರು. ಪ್ರಭಾಪೋಷಣಕ್ಕಾಗಿ ಅಗೋಲಿ ಅಣ್ಣಾಜಿಗೌಡರು ೧೦ ರೂ. ಸಮರ್ಪಿಸಿದರು.

ರಾಜೋಟಿಶರ್ಮಾ ಬಿಲ್ವಂಕೊಂಡಿಮಠ, ಸೆಕ್ರೆಟರಿ,
ಶ್ರೀ ವೀರಶೈವ ವಾಚನಾಲಯ, ಕನಕಗಿರಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ದುಃಖವಾರ್ತೆ

ಶಿವಮೊಗ್ಗಾ ಡಿ॥ ಹಾರನಹಳ್ಳಿ ನಿವಾಸಿಗಳಾದ ಯಜಮಾನ ಜವಳಿಗುರುಬಸಪ್ಪನವರು ಕಳೆದ ತಾ 11-2-38 ನೇ ಶನಿವಾರ ತಮ್ಮ 83 ನೆಯ ವಯಸ್ಸಿನಲ್ಲಿ ಶಿವಸಾನ್ನಿಧ್ಯವನ್ನೈದಿದರು ಈ ಮಹೋದಯರು ಗುರುಲಿಂಗಜಂಗಮ ಸೇವಾನಿರತರೂ ಸದಾಚಾರನಿಷ್ಠರೂ ಧರ್ಮಕಾರ್ಯಪ್ರವರ್ತಕರೂ ಆಗಿದ್ದರು. ಇವರು ಈ ಹಿಂದೆ ಗ್ರಾಮಾಧ್ಯಕ್ಷಪದವಿಯನ್ನಲಂಕರಿಸಿದ್ದು, ಅನೇಕ ಜನೋಪಕ್ಕಾರಿಕಾರ್ಯಗಳನ್ನುಮಾಡಿ ಯಶಸ್ವಿಗಳಾಗಿದ್ದರು. ಇವರನ್ನೆಳೆದು ಯಾವ ಸಾರ್ವಜನಿಕ ಸಾಮಾಜಿಕಕಾರ್ಯಗಳೂ, ಪಂಚಾಯಿತಿಗಳೂ ಗ್ರಾಮದಲ್ಲಿಯೂ, ಸುತ್ತುಮುತ್ತಣ ಪ್ರದೇಶಗಳಲ್ಲಿಯೂ ನಡೆಯುತ್ತಿರಲಿಲ್ಲ ಬಡವರೆಂದರೆ ಇವರಿಗೆ ಬಹು ಕನಿಕರ. ಧರ್ಮಾರ್ಥವಾಗಿ ಎಷ್ಟೋ ಲಗ್ನಗಳನ್ನು ನಡೆಯಿಸಿದರು ದೊಡ್ಡ ಜಮೀನುದಾರರೂ, ಶ್ರೀಮಂತರೂ ಆಗಿದ್ದರೂ, ಬಹಿರಾಡಂಬರವಿಲ್ಲದೆ ಸಭ್ಯಗೃಹಸ್ಥರಿಂದೆನಿಸಿ ಬಾಳಿ ಜೀವಿಕಾಲವನ್ನು ಕಳೆದರು. ಪ್ರಾಮಾಣಿಕ ಧರ್ಮಪದ್ಧತಿಗಳನ್ನೆಮನಸರಿಸಿ ಆಚರಿಸಿ, ಹೋರಿಸಿ, ಕೀರ್ತಿಯನ್ನು ಪಡೆದ ಮಹಾಶಯರಲ್ಲಿ ಇವರು ಒಬ್ಬರಾಗಿದ್ದರು ಶ್ರೀರಂಭಾಪುರೀಜಗದ್ಗುರುಗಳವರು ಅಗಮಿಸಿದ ಕಾಕದಲ್ಲಿ ತಮ್ಮ ವಿಶಾಲವಾದ ಗೃಹವನ್ನು ಬಿಟ್ಟುಕೊಟ್ಟು, ಸುಮಾರು ಒಂದೂವರೆ ತಿಂಗಳವರೆಗೂ ಮಹಾಪಾದಸೇವೆಯನ್ನು ಮಾಡಿ ಧನ್ಯರಾದರು ಈ ಭಾಗ್ಯವಂತರಿಗೆ ವೃದ್ಧ ಧರ್ಮಪತ್ನಿಯವರೂ, ಗಂಡುಹೆಣ್ಣುಮಕ್ಕಳೂ ಮೊಮ್ಮಕ್ಕಳೂ ವಿಶೇಷವಾಗಿರುವರು. ಇವರು ಕಳೆದ ತಾ॥ 10-2-38 ನೇ ಶುಕ್ರವಾರ ರಾತ್ರಿ ಭೋಜನಾನಂತರ ಸುಖವಾಗಿ ಮಲಗಿ ನಿದ್ರಿಸಿ ಪದ್ಧತಿಯಂತೆ ಬೆಳಗಿನಜಾವದಲ್ಲೆದ್ದು ಹೊರಕ್ಕೆ ಬಂದು ಪುನಃ ಒಳಕ್ಕೆ ಹೋಗುವಷ್ಟರಲ್ಲಿಯೇ ಸ್ವಲ್ಪ ದೇಹಾಲಸ್ಯವಾದಂತಾಯಿತು. ಹೀಗಾದರೂ ಲಿಂಗ ಪೂಜಾದಿಗಳಿಗೆ ಭಂಗಬಾರದಂತೆ ಸಾಂಗವಾಗಿ ನೆರವೇರಿಸಿ ಜನರೊಂದಿಗೆ ಮಾತನಾಡುತ್ತಿದ್ದಹಾಗೆಯೇ ನಿಶ್ಚಬ್ದತೆಪಡೆದರು ಅನಂತರ ಅಲ್ಲಿ ನೆರೆದಿದ್ದ ಜಂಗಮ ಸಂದೋಹಕ್ಕೂ ಬಡಬಗ್ಗರಿಗೂ ಕೈ॥ ಯಜಮಾನರ ಮಕ್ಕಳೂ, ಮೊಮ್ಮಕ್ಕಳೂ, ಸಹ ಯಥಾರೀತಿ ದಾನಧರ್ಮಗಳನ್ನು ಮಾಡಿದರು. ಇದಕ್ಕೆ ಸಂಬಂಧವಾಗಿ ಕಳೆದ ತಿಂಗಳು ೧೫ ನೆಯ ತಾರೀಖಿನ ಪ್ರಾತಃಕಾಲ ರುದ್ರಾಭಿಷೇಕವೂ, ಮಧ್ಯಾಹ್ನ ಗುರುಪಾದಪೂಜೆಯೂ, ಶ್ರಮಠ ಗಣಾರಾಧನೆಯೂ ಸಹ ಇವರ ದ್ವಿತೀಯ ಪುತ್ರರಾದ ಮ॥ ರಾ॥ ಮುದ್ದೀರಪ್ಪನವರ ಹಾಗೂ, ಮೊಮ್ಮಕ್ಕಳಾದ ಮ॥ ರಾ॥ ರುದ್ರಪ್ಪನವರ ನೇತೃತ್ವದಲ್ಲಿ ಅತಿವಿಜೃಂಭಣೆಯಿಂದ ಜರುಗಿದವು. ಈ ಸಮಾರಂಭದಲ್ಲಿ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ಕಾರ್ಯಕರ್ತೃಗಳಿಂದ ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು ಕೈ॥ ಗುರುಬಸಪ್ಪನವರ ವಿಯೋಗದಿಂದವರ ಕುಟುಂಬವರ್ಗದವರಿಗುಂಟಾಗಿರುವ ದುಃಖವನ್ನು ಪರಮಾತ್ಮನು ಶಮನಗೊಳಿಸಲೆಂದೂ ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಅವನ್ನ ಭಾವದಿಂದ ಪ್ರಾರ್ಥಿಸುವ, ಓರ್ವ ಗ್ರಾಮನಿವಾಸಿ

ಪಂಚಾಚಾರ್ಯಪ್ರಭಾ.

೧೯೩೯ ನೆಯ ಮಾರ್ಚಿ ತಾ॥ ೬ನೇ ಸೋಮವಾರ.

ಕರ್ಮಫಲ.

ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವನೂ ಸುಖವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನಾಗಿರುತ್ತಾನೆಯೇ ಹೊರತು ದುಃಖವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನಾಗಿರುವುದಿಲ್ಲ. ಆದರೂ ಎಲ್ಲರೂ ಸುಖಿಗಳಾಗುವುದಿಲ್ಲ. ಎಲ್ಲರೂ ದುಃಖಿಗಳಾಗುವುದಿಲ್ಲ. ನಮ್ಮನ್ನು ಸ್ವಯ ಇಚ್ಛೆಯಂತೆ ಯಾವುದೂ ನಡೆಯುವುದಿಲ್ಲ ಗಾಳಿಯು ಎತ್ತಬೀಸುವುದೋ ಅರಳಿಯು ಅತ್ತಕಡೆಗೆ ಹೋಗುವದು ಸ್ವಭಾವವಾಗಿರುವಂತೆ, ಜೀವರೂಪನಾದ ಆತ್ಮನು ಕರ್ಮಾನುಗುಣವಾದ ಸುಖದುಃಖಗಳನ್ನು ಅನುಭವಿಸಬೇಕಾಗಿದೆ. ಈ ಆತ್ಮನು ಎಂಥ ಕರ್ಮಗಳನ್ನಾಚರಿಸುವನೋ ಅಂಥ ಕರ್ಮಗಳ ಫಲವನ್ನೇ ಇನುಭವಿಸುವನು. ಉತ್ತಮವಾದ ಕರ್ಮಗಳನ್ನು ಆಚರಿಸುವನಾದರೆ ಉತ್ತಮವಾದ ಸುಖವನ್ನೇ ಪಡೆಯುತ್ತಾನೆ. ಹೀನಕರ್ಮಗಳನ್ನಾಚರಿಸುವನಾದರೆ ಹೀನವಾದ ದುಃಖವನ್ನೇ ಪಡೆಯುತ್ತಾನೆ. ನಮ್ಮ ಪೂರ್ವಾಚಾರ್ಯರು ಕರ್ಮಗಳಿಗೂ, ಸುಖದುಃಖಗಳಿಗೂ ಕಾರ್ಯಕಾರಣಭಾವವನ್ನು ಒಪ್ಪಿರುತ್ತಾರೆ. ಬಟ್ಟೆಗಳಿಗೂ, ತೂಲುಗಳಿಗೂ ಕಾರ್ಯಕಾರಣಜಾತವನಿರುತ್ತವಷ್ಟೆ' ಆದರೂ ಕಪ್ಪುನೂಲಿನಿಂದ ಬಿಳಿಯ ವಸ್ತ್ರವಾಗಲಿ, ಬಿಳಿಯ ನೂಲಿನಿಂದ ಕಪ್ಪುವಸ್ತ್ರವಾಗಲಿ ಆಗಲಾರದು. ಕಪ್ಪಾದ ವಸ್ತ್ರವನ್ನು ನೆಯ್ಯಬೇಕಾದರೆ ಕಪ್ಪುನೂಲಿನ ಸಹಾಯಬೇಕು. ಬಿಳಿಯ ವಸ್ತ್ರವನ್ನು ನೆಯ್ಯಬೇಕಾದರೆ ಬಿಳಿಯ ನೂಲಿನ ಸಹಾಯವೇ ಬೇಕಾಗಿರುವಂತೆ ದುಃಖಪಡೆಯಲು ಪಾಪಕರ್ಮಗಳೇ ಬೇಕು. ಸುಖಪಡೆಯಲು ಪುಣ್ಯಕರ್ಮಗಳೇ ಬೇಕು ಆದುದರಿಂದ ಪ್ರತಿಯೊಬ್ಬನೂ ಪಾಪಕರ್ಮದಿಂದ ದುಃಖವಾಗುವೆಂಬ ಪುಣ್ಯಕರ್ಮದಿಂದ ಸುಖವಾಗುವದೆಂದೂ ನಂಬಲೇಬೇಕು. ಆದರೆ ಲೋಕದಲ್ಲಿ ಅನೇಕರು ತಾವು ಪುಣ್ಯಕರ್ಮವನ್ನೇ ಆಚರಿಸುತ್ತಿದ್ದರೂ ದುಃಖವನ್ನೇ ಅನುಭವಿಸುತ್ತಿರುವರೆ-ದು ಪರಿತಪಿಸುತ್ತಿರುವರು. ಕೆಲವರು ತಾವು ದುಷ್ಕರ್ಮಗಳನ್ನಾಚರಿಸುತ್ತಿದ್ದರೂ ಸುಖರೂಪದಿಂದಲೇ ಇರುವದೆಂದು ವಿಧೃಂಭಿಸುತ್ತಿರುವರು

ಜನ್ಮಭೂತಸ್ಯ ದೇಹಸ್ಯ ಪುರಾನಾನಾಂ ಕೃತಾ ।
ತಸ್ಮಾತ್ಸರ್ವಪ್ರಯತ್ನೇನ ಜ್ಞಾಂ ಕೃತ್ವಾ ಶೃತಂ ಪಿಬೇತ್ ॥

ಎಂದಾದರೂ ಒಂದು ದಿವಸ ಸುಟ್ಟುಹೋಗುವ ಈ ದೇಹವು ಪುನಃ ಬರುವುದೆಂದರೇನು? ಸ್ವರ್ಗನರಕಗಳೆಂಬವು ಮರಳಿ ಹುಟ್ಟಿದ ಸೋಲಲ್ಲವೆ? ಹುಟ್ಟುವುದೇ ಸುಳ್ಳಾದ ಮೇಲೆ ಸುಂಪೆ ಸುಖದುಃಖಗಳೆಂಬವೆಂತೂ ಕೇವಲ ಸುಳ್ಳೇ ಸುಳ್ಳು. ನೀನು ಯಾವ ಕೆಲಸಗಳನ್ನಾ ದರೂ ಮಾಡು. ಆದರೂಗೆ ಪುಣ್ಯವ ಕೆಲಸವೆಂದೂ ಪಾಪದ ಕೆಲಸವೆಂದೂ ವಿಭಾಗಮಾಡಲು ಸಾಧ್ಯವಿಲ್ಲ. ನಿನಗೆ ಹಣವು (ಸುಖವು) ಸಿಕ್ಕುವ ಪಕ್ಷದಲ್ಲಿ ಪರಸ್ತ್ರೀಯರನ್ನು ನೋಡಬಹುದು, ಕೆಲ್ಲತನ ಮಾಡಬಹುದು, ಶ್ರೀಮಂತರನ್ನು ತಲೆಯೂದೆಯಬಹುದು, ಸ್ತ್ರೀವಧೆಯನ್ನು ಮಾಡಬಹುದು, ಶಿಶುವಧೆಯನ್ನು ಮಾಡಬಹುದು, ಬ್ರಹ್ಮಹತ್ಯೆಯನ್ನು ಸೂಡಬಹುದು, ಅಸತ್ಯವನ್ನು ಹೇಳಬಹುದು. ನೋಸಮಾಡಬೇಕೆಂಬಷ್ಟೆಯಿಂದ ಕಂಡಕಂಡವರಲ್ಲಿ ಸುಳ್ಳುಹೇಳಿ ಸಾಲವನ್ನು ತೆಗೆಯಬಹುದು. ಇತ್ಯಾದಿಯಾಗಿ ಸಾಮಾಚಾರಪ್ರವರ್ತಕರಾದ ಚಾರ್ವಾಕಮತೀಯರು ಪ್ರಲಪಿಸುತ್ತಾರೆ. ಇದು ಬಹಳ ಅಸಂಗತವಾದ ಕೆಲಸವಾಗಿದೆ. ಇದು ನಿದ್ರಾ ಆಹಾರನೈಥುನಗಳಲ್ಲಿ ಮಾತ್ರ ಆಸಕ್ತಿಯುಳ್ಳ ಪಶುಗಳ ಕಾರ್ಯವು ಆಗಿದೆಯೆಂದು ಹೇಳಲು ಅಭ್ಯಂತರವಿಲ್ಲ. ಪ್ರಕೃತದಲ್ಲಿ ಅಂಧ ನೀಚಕೃತಿಗಳಿಂದ ಆಕ್ಷಣದಲ್ಲಿ ಅತಿನಿಗೆ ಸುಖ ದೊರೆತರೂ ಅದು ತನ್ನ ನಾಶನಮಾಡುವ ಸುಖವಲ್ಲದೆ ರಕ್ಷಿಸುವ ಸುಖವಲ್ಲ. ರಾಕ್ಷಸಾಧಮನಾದ ರಾವಣನು ಜಗಜಗಿಸುತ್ತಿರುವ ಪಾತಿವ್ರತ್ಯವೆಂಬ ಪ್ರಳಯಾಗ್ನಿಯಿಂದೊಡಗೂಡಿದ ಜಾನಕೀದೇವಿಯನ್ನು ತನ್ನ ವಶಮಾಡಿಕೊಂಡನಾತ್ರದಿಂದ ಸೀಮಾತೀತವಾದ ತ್ರೈಲೋಕ್ಯಸಂಪತ್ತು ಆತನಿಗೆ ಲಭಿಸಿದಂತಾಗಿ ಸುಖ ಸಮುದ್ರವಲ್ಲಿ ಲೋಲಾಡುತ್ತಿದ್ದನಷ್ಟೆ!

ದೇವಾನುದೇವತೆಗಳೆಲ್ಲರೂ ನಾನಾ ವೇಷಧಾರಿಗಳಾಗಿ ಶ್ರೀರಾಮನಿಗೆ ಸಂಪೂರ್ಣಸಹಾಯವನ್ನೊದಗಿಸಿ ರಾವಣನ ವಂಶಮೂಲವನ್ನೇ ಕೆತ್ತಿಸೆದು ಪರಸ್ತ್ರೀ ವ್ಯಾಮೋಹದಿಂದಾಗುವ ದುಷ್ಪರಿಣಾಮವನ್ನು ಲೋಕಕ್ಕೆ ಬೀರಿದರು. ಹೀಗೆಸ್ವತಿಯೋಂದು ಪಾಪಕೃತ್ಯಗಳಿಂದಾಗುವ ದುಃಖಾನುಭವನವನ್ನು ಗಣಿಸದೆ ಮಹಾತ್ಮರ ಚರಿತ್ರೆಗಳಲ್ಲಿ ಪ್ರದ್ವೇಷವನ್ನಿಡದೆ ತಾತ್ಕಾಲಿಕವಾದ ಸುಖದಲ್ಲಿ ಮನಸೋತು ಮುಂದಾಗುವ ವಿಪತ್ತನ್ನು ಯೋಚಿಸದೆ ದೀಪಕ್ಕೆರಗುವ ಪತಂಗದಂತೆ ಭಸ್ಮೀಭೂತರಾಗುತ್ತೇವೆಂಬುದನ್ನು ಸಪ ಆಲೋಚಿಸದೆ ಮರ್ಮಾಗ್ರಗಾಮಿಗಳಾಗುವುದೆಮ ಮಾನವಧರ್ಮವಲ್ಲ. ಆದರೆ ಈಗ ಮಾಡಿದ ಪಾಪವಾಗಲಿ ಪುಣ್ಯವಾಗಲಿ ಈಗಲೇ ಫಲವನ್ನು ಕೊಡುವುದಿಲ್ಲವೆಂದು ಸಾಮಾನ್ಯರಾಸ್ತ್ರ ನಿಯಮವಿದ್ದರೂ,

"ಆಕ್ಕುರ್ವತ್ಸೀ ಧೇನುರಾಸ್ಕೆಸ ಫಲಮೃತೇ"

ಎಂಬ ಉಕ್ತಿಯಂತೆ ಮಿತಿಯಿಲ್ಲದ ಪಾಪವನ್ನು ಮಾಡುವದರಿಂದ ಆಗಲೇ ಅವರ ಮಹಾದುಃಖರೂಪವಾದ ಫಲವನ್ನೂ ಮಿತಿಯಿಲ್ಲದ ಪುಣ್ಯವನ್ನು ಮಾಡುವದರಿಂದ ಆಗಲೇ ಅವರ ಸುಖರೂಪವಾದ ಫಲವನ್ನೂ ಅನುಭವಿಸಬಹುದೆಂದು ಒಂದು ವಿಶೇಷ ಶಾಸ್ತ್ರನಿಯಮವು ಸೃಧಕ್ಕಾಗಿ ಹುಟ್ಟಿರುವದು ಈ ವಿಶೇಷನಿಯಮವು ಕೋಟಿಗೊಬ್ಬ ವಿಲಕ್ಷಣಪುರುಷನಲ್ಲಿ ಅನ್ವಯಿಸುವುದೇ ಹೊರತು ಹುಟ್ಟಿದ ಸರ್ವರಲ್ಲಿಯೂ ಅನ್ವಯಿಸಲಾಗುವುದಿಲ್ಲ. ಸಾಮಾನ್ಯವಾಗಿ ಪ್ರತಿಯೊಬ್ಬನೂ.

ಸತ್ಯಂ ವದ ಧರ್ಮಂ ಚರ ಸ್ವಾಧ್ಯಾಯಾನ್ಮಾ ಪ್ರಮದಃ ।
. . . . ಸತ್ಯಾನ್ನ ಪ್ರಮದಿತವ್ಯಂ ಧರ್ಮಾನ್ನ ಪ್ರಮದಿತವ್ಯಂ ।
ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ . . . . . ।
ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ।
ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ ।

ಎಚ್ಚೆತ್ತಿರ್ಯೇ! ಮಾನವರಿಗೂ ಸತ್ಯವನ್ನೇ ಹೇಳಿರಿ. ಧರ್ಮದಿಂದ ನಡೆಯಿರಿ. ಅಲಸ್ಯವನ್ನು ಬಿಟ್ಟು ವಿದ್ಯೆಯನ್ನೇ ಕಲಿಯಿರಿ ನೈಸರ್ಗಿಕವಾದರೂ ಸತ್ಯವನ್ನು ಬಿಡಬೇಡಿರಿ. ಧರ್ಮವನ್ನು ಚಿಲ್ಲರೆಗಳಿಯಬೇಡಿರಿ. ಗುರುಗಳ, ತಾಯಿ-ತಂದೆಗಳ ಸೇವೆಯನ್ನೆಸಗಿರಿ. ನಾವು ಆಚರಿಸಿದ ಧರ್ಮಯುಕ್ತ ಕಾರ್ಯಗಳನ್ನೇ ಆಚರಿಸಿರಿ. ನಾವು ಆಚರಿಸುವ ಒಳ್ಳೆಯ ನಡತೆಯನ್ನೇ ಹಿಂಬಾಲಿಸಿರಿ. ಇನ್ನಾವ ದುಷ್ಟ ಕೆಲಸಗಳನ್ನಾಗಲಿ ಪಾಪಾಚರಣೆಗಳನ್ನಾಗಲಿ ಹಿಂಬಾಲಿಸಬೇಡಿರಿ ಎಂದು ತೈತ್ತಿರೀಯೋಪನಿಷತ್ತಿನಲ್ಲಿ ಹೇಳಿದ ಆಚಾರ್ಯೋಪದೇಶವನ್ನೇ ಪ್ರತಿನಿತ್ಯವೂ ಪಾರಾಯಣಮಾಡುತ್ತಿರಬೇಕು. ಸಾಮಾನ್ಯವಾಗಿ ಈಗ ಮಾಡಿದ ಪಾಪವಾಗಲಿ, ಈಗ ಮಾಡಿದ ಪುಣ್ಯವಾಗಲಿ ಈಗಲೇ ಫಲವನ್ನು ಕೊಡುವುದಿಲ್ಲ. ಮಳೆಗಾಲದಲ್ಲಿ ಭತ್ತವನ್ನು ಬಿತ್ತಿದರೆ ಜೇಸಿಗೆಯಲ್ಲಿ ಪೈರನ್ನು ಪಡೆಯುತ್ತೇವೆ. ಮಧ್ಯಕಾಲದಲ್ಲಿ ಆ ಬೀಜವು ಅಂಕುರಿಸಿ ಪಲ್ಲವಿಸಿ ಫಲೋನ್ಮುಖವಾಗುವಂತೆ, ನ್ಯವಪಾಯವನ್ನು ಮಾಡುತ್ತಲೇ ಬರಬೇಕಾಗುತ್ತದೆ. ಹಾಗೆ ನಾವು ನ್ಯವನಾಯಗಳನ್ನು ಮಾಡುತ್ತ ಮಧ್ಯದಲ್ಲಿ ಆಗಾಗ್ಗೆ ತಲೆದೋರುವ ದುಸಜಕೈಗಳೆಂಬ ಕಳೆಯನ್ನು ಕೀಳುತ್ತ ದೇಹವನ್ನು ಹಸನುಮಾಡುತ್ತಾ ಬಂದಲ್ಲಿ ಆ ಕರ್ಮಬೀಜವು ಆತ್ಮನಿಗೆ ಸುಬಂಧಿಸಿ ಆ ಆತ್ಮನನ್ನು ಅಯಾಯ ಯೋನಿಗಳಿಗೆ ಹೋಗಿ ಆಯಾಯ ಕರ್ಮಾನುಗುಣವಾಗಿ ಸುಖದುಃಖಗಳನ್ನು ಅನುಭವಿಸುವಂತೆ ಮಾಡುವದು.

ರಮಣೀಯಚರಣಾ ರಮಣೀಯಾಂ ಯೋನಿಮಾಪದ್ಯಂತೇ ॥

ಪುಣ್ಯಕರ್ಮಗಳನ್ನಾಚರಿಸುವವನು ಪುಣ್ಯಜನ್ಮಗಳನ್ನೂ, ಪಾಪಕರ್ಮಗಳನ್ನಾಚರಿಸುವವನು ದುಷ್ಟಜನ್ಮಗಳನ್ನೂ ಧರಿಸಬೇಕಾಗುವದೆಂದು ಛಾಂದೋಗ್ಯವು ಮುಕ್ತಕಂಠದಿಂದ ಸುಖದುಃಖಗಳ ಕಾರಣವನ್ನು ತೋರಿಸಿರುತ್ತದೆ. ಅಸೌರುಣೇಯವಾದ ಶ್ರುತಿಯು ಆಜ್ಞೆಯನ್ನೇ ಹೆತ್ತ ತಾಯಿಯ ಆಜ್ಞೆಯನ್ನಾಗಿ ಭಾವಿಸುವ ಭಾರತೀಯರಾದ ನಾವುಗಳು ಸುಖದುಃಖಹೇತುಗಳಾದ ಸುಕರ್ಮ ದುಷ್ಕರ್ಮಗಳ ಪರಿಪಾಕವನ್ನು ಅಂಗೀಕರಿಸಲೇ ಬೇಕಾಗಿರುವುದರಿಂದ ದುಃಖಬೀಜವಾದ ಪಾಪಾಚರಣೆಯೇ ಅಧರ್ಮವೆಂತಲೂ ಸುಖಬೀಜವಾದ ಪುಣ್ಯಾಚರಣೆಯೇ ಧರ್ಮವೆಂತಲೂ ವೃಥವಾಗಿ ನಂಬಿ ಎಲ್ಲರೂ ಧರ್ಮಮಾರ್ಗವನ್ನು ತುಳಿಯಬೇಕಲ್ಲದೆ ಅಧರ್ಮಮಾರ್ಗವನ್ನು ತುಳಿಯಲಾಗದು.

ಧರ್ಮ ಏವ ಸಮಸ್ತಾನಾಂ ಯತಸ್ಸಂಸಿದ್ಧಿಕಾರಣಂ ।
ನಸ್ಪೃಹೋಸಿ ಮಹಾಯೋಗೀ ಧರ್ಮಮಾರ್ಗಂ ಹಿ ನ ತ್ಯಜೇತ್ ॥
ಜ್ಞಾನಾಮೃತೇನ ತೃಪ್ತೋಪಿ ಯೋಗೀ ಧರ್ಮಂ ನ ಸಂತ್ಯಜೇತ್ ।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥

ಸರ್ವಸಂಗಪರಿತ್ಯಾಗಮಾಡಿದ ಮಹಾಯೋಗಿಯೂ ಕೂಡ ಧರ್ಮಾಚರಣೆಯನ್ನು ಬಿಡಬಾರದು. ಧರ್ಮವೇ ಸಕಲಸಿದ್ಧಿಗಳಿಗಾಸ್ಪದವಾಗಿದೆ. ಲೋಕದ ಜನಗಳು ಮಹಾತ್ಮರ ನಡತೆಯನ್ನೇ ಹಿಂಬಾಲಿಸುವರು ಎಂದು ಶ್ರೀ ರೇಣುಕಭಗವತ್ಪಾದಾಚಾರ್ಯರು ಸುಖಹೇತುವಾದ ಪುಣ್ಯಾ (ಧರ್ಮಾ) ಚರಣೆಯನ್ನು ಬಹಳವಾಗಿ ಪ್ರತಿಪಾದಿಸಿರುತ್ತಾರೆ. ಆದ್ದರಿಂದ ಮನುಷ್ಯಜನ್ಮವೆತ್ತಿದ ಪ್ರತಿಯೊಬ್ಬರೂ ಧರ್ಮಾಚರಣೆಗೆ ವಿರುದ್ಧವಾಗಿ ಹೋಗಬಾರದೆಂದು ಆಶಿಸುತ್ತೇನೆ.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಮಾರ್ಚಿ 3 ನೆಯ ತಾರೀಖಿಗೆ ಬೆಂಗಳೂರಿಗೆ ದಯಮಾಡಿಸಿದರೆಂದು ತಿಳಿದುಬರುತ್ತವೆ.

ನಮ್ಮ ದಿವಾನರವರಾದ ಸರ್ ಮಿರ್ಜಾ ಎಂ. ಇಸ್ಮೈಲ್‌ರವರು ಇದೇ ತಿಂಗಳು 8 ನೆಯ ತಾರೀಖಿನಿ ದಿವಸ ಶಿವಮೊಗ್ಗಾ, ಭದ್ರಾವತಿಯನ್ನು ಪರಿಶೀಲಿಸಿಕೊಂಡು ಅದೇದಿನ ರಾತ್ರಿ ಬೆಂಗಳೂರಿಗೆ ಪ್ರಯಾಣಬೆಳೆಸುವರಾಗಿರುವರು.

ನಮ್ಮ ಸಂಸ್ಥಾನದ ದ್ವಿತೀಯ ಸಚಿವರಾದ ಶ್ರೀಮಾನ್ ಕೆ. ಅನಂತರಾಮರವರು ಇದೇ ತಿಂಗಳು 16 ಮತ್ತು 17 ನೆ ತಾರೀಖುಗಳಲ್ಲಿ ಚನ್ನಗಿರಿ ಮತ್ತು ಹೊನ್ನಾಳಿಯಲ್ಲಿ ಕಟ್ಟಲ್ಪಡಲಿರುವ ಪಶುವೈದ್ಯಶಾಲೆಯ ಶಂಕುಸ್ಥಾಪನೋತ್ಸವವನ್ನು ಜರುಗಿಸುವರು.

ಬೈಸಿಕಲ್ಲುಗಳಿಗೆ ಈಗಿರುವ 3 ರೂಪಾಯಿ ಮುನಿಸಿಪಲ್ ತೆರಿಗೆಯನ್ನು ವರ್ಷಕ್ಕೆ 2 ರೂ. ಗಳಿಗೆ ಇಳಿಸಬೇಕೆಂದು ನೈಸೂರು ಮುನಸಿಪಾಲಟಿಯವರು ಸೊತ್ತು ಮಾಡಿ ಕಳುಹಿಸಿದ್ದ ನಿರ್ಣಯಕ್ಕೆ ಸರ್ಕಾರದವರು ಒಪ್ಪಿಗೆ ಇತ್ತಿದ್ದಾರೆ. ಮುಂದಿನವರ್ಷದಿಂದ ಅದು ಜಾರಿಗೆ ಬರುತ್ತದೆ.

ಇದೇ ತಿಂಗಳು 11, 12 ಮತ್ತು 13 ನೆಯ ತಾರೀಖುಗಳಲ್ಲಿ ಆಯಿಲ ನೈಸೂರು ಸಂಸ್ಥಾನದ ಇಂಜನೀಯರುಗಳ ಸಮ್ಮೇಳನವು ನಡೆಯುತ್ತವೆ. ಸಂಸ್ಥಾನದ ಪ್ರಥಮ ಸಚಿವರಾದ ರಾಜಮಂತ್ರಿ ಪ್ರವೀಣ ಎಸ್. ಮಾಧವರಾಯರು ಅಧ್ಯಕ್ಷತೆಯನ್ನು ವಹಿಸುವರು. ರಾಜಕಾರ್ಯ ಪ್ರವೀಣ ಎಸ್. ಎಸ್ ಸುಬ್ಬರಾಯರು ಆರಂಭೋತ್ಸವನ್ನು ನೆರವೇರಿಸುವರು.

ಬ್ರಿಟಿಸ್ನಿನಲ್ಲಿ ಪ್ರಜಾಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನ!

ಲೀಗ್‌ಆಫ್ ನ್ಯಾಷನಲ್ ಪೈಫ್ ಸಂಘದವರು ಬ್ರಿಟನ್ನಿನಲ್ಲಿ ಜನಸಂಖ್ಯೆಯನ್ನು ಬೆಳೆಸುವದಕ್ಕಾಗಿ ಒಂದು ಯೋಚನೆಯನ್ನು ಕೈಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಆದರಂತೆ ಪ್ರತಿ ತರುಣ ದಂಪತಿಗಳಿಗೆ ವಿವಾಹವಾದೊಡನೆ 50 ಪೌಂಡುಗಳ ಸಾಲಕೊಡುವುದು. 5 ವರುಷದಲ್ಲಿ ಇವರಿಗೆ 2 ಮಕ್ಕಳಾದರೆ 25 ಪೌಂಡುಗಳನ್ನು ಕೊಟ್ಟು ಅವರು ಸಾಲದಿಂದ ಮುಕ್ತರಾಗಬಹುದು. 3 ಮಕ್ಕಳಾದರೆ 12 ಪೌಂಡು 10 ಷಿಲಿಂಗ್ ಕೊಟ್ಟುಸಿ ಸಾಕು. 4 ಮಕ್ಕಳಾದರೆ ಏನನ್ನೂ ಕೊಡದೆಯೇ ಅವರು ಋಣಮುಕ್ತರಾಗಬಹುದು. ಇದೇ ಆ ಯೋಚನೆ!

ವರ್ತಮಾನಸಂಗ್ರಹ.

ಹೊಸ ಪೋಪರ ಚುನಾವಣೆ

ಮೃತರಾದ ಕ್ಯಾಥೊಲಿಕ್ ಕ್ರೈಸ್ತ ಪಂಗಡದ ಗುರುಗಳ ಸ್ಥಾನಕ್ಕೆ ಚುನಾವಣೆಯು ಕಳೆದ 3 ನೆಯ ತಾರೀಖಿನ ದಿವಸ ರೋಂನಗರದಲ್ಲಿ ನಡೆದು ಕಾರ್ಡಿನಲ್ ಪಾಸಿಲಿಯವರು ಹೊಸ ಪೋಪರಾಗಿ ಆರಿಸಲ್ಪಟ್ಟಿರುರು. ಇವರಿಗೆ 63 ವರ್ಷ ವಯಸ್ಸಾಗಿದೆ. ಅವರು ಹಿಂದಿನ ಪೋಪರ ಕಾರ್ಯದರ್ಶಿಗಳಾಗಿದ್ದರು.

ಯಹೂದ್ಯರಮೇಲೆ ಜರ್ಮನಿಯ ಇನ್ನೊಂದು ತಕ್ಕ ಪ್ರಯೋಗ!

ಜರ್ಮನಿಯಲ್ಲಿ ವಾಸವಾಗಿರುವ ಜರ್ಮನ್ ಜನಾಂಗ ಕ್ಕೆ ಸೇರದ ಮತ್ತು ಬೇರೆಯಾವ ಜನಾಂಗಕ್ಕೂ ಸೇರದ ಯೆಹೂದ್ಯರೆಲ್ಲರೂ 15 ದಿನಗಳೊಳಗೆ ತಮ್ಮಲ್ಲಿರುವ ಚಿನ್ನ, ಬೆಳ್ಳಿ, ಪ್ಲಾಟಿನಂ, ಮುಂತಾದ ಅಮೂಲ್ಯ ಲೋಹಗಳನ್ನೂ ವಜ್ರ, ವೈಢೂರ್ಯಾದಿಗಳನ್ನೂ ಪೌರ ಸಭೆಯ ಗಿರವಿ ಅಂಗಡಿಗೆ ಸಾಗಿಸಿಬಿಡತಕ್ಕದ್ದೆಂದು ನಾಜಿ ಸರ್ಕಾರವು ಕಟ್ಟಪ್ಪಣೆಯನ್ನು ಹೊರಡಿಸಿದೆ.

ಕಾಂಗ್ರೆಸ್ ಸಮ್ಮತಿಯಿಲ್ಲದೆ ಸ್ವತಂತ್ರಿಸಿದವರಮೇಲೆ ಕಾರ್ಯಭಾಗವನ್ನು ಕೈಕೊಳ್ಳಬೇಕು

ಅ ಭಾ.ಕಾಂ ಸಮಿತಿಯ ಒಪ್ಪಿಗೆಯಿಲ್ಲದೆ, ಸರದಾರ್ ಪಟೇಲ್, ನೇಟ್ ಜವ್ಹಾಲಾಲ್, ಗಾಂಧಿಜಿ ಈ ಮೂವರು ರಾಜಕೋಟೆ ಮತ್ತು ಜಯಪುರಗಳಲ್ಲಿ ಸತ್ಯಾಗ್ರಹ ಚಳುವಳಿಯಾರಂಭಿಸಿದುದರಿಂದ ಅವರಮೇಲೆ ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬ ನಿರ್ಣಯವೊಂದು ಅ.ಭಾ ಕಾಂ. ಸಮಿತಿಗೆ ಕಳುಹಿಸಲ್ಪಟ್ಟಿದೆ. ಕೇದಾರನಾಥಪೈಗಾಲ್ ಎಂಬುವರೇ ಈ ನಿರ್ಣಯದ ಸೂಚಕರು.

ವಿಮಾನ ಅನಾಹುತ!

ಕರಾಚಿಗೆ 20 ಮೈಲು ದೂರದಲ್ಲಿ ಎರಡು ವಿಮಾನಗಳು ಢಿಕ್ಕಿ ಹೊಡೆದು ಎರಡೂ ಪುಡಿಪುಡಿಯಾದವು ನಾಶವಾದ ವಸ್ತುಗಳು ಸುಮಾರು 5 ಮೈಲು ದೂರದವರಿಗೆ ಎಸೆಯಲ್ಪಟ್ಟವು ಇಬ್ಬರು ವೈಮಾನಿಕರೂ ಒಂದು ವಿಮಾನದಲ್ಲಿದ್ದ ಒಬ್ಬ ಪ್ರಯಾಣಿಕರೂ ಮೃತರಾದರು. ಅನಾಹುತಕ್ಕೆ ಸಿಕ್ಕಿದ ವಿಮಾನಗಳಲ್ಲಿ ಇಂಡಿಯನ್ ನ್ಯಾಷನಲ್ ಏರ್‌ವೇಸ್ ಕಂಪನಿ ವಿಮಾನವೊಂದು. ಅವರಲ್ಲಿನ ಸ್ವಲ್ಪಭಾಗ ಅಂಚೆಯನ್ನು ಕರಾಚಿಗೆ ತರಲಾಗಿದೆ

ಫೆಡರೇಷನ್‌ಬಗ್ಗೆ ಜೋಧಪುರದರಸರ ಅಭಿಪ್ರಾಯ

ಕಳೆದ ಒಂಬತ್ತನೆಯ ತಾರೀಖಿನ ರಾತ್ರೆ ಜೋಧಪುರದ ರಾಜರು ವೈಸರಾಯ್‌ರಂದಪತಿಗಳಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು. ಆಗ ಅರಸರು ಭಾಷಣ ಮಾಡುತ್ತಾ, ತತ್ಕಾಲೀನ ಪರಿಸ್ಥಿತಿಯಲ್ಲಿ ಬಹು ಉಪಯುಕ್ತ, ರೀತಿಯಲ್ಲಿ ನಿರಂಕುಶ ಪ್ರಭುತ್ವ ನಡೆಸಿ, ಈಗ ಒಂದೇಸಾರಿ ಸಾಂಕುಶ ಪ್ರಭುತ್ವಕ್ಕೆ ಕೈ ಹಾಕುವದು ವಿವೇಕವಲ್ಲವೆಂದೂ ಕ್ರಮಕ್ರಮವಾಗಿ ಮುಂದುವರಿಯಬೇಕೆಂದೂ ಸೂಚಿಸಿದರು ಬ್ರಿಟಿಷ್ ಪ್ರಾಂತ್ಯಗಳ ಪ್ರಭುತ್ವದಂತೆ ಫೆಡರೇಷನ್ ವ್ಯವಸ್ಥೆಯೂ ಇರುವುದಾದರೆ, ತಾವು ಫೆಡರೇಷನ್ನಿಗೆ ಸೇರಲು ಸಿದ್ಧರಾಗಿರುವರೆಂದು ತಿಳುಹಿಸಿದರು.

ತ್ರಿಪುರಿ ಕಾಂಗ್ರೆಸ್ಸಿಗೆ ಅಧ್ಯಕ್ಷರ ಪ್ರಯಾಣ!

ಶ್ರೀಸುಭಾಷ್‌ಬೋಸರು ಇನ್ನೂ ಪೂರ್ಣ ಆರೋಗ್ಯ ಹೊಂದದಿದ್ದರೂ ಈ ದಿವಸ ಆಂಬ್ಯುರೆನ್ಸ್ ಕಾರಿನಲ್ಲಿ ಪ್ಲಾರಾಸ್ಟ್ರೇಚರಿನಲ್ಲಿ ಹೋಗಿ ಅಲ್ಲಿಂದ ರೈಲಿನಲ್ಲಿ ಪ್ರಯಾಣಮಾಡುವರು. ಇದು ಬಹು ಮುಖ್ಯ ಅಧಿವೇಶನವಾದ್ದರಿಂದ ತಾವು ಹಾಜರಿರುವದು ಅವಶ್ಯಕವೆಂದು ಭಾವಿಸಿ ಶ್ರೀಬೋಸರು ಹೊರಡಲು ನಿಶ್ಚಯಿಸಿದ್ದಾರೆ. ಅಧ್ಯಕ್ಷರ ಮೆರವಣಿಗೆಯು ದೂರವನ್ನು ಆದಷ್ಟು ಕಡಿಮೆಮಾಡಲು ಸ್ವಾಗತ ಸಮಿತಿಯು ಅಧ್ಯಕ್ಷರು ಒಪ್ಪಿದ್ದಾರೆಂದು ತಿಳಿದು ಬರುತ್ತದೆ.

ಉರುಳುತ್ತ ಕಾಶೀಯಾತ್ರೆ

ನಾಲ್ಕುವರ್ಷಗಳ ಹಿಂದೆ ತನ್ನ ಗಂಡನ ಸಂಗಡ ಚಿತಾರೋಹಣ ಮಾಡಲು ಪ್ರಯತ್ನಿಸಿದ ಝಾನ್ಸಿಯ ಗೌಡಸ್ತ್ರೀಯೊಬ್ಬಳನ್ನು ಪೋಲೀಸರು ತಡೆದು ರಕ್ಷಿಸಿದ್ದ ರಷ್ಟೆ! ಅಂದಿನಿಂದ ಆಕೆಯು ನಿರಶನವ್ರತವನ್ನೆವ ಲಂಬಿಸಿ ನಿದ್ರೆಹೋದಳು 12 ತಿಂಗಳಕಾಲ ನಿದ್ರೆಮಾಡಿದಳು. ಈ ಸಮಯದಲ್ಲಿ ಆಕೆಯ ಗಂಡನು "ನೀನು ನೆಲದಮೇಲೆ ಉರುಳುತ್ತಾ ಕಾಶಿಗೆ ಬಾ. ಅಲ್ಲಿ ಗಂಗಾತೀರದಲ್ಲಿ ನಾನು ನಿನ್ನನ್ನು ಸ್ವಾಗತಿಸುವೆನು" ಎಂದು ಹೇಳಿದಂತೆ ಕನಸುಕಂಡು ಎದ್ದು ಅದರಂತೆ ಗಂಗಾತೀರವನ್ನು ಕುರಿತು ನೆಲದಮೇಲೆ ಉರುಳುತ್ತಾ 700 ಮೈಲು ದೂರ ಪ್ರಯಾಣಮಾಡಿದ್ದಾಳೆ

ಜೈಲಿನಲ್ಲಿ ಹೊಡೆದಾಟ!

ಕಳೆದ 2೨ ನೆಯ ತಾರೀಖು ಒರಂಗಲ್ ಜೈಲಿನಲ್ಲಿ ಪಂಗೆ ನಡೆದುದರ ಪಲವಾಗಿ ಒಬ್ಬ ವಾರ್ಡರೂ ಒಬ್ಬ ಬಂದಿಯೂ ಮಡಿದರೆಂದೂ 13 ಮಂದಿ ಬಂದಿಗಳಿಗೂ 1 ಜನ ವಾರ್ಡರುಗಳಿಗೂ ಗಾಯಗಳಾದವೆಂದೂ ತಿಳಿದು ಬರುತ್ತದೆ. ಜೈಲು ಸೂಪರಿಂಟೆಂಡೆಂಟರನ್ನು ಗಾಯಗೊಳಿಸ ಬೇಕೆಂಬುದೇ ಈ ದಂಗೆಯ ಉದ್ದೇಶವೆಂದು ಹೇಳಲಾಗಿದೆ. ಹೊಡೆದಾಟವು ಕ್ರೂರವಾಗಿದ್ದು ಪೋಲೀಸರು ಗುಂಡು ಹಾರಿಸಬೇಕಾಯಿತು ರಾಜಕೀಯಬಂದಿಗಳಾರೂ ಇದರಲ್ಲಿ ಭಾಗವಹಿಸಿರಲಿಲ್ಲವೆಂದು ತಿಳಿಯಬರುತ್ತದೆ ಪ್ರಧಮವರ್ಗದ ತಾಲ್ಲೂಕುಮಾಜರರು ಈ ಸಂಬಂಧವಾಗಿ ಸಂಪೂರ್ಣ ವಿಚಾರಣೆ ನಡೆಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಹೈದರಾಬಾದಿನ ಸತ್ಯಾಗ್ರಹ

ಹೈದರಾಬಾದಿನಲ್ಲಿ ಧಾರ್ಮಿಕ ಮತ್ತು ರಾಜಕೀಯ ಸಂಬಂಧವಾದ ಸ್ವಾತಂತ್ರ್ಯವನ್ನು ಗಳಿಸಲು ನಡೆಯುತ್ತಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಉತ್ತರ ಹಿಂದೂಸ್ಥಾನದ ಲಾಹೋರ್ ಮೊದಲಾದ ಕಡೆಗಳಿಂದ ಸತ್ಯಾಗ್ರಹಿಗಳು 25 ೫೦ ಜನರು ಒಂದೊಂದು ಗುಂಪಾಗಿ ಹೊರಟಿರುತ್ತಾರೆ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನವರು ಗಾಂಧಿಯವರ ಸಲಹೆಯನ್ನು ಪುರಸ್ಕರಿಸಿ ಆ ಸಂಸ್ಥಾನದಲ್ಲಿ ಪ್ರಕೃತದಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿರುತ್ತಾರಷ್ಟೆ! ತಿರುಗಿ ಸತ್ಯಾಗ್ರಹವನ್ನು ಹೂಡಬೇಕಾದ ಅವಶ್ಯಕತೆ ತೋರುವುದಿಲ್ಲವೆಂದು ಅವರು ನಿರೀಕ್ಷಿಸಿವ್ವಾರೆ

ಕೃತಕ ಬೆಳದಿಂಗಳು

ಶಕ್ತಿಯುತ ರೇಡಿಯೋ ಸ್ಪೇಷನ್ನುಗಳಿಂದ ಕೃತಕ ಬೆಳದಿಂಗಳನ್ನು ಸೃಷ್ಟಿಸುವದು ಸಿಡ್ನಿ ವಿಶ್ವವಿದ್ಯಾಲಯದ ಡಾ॥ ವಿ ಎ ಬೈಲೆಯವರ ಹೊಸ ಶೋಧನೆ. ಈಗ ಪ್ರಯೋಗಶಾಲೆಯಲ್ಲಿ ನಡೆಯುತ್ತಿರುವ ವಿಧಾನಗಳಿಂದ ಆಕಾಶದಲ್ಲಿ 30 ಮೈಲುಗಳ ದೂರ ಬೆಳದಿಂಗಳ ಬೆಳಕನ್ನು ರೇಡಿಯೋ ಸ್ಪೇಷನ್ನುಗಳ ಸೂಲಕ ಸೃಷ್ಟಿ ಮಾಡಬಹುದಂತೆ! ಈ ಬೆಳಕು ಪೌರ್ಣಮಿ ಚಂದ್ರನ ಬೆಳಕಿಗೆ ಸಮವಾಗಿರುವದಂತೆ! ಒಂದು ಸ್ಪೇಷನ್ನು 60 ಮೈಲಿಗಳ ದೂರ ರಸ್ತೆಗಳಿಗೂ ಮನೆಗಳೊಳಗೂ ಈ ಬೆಳಕನ್ನು ಹರಡಬಲ್ಲುದಂತೆ! ರಷ್ಯ ಮತ್ತು ಅಮೆರಿಕೆಗಳ ಎಗಡು ಸ್ಪೇಷನ್ನುಗಳಿಗೆ ಈ ಹೊಸ ಶೋಧದ ಪ್ರಾರಂಭ ಪರೀಕ್ಷೆಗಳನ್ನು ನಡೆಸಲು ಸ್ವಾತಂತ್ರ್ಯ ಕೊಡಲ್ಪಟ್ಟಿವೆ

ಗಾಂಧಿಯವರ ಉಪವಾಸವ್ರತ!

ರಾಜಕೋಟೆಯ ಠಾಕೂರ್‌ಸಾಹೇಬರು ತಮ್ಮ ಪ್ರಜೆಗಳಿಗೆ ಕೊಟ್ಟಿದ್ದ ವಚನವನ್ನು ಪಾಲಿಸುವಂತೆ ಸಂಧಾನ ನಡೆಸಲು ರಾಜಕೋಟೆಗೆ ಪ್ರಯಾಣಮಾಡಿದ್ದ ಗಾಂಧಿಯವರು ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿ ಸತ್ಯಾಂಶಗಳನ್ನು ತಿಳಿದುಕೊಂಡಮೇಲೆ ಠಾಕೂರರವರಿಂದ ಉತ್ತರವರಲು 3 ನೆಯ ತಾರೀಖಿನ ಮಧ್ಯಾಹ್ನ 12 ಘಂಟೆಯವರೆಗೂ ಅವಕಾಶಕೊಟ್ಟು ಉತ್ತರ ಬಾರದಿರಲು ನೊದಲೇ ನಿರ್ಧರಿಸಿದಂತೆ ಉಪವಾಸವನ್ನು ಆರಂಭಿಸಿದರು. ಅನಂತರ ಠಾಕೂರ ಉತ್ತರವು 1 30 ಘಂಟೆಗೆ ಬಂತು ಗಾಂಧಿಯವರ ಸಲಹೆಯನ್ನು ಅವರು ನಿರಾಕರಿಸಿದ್ದಾರೆ. ಗಾಂಧಿಯವರ ಉಪವಾಸವನ್ನು ನೋಡಿ ರಾಜಕೋಟೆಯ ಸಮಸ್ತ ಪ್ರಜೆಗಳೂ ಒಂದು ದಿವಸ ಉಪವಾಸವನ್ನಾಚರಿಸಬೇಕೆಂದು ನಿರ್ಧರಿಸಿದ್ದಾರೆ. ರಾಜಕೋಟೆಯ ಸತ್ಯಾಗ್ರಹದ ಭಾರವನ್ನು ತಾವು ಸಂಪೂರ್ಣವಾಗಿ ಹೊತ್ತಿರುವದರಿಂದ ಬಂದಿಗಳೆಲ್ಲರನ್ನೂ ಬಿಡುಗಡೆಮಾಡ ಬೇಕೆಂದು ರಾಕೂರರಿಗೆ ಗಾಂಧಿಯವರು ಪತ್ರ ಬರೆದಿದ್ದಾರೆ. ಉಪವಾಸವು ಅನಿಶ್ಚಿತಕಾಲದವರೆಗೆ ಮುಂದುವರಿಸಲ್ಪಡುವದೆಂದು ತಿಳಿದುಬರುತ್ತದೆ.

ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಕಾಮನ್ಸ್ ಸಭೆಯಲ್ಲಿ ಚರ್ಚೆ

ಕಳೆದ 27ನೆಯ ತಾರೀಖಿನದಿವಸ ಕಾಮನ್ಸ್ ಸಭೆಯಲ್ಲಿ ಸರ್ ಆಲ್ಫ್ರೆಡ್ ನಾಕ್ಸ್‌ರವರು ಭಾರತದ ಉಪ ಕಾರ್ಯದರ್ಶಿಗಳನ್ನು ಸಂಬೋಧಿಸಿ "ಸಾಧ್ಯವಾದ ಕಡೆ ಗಳಿಲೆಲ್ಲಾ ದೇಶೀಯಸಂಸ್ಥಾನಗಳ ಚಳುವಳಿಗಳಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸುವದಾಗಿ ಸೂಚಿಸಿ ಕಾಂಗ್ರೆಸ್ ರೀತಿಯಲ್ಲಿ ಬದಲಾವಣೆ ವಿಚಾರವು ನಿಮ್ಮ ಗಮನಕ್ಕೆ ಬಂದಿದೆಯೆ? ಅಂತಹ ಕಾರ್ಯಕ್ರಮವಲ್ಲಿ ಭಾಗವಹಿಸುವಮ ಅನುಚಿತವೆಂದು ಕಾಂಗ್ರೆಸ್ಸಿನವರಿಗೆ ಎಚ್ಚರಿಕೆಕೊಡ ಬೇಕೆಂದು ಇಂಡಿಯಾಸರ್ಕಾರಕ್ಕೆ ಸೂಚಿಸಲಾಗುವದೇ?" ಎಂಬುದಾಗಿ ಪ್ರಶ್ನಿಸಿದರು ಅದಕ್ಕೆ ಉತ್ತರವಾಗಿ "ದೇಶೀಯ ಸಂಸ್ಥಾನಗಳಲ್ಲಿ ಸಂಭವಿಸುತ್ತಿರುವ ಶಾಸನ ಭಂಗ ಚಳುವಳಿಯಲ್ಲಿ ಹೊರಗಿನವರು ಭಾಗವಹಿಸಕೂಡ ದೆಂದು ಕಳೆದ ಡಿಸಂಬರ್ ತಿಂಗಳಿನಲ್ಲಿ ಪ್ರಕಟನೆ ಹೊರ ಡಿಸಲಾಗಿತ್ತು. ಸಾರ್ವಭೌಮಸರ್ಕಾರವು ದೇಶೀಯ ಸಂಸ್ಥಾನಗಳೊಡನೆ ಮಾಡಿಕೊಂದ ಕರಾರುಗಳಿಗನುಸಾರವಾಗಿ ವರ್ತಿಸುವದೆಂಬುದು ಸ್ಪಷ್ಟವಾಗಿದೆ. ಅನೇಕ ಸಂದರ್ಭಗಳಲ್ಲಿ ಹೀಳಿರುವಂತೆ ಸಂಸ್ಥಾನಗಳನ್ನು ದೊಂಬಿ, ಗಲಭೆ ಇತ್ಯಾದಿಗಳಿಂದ ರಕ್ಷಿಸುವ ಭಾರವನ್ನು ಸಾರ್ವಭೌಮ ಸರ್ಕಾರವವರು ಹೊತ್ತಿದ್ದಾರೆ" ಎಂದು ಭಾರತದ ಉಪಸಚಿವರಾದ ಲೆ॥ ಕ॥ ಮುಯಿರ್ ಹೆಡ್ ರವರು ಉತ್ತರವಿತ್ತರು.

ಇಂಡಿಯಾ ಸರ್ಕಾರದ ಆಯವ್ಯಯ

ಭಾರತ ಶಾಸನಸಭೆಯಮುಂದೆ ಸರ್. ಜೇಮ್ಸ್ ಗ್ರಿಗ್ಗರು ಇಟ್ಟ 1939 40 ವರ್ಷದ ಆಯವ್ಯಯ ಪಟ್ಟಿಯಲ್ಲಿ ಆದಾಯ 82 ಕೋಟಿ 15 ಲಕ್ಷ ವೆಚ್ಚ 82 ಕೋಟಿ 65 ಲಕ್ಷ ಈ ಹೆಚ್ಚು ವೆಚ್ಚಕ್ಕೆ ಹಣ ಪೂರೈಗಿಸಲು ಹೊರಗಿನಿಂದ ತರಿಸುತ್ತಿರುವ ಹತ್ತಿಯಮೇಲೆ ಹಾಕಿರುವ ಸುಂಕವನ್ನು ಎರಡರಷ್ಟು ಹೆಚ್ಚಿಸಬೇಕೆಂದು ಹಣಕಾಸಿನ ಸಚಿವರು ನಿರ್ಧರಿಸಿದ್ದಾರೆ ಸುಂಕದ ಬಾಬುಗಳಲ್ಲಿ ಈ ಬಾಬಿನಿಂದ ಬರುತ್ತಿದ್ದ ಆದಾಯವೇ ಹೆಚ್ಚು ವಸ್ತುಸ್ಥಿತಿಯಲ್ಲಿತ್ತೆಂದು ಹೇಳಲಾಗಿದೆ ಈರೀತಿ ಸುಂಕವನ್ನು ಎರಡರಷ್ಟು ಹೆಚ್ಚಿಸಿರುವದರಿಂದ ಭಾರತದಲ್ಲಿಯೇ ಹೊರಗಿನಿಂದ ಬರುತ್ತಿರುವಂತಹ ಹತ್ತಿಯನ್ನು ಬೆಳೆಯುವಂತಾಗಲೆಂದೂ, ಪ್ರತಿವರ್ಷ ಭಾರತಕ್ಕೆ 7 ಲಕ್ಷ ಬೇಲುಗಳಷ್ಟು ಹತ್ತಿ ಬರುತ್ತಿರುವದರಿಂದ ಆರೀತಿ ತರಿಸುವದು ತಪ್ಪಿ ಸರ್ಕಾರಕ್ಕೆ 56 ಲಕ್ಷ ರೂ. ಗಳ ಆದಾಯವು (ಹತ್ತಿ ಸುಂಕದಿಂದ) ಬರುವಂತಾಗಲೆಂದು ಸರ್. ಜೇಮ್ಸ್ ಗ್ರಿಗ್ಗರು ಹಾರೈಸುತ್ತಾರೆ ಈ ಬಾಬಿನಿಂದ ಬರುವ ಆದಾಯವನ್ನು ಸೇರಿಸಿದರೆ ಭಾರತದ ಆದಾಯವು 82 ಕೋಟಿ 70 ಲಕ್ಷ ರೂ. ಗಳಾಗುವದು. ಅದರಲ್ಲಿ ವೆಚ್ಚ 82 ಕೋಟಿ 65 ಲಕ್ಷ ರೂ. ಗಳು. ಆಂದರೆ 5 ಲಕ್ಷ ಉಳಿತಾಯವಾಗುವದು ಈಗ ಉಪ್ಪಿನಮೇಲೆ ಹಾಕಿರುವ ಸುಂಕವನ್ನು ಇನ್ನೊಂದು ವರ್ಷಕಾಲ ಮುಂದುವರಿಸಿಕೊಂಡು ಬರಲಾಗುವದು. ಅಂಚೆ ದರಗಳನ್ನು ಕಡಿಮೆ ಮಾಡುವದಿಲ್ಲ ಸ್ಟಾಬ್‌ಸಿಸ್ಟಂ ಪ್ರಕಾರ ವರ ಮಾನ ತೆರಿಗೆಯನ್ನೂ ಸೂಪರ್ ಟ್ಯಾಕ್ಸನ್ನೂ ವಸೂಲು ಮಾಡುವ ವ್ಯವಸ್ಥೆಮಾಡಲಾಗುವುದು. ಸಕ್ಕರೆ ಸಂಕವನ್ನು 1-0 0 ರೂ ಯಿಂದ 0-8.0 ಇಳಿಸಲಾಗುವುದು. ಎಂದು ಸರ್. ಜೇಮ್ಸ್ ಗ್ರಿಗ್ಗರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದರು

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಮಲ್ಲಿಕಾರ್ಜುನಾರಾಧ್ಯ ದಾನೆದೆನ್ನೂರು
ಮಳೆಮತ, ಮುದೇನೂರು.

ಪ್ರ—ಮೋಹಪಾಶಬದ್ಧರಾದವರು ಏನು ಮಾಡುವರು?

ಉ—ತಮ್ಮಭೀಷ್ಟವಂ ನೆರವೇರಿಸಿಕೊಳ್ಳುವುದಕ್ಕಾಗಿ ಮೋಸವನ್ನಾಶ್ರಯಿಸುವರು. ಅದರೆ "ತನ್ನ ಮೋಸದ ಫಲವು ತನ್ನ ಕೊರಳಿಗೆ" ಎಂಬಂತೆ ಮೋಸಗಾರರು ಖಂಡಿತವಾಗಿಯೂ ನಾಶವನ್ನೈದುವರು. ಉದಾಹರಣೆಗಾಗಿ ನೋಡಿರಿ! ಒಂದು ದಿನ ನಾಲ್ಕು ಜನರು ಕಳ್ಳತನಮಾಡಿ ಹಂದ ಹಣವನ್ನು ಹಂಚಿಕೊಳ್ಳುವುದಕ್ಕಾಗಿ ಅಡವಿಗೆ ಹೋದರು ಇಬ್ಬರು ವಿಹಾಯಿ ತರುವುದಕ್ಕಾಗಿ ನೆರೆಯ ಗ್ರಾಮಕ್ಕೆ ತೆರಳಿದರು. ಹೀಗೆ ಹೋಗುತ್ತಿರುವಾಗ ಇವರು "ಪದಾರ್ಥಗಳಲ್ಲಿ ವಿಷವನ್ನು ಬೆರೆಸಿಕೊಂಡು ಹೋಗೋಣ ಅವರಿಬ್ಬರು ತಿಂದು ಸತ್ತು ಹೋಗುತ್ತಾರೆ ಹಣವೆಲ್ಲವೂ ನಮ್ಮದಾಗುತ್ತದೆಂದು" ಯೋಚಿಸಿ ಅದರಂತೆ ಮಾಡಿಕೊಂಡು ಬಂದರು ಇತ್ತ ಇವರಿಬ್ಬರು "ಅವರು ಬಂದ ಕೂಡಲೆ ಉಪಾಯದಿಂದ ಇವರಿಗೆ ತಳ್ಳ ಕೊಂದುಬಿಟ್ಟರೆ ಹಣವೆಲ್ಲವೂ ನಮ್ಮಿಬ್ಬರದೆ ಎಂದು" ಯೋಚಿಸಿಕೊಂಡು ಕುಳಿತಿದ್ದರು ಹೀಗೆ ಉಭಯಸಕ್ಷದವರೂ ತಂತಮ್ಮ ಕುತಂತ್ರದ ಪರಿಣಾಮವನ್ನು ಕುರಿತು ಬಹು ಸಂತಸದಿಂದಿದ್ದರು. ತದನಂತರ ದಲ್ಲಿ ಬಾವಿಯ ಹತ್ತಿರ ನಾಲ್ವರೂ ಹೋದಾಗ್ಯೆ ತಾವು ಯೋಚಿಸಿಕೊಂಡಂತೆ ಉಪಾಯಾಂತರದಿಂದ ಈರ್ವರನ್ನೂ ಬಾವಿಗೆ ತಳ್ಳ ಅತಿ ಹರ್ಷದಿಂದ ಬಂದು ಮಿರಾಯಿ ತಿಂದು ವಿಷವೇರಿ ಈರ್ವರೂ ಕಾಲಾಧೀನರಾಗುತ್ತಿದ್ದರು ಇವರಿಬ್ಬರೂ ಅಚ್ಚಕ್ಕಲ್ಲಕಾಲದ ಹಿಂದೆ ತಮ್ಮ ಭಾವೀ ಸುಖದ ಬಗ್ಗೆ ಅತಿ ಹರ್ಷದಿಂದಿದ್ದವರ ಪರಿಣಾಮವೇ ಹಾಯಿತು ನೋಡಿದಿರಾ! ಆದಕ್ಕಾಯುಕ್ತ ಮೋಸವು ಯಾರಿಗೂ ಲೇಸನ್ನುಂಟುಮಾಡತಕ್ಕದ್ದಲ್ಲ ವೆಂಬುದನ್ನು ತಿಳುಕೊಂಡು ಸ್ವಪ್ನಾತ ಪರಘಾತ ಮಾಡತಕ್ಕ ಈ ಮೋಸಕ್ಕೆ ವಶರಾಗಬಾರದು.

ಪ್ರ—ಕಾಲಚಕ್ರದ ಕಾರ್ಯವೇನು?

ಉ—ಇದರ ಮಹಿಮೆಯು ಅತಿವಿಚಿತ್ರವಾಗಿರುವದು. ಈ ಕಾಲಚಕ್ರವು ಯಾರನ್ನೂ ಬಿಟ್ಟದ್ದಲ್ಲ. ಧನಿಕನಿರಲಿ, ದರಿದ್ರನಿರಲಿ, ಪಂಡಿತನಿರಲಿ, ಪಾಮರನಿರಲಿ, ಭೂಪಾಲನಿರಲಿ, ಗೋಪಾಲನಿರಲಿ, ಸುಗುಣಿಯರಿರಲಿ, ದುರ್ಗುಣಿಯರಿರಲಿ, ವಿರಕ್ತನಿರಲಿ, ಸರಕ್ತನಿರಲಿ ಅವನಿಗೆ ಒಂದಿಲ್ಲೊಂದು ಸಾರಿ ಕಾಲಚಕ್ರವು ತನ್ನ ಕಾರ್ಯಕವನ್ನು ತೋರಿಸದೆ ಬಿಡುವುದಿಲ್ಲ. ಇದರಿಂದ ಯಾವಕಾಲಕ್ಕೆ ಯಾವಸ್ಥಿತಿಗಳು ಒದಗುತ್ತವೆಂಬುದನ್ನು ಹೇಳಲಿಕ್ಕೆ ಬರುವಂತಿಲ್ಲ. ಇದರ ಅದ್ಭುತ ಶಕ್ತಿಯಿಂದ ಸುಖ-ದುಃಖ, ಶಾಂತಿ-ಸಿಟ್ಟು, ಹರ್ಷಾಮರ್ಷ ಇತ್ಯಾದಿ ಮನೋವಿಕಾರಗಳನ್ನು, ನಾನಾ ಜಗೆಯ ಅನ್ಯೋನ್ಯ ವಿಪರೀತ ಸ್ಥಿತಿಯನ್ನು ನಿಶ್ಚಯಿಸೋಡಬಹುದಾಗಿದೆ. ಇದರ ಸಾಮರ್ಥ್ಯದಿಂದ ಕೆಲವರು ಉಂಡುಟ್ಟು ಕುಲುಕುಲನೆ ನಗುತ್ತಿದ್ದರೆ ಕೆಲವರು ಅತನ-ವಸನ-ನಸತಿಗಳ ಅಭಾವದಿಂದ ಗುಳುಗುಳು ಅಳುತ್ತಿರುವರು; ಕೆಲವರು ಅಧಿಕಾರದ ಪದೇತಿಖರ ಪದೆ್ಯೇರುತ್ತಿದ್ದರೆ ಕೆಲವರು ಚಾಕರಿಯ ಕಸಗುಂಡಿಯನ್ನು ಹೊರಳಾಡುತ್ತಿರುವರು; ಕೆಲವು ಒಕ್ಕಲ ತನದಿಂದ ವರ್ಷಾನುವರ್ಷ ಧಾನ್ಯದ ಉಗ್ರಾಣಗಳನ್ನು ಹೆಚ್ಚಿಸುತ್ತಿದ್ದರೆ ಕೆಲವರು ಅದೇ ಒಕ್ಕಲತನದಿಂದ ಧಾನ್ಯದ ಉಗ್ರಾಣಗಳನ್ನು ಮುಚ್ಚುತ್ತಾ ನಡೆದಿರುವರು; ಕೆಲವರು ವ್ಯಾಪಾರದಿಂದ ದರವರ್ಷ ಬೆಳ್ಳಿ ಬಂಗಾರಿ ಕಬ್ಬಿಣದ ಪೆಟ್ಟಿಗೆ ಹೊಲಮನೆಗಳನ್ನು ಖರೀದಿಮಾಡುತ್ತಿದ್ದರೆ ಕೆಲವರು ಅದೇ ವ್ಯಾಪಾರದಿಂದ ಸೊಲ-ಮನೆ-ಒಡವೆಗಳನ್ನು ಹರಾಜಿಗೆ ಹಚ್ಚುತ್ತಿರುವರು, ಒಂದುಕಡೆ ಕುಡಿಯುವುದಕ್ಕೂ ನೀರು ಇಲ್ಲದಿದ್ದರೆ ಮತ್ತೊಂದು ಕಡೆಗೆ ಅತಿವೃಷ್ಟಿಯಿಂದ ಊರಿಗೆ ಊರುಗಳೇ ಕೊಚ್ಚಿಕೊಂಡು ಹೋಗುತ್ತಿರುವವು. ಹೀಗೆ ಜಗದ್ಗಿ ಒಂದಲ್ಲ ಎರಡಲ್ಲ ಅನೇಕ ವಿಪರೀತ ಸಂಗತಿಗಳು ನಡದೇ ಇರುತ್ತವೆ.

ಪ್ರ—ಜೀವನ ಪುರುಷಾರ್ಥವೇನು?

ಉ—ದುಃಖದ ವಿಯೋಗ ಸುಖದ ಯೋಗ. ಈ ಸ್ಥಿತಿಯೇ ಕೈವಲ್ಯವು.

ಪ್ರ—ಮಿಗಿಲಾದ ಸೂತಕವಾವುದು?

ಉ—ಮರಣಸೂತಕವು. ಜಗತ್ತಿನಲ್ಲಿ ಹೆತ್ತ ಸೂತಕ, ಸತ್ತ ಸೂತಕ, ರಜಸ್ಸೂತಕ ಇತ್ಯಾದಿ ಸೂತಕಗಳುಂಟು, ಇವುಗಳಲ್ಲಿ ಹೆತ್ತ ಸೂತಕವು ಹತ್ತು ದಿನಕ್ಕೂ, ಸತ್ತ ಸೂತಕವು ಹನ್ನೊಂದು ದಿನಕ್ಕೂ, ರಜಸ್ಸೂತಕವು ನಾಲ್ಕು ದಿವಸಕ್ಕೂ ಪರಿಹಾರವಾಗುವವು. ಆದರೆ ಈ ಮರಣಸೂತಕವು ತೀರಿಸಿದಲ್ಲದೆ ಜನ್ಮ ಜನ್ಮಾಂತರಕ್ಕೂ ಬಿಡುವದಿಲ್ಲವು. ಅದಕ್ಕಾಯುಕ್ತ ವಜ್ರಲೇಪದಂತೆ ಒಲವಾಗಿ ಅಂಟಿಕೊಂಡು ಬರುವ ಈ ಮರಣ ಸೀರಾಚೆಗೆ ಅತಿಶಯವಾಗಿದಿರುವದು ಉತ್ಪ್ರೇಕ್ಷಲಕ್ಷಣವು. ಅಂದರೆ ಮತ್ತೊಬ್ಬರ ಹಣವನ್ನು ನಿಲ್ಲಿಸಿಕೊಳ್ಳ ಬಾರದೆಂಬ ಭಾವವು.

ಪ್ರ—ಯುಗಾದಿ ಹಬ್ಬದಲ್ಲಿ ಬೇವು ಬೆಲ್ಲವಂ ಮಿಶ್ರ ಮಾಡಿ ತಿನ್ನುವುದರ ರಹಸ್ಯವೇನು?

ಉ—ಜಗತ್ಸಂಬಂಧವಾದ ಭೋಗ ಭಾಗ್ಯಗಳು ಕಹಿ, ಸಿಹಿ (ಸುಖ-ದುಃಖ) ಗಳಿಂದ ಮಿಶ್ರವಾಗಿರುವವೆಂಬುದನ್ನು, ಈ-ಸಿಹಿ ಬೇರಿಸಿ ತಿನ್ನುವಂತೆ ಸುಖ ದುಃಖಗಳನ್ನು ವಿಕರೀತಿಯಾಗಿ ಭೋಗಿಸಬೇಕೆಂಬುದೇ!

ಪ್ರ—ಕಾರ್ಯವಾದಮೇಲೆ ಜನರಿಂದ ಉಪೇಕ್ಷಿಸಲ್ಪಡತಕ್ಕವರಾರು?

ಉ—ಸೂಲಗಿತ್ತಿ, ಕುಂಟಣಗಿತ್ತಿ, ನಾವಿಕ, ವಿದ್ಯಾಗುರು, ವೈದ್ಯ, ಮತ್ತು ಸರಕಾರು ಇವರೆಲ್ಲರೂ ಕಾರ್ಯವಾದಮೇಲೆ ಅಪ್ರಯೋಜಕರಾಗುವರು ಅಂದರೆ, ಕಾರ್ಯವಾದಮೇಲೆ ಅವರಂ ವಿಚಾರಿಸುವವರೇ ಇಲ್ಲವೆಂದು ಭಾವವು.

ಪ್ರ—ಜನರಿಗೆ ದ್ರವ್ಯದ ಕೃಪೆಯುಂಟಾದರೇನು ಮಾಡುವರು?

ಉ—ಸತ್ಯ-ಸಖ್ಯ, ದಾಕ್ಷಿಣ್ಯ ಮೊನ-ಜಾತಿ, ನೀತಿ ಗುರು ಇವುಗಳಂ ತ್ಯಜಿಸುವರು ಇವರಿಗೆ ಹಣವನ್ನು ಗಳಿಸಬೇಕೆಂಬ ಚಿಂತೆಯೊಂದೇ ಒಲವಾಗಿರುವದು, ಬಂಧು ಬಾಂಧವರು ಕಣ್ಣಿಗೆ ಕಾಣಿಸರು. ಮನವೆ ರಸೆಗಳು ಗಮನಕ್ಕೆ ಬರುವದಿಲ್ಲ ಅವರು ದಾನಧರ್ಮಗಳು ಪುಣ್ಯಾಪಾಪಗಳು ಎಂಬುದನ್ನು ಲಕ್ಷಿಸರು. ಅವರಿಗೆ ಸಿದ್ಧಾಹಾರಗಳು ಬೇಡವಾಗುವವು; ಅಂತು ಇವರು ಕೇವಲ ಅಂತರ್ಮುಖಿಯಾದ ಯೋಗಿಯಂತೆ ಯಾವಾಗಲೂ ಹಣ-ಹಣವೆಂದು ಬಾಯಿಬಾಯಿ ಬಿಡುತ್ತಿರುವರು

ಪ್ರ—ದೊಡ್ಡವರೇ ಪರರಾರು?

ಉ—ದೊಡ್ಡವರೆಂದರೆ-ಉದ್ದವಾದ ದಪ್ಪವಾದ ಶರೀರಿಗಳಲ್ಲ, ಗಡ್ಡ ಮಾಸೆ ಕೂದಲುಗಳು ಬಿಳುಪಾದವರಲ್ಲ, ಸಾವಿರಗಟ್ಟಲೆ ಸಂಬಳವನ್ನು ತಕ್ಕೊಳ್ಳತಕ್ಕವರಲ್ಲ; ಆದರೆ ಪರಸ್ತ್ರೀ ಪರದ್ರವ್ಯಗಳನ್ನು ಯಾರು ತಾಸ್ಯ ಲೋವ್ಯಗಳಂತೆ ನೋಡುವರೋ ಯಾರು ಕಾಯ, ವಾಕ್, ಮನಸ್ಸುಗಳಿಂದ ಪ್ರಾಣಿಗಳಂ ನೋಯಿಸುವ ದಿಲ್ಲವೋ ಅವರೇ ದೊಡ್ಡವರು.

ಪ್ರ—ಸಂಸಾರ ಸಮುದ್ರವು ಹೇಗೆ ಪ್ರಕಾಶಿಸುತ್ತಿರುವದು?

ಉ—ಇದು ಗಂಭೀರವಾದ ವಿಷಯಭ್ರಮೆಗಳೆಂಬ ಸುಳಿಗಳಿಂದಲೂ, ಮರಣಗಳೆಂಬ ದೊಡ್ಡ ಅಲೆಗಳಿಂದಲೂ, ಮನೋರಥಗಳೆಂಬ ಸಣ್ಣ ಅಲೆಗಳಿಂದಲೂ, ಇಂದ್ರಿಯಗಳೆಂಬ ಜಲಚರಗಳಿಂದಲೂ ನಿಬಿಡವಾಗಿ, ಮನನವೆಂಬ ಬಿರುಗಾಳಿಯಿಂ ನಿರಂತರವಾಗಿ ಜಳಿಸುತ್ತಾ ಚಾಂಚಲ್ಯವೆಂಬ ಜಲಕ್ಕೆ ಆಧಾರವಾಗಿ ಪ್ರಕಾಶಿಸುತ್ತಿರುವದು. ಇಂತಹ ವಿಷಮ ಸಂಸಾರ ಸಾಗರವಂ ದಾಟಲಿಕ್ಕೆ ವಿವೇಕವೇ ತಾವೆಯಾಗಿರುವದು.

ಪ್ರ—ಸ್ವಪ್ನ ಸ್ಮೃತ್ಯಾದಿ ಕಾಲಕ್ಕೂ, ಸಮಾಧಿ, ಸುಷುಪ್ತಿ, ಮೂರ್ಛಾಕಾಲಕ್ಕೂ ತಾರತಮ್ಯವೇನು?

ಉ—ಸ್ವಪ್ನ ಸ್ಮೃತ್ಯಾದಿ ಕಾಲಗಳಲ್ಲಿ ಮನುಷ್ಯನಿಗೆ ಅಮಕೂಲಗಳಾದ ಸ್ತ್ರೀ ಪುತ್ರಾದಿ ಬಾಹ್ಯವಸ್ತುಗಳು ಮತ್ತು ಪ್ರತಿಕೂಲಗಳಾದ ಸರ್ಪ ವ್ಯಾಘ್ರಾದಿ ಬಾಹ್ಯವಸ್ತುಗಳು ನಿಜವಾಗಿ ಬಳಿಯಲ್ಲಿ ಇಲ್ಲದೆ ಇದ್ದಾಗ್ಯೂ, ಆ ಸ್ತ್ರೀ ಸರ್ಪ ವ್ಯಾಘ್ರಾದಿಗಳು ಮತ್ತೆಸ್ಸಿಗೆ ಭಾಸವಾಗುವುದರಿಂದ, ಹರ್ಷಾಮರ್ಷಗಳಂ ಹೊಂದುವನು. ಮತ್ತು ಸಮಾಧಿ, ಸುಷುಪ್ತಿ, ಮೂರ್ಛಾಕಾಲಗಳಲ್ಲಿ ಅಮಕೂಲಪ್ರತಿಕೂಲಗಳಾದ, ಸ್ತ್ರೀ ವ್ಯಾಘ್ರಾದಿ ಬಾಹ್ಯವಸ್ತುಗಳು, ದಿಟವಾಗಿ ಬಳಿಯಲ್ಲಿ ಇದ್ದಾಗ್ಯೂ, ಅವುಗಳು ಮನಸ್ಸಿಗೆ ತೋರದೆ ಇರುವುದರಿಂದ ಆ ವಿಷಯ ಸಂಬಂಧವಾದ ಹರ್ಷಾಮರ್ಷಗಳನ್ನು ಹೊಂದುವದಿಲ್ಲ. ಆದ ಪ್ರಯುಕ್ತ ಮನಸ್ಸಂಬಂಧವಿಲ್ಲದೆ ಕೇವಲ ಬಾಹ್ಯ ವಿಷಯಗಳಾದ ಅನ್ಯಯ ವ್ಯತಿರೇಕಗಳು ಉಂಟಾಗುವದಿಲ್ಲವು.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಕೇದಾರೇಶ್ವರಕವಾಟೋದ್ಘಾಟನ ಸಮಾರಂಭ

ತಾರೀಖು ೩೪-೪-೬೯ ನೇ ಸೋಮವಾರ ವೈಶಾಖ ಶುದ್ಧ ೫ ದಿವಸ ಪ್ರಾತಃಕಾಲ ವ್ಯಷಭಲಗ್ನದಲ್ಲಿ ಶ್ರೀ ಕೇದಾರನಾಥನ ಕವಾಟೋದ್ಘಾಟನ ಸಮಾರಂಭವು ನೆರವೇರುವದು. ಆದ್ದರಿಂದ ಸಮಸ್ತ ಧರ್ಮಾಭಿಲಾಷಿಗಳಾದ ಶ್ರೀಮನ್ಮಹಾರಾಜರುಗಳು ಮತ್ತು ಮಹಾರಾಜ್ಞಿಯವರು, ಶ್ರೀಮಂತರು, ಧರ್ಮಧುರಂಧರರು ಅಗಮಿಸಿ ಶ್ರೀ ಕೇದಾರನಾಥನ ದರ್ಶನಮಾಡಿ ಧನ್ಯರಾಗಬೇಕಾಗಿ ಪ್ರಾರ್ಥನೆ. ೩೪-೪-೬೯ ರಿಂದ ದೀಪಾವಳಿಯವರೆಗೆ ಅಂದರೆ ಆರು ತಿಂಗಳವರೆಗೆ ಮಹಾ ಸಂಸ್ಥಾನದ ಆಡಳಿಯಂದ ಪೂಜೆಯು ನಡೆಯುವದು.

ಅಂಬಾದತ್ತ ಲಿಖಿವಾರ
ಶ್ರೀ ಕೇದಾರನಾಥ ಮಂದಿರ ಓಪೇಮಕ.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೩ ದಿನ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದಿ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಡೋಸ್ಸು ಸೀಸೆಗೆ ಆಣೆ 0-14-0, 8 ಡೋಸ್ಸು ಸೀಸೆಗೆ ರೂ. 1-8-0, ಡಜರ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸವನೆ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವಿಕೆ, ಮೂತ್ರದೊಡನೆ ನಸ್ಟವಾಗುವದು, ವೀರ್ಯಕ್ಷಯ, ತಲೆಗಾದಧಾತು, ಇವೆಲ್ಲದ ಬಾಧೆಯನ್ನು ಕಿತ್ತು ಬಿಸಾಡುವದಲ್ಲದೆ ಧಾತುಪೌಷ್ಟಿಕ ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಯ್ಯಲುಗಳನ್ನು ನಾಶಪಡಿಸಿ ಜಾಡಿಸುವ ದರಲ್ಲಿ ಮಿಂಬ್ಯು ಔಷಧಿ. ಡಜನ್ ಆ. 0-5-0 100 ಕ್ಕೆ ರೂ. 2-0-0

ರಿಂಗ್ ವರ್ಮ್ ಬಾಮು—ಕರುಣಾಕರವಾದ ಮುಲಾಮೇಯಾವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋ—ಪಾಲ್ಯಕ್ಯಾಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ ಎಲುಬುಗಳು ಮೆತ್ತಗಾಗಿ ತಾಯಿ ರಿಗ್ರಹಣ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0.

ಈಯರ್ ಒಯಿಲ್—ಕಿವಿ ಸೋರುವಮ, ವ ನೋವು ಕಿವುಡು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣಹೊರಕಡೆಗೆ ನಿರ್ದಾಪಧ ಸೀಸೆಗೆ ರೂ. 1-0 0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಡೆಗೆ ಸೀಸೆಗೆ ರೂ. 1-0 0.

ಕಂಪೌಂಡ್ ಸಿರಪ್ ನೆಪಿಳೂಜ—ಪ್ರಮೇಹ ಮೂತ್ರ ದ್ವಾರದಿಂದ ಕೀವು, ಮೂತ್ರಹೊಯ್ಯುವಾಗ ಕಡೆಯಲಾರದೆ, ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಅಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇನೇ ಮೊದಲಾದ ಪ್ರಮೇಹದ ಲಕ್ಷಣಗಳುಇದನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಕುದ್ಧ ಟಿಕ್ಕು, ಹೊಮ್ಮೊಪಥಿ ಔಷಧಿಗಳು ನಮ್ಮಲ್ಲಿ ಮೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

[25] ಮಲೇರಿಯಾನ ಕಂಪೆನಿ, ಹಂಪನಕಟ್ಟೆ (21) ಮಂಗಳೂರು, ದ. ಕ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಸುಳ್ಳೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಏಮುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಸೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿವೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬರುವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವಪಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ಸಂಖ್ಯೆ	ಮೊಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ತಿನೇ ನಂಬರ್	೧	೮—೦—೦
ರಸಸಿಂಧೂರ	೧	೫—೦—೦
ಮಲ್ಲಸಿಂದೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರ್ತಾಳಭಸ್ಮ	೧	೦—೮—೦
ಕಂಚಿಸಭಸ್ಮ	೧	೦—೮—೦
ಉಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಚಿಪ್ಪಿಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ ಪಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಡಿಸ ಭಸ್ಮ	೧	೦—೮—೦
ಗೋದಂತಿಹರಿತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯವೃಟಿ	೧	೧—೦—೦
ಶಿಲಾಜಿತ ಅಗ್ನಿವೃಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ.

ಆಯುರ್ವೇದರಸಾಯನಶಾಲಾ,
ಪೋಸ್ಟ್, ಓಮಿಮಕ, ಜಿಲ್ಲಾ ಗಡವಾಲ್ ಯು. ಪಿ.

॥ ಶ್ರೀ ಗೌರೀಶಂಕರಾಭ್ಯಾಂ ನಮಃ ॥

ಅಪೂರ್ವ ಸಂಧಿ! ತ್ವರೆ ಮಾಡಿರಿ! ಅಲಭ್ಯ ರತ್ನ!

ಶಿವರಹಸ್ಯ.

(ಅದ್ಭುತ ಇತಿಹಾಸ ಗ್ರಂಥ)

The Encyclopaedia of SHIVA-DHARMA.

ಸಂಪಾದಕರು—ಸುಪ್ರಸಿದ್ಧ ಲಂಡಿತ ಬಿದಿರೆಮಠದ ವೀರಭದ್ರಶಾಸ್ತ್ರಿಗಳು.

ಶಿವರಹಸ್ಯವೆಂದರೆ ಕೆಲವರು ಸ್ಕಂದ ಪುರಾಣಾಂತರ್ಗತವಾದ ಚಿಕ್ಕ ಭಾಗವೆಂದೆ ಭಾವಿಸಿರುವರು. ಅದು ಬೇಗೆ! ಈ ಶಿವರಹಸ್ಯವು ಇತಿಹಾಸವೆಂದೇ ಸುಪ್ರಸಿದ್ಧವಾಗಿದೆ. (ಶಿವರಹಸ್ಯಾಖ್ಯೋ ಮಹೇತಿಹಾಸಃ) ಇದು ಹನ್ನೆರಡು ಭಾಗ (ಒಂದು ಲಕ್ಷ ಇಪ್ಪತ್ತು ಸಾವಿರ ಶ್ಲೋಕ) ಗಳಿಂದ ತತ್ತ್ವರತ್ನಾಕರವಾಗಿದೆ ಎಲ್ಲ ವಿಷಯಗಳಿಂದ ಮಹಾಭಾರತಕ್ಕಿಂತಲೂ ಸರ್ವಾಂಗ ಸುಂದರವಾದ ಮಹಾ ಗ್ರಂಥವಾಗಿದೆ. ಜೈಗೀಷವ್ಯ ಮಹರ್ಷಿಗಳಿಂದ ಅವಿಚ್ಛಿನ್ನವಾದ ಈ ಗ್ರಂಥದ ಪ್ರತಿಯು ಬಹಳ ವ್ಯಯ ಪ್ರಯಾಸಗಳಿಂದ ಸಂಪಾದಿಸಲ್ಪಟ್ಟಿದೆ.

ಇದರಲ್ಲಿ ಶಿವನು ಯಾರು? ಇವನು ಮಹಾದೇವನೇ? ಶಿವನು ದ್ರಾವಿಡನೇ? ವೇದಗಳಿಗೂ ಇತರ ದೇವತೆಗಳಿಗೂ ಶಿವಲಿಂಗ ಪೂಜಾ ಮತಗಳಿಗೂ ತಾರತಮ್ಯವೇನು? ಪ್ರಾಚೀನ ಕಾಲದ ಶಿವಭಕ್ತರೂ ಪ್ರಸಿದ್ಧರೂ ಆಚಾರ್ಯರೂ ಯಾರು? ಶೈವ-ವೀರಶೈವ ಧರ್ಮದ ಆಚಾರ ರಹಸ್ಯ ವಿಶೇಷಗಳೇನು? ಈ ಮತಗಳ ಉತ್ಪತ್ತಿ ಹೇಗೆ? ಆರ್ಯ ದ್ರಾವಿಡ ಸಂಸ್ಕೃತಿಗಳೆಂದರೇನು? ಎಂಬ ಇನೇ ಮೊದಲಾದ ಶೈವ ವೀರಶೈವ ಮತದ ಸಾವಿರಾರೇ ಅಪ್ಪು, ಸಮಸ್ತ ವಿಷಯಗಳನ್ನು ಸುವಿಶದವಾಗಿ ತಿಳುಹಿಸುವದರಲ್ಲಿ ಈ ಗ್ರಂಥವು ವಿಜ್ಞಾನ ಕೋಶವಾಗಿದೆ (Encyclopaedia of Shiva Dharma.)

ಇದರ ಪ್ರಕಾಶನಕ್ಕಾಗಿ ಒಟ್ಟು ೫೦ ಸಾವಿರ ರೂಪಾಯಿಗಳು ಬೇಕಾಗಬಹುದು. ಈಗಾಗಲೇ ಮೂರು ಸಾವಿರ ರೂಪಾಯಿಗಳ ವ್ಯಯದಿಂದ ೧, ೨ ಭಾಗಗಳು ಸಂಪೂರ್ಣವಾಗಿಯೂ ೩ ನೆಯ ಭಾಗವು ಅರ್ಧದವರೆಗೂ ಸಂಸ್ಕೃತಾಕ್ಷರಗಳಲ್ಲಿ ಮುದ್ರಿತವಾಗಿದೆ ಮುಂದಿನ ಭಾಗಗಳು ಶೀಘ್ರವಾಗಿಯೇ ಹೊರಬೀಳತಕ್ಕುವಿವೆ ಈ ಗ್ರಂಥದ ಪೀಠಿಕೆಯು ಇಂಗ್ಲೀಷು, ಸಂಸ್ಕೃತ, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ ಪ್ರಕಟಿಸಲ್ಪಡುವದು ಕಡೆಯಲ್ಲಿ ದೊಡ್ಡ ವಿವರಣಾ ಗ್ರಂಥವೂ ವಿವಿಧ ಭಾಷೆಗಳಲ್ಲಿ ಹೊರಡುವದು. ಇದು ಎಲ್ಲ ದೇಶ (ಭಾರತ, ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ರಷ್ಯಾ, ಜಪಾನ್) ಗಳಲ್ಲಿಯೂ ಪ್ರಸಿದ್ಧಿಗೆ ಬರುವ ಗ್ರಂಥವಾಗಿದೆ. ಈಗಾಗಲೇ ಅನೇಕ ಜನ ಮಹಾಶಯರು ಸಹಾಯ ಮಾಡಿದ್ದಾರೆ ಶೈವ ವೀರಶೈವರೂ ಅತ್ಯವಶ್ಯವಾಗಿ ತಪ್ಪದೆ ಸಹಾಯ ಮಾಡಿ ಜಗದ್ವಿಖ್ಯಾತರೂ ವಾಙ್ಮಯದ ಉದ್ಧಾರಕರೂ ಆಗಬೇಕೆಂದು ನಿವೇದನೆ

ರೂಪಾಯಿಗಳು ೧೦೦೦ ರಿಂದ ೫೦೦ ರ ವರೆಗೆ ದಾನ ಮಾಡಿದವರು ಪ್ರತಿಷ್ಠಾಪಕರೆಂತಲೂ, ೨೫೦ ರ ವರೆಗಿನ ಸಹಾಯಕರು ಮಹಾರಾಜ ಪೋಷಕರೆಂತಲೂ, ೧೦೦ ರ ವರೆಗಿನ ದಾತೃಗಳು ರಾಜ ಪೋಷಕರೆಂತಲೂ, ೫೦ ವರೆಗಿನವರು ಸಹಾಯಕರೆಂತಲೂ ಅವರವರ ನಾಮಗಳು ಪೀಠಿಕೆಯ ಎಲ್ಲ ಭಾಷೆಗಳಲ್ಲಿ ಪ್ರಕಟಿಸಲ್ಪಡುವವು. ಮೊದಲಿನ ಮೂರು ವರ್ಗದವರಿಗೆ ಗ್ರಂಥವೆಲ್ಲವೂ ಉಚಿತವಾಗಿ ಸಮರ್ಪಿಸಲ್ಪಡುವುದು. ೫ ರೂಪಾಯಿಗಳಿಗಿಂತಲೂ ಹೆಚ್ಚಿನ ದಾನ ಮಾಡಿದ ಎಲ್ಲರ ನಾಮಗಳೂ ಪ್ರಕಟಿಸಲ್ಪಡುವವು ಅವರವರ ದಾನಕ್ಕೆ ಅನುಕೂಲವಾಗಿ ಅವರವರ ಫೋಟೋಗಳನ್ನೂ ಇದರಲ್ಲಿ ಸೇರಿಸುವಂತಾಗುವದು ಇಂತಹ ಮಹಾ ಕಾರ್ಯಕ್ಕೆ ಸ್ವಹಸ್ತ ಪರಹಸ್ತಗಳಿಂದ ಬಹಳವಾಗಿ ಸಹಾಯಮಾಡಿ ತಮ್ಮ ಧರ್ಮವನ್ನೂ ತಮ್ಮ ನಾಮಗಳನ್ನೂ ಜಗದ್ವಿಖ್ಯಾತ ಮಾಡುವದು ಸ್ವಕರ್ತವ್ಯವಲ್ಲವೇ?

ಬೆಲೆ—ಪ್ರಥಮಾಂಕ 2—೦—೦ ದ್ವಿತೀಯಾಂಕ 1-೮-೦.

Manager,
Shiva Dharma Granthamala
4268, Sajanlal Street,
SECUNDERABAD. (DN)

ಮ್ಯಾನೇಜರ್,
ಶಿವಧರ್ಮಗ್ರಂಥಮಾಲಾ
೪೨೬೮, ಸಜನ್‌ಲಾಲ್ ಸ್ಟ್ರೀಟ್,
ಸಿಕಂದ್ರಾಬಾದ್ (ಡಿ.)

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಮೃತಲೀಲೆಗಳನ್ನ ಕೂಡಿರ ಫೋಟೋ ಸೈಜು ೩೦\೨೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಕೋಕಿವಿಖ್ಯಾತರಾದ ಆರ್ಯಾ, ನಧೀಚಿ, ವ್ಯಾಸ, ಶಾತಾತಪ, ಗೌರ್ಮಾನ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪ್ರತಿಪಾದಿಸುವ ಫೋಟೋ ಸೈಜು ೨೦\೧೪ ಬೆಲೆ ... ೦—೧—೬

ಸದ್ಭಕ್ತ ಸೀತಾಪೂರ್ಣಾಮಾಡಿರತಕ್ಕ ಏಳನೆ ಉಜ್ಜಯಿನಿಯ ಇಷ್ಟಲಿಂಗದ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೨೦\೧೪ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಲೋಕದಿಂದ ಅವತರಿಸಿದ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಲಕ್ಷ್ಮಿಭವನ ನಾಮಾಂಕಿತ ಪೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ಲಿಂಗೀಪಾಣಿಗಳಾಗಿ ಪಶ್ಚಿಮಾಂಭಿಮುಖರಾಗಿ ಮೂಲಕೋಟಿ ಗುರುರೂಪವನ್ನು ಧಾರಣಮಾಡಿ ಮೂಲಕೋಟಿ ಶಿವಲಿಂಗವನ್ನು ಪ್ರತಿಷ್ಠಿಸಿರುವ ಫೋಟೋ ಬೆಲೆ ... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಕಂಠಾಚಾರ್ಯರಿಗೆ ಅಂಬಾ ಸಾಲಿಗ್ರಾಮ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಪೀಠಾಧಿರಾಜಮೂರ್ತಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಸೂಲಪಾಣೀಶ್ವರ ಫೋಟೋ ... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ರಾಜಕ್ಷಿ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಮ್ಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮಮಿತ್ರಂಖಾಪುರೀ ಸೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ . ೦—೦—೯

ಶ್ರೀಮಮ್ಮಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಪ್ರಾಚೀನ ಪ್ರಾಚೀನ ಆಕೃತಿ ಸುಂದರವಾದ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕೆತ್ತನೆಯ ಸುಂದರ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ... ೦—೦—೯

ಹಿಮವತ್ಕೇದಾರದ ಪುಷ್ಕರಣಿಯ ಪೂರ್ವದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀಶೈಲಾಸ್ಥಾನದ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕೆಂಪೇಗೌಡ ನಿರ್ಮಿತ ಸರ್ವಾಲಂಕಾರ ಭೂಷಿತರಾದ ಜಗದ್ಗುರುಗಳ ಅದ್ದಲ್ಲಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೂಜಿತವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗಿದೆ. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[46] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರನಬ (೫ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿವರ್ಮ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚವಿಂಶತಿ ಪುಷ್ಪಪ್ರಕಾಶ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೮ನೆಯ ಆವೃತ್ತಿ)	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	....	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	....	೨ ಆಣೆ
ಬಸವಾದಿಶಿವಜಿತತ್ವದರ್ಪಣ (೪ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯರತಕ (೩ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಪ್ರಭಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	....	೨ ಆಣೆ
ವೀರಶೈವಮತಮಾನಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣಮಹಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಟೀಕ್ಕಿಲ್ಲ)	....	....	೬ ಆಣೆ
ವೀರಶೈವಮಹಾತ್ಮರು	....	....	೪ ಆಣೆ
ಬಸವಾಧ್ಯಾಂತದಿವಾಕರ (೩ನೆಯ ೩ನೃತ್ತಿ)	....	....	೪ ಆಣೆ
ಸದ್ಯೋದ್ಧರತ್ನಾವಳಿ	....	....	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಅವಾರಿ ಧಾಪಜಯಮು (ತೆಲುಗು)			೪ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಆಕೃತಿ ಸಂಜರಮಸ್ಪರ್ಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	...	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೨ ಆಣೆ
ಮಾಹೇಶ್ವರ ವೀಕ್ಷ್ಮಾವಿಧಿ (೩ನೆಯ ಆವೃತ್ತಿ)	....	....	೧೨ ಆಣೆ
ಶಿಖಾಸೂತ್ರಸಿದ್ಧಾಂತವರ್ಪಣ	...	....	೧೨ ಆಣೆ
ಶ್ರೀಕರಧಾಮ್ಯಂ (ಚಕುಸ್ಸೂತ್ರಿ)	....	....	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	....	....	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೭೦ಮಹತ್ಪದ ಫೋಟೋಗಳಿರುವುವು)	....		೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....		೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿನೀಷಟ್ಪದಿ)	....	....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	....	೮ ರೂ.
A brief life-sketch of Pandit Sri Kashinatha Shastriji (*English*)			**4 As.**
Shakti-Vishistadvaita *or* **The Philosophical Aspect of Virasaivism** (*English*)			**8 As.**
Speeches by Pandit Shri Kashinatha Shastriji *English*)			**12 As.**
ವೀರಶೈವರತ್ನ (ಮರಾಠಿ)			**೧ ರೂ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ..			**೧ ರೂ.**
ವೀರಶೈವೇತಿಹಾಸ (ಸಂಸ್ಕೃತ)			**೧ ರೂ.**
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ)			**೬ ಆಣೆ**
ನಂದಿಕೇಶ್ವರಕಾರಿಕಾ (ಸಂಸ್ಕೃತ)			**೨ ಆಣೆ**
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)			**೨ ಆಣೆ**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)			**೩ ರೂ**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಅಚ್ಚಾಗಿ ಪ್ರಕಾಶಿಸಲ್ಪಟ್ಟಿದ್ದು ಶ್ರೀ ಪೀಠದ ಗುರುಪಾದಪೂಜ್ಯರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ॥ ಜಗದ್ಗುರು ಪಂಚಾಚಾರ್ಯಾಗ್ರ ಪ್ರತೀಚಂದು ॥ REGISTERED No. M. 2 266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧೫ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ ನೇ ಮಾರ್ಚಿ ೧೯೩೯ [ಸಂಚಿಕೆ ೪೫

"ಸೊಂಡೂರು ಶ್ರೀ ಕುಮಾರಸ್ವಾಮಿ"

(ವರಕವಿ ಶ್ರೀ ವಾಗೀಶ)

[ಈ ರಮ್ಯಕ್ಷೇತ್ರವನ್ನು ಪೂರ್ಣವಾಗಿ ಸಂದರ್ಶಿಸಿ ಬರೆದ ಪದ್ಯಗಳವು]

ಏ ಕುಮಾರಸ್ವಾಮಿ' ಕೈಲಾಸದೊಳಗಿರದೆ ।
ಏಕೆ ನೀನಲ್ಲಿ ನೆಲೆಸಿರುವೆ ಕಾಣೆ ॥
ನಾಳೆಸೇನಾಪತಿಯು ನೀನಲ್ಲವೇ ಅಲ್ಲಿ ।
ಬೇಕಾವ ವಸ್ತುಗಳು ಸಿಗಲಿಲ್ಲವೆ? ॥ ೧ ॥

ತರಗಾರಿಯರೆ ನಿನ್ನ ತಂದೆತಾಯಿಗಳಲ್ಲೆ ? ।
ಸುರಾರಾಜ ನಿನ್ನ ಪಿಂಯ ವಾಸನಲ್ಲೆ ? ।
ತೊರೆದಿವರ ನೆರಲೋಕಕಾಗಮಿಸಿ ಈ ಗಿರಿಯ ।
ಶಿರದೊಳೇಕಯ್ಯ' ನೀ ಮೆರೆಯುತಿರುವೆ' ॥ ೨ ॥

ಸುರಗಿ ಸಂಪಿಗೆ ಹೊನ್ನೆ ಬೆಟ್ಟದಾವರೆ ಹೂಗ ।
ಳಿರಲಿಲ್ಲವೇನಲ್ಲಿ ನೀನು ಮುಡಿಯೆ ? ॥
ಗಿರಿಜೆ ಜಗದಮ್ಮ ಗಿರಿಮಲ್ಲಿಗೆಯ ತನಗಾಗಿ ।
ತರಲು ಕಳುಹಿದಳೇನು ಕಂದ' ನಿನ್ನ ? ॥ ೩ ॥

ಮಂಜುವೆಟ್ಟದೊಳುಂಟೆ ಪಾರಿಜಾತದ ತರುವು? ।
ನಂಜುಂಡನಾವಾಸ ಬೆಳ್ಳಿವೆಟ್ಟ ' ॥
ರಂಜಿಸಿರಲಲ್ಲಿ ಸಿರಿಗಂದ ಶಿವನಾಜೂಡಿ ।
ಗಂಜುತಿರಲಿಲ್ಲವೇ ಬಳಿಯುವುದಕೆ' ॥ ೪ ॥

ಯಾರು ಕಂಡರು ಸ್ವಾಮಿ' ನಿಮ್ಮ ಕೈಲಾಸವನು ।
ನೀರನ್ನವಲ್ಲಿ ನೊದಲಿಲ್ಲವಂತೆ' ॥
ಘೋರತಪಸಿಗೆ ಬಂದವಗಮ್ಯತನಲ್ಲವಲೆ ।
ಬೇರಾವ ವಸ್ತುವೂ ದೊರೆಯದಂತೆ' ॥ ೫ ॥

ಇಂತಾಗಿ ದೇವ' ನೀನಾವ ಕತದಿಂದಿಲ್ಲಿ ।
ಸಂತೋಷಪ್ಪೊಂದುವುದಾಗಿ ಒಂದೆ? ॥
ಕಂತುಹರಕುವರ! ಪೇಳೀಗ ಸಂತೈಸು' ನಾ ।
ಚಿಂತೆಗೊಳಗಾಗಿರುವೆನೆನರಿಯದೆ ॥ ೬ ॥

ನೀನಿದ್ದ ಕಡೆಯಲ್ಲೆ ನಿನ್ನಾಗಮುವ ಬಲ್ಲ ।
ಜ್ಞಾನಿಕುಂಭಸಿಂಹನೊ ತಿಳಿಯದಿಹುದು' ॥
ಮಾನವರು ಮೊದಲವನ ತೀರ್ಥದೊಳಗಾಡಮಿಸಿ ।
ಯಾನಂತರವೆ ನಿನ್ನ ಕಾಂಬರೇಕೆ? ॥ ೭ ॥

ಏನು ನಿನ್ನಯ ದಿವ್ಯಮೂರ್ತಿತಲೆಯೊಳು ಲಿಂಗ' ।
ಘಾನ.ಗ್ರಹವದಬಲ ಕಾಲ್ಗಳ ॥
ಸಾನುರಾಗದೆ ತಬ್ಬಿಕೊಂಡ ವೀರರದಾರು? ।
ಏನು ಕಾರಣ ನಿನ್ನ ಬೇಡುತಿಹರು' ॥ ೮ ॥

ವೀರಶೈವರ ಗೋತ್ರಪುರುಷ ನೀನಲ್ಲವೆ' ।
ಸಾರಿಯಂರೆಳೆ ನೀ ಇಂದಿರುವೆ ' ॥
ಕಾನುವೆ ನೆತ್ತರವ ವೀರ! ಇದು ನಿಶ್ಚಯವೆ? ।
ಭೂಸುಹಿಮನೆ' ಭಕ್ತರಿಂಗು ಛಿನವೆ' ॥ ೯ ॥

ಜೇವಲೋಕವ ಬಿಟ್ಟು ನೀನಿಲ್ಲಿ ಬಂದಿರಲು ।
ಜೇವರೊಡೆಯೊಡತಿಯರು ಅಲ್ಲಿರುವರೆ' ॥
ದೇವದಿಪಾರ್ವತಿ ನಿನ್ನ ಬಲಗಡೆಯ ಗುದಿಯೊಳಿರೆ ।
ದೇವ ನೀನೆಡಗಡೆಯ ಗುದಿಯೊಳಿಹನು' ॥ ೧೦ ॥

ಅಮ್ಮ' ಪಾರ್ವತಿ!' ಎನ್ನು ಹಡೆದಮ್ಮ' ಮೇಗ್ಯೆಯ್ಕೆ ।
ಅಮ್ಮ' ಬಲಗಡೆ ಏನು' ಲಿಂಗವೇನು' ॥
ನಿಮ್ಮ ದಿಯು ಮನಕಾಯ್ತು ನೀನು ಧರಿಸಿಹ ಲಿಂಗ ।
ನಿಮ್ಮ ಪತಿ ನಮ್ಮ ಹಿತ ಶಿವ ಕೊಟ್ಟುದೊ' ॥ ೧೧ ॥

ಗವಿಗಳೋ ಗುಹೆಗಳೋ ಕಂದರಗಳೋ ಬಹಳ' ।
ಶಿವಯೋಗಿಗಳು ಮೊದಲು ಇರುತಿರ್ದರೋ? ॥
ಶಿವ ಶಿವಾ' ಈಗವರು ಮನೆಮಠಗಳನು ಸೇರಿ ।
ಗವಿಗಳವುಗಳನು ಹುಲಿಗಳಿಗಿತ್ತರೋ? ॥ ೧೨ ॥

ಏನು ಕಾಡಿದು' ದೊಡ್ಡ ದೊಡ್ಡ ಸುರಗಳು ಬೆಕೆದು ।
ನಾನಾಮೃಗಂಗಳಿಗೆ ಎಡೆಯಾಗಿದೆ' ॥
ಸಾನುಪ್ರದೇಶ ಬೆಳೆಬೆಳೆದು ತೆಗ್ಗುಬ್ಬುಗಳ ।
ನೇನರಿಯದಂತೆ ಸಮನಾಗಿಸುತಿದೆ' ॥ ೧೩ ॥

ಬೆಟ್ಟಗಳ ಮೇಲೆ ಬೆಟ್ಟಗಳಡರಿ ದಾರಿಗರ ।
ದಿಟ್ಟಿಯನು ಗರ್ವಿನೇ ತಿರುಗಿಸುತಿದೆ' ॥
ಬಟ್ಟೆಯೊಳು ನಡೆವಾಗ ನಡುನೆಯೇ ಎತ್ತುಗಳ ।
ಹೊಟ್ಟೆಯನು ಹೀಚಿ ಹಕ್ಕಾಗಿಸುತಿದೆ' ॥ ೧೪ ॥

ಬಲುಬಗೆಯ ಗಿಡಬಳ್ಳಿ ವೈಬೆದು ವೈಡೂರ್ಯದಲ್ಲಿ ।
ನಿಲುವುದಕೆ ಜಾಗ ಕೊಡಿಸಿರುತಿದೆ' ॥
ಮಲಿನಮನವೆದ ಮುನಿಗಳೆ' ತಪಪ್ರಸಾದದಿಂ ।
ಲನುಮಾನಿಸದೆ ಜ್ಞಾನಿ' ಎನುತಿದೆ' ॥ ೧೫ ॥

ನವಿಲುಗಳ ಹಿಂಡು ಗರಿಗೆದರಿ ನಾರಿಗೆದೆಮರೆ ।
ನವಿನೋಟವನು ಬೀರಿ ನರ್ತಿಸುತಿದೆ ! ॥
ಕವಿಯೆ' ನಮ್ಮೀ ನೈಕೃವಾನ ಪೆಚ್ಚಿಗು ಬರದು ।
ಅವಧಾನದಿಂದ ನೀ ಬರೆಯಿಸುತಿದೆ' ॥ ೧೬ ॥

ಒಂಗುಕಡೆ ಕಬ್ಬಿಣದ ಬೆಟ್ಟವಿನ್ನೊಂದುಕಡೆ ।
ಯಂದದುಮ್ಮಿನ ಬೆಟ್ಟ ಮತ್ತೊಂದೆಡೆ ॥
ಕಂದ! ನೀ ಕಕ್ಕಿರುವ ಹಾಲು-ನೆತ್ತರವಂತೆ ! ।
ಇಂದದುವೆ ಭೂತಿಳಿಸೆ ಕಾವಿಳಿಯೆಯೊ ? ॥ ೧೭ ॥

ಸ್ವಾಮಿ' ಪಶ್ಚುಪತೀಶ'' ನಿನ್ನ ಮಹಿಮೆಯಗಾಧ ।
ನೇಮನಿಷ್ಠೆಗಳು ಬಗಳಯ್ಯ' ನಿನಗೆ ॥
ತಾನುಸನು ಸಾ ನಿನ್ನ ಮಹಿಮೆಗಳತಂತವೆ ! ।
ಶ್ರೀಮದೊಳು ನೀನೆ ದಿಟವರಿದು ಕಾಯ್ದೆ' ॥ ೧೮ ॥

ಈ ಮಹಾರಾಜ ಯಕವಂತರಾವ್ ಘೋರ್ಪಡೆಗೆ
ನೀ ಮನೆಯ ದೇವರಾಗಿರುವ ಕತದೆ ॥
ಹೇಮರಶ್ಮಾದಿಭೂಷಿತನಾಗಿ ಮೆರೆಯುತಿಹೆ ।
ಸ್ವಾಮಿ! ನಿನ್ನಯ ಪೂಜೆ ಸರಿಯಾಗಿದೆ ॥ ೧೯ ॥

ಯತವಂತರಾಯರಿಗೆ ಸಕಲಭಾಗ್ಯವ ಕೊಟ್ಟು ।
ಕುತಲವಾಗಿರುವಂತೆ ನೋಡುತ್ತಿರು' ॥
ತಿಳುಮೆಯು ವಾಗೀಶಗುನ್ನತಿಯೊಳುತ್ತರವ ।
ಪಸುತಮುಖದಿಂದಲೇ ನೀಡುತ್ತಿರು ॥ ೨೦ ॥

ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿಯ ನೆಕ್ಕೆರೆಯವರ ಸಮಕ್ಷಮಕ್ಕೆ

ಬೆಂಗಳೂರಿನಲ್ಲಿ ಮೊನ್ನೆ ಎ ಎಂ.ಸಿ ಸಿ ಕಮಿಟಿಯವರು ಮಾಡುವುದಕ್ಕೆ ತಾವು ಕೈಗೊಂಡಿರುವ ನಿರ್ಧಾರಗಳನ್ನು ಪತ್ರಿಕೆಗಳ ಮೂಲಕ ತಿಳಿದುಕೊಂಡೆವು. ಇಂಥ ಮಹತ್ವದ ನಿರ್ಧಾರಕ್ಕೆ ಬರಲು ತಮಗಿನ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಯಾವ ಕಾರಣವೂ ಇರುವುದಿಲ್ಲ. ಒಬ್ಬ ವ್ಯಕ್ತಿಯು ಮಾಡಿರುವ ಕೆಲಸವನ್ನೇ ಆಧಾರವಾಗಿಟ್ಟುಕೊಂಡು ದೇಶವನ್ನೇ ಉಲ್ಲೋಲಕಲ್ಲೋಲವಾಗಿಮಾಡುವ ಪ್ರಯತ್ನವು ಕೇವಲ ಅನುಚಿತವೆಂದು ನಾನು ಭಾವಿಸಿರುತ್ತೇನೆ. ಮತ್ತು ಕಾಂಗ್ರೆಸ್ಸಿನ ನಿಜವಾದ ಧ್ಯೇಯವೆಂದರೆ, ಸ್ವರಾಜ್ಯಸ್ಥಾಪನೆಯಲ್ಲಿ ದೃಷ್ಟಿ ಇಟ್ಟು ಕೆಲಸಮಾಡತಕ್ಕದ್ದೇ ಅಲ್ಲದೆ ಅದನ್ನು ಬಿಟ್ಟು ಸಣ್ಣಸಣ್ಣ ವಿಷಯಗಳಲ್ಲಿ ಕೈಹಾಕಿ, ಅವುಗಳನ್ನೇ ಮಹತ್ವರವಾಗಿ ಭಾವಿಸಿ ಕೆಲಸ ಮಾಡುತ್ತಿರುವುದು ನೋಡಿದರೆ ಕಾಂಗ್ರೆಸ್ಸಿನವರೇ ಕಾಲುಕೆದರಿ ಜಗಳವನ್ನು ತೆಗೆದು ದೇಶದ ಜನರನ್ನು ಅಶಾಂತಿಯಲ್ಲಿ ಮುಳಗಿಸಿದ ಹಾಗೆ ಆಗುತ್ತದೆಯೆಂದು ಧಾರಾಳವಾಗಿ ಹೇಳಬಹುದು.

ಶ್ರೀ ಭೂಪಾಳಂರವರ ಮತ್ತು ಹ್ಯಾಮಿರ್ಲ್ಟ್ ಬಿಲ್ಡಿಂಗಿನ ವಿಷಯಗಳೇ ಮಹತ್ವರವಾದವುಗಳಲ್ಲ ಇವುಗಳನ್ನೇ ಆಧಾರವಾಗಿಟ್ಟುಕೊಂಡು ಮಾಡಿರುವ ಈ ನಿರ್ಧಾರಗಳಿಗೆ ಯಾರೂ ಒಪ್ಪುವುದಿಲ್ಲ ಮತ್ತು ಈ ವಿಚಾರಗಳಲ್ಲಿ ಕಾಂಗ್ರೆಸ್ಸಿನವರು ಅನುಸರಿಸುತ್ತಿರುವ ನೀತಿ ಮತ್ತು ಧ್ಯೇಯಗಳನ್ನು ಖಂಡಿತವಾಗಿ ಖಂಡಿಸಬೇಕಾಗುವುದು ಖಂಡಿಸುವುದು ನನ್ನ ಕರ್ತವ್ಯವಾಗಿರುವುದರಿಂದ ನಾನು ಕಾಂಗ್ರೆಸ್ಸಿನಲ್ಲಿ ಇರಲು ಮನಸ್ಸು ಇಷ್ಟವಿಲ್ಲದೆ ಈ ರಾಜೀನಾಮೆಯನ್ನು ಕೊಟ್ಟಿರುತ್ತೇನೆ. ಮತ್ತು ಪ್ರಜಾಪ್ರತಿನಿಧಿಸಭೆ ಮುಂತಾದುವುಗಳಿಗೆ ನಿಮ್ಮ ನಿರ್ಧಾರದಂತೆ ರಾಜೀನಾಮೆಯನ್ನು ಕೊಡುವುದಿಲ್ಲವೆಂದು ಈ ಮೂಲಕ ನಿಮಗೆ ತಿಳಿಸಲು ಇಚ್ಛೆಸುತ್ತೇನೆ

J. S. Mahalingappa, Jagalur.

ತುಮಕೂರು

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ತುಮಕೂರು ಟವನ್ನಿನಲ್ಲಿ ಅತಿ ವೈಭವದಿಂದ ಜರುಗಿತು ಈ ಮಹೋತ್ಸವಕ್ಕೆ ವೀರಶೈವರೂ, ವೀರಶೈವೇತರರೂ ತುಂಬಾ ಸಹಾಯಮಾಡಿದರು. ಎಲ್ಲಾ ಜನರೂ ಏಕೀಭವಿಸಿ ಸ್ವಾಮಿಯ ಉತ್ಸವಕಾರ್ಯವನ್ನು ಜನ್ಮಾಗಿ ನೆರವೇರಿಸಿ ಧನ್ಯರಾದರು. ಈ ರೀತಿಯಾದ ಉತ್ಸವಗಳು ಈ ಊರಿನಲ್ಲಿ ಈಚೆಗೆ ನಡೆದಿರುವುದೇ ಅಪೂರ್ವವಾದುದರಿಂದಲೂ ಈ ಕಾರ್ಯಕ್ಕಾಗಿ ಬಹಳ ಶ್ರದ್ಧೆವಹಿಸಿ ನಿಂತಿದ್ದ ವೇ॥ ಮಂಡಿ ಎ. ರುದ್ರಯ್ಯನವರ ಅಣ್ಣಂದಿರ ಮಕ್ಕಳು ವೇ॥ ಎ. ಚಂದ್ರಶೇಖರಯ್ಯನವರ ಪುತ್ರಾರಕಾರ್ಯದಿಂದಲೂ, ಪರಸ್ಥಳಗಳ ಜನರೂ ಸೇರಿದ್ದು ಉತ್ಸವವ ಛನತೆಗೆ ಇನ್ನೂ ಉತ್ತೇಜನ ಕೊಟ್ಟುಂತಾಯಿತು. ಮೇಲ್ಕಂಡ ಕಾರ್ಯಕ್ಕಾಗಿ ಸಹಾಯಮಾಡಿದ ಸಕಲ ಮಹಾಶಯರುಗೂ ಶ್ರೀಜಗದಾಚಾರ್ಯರು ಸಂಪದಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುವ,

ಶ್ರೀ ರೇಣಸಿದ್ಧಯ್ಯ,
ಮಂಡಿಸೇಟೆ, ತುಮಕೂರು.

ಶ್ರೀಜಗದ್ಗುರು ರೇಣುಕಜಯಂತೀ ಮಹೋತ್ಸವ
ಸೊಲ್ಲಾಪುರ

ಪ್ರತಿಪರ್ಷದಂತೆ ೫ ನೆಯ ತಾರೀಖಿನ ಭಾನುವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಅತಿ ವೈಭವದಿಂದ ನಡೆಯಿತು. ವ್ಯಾಪ್ತಕಾಲ ೫ ರಿಂದ ೭ ರವರೆಗೆ ಗ್ರಾಮ ದೇವರಾದ ಶ್ರೀ ರೇಣುಕ ಸಿದ್ಧೇಶ್ವರಮೂರ್ತಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ಮಾಡಲ್ಪಟ್ಟಿತು. ಅನಂತರ ಮೊದಲೇ ಹಬ್ಬ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ್ದಂತೆ ವೀರಶೈವ ಸಂಸ್ಕೃತ ಪಾಠಶಾಲಾ ಪ್ರಧಾನಾಧ್ಯಾಪಕರಾದ ವೇ|| ಜಗದೀಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ರಾತ್ರಿ ೯ ಘಂಟೆಗೆ ಜಾಟೇಗಲ್ಲಿಯಲ್ಲಿರುವ ಶ್ರೀ ಉಜ್ಜಯಂಬೆಯವರ ಮಹಾಮಂಡಿಯಲ್ಲಿ ಸಭೆ ಸೇರಿತು. ಮೊದಲು ಪುರಾಣಾರಂಭ ವೇ|| ಜಲ್ಲಮಪ್ಪ ಭೂ ಅಲೂರು ಬ್ರಹ್ಮನ್ನಹ ಇವರು ರೇಣುಕರ ಅದ್ಭುತ ಲೀಲಾವೈಭವನ್ನು ಮನೋಹರವಾಗಿ ಹೇಳಿದರು. ಆ ಮೇಲೆ ಅಭ್ಯಾರಂಭ ಮರಿಗೂರು ಇವರು ವೀರಶೈವ ಧರ್ಮವು ಹೇಗಾವಶ್ಯಕತೆಗೆ ಬರಬೇಕಾದರೆ ಧರ್ಮಗುರುಗಳ ಅಜ್ಞಾನವೇ ಕಾರಣವೆಂಬ ವಿಷಯವನ್ನು ಪ್ರತಿಪಾದಿಸಿದರು. ಅನಂತರ ವೀರಭದ್ರಸ್ವಾಮಿ ನಾಗಣಸೂರ ಇವರು ಧರ್ಮತತ್ವಗಳನ್ನು ಅನುಸರಿಸಿ ನಡೆಯುವ ಒಳ ಜಯಂತಿಯನ್ನು ಮಾಡುವದರಲ್ಲಿ ಏನೂ ಅರ್ಥವಿಲ್ಲೆಂಬ ವಿಷಯವನ್ನು ಕುರಿತು ಸಮುಕ್ತಿಕವಾಗಿ ಭಾಷಣವನ್ನು ಮಾಡಿದರು. ಆಮೇಲೆ ಸುತ್ತಗಟ್ಟು ಶ್ರೀಗಳ ಜಯಂತಿಯನ್ನು ಏಕೆ ಮಾಡಬೇಕು ಮತ್ತು ಹೇಗೆ ಮಾಡಬೇಕೆಂಬುದನ್ನು ವಿವರಿಸಿ ಹೇಳಿದರು. ರಾಮಭದ್ರಪ್ಪ ಬಿರಜದಾರ ಇವರು ಗುರುಭಕ್ತಿಯೆಂದಾಗುವ ಮಹಾ ಪ್ರಯೋಜನವನ್ನು ವಿಸ್ತರಿಸಿದರೆ ಅಧ್ಯಕ್ಷರು ಭಾಷಣವನ್ನು ಮಾಡಿದರು. ಭಾಷಣದ ಸಾರಾಂಶವೆನೆಂದರೆ:—ಪೂರ್ವಕಾಲದಲ್ಲಿ ಅತ್ಯಂತ ಉನ್ನತ ಶಿಖರದಲ್ಲಿದ್ದ ವೀರಶೈವಮತವು ರಸಾತಳದಲ್ಲಿ ಬಿದ್ದು ನರಳಲು ಗುರುವರ್ಗದವರ ಅಜಾಗರೂಕತೆ, ಅನಾದರಣೆ ಅವಿದ್ಯೆ ಮೊದಲಾದವುಗಳೇ ಕಾರಣವಾಗಿರುತ್ತವೆ ವಿದ್ಯಾವಿಹೀನನೂ ಕುವಿಚಾರಿಯೂ ಆದ ಗುರುವು ಶಿಷ್ಯನನ್ನು ಉದ್ಧರಿಸಲು ಹೇಗೆ ಶಕ್ತನಾದಾನು? ಗುರುಗಳ ಅನಾದರಣೆಯಿಂದ ಧರ್ಮವು ಅಜ್ಞಾನಾಂಧಕಾರದಲ್ಲಿ ಮರೆಯಾಗಬೇಕಾಯಿತು ವೀರಶೈವರಲ್ಲಿಯ ನಿತ್ಯನೈಮಿತ್ತಿಕಕರ್ಮಗಳೆಲ್ಲಾ ನಮ್ಮೋರ್ನ್ಮುಖಗಳಾದವು. ಈ ಮಧ್ಯದಲ್ಲಿ ವೀರಶೈವರಾದ ನಾವು ಕರ್ಮಗಳಲ್ಲವಾದುದರಿಂದ ಕರ್ಮಗಳನ್ನು ಮಾಡಬೇಡಿರೆಂದು ಬೋಧಿಸುತ್ತ ಜನಗಳನ್ನು ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲಿ ವಿಮುಖರನ್ನಾಗಿ ಮಾಡುತ್ತಾ ಭರ್ತೃನನ್ನು ಇಹಲೋಕದ ದಾರಿದ್ರ್ಯ ಕೂಪದಲ್ಲಿಯೂ, ಪರಲೋಕದ ನರಕ ಕೂಪದಲ್ಲಿಯೂ ದೂಡುವ ಗುರುವರ್ಗ ವಿರೋಧಿಯಾದ ಒಂದು ಪಂಥವೇ ಉತ್ಪನ್ನವಾದುದರಿಂದ ಮತವು ಮತ್ತಿತ್ತು ಹೀನಾವಸ್ಥೆಗೆ ಗುರಿಯಾಗಬೇಕಾಯಿತು. ಸಿದ್ಧಾಂತದಲ್ಲಿ ಕರ್ಮಕಾಂಡ, ಜ್ಞಾನಕಾಂಡವೆಂದು ಎರಡು ಭಾಗಗಳುಂಟು ಕರ್ಮವು ಸಕಾಮ, ನಿಷ್ಕಾಮ, ನಿತ್ಯ, ನೈಮಿತ್ತಿಕ ಎಂದು ನಾಲ್ಕು ಪ್ರಕಾರವಾಗಿರುವದ. ಸಕಾಮನೆಂದರೆ ಇಚ್ಛಾಸಹಿತವಾದ ಪೂಜಾದಿಕರ್ಮವು ನಿಷ್ಕಾಮವೆಂದರೆ ಕೇವಲ ಈಶಾರ್ಪಣಬುದ್ಧಿಯಿಂದ ಕರ್ಮವನ್ನು ಆಚರಿಸುವದು. ನಿತ್ಯವೆಂದರೆ, ಶಿವಪೂಜಾ ಸಂಧ್ಯಾವಂದನಾದಿ ಕರ್ಮಗಳು, ನೈಮಿತ್ತಿಕವೆಂದರೆ ಶಿವರಾತ್ರಿ ಸಂಕ್ರಾಂತಿ ವಿಜಯದಶಮಿ, ಯುಗಾದಿ ಮೊದಲಾದ ವಿಶೇಷದಿವಸಗಳಲ್ಲಿ ನಡೆಯುವಕ್ಕ ಕರ್ಮಗಳು ಮತ್ತು ವಿವಾಹ, ಪುಂಸವನ, ಸೀಮಂತ ಮೊದಲಾದ ಕರ್ಮಗಳು. ಇವುಗಳಲ್ಲಿ ಸಕಾಮವೊಂದನ್ನು ಬಿಟ್ಟು ಉಳಿದ ವುಗಳೆಲ್ಲವನ್ನೂ ಆಚರಿಸಬೇಕೆಂದು ಧರ್ಮಶಾಸ್ತ್ರದ ನಿಯಮವುಂಟು ಇದರಂತೆ ಎಲ್ಲಕಡೆಯಲ್ಲಿಯೂ ಆಚರಿಸುತ್ತಾರೆ ಆದರೂ ವಿಧಿಂಹಿತವಾಗಿ ಮನಸ್ಸು ಬಂದಂತೆ ಆಚರಿಸಹತ್ತಿದ್ದಾರೆಂದು ಹೇಳಲು ವಿಷಾದ ವೆನಿಸುತ್ತದೆ ಆದರಲ್ಲಿ ಕೆಲವು ಸಂಗತಿಗಳನ್ನು ನಿಮ್ಮ ಮುಂದೆ ಹೇಳುತ್ತೇನೆ ಶಿವಪೂಜಾಕರ್ಮವು ಇಹಲೋಕದ ಸಂಪತ್ತಿಗೆ ಮೂಲಕಾರಣವು. ಅದಕ್ಕೆ ಕರ್ಮಾಂಗಭೂತವಾದ ಶಿವೆಯು ಅವಶ್ಯವಾದುದು ಶಿವಾಕೂನ್ಯವಾಗಿ ಯಾವಕರ್ಮವನ್ನೂ ಮಾಡಲಾಗದು ಮತ್ತು ಶಿವಾರ್ಯಶರಿಂದ ಯಾವ ವೈದಿಕ ಕರ್ಮಗಳನ್ನೂ ಮಾಡಿಸಬಾರದು. ಶಿವಾಸಹಿತ ಗುರುವರ್ಗದವರಿಂದಲೇ ಪ್ರತಿಯೊಂದು ಕರ್ಮವನ್ನು ಮಾಡಿಸಬೇಕೆಂದು ಶಾಸ್ತ್ರವಚನವು. ಶಿವೆಯನ್ನು ಗುರುವರ್ಗದವರ ಅಜಾಗರೂಕತೆಯಿಂದಲೂ, ವಿರಕ್ತರ ಅಗ್ರಹದಿಂದಲೂ ತೆಗೆಯಿಸಿಕೊಂಡು ಫಲರಹಿತರಾಗಿ ದುಃಖಿಗಳಾಗಿಯೂ, ದರಿದ್ರರಾಗಿಯೂ ನರಳಲಿಕ್ಕೆ ಹತ್ತಿದ್ದಾರೆ. ಇತ್ತಿತ್ತಲಾಗಿ ಕೆಲಮಹನೀಯರು ಎಚ್ಚತ್ತು ಧರ್ಮಶಾಸ್ತ್ರವನ್ನರಿತು ಅದರೊಳಗಿನ ತತ್ವಗಳನ್ನು ತಿಳಿದು ಭಕ್ತರಿಗೆ ಉಪದೇಶಿಸಲು ಆರಂಭಿಸಿದರೆ ಇನ್ನು ದಿವಸ ಇಲ್ಲದಿರುವ ಶಿವೆಯನ್ನು ಈಗ ಬಿಡಿಸಲಿಕ್ಕೆ ಬಂದಿರುತ್ತಾರೆ ಶಿವೆಯನ್ನು ಬಿಡಲಿಕ್ಕೆ ನಾವೇನು ಬ್ರಾಹ್ಮಣರೇ! ಎಂದು ಕೇಳುವರು ಶಿವೆಯನ್ನು ಬಿಡದಿದ್ದರೆ ಹಿಂದೂವಿರೋಧಿಗಳಾದ ಮುಸಲ್ಮಾನರಾಗುವೆವೆಂಬುದು ಪಾಪ! ಅವರಿಗೆ ಹೇಗೆ ಗೊತ್ತಾಗಬೇಕು? ಶಿವೆಯನ್ನು ಬಿಡದವರು ಬಹಳ ವಿದ್ದಂತೆ ಬಿಡಬಾರದೆಂದು ಬೋಧಿಸುವವರೂ ಬಹಳ ಜನರಿದ್ದಾರೆ ಅದು ಅವರ ಧರ್ಮಗ್ರಂಥಗಳ ಅನವಲೋಕನೆಯು ಮತ್ತು ಅಹಂಭಾವದ ಮೂಢತನವಾಗಿರುವದಲ್ಲದೆ ಬೇರೆಯಲ್ಲ ಅಲ್ಲದೆ ನಮ್ಮ ವೀರಶೈವರಲ್ಲಿ ಇತ್ತಿತ್ತಲಾಗಿ ನಾಸ್ತಿಕತೆಯಿಂದ ಅನಾಚಾರವು ಹೆಚ್ಚಾಗಿ ಅದರ ಫಲವು ದಾರಿದ್ರ್ಯರೂಪದಿಂದ ಹೆಬ್ಬುಲಿಕ್ಕೆ ಹತ್ತಿದೆ ಸನ್ಯಾಸಿಯು ಹೊರತು ಸಕಲರೂ ಸಜಲ ಭಸ್ಮವನ್ನು ಧರಿಸಬೇಕೆಂದು ಶಾಸ್ತ್ರದ ಕಟ್ಟಪ್ಪಣೆಯಿದ್ದರೂ ಸನ್ಯಾಸಿಗಳ ವಿಶೇಷ ಸಹವಾಸದಿಂದ ಸರ್ವರೂ ನಿರ್ಜಲ ಭಸ್ಮವನ್ನೇ ಧರಿಸುತ್ತಾರೆ. ಕಡೆಗೆ ನಿರ್ಜನ ಪ್ರದೇಶದಲ್ಲಿ ಕಾಲಹರಣ ಮಾಡುವ ಪ್ರಸಂಗ ತಂದುಕೊಳ್ಳುತ್ತಾರೆ

ನಮ್ಮ ಪೂರ್ವಾಚಾರ್ಯರು ನಮಗೆ ಇಹಲೋಕ ಮತ್ತು ಪರಲೋಕದ ಸುಖವು ಸಿಗುವದರಿಸಲುವಾಗಿ ಹಾಕಿಕೊಟ್ಟ ತತ್ವಗಳನ್ನು ಆಚರಿಸುವದೇ ನಮ್ಮ ಕರ್ತವ್ಯ. ಹಾಗೆ ಮಾಡಿದರೇನೇ ನಮ್ಮ ಆಚಾರ್ಯರ ಋಣಕಾರವನ್ನು ತೀರಿಸಿದಂತಾಗುವದಲ್ಲದೆ ಜಯಂತಿಯನ್ನು ಮಾಡಿದಂತಾಗುವದು. ಅವನತಿಗೆ ಹೋಗಿರುವ ವೀರಶೈವರಿಗೆ ಇನ್ನುಮುಂದೆ ಶ್ರೀ ರೇಣುಕನು ಕೃಪಾಶೀರ್ವಾದವನ್ನು ಮಾಡಲೆಂದು ಕಳಕಳಿಯಿಂದ ಭಾಷಣ ಮಾಡಿದರು ಆಮೇಲೆ ಮರಗೂರು ಇವರು ಅಭಂಗ ಮನ್ನಿಸಿದಮೇಲೆ ಜಗದ್ಗುರುವಿನ ಭಾವಚಿತ್ರಕ್ಕೆ ಮಂಗಳಾರತಿಮಾಡಿ ಪಂಚಾಚಾರ್ಯರ ಜಯಜಯಕಾರದೊಡನೆ ಸಭೆಯು ಮುಗಿಸಲ್ಪಟ್ಟಿತು.

ಅಲ್ಲಮಪ್ರಭು ಆಲೂರಕರ್,
ಸೊಲ್ಲಾಪುರ.

ಹರಪನಹಳ್ಳಿ

ಇಲ್ಲಿಯ ಭಾರತ ಜ್ಯೋತಿಷವೈದ್ಯಪಾಠಶಾಲೆಯ ವಿದ್ಯಾರ್ಥಿಸಂಘದವರು ಪುರಪ್ರಮುಖರ ಸಹಾಯದಿಂದ ಈ ಜಯಂತ್ಯುತ್ಸವವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಪಾಠಶಾಲೆಯ ಮುಂಭಾಗದಲ್ಲಿ ಭವ್ಯವಾದ ಮಂಟಪವನ್ನು ರಚಿಸಿ ತಳಿರು ತೋರಣ ರಂಗವಲ್ಲಿ ಸ್ತಂಭಾದಿಗಳಿಂದ ಅಲಂಕರಿಸಿದ್ದರು ತಾ|| ೩-೩-೪೯ ನೆಯ ಶುಕ್ರವಾರ ಶ್ರೀ ಸಿದ್ಧರಾಮೇಶ್ವರಸ್ವಾಮಿಯ ನಾಟಕ ಥಿಯೇಟರಿನಲ್ಲಿ ಶ್ರೀ|| ಪ|| ಬ್ರ|| ಪಟ್ಟದ ಸ್ವಾಮಿಗಳವರು ಗುರುಪಾಪ ದೇವರಮಠ ಇವರ ಅಧ್ಯಕ್ಷತೆಯಲ್ಲಿ ಮುದೇನೂರು ಬ್ರಹ್ಮನ್ನತಾಧೀಶರಿಂದ ವರ ಕವಿ ಶ್ರೀವಾಗೀಶ ಶಿವಾಚಾರ್ಯರಿಂದ "ವೀರಶೈವಮತ ಸ್ಥಾಪಕರು" ಎಂಬ ವಿಷಯದಮೇಲೆ ವ್ಯಾಖ್ಯಾನವನ್ನು ಮಾಡಿಸಿದರು. ಸಭೆಗೆ ಗ್ರಾಮದ ಸಕಲ ಮತದವರೂ ಸರ್ಕಾರಿ ಉದ್ಯೋಗಸ್ಥರೂ ಸ್ಕೂಲ್ ಪಂಡಿತರುಗಳೂ ಪುರಪ್ರಮುಖರೂ ವಿಶೇಷವಾಗಿ ಸೇರಿದ್ದರು.

ಶ್ರೀವಾಗೀಶ ಶಿವಾಚಾರ್ಯರು ವ್ಯಾಖ್ಯಾನವನ್ನಾರಂಭಿಸಿದರು. ಕೂಡಿದ ಜನಸ್ತೋಮವು ಚಿತ್ರದಲ್ಲಿ ಬರೆದ ಬೊಂಬೆಗಳಂತೆ ಸ್ಥಾನದಲ್ಲಿ ಕದಲಬೆ ಕೊನೆಯ ವರೆಗೆ ಎಲ್ಲಾ ವಿಷಯಗಳನ್ನೂ ಗ್ರಹಣಮಾಡಿತು. ಇವರ ವ್ಯಾಖ್ಯಾನವು ಸಕಲಮತದವರಿಗೂ ಉದ್ಬೋಧಕವಾಗಿದ್ದಿತು. ಶಿವಾಚಾರ್ಯರು ಅಪ್ಪಣೆ ಕೊಡಿಸಿದ ಅನಂತವಿಷಯಗಳಲ್ಲಿ ಇವು ಪ್ರಧಾನ "ವೈದಿಕರು ಯಾರು? ರಾಮೋಹುಡದ ಕಾಲ, ಅಗಸ್ತ್ಯರಿಗೂ ರೇಣುಕರಿಗೂ ಶಿವಾದ್ವೈತಸಿದ್ಧಾಂತ ವಿಷಯದಲ್ಲಿ ನಡೆದ ಸಂವಾದದ ನಿಜವಾದ ಸಮಯ, ರೇಣುಕಾಚಾರ್ಯರ ಕಾಲನಿರ್ಣಯ, ಶ್ರೀರೇಣುಕರ ಚಿರಂತ್ಯಯ ವಿಷಯದಲ್ಲಿ ಕವಿಲೇಖಕರ ಹಳೆಯ ಭಿನ್ನಾಭಿಪ್ರಾಯ, ತಾವಿನ ತರುಣರಮೇಲೆ ಬಿದ್ದಿರುವ ಸಮಾಜದ ಭಾರ, ಕೈಕೊಳ್ಳಬೇಕಾಗಿರುವಕಾರ್ಯ, "ಮುಂತಾದ ಇನ್ನೂ ಅನೇಕ ವಿಷಯಗಳು ಸೇರಿದವು ಪ್ರಸಂಗತ್ಪೈನ ಇಲ್ಲಿಯ ತರುಣಮಂಡಲಿಯವರಾದ ವೇ|| ಟಿ. ಯಂ. ಪಂಚಾಕ್ಷರಯ್ಯ ನವರೇ ಮೊದಲಾದವರು ನಡೆಯಿಸಿರುವ ಬೋರ್ಡಿಂಗಿನ ವಿಷಯ ಹಾಗೂ ಇಲ್ಲಿ ಪೂರ್ವದಿಂದಲೂ ಸಾಗಿ ಬಂದಿರುವ ಜ್ಯೋತಿಷ್ಯದ ವಿಷಯ ಇವನ್ನೂ ವಿವರಿಸಿದರು. ಜನರು ಇನ್ನೂ ವ್ಯಾಖ್ಯಾನವನ್ನು ಕೇಳಬೇಕೆನ್ನುವುದರಲ್ಲಿಯೇ ಇದ್ದರು. ಆಶ್ಚರ್ಯಲ್ಲಿ ೯|| ಘಂಟೆಯಾದ್ದರಿಂದ ವ್ಯಾಖ್ಯಾನವನ್ನು ಸಮಾಪ್ತಿಗೊಳಿಸಿದರು. ಬಳಿಕ ವೇ|| ಯಂ. ಯುಂ. ಚೆನ್ನಬಸವಯ್ಯನವರು ಶ್ರೀವಾಗೀಶ ಶಿವಾಚಾರ್ಯರ ಅಧ್ಯಕ್ಷರು, ಪುರಪ್ರಮುಖರ ವಿದ್ಯಾಸಂಪದವರ ಆಧಾರವನ್ನು ವಹಿಸಿ ವ್ಯಾಖ್ಯಾನವನ್ನು ಮಾಡಿದರು. ಜಯಘೋಷಡೊಡನೆ ಸಭೆಯು ಸಮಾಪ್ತವಾಯಿತು.

ಮತ್ತೆ ತಾ|| ೫-೩-೪೯ನೆಯ ಭಾನುವಾರವೂ ಪ್ರಮುಖರನೇಕರ ಹಾಗೂ ಇತರ ಮತದ ಬಂಧುಗಳ ವಿಶೇಷವಾದ ಆಗ್ರಹದಿಂದ ಶ್ರೀ ವಾಗೀಶಶಿವಾಚಾರ್ಯರು ವ್ಯಾಖ್ಯಾನ ಮಾಡುವುದಕ್ಕೆ ಒಪ್ಪಿಕೊಂಡರು ಆ ದಿನವೂ ಮೇಲ್ಕಂಡ ನಾಟಕ ಥೇಟರಿನಲ್ಲಿ ಶ್ರೀ ಗುರುಪಾದದೇವರ ಮಠದ ಪ|| ಬ್ರ|| ಪಟ್ಟದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಭೆಗೆ ವೀರಶೈವರೇ ಅಲ್ಲದೆ ಸ್ಮಾರ್ತ-ವೈಷ್ಣವ-ವೈಶ್ಯ ಬಂಧುಗಳೂ ವಿಶ್ವಕರ್ಮ ಬಂಧುಗಳೂ ಮೊನ್ನೆಗಿಂತಲೂ ಅಧಿಕವಾಗಿ ಸೇರಿದ್ದರು. ಶ್ರೀಗಳವರು ಇಲ್ಲಿಯ ಸಬ್ ರಜಿಸ್ಟ್ರಾರ್ ಶ್ರೀಮಾನ್ ಕರವೀರಪ್ಪನವರ ಕೋರಿಕೆ ಹಾಗೂ ವೇ|| ಸ್ಕೂಲ್ ಮಾಸ್ಟರ್ ಚನ್ನಬಸವಯ್ಯನವರ ಅನುಮೋದನೆ ದೊಡನೆ ಅಧ್ಯಕ್ಷಸ್ಥಾನವನ್ನಲಂಕರಿಸಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಅನಂತರ ಇಲ್ಲಿಯ ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ವೇ|| ಮರಿಕೊಟ್ರಯ್ಯನವರು ಅರ್ಧಘಂಟೆ ಕಾಲ ತಮ್ಮ ಶಿಷ್ಯವೃಂದದೊಡನೆ ಸಂಗೀತ ಕಚೇರಿಯನ್ನು ನಡೆಯಿಸಿದರು. ಬಳಿಕ ಗುರುಪಾದದೇವರ ಮಠದ ಪ|| ವೇ|| ವಿದ್ವಾನ್ ನೀಲಕಂಠಶಾಸ್ತ್ರಿಗಳವರು ಶ್ರೀ ವಾಗೀಶಶಿವಾಚಾರ್ಯರ ವ್ಯಕ್ತಿತ್ವ, ವಿದ್ವತ್ತು, ಸಮಾಜಸೇವಾಸಕ್ತಿ ಮುಂತಾದವುಗಳನ್ನು ಸಂಕ್ಷೇಪವಾಗಿ ವಿವರಿಸಿ ಅವರು ಕೈಕೊಂಡಿರುವ "ಧರ್ಮಾಲಯ" ಹಾಗೂ "ಧರ್ಮರಾಜ್ಯ" ದ ವಿಷಯವಾಗಿ ಬಹಳ ಕಳಕಳಿಯಿಂದ ವ್ಯಾಖ್ಯಾನಮಾಡಿದರು ಅವರ ಸೂಚನೆಯಂತೆ ಶ್ರೀ ವಾಗೀಶಶಿವಾಚಾರ್ಯರು ವ್ಯಾಖ್ಯಾನಮಾಡುವುದಕ್ಕಾರಂಭಿಸಿದರು. ಅವರು ತೆಗೆದುಕೊಂಡ ವಿಷಯವು "ಮತಾಚಾರ್ಯರು ಹಾಗೂ ಮತ ಸಿದ್ಧಾಂತಗಳು" ಎಂಬುದಾಗಿದ್ದಿತಾದರೂ ಈ ವಿಷಯವನ್ನೇ ಸಕಲ ಮತದವರಿಗೂ ಅನ್ವಯಿಸುವಂತೆ ಅವಿಚ್ಛಿನ್ನವಾಗಿ ೩|| ಘಂಟೆಗಳ ಕಾಲ ಹೇಳಿದರು ಇವರ ಭಾಷಣದಲ್ಲಿ—"ಆದಿ ಪಂಚಾಚಾರ್ಯರು ಲಿಂಗಾವತಾರ, ವೀರಶೈವರ ಪ್ರಾಚೀನತೆ, ರೇಣುಕ ಹಾಗೂ ರೇವಣಸಿದ್ಧರಿಗೆ ಸಂಬಂಧಿಸಿದ ಲೀಲೆಗಳು, ಪಂಚಪೀಠಗಳ ಪ್ರಾಚೀನತೆ, ಅವುಗಳನ್ನು ಸರ್ವಧರ್ಮದವರೂ ಕಾಯ್ದುಕೊಂಡು ಬಂದಿರುವ ರೀತಿ, ಸಕಲ ಮತಾಚಾರ್ಯರ ತಾತ್ವಿಕಸಿದ್ಧಾಂತಗಳ ಏಕ್ಯ, ಮಹಿಮ್ಮಾದೀಯ, ಹಾಗೂ ಕ್ರೈಸ್ತಮತಗಳು ತಾತ್ವಿಕ ವಿಚಾರದಲ್ಲಿ ವೇದಗಳಮಾರ್ಗವನ್ನು ಅನುಸರಿಸಿದ ರೀತಿ ತತ್ವಾಚರಣೆಯಲ್ಲಿ ಆಯಾ ಮತದವರ ಕೆಲ ಹೋಲಿಕೆ" ಮುಂತಾದವುಗಳು ಮುಖ್ಯವಾಗಿದ್ದವು.

ಶ್ರೀ ಶಿವಾಚಾರ್ಯರು ೯|| ಘಂಟೆಗೆ ಸರಿಯಾಗಿ ತಮ್ಮ ವ್ಯಾಖ್ಯಾನವನ್ನು ಜನಗಳು ಕೇಳಬೇಕೆಂದು ಇನ್ನೂ ಕುತೂಹಲವುಳ್ಳವರಾಗಿದ್ದರೂ ಹೊತ್ತಾಯಿತೆಂದು ಸಮಾಪ್ತಿಗೊಳಿಸಿದರು. ಬಳಿಕ ಹೊವಿನ ಹಡಗಲಿ ಸಬ್‌ರಜಿಸ್ಟ್ರಾರ್ ಶ್ರೀಮಾನ್, ಯಂ. ಕೆ. ಸಿದ್ಧಪ್ಪ ನವರು, ಶ್ರೀ ವಾಗೀಶ ಶಿವಾಚಾರ್ಯರ ಹಾಗೂ ಅಧ್ಯಕ್ಷ ಮಹಾಸ್ವಾಮಿಗಳವರ ಇನ್ನುಳಿದ ಸಭಿಕರೆಲ್ಲರ

ಅಭಾವವನ್ನು ಮನ್ನಿಸಿ ತಮಗುಂಟಾದ ಅನಂದವನ್ನು ವ್ಯಕ್ತಗೊಳಿಸಿದರು ಬಳಿಕ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಮಂಗಲವನ್ನು ನಡೆದು ಜಯ ಘೋಷದೊಡನೆ ಸಭಾಕಾರ್ಯವು ಸಮಾಪ್ತವಾಯಿತು

ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆಯು ಪಲ್ಲಕ್ಕಿಯಲ್ಲಿ ಪಾಠಶಾಲೆಯಿಂದ ಹೊರಟು ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ಅಲ್ಲಲ್ಲಿಯೇ ಭಕ್ತರ ಫಲ-ತಾಂಬೂಲ ಗಂಧಮಾಲೆ ಮುಂತಾದ ಭಕ್ತಿಯನ್ನೂ, ಸುಮಂಗಲೆಯರು ಕೊಡುತ್ತಿರುವ ಆರತಿಯನ್ನೂ ಸ್ವೀಕರಿಸುತ್ತ ಶ್ರೀ ವೀರಭದ್ರ ದೇವಸ್ಥಾನದವರೆಗೂ ಸಾಗಿ ಅಲ್ಲಿಂದ ಪಾರಶಾಗೆಬಂದು ತಲುಪಿತು. ಬಂದಮೇಲೆ ಮಂಗಳಾರತಿ ನಡೆದು, ಶ್ರೀ ರೇಣುಕಮೂರ್ತಿಗೆ ಪುಷ್ಪಾಂಜಲಿಯನ್ನು ಅರ್ಪಿಸಿದಾದಮೇಲೆ ನೆರೆದವರೆಲ್ಲರಿಗೂ ಪ್ರಸಾದ-ತಾಂಬೂಲವು ಸಮರ್ಪಿಸಲ್ಪಟ್ಟು ಜಯಂತಿಕಾರ್ಯವು ಸಮಾಪ್ತಗೊಳಿಸಲ್ಪಟ್ಟಿತು ಈ ಸಾರೆಯ ಈ ಉತ್ಸವದಲ್ಲಿ ಸರ್ವರೂ ಏಕೀಭವಿಸಿ ಶ್ರೀ ಸ್ವಾಮಿಯನ್ನು, ಸೇವಿಸಿದ ದೃಶ್ಯವು ಸರ್ವರನ್ನೂ ಆನಂದಸಂದಿಲರನ್ನಾಗಿ ಮಾಡುತ್ತಿದ್ದಿತು. ಶ್ರೀ ಜಗದಾಚಾರ್ಯರು ಈ ಗ್ರಾಮಗಳಲ್ಲಿಯೂ, ಸರ್ವರಲ್ಲಿಯೂ, ಸದ್ಭಾವನೆಯನ್ನು ಬೀರಿ ಧರ್ಮದಭ್ಯುದಯವನ್ನು ದಯಪಾಲಿಸಲೆಂದು ಈ ಜಯಂತಿಕಾರ್ಯದಿಂದ ಮುಂದಿನವರ್ಷ ಮಳೆಬೆಳೆಯಿಂದ ದೇವರು ಪ್ರಜೆಗಳನ್ನು ಸುಖವಾಗಿ ಕಾಪಾಡಲೆಂದು ಪ್ರಾರ್ಥಿಸುವ ಪ್ರತ್ಯಕ್ಷದರ್ಶಿ.

ಹಾಸನ ದಿ॥ ಅಲೂರುಬೆಟ್ಟದ.

ಜಗದಾಚಾರ್ಯರ ಜಯಂತೀಮಹೋತ್ಸವವು ಈ ಸಾರೆ ಡಾಕ್ಟರ್ ಎಂ. ಸಿ. ನಂಜಪ್ಪನವರ ಪ್ರೋತ್ಸಾಹದಿಂದ ಪುರಪ್ರಮುಖರಾದ ಎ. ಸಿ. ಮಲ್ಲೇಶಗೌಡರು ಎ ಎಸ್. ಶಿವನಂಜಪ್ಪನವರು ಎ ಪಿ ಬಸವಲಿಂಗೇಗೌಡರು, ಎ. ನಂಜಪ್ಪನವರು, ಎ. ಗುರುಲಿಂಗೇಗೌಡರು, ಎ ಬಸಪ್ಪನವರು, ಇವರುಗಳ ಶ್ರದ್ಧಾಭಕ್ತಿಗಳಿಂದ ಅತಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಮಲ್ಲೇಶ್ವರದೇವಾಲಯದಲ್ಲಿ ಶ್ರೀರೇಣುಕಲಿಂಗೋದ್ಭವ ಮೂರ್ತಿಗೆ ವಿಗಾದಶರುದ್ರಾಭಿಷೇಕ, ಆಚಾರ್ಯರ ಅಷ್ಟೋತ್ತರಶತನಾಮ ಪತನಾದಿಗಳು ವೇ॥ ಚನ್ನಬಸವ ಶಾಸ್ತ್ರಿಗಳವರಿಂದ ನೆರವೇರಿದವು. ಕುರುಕುಂದಿ ಸಿದ್ಧರಾಮಪ್ಪನವರು ಮೊರಸು ಪ॥ ಪರಮೇಶಿಯಪ್ಪನವರು, ಸಕ್ಕರೆಬಸೆಟ್ಟಿಪ್ಪನವರು, ಕಾಳಪ್ಪಶೆಟ್ಟರು, ಶೀಳನಬಸಿಟ್ಟರು, ಉರಿಗೌಡರು, ಕಣತೂರು ಮಗಯ್ಯಗೌಡರು ಸೇವಾಸಕ್ತರಾಗಿದ್ದರು. ಬೆಳಗ್ಗೆ ೨ ಘಂಟೆಗೆ ಹೂವಿನಿಂದ ಅಲಂಕರಿಸಲ್ಪಟ್ಟ ರಥದಲ್ಲಿ ಶ್ರೀರೇಣುಕರ ಮೂರ್ತಿಯನ್ನಿಟ್ಟು ಗುರುಭಜನೆಮಾಡುತ್ತಾ ಬ್ಯಾಂಡು ವಾದ್ಯದೊಡನೆ ಉತ್ಸವ ಹೊರಟು ೧೨ ಘಂಟೆಗೆ ಪೇಟೆಯಲ್ಲಿರುವ ಲೇಟ್. ಬಿ. ಪುಟ್ಟಸ್ವಾಮಿಗೌಡರ ಮನೆಗೆ ಬಂದು ತಲಪಿತು. ಬಳಿಕ ಅನಂತರ್ಪಣೆಯು ನೆರವೇರಿತು. ರಾತ್ರಿ ಸಭೆಸೇರಿತು ತಾಲ್ಲೂಕು ಅಮಲ್ದಾರರಾದ ಶ್ರೀವರ್ಮಾ ಎಂ. ಚೆನ್ನಸ್ವಾಮಿ ಬಿ.ಎ ಇವರು ಅಧ್ಯಕ್ಷತೆ ವಹಿಸಿದರು. ಮ॥ ಶ್ರ॥ ಗಳಾದ ಅ॥ ಸ॥ ಎಂ. ಸಿ ನಂಜಪ್ಪನವರು, ವೇ॥ ತಾ॥ ಶ್ರೀನಿವಾಸರಾಯರು, ಸ್ಕೂ॥ ಮೌ॥ ಆರ್ ಎ. ನಾರಾಯಣಪ್ಪನವರು, ತೋಟಪ್ಪನವರು, ಎಸ್ ಡಿ ಮಂಜಯ್ಯನವರು, ನಂಜುಂಡಾಚಾರ್ಯರು, ವೈ. ಹೆಚ್ ಸಿದ್ದಯ್ಯನವರು, ವೈ॥ ಪೈ॥ ಎ. ಪಿ. ಬಸವಲಿಂಗೇಗೌಡರು, ಕಾರ್ಯದರ್ಶಿಗಳಾದ ಎ ನಂಜಪ್ಪನವರು, ಎ ಎಸ್ ಶಿವನಂಜಪ್ಪನವರು ಮತ್ತು ಕಣತೂರು ಪ॥ ಪುಟ್ಟಸ್ವಾಮಿಗೌಡರು, ಬೊಮ್ಮೇಡಳ್ಳಿ ಷಣ್ಮುಖಪ್ಪನವರು, ದಡದಳ್ಳಿ ಸೋಮೇಗೌಡರು, ನೇರಲಕೆರೆ ಕಟ್ಟೆಗೌಡರು, ಬೇಡಿಹಳ್ಳಿ ಮಲ್ಲೇಗೌಡರು, ಜೋಳಿಗೆರೆ ರಾಮೇಗೌಡರು, ಬಾವಿಹಳ್ಳಿ ನಂಜೇಗೌಡರು, ಬೆಳ್ಳೂರು ರಾಮಭಟ್ಟೇಗೌಡರು, ಇರ್ಪಾಪುರದ ಅವ್ವಜಯ್ಯನವರು, ಮಾವಿನಕೂರು ಜಂಗಮಯ್ಯನವರು, ಕುಪ್ಪೂರು ಗದ್ದಿಗೆಯಿಂದ ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರು; ಶೃಂಗೇರಿಮಾಠಾಧಿಪತಿಗಳು, ಸಿದ್ಧಲಿಂಗಯ್ಯನವರು ಮಂಜ್ರಾಬಾದು ತಾ॥ ಬಾಳ್ಳಪೇಟೆ ದೇವಪ್ಪನರು ಮುಂತಾಗಿ ಬಹುಜನರು ಸಭೆಯಲ್ಲಂಕರಿಸಿದ್ದರು. ಪ್ರಾರಂಭದಲ್ಲಿ ಎಳಕೂರು ಶಿವಸಿ ಹೆಚ್. ಎಸ್. ಗಿರಿಜಮ್ಮನಿಂದ ಗುರುಪ್ರಾರ್ಥನೆಯಾಯಿತು. ತರುವಾಯ ಎಸಕೂರು ಸಿವಾಸಿ ಸೈ. ಹೆಚ್. ಸಿದ್ದಯ್ಯನವರು ಜಗದಾಚಾರ್ಯರ ಲಿಂಗಾವತಾರವಿಷಯ, ಶ್ರೀ ರೇಣುಕರ ಸಂಪ್ರೇಷ್ಟಚರಿತ್ರೆ, ಈಗಿನ ರಂಭಾಪುರೀ ವೀರಸೀತರ ಜಗದ್ಗುರುಗಳ ಚರಿತ್ರೆ, ಮತ್ತು ನಮ್ಮ ಮಹಾರಾಜರವರು ವೀರಪೀಠದುನ್ನತಿಗೆ ಮಾಡಿರುವ ಭಿನ್ನಸಹಾಯ. ಶ್ರೀ ಜಗದ್ಗುರುಗಳನ್ನು ಅರಮನೆಗೆ ಬಿಜಯಂಗೈಸಿಕೊಂಡು ಮಾಡಿದ ಪೂಜಾವಿಷಯದಲ್ಲಿ ನಮ್ಮ ಪ್ರಭುಗಳ ಗುಣ ಕಥನಮಾಡಿದರು. ಬಳಿಕ ಕಂಚಿ ಕಂದಪ್ಪಶೆಟ್ಟರು ಒಗ್ಗಟ್ಟು ಎಂಬೀ ವಿಚಾರದಲ್ಲಿ ಭಾಷಣಮಾಡಿದರು ಇದಾದಮೇಲೆ ಶ್ರೀವರ್ಮಾ ಎಂ. ಸಿ. ನಂಜಪ್ಪನವರು, ತಮ್ಮ ಭಾಷಣದಲ್ಲಿ ತಮ್ಮೆಲ್ಲರ ಪರವಾಗಿ ನನ್ನನ್ನು ಬಹಳವಾಗಿ ಹೊಗಳುತ್ತೀರಿ. ಆ ಹೊಗಳುವಿಕೆಗೆ ನಾನು ಅರ್ಹನಲ್ಲ ಪ್ರತಿಯೊಬ್ಬನೂ ತನ್ನ ಜನ್ಮ ಸಫಲಗೊಳಿಸಿಕೊಳ್ಳಬೇಕಾದರೆ ಗುರುಸೇವೆಯನ್ನು ಮಾಡಲೇಬೇಕು ಗುರುವು ಪರಮಪವಿತ್ರ ವಸ್ತು. ನೀವು ಆದರದಿಂದ ಈ ಜಯಂತೀಮಾಡಿದ್ದಕ್ಕಾಗಿ ನಾನು ತಮ್ಮೆಲ್ಲರನ್ನು ವಂದಿಸುತ್ತೇನೆ ಎ. ಪಿ ಮಲ್ಲೇಶಗೌಡ್ರ ಅಂಡ್ ಬ್ರದರ್ಸ್‌ರವರು ಎ ಎಸ್. ಶಿವನಂಜಪ್ಪನವರು ಈ ಹೊಗಳಿಕೆಗೆ ಕಾರಣೀಭೂತರಾಗಿರುತ್ತಾರೆ ಪ್ರತಿವರ್ಷವೂ ಈ ಜಯಂತಿ ಉತ್ಸವವನ್ನು ನಡೆಯಿಸಿ ನಾಡಿನ ದೊಡ್ಡ ಪವಿತ್ರ ಹಬ್ಬವೆಂದು ತಿಳಿದುಕೊಂಡರೆ ಸಾರ್ಥಕ. ಇತ್ಯಾದ್ಯನೇಕ ವಿಷಯಗಳನ್ನೊಳಗೊಂಡು ಸ್ವಾರಸ್ಯವಾಗಿ ಭಾಷಣಮಾಡಿದರು. ಬಳಿಕ ತಾಲ್ಲೂಕು ಅಮಲ್ದಾರ್‌ರಾದ ಶ್ರೀವರ್ಮಾ. ಎಂ ಚೆನ್ನಸ್ವಾಮಿಯವರು ಕಮಿಟಿಯವರನ್ನು ಕುರಿತು ಶ್ರೀ ರೇಣುಕಜಯಂತೀ ಮಹೋತ್ಸವ ಸಭಾಕಾರ್ಯಕ್ಕೆ ನನ್ನನ್ನು ಅತ್ಯಾದರದಿಂದ ಬರಮಾಡಿಕೊಂಡು ಬಹಳ ಪ್ರೀತಿಸಿದ್ದೀರಿ. ನಾನು ಸಂತೋಷಪಡುತ್ತೇನೆ. ಈ ಮೊದಲೇ ಮ॥ ಸಿದ್ಧಯ್ಯನವರು ಅ॥ ಸ॥ ಎಂ. ಸಿ. ನಂಜಪ್ಪನವರು ಅನೇಕವಿಷಯಗಳನ್ನೊಳಗೊಂಡ ಭಾಷಣಮಾಡಿದ್ದಾರೆ. ಕಾಲವು ಸಾಲದು ಮುಖ್ಯವಾಗಿ ಗುರುವು ಪೂಜ್ಯ ವಸ್ತು ಗುರುವಿನಿಂದ ಜ್ಞಾನವೂ, ಜ್ಞಾನದಿಂದ ಮುಕ್ತಿಯೂ ಲಭಿಸುತ್ತದೆ ಸದ್ಗುರುನಾಥನನ್ನು ಅಶ್ರಯಿಸಿ ಜನ್ಮಸಾರ್ಥಕಪಡಿಸಿಕೊಳ್ಳಬೇಕು. ಜಯಂತೀ ಉತ್ಸವದ ಮೂಲಕ ಪರಮ ಪೂಜ್ಯ ಜಗದ್ಗುರುಗಳನ್ನು ಆರಾಧಿಸುವುದು ಪರಮ ಧರ್ಮ ಮತ್ತು ಶ್ರೇಷ್ಠ ಕರ್ತವ್ಯ ಸರ್ವಮತೀಯರೆಲ್ಲೂ ಗುರುಗಳುಂಟು ಗುರುಭಕ್ತಿಯು ಮಾನವ ಪ್ರಾಣಿಯ ಬಾಳುವಿಕೆಗೆ ಅತ್ಯಂತ ಸಹಕಾರಿಯು. ವೀರಪೀಠದ ಶ್ರೀ ಜಗದ್ಗುರುಗಳು ತೇಜೋ ಮೂರ್ತಿಗಳೂ ಸುಜ್ಞಾನಿಶ್ರೇಷ್ಠರೂ, ಸರ್ವಮತೀಯರಿಂದ ಮಾನ್ಯರೂ ಆಗಿದ್ದಾರೆ. ಅವರು ಮಹಿಮಾನ್ವಿತರು. ಅವರ ಅಗಮನವನ್ನು ತಾವು ಬಯಸಿರುವುದಕ್ಕೆ ನಾವುಸಹ ಅತ್ಯಂತ ಋಣೋಹಲಾಗಿದ್ದೇವೆ. ನಿಮ್ಮೆಲ್ಲರ ರಾಜಭಕ್ತಿಯು ಪ್ರಜೆಗಳ ಧರ್ಮವನ್ನು ವ್ಯಕ್ತಗೊಳಿಸುವುದು. ಗುರುಭಕ್ತಿ, ರಾಜಭಕ್ತಿ ನಿಮ್ಮ ಲಾಂಛನಗಳು. ಇದರಿಂದ ಗ್ರಾಮದ ಮೇಲ್ಮೆ ತೋರಿಬರುವುದು ಇತ್ಯಾದಿ ವಿಷಯಗಳನ್ನೊಳಗೊಂಡ ಭಾಷಣಮಾಡಿ ಸರ್ವರನ್ನೂ ಆನಂದಗೊಳಿಸಿದರು. ತರುವಾಯ ಅಲೂರು ಮಿಡ್ಲ್‌ಸ್ಕೂಲು ಕನ್ನಡ ಟೀಚರ್ ಆರ್ ಎ. ನಾರಾಯಣಪ್ಪನವರು ಶ್ರೀ ರೇಣುಕ ಕೀರ್ತನೆಯನ್ನು ೩ ಘಂಟೆಗಳವರೆಗೆ ಇಂಪಾದ ರಾಗದಲ್ಲಿ ಶಕ್ತಿಮಾಡಿ ಸರ್ವರಿಗೂ ಋಣಾನಂದವನ್ನುಂಟುಮಾಡಿದರು ಹಾಸನದ ಪಿಟೀಲುತಿಮ್ಮಯ್ಯನವರು, ಅಲೂರುರುದ್ರಯ್ಯನವರು, ಹಾಸನದ ಸಿದ್ಧಲಿಂಗಪ್ಪನವರು, ವಾದ್ಯಗೋಷ್ಠಿಯಲ್ಲಿ ಆನಂದಪಡಿಸಿದರು. ತರುವಾಯ ಸಭೆಕರದರವಾಗಿ ಎ. ಪಿ. ಮಲ್ಲೇಶಗೌಡರ ಸಹೋದರರು ವೈ ಪೈ. ಎ. ಪಿ ಬಸವಲಿಂಗೇಗೌಡರು ಇಂದಿನ ಸಂತೋಷದಲ್ಲಿ ನೆರೆದಿರುವ ಸರ್ವರ ರಾಜಭಕ್ತಿ ವಿಶ್ವಾಸಗಳನ್ನು ನಮ್ಮ ಪ್ರಭುಗಳಿಗೆ ತಿಳಿಪಡೇಕೆಂದು ಕೇಳಿಕೊಂಡರು. ಇದಾದನಂತರ ಎ. ಎಸ್. ಶಿವನಂಜಪ್ಪನವರು ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡಿದಾವರೆಗಳಲ್ಲಿ ಅಲೂರಿನ ಸದ್ಭಕ್ತಾದಿಗಳ ಪ್ರೇಮಪೂರ್ವಕಾಣಿಕೆಯನ್ನು ತಿಳಿಯಿಸಬೇಕೆಂದು ಕೇಳಿಕೊಂಡರು. ಬಳಿಕ ರೈಸ್ ಮಿಲ್ ಮಾಲೀಕರಾದ ಎ. ನಂಜಪ್ಪನವರು ನಮ್ಮ ಮಹಾಭಿವೃದ್ಧಿಗಾಗಿಯೂ ಗುರುಸೇವೆಗಾಗಿಯೂ ಹಗಲಿರುಳು ದುಡಿಯುತ್ತಿರುವ ಸಾಗನೂರು ಬ್ರಹ್ಮಶ್ರೀ ಅಧ್ಯಕ್ಷ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಸಾಹಸದಿಂದ ಮೆರೆಯುತ್ತಲಿರುವ ಪ್ರಭಾಪೋಷಣಕ್ಕೆ ಈ ಕಮಿಟಿಯಿಂದ ಎರಡು ರೂಪಾಯಿ, ಬೆಂಗಳೂರು ವೀರಶೈವ ಪತ್ರಿಕೆಗೆ ಒಂದು ರೂ ಹರಕನ ಎಸ್ಟೇಟ್ ಎ. ಗುರುಲಿಂಗೇಗೌಡರು ಕಳುಹಿಸಿಕೊಡಬೇಕೆಂಬ ಸೂಚನೆಯಂತೆ ನಿರ್ಣಯವಾಯಿತು ಬಳಿಕ ಮಹಾಮಂಗಳಾರತಿ ನಡೆದು ಮೌ॥ ಪಾರ್ವತಮ್ಮನವರು ಮತ್ತು ದೇವೀರಮ್ಮನವರು ಜಗದಾಚಾರ್ಯರ ಗುರುಸ್ತೋತ್ರ ಶ್ರೀರೇಣುಕರ ಗುರುಸ್ತೋತ್ರ ಭಕ್ತಿಯಿಂದ ಹೇಳಿದ ಮೇಲೆ ಬಾಲಕಿಯರುಗಳಾದ ಎಂ. ಡಿ. ನಾಗಮ್ಮ, ಆ. ಶಿ ಎ. ಪುತ್ರಿಬಸಮ್ಮ ಮುಂತಾದವರು ಬಾಲರಾಗದಿಂದ ಮಂಗಳನಾಡಿ ಆರತಿ ಬೆಳಗಿದನಂತರ ಸಭೆಯು ಮಗಿಯಿತು.

ಮಧ್ಯಾಹ್ನ ಉತ್ಸವಕ್ಕೆ ಬಂದಿದ್ದ ಎಲ್ಲಾ ಜನರನ್ನು ಆದರದಿಂದ ಸ್ವಗೃಹಕ್ಕೆ ಬರಮಾಡಿಕೊಂಡು, ಮ॥ರಾ॥ ಎ ನಂಜಪ್ಪ ಉರುಫ್ ಷಣ್ಣ ತಮ್ಮೇಗೌಡರು ಪಾನಕ ಫಲಹಾರಾದಿಗಳಿಂದ ತೃಪ್ತಿಪಡಿಸಿದರು. ಮೇಲ್ಕಂಡ ಕಾರ್ಯವು ಮ॥ರಾ॥ ಎಂ. ಸಿ. ನಂಜಪ್ಪನವರು, ಎ ಪಿ. ಬಸವಲಿಂಗೇಗೌಡರು, ಎ. ಎಸ್. ಶಿವನಂಜಪ್ಪನವರು ಎ. ನಂಜಪ್ಪನವರು, ಪಟೇಲ್ ಪರಮಶಿವಯ್ಯನವರು, ಇವರ ಶ್ರದ್ಧಾಭಕ್ತಿಗಳಿಂದ ಅತಿಶಯವಾಗಿ ನೆರವೇರಿತು.

ಓರ್ವ ಪ್ರತ್ಯಕ್ಷದರ್ಶಿ.

ತಿಪಟೂರು

ತಿಪಟೂರಿನ ವೀರಶೈವ ಮಹಾಜನಗಳು 5-3-1939 ರಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ಶ್ರೀನಂದೀಶ್ವರಾಲಯದಲ್ಲಿ ಅತಿ ವೈಭವದಿಂದ ನೆರವೇರಿಸಿದರು. ಅದಿನ ಪ್ರಾತಃಕಾಲ ಭಗವತ್ಪಾದ ರೇಣುಕರ ಭಾವಚಿತ್ರಕ್ಕೆ ವೇದೋಕ್ತ ಪೂಜಾದಿಗಳು ನಡೆದು ಸಾಯಂಕಾಲ 6 ಘಂಟೆಗೆ ನೆರೆದ ನೂರಾರು ಭಕ್ತವೃಂದಕ್ಕೆ ಪಾನಕ ಫಲಹಾರ ವಿನಿಯೋಗವಾಯಿತು. ಅನಂತರ ಜಂಗಮಸಾರ್ವಭೌಮರ ಭಾವಚಿತ್ರವನ್ನು ಶೃಂಗರಿಸಲ್ಪಟ್ಟ ಪುಷ್ಪ ಮಂಟಪದಲ್ಲಿ ಮೂರ್ತಿಗೊಳಿಸಿ ಸಕಲ ವಾದ್ಯವೈಭವದೊಡನೆ 8 ಘಂಟೆಗೆ ಉತ್ಸವವು ಹೊರಟಿತು. ಪುರಬೀದಿಗಳಲ್ಲಿ ಸ್ವಪರ ಮತೀಯ ಸ್ತ್ರೀಪುರುಷರು ಕಣ್ಣು ಕಾಯಿ ಮಂಗಳಾರತಿಯನ್ನರ್ಪಿಸಿ ಶ್ರೀಸ್ವಾಮಿಯ ದರ್ಶನಾಶೀರ್ವಾದವನ್ನು ಪಡೆದು ಕಣ್ಮನಗಳಿಂದ ಪ್ರೇಮವಂ ವ್ಯಕ್ತಪಡಿಸುತ್ತಿದ್ದರು. ಹೀರೀತಿ ಅತಿ ವೈಭವದಿಂದ ಹೊರಟ ಮಹೋತ್ಸವವು ಮುಖ್ಯಬೀದಿಗಳಲ್ಲಿ ಹಾಯ್ದು ಭಕ್ತ ಸಂದೋಹಕ್ಕೆ ಆನಂದವನ್ನೀಯುತ್ತಾ ರಾತ್ರಿ 1 ಘಂಟೆಗೆ ಸ್ವಸ್ಥಾನವನ್ನು ಸೇರಿದನಂತರ ಮಹಾಮಂಗಳಾರತಿಯಾಗಿ ಸರ್ವರಿಗೂ ಪ್ರಸಾದ ವಿಧಿಯೋಗವಾಯಿತು. ಈ ಮಹಾಕಾರ್ಯದಲ್ಲಿ ವಿಶೇಷವಾಗಿ ಭಾಗವಹಿಸಿದ ವೇ॥ ಜಿ. ತಮ್ಮಯ್ಯನವರು, ವೇ॥ ಎ. ಎಮ್. ಶಿವಲಿಂಗಾರಾಧ್ಯರು, ಸಾಸಲುಮುರಿಗಪ್ಪನವರು, ಬಿ. ಜ ಲಿಂಗಪ್ಪನವರು, ಎಸ್ ಜ ಸಿದ್ದಪ್ಪನವರು, ಟಿ. ಪಿ. ಬಸಲಿಂಗಪ್ಪನವರು, ಎಸ್. ಎಸ್. ಮಹಾಲಿಂಗಪ್ಪನವರು, ಸಿ. ಕೆ. ಶಪ್ಪಂಡನವರು ಕೋ. ಆ ಸೊಸೈಟಿ ಅನರರಿ ಸೆಕ್ರೆಟರಿ. ಎಮ್, ಪಂಜಪ್ಪನವರು, ಈ ಮಹಾಶಯರಿಗೂ, ಇತರ ಜನರಿಗೂ, ಜಗದಾಚಾರ್ಯರು ನಿತ್ಯ ನಿರತಿಶಯಮಂಗಲವನ್ನೀಯಲೆಂದು ಗುರುಶಾರ್ವ ಭೌಮನನ್ನು ಅನನ್ಯಭಾವದಿಂದ ಭಜಿಸುತ್ತೇನೆ

ಶ್ರೀಮದ್ವೀರಶೈವಮತಶಾಸ್ತ್ರಪರಾಣ ಶ್ರೀಮತ್ಪಂಚಾಚಾರ್ಯ ಗುರುಪುಂಗವವೇ ಜಯಂತೀಮಹೋತ್ಸವಗಳನ್ನು ಭರತಖಂಡದ ನಾನಾ ಭಾಗಗಳಲ್ಲಿ ಧರ್ಮಾಭಿಮಾನಿಗಳು ದೊಡ್ಡ ಹಾಡಹಬ್ಬದಂತೆ ಅತ್ಯಂತ ವೈಭವದಿಂದ ನೆರವೇರಿಸುತ್ತಿರುವದು ಪರಮಾನಂದದ ಸಂಗತಿಯಾಗಿರುವದು ಇಂತಹ ಜಯಂತೀರೂಪ ಕುಭದಿನಗಳಲ್ಲಿ ಆ ದಿವ್ಯ ದೇಹಧಾರಿಗಳ ಸಮಗ್ರ ಸ್ವರೂಪವನ್ನು ಆ ಅವತಾರ ಪುರುಷರ ಅವತಾರವು ಏತತ್ಕಾರ್ಯವು ಎಂಬುದನ್ನೂ ತಿಳಿಯುವದಾವಶ್ಯಕವಾಗಿರುವದು.

[೬ನೆಯ ಪುಟದಲ್ಲಿ ನೋಡಿ]

ಪಂಚಾಚಾರ್ಯಪ್ರಭಾ.

೧೯೩೯ ನೆಯ ಮಾರ್ಚ್ ತಾ|| ೧೩ನೇ ಸೋಮವಾರ

ಇಂದ್ರಿಯವಿಜಯ.

ಜಗಜ್ಜನ್ಯಾದಿಗಳಿಗೆ ಕಾರಣೀಭೂತವಾದ ಪರಮೇಶ್ವರನು ಕಣ್ಣು ಮೂಗು ಕಿವಿ ನೋದಲಾದ ಇಂದ್ರಿಯಗಳನ್ನು ಹೊರಗಿರುವ ನದಾರ್ಥಗಳು ಮಾತ್ರ ಕುಯುವ ಸ್ವಭಾವವುಳ್ಳವುಗಳನ್ನಾಗಿ ಮಾಡಿರುವುದರಿಂದ ಈ ಚಕ್ಷುರಾದಿ ಪಂಚೇಂದ್ರಿಯಗಳೂ ಒಳಗಿನ ನಿತ್ಯಸುಖಸ್ವರೂಪನಾದ ಪರಮಾತ್ಮನ ಕಡೆ ತಿರುಗಿ ನೋಡದೆ ಅನಿತ್ಯಸುಖದಾಯಕಗಳಾದ ಬಾಹ್ಯವಿಷಯಗಳಿಗೆರಗಿ ಜೀವಾತ್ಮನನ್ನು ಸಂಸಾರಬಂಧನದಲ್ಲಿ ಸಿಕ್ಕಿಸುವಂತೆ ಲಕ್ಷಣಕೊಟ್ಟ ದೀರರು ಮಾತ್ರ ಜಾಗರೂಕರಾಗಿ ಆ ಇಂದ್ರಿಯಗಳನ್ನು ಹೊರಗಣ ವಿಷಯಕ್ಕೆ ಎಳಸದಂತೆ ತಡೆದು ಜಂಕರಾತ್ಮನ ಕಡೆಗೆ ಎಂದಿನಿಂದಿಗೂ ಸೆಳೆದುಕೊಳ್ಳುವುದನ್ನು ಅನುಭವಿಸುವರು. ಅಮರವಿ ಪ ಬಾಹ್ಯವಿಷಯಗಳ್ಳಿ ಆಸೆಯನ್ನು ಬಿಟ್ಟು ಮಾತ್ರಾತ್ಮಾನಂದ ಪ್ರಕಾಶವನ್ನು ಅನುಭವಿಸುವವಿದ ವಿನೋದ ಸಾಮ್ರಾಜ್ಯವೇ ಇವರೇ ವೀರರು ಜೀವನ್ಮುಕ್ತರು ತಾವು ಪಾಪವಿಲ್ಲದ ತ್ರಿಸ್ಥಿತಿಯನ್ನು ಹೊಂದಿರುವುದಲ್ಲದೆ ಮಾತಾದಿ ಸಮಸ್ತ ಪ್ರಪಂಚದವರಿಗೂ ಅನುಕರಣೀಯವಾದ ಪರಿಶುದ್ಧವಾದ ಸಾಧನಗಳನ್ನು ಸಾಧಿಸಿ ಮುಂದಿನವರಿಗೆ ಮಾರ್ಗದರ್ಶಕರಾಗಿ ಲೋಕೋದ್ಧಾರಕ್ಕಾಗಿ ಶರೀರವನ್ನು ಸಂಗ್ರಹಿಸಿಕೊಂಡು ಪರಮೇಶ್ವರನ ಯ ಸಿಂಹಾಸನವನ್ನು ಹೊಂದಿ ದೈವೀಸಂಪತ್ತು ಮೋಕ್ಷವನ್ನು ಅನುಭವಿಸುವವರು ಒಂದಾಗಿ ಉಂಟುಮಾಡುವುದು ದೈವೀ ದತ್ತೆಯಿಂದ ಸರಿ ಮೇಸ್ಸಿರಿಗೆ ಕೈವಲ್ಯಕ್ಕಾಗಿ ಬೇಯುವವರೇ ಅನುಭೀ ಸಂಪತ್ತು ಆ ಬಾಹ್ಯವಿಷಯಗಳನ್ನು ಎಂದು ಸಹ ಮೇರ ಪಾಗಿ ತಿರುಗುವುದರಿಂದ ಪರಮೇಶ್ವರನ ಕೈಗೂ ಪಾತ್ರರಾಗುವುದಿಲ್ಲ. ಮೊದಲು ಸಾಮಾನ್ಯವಿಕಾರ್ಯವಿಷಯಗಳನ್ನು ಬೇಡಿ ಅನುಭೀ ಸಂಪತ್ತನ್ನು ಅಭಿವೃದ್ಧಿಯೋ ಇವರನ್ನು ಪರಿಪಾಲನೆ ವೃಷ್ಟಿಯೊಂದ ಸೋತುಪರೆ ಯಾರು ದೈವೀಸಂಪತ್ತಿನಲ್ಲಿ ಅಮಿಷಿಗಳಾಗಿ ಬ್ರಹ್ಮಾದಿ ಇವರ ಯೋಗ್ಯತೆಯನ್ನಳೆಯಲಾರದೆ ಅ ಪರಮೇಶ್ವರನೇ ಪಟ್ಟಿಸಿರು ತ್ತಾನೆ ಸಾಮಾನ್ಯರು ಮಾತ್ರವಿಗೆಂದಿಗೆ ನೋಡದಂತೆ ವಿಷಯಸ ಖವನ್ನೇ ಸಿದಸ ಸುವೆಂದು ಭ್ರಮಿಸಿ ವಿಷಯ ಪಂಕದಲ್ಲಿ ಬಲುಕ ನೆರೆಳುತ್ತಲಿದ್ದಾರೆ ಈ ವಿಷಯ ಪಂಕವನ್ನು ತಪ್ಪಿಸಿಕೊಳ್ಳುವವರಿಗೂ ದುಃಖನಿವೃತ್ತಿ ಬಗಾಗುವಂತೆ ತಿಳಿವು ದೈವೀಸಂಪತ್ತೆಂಬ ಆವಲಂಬನೆ ಯನ್ನು ಕಾಣ್ಬು ಇಂತಹ ವಿಷಯವಾ-ಬ ಕೆಸರಿನಿಂದ ಮಾನವರನ್ನು ದಾಟಿಸುವುದಕ್ಕಾಗಿಯೇ ಮಹಾತ್ಮರಾದ ಆಚಾರ್ಯರು ಭೂಲೋಕದಲ್ಲಿ ಅವತಾರಮಾಡಿದರು ಗುರುನಿಂದೆ, ಅಜ್ಞಾನ, ಪ್ರಾಣಿಹಿಂಸೆ, ಅಶುಚಿತ್ವ, ಕಾಠಿನ್ಯ, ಕ್ರೋಧ, ನಿರ್ದಯ, ಲೋಭ, ಮಾತ್ಸರ್ಯ, ದರ್ಪ, ದುರಾಚಾರ, ದೈವನಿಂದೆ ಮೊದಲಾದವುಗಳೇ ಆಸುರೀಸಂಪತ್ತುಗಳು ಗುರುಭಕ್ತಿ, ಅಂತಃಕರಣಶುದ್ಧಿ, ಆತ್ಮಜ್ಞಾನ, ಯೋಗ, ಧ್ಯಾನ, ಬಹಿರಂತರೇಂದ್ರಿಯನಿಗ್ರಹ, ಶಿವಪೂಜೆ, ಶಾಸ್ತ್ರಾಧ್ಯಯನ, ಋಜುತೆ, ಅಹಿಂಸೆ, ಸತ್ಯ, ಅಕ್ರೋಧ, ಶಾಂತಿ, ಭೂತದಯೆ, ಧೃತಿ, ಶೌಚ, ಅದ್ರೋಹ ಮೊದಲಾದುವುಗಳೇ ದೈವೀಸಂಪತ್ತುಗಳೆನಿಸುವವು ಪ್ರಪಂಚದ ಲ್ಲಿಆಯಾ ಮತ ಸ್ಥಾಪಕರುದ ಆಚಾರ್ಯರು ಸರಮಾತ್ಮನ ಆರಾಧನೆಯನ್ನು ಮಾಡುವ ಒಂದೊಂದು ಮಾರ್ಗವನ್ನು ಪ್ರವೇಶಿಸಿ, ಸಕಲ ಮಾನವರ ಹೃದಯಕ್ಷೇತ್ರದಲ್ಲಿ ಮೋಕ್ಷ ಹೇತುವಾದ ದೈವೀಸಂಪತ್ತೆಂಬ ಅಮೃತಬೀಜವನ್ನು ಬಿತ್ತಿ, ಅವುಗಳಿಗನುಕೂಲವಾದ ಸಿದ್ಧಾಂತವೆಂಬ ಬೇಲಿಯನ್ನು ಕಟ್ಟಿ, ಈ ಆಸುರೀಸಂಪತ್ತುಗಳೆಂಬ ಪಶುಗಳಿಗೆ ಅವಕಾಶವಿಲ್ಲದಂತೆ ನೂಡಿ, ಮತಸ್ಥಾಪಕಾಚಾರ್ಯರೆಂಬ ಹೆಸರನ್ನು ಪಡೆದರು. ಅಂತಹ ಆಚಾರ್ಯರೊಳಗೆ ಶ್ರೀ ರೇಣುಕಾದಿ ಪಂಚಾಚಾರ್ಯರೆಂಬವರೇ ವೀರಶೈವಮತಸ್ಥಾಪಕರಾಗಿರುತ್ತಾರೆ. ದೈವೀಸಂಪತ್ತಿನ ಕಷ್ಟಾಸಕ್ತಿಯೇ ಈ ವೀರಶೈವಮತವು ನಿಂತಿರುತ್ತದೆ. ಶೈವೀಸಂಪತ್ತನ್ನು ಎಂದು ಇವರು ಕಳೆದುಕೊಳ್ಳುತ್ತಾರೋ ಅಂದೇ ಈ ಮತದ ವೈಭವವು ನಷ್ಟವಾಯಿತೆಂದೇ ಲು ! ಮಾನವರು ಪಶುಗಳಂತೆ ಕೇವಲ ಜಾಗ್ರದವಸ್ಥೆಯಲ್ಲಿ ಮಾತ್ರ ವಿಶ್ರಾಂತರಾಗದೆ, ರಥದ ಸಾರಥಿಗಳನ್ನು ಅತ್ಯಂತರಾಗಿ ತೆಗೆದುಕೊಂಡುಹೋಗದೆ ಉತ್ಪನುಮಾರ್ಗದಲ್ಲಿ ತೆಗೆದುಕೊಂಡು ಹೋಗಿ ಸ್ವಸ್ಥಾನವನ್ನು ಸೇರಿ ಮುಖಪಡುವ ರಥಿಕನಂತೆ ಅನಿತ್ಯವಾದ ವಿಷಯಗಳಿಗೆ ಹೋಗದಂತೆ ಇಂದ್ರಿಯಗಳನ್ನು ನಿಯಂತ್ರಿಸಿ ನಿತ್ಯಾತ್ಮಾನಂದವನ್ನು ಹೊಂದಿ ನಿತ್ಯಸುಖಿಗಳಾಗಬೇಕಾಗಿದೆ. ಇಂತಹ ಮುಕ್ತಿಸುಖವನ್ನು ಹೊಂದಬೇಕಾದರೆ ಗುರುಭಕ್ತಿ ಮೊದಲಾದ ದೈವೀಸಂಪತ್ತೇ ಸಾಧನವಾಗಿದೆ. ಗುರುದ್ರೋಹ, ಅಸತ್ಯ, ಹಿಂಸೆ ಮುಂತಾದ ಆಸುರೀಸಂಪತ್ತೇ ಮುಕ್ತಿಗೆ ಪ್ರತಿಬಂಧಕವಾಗಿದೆ. ಶ್ರೀ ಸಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವನ್ನು ಅವಲಂಬಿಸುವವರು ಗುರುನಿಂದೆ, ಹಿಂಸೆ, ನಿರ್ದಯ ಮೊದಲಾದ ಆಸುರೀಸಂಪತ್ತನ್ನು ವ್ಯಾಳ್ಳಿಶ್ರಾದಿ ಕ್ರೂರಮೃಗಗಳಂತೆ ಬಹುದೂರವಾಗಿ ಅಟ್ಟಬೇಕು. ಗುರುಭಕ್ತಿ, ಆತ್ಮಜ್ಞಾನ, ಸತ್ಯ ಮೊದಲಾದ ದೈವೀಸಂಪತ್ತನ್ನು ಸಂಪಾದಿಸುವುದೇ ಗೋವುಗಳಂತೆ ಅರ್ಜಿಸುತ್ತಿರಬೇಕು. ಕೆಲವರಿಂದಿಂದೀಚೆಗೆ ಅನೇಕರು ತಮ್ಮ ಮೂಲಧನವಾದ ದೈವೀಸಂಪತ್ತಿಗೆ ತಿಲಾಂಜಲಿಯನ್ನು ಕೊಟ್ಟು ಆಸುರೀಸಂಪತ್ತನ್ನೇ ತಮ್ಮ ಮೂಲಧನವನ್ನಾಗಿ ಮಾಡಿಕೊಂಡಿರುತ್ತಾರೆ. ತಮ್ಮ ಸುಖಸಾಧಕವಾದ ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ ನೀತಿದಪ್ಪಿ ಉಪಾಧ್ಯಾಯರನ್ನೇ ಟೀಕಿಸುವ ಉದ್ಧತತನದ ವಿದ್ಯಾರ್ಥಿಗಳಂತೆ ವೀರಶೈವಸಮಾಜದಲ್ಲಿ ಕೆಲವರು ತಮ್ಮತಮ್ಮ ಸ್ವಭಾವವನ್ನು ತೋರಿಸುವದಕ್ಕಾಗಿ ಗ್ರಂಥಗಳನ್ನು ನೋಡದೆ ಕಾಲಮಾನಗಳನ್ನು ವಿಚಾರಿಸದೆ, ಆಚಾರ್ಯಪಾದರಿಂದ ಅನುಗ್ರಹೀತವಾದ ಶಿವಲಿಂಗದ ಅರಿವಿಲ್ಲದೆ, ಮೂಲಗುರುಗಳನ್ನೇ ಟೀಕಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಇಂಥವರನ್ನು ಅವಾಂತರ ವೀರಶೈವರೆನ್ನುವುದಕ್ಕೆ ಸಂದೇಹವಿಲ್ಲ. ವೀರಶೈವನಾದವನು ತನಗೆ ಅನ್ಯಾವರಣಗಳನ್ನು ಅನುಗ್ರಹಿಸುವ ಗುರುವನ್ನು ನಿಂದಿಸುವನೇ ? ಶ್ರೀಸಂಚಾಚಾರ್ಯರ ನಾಮಸ್ಮರಣ ಮಾಡದ ಮಾನವನು ವೀರಶೈವನಾಗಬಲ್ಲನೇ ? ಇಂಥವರು ಹಿಂದೆ ಎಂದೂ ಹುಟ್ಟಿರಲಿಲ್ಲ. ಈಗ ಮಾತ್ರ ಅಲ್ಲಲ್ಲಿ ಪುತ್ತಿಂದಿದ ಹಾವು ತಲೆಹಾಕುವಂತೆ ತಲೆದೋರುವುದನ್ನು ನೋಡಿದರೆ ಕಲಿಯು ತನ್ನ ಸಾಮರ್ಥ್ಯವನ್ನು ಅಲ್ಪಸ್ವಲ್ಪ ತೋರಿಸಿದನೆಂದೇ ಹೇಳಬೇಕಾಗಿದೆ.

ಮಕ್ಕಳು ತಂದೆಗಳನ್ನು ದೂಷಿಸುವುದೂ, ಪ್ರಜೆಗಳು ಪ್ರಭುಗಳನ್ನು ದೂಷಿಸುವುದೂ, ಸತಿಯು ಪತಿಯನ್ನು ದೂಷಿಸುವುದೂ, ಶಿಷ್ಯರು ಗುರುಗಳನ್ನು ದೂಷಿಸುವುದೂ ಇಂತಹ ವಿಪರೀತ ಧರ್ಮಗಳು ಜನಾಂಗದಲ್ಲಿ ತೋರುತ್ತಿರುವುದು ಕಲಿಪ್ರಭಾವವೇ ಸರಿ ! ಇಂಥವರ ವಿಷಯದಲ್ಲಿ ಉದಾಸೀನತೆಯೇ ಶಾಂತಿಮಂತ್ರವಾಗಿದೆ. ಇನ್ನುಳಿದ ಅಸ್ತಿಕ ಶಿಖಾಮಣಿಗಳು ಮಾತ್ರ ತಮ್ಮ ರಾಜಮಾರ್ಗವನ್ನು ಬಿಟ್ಟು ಮುಳ್ಳುಳ್ಳ ಹಳ್ಳಕೊಳ್ಳಗಳಲ್ಲಿ ಕಾಲಿಡದೆ ಮಹಾಚಾರ್ಯರಿಂದ ಅನುಗ್ರಹಿತವಾದ ಅಷ್ಟಾವರಣ ಪಂಚಾಚಾರಗಳನ್ನು ಬಿಡದೆ, ತಮ್ಮ ಇಂದ್ರಿಯಗಳನ್ನು ಅನಿತ್ಯವಾದ ವಿಷಯಗಳಲ್ಲಿ ಪ್ರವೇಶಿಸದೆ ಇಂದ್ರಿಯ ಜಯವನ್ನು ಹೊಂದಿ ಆ ಇಂದ್ರಿಯಗಳನ್ನು ನಿತ್ಯನಾದ ಪರಮಾತ್ಮನ ಕಡೆಗೆ ಸಮ್ಮುಖಗೊಳಿಸಿ ತಮಗುಂಟಾಗಿರುವ ಅನರ್ಥಕಾರಿಯಾದ ಕೆಟಜ್ಞತ್ವಾದಿಗಳನ್ನು ಪರಿಹರಿಸಿಕೊಂಡು ಪರಮಾತ್ಮನ ಸರ್ವಜ್ಞತ್ವಾದಿ ಗುಣಗಳನ್ನು ಪಡೆದು ಶ್ರೀರೇಣುಕಾದಿ ಪಂಚಾಚಾರ್ಯರಿಂದು ಕೃನಾದ ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಹೊಂದಿ "ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್" ಎಂಬ ಶ್ರುತ್ಯರ್ಥ ಕ್ರಮಸಾರವಾಗಿ ತಮಗೆ ರೂಢಮೂಲವಾಗಿ ಬಂದಿರುವ "ವೀರಶೈವ" ಎಂಬ ಹೆಸರನ್ನು ಅನ್ವರ್ಥಮಾಡಿಕೊಂಡು, ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಸಾಗರದ ತಾಲೂಕು ಸರೂರುಗ್ರಾಮದಲ್ಲಿ ಅಕಸ್ಮಾತ್ ಬೆಂಕಿಬಿದ್ದು ಸುಮಾರು ಇಪ್ಪತ್ತು ಮನೆಗಳು ಸುಟ್ಟುಹೋದವೆಂದೂ ಅದರಿಂದ ಸುಮಾರು 20 ಸಾವಿರ ರೂಪಾಯಿಗಳ ನಷ್ಟವಾಗಿರುವುದೆಂದೂ ತಿಳಿದುಬರುತ್ತದೆ.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರು ಮದರಾಸಿನಿಂದ ಬೆಂಗಳೂರಿಗೆ ಆಗಮಿಸಿ ಕ್ಷೌತ್ಯಾಹ್ನಿಕಾದ್ದಾರೆ. ಶ್ರೀಮದ್ಯುವರಾಜೆಯವರು ಪುತ್ರಪುತ್ರಿಯರೊಂದಿಗೆ ಬೆಂಗಳೂರಿಗೆ ದಯಮಾಡಿಸಿರುವರು.

ರಾಜಮಂತ್ರಪ್ರವೀಣ ಎಸ್. ಪಿ. ರಾಜಗೋಪಾಲಾಚಾರ್ಯರವರು ತಮ್ಮ ಪತ್ನಿ ಶ್ರೀಮತಿ ಪಂಕಜಮ್ಮನವರ ಜ್ಞಾಪಕಾರ್ಥವಾಗಿ ಮಹಿಳಾಸಮಾಜದಲ್ಲಿ ಹೊಸದಾಗಿ ತೆರೆದ ಹೈಸ್ಕೂಲಿಗಾಗಿ ಕಟ್ಟಿರುವ ಸೈನ್ಸ್ ಲ್ಯಾಬರೇಟರಿಗೆ 2000 ರೂಪಾಯಿಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರು ರಾಜಧಾನಿಯ ಶಾರದಾವಿಲಾಸ ಹೈಸ್ಕೂಲು ಮತ್ತು ಮರಿಮಲ್ಲಪ್ಪನವರ ಹೈಸ್ಕೂಲಿನ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ವೇಳೆ ಅಲ್ಪಾಹಾರಕ್ಕಾಗಿ ತಿಂಗಳೊಂದಕ್ಕೆ 50 ಮತ್ತು 25 ರೂಪಾಯಿಗಳನ್ನು ಅರಮನೆಯಿಂದ ಕೊಡುವಂತೆ ಅಪ್ಪಣೆಮಾಡಿರುವರೆಂದು ತಿಳಿದುಬರುತ್ತದೆ.

ಕಳೆದ 5 ನೆಯ ತಾರೀಖಿನ ಸಾಯಂಕಾಲ ಮಂಡ್ಯದ ಸಕ್ಕರೆ ಕಾರ್ಖಾನೆಯ ಗೋಡೌನಿನಲ್ಲಿ ಹೊಗೆಯಾಡುವದು ಕಂಡುಬಂದಿತು. ಕೂಡಲೆ ಜನರಲ್ ಮ್ಯಾನೇಜರವರೂ ಕೆಲಸಗಾರರೂ ಅಲ್ಲಿಗೆ ಓಡಿದರು. ಬೆಂಕಿಯನ್ನು ಆರಿಸುವ ಸಂದರ್ಭದಲ್ಲಿ 5-6 ಮಂದಿಗೆ ಸಣ್ಣ ಪುಟ್ಟ ಗಾಯಗಳಾದವು. ಆವರೆಲ್ಲರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಲಾಯಿತು. ಎಷ್ಟು ನಷ್ಟವಾಗಿದೆ ಎಂಬುದನ್ನು ಪರಿಶೀಲಿಸುತ್ತಿದ್ದಾರೆ.

ಮೈಸೂರು ಮಹಾರಾಜಾ ಕಾಲೇಜ್ ಕರ್ಣಾಟಕ ಸಂಘದವರು ಡಾ|| ಎಂ. ಎಚ್. ಕೃಷ್ಣರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡದ ಅಧ್ಯಾಪಕರಾಗಿದ್ದ ಶ್ರೀಮಾ. ಶಿ. ಯಸ್. ವೆಂಕಣ್ಣಯ್ಯನವರ ಅಕಾಲ ಮರಣಕ್ಕಾಗಿ ಸಂತಾಪವನ್ನು ಸೂಚಿಸುವ ಠರಾವನ್ನು ಮಾಡಿದ್ದಲ್ಲದೆ, ರಾಜಸೇವಾಸಕ್ತ ಮಿ|| ಬಿ ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಪ್ರೊಫೆಸರ್ ವೆಂಕಣ್ಣಯ್ಯನವರ ಹೆಸರು ಶಾಶ್ವತವಾಗಿ ನಿಲ್ಲುವಂತೆ ಮಾಡಲು ಅವರ ಹೆಸರಿನಮೇಲೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು 'ಅಧ್ಯಾಸಮಾಡುವ ವಿದ್ಯಾರ್ಥಿಗೆ ಒಂದು ನೇತನವನ್ನು ಕೊಡಲು ತಕ್ಕಷ್ಟು ನಿಧಿಯನ್ನು ಶೇಖರಿಸಬೇಕೆಂಬ ಮತ್ತೊಂದು ನಿರ್ಣಯವನ್ನು ಮಾಡಿದರು.

ವರ್ತಮಾನಸಂಗ್ರಹ.

ಇಟಲಿಯು ಸೈನ್ಯಸಿದ್ಧತೆ !

ಕಳೆದ 1915 ಇಸ್ವಿಯಿಂದ ಇಟಲಿಯಲ್ಲಿ ಜನಿಸಿದ ಪ್ರತಿಯೊಬ್ಬ ಯುವಕನೂ, ಸೈನ್ಯಕ್ಕೆ ಬಂದು ಸೇರಬೇಕೆಂದು ಇಟಲಿ ಸರ್ಕಾರದವರು ಆಜ್ಞಾಪಿಸಿರುತ್ತಾರೆ. ಇದರಿಂದ 2 ಲಕ್ಷ ಜನರು ಸೈನ್ಯಕ್ಕೆ ಸೇರಬೇಕಾಗಬಹುದೆಂದು ಹೇಳಲಾಗಿದೆ. ಈ ವಿಚಾರಿಸಿನಿಂದ ಇತರ ರಾಜ್ಯಗಳು ಕಳವಳಗೊಂಡಿವೆ.

ತಿರುವಾಂಕೂರು ನ್ಯಾಷನಲ್ ಬ್ಯಾಂಕ್

ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲಾ ಬ್ಯಾಂಕಿನ ಕೆಲವುಜನ ಕ್ರೈಡಿಟರುಗಳು ಬ್ಯಾಂಕನ್ನು ಪುನರ್ವ್ಯವಸ್ಥೆಗೊಳಿಸಬೇಕೆಂದು ಮದರಾಸ್ ಹೈಕೋರ್ಟಿಗೆ ಅರ್ಜಿಹಾಕಿಕೊಂಡಿದ್ದರು. ಆ ಅರ್ಜಿಯ ಸಂಬಂಧವಾದ ವಿವಾದಗಳನ್ನು ನ್ಯಾಯಮೂರ್ತಿ ಶ್ರೀ ವೆಂಕಟರಮಣ ಐಯರವರು ಕೇಳಿ, ಬ್ಯಾಂಕಿನ ಪುನರ್ವ್ಯವಸ್ಥೆಯ ವಿಷಯವಾಗಿ ಕೊಳ್ಳಿ ರಿಸೀವರು ಸಹಕರಿಸಲಿಲ್ಲವೆಂದೂ, ಬ್ಯಾಂಕನ್ನು ಮುಚ್ಚುವ ವ್ಯವಹಾರ ನಡೆಯುತ್ತಿರುವ ಕೋರ್ಟುಗಳೆಲ್ಲವೂ ಸಹಕರಿಸಿದರೆಮಾತ್ರ ಬ್ಯಾಂಕಿನ ಪುನರ್ವ್ಯವಸ್ಥೆಯು ಸಾಧ್ಯ; ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ತೀರ್ಪುಕೊಟ್ಟು ಅರ್ಜಿಯನ್ನು ತಿರಸ್ಕರಿಸಿದರು.

ಸತ್ಯಾಗ್ರಹಕ್ಕೆ ಸನ್ನಾಸಿಗಳು

ಹೈದರಾಬಾದಿನಲ್ಲಿ ಹಿಂದೂ ಪ್ರಜೆಗಳ ಧಾರ್ಮಿಕ ಹಕ್ಕು ಬಾಧ್ಯತೆಗಳಿಗೆ ತಕ್ಕ ಭರವಸೆ ದೊರೆಯದಿದ್ದರಿಂ ಭಾರತದ ಬೇರೆಬೇರೆ ಕಡೆಗಳಲ್ಲಿರುವ ಬಹುಜನ ಸನ್ಯಾಸಿಗಳು ಹೈದರಾಬಾದಿಗೆ ಬಂದು ಸತ್ಯಾಗ್ರಹ ನಡೆಸುವರೆಂಬುದಾಗಿ ತಿಳಿದುಬರುತ್ತದೆ.

ಅತ್ಯಂತ ಸಣ್ಣ ದೂರದರ್ಶಕ ಯಂತ್ರ!

ಜೇಬಿನಲ್ಲಿಟ್ಟುಕೊಳ್ಳಲು ಅನುಕೂಲವಾಗಿರುವಂತೆ 6 ಔನ್ಸು ತೂಕಮಾತ್ರ ವಿರುವ ದೂರದರ್ಶಕಯಂತ್ರವು ತಯಾರಿಸಲ್ಪಟ್ಟಿದೆಯಂತೆ. ಇದರ ಸಹಾಯದಿಂದ 1000 ಗಜ ದೂರವೂ 432 ಗಜ ಅಗಲಪ್ರದೇಶವನ್ನು ಸ್ಪಷ್ಟವಾಗಿ ನೋಡಬಹುದಂತೆ.

ನಾಯಿಳೂದಲಿನಿಂದ ಬಟ್ಟೆ.

ಫೆಲ್‌ಪ್ಯಾಮ್ ಎಂಬಲ್ಲಿರುವ ಇ. ಡಿ. ವ್ಯಾನೋಪ್ ಎಂಬಾಕೆಯು ತಾನು ಸಾಕಿರುವ ಸ್ಯಾನೋಯ್ಡ್ ಎಂಬ ನಾಯಿ ವೈಯ್ಯ ತುಪ್ಪಟದಿಂದ ಬಟ್ಟೆಯನ್ನು ನೇಯ್ದು, ಫ್ರಾಕುಗಳು, ಜಂಪರುಗಳು, ಕಾಲುಚೀಲಗಳು ಮೊದಲಾದುವನ್ನು ತಯಾರಿಸುವಳಂತೆ. ಈ ರೀತಿ ಮಾಡಲು ಆಕೆಗೊಬ್ಬಳಿಗೆ ಸಾಧ್ಯವೆಂದು ಹೇಳಲಾಗಿದೆ.

ದಾರ್ಜಿಗ್‌ನಲ್ಲಿರುವ ಪೋಲೆಂಡ್ ವಿದ್ಯಾರ್ಥಿಗಳ ರಕ್ಷಣಪ್ರಯತ್ನ.

ನಾಜಿ ಪಕ್ಷದ ಪ್ರಭಾವಕ್ಕೆ ಒಳಪಟ್ಟು ಪೋಲೆಂಡಿಗೆ ಉತ್ತರದಲ್ಲೂ ಜರ್ಮನಿಗೆ ಈಶಾನ್ಯದಲ್ಲೂ ಇರುವ ದಾರ್ಜಿಗ್ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ತಮ್ಮ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದನ್ನು ತಿಳಿದು ಪೋಲಿಷ್ ಸರ್ಕಾರವು ದಾರ್ಜಿಗ್‌ನಲ್ಲಿರುವ ತಮ್ಮ ರಾಯಭಾರಿಗೆ ಪೋಲೆಂಡ್ ವಿದ್ಯಾರ್ಥಿಗಳಿಗೆ ತಕ್ಕ ರಕ್ಷಣೆ ಕೊಡುವಂತೆ ದಾರ್ಜಿಗ್ ಸರ್ಕಾರವನ್ನು ಪ್ರಾರ್ಥಿಸಬೇಕೆಂದು ತಿಳಿಸಿಹಿರುತ್ತಾರೆ.

ನಾಜಿ ಪಕ್ಷದವರ ದಸ್ತಗಿರಿ

ಹಂಗೇರಿಯಲ್ಲಿ ನಾಜಿ ಚಳುವಳಿಯನ್ನು ನಡೆಯಿಸುತ್ತಿದ್ದ ಆ ಪಕ್ಷದ 47 ಮಂದಿ ಮುಖಂಡರನ್ನು ಅಲ್ಲಿಯ ಸರ್ಕಾರದವರು ದಸ್ತಗಿರಿಮಾಡಿ ಆ ಸಂಸ್ಥೆಗೆ ಸೇರಿದ ಹಣ ಕಾಸುಗಳೆಲ್ಲವನ್ನು ಮುಟ್ಟುಗೋಲು ಹಾಕಿರುತ್ತಾರೆ. ಇದಲ್ಲದೆ ಆ ಪಕ್ಷಕ್ಕೆ ಸೇರಿದ 200-300 ಮಂದಿ ಸದಸ್ಯರನ್ನು ಈಚೆಗೆ ದಸ್ತಗಿರಿ ಮಾಡಿರುತ್ತಾರೆಂದು ತಿಳಿದು ಬರುತ್ತದೆ.

ಸ್ಪೇನ್ ಪರಿಸ್ಥಿತಿ

ಸ್ಪೇನಿನ ಮಹಾಪ್ರಧಾನರಾದ ಶ್ರೀ ನೆಗ್ರಿನರವರು ಹೊರಡಿಸಿದ ಶಾಸನದಪ್ರಕಾರ ಕೊನೆಯನರಿವಿಗೂ ತಾವು ದಂಗೆಹೋರರೊಡನೆ ಹೊಡೆದಾಡಿಯೇ ತೀರಬೇಕೆಂದು ದೃಢಸಂಕಲ್ಪವನ್ನು ಮಾಡಿದ್ದಾರೆಂಬುದಾಗಿ ನ್ಯಕ್ತವಾಗುತ್ತಿದೆ. ರಿಪಬ್ಲಿಕ್ ಸೈನ್ಯಪಡೆಗಳ ಸಂಪೂರ್ಣ ಅಧಿಕಾರವನ್ನು ಅವರು ವಹಿಸಿಕೊಂಡಿದ್ದಾರೆ. ಸಂಘಾನವು ಮುರಿದುಬಿತ್ತೆಂದು ಕಾಣುತ್ತದೆ.

ಬ್ರಿಟಿಷರ ವಾಯುಬಲ.

ಇಂಗ್ಲೆಂಡಿನ ವಾಯುಬಲವನ್ನು ಇನ್ನೂ ಅಭಿವೃದ್ಧಿಪಡಿಸಲು ಈಸಾರಿ 2050 ಲಕ್ಷ ಪೌಂಡುಗಳ ನೆಚ್ಚವನ್ನು ವಾಯುಶಾಖೆಯ ಸಚಿವರಾದ ಕೆಂಗ್ಸ್ಲೆವುಡ್‌ರವರು ಕಾಮನ್ಸ್‌ಸಭೆಯ ಮುಂದಿಡುತ್ತ ಇಂಗ್ಲೆಂಡಿನ ವಾಯುಬಲದ ಅಭಿವೃದ್ಧಿಯನ್ನು ವರ್ಣಿಸಿದರು. 1929ನೇವರ್ಷದಿಂದ 1934ನೆಯ ವರ್ಷದವರೆಗೂ ಇಂಗ್ಲೆಂಡಿನಲ್ಲಿದ್ದ ವಾಯುಬಲಕ್ಕಿಂತ ಈಗ 1½ ಪಟ್ಟು ಹೆಚ್ಚಾಗಿರುವದೆಂದೂ, ವಾಯುಬಲದ ಕಾರ್ಯಕ್ರಮವು ವಿಸ್ತಾರಗೊಳ್ಳುತ್ತಿರುವದರಿಂದ ಈ ವರ್ಷ ಸಾವಿರ ಜನರನ್ನು ವಾಯುಬಲದಲ್ಲಿ ಸೇರಿಸಿಕೊಳ್ಳಲಾಯಿತೆಂದೂ, ವಾಯುಬಲದಲ್ಲಿ ಒಟ್ಟು 102000 ಜನಗಳಿರಬೇಕೆಂದು ಸಂಕಲ್ಪಮಾಡಲಾಗಿದೆಯೆಂದೂ, ಕಳೆದವರ್ಷ ಜೂ ತಿಂಗಳು 31600 ಜನಗಳು ವಿಮಾನ ಶಾಖೆಗೆ ಬೇಕಾಗಿರುವದಂದು ಹೊರಡಿಸಿದ ಪ್ರಕಟನೆಯು ಯಶಸ್ವಿಯಾಗಿ ಕಳೆದವಾರ ಈ ಅಂಕಿಯು ಪೂರ್ಣವಾಯಿತೆಂದೂ, ಈಗ ಹೊಸದಾಗಿ ವಾಯುಶಾಖೆಗೆ ಸೇರುತ್ತಿರುವವರ ಯೋಗ್ಯತೆಯೂ ಸಹ ಬಹಳ ಉತ್ತಮವಾಗಿದೆಯೆಂದೂ, ಲಂಡನ್ ನಗರದ 30 ಕಡೆಗಳಲ್ಲಿ ರಿಜರ್ವ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೆಂದೂ, 20 ಕಡೆಗಳಲ್ಲಿ ಟ್ರೈನಿಂಗ್ ಕೊಡುವ ಕೇಂದ್ರಗಳನ್ನು ಸ್ಥಾಪಿಸಲಾಗುವದೆಂದೂ ಹೇಳಿದರು.

ಲಾರ್ಡ್ ನಫೀಲ್ಡರ ದಾನ

ಬ್ರಿಟನ್ನಿನ ದಾನಶೂರರಾದ ಲಾರ್ಡ್ ನಫೀಲ್ಡರವರು ಶಾಸ್ತ್ರಕೋಶ ಸಂಬಂಧವ್ಯಾಧಿಗಳನ್ನು ಪರಿಹರಿಸಲು ಸಹಕಾರಿಯಾದ "ಐರ್‌ಲಂಗ್" ಕಬ್ಬಿಣದ ಶಾಸ್ತ್ರಕೋಶ ತಮ್ಮಲ್ಲಿ ತಯಾರಾದ ಯಂತ್ರಸಾಧನವನ್ನು ತಿರುವಾಂಕೂರು ಸಂಸ್ಥಾನಕ್ಕೆ ದಾನಮಾಡಿರುತ್ತಾರೆ. ಅವರ ಈ ಉಪಕಾರಕ್ಕಾಗಿ ತಿರುವಾಂಕೂರು ಸರ್ಕಾರದವರು ಲಾರ್ಡ್ ನಫೀಲ್ಡರವರಿಗೆತಮ್ಮವಂದನೆಗಳನ್ನು ಸಮರ್ಪಿಸಿರುತ್ತಾರೆ.

ಆಫ್ರಿಕೆಯಲ್ಲಿ ಬಣ್ಣದ ಜನಗಳಿಗೆ ಪ್ರತ್ಯೇಕ ವಸತಿ ಕಾನೂನು!

ದಕ್ಷಿಣ ಆಫ್ರಿಕಾ ಸರಕಾರದವರು ಅಲ್ಲಿಯ ಬೇರೆ ಬೇರೆ ಪಟ್ಟಣಗಳಲ್ಲಿ ವಾಸಮಾಡುತ್ತಿರುವ ಯೂರೋಪಿಯನ್ನರಿಗೂ, ಭಾರತೀಯರಿಗೂ, ಇತರ ಬಣ್ಣದ ಜನಗಳಿಗೂ ಪ್ರತ್ಯೇಕ ಪ್ರತ್ಯೇಕವಾದ ಸ್ಥಳಗಳನ್ನು ಗೊತ್ತುಮಾಡುವ ನಿರ್ಣಯವನ್ನು ಜಾರಿಮಾಡಲು ನಿಶ್ಚಯಿಸಿದ್ದಾರೆ. ಯೂರೋಸಿಯನ್ನರು ವಾಸಮಾಡುವ ಪ್ರದೇಶಗಳಲ್ಲಿ ಭಾರತೀಯರು ಸ್ಥಳವನ್ನುಕೊಂಡು ಮನೆಗಳನ್ನು ಕಟ್ಟಿಸಿಕೊಳ್ಳದಂತೆ ಈ ಕಾನೂನು ನಿರ್ಬಂಧಿಸುವದು. ಟ್ರಾನ್ಸ್‌ವಾಲಿನ ಎಲ್ಲೆಡೆಯಲ್ಲಿರುವ ಸುಮಾರು 3000 ಭಾರತೀಯರು ತಮ್ಮ ಪ್ರತಿನಿಧಿಗಳು 25 ಮಂದಿ ಇರುವ ಒಂದು ಸಮಿತಿಯನ್ನು ರಚಿಸಿ ಈ ಕಾನೂನನ್ನು ಶಾಂತರೀತಿಯಿಂದ ಪ್ರತಿಭಟಿಸಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವದಾಗಿ ತಿಳಿದು ಬರುತ್ತದೆ.

ಕಾಂಗ್ರೆಸ್ ಅಧಿವೇಶನಕ್ಕೆ ಈಜಿಪ್ಶಿನ ವಾಫದ್ ಪಕ್ಷದ ನಾಯಕರು

ತ್ರಿಪುರಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಈಜಿಪ್ಶಿನ ವಾಫದ್ ಪಕ್ಷದ ಮಿತ್ರಗೋಷ್ಠಿಯ ಅಗಮಿಸಿತು. ಮಹಮದ್ ಬಸಿಯೋನಿಬೇರವರು ಗೋಷ್ಠಿಯ ನಾಯಕರು, ಮಹಮದ್ ಅಬುಲ್ ಘಾತೆ, ಅಹಮದ್ ಹಸ್ಸೂ ಮತ್ತು ಅಹಮದ್ ಕಾಸಿಂ (ಗೋಷ್ಠಿಯ ಕಾರ್ಯದರ್ಶಿ) ಇವರುಗಳು ಗೋಷ್ಠಿಯ ಇತರ ಸದಸ್ಯರು. ಶ್ರೀಮತಿ ಲೀಲಾವತಿ ಮುನಿಷಿ, ಶ್ರೀ ಎಸ್.ವಿ. ಪ್ರಿಲ್ಪಿ ಮುಂತಾದವರು ಬೊಂಬಾಯಿ ರೇವಿನಲ್ಲಿ ಹಡಗಿನ ಮೇಲೇರಿ ಅವರುಗಳಿಗೆ ಸ್ವಾಗತವಿತ್ತರು. ಹಡಗಿಳಿದ ಮೇಲೆ ವಾದ್ಯಸಮೇತ ಅವರುಗಳನ್ನು ಇದಕ್ಕಾಗಿ ಏರ್ಪಡಿಸಿದ ಚಪ್ಪರಕ್ಕೆ ಕರೆದೊಯ್ದರು. ಕಾಂಗ್ರೆಸ್ ಸ್ವಯಂಸೇವಕ ಸೇವಕಿಯರು "ಗಾರ್ಡ್ ಆಫ್ ಆನರ್" ಕೊಟ್ಟರು ಗಾಂಧಿಯವರು ವಾಫದ್ ಮಿತ್ರಗೋಷ್ಠಿಗೆ ತಮ್ಮ ಪರವಾಗಿ ಸ್ವಾಗತ ನೀಡಬೇಕೆಂದು, ಭಾರತದಲ್ಲಿರುವವರೆಗೆ ಅವರು ಸಂತೋಷದಿಂದ ಭಾರತಕ್ಕೂ ಈಜಿಪ್ತಿಗೂ ಅಚಲವಾದ ಬಾಂಧವ್ಯವನ್ನು ಬೆಳೆಸುವರೆಂದು ನಂಬಿರುವುದಾಗಿ ತಮ್ಮ ಅಶ್ವಾಸನವನ್ನು ತಿಳಿಸಬೇಕೆಂದು ಗೃಹ ಸಚಿವರಾದ ಶ್ರೀಕೆ ಎಂ. ಮುನಷಿಯವರಿಗೆ ತಿಂತಿಳಿಸಿದ್ದರು. ಶ್ರೀ ಮುನಷಿಯವರಿಗೆ ದೇಹದಲ್ಲಿ ಸ್ವಸ್ಥವಿಲ್ಲದ್ದರಿಂದ ಸ್ವಾಗತನೀಡಲು ಅವರು ಹೋಗಲಿಲ್ಲ. ಆದರೆ ಗೋಷ್ಠಿಯ ಸದಸ್ಯರಿಗೆಲ್ಲಾ ತಮ್ಮ ಗೃಹದಲ್ಲಿ ಉಪಹಾರಕೂಟವನ್ನೇರ್ಪಡಿಸಿದ್ದರು.

ಗಾಂಧಿಯವರ ಉಪವಾಸವು ಕೊನೆಗೊಂಡಿತು.

ರಾಜಕೋಟೆಯ ಠಾಕೂರ್ ಸಾಹೇಬರು ಅವರ ಪ್ರಜೆಗಳೊಡನೆ ಮಾಡಿಕೊಂಡ ಒಪ್ಪಂದವನ್ನು ಸಾಲಿಸುವಂತೆಮಾಡಲು ಗಾಂಧಿಯವರು ಕೈಕೊಂಡ ಉಪವಾಸವನ್ನು ನಿಲ್ಲಿಸಬೇಕೆಂದೂ, ಠಾಕೂರರು ತಮ್ಮಮಾತಿನಂತೆ ನಡೆಯುವಂತೆನೋಡಿಕೊಳ್ಳುವ ಭಾರವನ್ನು ತಾವು ವಹಿಸುವದಾಗಿಯೂ, ವೈಸರಾಯರಿಂದ ತಂಠಿ ಬಂದಮೇಲೆ ಗಾಂಧಿಯವರು ಕಳೆದ 7 ನೆಯ ತಾರೀಖಿನದಿನ ತಮ್ಮ ಉಪವಾಸವನ್ನು ನಿಲ್ಲಿಸಿದರು. ಉಪವಾಸದಿಂದ ಉಂಟಾದ ನಿಶ್ಯಕ್ತಿಯು ಸ್ವಲ್ಪ ಕಡಿಮೆಯಾದೊಡನೆ ವೈಸರಾಯರನ್ನು ಭೇಟಿಮಾಡಲು ನವದೆಹಲಿಗೆ ಹೊಡುವರು. ಗಾಂಧಿಯವರು ರಾಜಕೋಟೆಯ ಪ್ರಜಾಪಂಚತ್ತಿನವರು ಮುಂದೆ ಮಾಡಬೇಕಾಗಿರುವ ಕಾರ್ಯಗಳ ವಿಷಯವಾಗಿ ಪರಿಷತ್ತಿನ ಸದಸ್ಯರೊಡನೆ ಚರ್ಚೆನಡೆಸಿದ್ದಲ್ಲದೆ ಮುಂದೆ ವೈಸರಾಯರೊಡನೆ ಚರ್ಚಿಸಬೇಕಾಗಿರುವ ಅಂಶಗಳನ್ನು ಕುರಿತು ಚರ್ಚಿಸಿದರು.

ಸ್ವೀಕಾರ.

ಹಾಸನ ಡಿ॥ ಆಲೂರು ಟವನ್ಶಿಪ್‌ನಲ್ಲಿ ವಿಶೇಷ ವೈಭವದಿಂದ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಸಮಯದಲ್ಲಿ ಮಿ॥ ರಾ॥ ಎ. ನಂಜಪ್ಪನವರು ರೈಸ್ ಮಿಲ್, ಆಲೂರು ಇವರ ಸೂಚನೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಗುರುಭಕ್ತಶಿರೋರತ್ನ ಡಾ॥ ಎಂ. ಸಿ. ನಂಜಪ್ಪನವರ ದ್ವಾರಾ ತಲ್ಪಿರುತ್ತವೆ.

ಕೃಷ್ಣರಾಜನಗರ ತಾ॥ ಕಾರಿಗೆಳ್ಳಿ ಕೊಪ್ಪಲು ನಿವಾಸಿಗಳಾದ ಮಿ॥ ರಾ॥ ಬಿ. ವೀರಣ್ಣನವರು ಜನರಲ್ ಮರ್ಚಂಟ್ ಇವರ ಪುತ್ರಿ ಚಿ॥ ಸೌ॥ ಬಸವರಾಜಮ್ಮನನ್ನು ಕೃಷ್ಣರಾಜಪೇಟೆ ತಾ॥ ಸರ್ವಮಾನ್ಯ ಬೂಕಹಳ್ಳಿ ಗ್ರಾಮದ ಮಿ॥ ರಾ॥ ಪಟೇಲ ಮಾದಪ್ಪನವರ ಪುತ್ರ ಚಿ॥ ಬಸಪ್ಪನಿಗೆ ಕೊಟ್ಟು ಸ್ವಗೃಹದಲ್ಲಿ ಕನ್ಯಾದಾನ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ನವೂನವರು ಸಮರ್ಪಿಸಿದ 2 ರೂ.ಗಳು ಮಿ॥ರಾ॥ ಬಿ. ವೀರಣ್ಣನವರ ದ್ವಾರಾ ತಲ್ಪಿರುತ್ತವೆ.

ತುಮಕೂರು ಡಿ॥ ತಿಪಟೂರು ಟವ್ನ ನಿವಾಸಿಗಳಾದ ಗುರುಭಕ್ತರು ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ. ಯು ವೇ॥ ಎ. ಎಂ. ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಕೃಷ್ಣರಾಜಪೇಟೆ ತಾ॥ ಸೋಮನಹಳ್ಳಿ ವೇ॥ ಶಿವಲಿಂಗಾರಾಧ್ಯರು ತಮ್ಮ ಮಕ್ಕಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂ. ತೆಗೆಯಿಸಿ ಕಳುಹಿಸಿರುತ್ತಾರೆ.

ಶಿವಮೊಗ್ಗಾ ಹೈಸ್ಕೂಲ್ ಕನ್ನಡಪಂಡಿತರಾದ ವೇ॥ ಎಸ್. ಎಂ. ಬಸವಯ್ಯನವರಿಗೆ ಪುತ್ರರತ್ನವು ಜನಿಸಿ, ಮಗುವಿಗೆ 'ವಿಶ್ವಾರಾಧ್ಯ' ನೆಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂ. ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹನೀಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಸೂಚನೆ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಸಂಬಂಧವಾದ ಲೇಖನಗಳು ವಿಶೇಷವಾಗಿ ಬಂದಿರುವುದರಿಂದ ಎಲ್ಲವುಗಳನ್ನು ಇದೇ ವಾರ ಪ್ರಕಟಿಸಲಾಗಿಲ್ಲ. ಮಿಕ್ಕ ಲೇಖನಗಳನ್ನು ಮುಂದಿನ ವಾರ ಪ್ರಕಟಿಸುವದಾಗುವುದು. ಸಂ.—

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಪಿತ್ಯಾತರಾಪ ಆಗಸ್ತ್ಯ, ವಧೀಚಿ, ವ್ಯಾಸ, ಸನಂದ, ಮೊರ್ವಾನ ವಂಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪವೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧೦—೬
ಸಮ್ಮ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಬದಿಂದ ಆವತರಿಸಿರುವ ಫೋಟೋ ...	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಬದಿಂದ ಆವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನಿ ಶ್ಯಾರ್ಥಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಇಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಭೂಮ್ಯಾಸೀನದ ಫೋಟೋ ...	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮಜ್ಜಡ್ಡಯನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಸಿವಾಚಾರ್ಯರ ಫೋಟೋ ...	೦—೦—೯
ಶ್ರೀಮದ್ರಂಭಾಪುರೀ ಸೀತಾಧೀಶ್ವರ ಜಗದ್ಗುರು ಶಿವಾನಂದಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮಜ್ಜಡ್ಡಯನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ...	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ . .	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಷ್ಟರಿದ ಸುಂದರ ಫೋಟೋ ೧ಕ್ಕೆ ...	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಸುಂದರ ಫೋಟೋ	೦—೦—೯
ಶ್ರೀರುದ್ರಮುನಿಶಿವಾಚಾರ್ಯರತಕ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ಸೆರವೇರಿದ ರಂಭಾಪುರೀ ಜಗದ್ಗುರುಗಳ ಆಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಐದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂತುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೂರ್ತಿಯಾಗಿ ಉಪಯೋಗಿಸುತ್ತಾರೆ. ಮಾದರಿ ೫ೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

(Registered Trade Mark)

ನಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[47] ಫೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚವಿಂಶತಿ ಪ್ರಶ್ನೋತ್ತರಿಕೆ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	....	೨ ಆಣೆ
ಬಸವಾದಿಸಿಜಿತತ್ವಸಮರ್ಪಣ (೪ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಪ್ರಭಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	....	೨ ಆಣೆ
ವೀರಶೈವಮತವಿಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು)	....	....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಾಧ್ವಾಂತದಿವಾಕರ (೩ನೆಯ ೩ವೃತ್ತಿ)	....	....	೮ ಆಣೆ
ಸದ್ಯೋಧರತ್ನಾವಳಿ	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲನಾರಿ ಧಾಷಣಮು (ತೆಲುಗು)			೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	....	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ...			೧೨ ಆಣೆ

ಶಿಖಾಸೂತ್ರಸಿದ್ಧಾಂತವರ್ಪಣ	....	....	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	....	....	೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	....	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೭೦ಮಹತ್ವದ ಫೋಟೋಗಳಿರುವುವು)	....	....	೧। ರೂ
ಸಿದ್ಧಾಂತತಿಖೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	....	೧ ರೂ.
ಸಿದ್ಧಾಂತತಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತನವಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	....	೮ ರೂ.
A brief life-sketch of Pandit Sri Kashinatha Shastriji (*English*)			**4 As.**
Shakti-Vishistadvaita *or* The Philosophical Aspect of Viraasaivism (*English*)			**8 As.**
Speeches by Pandit Shri Kashinatha Shastriji *English*)			**12 As.**
ವೀರಶೈವರತ್ನ (ಮರಾಠೀ)		...	**೧ ರೂ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)		...	**೧ ರೂ.**
ವೀರಶೈವೋಪಕಾರ (ಸಂಸ್ಕೃತ) ...		...	**೧ ರೂ.**
ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ ..		...	**೬ ಆಣೆ**
ನಂದಿಕೇಶ್ವರಕಾರಿಕಾ (ಸಂಸ್ಕೃತ) ...		...	**೨ ಆಣೆ**
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ...		...	**೨ ಆಣೆ**
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...		...	**೩ ರೂ**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು || REGISTERED No. M. 2269

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುತಾಂತಶಾಸ್ತ್ರಿಗಳು.

ಸ್ಥಳವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೪ ಆಣೆ. ವಿ. ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಮಾರ್ಚಿ ೧೯೩೯ [ಸಂಚಿಕೆ ೪೬

ಹುಬ್ಬಳ್ಳಿಯಲ್ಲಿ ನಡೆದ ಮಹಾಸಭೆ.

ಈ ಸಭೆಯ ವಿಶೇಷವೇನೆಂದರೆ—ಇದರ ಚಾಲಕರೆಲ್ಲಾ ಬಹಳ ಮಟ್ಟಿಗೆ ನೀರಕ್ಷೈವಜಹಾಂಗದಲ್ಲಿ ಜೆನ್ಮಾಗಿ ಪರಿಚಯಸ್ಥರಲ್ಲದವರೆಂದು ಕಂಡುಬರುತ್ತದೆ ಹುಬ್ಬಳ್ಳಿಯಲ್ಲಿರುವ ಮೆ॥ ಸರ್ ಕಂಬಳಿ ವರ್ಗೆರೆ ಪ್ರಮುಖರು ಈ ಸಭೆಯಲ್ಲಿ ಯಾವ ಭಾಗವನ್ನೂ ವಹಿಸದೆ ತಟಸ್ಥರಾಗಿದ್ದುದು ಈ ಸಭೆಗೆ ಒಂದು ಕಳಂಕನೆಂದೇ ಹೇಳಬಹುದು ಹುಬ್ಬಳ್ಳಿಯ ಸ್ವಾಗತಸಂಘದ ಅಧ್ಯಕ್ಷರೆಂದು ಹೊತಪಡಿಸಿರುವ ಚಿಕ್ಕವೀರಯ್ಯನವರೆಂಬುವರು ಈ ಮಹಾಸಭೆಯಿಂದ ಪ್ರಸಿದ್ಧರಾದರೆಂಬುದು ವಿಶೇಷವೇ ಸರಿ! ವೀರಶೈವಮಹಾಸಭಾ ಚಿರಸ್ಥಾಯಿ ಫಂಡಿನ ಅಧ್ಯಕ್ಷರಾದ ಸರ್ ಪುಟ್ಟಣ್ಣಶೆಟ್ಟರು ಮೃತಿ ಹೊಂದಿದ್ದರಿಂದ ಆ ಸ್ಥಾನಕ್ಕೆ ಬಂದಿರುವ ಡಾವಣಗೆರೆ ಟಿ ಯಂ ಪಡಕ್ಷರಪ್ಪಯ್ಯನವರಿಗೆ ಈ ಚಿಕ್ಕವೀರಯ್ಯನವರು ಅಲಿಯರಂತೆ! ವೀರಶೈವಮಹಾಸಭಾ ಚಿರಸ್ಥಾಯಿ ಫಂಡಿನಿಂದ ಈ ಸಭೆಗೆ ದ್ರವ್ಯಸಹಾಯ ದೊರೆತಿರುವುದು ಎಲ್ಲರಿಗೂ ತಿಳಿದೇ ಇದೆ ಚಿರಸ್ಥಾಯಿ ಫಂಡಿನ ರೂಲ್ಸುಪ್ರಕಾರ ಸ್ವಾಗತಸಂಘದ ಅಧ್ಯಕ್ಷರು ಈ ಸಭೆಯ ವಿಚಾರ ಬಾಬು ಪೈರೆ ಲೆಖ್ಖ ಪತ್ರಗಳನ್ನು ಚಿರಸ್ಥಾಯಿ ಫಂಡ್ ಕಮಿಟಿಗೆ ಸಮರ್ಪಿಸಿ ಕೊಡಬೇಕಾಗುವುದು ಈ ಸಂಬಂಧವಾದ ಹಣಕಾಸು ಲೆಖ್ಖ ಪತ್ರಗಳ ತಪಸಿಯನ್ನು ಪಡಕ್ಷರಪ್ಪಯ್ಯನವರು ನಿರ್ದಾಕ್ಷಿಣ್ಯವಾಗಿ ನಡೆಯಿಸಿ ತಮ್ಮ ಸಂಬಂಧಿಕರೆಂಬ ಅಭಿಮಾನವನ್ನು ಪಹಿಸದೆ ಪ್ರಸಿದ್ಧಿಪಡಿಸಿ ಸ್ವಾಗತಸಂಘದಿಂದ ಚಿರಸ್ಥಾಯಿ ಫಂಡಿಗೆ ಫಂಡಿನ ರೂಲ್ಸ್‌ಪ್ರಕಾರ ತಿರುಗಿ ಬರಬೇಕಾದ ಹಣವನ್ನು ವಸೂಲ ಮಾಡಿದರೆ, ಆಗ್ಗೆ, ಉಳಿಯರೂ ಬಹಳ ಪ್ರಸಿದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ ಫಂಡಿನ ನೂತನ ಚೇರ್‌ಮೆನರವರು ಈ ಕಾರ್ಯವನ್ನು ಮಾಡಿದರೆ ಮುಂದಿನ ಮಹಾಸಭೆಗಳಿಗೆ ಮಾರ್ಗದರ್ಶಕರಾಗುತ್ತಾರೆಂದು ಸರ್ವರೂ ನಂಬಿದ್ದಾರೆ ಈಗಾಗಲೇ ಹುಬ್ಬಳ್ಳಿಯ ಸ್ವಾಗತಸಂಘದ ಅಧ್ಯಕ್ಷರು ತಮ್ಮ ಸಂಬಂಧಿಕರೆಂಬ ಅಭಿಮಾನದಮೇಲೆ ದಾವಣಗೆರೆಯವರಿಗೂ ಮತ್ತು ಬೆಂಗಳೂರಿಂದ ಬಂದಿದ್ದ ಪ್ರತಿನಿಧಿ ಪ್ರೇಕ್ಷಕರಿಗೂ ಸೈಪಲ್ಯವನ್ನೆಸಗಿ ಪೂರಾ ಇತರರೆಡೆಗಳಿಂದ ಬಂದಿದ್ದ ಪ್ರತಿನಿಧಿ ಪ್ರೇಕ್ಷಕರನ್ನು ಅಲಕ್ಷ್ಯದಿಂದ ಕಂಡರೆಂಬ ದೋಷಾರೋಪಣೆಯು ಜನಜನಿತವಾಗಿದೆ ಇದರ ನಿಜತತ್ವವು ಹೇಗಾದರೂ ಇರಲಿ. ಈ ತರಹದ ವೈಷಮ್ಯಗಳನ್ನು ಚಿರಸ್ಥಾಯಿ ಫಂಡ್ ಕಮಿಟಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ನೃವತ್ಪಾಪಕಸಂಘದವರು ಇಟ್ಟುಕೊಳ್ಳದೆ ಕ್ರಮವಾದ ರಿಪೋರ್ಟನ್ನು ಸ್ವಾಗತಸಂಘದವರಿಂದ ತರಿಸಿ ಅದನ್ನು ತಪಸಿಮಾಡಿ ಆ ಸಂಬಂಧವಾದ ಒಂದು ವರದಿಯನ್ನು ಬಹಿರಂಗಪಡಿಸಬೇಕೆಂದು ಕೋರುವ,

ಓರ್ವ ಮತಾಭಿಮಾನಿ

ಗುಮ್ಮಗೋಳಜಾತ್ರೆಯ ಬಗ್ಗೆ ಸೂಚನೆ

ಧಾರವಾಡ ಜಿ॥ ಗದಗ ತಾ॥ ಮುಂಡರಗಿ ಪೇರಾಜ್ಯೆತಿ ಗುಮ್ಮಗೋಳಗ್ರಾಮದಲ್ಲಿ ಶ್ರೀ ಗೋಣಿ ಬಸವಣ್ಣ ದೇವರ ರಥೋತ್ಸವವೆ ಪ್ರತಿವರ್ಷದಂತೆ ಚೈತ್ರ ಶುದ್ಧ ದಶಮಿದಿವಸ ಆಗುವದೆಂಬ ಸಂಗತಿಯು ಸರ್ವರಿಗೂ ಗೊತ್ತಿರುವದಸ್ಟೆ.' ದೇವರ ರಥವು ತಾರೀಖು ೭-೧೦-೪೯ ನೇ ದಿವಸ ಅಕಸ್ಮಾತ್ ಬೆಂಕಿಹತ್ತಿ ಸುಟ್ಟುಹೋದದಿಂದ ಈ ವರ್ಷ ಶ್ರೀ ದೇವರ ಜಾತ್ರೆಯೇ ಆಗುವದಿಲ್ಲೆಂಬ ವಾರ್ತೆಯು ಕೆಲವು ಕಡೆಯಲ್ಲಿ ಹಬ್ಬುತ್ತಿರುವುದೆಂದು ತಿಳಿಯಿಸಲು ಹಾಗೆ ಯಾರೂ ತಿಳಿಯ ಬಾರದೆ. ಈಸಾರಿಯಾದರೂ ಪ್ರತಿವರ್ಷದಂತೆ ಚೈತ್ರ ಶುದ್ಧ ದಶಮಿ ತಾರೀಖು ೩೧-೩-೪೯ನೇ ಇಸ್ವಿ ಶುಕ್ರವಾರದಿವಸ ರಥೋತ್ಸವವು ನೆರವೇರುವದರಿಂದ ಸರ್ವರೂ ಜಾತ್ರೆಗೆ ಬಂದು ದೇವರ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ವೀರಪಗೌಡ, ಪಾಟೀಲ್

ನಾಟಕ ಪ್ರದರ್ಶನ, ಮುಂಡರಗಿ

ಬಳ್ಳಾರಿ ಜಿ॥ ಹಡಗಲಿ ತಾ॥ ಹೊಳಗುಂದಿಗ್ರಾಮದ ಶ್ರೀ ಪಂಚಾಚಾರ್ಯ ಸೇವಾ ಸಂಗೀತ ನಾಟಕಮಂಡಳಿಯವರು ಮು॥ ರಾ॥ ಕಾನಭೋಗ ಕರಿವೀರಪ್ಪನವರ ನೇತೃತ್ವದಲ್ಲಿ ಈಗ ೭ ಆ ವರ್ಷಗಳಿಂದ ಧಾರ್ಮಿಕ ಸುಧಾರಣೆಗೆ ಮುಖ್ಯ ಸಾಧನಗಳಾದ ಭಕ್ತಿ ನೀತಿ ಪಾತಿವ್ರತ್ಯ ಮುಂತಾದ ಉದಾತ್ತ ತತ್ವಗಳಿಂದೊಡಗೂಡಿದ ಅಖ್ಯಾನಗಳನ್ನು ಪ್ರಯೋಗಿಸಿ ಕನ್ನಡ ಬಾಂಧವರ ಮೆಚ್ಚುಗೆಗೆ ಪಾತ್ರರಾಗಿ ಅನೇಕ ಪದಕಗಳನ್ನು ಪ್ರಶಸ್ತಿ ಪತ್ರಗಳನ್ನು ಪಡೆದಿರುವದು ಸರಿಯಷ್ಟೆ ಸದರಿ ನಾಟಕ ಕಂಪನಿಯವರು ಕೊಟ್ಟೂರು ಕಡೆ ಪುನಾಪವನ್ನು ಮುಗಿಸಿಕೊಂಡು ಗದಗತಾಲೂಕ ಮುಂಡರಗಿ ಗ್ರಾಮದಲ್ಲಿ (ಶೋಹಂ) ಆರ್ಹಾತ್ 1939 ನೇ ಇಸ್ವಿ, ಬ್ರಹ್ಮನ ಗರ್ವಭಂಗ, ಹೇಮರಡ್ಡಿ ಮಲ್ಲಮ್ಮ, ಲಿಖಿತಲೀಲಾ ಮುಂತಾದ ಅಖ್ಯಾನಗಳನ್ನು ಪ್ರಯೋಗಿಸಿ ಇಲ್ಲಿಯ ಪ್ರೇಕ್ಷಕ ವೃಂದವನ್ನು ಆನಂದಸಾಗರದಲ್ಲಿ ಮುಳಿಗಿಸಿದರು ತಾ॥ ೨೬ ೩-೨೯ನೇ ದಿವಸ ಹೇಮರಡ್ಡಿ ಮಲ್ಲಾಂಬೆಯ ಅಖ್ಯಾನವನ್ನು ನೋಡಲಿಕ್ಕೆ ಶ್ರೇಕ್ಷಕರು ವಿಶೇಷವಾಗಿ ಬಂದಿದ್ದರು. ಮೆ॥ ಮಾಲಕರಿಸಾಹೇಬರು, ಮೆ॥ ಘಾಜದಾರಸಾಹೇಬರು, ಮೆ॥ ಡಾಕ್ಟರ್ ಸಾಹೇಬರು, ಕೊ॥ ಆ॥ ಸೊ॥ ವೀರಣ್ಣ ಶ್ರೀಮಂತ ಕೊಪ್ಪಳ ವೀರಭದ್ರ ಪ್ಪನವರು, ಶ್ರೀ॥ ಸಂಗಯ್ಯನವರು, ಹೊಸಹಳ್ಳಿ ಅಂದಾನಯ್ಯನವರು, ರಾಚಯ್ಯನವರು ಹೊರಗಿನವರು, ಶ್ರೀ ಶಂಕರಪ್ಪನವರು ಗುಡ್ಡದ ದಾಸಾಸಾಹೇಬ ವಡ್ಡಟ್ಟಿ ಇಲ್ಲೂರು ವಾಸಪ್ಪನವರು ಮುಂತಾದ ವರು ಅಗಮಿಸಿದ್ದರಿಂದಂತು ರಂಗಸ್ಥಳಕ್ಕೆ ಅಪೂರ್ವ ಶೋಭೆಯುಂಟಾಗಿತ್ತು ನಪಲಿಮರದ ಕೊಟ್ರಪ್ಪಯ್ಯನವರು ಈ ನಾಟಕದಲ್ಲಿ ಪಾತ್ರವಹಿಸಿರುವ ಕೇವಲ ೧೦ ೧೨ ವಯಸ್ಸಿನ ಚಿಕ್ಕ ಬಾಲಕರ ಆಸ್ಪಲಿತ ಗಾನೆಯನ್ನೂ ಗಾಯನ ಕಲೆಯನ್ನೂ ಕೊಂಡಾಡಿದ್ದಲ್ಲದೆ ಈಗಿನ ಪಾತಾವರಣದಲ್ಲಿ ಸನಾತನ ಧರ್ಮದ ನಿಜಸ್ವರೂಪವನ್ನು ಪ್ರತಿಪಾದಿಸುವ ಇಂಥ ಅಖ್ಯಾನಗಳನ್ನು ರಚಿಸಿದ್ದಕ್ಕಾಗಿ ವೇ॥ ಪಂ॥ ಕವಿರತ್ನ ಶ್ರೀಕಂಠಶಾಸ್ತ್ರಿಗಳು ನಲವತಿ ಇವರಿಗೆ ಕನ್ನಡಿರು ಕೈತಟ್ಟಿ ರಾಗಿರಬೇಕಾಗಿದೆ ಎಂದು ಶ್ರೇಕ್ಷಕರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು ಅನಂತರ ವೇ॥ ರಾಚಯ್ಯನವರು ಹೊರಗಿನ ಮರ ಇವರು ಕಂಪನಿಯ ಚಾಲಕರಿಗೆ ಬಹು ಮಾನವಸ್ಪತ್ತರು

ಪ್ರತ್ಯಕ್ಷದರ್ಶಿ.

ಗುರುಪ್ರಭಾವ

ಬಳ್ಳಾರಿಜಿಲ್ಲಾ ಹೂವಿನಹಡಗಲಿತಾಲೂಕು ಹಗರಿ ಬಮ್ಮೇನ ಹಳ್ಳಿಗ್ರಾಮದ ರೆಡ್ಡಿ ಬಸವನಗೌಡರು ಮುಂತಾದ (೧೧) ಜನರ ಮೇಲೆ ಆರೋಪಪತ್ರೆ ಹೊರಿಸಲ್ಪಟ್ಟು ಬಳ್ಳಾರಿ ಸೇಸನ್ಸ್ ಕೋರ್ಟಿನಲ್ಲಿ ಗುರಿಮಾಲ್ಪಟ್ಟರು. ಈ ರೀತಿ ಬಂದ ಆರೋಪವನ್ನು ನಿವಾರಿಸಿಂದು ಶ್ರೀ ಗುರು ಸಾರ್ವಭೌಮರೂ ಆಳಂಟಿನ ಘಟನಾ ಮಹಿಮಾಶೀಲರೂ ಶರಣಾಗತ ರಕ್ಷಕರೂ ಭಕ್ತೋದ್ಧಾರಕರೂ ಆದ ಜಗದ್ಗುರು ಸಿದ್ಧಲಿಂಗತಿವಾಚಾರ್ಯಮಹಾಸ್ವಾಮಿಗಳವರನ್ನು ಧ್ಯಾನಿಸಿ ಸಂಕಲ್ಪಮಾಡಿಕೊಂಡಿದ್ದರು ಧರ್ಮಮೂರ್ತಿಗಳಾದ ಸೆಸನ್ಸ್ ಜಡ್ಜರು ಸರ್ವರನ್ನೂ ನಿರ್ದೋಷಿಗಳೆಂದು ವಿಮುಗಡೆಮಾಡಿದರು. ಈ ಕೇಸಿನಲ್ಲಿ ವಕೀಲ ನಾರಾಯಣ ಅಯ್ಯಂಗಾರ್ ಎಂ ಎ ಇವರ ಅಪರಿಶ್ರಾಂತಪ್ರಯತ್ನವೂ ಒನ್ನಳ್ಳ ಪಾಟೀಲ ಬಸವನಗೌಡರ ಕರ್ತೃತ್ವ ಶಕ್ತಿಯೂ ಪ್ರಕಂಸನೀಯವಾಗಿವೆ ಈ ಕೇಸಿನ ಜಯದ ಸುದ್ದೀ ಹಕ್ಕಾಗಿ ಪ್ರಧಾಪೋಷಣಕ್ಕೋಸ್ಕರ ಶ್ರೀ ಜ್ಞಾನಳ್ಳ ಪಾಟೀಲ ಬಸವನಗೌಡರಿಂದ ೧ ರೂ. ತೆಗೆಯಿಸಲ್ಪಟ್ಟಿತು

ಕಾಶಭೋಗ ಸಿದ್ಧಲಿಂಗಪ್ಪ,
ಹೊಳಗುಂದಿ.

ಶ್ರೀ ಜಗದ್ಗುರು ವಿದ್ಯಾರಾಧ್ಯ ಸಂಸ್ಕೃತ ಪಾಠಶಾಲೆಯ ಉದ್ಘಾಟನ ಸಮಾರಂಭ

ಈ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಂ. ಗುರುದೇವ ಶಿವಾಚಾರ್ಯಸ್ವಾಮಿಗಳವರು ಚಿಕ್ಕಮಣ್ಣೂರು. ಹಿರೇಮಠ ಇವರ ಆಜ್ಞಾನುಸಾರವಾಗಿ ಅಬಿಲ ಮಹಾಜನಗಳಲ್ಲಿ ಸವಿನಯ ಸೂಚನೆ:— ಇದೇ ಪ್ರಮಾಧಿನಾಮ ಸಂವತ್ಸರ ಚೈತ್ರ ಶು॥ ೧ ಬುಧವಾರ ೧೦ ಘಂಟೆಗೆ ಶ್ರೀ ಜಗದ್ಗುರು ವಿಶ್ವಾರಾಧ್ಯಮೂರ್ತಿಯ ರುದ್ರಾಭಿಷೇಕನಂತರ ಹುಬ್ಬಳ್ಳಿ ಹನ್ನೆರಡು ಮಠದ ಚರಪಟ್ಟಾಧ್ಯಕ್ಷ ತಪೋನಿಧಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಪವಿತ್ರ ಹಸ್ತದಿಂದ ಸದರಿ ಪಾಠಶಾಲೆಯ ಉದ್ಘಾಟನ ಸಮಾರಂಭವು ನೆರವೇರ್ಪಡುವದು ಸೂಡಿ ಜಗ್ಗಿಮಠಾಧ್ಯಕ್ಷ ಶ್ರೀ ಪೂಜ್ಯಶ್ರೀ ಉಮಾಪತಿ ಶಿವಾಚಾರ್ಯ ಸ್ವಾಮಿಗಳವರ ಶುಭಾಗಮನವು ಮಧ್ಯಾಹ್ನ ೪ ಘಂಟೆಗೆ ಶ್ರೀಯುತ ಚನ್ನಬಸವಸ್ವಾಮಿ ಹಾಯ್ಕೋಟಿ (ಹಿರೇಹರಕುಣಿ) ಹುಬ್ಬಳ್ಳಿ ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಯು ಜರ್ಗುಗುವದು, ಶ್ರೀಯುತ ಚನ್ನಬಸವಸ್ವಾಮಿ ಹಿರೇಮಠ, ಕರ್ನಾಟಕಬಂಧು ಸಂಪಾದಕ ಗದಗ ಇವರ ಮನೋಹರವಾದ ಉಪನ್ಯಾಸವು, ಪ್ರಾರ್ಥನೆ ಪಟುಗಳಾದ ನೇ ಶ್ರೀ ಸಿದ್ಧಲಿಂಗದೇವರು ಹಿರೇಹರಕುಣಿ ಹಿರೇಮಠ ಇವರ ಪ್ರಾರ್ಥನೆವು ಜರಗುವುದು ಇನ್ನೂ ಅನೇಕರ ವ್ಯಾಖ್ಯಾನಗಳು ನಡೆಯುತ್ತವೆ. ಈ ಶುಭಕಾರ್ಯಕ್ಕೆ ಸರ್ವರೂ ತಮ್ಮ ತಮ್ಮ ಮಿತ್ರಸಮೇತರಾಗಿ ಒಂದು ಪೂಜ್ಯರ ದರ್ಶನಾಶೀರ್ವಾದಗಳನ್ನು ಪಡೆದು ಪುಣ್ಯಫಲ ಭಾಗಿಗಳಾಗುವಿರೆಂದು ಆಶಿಸುವ,

ಬೆಳವಣಕೆಯ ಸಮಸ್ತ ಭೈವದವರು.

ಸ್ವೀಕಾರ.

ಬಳ್ಳಾರಿ ಜಿ॥ ಹಡಗಲಿ ತಾ॥ ಹೊಳಗುಂದಿಗ್ರಾಮದ ಶ್ರೀ ಪಂಚಾಚಾರ್ಯ ಸೇವಾಸಂಗೀತ ನಾಟಕಮಂಡಳಿಯವರು ಗದಗ ತಾ॥ ಮುಂಡರಗಿಯಲ್ಲಿ ಹೇಮರಡ್ಡಿ ಮಲ್ಲಮ್ಮನ ನಾಟಕವನ್ನು ಅಭಿನಯಿಸಿ ಸರ್ವರನ್ನೂ ಸಂತೋಷಪಡಿಸಿದ್ದಕ್ಕಾಗಿ ವೇ॥ ಹೊರಗಿನಮಠದ ರಾಚಯ್ಯನವರು ಪ್ರಧಾನೋಷಣಕ್ಕೋಸ್ಕರ ತೆಗೆಯಿಸಿನ] ರೂ. ಯು ಮ॥ ರಾ॥ ಬನ್ನಿಕಲ್ಲು ಪಾಟೀಲ ಬಸವನಗೌಡರ ದ್ವಾರಾ ತಲ್ಪರುತ್ತದೆ

ಬಳ್ಳಾರಿ ಜಿ॥ ಹಡಗಲಿ ತಾ॥ ಹೆಗರಿ ಬಮ್ಮನಹಳ್ಳಿಗ್ರಾಮದ ಮ॥ ರಾ॥ ರೆಡ್ಡಿ ಬಸವನಗೌಡರು ಮೊದಲಾದ ವರಮೇಲೆ ಬಂದ ಖೂನಿ ಕೇಸಿನ ಆರೋಪವು ನಿವಾರಣೆಯಾದ ಸಂತೋಷಕ್ಕಾಗಿ ಮ॥ ರಾ॥ ಬನ್ನಿಕಲ್ಲು ಪಾಟೀಲ ಬಸವನಗೌಡರು ಪ್ರಧಾನೋಷಣಕ್ಕೋಸ್ಕರ ತೆಗೆಯಿಸಿದ] ರೂ. ಯು ಮ॥ ರಾ॥ ಹೊಳಗುಂದಿ ಶಾನಭೋಗರ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪರುತ್ತದೆ.

ಈ ಮೇಲ್ಕಂಡ ಮಹಾಕಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದುಹಾರೈಸುತ್ತೇವೆ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಹೋಟಗೀ ವೀರಶೈವ ಶುಭಚಿಂತಕ ಸಂಘದಿಂದಲೂ, ಧೋತ್ರೀ ವೀರಶೈವ ಧರ್ಮಸುಧಾರಣಾಸಂಘದಿಂದಲೂ, ಲಿಂಬೀಚಿಂಚೋಳಿ, ಶ್ರೀ ರೇವಣಸಿದ್ಧೇಶ್ವರ ವಾಚನಾಲಯದಿಂದಲೂ, ರಾಮಪುರ, ಶ್ರೀಜಗದ್ಗುರು ಪಂಚಾಚಾರ್ಯ ಭಜನಾಸಂಘದಿಂದಲೂ, ದಿಂಡೂರ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದಿಂದಲೂ, ತಕ್ಕಳಗಾಂವವಾಡಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದಿಂದಲೂ, ಚಿಕ್ಕಳಗಾಂವ ಶ್ರೀ ವೀರಶೈವ ಸೇವಾಸಂಘದಿಂದಲೂ, ದರ್ಗನಹಳ್ಳಿ ಶ್ರೀ ಜಗದ್ಗುರು ಸಿದ್ಧಲಿಂಗಸೇವಾಸಂಘದಿಂದಲೂ, ನೈಜಾಮಸ್ಟೇಟ ಸರಸಂಬ ಶ್ರೀ ವೀರಶೈವ ಧರ್ಮಪ್ರಸಾರಕಸಂಘದಿಂದಲೂ, ಪಾನಾಪುರ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದಿಂದಲೂ, ಮೋಘಾ ಬುದ್ರುಕ ಪಂಡಿತ ಶ್ರೀ ಕಾಶೀನಾಥವಾಚನಾಲಯದಿಂದಲೂ, ಜಕಿಗಂರ ಜೆಂವರಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದಿಂದಲೂ ಸೊಲ್ಲಾಪುರ ಶ್ರೀ ಜಗದ್ಗುರು ರೇಣುಕ ಜಾವಿ ಸಂಘದಿಂದಲೂ, ಶ್ರೀ ವೀನ ಕಡಾಶಿವಾಚಾರ್ಯ ಹುಬ್ಬಳ್ಳಿ ಮಠದ ಪದ್ಮಶ್ರೀ ವಿದ್ವಾಂಸರಿಂದಲೂ, ಇದೇ ಸೊಲ್ಲಾಪುರ ಪದಾಚಾರ ಸಮಾಜದ ಬಂಧುಗಳಿಂದಲೂ, ಬಾರ್ಶಿ ಗುರುವರ್ಯ ಶೈಕ್ಷನವರಿಂದಲೂ, ಪಂಡರಪುರ ವೀರಶೈವ ತರುಣ ಸಂಘದವರಿಂದಲೂ, ಮಂಗಳವೇಡೆ ಶ್ರೀ ವೀರಶೈವ ತರುಣಸಂಘದಿಂದಲೂ, ಶ್ರೀ ಜಗದಾಚಾರ್ಯರ ಜಯಂತ್ಯುತ್ಸವಗಳು ಒಳ್ಳೆ ವೈಭವದಿಂದಲೂ ಉಂಟಾಗಿದ್ದಿಂದಲೂ ಭಕ್ತಿಭಾವದಿಂದಲೂ ನೆರವೇರಿಸಲ್ಪಟ್ಟವು ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಈ ಸಂಘಗಳಿಗೆ ಚಿರಾಯುಷ್ಯವನ್ನಿತ್ತು ತದ್ವಾರಾ ಸೇವೆಯನ್ನ ಕೈಕೊಳ್ಳಬೇಕೆಂದು ಅನನ್ಯಭಾವನೆಯಿಂದ ವ್ಯಾಪಿಸುವೆನು ಗುರುಭಕ್ತ

ಹಾವೇರಿ

ಆಗಡಿತಲಿಲ್ಲಜಾಲದಿಂದ ಯಾವ ಮಹಶ್ರೇಯನು ದೇವ ದಾನವ ಮನುಷ್ಯಾದಿಗಳನ್ನುದ್ಧರಿಸಿದನೋ ಯಾವನು ದುಷ್ಟನಿಗ್ರಹ, ಶಿಷ್ಟಪರಿಪಾಲನಶೀಲನೋ ಯಾವನ ಸಮಸ್ತ ಪ್ರಪಂಚವನ್ನು ಶೈವಮಯವನ್ನಾಗಿ ಮಾಡಿದನೋ ಅಂತಹ ಪರಮಪಾವನಮೂರ್ತಿಯಾದ ಭಗವತ್ಪಾದರೇ ಜಾತಿಗುರುಸಾರ್ವಭೌಮನ ಜಯಂತೀ ಮಹೋತ್ಸವವು ಈ ವರ್ಷ ಮುಘಾನಕ್ಷತ್ರದಿಂದೊಡಗೂಡಿ ಫಾಲ್ಗುನ ಶುದ್ಧ ಪೂರ್ಣಿಮಾ (ತಾ|| ೨೦-೩-೧೯೩೯) ಈ ಶುಭದಿವಸ ಪ್ರಾಪ್ತವಾದುದರಿಂದ ಇಲ್ಲಿಯ ಮಹಾಜನಗಳು ದ್ವಿತೀಯ ಪ್ರಕಾರ ಜಯಂತಿಮಹೋತ್ಸವವನ್ನು ಬಣ್ಣದ ಮಠಾಧ್ಯಕ್ಷರಾದ ಪ|| ಬ್ರ|| ಶ್ರೀ ಪೂಜ್ಯವಾದ ಚನ್ನವೃಷಭಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ವಿಶೇಷ ವೈಭವದಿಂದ ನೆರವೇರಿಸಿದರು ಸದರಿ ಬಣ್ಣದ ಮಠದಲ್ಲಿ ಜಗದಾಚಾರ್ಯರ ನಾಮದಿಂದ ಸ್ಥಾಪಿಸಿದ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರು ವೇ||ಶಂ|| ವಿರೂಪಾಕ್ಷಶಾಸ್ತ್ರಿಗಳವರು ತಮ್ಮ ವಿದ್ಯಾರ್ಥಿಗಳೊಡನೆ ಆ ದಿವಸ ಪ್ರಾತಃಕಾಲ ೬ ಘಂಟೆಯಿಂದ ೧೧ ಘಂಟೆಯವರೆಗೆ ಶ್ರೀಜಗದ್ಗುರು ರೇಣುಕಮೂರ್ತಿಗೆ ಏಕಾದಶ ರುದ್ರಾಭಿಷೇಕ ಮಹಾಪೂಜೆಯನ್ನು ವಿಧ್ಯುಕ್ತವಾಗಿ ನೆರವೇರಿಸಿದರು ಅನಂತರ ಮಧ್ಯಾಹ್ನ ೩ ಘಂಟೆಯವರೆಗೆ ಸರ್ವರಿಗೂ ಅನ್ನಸಂತರ್ಪಣೆಯು ನಡೆಯಿತು ಅನೇಕ ಪುರಪ ಮುಖರೂ ಸುತ್ತುಮುತ್ತಣ ಗ್ರಾಮಗಳಿಂದ ಭಕ್ತಾದಿಗಳೂ ಭಕ್ತಿಯಿಂದ ಉತ್ಸವಾರ್ಥಿಗಳಾಗಿ ಬಂದಿದ್ದರು ತಳಿರು ತೋರಣ ರಂಭಾಸ್ತಂಭಗಳಿಂದಲಂಕೃತವಾದ ದಿವ್ಯ ರಥದಲ್ಲಿ ಗುರುಸಾರ್ವಭೌಮರ ಉತ್ಸವವಾಯಿತ. ಭಜನಾಸಂಘದವರ ಮೃದುಮಧುರ ಗುರುಸ್ತೋತ್ರಗಳಿಂದಲೂ, ಪಾಠಶಾಲಾ ವಿದ್ಯಾರ್ಥಿಗಳ ವೇದಘೋಷದಿಂದಲೂ, ದುಂದುಭಿಗಳ ಧ್ವನಿಯಿಂದಲೂ, ಶ್ರೀಮಜ್ಜಗದ್ಗುರು ದಾರುಣ ವ್ಯಾಯಾಮಶಾಲೆಯ ವಿದ್ಯಾರ್ಥಿಗಳ ಲೆಜಿಮ್ಸ್‌ನೊದಲಾದ ಅನೇಕ ತರಹದ ಪ್ರಯೋಗಗಳಿಂದಲೂ, ಭೂಕೈಲಾಸದಂತೊಪ್ಪುವ ಈ ಹಾವೇರಿ ಪಟ್ಟಣಕ್ಕೆ ತನ್ನ ಆನುಯಾಯಿಗಳಾದ ಪ್ರಮಥರೊಡನೆ ಬಂದು ರಥಾರೂಢನಾಗಿ ದಿಗ್ವಿಜಯಕ್ಕೊಗ್ಯರ ಹೊರಟಿರುವ ಶಂಕರನ ಉತ್ಸವವೋ ಎಂಬುವಂತೆ ಪ್ರೇಕ್ಷಕರಿಗೆ ನೇತ್ರಾನಂದವನ್ನುಂಟುಮಾಡುತ್ತಲಿತ್ತು. ರಥವು ಬಣ್ಣದ ಮಠದಿಂದ ಸಾಯಂಕಾಲ ೫ ಘಂಟೆಯಿಂದ ಮುಖ್ಯಮುಖ್ಯ ಬೀದಿಗಳಲ್ಲಿ ಹೊರಟಿತು ಗುರುಭಕ್ತರು ಅಲ್ಲಲ್ಲಿ ಫಲ, ಪುಷ್ಪ, ಸಾರಿತೇಳಾದಿಗಳನ್ನು ಸಮರ್ಪಿಸುತ್ತಿದ್ದರು ಮತ್ತು ಸುಮಂಗಲೆಯರು ಅವಿಚ್ಛಿನ್ನವಾಗಿ ಮಂಗಲ ನೀರಾಜನವನ್ನೆತ್ತುತ್ತಿದ್ದರು ಉತ್ಸವವು ರಾತ್ರಿ ೧೧ ಘಂಟೆಗೆ ನಿರ್ದಿಷ್ಟಸ್ಥಾನವನ್ನು ತಲ್ಪಿತು ಶ್ರೀಗಳವರು ಬಂದಿದ್ದ ಭಕ್ತಮಾಹೇಶ್ವರರಿಗೆ ಗುರುವಿನ ಚರಿತ್ರೆಯನ್ನು ಸಂಕ್ಷೇಪವಾಗಿ ಬೋಧಿಸಿ ಆಶೀರ್ವದಿಸಿದ್ದಲ್ಲದೆ ಜಗದ್ಗುರುಗಳವರ ಮಂಗಲಸ್ತೋತ್ರಾವಲಿ, ಧೋಟ್ಟೋ, ಉತ್ಪತ್ತಿಪಟಗಳನ್ನು ದಯಪಾಲಿಸಿ ಇವುಗಳ ವಿಷಯಗಳನ್ನು ಚೆನ್ನಾಗಿ ಪರಿಶೀಲಿಸಿ ಪುಸ್ತಕರಾಗುವಂತೆ ಆಜ್ಞೆಯನ್ನಿತ್ತರು. ವ್ಯಾಯಾಮಶಾಲೆಯ ಮುಖ್ಯಸ್ಥನಿಗೆ ರಜತಪದಕವನ್ನು ಆಶೀರ್ವದಿಸಿದರು. ಮಂಗಳಾರತಿಯಾದ ಬಳಿಕ ಜಗದಾಚಾರ್ಯರ ಜಯ ಘೋಷದೊಡನೆ ಸಭಾವಿಸರ್ಜನೆಯಾಯಿತು

ವೀರಶೈವ ಸಮಾಜ ಸೇವಾಮಂಡಲಿ
ಹಾವೇರಿ.

ದರ್ಶನಹಾಳ.

ಅಕ್ಕಲಕೋಟೆ ಸಂಸ್ಥಾನ ಪೈಕಿ ದರ್ಶನಹಾಳ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು

ಅಗರ್ಭಶ್ರೀಮಂತರೂ, ಗುರುಭಕ್ತಿಪರಾಯಣರೂ, ಸೊಲ್ಲಾಪುರ ಶ್ರೀ ಸಿದ್ಧೇಶ್ವರ ಕಮಿಟಿಯ ಪಂಚರೂ, ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯ ಸೆಕ್ರೆಟರಿಗಳೂ ಆದ ಶ್ರೀಯುತ ಶಿವಲಿಂಗಪ್ಪ ಮಾಳಗೆ ಇವರ ಭವ್ಯವಾದ ಗೃಹದಲ್ಲಿ, ತಳಿರು, ತೋರಣ, ಸಾರಣೆ, ಕಾರಣೆ, ರಂಭಾಸ್ತಂಭಾದಿಗಳಿಂದ ಸುಂದರವಾದ ಮಂಟಪವು ರಚಿಸಲ್ಪಟ್ಟಿತ್ತು ಆ ಮಂಟಪದಲ್ಲಿ ಶ್ರೀ ರೇಣುಕ ಭಗವತ್ಪಾದರ ಲಿಂಗೋದ್ಭವ ಪಂಚಲೋಹಮೂರ್ತಿಗೆ, ಹೋಟಗೀ ಶ್ರೀಗಳಿಂದ ರುದ್ರಾಭಿಷೇಕವು ಸಾಂಗೋಪಾಂಗವಾಗಿ ನೆರವೇರಿಸಲ್ಪಟ್ಟು, ಶ್ರೀಜಗದ್ಗುರು ರೇಣುಕಾಚಾರ್ಯರ ಅಷ್ಟೋತ್ತರ ಶತನಾಮಾವಳಿಯಿಂದಲೂ, ವೇದೋಕ್ತ ಮಂತ್ರಗಳಿಂದಲೂ ಷೋಡಶೋಪಚಾರ ಪೂಜೆಯು ಮಾಡಲ್ಪಟ್ಟಿತು ಶ್ರೀಜಗದಾಚಾರ್ಯರ ಪೂಜೆಯ ಸಮಯದಲ್ಲಿ ಗ್ರಾಮದಲ್ಲಿಯ ಸರ್ವ ಸ್ತ್ರೀ ಪುರುಷರೂ ಸೇರಿ ಮಂಗಳಾರತಿಯನ್ನೂ, ಸ್ತುತಿಯನ್ನೂ, ವಾಡಿ ಶ್ರೀಜಗದ್ಗುರುವರೇಣ್ಯರ ಪ್ರಸಾದವನ್ನು ಸ್ವೀಕರಿಸಿ ಧನ್ಯರಾದರು ಸ್ಥಳಪರಿಚಲದವರು ಸೇರಿ ೭೦೮-೮೦೦ ಜನರು ಸೇರಿದ್ದರು ಸರ್ವರಿಗೂ ಮಹಾಗುರುಪ್ರಸಾದವು ಪೂರೈಸಿ, ಹೆಚ್ಚಾಯಿತು

ಶ್ರೀಜಗದ್ಗುರು ರೇಣುಕರಿಂದ ಅಗಸ್ತ್ಯ ಮಹರ್ಷಿಗೆ ಉಪದೇಶಿಸಲ್ಪಟ್ಟ 'ಶ್ರೀ ಸಿದ್ಧಾಂತ ಶಿಖಾಮಣಿ' ಗ್ರಂಥವು ಸಂಪೂರ್ಣವಾಗಿ ಪಾರಾಯಣಮಾಡಲ್ಪಟ್ಟಿತು

ರಾತ್ರಿ ೮ ಘಂಟೆಗೆ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನೂ, ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವನ್ನೂ, ಮೂರ್ತಿಗೊಳಿಸಿ ಅವಂತವಾದ್ಯಗಳಿಂದ ಉತ್ಸವವು ಹೋಟಗೀ ಶಾಖಾಮಠಕ್ಕೆ ತಲ್ಪಿತು ಹೋಟಗೀ ಶ್ರೀಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಶ್ರೀಯುತ ಶಿವಲಿಂಗಪ್ಪ ಮಾಳಗೆ, ಜೆ ಜೆ ಪಾಟೀಲ ಧೋತ್ರಿ, ರೇವಣಸಿದ್ಧಪ್ಪ ದುಲಂಗೆ ಮಾಸ್ತರರ ಭಾಷಣಗಳು ಬಹುಮನೋಹರವಾಗಿ ಜರುಗಿದವು ಆದರಲ್ಲಿ ಜೆ ಜೆ ಪಾಟೀಲರ ಭಾಷಣವು ಬಹಳ ಹೃದಯಂಗಮವಾಗಿತ್ತು ಅದರ ಸಾರಾಂಶವನ್ನು ಇಲ್ಲಿ ತೋರಿಸುವೆನು—ಇಂದು ತಿಲಿಯು ತನ್ನ ಮರಿಗಳೊಡನೆ ತನ್ನ ವಾಸಸ್ಥಲದಲ್ಲಿದ್ದು ಹೊರಗೆ ಹೋಗಬೇಡಿರಿ ಎಂದು ತನ್ನ ಮಕ್ಕಳಿಗೆ ಹೇಳಿ ತಾನು ಆ ಮರಿಗಳಿಗಾಗಿ ಆಹಾರವನ್ನು ತರುವುದಕ್ಕೆ ಹೋದಾಗ್ಗೆ, ಒಂದು ಬೆಕ್ಕು ಬಂದು ಎಷ್ಟು ಪ್ರಯತ್ನ ಪಟ್ಟರೂ, ಒಂದು ತಿಲಿಯೂ ದೊರೆಯದಿರಲು, ಆಗ ಆ ತಿಲಿಮರಿಗಳಿಗೆ ಹೇಳುತ್ತಿದೆ—ತಮ್ಮಗಳಾ! ಹೊರಗೆ ಬನ್ನಿರಿ ಯಾಕಂದರೆ ನಿಮ್ಮ ಮನೆಯಲ್ಲಿ ಹವೆಯು ಚಲಿಸದಿರುವುದರಿಂದ ನಿಮ್ಮ ಆರೋಗ್ಯವೆ ಕೆಟ್ಟು, ಮರಣವನ್ನು ಹೊಂದುವಿರಿ ಎಂದು ಹೇಳತು. ಅದಕ್ಕೆ ತಿಲಿಮರಿಗಳು ಬರದಿರಲು, ಆಗ್ಗೆ ಆ ಬಿಡಾಲವು ಹೇಳಿದ್ದೇನೆಂದರೆ—ನೀವು ನನ್ನ ಮಾತು ಕೇಳಿ ಹೊರಗೆಬಂದರೆ, ನಿಮಗೆ ಬೇಕಾದಷ್ಟು ಹಾಲನ್ನೂ ಬೆಣ್ಣೆಯನ್ನೂ ತೊಡಿಸುವೆನು ನಾನು ಎಮ್ಮೆ, ಆಕಳು, ಆಡುಗಳನ್ನು ಕಟ್ಟಿದ್ದರೂ ಹೊರಗೆ ತಿರುಗುವೆನಾದ್ದರಿಂದ ನಿಶ್ಯಕ್ತಲ್ಲೂ, ಹಾಲು, ಮೊಸರು ಬೆಣ್ಣೆ ಮುಂತಾದುವುಗಳನ್ನು ತಿನ್ನುತ್ತಿರುವೆನು. ನೀನೇನು ತಿನ್ನುವಿರಿ ಒಣ ಕಾಳನ್ನೂ ಒಣ ರೊಟ್ಟಿಯನ್ನೂ ಅಲ್ಲವೇ! ಎಂದು ಆಶೆಯನ್ನು ಹುಟ್ಟಿಸಿ ಆ ತಿಲಿಮರಿಗಳನ್ನು ಹೊರಗೆ ಕರೆದು ತನ್ನ ಹೊಟ್ಟೆಯನ್ನು ತುಂಬಿಕೊಂಡಿತಂತೆ! ಹಾಗೆಯೇ ಈಗ ನಮ್ಮ ವೀರಶೈವಮತಕ್ಕೆ ಮೂಲಸ್ವರೂಪರಾದ ಶ್ರೀಜಗದ್ಗುರು ಪಂಚಪೀಠಾಧ್ಯಕ್ಷರ ಮಾತನ್ನು ಮೀರಿ, ದುಡ್ಡಿನ ಆಶೆಗಾಗಲಿ, ಇಲ್ಲವೇ ಇನ್ನಾವ ಆಶೆಗಾಗಲಿ, ಗುರುಶ್ಯಕ್ಕೆ ಸಲ್ಲದವರ ಬಲಿಯಲ್ಲಿ ಸಿಲ್ಕಿ, ತಮ್ಮ ಜನ್ಮವನ್ನು ವ್ಯರ್ಥಗೊಳಿಸುವ ಅನೇಕ ಜನರುಂಟು. ದೆಹ್ಲಿಯ ಆಶೆಯನ್ನು ತೋರಿಸಿದ ಬೆಕ್ಕಿನಂತಿರುವ ಕಪಟಿ ಬಂಟರು ಬೋರ್ಡಿಂಗ ಪಾಠಶಾಲಾ, ಇತ್ಯಾದಿ ಆಶೆಯನ್ನು ತೋರಿಸಿ ನಮ್ಮ ವೀರಶೈವ ವೃಂದವನ್ನು 'ಗುಳುಂ' ಎಂದು ನುಂಗುತ್ತಿರುವರೆಂಬುವದನ್ನರಿತು ವೀರಶೈವರು ಎಚ್ಚರಾಗಿ, ಇಂತಹ ಪೂಜ್ಯಪಾದರ ಜಯಂತ್ಯುತ್ಸವಗಳನ್ನು ನೆಪ ನೇರಿಸುತ್ತ ಧನ್ಯರಾಗಬೇಕೆಂದು ಬೋಧಿಸಿದರು. ರಾಮಭಾವ ದೇಶಪಾಂಡೆಯವರು ಆಭಾರವನ್ನು ಪ್ರದರ್ಶಿಸಿದರು ಸಿದ್ರಾಮಪ್ಪ ಮಾಳಗೆ, ಶಿವಣ್ಣಪ್ಪ ಬಿರಾದಾರ, ಕಲ್ಲಪ್ಪ ಜವಳಗೆ, ಶಿವಪ್ಪ ಜವಳಗೆ, ಬಾಬೂರಾವ ಮಾಳಗೆ, ಮುಕ್ಕಪ್ಪ ಜವಳಗೆ, ಮಡಿವಾಳಪ್ಪ, ಕಲಶೆಟ್ಟಿ, ಮಲಕಪ್ಪ ಕಲಶೆಟ್ಟಿ, ಶಾಂತವೀರಪ್ಪ ಧಬಡೆ, ಶಿವಲಿಂಗಪ್ಪ ಮಾಳಗೆ, ಶಿವಯೋಗಪ್ಪ ವಿಭೂತಿ ಮುಂತಾದವರು ಪ್ರತಿವರ್ಷದಲ್ಲಿಯೂ ಶ್ರೀಜಗದ್ಗುರು ಸಾರ್ವಭೌಮರನ್ನು ಸೇವಿಸಿ ಧನ್ಯರಾಗುತ್ತಿರುವರು. ಧನ್ಯ! ದರ್ಶನಹಾಳ ಗ್ರಾಮವೇ ಧನ್ಯ! ಈ ಗ್ರಾಮದಲ್ಲಿಯ "ಶ್ರೀಜಗದ್ಗುರು ಪಂಚಾಚಾರ್ಯ ಭಜನ ಸಭೆ" ವಂತೂ ಈ ಭಾಗದಲ್ಲಿ ಅತಿ ಖ್ಯಾತಿಯನ್ನು ಪಡೆದಿರುತ್ತದೆ ಪ್ರತ್ಯಕ್ಷದರ್ಶಿ.

ಶಿಗ್ಗಾವ.

ಧಾರವಾಡ ಜಿಲ್ಲಾ ಶಿಗ್ಗಾವ ಗ್ರಾಮದಲ್ಲಿ ವಾರ್ಷಿಕ ಪದ್ಧತಿಯಂತೆ ತಾ|| ೬-೩-೩೯ ನೇ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯು ಶಿಗ್ಗಾವಿ ಗ್ರಾಮದಲ್ಲಿ ಒಳ್ಳೆ ಉತ್ಸಾಹದಿಂದ ಜರುಗಿಸಲ್ಪಟ್ಟಿತು. ಗ್ರಾಮದ ಭಕ್ತಮಾಹೇಶ್ವರರು ವಿಧಿಗಳನ್ನು ತಳರು ತೋರಣಗಳಿಂದಲಂಕರಿಸಿದ್ದರು

ಅದೇ ದಿವಸ ಪ್ರಾತಃಕಾಲ ೮ ರಿಂದ ೧೧ ಘಂಟೆಯವರೆಗೆ ಹಿರೇಮಠ ರೇವಣಸಿದ್ಧೇಶ್ವರ ಗದ್ದುಗೆಯ ಮಠದಲ್ಲಿ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟ ಸುಂದರವಾದ ಮಂಟಪದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕಾದಿ ಪೂಜೆಯೂ, ಶಿವಸಹಸ್ರ ಪಂಚಾಚಾರ್ಯರ ಅಷ್ಟೋತ್ತರಗಳ ಪಠನವೂ ನಡೆಯಿತು

ಆಮೇಲೆ ಮಧ್ಯಾಹ್ನ ೫ ಘಂಟೆಯಿಂದ ಶ್ರೀಜಗದ್ಗುರು ರೇಣುಕಶಿವಾಚಾರ್ಯರ ಲಿಂಗೋದ್ಭವ ಮೂರ್ತಿಯಿಂದ ಅಲಂಕೃತವಾದ ಪಲ್ಲಕ್ಕಿ ಉತ್ಸವವು ಹಿರೇಮಠದಿಂದ ಭಜನಾಸಂಘ ಮತ್ತು ವಾದ್ಯವೈಭವದೊಂದಿಗೆ ಹೊಂಟು ಮುಖ್ಯ ಬೀದಿಗಳಲ್ಲಿ ಹಾಯ್ದು ಪುನಃ ರಾತ್ರಿ ೯ ಘಂಟೆಗೆ ಹಿರೇಮಠಕ್ಕೆ ತಲ್ಪಿತು ಅನಂತರ ಸಭೆಯು ಸೇರಿತು ಅಂದಾಭಜನೆ ಶ್ರೀಜಗದ್ಗುರುಗಳವರ ಸ್ತೋತ್ರ ಗೀತೆಯು ಫಲಿಯಿತು ಆಮೇಲೆ ವೇ|| ವೀರಯ್ಯ ನವರು ಸುರಗೀ ಮಠ ಇವರು ಶ್ರೀಜಗದ್ಗುರುಗಳು

ಭೂಲೋಕದಲ್ಲಿ ಅವತರಿಸಿದ ವಿಷಯವಾಗಿಯೂ ವೇ॥ ಸಿದ್ಧಯ್ಯನವರು ಹಿರೇಮಠ ಇವರು "ಜಯಂತಿಯ ಆವಶ್ಯಕತೆ" "ಅಷ್ಟಾವರಣ" ವಿಷಯವಾಗಿಯೂ ವೇ॥ ಬೆನಕಯ್ಯನವರು ಹಿರೇಮಠ ಇವರು "ಶ್ರೀಜಗದ್ಗುರುಗಳು ಯುಗಯುಗಾಂತರಗಳಲ್ಲಿ ಮಾಡಿದ ಲೀಲಾ ಮಹಿಮೆ" ಯ ವಿಷಯವಾಗಿಯೂ ಮ॥ ಗುರುಶಾಂತಪ್ಪ ಯಲಿಗಾರ ಇವರು "ಶ್ರೀಜಗದ್ಗುರುಗಳ ಮಹಿಮೆ" ಯ ವಿಷಯವಾಗಿಯೂ ಸರ್ವರಿಗೂ ಆನಂದಭರಿತವಾಗುವಂತೆ ಭಾಷಣಮಾಡಿದರು. ಶ್ರೀಯುತ "ವಿರೂಪಾಕ್ಷಗೌಡರು ಪೋಲೀಸ ಪಾಟೀಲ" ಇವರು ಬಹು ಕಳಕಳಿಯಿಂದ ಶ್ರೀಜಗದ್ಗುರುಗಳ ಉತ್ಸವದಲ್ಲಿ ಭಾಗವಹಿಸಿದ್ದಲ್ಲದೆ "ಗುರುಸೇವೆಯ ಆವಶ್ಯಕತೆ" ಎಂಬ ವಿಷಯವನ್ನು ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣ ಮಾಡಿದರು. ಅನಂತರ ಶ್ರೀಜಗದ್ಗುರುಗಳವರ ಮಂಗಲ ನಡೆದು ಸಭಿಕರೆಲ್ಲರಿಗೂ ಪ್ರಸಾದ ವಿನಿಯೋಗವಾಗಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಇಂಥ ಸದ್ಭಕ್ತಿಯುಕ್ತರಿಗೆ ಜಗದಾಚಾರ್ಯರು ಅನಂತ ಸುಖಸಾಮ್ರಾಜ್ಯ ಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ

ಚಂದ್ರಶೇಖರಯ್ಯ ಹಿರೇಮಠ

ವೈಂದಿಗಿ.

ಸೊಲ್ಲಾಪುರ ಡಿ॥ ವೈಂದಿಗಿಯಲ್ಲಿ ಪದ್ಧತಿಪ್ರಕಾರ ಶ್ರೀ॥ ವ॥ ಬ್ರ॥ ವೀರಸಂಗದೇವರು ಹಿರೇಮಠ ಪಟ್ಟಾಧ್ಯಕ್ಷ ಇವರ ಮಠದಲ್ಲಿ ಜಯಂತ್ಯುತ್ಸವವು ವಿಶೇಷ ವೈಭವದಿಂದ ನೆರವೇರಿತು ಜಗದಾಚಾರ್ಯರ ಭಾವ ಚಿತ್ರಕ್ಕೆ ವೇದೋಕ್ತ ರುದ್ರಾಭಿಷೇಕವು ಮಾಡಿಸಲ್ಪಟ್ಟಿತು ಉದಯ ೮ ರಿಂದ ೧೧ ವರೆಗೆ ಜಗದಾಚಾರ್ಯರ ಉತ್ಸವವು ನಡೆಯಿತು ಅಲ್ಲಲ್ಲಿ ಆಚಾರ್ಯ ಮೂರ್ತಿಗೆ ಪೂರದ ಪದ್ಧತ್ತರು ಭಕ್ತಿಯಿಂದ ಪುಷ್ಪ ಹಾರಗಳನ್ನೊಪ್ಪಿಸಿ ಆರ್ಚಿಸುತ್ತಿದ್ದರು. ಆಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸುತ್ತಿರಲು ಉತ್ಸವವು ಸ್ವಸ್ಥಾನವನ್ನು ಸೇರಿತು. ಸಾಯಂಕಾಲ ೬॥ ಘಂಟೆಗೆ ಶ್ರೀಗಳವರ ಮಠದಲ್ಲಿ ಸಭೆಯು ಸೇರಿತು. ಸಭೆಗೆ ಇಲ್ಲಿಯ ಮೆಹರ್ಬಾನ್ ಫೌಜದಾರ ಸಾಹೇಬರು, ಹೆಡ್‌ಮಾಸ್ತರರು ಮತ್ತು ಪುರಪ್ರಮುಖರು ವಿಶೇಷವಾಗಿ ನೆರೆದಿದ್ದರು. ಸಭಿಕರ ಕೋರಿಕೆಯ ಪ್ರಕಾರ ಮ॥ ಚನ್ನಬಸಪ್ಪ ಸಿಂದಿ ವಕೀಲರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು ಮ॥ ಚಂದ್ರಶೇಖರ ಮಾಸ್ತರ ಮಹೂತ ಇವರು ಜಗದಾಚಾರ್ಯರ ಜಯಂತಿಯ ನಿಮಿತ್ತಗಾಗಿ ಪಾಶ್ಚಾತ್ಯ ದೃಷ್ಟಿಯಿಂದಲೂ ಮತ್ತು ಧಾರ್ಮಿಕ ದೃಷ್ಟಿಯಿಂದಲೂ ಜನರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಭಾಷಣಮಾಡಿದರು ಅಮೇಲೆ ಶ್ರೀ॥ ಪ॥ ಬ್ರ॥ ವೀರಸಂಗದೇವರು ವೀರಶೈವ ಮತಸ್ಥಾಪಕರ ಬಗ್ಗೆ ಸಪ್ರಮಾಣವಾಗಿ ಭಾಷಣಮಾಡಿದರು ಸಭಿಕರು ಆನಂದಭರಿತರಾದರು ಅಮೇಲೆ ಅಧ್ಯಕ್ಷರು ಮಹಾರಾಷ್ಟ್ರ ಭಾಷೆಯಲ್ಲಿ "ಸನಾತನ ಧರ್ಮ ಅಂದರೆ ಏನು" ರೇಣುಕಾದ್ಯಾಚಾರ್ಯರೇ ವೀರಶೈವ ಮತಸ್ಥಾಪಕರು. ಇವರು ಬಹು ಪುರಾತನರು ಎಂಬುದಾಗಿ ವಿಶದೀಕರಿಸಿದರು. ಆನಂತರ ಶ್ರೀಗಳವರಿಗೂ ಸರಕಾರಿ ಅಧಿಕಾರವರ್ಗದವರಿಗೂ ಪೂಮಾಲೆಗಳು ಆರ್ಪಿಸಲ್ಪಟ್ಟನಂತರ ಶ್ರೀಮಜ್ಜಗದ್ಗುರುಗಳ ಜಯನಿನಾದದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ವ್ಯಾನೇಜರ್.

ಶ್ರೀಜಗದ್ಗುರು ಪಂಚಾಚಾರ್ಯ ತತ್ವಜ್ಞಾನಮಂದಿರ.
ವೈಂದಗಿ

ಕೇಲಂ ಸ್ತಲಮಲೆ

ಕೇಲಂ ಟವನ್ನಿಗೆ ದಕ್ಷಿಣದಿಕ್ಕಿನಲ್ಲಿ ೨ ವೈಲಿ ದೂರ ವಿರುವ ಸ್ತಲವಲೆ ಯೆಂಬ ಚಿಕ್ಕ ಬೆಟ್ಟದ ಮೇಲೆ, ತಳಿಗೆ ಕಂಡವರಿಂದ ನಿರ್ಮಿತವಾದ ಅಗಸ್ತ್ಯಾಶ್ರಮ ಎಂಬ ದೇವಾಲಯದಲ್ಲಿ ಶ್ರೀ ರೇಣುಕಸಿದ್ಧ ಶಿವಾಚಾರ್ಯರು ಗಗನಮಾರ್ಗವಾಗಿ ಬಿಜಯಂಗೈದು ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತೋಪದೇಶವನ್ನು ಮಾಡುವ ಪ್ರಕಾರ ಒಂದು ದೊಡ್ಡ ಕಲ್ಲಿನಲ್ಲಿ ಚಿತ್ರಿಸಿರುವ ಶಿಲಾವಿಗ್ರಹಕ್ಕೆ ಪದ್ಧತಿಪ್ರಕಾರ ೬-೩-೩೯ ಭಾನುವಾರ ಉದಯ ೭ ಘಂಟೆಗೆ ಏಕಾದಶ ಮಹಾರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ, ವಿಧ್ಯುಕ್ತವಾಗಿ ನೆರವೇರಿದವು. ಅನಂತರ ೧೦ ಘಂಟೆಗೆ ಮಹಾಗಣಾರಾಧನೆಯು ಬಹು ಸಂಭ್ರಮವಾಗಿ ನಡೆಯಿತು. ಬಳಿಕ ಮಧ್ಯಾಹ್ನ ೨ ಘಂಟೆಯಿಂದ ೫ ಘಂಟೆಯ ವರೆಗೆ ಶ್ರೀ ಜಗದಾಚಾರ್ಯರ ಮಹಾಪ್ರಭಾವವನ್ನು ವೈ ಶಿ ಗುರುಸ್ವಾಮಿ ಆಯ್ಯನವರು ಬಹು ಸ್ವಾರಸ್ಯವಾಗಿ ವ್ಯಾಖ್ಯಾನಮಾಡಿ ಸರ್ವರನ್ನೂ ಆನಂದಗೊಳಿಸಿದರು.

ಪದ್ಧತಿ ಪ್ರಕಾರ ಈ ೧೨ ನೇ ವರುಷದ ಉತ್ಸವವನ್ನು ತಮ್ಮ ಸ್ವಂತ ಖರ್ಚಿನಿಂದ ನೆರವೇರಿಸಿದ ಸದರಿ ಗುರುಸ್ವಾಮಿ ಆಯ್ಯನವರಿಗೆ ಜಗದಾಚಾರ್ಯರು ಸಕಲ ಸಂಪತ್ತುಗಳನ್ನು ಅನುಗ್ರಹಿಸಿ ಕಾಪಾಡಲೆಂದು ಕೋರುವೆ.

ಉತ್ಸವಭಾಗಿ.

ಎ. ಜಿನ್ನೆಬಸವಯ್ಯ

ಮಸಿಗಿ.

ವೀರಶೈವಮತವು ಯುಗಯುಗಾದಿಗಳಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟಿತೆಂಬುದು ಶಾಸ್ತ್ರಪ್ರಸಿದ್ಧವೂ ಲೋಕಪ್ರಸಿದ್ಧವೂ ಆಗಿರುವದು. ಈ ಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀಜಗದ್ಗುರು ರೇವಣಸಿದ್ಧ ಶಿವಾಚಾರ್ಯರ ಜಯಂತಿಯನ್ನು ಈ ವೀರಶೈವಮತದಲ್ಲಿ ಜನ್ಮವೆತ್ತಿದವರೆಲ್ಲರೂ ತಪ್ಪದೆ ಆಚರಿಸಬೇಕೆಂಬ ಸನಾತನ ಧರ್ಮಾವಲಂಬಿಗಳ ನಿಯಮವಿರುವುದರಿಂದ ಪದ್ಧತಿಯಂತೆ ಶ್ರೀ ಪಟ್ಟಾಧ್ಯಕ್ಷ ಷಡಕ್ಷರಸ್ವಾಮಿಗಳವರ ಮಠದಲ್ಲಿ ಪ್ರಾತಃಕಾಲ ಶ್ರೀಜಗದ್ಗುರು ಮೂರ್ತಿಗೆ ವಿಧಿವತ್ತಾಗಿ ಪೂಜಾವಿಧಿಕಾರ್ಯಗಳು ನಡೆದು ಸಾಯಂಕಾಲಕ್ಕೆ ಮಠದಲ್ಲಿ ಸಭೆಸೇರಿತು. ಭಕ್ತಾದಿಗಳು ಬಹಳವಾಗಿ ಆಗಮಿಸಿದ್ದರು. ಬಾಲಿಕೆಯರಿಂದ ಪ್ರಾರ್ಥನೆ ಹಾಡುಗಳು ನಡೆದನಂತರ ಸಿದ್ಧಾಂತಶಿಖಾಮಣಿಯಲ್ಲುಕ್ತವಾದ ವಿಷಯಗಳನ್ನು ಕುರಿತು ಶಾಲಾಮರೀಯ ನೇ॥ ಬಸವಪ್ರಕಾಶ್ಯಾಗಳೂ ಮತ್ತು ಶ್ರೀಗಳೂ ಆಚಾರ್ಯರ ಮಹಿಮೆಗಳನ್ನು ಬೋಧಿಸಿದರು. ಅನಂತರ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಕಾರ್ಯದರ್ಶಿ
ಮರುಳದ ರುದ್ರಪ್ಪ, ಮಸಿಗಿ.

ಬಳ್ಳಾರಿ.

ಇದೇ ತಾ॥ ೫-೩-೩೯ ನೆಯ ರವಿವಾರ ಶ್ರೀ ಗುರು ನಿವಾಸ ಸಂಸ್ಕೃತ ವಿದ್ಯಾಲಯದಲ್ಲಿ ಉದಯ ೧೦ ಘಂಟೆಗೆ ಸರಿಯಾಗಿ ಮ॥ ರಾ॥ ಪವಾಡ ಶಿಪ್ಪ ಮಲ್ಲಾರಾಜಪ್ಪನವರು ಉದಾರ ಬುದ್ಧಿಯಿಂದ ಶಾಲೆಗಾಗಿ ಕರಿಸಿಕೊಟ್ಟ ಪಂಚಲೋಹದ ಲಿಂಗೋದ್ಭವಮೂರ್ತಿಗೆ ವಿಧಿಗನುಸಾರವಾಗಿ ಅಭಿಷೇಕವು ವಿದ್ಯಾರ್ಥಿಮಂಡಲಿಯಿಂದ ನೆರವೇರಿಸಲ್ಪಟ್ಟಿತು. ಆನಂತರ ಸಾಯಂಕಾಲ ೫ ಘಂಟೆಗೆ ಸಭೆಯು ಸೇರಿತು ಆರಂಭದಲ್ಲಿ ಶ್ರೀಜಗದ್ಗುರುಗಳವರ ಸ್ತೋತ್ರವು ನಡೆಯಿತು. ಅಮೇಲೆ ಪಂ॥ ಷಡಕ್ಷರಶಾಸ್ತ್ರಿಗಳವರು "ರೇಣುಕರ ಲೀಲೆ" ಗಳ ಮೇಲೆ ಅನೇಕಭಾವಾದ ಭಾಷಣಮಾಡಿ ಸರ್ವರನ್ನೂ ಸಂತೋಷಗೊಳಿಸಿದರು. ಅಮೇಲೆ ಯಜಮಾನ ಕಾಂತರುದ್ರಪ್ಪನವರು "ಜಯಂತಿಯ ಆವಶ್ಯಕತೆ" ಎಂಬ ವಿಷಯದ ಮೇಲೆ ಸರಸವಾದ ವ್ಯಾಖ್ಯಾನವನ್ನಿತ್ತರು. ಅನಂತರ ಮಂಗಲ ನಡೆದು ಸಭಿಕರೆಲ್ಲರಿಗೂ ಪ್ರಸಾದವಿನಿಯೋಗವಾಗಿ ಸಭಾಕಾರ್ಯವು ಸವಾಹ್ಲಾದಾಯಿತು ತದನಂತರ ೭ ಘಂಟೆಯಿಂದ ಉತ್ಸವವು ಅನೇಕ ಮಂಗಲವಾದ್ಯಗೊಡನೆಯೂ ಸಮಸ್ತ ಭಕ್ತಮಂಡಲಿಯೊಡನೆಯೂ ಪುರವೀಧಿಗಳಲ್ಲಿ ಸಂಚರಿಸಿ ನಭೋಮಂಡಲ ವ್ಯಾಪಿಯಾದ ಜಯಘೋಷದೊಡನೆ ೯॥ ಘಂಟೆಗೆ ಸ್ವಸ್ಥಾನವನ್ನು ಸೇರಿತು ಭಕ್ತಿಪೂರ್ವಕವಾಗಿ ಈ ಕಾರ್ಯದಲ್ಲಿ ಭಾಗವಹಿಸಿದ ಶ್ರೀಮಾನ್ ಅರಗಿನ ಹೋಳಿ ಬಸವನಗೌಡರು ಶ್ರೀಮಾನ್ ಬಳೆ ಮರೆಪ್ಪನವರು ಶ್ರೀಮಾನ್ ಬಸವಪ್ಪನವರು ಬಸಪ್ಪನವರು ಇನ್ನೂ ಅನೇಕ ವೀರಶೈವ ತರುಣ ಮಂಡಲಿಯವರಿಗೆ ಆ ರೇಣುಕಾಚಾರ್ಯರು ಆಯು ರಾರೋಗ್ಯ ಭಾಗ್ಯಾದಿಗಳನ್ನಿತ್ತಿಯಲೆಂದು ಪ್ರಾರ್ಥಿಸುವ.

ಶ್ರೀಗುರುನಿವಾಸ ಸಂಸ್ಕೃತ ಹೈಸ್ಕೂಲ್.
ಸೆಕ್ರೆಟರಿ ಬಳೆ ಮರೆಪ್ಪ.

ಬೆಂಗಳೂರು.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮಹಂತಿನ ಮಠದಲ್ಲಿ ಪ್ರತಿವರುಷದಂತೆ ಈ ವರುಷವೂ ತಾ॥ ೬-೩-೩೯ ನೆಯ ಭಾನುವಾರ ಶ್ರೀಜಗದ್ಗುರು ರೇಣುಕ ಭಗವತ್ಪಾದರ ಜಯಂತೀ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಿತು ಪ್ರಾತಃಕಾಲ ಶ್ರೀಜಗದ್ಗುರು ಮೂರ್ತಿಗೆ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ನಡೆದವು. ಸಾಯಂಕಾಲ ಪುಷ್ಪಗಳಿಂದ ಅಲಂಕೃತವಾದ ರಥದಲ್ಲಿ ಶ್ರೀಸ್ವಾಮಿಯ ಮೂರ್ತಿಯನ್ನು ಮೂರ್ತಗೊಳಿಸಿ ವಾದ್ಯ ವೈಭವದೊಡನೆ ಪಟ್ಟಣದ ಮುಖ್ಯ ಬೀದಿಗಳಲ್ಲೆಲ್ಲಾ ಮೆರವಣಿಗೆಯು ನಡೆದು ಮಹಂತಿನ ಮಠಕ್ಕೆ ಹಿಂತಿರುಗಿದಮೇಲೆ ಜಯಂತೀ ಮಹೋತ್ಸವದ ಭವ್ಯ ಮಂಟಪದಲ್ಲಿ ಶ್ರೀ ಮೂರ್ತಿಯನ್ನು ಬಿಜಂಗೈಸಿ ಪೂಜೋಪಚಾರಾದಿಗಳು ನಡೆದವು. ತಾ॥ ೬ನೆಯ ದಿವಸ ಶ್ರೀ॥ಷ॥ಬ್ರ॥ಪಂ॥ ಗಂಗಾಧರ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಬಿ ಎಸ್. ಮಲ್ಲಾರಾಧ್ಯರವರ ಧರ್ಮಪತ್ನಿ ಸೌ॥ ನಾಗರತ್ನಮ್ಮನವರು "ಗುರುಸೇವಾ" (ಸದ್ಗುರು ಮಹತ್ತ್ವ) ಎಂಬ ವಿಷಯದಮೇಲೆ ಸಕಲರ ಮನಸ್ಸಿನ ಮೇಲೂ ಪರಿಣಾಮಕಾರಿಯಾಗುವಂತೆ ಭಾಷಣವನ್ನು ಮಾಡಿದರು. ತಾ॥ ೭-೩-೩೯ನೆಯ ಮಂಗಳವಾರ ಸಾಯಂಕಾಲ ೬-೩೦ ಗಂಟೆಗೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಪ್ರಿನ್ಸಿಪಾಲರಾದ ವೇ॥ ಸಾಹಿತ್ಯ ವಿದ್ವಾನ್ ಚಂದ್ರಶೇಖರ ಶಾಸ್ತ್ರಿಗಳು ಎಂ ಎ., ಇವರ ಅಧ್ಯಕ್ಷತೆಯಲ್ಲಿ, ಇದೇ ಕಾಲೇಜಿನ ಪ್ರೊಫೆಸರರಾದ ವೇದಾಂತ ಶಿರೋಮಣಿ ವಿದ್ವಾನ್ ವೇ॥ ಚಂದ್ರಶೇಖರ ಭಟ್ಟರವರಿಂದ "ಭಕ್ತಿಯೋಗ" ಎಂಬ ವಿಚಾರದಲ್ಲಿಯೂ, ತಾ॥ ೮-೩-೧೯೩೯ ನೆಯ ಬುಧವಾರ ಸಾಯಂಕಾಲ ೬-೩೦ ಗಂಟೆಯಿಂದ ರಿಟೈರ್ಡ್ ಚೀಫ್ ಜಸ್ಟಿಸ್, ಶ್ರೀಮಾನ್ ರಾಜಧರ್ಮಪ್ರವೀಣ, ದಿವಾನ್ ಬಹದ್ದೂರ್, ಪಿ. ಮಹಾದೇವಯ್ಯನವರ ಅಧ್ಯಕ್ಷತೆಯಲ್ಲಿ, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಪ್ರಿನ್ಸಿಪಾಲರಾದ ಸಾಹಿತ್ಯ ವಿದ್ವಾನ್ ವೇದಮೂರ್ತಿ, ವೈ. ಚಂದ್ರಶೇಖರಶಾಸ್ತ್ರಿಗಳು, ಎಂ.ಎ, ಯವರಿಂದ "ಮತಗಳ ಸಾಮರಸ್ಯ" ಎಂಬ ವಿಷಯದಲ್ಲಿಯೂ, ತಾ॥ ೯-೩-೧೯೩೯ ನೆಯ ಗುರುವಾರ ಸಾಯಂಕಾಲ ೬ ಗಂಟೆಗೆ ಶ್ರೀ॥ಚಾ॥ಸಂ॥ಕಾ॥ ಪ್ರಿನ್ಸಿಪಾಲ್ ಸಾಹಿತ್ಯ ವಿದ್ವಾನ್ ವೇ॥ ಚಂದ್ರಶೇಖರ ಶಾಸ್ತ್ರಿಗಳು, ಎಂ. ಎ ಯವರ ಅಧ್ಯಕ್ಷತೆಯಲ್ಲಿ ಶ್ರೀ ಚಾಮರಾಜೇಂದ್ರ ವೇದಪಾಠಶಾಲಾ ಪ್ರಿನ್ಸಿಪಾಲ್‌ರಾದ ವೇದಮೂರ್ತಿ ಎನ್ ಮಲ್ಲಿಕಾರ್ಜುನಶಾಸ್ತ್ರಿಗಳು ಎಂ ಎ ಯವರಿಂದ "ಮತಗಳೂ ಭಾರತ ಜೀವನವೂ" ಎಂಬ ವಿಚಾರದಲ್ಲಿಯೂ ಮತ್ತು ಕೈ॥ ಶ್ರೀ॥ ಹೆಚ್. ಎಲ್. ನಂಜಪ್ಪನವರ ಕುಮಾರಿಯರಿವರ ಚಿ॥ ಗಿರಿಜಾಂಬ ಮತ್ತು ಮುಕ್ತಾಂಬ ಎಂಬ ಚಿಕ್ಕಮಕ್ಕಳ ಶ್ರೀರೇಣುಕವಚನಗಳ ಪಠನ ಮತ್ತು "ಗುರುಭಕ್ತಿ" ವಿಚಾರವಾದ ಪುಟ್ಟ ಭಾಷಣವೂ, ತಾ॥ ೧೦-೩-೩೯ ನೆಯ ಶುಕ್ರವಾರ ಸಾಯಂಕಾಲ ೬-೩೦ ಗಂಟೆಗೆ ಶ್ರೀ॥ ಷ॥ ಬ್ರ॥ಪಂ॥ ಷ॥ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ಸಿಟಿ ಮುತ್ತಿನಕಂತಿ ಮಠದ ಅಯುರ್ವೇದಾಚಾರ್ಯ, ವೈದ್ಯಮಾರ್ತಂಡ, ಭಿಷಗ್ರತ್ನ, ಸಾಹಿತ್ಯ ವಾರಿಧಿ ಇತ್ಯಾದಿ ಬಿರುದಾಂಕಿತರಾದ ಶ್ರೀ॥ ಷ॥ ಬ್ರ॥ಷ॥ ರಾದ ಶಿವಕುಮಾರಸ್ವಾಮಿಗಳವರಿಂದ "ಪುರುಷಾರ್ಥ" ಎಂಬ ವಿಷಯದ ಮೇಲೆಯೂ, ತಾ॥ 11-3-39 ನೆಯ ಶನಿವಾರ ಸಾಯಂಕಾಲ 6-30 ಗಂಟೆ ಲಾಗಾಯಿತು ಶ್ರೀ॥ ಷ॥ ಬ್ರ॥ಪಂ॥ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರಿಂದ "ಶಿವಯೋಗ ಎಂಬ ವಿಷಯದ ಮೇಲೆ ಭಾಷಣವೂ ನಡೆದು ಈ ವರುಷದ ಜಯಂತೀ ಮಹೋತ್ಸವವು ಮುಕ್ತಾಯಗೊಳಿಸಲ್ಪಟ್ಟಿತು.

ಪಂಚಾಚಾರ್ಯಪ್ರಭಾ.

೧೯೩೯ ನೆಯ ಮಾರ್ಚಿ ತಾ|| ೩೦ನೇ ಸೋಮವಾರ.

ಪ್ರಮಾಥಿಸಂವತ್ಸರ.

ಜಗಚ್ಚಾಲಕನಾದ ಪರಮೇಶ್ವರನ ಅನುಗ್ರಹದಿಂದ ಆರವತ್ತು ಸಂವತ್ಸರಗಳಲ್ಲಿ೦ದಾದ ಬಹುಧಾನ್ಯ ಸಂವತ್ಸರವನ್ನು ಯಾವ ಈತಿಬಾಧೆಗಳೂ ಇಲ್ಲದಂತೆ ಕಳೆದಂತಾಯಿತು. ಇನ್ನು ಮುಂದಣ ಪ್ರಮಾಥಿಸಂವತ್ಸರವು ಬುಧವಾರದಿವಸದಿಂದ ಪನಾರ್ಪಣಮಾಹುವದು. ನೂತನಸಂವತ್ಸರವು ಪ್ರವೇಶಿಸುವ ದಿವಸವನ್ನು ಭಾರತೀಯರು ಯುಗಾದಿಯೆಂದು ಕರೆಯುತ್ತಾರೆ. ನೂತನಬಂಧುಗಳು ಮನೆಗೆ ಬಂದರೆ ಅವರನ್ನು ಎಷ್ಟು ಸಂಭ್ರಮದಿಂದ ಸತ್ಕರಿಸುವರೋ ಅಷ್ಟು ಸಂಭ್ರಮದಿಂದ ಈ ಯುಗಾದಿ ಹಬ್ಬವನ್ನು ಸತ್ಕರಿಸುತ್ತಾರೆ. ಈ ದಿವಸ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಮಠಗಳನ್ನು ಸಾರಣಿಕಾಣಿಗಳಿಂದ ಪರಿಮಾರ್ಜಿಸಿ ತೋರಣೋಪಣಗಳಿಂದ ಅಲಂಕರಿಸಿ ಪ್ರಾತಃಕಾಲದಲ್ಲಿ ಎಲ್ಲರೂ ಅಭ್ಯಂಗಸ್ನಾನವನ್ನು ಮಾಡಿ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನಾಚರಿಸಿ ಗುರುವೃಂದವರ್ಗದವರನ್ನು ನೋಡಲೋಸುಗಾರಗಳಿಂದರ್ಚಿಸಿ ಹತ್ತಿರ ಸೋನೆತಾದಾದ ಭಕ್ಷ್ಯಭೋಜ್ಯಾದಿಗಳನ್ನು ಸವಿದು ನೂತನಾಂಬರಗಳನ್ನು ಧರಿಸಿ ಗಣೆತಜ್ಞರ ಮುಖದಿಂದ ಆಯುಭಾಗ್ಯವನ್ನು ವಿಚಾರಿಸುತ್ತ ವಿನೋದದಿಂದ ಕಾಲಕಳೆಯುವುದನ್ನು ನೋಡಿದರೆ ನುಂದಿನ ಯುಗಾದಿಯವರೆಗೂ ನಾವುಗಳೆಲ್ಲರೂ ಇದೇರೀತಿಯಾಗಿ ಸುಖಸಂತೋಷಗಳಿಂದ ಕಾಲಕಳೆಯಬೇಕೆಂಬ ಆರ್ಧವು ಸೂಚನೆಯಾಗುತ್ತದೆ. ಸೃಷ್ಟಿ ಸ್ಥಿತಿ ಸಂಹಾರಕರ್ತನಾದ ಅನಂತಕಲ್ಯಾಣಗುಣಾಭಿವೃನಾದ ಶ್ರೀ ಪರಮೇಶ್ವರನು ತನ್ನಲ್ಲಿ ಅವಿನಾಭಾವದಿಂದಿರುವ ಶಕ್ತಿಯ ವಿಕಾಸವನ್ನೆಸೆಯಿಂದ ಸ್ವಾವಜಂಗಸಾತ್ಮಕನಾದ ಜಗತ್ತನ್ನು ಸೃಷ್ಟಿಸಿ ಈ ಜಗತ್ತಿಗೆ ವ್ಯವಹಾರಾರ್ಥವಾಗಿಯೂ ಧರ್ಮಮಾರ್ಗ ಪ್ರವೃತ್ತಿಕಾರಣಕ್ಕಾಗಿಯೂ ಮಾಸಪಕ್ಷಸಂವತ್ಸರ ಗ್ರಹಕಾಲ ಗಣನಾದಿಗಳನ್ನು ಸಂಯೋಜಿಸಿ ವಿಷ್ಣು ಬ್ರಹ್ಮಾದಿದೇವತೆಗಳನ್ನು ಕರೆಮು ಜಗದ್ರಕ್ಷಣಾದಿಕಾರ್ಯಗಳನ್ನು ವಹಿಸಿದನು. ಆ ದೇವತೆಗಳು ಈಶ್ವರಾಜ್ಞಾಪಾಲನಾರ್ಥವಾಗಿ ಹಿಮಾಲಯಕ್ಕೆ ಬಂದು ತಮ್ಮ ತಮ್ಮ ಕಾರ್ಯಗಳನ್ನು ಆರಂಭನೂಡಿದ ದಿವಸವಾದ್ದರಿಂದ ಇವಕ್ಕೆ ಯುಗಾದಿಯೆಂಬ ಹೆಸರು ಬಂದಿದೆ.

ಆಪನ್ನಹಾ ಭೂತಾನಿ ಪ್ರವಿಶಂತಿ ಯಮಾಲಯಂ ।

ಎಂಬಂತೆ ಪ್ರತಿಕ್ಷಣದಲ್ಲಿ ಪ್ರಾಣಿಗಳು ಯಮಾಲಯವನ್ನು ಪ್ರವೇಶಿಸುತ್ತಿರುವವು. ಧರ್ಮಮಾರ್ಗದಿಂದ ಚ್ಯುತರಾಗಿ ಕಪಟ, ದಂಭ, ದುರಹಂಕಾರಾದಿಗಳಿಗೆ ಶಿಕ್ಕು ಅತ್ಯಸನ್ನ ನರಕಕ್ಕೀಡಾ. ಮಾಡುವುದಕ್ಕಿಂತ ಪುಣ್ಯಾಚರಣೆಗಳಲ್ಲಿ ಆಸಕ್ತರಾಗಿ ಆನಂದಸಂಪನಾದ ಪರಮಾತ್ಮನಲ್ಲಿ ಶೀತಿ ಸುಖಪಡುವುದು ಮಾನವಧರ್ಮವಾದುದರಿಂದ ಸರ್ವರೂ ತಮ್ಮ ಕಷ್ಮಲಬುದ್ಧಿಯನ್ನು ತ್ಯಜಿಸಿ ಸ್ವಚ್ಛಹೃದಯರಾಗಿ ಸೃಷ್ಟಿಕರ್ತನಾದ ಪರಮಾತ್ಮನಲ್ಲಿ ಭಯಭಕ್ತಿಗಳನ್ನು ತೋರಿಸುತ್ತ ಸನ್ಮಾರ್ಗಗಾಮಿಗಳಾದರೆ (ಪ್ರಮಥಿನ್ನಾತೀತಿಪ್ರಮಾಥೀ) ದೋಷಗಳನ್ನು ನಾಶಗೊಳಿಸಿ ಗುಣವನ್ನು ಪ್ರಕಾಶಗೊಳಿಸುವದೆಂಬ ಆರ್ಥವನ್ನು ಕೊಡುವ ಈ ಪ್ರಮಾಥಿಸಂವತ್ಸರವು ಅನ್ವರ್ಥಕವಾಗುವದು. ಲೋಕದಲ್ಲಿ

"ಧರ್ಮಸ್ಯ ಫಲಮಿಚ್ಛಂತಿ ಧರ್ಮಂ ನೇಚ್ಛಂತಿ ಮಾನವಾಃ"

ಎಂಬಂತೆ ಮನುಷ್ಯರು ಧರ್ಮಾಚರಣೆಯಿಂದುಂಟಾಗುವ ಸೌಖ್ಯವನ್ನು ಅಪೇಕ್ಷಿಸುವರಲ್ಲದೆ ಆ ಸೌಖ್ಯಸಾಧನವಾದ ಧರ್ಮಾಚರಣೆಯಲ್ಲಿ ಮನಗೊಡುವುದಿಲ್ಲ. ಧರ್ಮಕ್ಕೂ ಸುಖಕ್ಕೂ ಕಾರ್ಯಕಾರಣಭಾವವುಂಟು. ಧರ್ಮರೂಪವಾದ ಕಾರಣವಿಲ್ಲದಿದ್ದರೆ ಸುಖರೂಪವಾದ ಕಾರ್ಯೋತ್ಪತ್ತಿಯು ಹೇಗೆ ತಾನೇ ಸಂಭವಿಸುವುದು. ಆದುದರಿಂದ ಆಸ್ತಿಕಮಹಾಶಯರು ದುಃಖಕಾರಣವಾದ ಅಧರ್ಮಮಾರ್ಗವನ್ನು ಬಿಟ್ಟು ಸುಖಕಾರಣವಾದ ಧರ್ಮಮಾರ್ಗದಲ್ಲಿ ಈ ನೂತನವರ್ಷದಿಂದಾದರೂ ಕಾಲೂರಿ ನಿಂತು ಈ ಪ್ರಮಾಥಿಸಂವತ್ಸರವನ್ನು ದುರುಪಯೋಗ ಪಡಿಸದಂತೆ ಸರ್ವನಿಯಾಮಕನಾದ ಪರಮಾತ್ಮನೂ ಆಚಾರ್ಯಭಗವತ್ಪಾದರೂ ಎಲ್ಲರಿಗೂ ಸದ್ಬುದ್ಧಿಯ ನ್ನೀಯಲಿ.

ಪ್ರಮಾಥಿಸಂವತ್ಸರಫಲ

ನಪಿಲಾ ಧರಣೀ ಸಹಿತಾ ತುರಗಾದಿಭಿರ್ಭಹುಧಾ ।
ಕ್ವಚಿದರ್ಘಾ ಪ್ರಭವತಿ ನ ಕುತ್ರಚಿದ್ಧನರಾಃ ಪ್ರಮಾಥ್ಯಬ್ದೆ ॥

ಈ ಪ್ರಮಾಥಿಸಂವತ್ಸರದಲ್ಲಿ ಭೂಮಿಯು ರಥ, ಗಜ, ತುರಗಾದಿಗಳಿಂದ ತುಂಬಿರುತ್ತದೆ. ಕೆಲವೆಡೆಗಳಲ್ಲಿ ಪದಾರ್ಥಗಳಿಗೆ ಬೆಲೆಯು ಹೆಚ್ಚುವದು. ಕೆರೆ ಕಟ್ಟೆ ಬಾವಿಗಳಲ್ಲಿ ನೀರು ಕಡಿಮೆಯಾಗುತ್ತದೆ.

ಬುಧನು ರಾಜನಾಗಿರುವುದರಿಂದ—

ಪ್ರಭೂತವಾಯುರ್ಭವಿ ಮಧ್ಯವೃಷ್ಟಿರ್ಗರ್ದಾಹಕಾ ಪ್ರೋಕ್ತ ತರಾಜಕೋಪಾಃ । ಬುಧೇಽಬ್ದ ಸಾಧೇಽಭ್ಯಧಿಕಂ ಚ ಸಸ್ಯಂ ಶ್ರೇಷ್ಠಂ ಚ ನೃದ್ವಿರ್ಜಿಸಿಲೇಖಕಾನಾಂ ॥

ಎಂಬ ಪ್ರಮಾಣಾನುಸಾರವಾಗಿ ಗಾಳಿಯು ಹೆಚ್ಚುವನು. ಮಳೆಯು ಸಾಧಾರಣ. ಪ್ರಜೆಗಳು ರೋಗದಿಂದ ನೆರೆಯಾಮ. ರಾಜರಿಗೆ ಕೋಪವು ಹೆಚ್ಚುವದು. ಧನ ಕರುಗಳು ಚನ್ನಾಗಿ ಕರೆಯುವವು. ಬೆಳೆಯು ಚನ್ನಾಗಿ ಫಲಿಸುವನು. ಬರೆವಣಿಗೆದಾರರಿಗೆ ವಿಶೇಷ ಅಭಿವೃದ್ಧಿಯುಂಟಾಗುವದು.

ಗುರುವು ಮಂತ್ರಿಯಾಗಿರುವದರಿಂದ—

ಜಗದಬಿಲಾ ಜಲಪೂರ್ಣಾ ಪ್ರೋದ್ಭ ತರಾಜಾಹಪೋಷೇತಂ ॥

ಎಂಬ ಪ್ರಮಾಣಾನುಸಾರವಾಗಿ ಸುವೃಷ್ಟಿಯೂ, ಸಸ್ಯಾಭಿವೃದ್ಧಿಯೂ, ಧನಸಮೃದ್ಧಿಯೂ ಉಂಟಾಗುತ್ತವೆ. ಕೆರೆಕಟ್ಟೆಗಳು ಜಲಪೂರ್ಣವಾಗುವವು. ರಾಜರಲ್ಲಿ ಯುದ್ಧಾಸಕ್ತಿಯು ಹೆಚ್ಚುವದು.

ಗುರುವು ಸೇನಾನಾಯಕನಾಗಿರುವದರಿಂದ—

ಸುವೃಷ್ಟಿಯಾಗಿ ಪ್ರಜೆಗಳಲ್ಲಿ ಪರಸ್ಪರ ಪ್ರೀತಿಯು ಹೆಚ್ಚುವದು. ದೇವತೋತ್ಸವಗಳು ವಿಶೇಷವಾಗಿ ನಡೆಯುವವು. ಗುರುಜನಗಳು ಕರ್ಮ ನಿರತರಾಗುವರು ರಾಜರಲ್ಲಿ ಪ್ರಜಾಕ್ಷೇಮವು ರಕ್ಷಣಾಸಕ್ತಿಯು ಹೆಚ್ಚುವದು.

ಸೂರ್ಯನು ಸಸ್ಯಾಧಿಪನಾದುದರಿಂದ—

ಅತಿವಿಪುಲಾ ಕ್ಷಿತಿಭಯಂ ಕುಳಿತ್ಥ ಜಣಕಾದಿಸಂಪೂರ್ಣಂ ।

ಎಂಬ ಪ್ರಮಾಣಾನುಸಾರವಾಗಿ ಸಸ್ಯಾದಿಗಳ ಬೆಳೆಯು ಕಡಿಮೆಯಾಗಿ ಮೂಷಕ ಶಲಭಾದಿ ಈತಿಬಾಧೆಗಳು ಹೆಚ್ಚುವವು. ಹುರುಳಿ ಕಡಲೆಗಳಿಗೆ ಬೆಲೆಯು ಹೆಚ್ಚುವದು. ಶನಿಯು ಧಾನ್ಯಾಧಿಪನಾದುದರಿಂದ—

ಕೃಷ್ಣ ಭೂಮಿಸ್ತು ಫಲಿತಾ ಮಂದೇ ಧಾನ್ಯಾಧಿಪೇ ಸತಿ ।

ಎಂಬ ಪ್ರಮಾಣಾನುಸಾರವಾಗಿ ಕಪ್ಪುಧಾನ್ಯಗಳು ಪಣ್ಣು ಪಣ್ಣು ಧಾನ್ಯಾದಿಗಳು ಚನ್ನಾಗಿ ಫಲಿಸುತ್ತವೆ. ಕಪ್ಪು ಮಣ್ಣಿನ ಭೂಮಿಯು ಚನ್ನಾಗಿ ಬೆಳೆಯುತ್ತದೆ.

ಗುರುವು ಅರ್ಘಾಧಿಪನಾದುದರಿಂದ—

ನಿತ್ಯೋತ್ಸವಾ ಮಂಗಲಕರ್ಯಸಿದ್ಧಿರರ್ಘಾಧಿಪೇ ದೇವ ಗುರಾ ಸುಪಿಪ್ಪಕೃತ್ ।

ಎಂಬ ಪ್ರಮಾಣಾನುಸಾರವಾಗಿ ದೇಶಮಧ್ಯದಲ್ಲಿ ಧನಧಾನ್ಯಸಮೃದ್ಧಿಯುಂಟಾಗಿ ಗುರುಜನಗಳು ಕರ್ಮನಿಷ್ಠರಾಗುವರು. ಎಲ್ಲೆಲ್ಲಿಯೂ ಪುಂಗಳಿಸೋತ್ಸವಗಳೊಡನೆ ನಿತ್ಯೋತ್ಸವಗಳು ನಡೆಯುವವು.

ಗುರುವು ಮೇಘಾಧಿಪತಿಯಾದುದರಿಂದ—

ವೀತರೋಗಭಯಾಸ್ಸರ್ವೇ ಗುರಾ ಮೇಘಾಧಿಪೇ ಸತಿ ।

ಭೂಮಿಯು ವೈರುಪಜ್ಯೆಗಳಿಂದ ಧರಿತವಾಗುವದು. ಪದಾರ್ಥಗಳಿಗೆ ಬೆಲೆಯು ಹೆಚ್ಚುತ್ತದೆ. ಮಳೆಯು ಚನ್ನಾಗಿ ಆಗುತ್ತದೆ. ಜನರು ರೋಗಾದಿಗಳಲ್ಲದೆ ಸಂತೋಷದಿಂದಿರುತ್ತಾರೆ.

ಕುಜನು ರಸಾಧಿಪತಿಯಾದುದರಿಂದ —

ಅಗ್ನಿನಾ ದಹ್ಯತೇ ಗ್ರಾಮಃ ಭೂಮೇ ಯದಿ ರಸಾಧಿಪೆ ।

ಎಳ್ಳು ಎಣ್ಣೆ ಬೆಲ್ಲ ತುಪ್ಪ ಮುಂತಾದ ರಸಪದಾರ್ಥಗಳು ಅಧಿಕವಾಗಿ ದೊರಕುವುದಿಲ್ಲ. ಗ್ರಾಮಗಳಲ್ಲಿ ಬೆಂಕಿಯ ಭಯವು ಹೆಚ್ಚುವದು.

ರವಿಯು ನೀರಸಾಧಿಪನಾದುದರಿಂದ—

ರತ್ನ ಮಾಣಿಕ್ಯಮುಕ್ತಾನಾಂ ಹಾಯತೇ ವೃದ್ಧಿರುತ್ತಮಾ ।

ಎಂಬ ಪ್ರಮಾಣಾನುಸಾರವಾಗಿ ರತ್ನಮಾಣಿಕ್ಯ ಮುತ್ತು ಮುಂತಾದವುಗಳು ಹೆಚ್ಚಾಗಿ ದೊರಕುವವು.

ಬಲಭದ್ರನು ಪಶುಸಾಯಕನಾಗಿರುವುದರಿಂದ—

ಪಶವೋ ರೋಗರಹಿತಾ ರಾಜುಕ್ಷೇಕ್ಷಪುಷಾಯಿಗಃ ।

ಸರ್ವದೇಶಗಳಲ್ಲಿ ಸುವೃಷ್ಟಿ ಸಸ್ಯಾಭಿವೃದ್ಧಿಯುಂಟಾಗಿ ಜನಕರುಗಳು ರೋಗಾದಿಗಳ ಭಯವಿಲ್ಲದೆ ಸೌಖ್ಯದಿಂದ ಇರುವವು. ಮತ್ತು ಈ ವರ್ಷ ನವಸಾಯಕರಲ್ಲಿ ಚಂದ್ರನಿಗೆ ಯಾವ ಅಧಿಪತ್ಯವೂ ಇಲ್ಲದುದರಿಂದ ನಾಲಾಗಡ್ಡೆಗಳ ಹೊರತು ಕೆರೆಕೆಳಗಿರುವ ಜಮೀನುಗಳು ಕೃಷ್ಟಿಕರವಾಗಿ ಬೆಳೆಯಲಾರವು.

ಈ ವರ್ಷದಲ್ಲಿ ಉಪನಾಯಕ ಫಲಗಳನ್ನು ಪರಿತೀಲಿಸಲಾಗಿ ಪಶುಗಳಿಗೆ ಪೀಡೆಯುಂಟು. ಕೃಷ್ಣಧ್ಯಾನವು ಚನ್ನಾಗಿ ಬೆಳೆಯುವದು. ದನಕರುಗಳಿಗೆ ಮೇವು ಹೇರಳವಾಗಿ ದೊರೆಯುವದು. ನ್ಯಾಯಾಲಯಗಳಲ್ಲಿ ವ್ಯವಹಾರವು ಕಡಿಮೆಯಾಗುವದು ಯುದ್ಧೋನ್ಮುಖರಾದ ರಾಜರುಗಳು ತಾಟಸ್ಥ್ಯವನ್ನು ವಹಿಸಿ ಸಂಧಾನಮಾಡಿಕೊಳ್ಳಲು ಪ್ರಯತ್ನಿಸುವರು. ಮಳೆಯು ಇಪ್ಪತ್ತು ಭಾಗಗಳಲ್ಲಿ ಹತ್ತುಭಾಗವು ಸಮುದ್ರದಲ್ಲಿಯೂ ಆರುಭಾಗ ಪರ್ವತಗಳಲ್ಲಿಯೂ ನಾಲ್ಕುಭಾಗವು ಭೂಮಿಯಮೇಲೂ ಬೀಳುವದು. ಚೈತ್ರಮಾಸದಲ್ಲಿ ಮುಂಗಾರುಮಳೆಯು ಹೆಚ್ಚಾಗುತ್ತದೆ. ವೈಶಾಖದಲ್ಲಿ ಬಿರುಗಾಳಿಯಿಂದ ಕೂಡಿದ ಸೃಷ್ಟಿಯುಂಟಾಗುವದು. 'ಜ್ಯೇಷ್ಠಮಾಸದಲ್ಲಿ ಮಳೆಯು ಹೆದವಾಗಿ ಸುರಿಯದಿರುವುದರಿಂದ ಬಿತ್ತನೆಯ ಕಾರ್ಯಕ್ಕೆ ಅಡಚಣೆಯಾಗುವದು. ಆಷಾಢಮಾಸದಲ್ಲಿ ಸೋನೆಮಳೆಯು ಪ್ರಾರಂಭವಾಗಿ ಪಶ್ಚಿಮದಲ್ಲಿ ಸಾಮಾನ್ಯವಾದ ಮಳೆಯಾಗುತ್ತದೆ. ಅಧಿಕಶ್ರಾವಣದ ಶುಕ್ಲ ಪಕ್ಷದಲ್ಲಿ ಪ್ರವಾಹಗಳು ಸಾಮಾನ್ಯವಾಗಿ ಬರುತ್ತವೆ. ಕೃಷ್ಣಪಕ್ಷದಲ್ಲಿ ಸಕಲದೇಶಗಳಲ್ಲಿಯೂ ಸಂಪೂರ್ಣ ವೃಷ್ಟಿಯಾಗಿ ಕೆರೆಕಟ್ಟೆಗಳು ತುಂಬುತ್ತವೆ. ನಿಜಶ್ರಾವಣ ಭಾದ್ರಪದಗಳಲ್ಲಿ ಖಂಡವೃಷ್ಟಿಯಾಗುತ್ತದೆ. ಆಶ್ವಯುಜದಲ್ಲಿ ಸುವೃಷ್ಟಿಯಾಗುತ್ತದೆ. ಕಾರ್ತಿಕದಲ್ಲಿ ಅನೂರಾಧಾ ಮಳೆಯು ಚನ್ನಾಗಿ ಬೀಳುವದು. ಈ ರೀತಿ ಗಣಿತಶಾಸ್ತ್ರಜ್ಞರ ಉಕ್ತಿಗಳನುಸಾರವಾಗಿ ಈ ವರ್ಷವೆಲ್ಲಾ ಪ್ರಾಯಶಃ ಪ್ರಜೆಗಳಿಗೆ ಸುಖಪ್ರಾಪ್ತಿಯೆಂದು ನಿಶ್ಚಯವಾಗುವದು. ಈ ಪ್ರಮಾಥಿಸಂವತ್ಸರದಲ್ಲಿ ನಮ್ಮ ಭಾರತೀಯರಿಗೆ ಸಕಲಸಂಪತ್ಸಮೃದ್ಧಿಯನ್ನು ಅನುಗ್ರಹಿಸಿ ನಮ್ಮ ಭರತಖಂಡವನ್ನು ಸುಖಶಾಂತಿಮಯವನ್ನಾಗಿ ಮಾಡಲೆಂದು ಪರಮದಯಾತೀಲನಾದ ಪರಮೇಶ್ವರ ನನ್ನು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು.

ಅಲಹಾಬಾದ್ ವಿಶ್ವವಿದ್ಯಾನಿಲಯದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿದ್ದ ಶ್ರೀ ಬಹದ್ದೂರ್‌ರವರನ್ನು ಬೆಂಗಳೂರು ತಾತಾ ವಿಜ್ಞಾನಶಾಲೆಯ 'ರಿಜಿಸ್ಟ್ರಾರ್' ಆಗಿ ನೇಮಕಮಾಡಿದ್ದರಿಂದ ಅವರು ಕಳೆದ 17 ನೆಯ ತಾರೀಖಿನ ಪ್ರಾತಃಕಾಲ ಬೆಂಗಳೂರಿಗೆ ಬಂದು 'ರಿಜಿಸ್ಟ್ರಾರ್' ರವರ ಅಧಿಕಾರವನ್ನು ಶ್ರೀ ಜೋನ್ಸ್‌ರವರಿಂದ ವಹಿಸಿಕೊಂಡರು.

ನಮ್ಮ ಸಂಸ್ಥಾನದ ನಾನಾ ಇಲಾಖೆಗಳಲ್ಲಿ 32 ವರ್ಷಗಳಕಾಲ ಬಹಳ ದಕ್ಷತೆಯಿಂದ ಕೆಲಸಮಾಡಿ ಕೊನೆಗೆ ಪ್ರಥಮ ಸಚಿವರ ಸ್ಥಾನದಲ್ಲಿದ್ದು ನಿವೃತ್ತರಾದ ರಾಜಮಂತ್ರ ಪ್ರವೀಣ ಮೈ|| ಎಸ್. ಪಿ. ರಾಜಗೋಪಾಲಾಚಾರಿಯವರನ್ನು ಗ್ವಾಲಿಯರ್ ಸಂಸ್ಥಾನದವರು ತಮ್ಮ ಸಂಸ್ಥಾನದ ರಿವಿನ್ಯೂ ನುಂಪ್ರಿಗಳನ್ನಾಗಿ ನೇಮಿಸಿಕೊಂಡಿರುವರೆಂದು ತಿಳಿದುಬರುತ್ತದೆ. ಮೈ|| ರಾಜಗೋಪಾಲಾಚಾರಿಯವರು ನಮ್ಮ ಸಂಸ್ಥಾನದ ಪ್ರಥಮ ಸಚಿವರಾಗಿದ್ದಾಗ ಎರಡು ಸಲ ಹೆಂಗಾಮಿಯಾಗಿ ದಿವಾನರ ಪದವಿಯನ್ನಲಂಕರಿಸಿದ್ದರು.

ಸ್ಕೂಲ್ ಮಾಸ್ಟರೂ ಲಾಹೋರಿನ ಲಕ್ಷ್ಮೀ ಇನ್ಷ್ಯೂರೆನ್ಸ್ ಕಂಪೆನಿಯ ವಿಜಂಟರೂ ಎಂದು ಹೇಳಲ್ಪಟ್ಟ ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಎಂಬವರ ಮೇಲೆ ನಂಬಿಕೆ ದ್ರೋಹಮಾಡಿ ಪರರ ಹಣವನ್ನು ದುರುಪಯೋಗಪಡಿಸಿಕೊಂಡರೆಂಬ ಆಪಾದನೆಯು ಸ್ಥಿರಪಟ್ಟುದರಿಂದ ಬೆಂಗಳೂರು ನಗರದ ನ್ಯಾಯಾಧೀಶರಾದ ಶ್ರೀ ರಾಮಸ್ವಾಮಯ್ಯನವರು ಅಪರಾಧಿಗೆ 4 ತಿಂಗಳು ಕಠಿನ ಶಿಕ್ಷೆ ಮತ್ತು 300 ರೂಗಳ ದಂಡವನ್ನು, ದಂಡ ಕೊಡದಿದ್ದರೆ

ಮತ್ತೆರಡು ತಿಂಗಳು ಶಿಕ್ಷೆಯನ್ನು ಅನುಭವಿಸಬೇಕೆಂದು ತೀರ್ಪಿತ್ತರು. ಅಪರಾಧಿಗಳು ಸೆಷನ್ಸಿಗೆ ಅಪೀಲು ಮಾಡಿರುವರು.

ಪಾರ್ಸಿ ಕೋಮಿನವರು ತಮ್ಮಜನರ ಮೃತಶರೀರಗಳನ್ನು ಸಮಾಧಿ ಮಾಡುವುದಾಗಲಿ ಸುಡುವುದಾಗಲಿ ಮಾಡದೆ ಅವುಗಳನ್ನು ಅದಕ್ಕಾಗಿ ನಿರ್ಮಿತವಾಗಿರುವ (ಟವರ್ ಆಫ್ ಸೈಲೆನ್ಸ್) ಶ್ರೇತಗೃಹದ ಮೇಲ್ಭಾಗದಲ್ಲಿ ಹದ್ದು ಕಾಗೆಗಳಿಗೆ ಆಹಾರವಾಗುವಂತೆ ಇಡುವ ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಇಂತಹ ರುದ್ರಭೂಮಿಯು ಬೊಂಬಾಯಿಯಲ್ಲೊಂದಿದೆ. ಬೆಂಗಳೂರಿನಲ್ಲಿ ವಾಸಿಸುವ ಈ ಕೋಮಿನವರ ಅನುಕೂಲತೆಗಾಗಿ ಸವಿಾಪದಲ್ಲೇ ಇಂಥದೊಂದು 'ಟವರ್ ಆಫ್ ಸೆಲೆನ್ಸ್' ನಿರ್ಮಿಸಬೇಕೆಂದು ಬಹಳ ದಿನಗಳಿಂದ ಪ್ರಯತ್ನ ನಡೆಯುತ್ತಿದ್ದು ಈಗ ಫಲಕಾರಿಯಾಗಿರುವುದಾಗಿ ತಿಳಿದು ಬರುತ್ತದೆ. ಈ ಕಟ್ಟಡವನ್ನು ಕಟ್ಟಲು ಹೆಬ್ಬಾಳಿನಬಳಿ ಸುಮಾರು 4000 ರೂ. ಗಳನ್ನು ಕೊಟ್ಟು ಜಮೀನು ಕೊಳ್ಳಲಾಗಿದೆ. ಸರ್ಕಾರದವರು ಅನುಮತಿಯನ್ನಿತ್ತಿದ್ದಾರೆ. ಬರುವ ಏಪ್ರಿಲ್ ತಿಂಗಳು ಕಟ್ಟಡದ ಶಂಕುಸ್ಥಾಪನೋತ್ಸವವು ನಡೆಯಲಿದೆ. ಆ ಸಮಯಕ್ಕೆ ಬೊಂಬಾಯಿನಿಂದ 800 ಮಂದಿ ಪಾರ್ಸಿಗಳೂ ಮತ್ತು ಆ ಕೋಮಿನ ಗುರುಗಳೂ ಸ್ಪೆಷಲ್ ರೈಲಿನಲ್ಲಿ ಆಗಮಿಸುವರಾಗಿದ್ದಾರೆ.

ಶ್ರೀಜಗದ್ಗುರು ರಂಭಾಪುರೀ ಪೀಠಕ್ಕೆ ದ್ವಿತೀಯ ಸಚಿವರ ಆಗಮನ.

ಮೈಸೂರು ಸಂಸ್ಥಾನದ ದ್ವಿತೀಯ ಸಚಿವರಾದ ಮೆ॥ ಕೆ. ವಿ. ಆನಂತರಾಮಯ್ಯರವರು ಈ ತಿಂಗಳು ೧೩ನೆಯ ತಾ॥ ದಿವಸ ಶ್ರೀಮದ್ರಂಭಾಪುರೀ ಧರ್ಮಸೀರಕ್ಕೆ ದಯಮಾಡಿಸಿ ಪೀಠ ದರ್ಶನಮಾಡಿಕೊಂಡು ಶ್ರೀಜಗದ್ಗುರುಗಳ ಸನ್ನಿಧಿಯಲ್ಲಿ ೧ ಘಂಟೆಯ ವರೆಗಿದ್ದು ಆವರ ತಪೋನಿಷ್ಠಾನಾದಿ ವಿಷಯಗಳನ್ನು ವಿಚಾರಿಸಿ ಮುಂದಕ್ಕೆ ಪ್ರಯಾಣಮಾಡಿದರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ತಿರುವಾಂಕೂರು ಸ್ಟೇಟ್ ಕಾಂಗ್ರೆಸ್.

ಇನ್ನು ಒಂದು ವಾರದೊಳಿಗಾಗಿ ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸು ಮಾದಕಪದಾರ್ಥ ಮಾರಾಟದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದನ್ನೂ, ಸಮುದ್ರ ತೀರದಲ್ಲಿ ಉಪ್ಪು ತಯಾರಾಗುವುದನ್ನೂ, ತಮ್ಮ ಸ್ವಯಂ ಸೇವಕರಿಗೆ ಯೂನಿಫಾರಂ ಉಪಯೋಗಿಸುವುದನ್ನೂ ಪ್ರಾರಂಭಿಸುವದಾಗಿ ಸೂಚಿಸಿದೆ. ಮಾರ್ಚ್ 25 ನೆಯ ತಾರೀಖಿನಿಂದ ತಿರುಗಿ ಸತ್ಯಾಗ್ರಹವನ್ನಾರಂಭಿಸಬೇಕೆಂದು ಸ್ಟೇಟ್ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತೀರ್ಮಾನಿಸಿದೆ.

ರಾಜಕೋಟೆಯ ವಕೀಲರು ಸರ್. ಸಿ. ಪಿ. ರಾಮಸ್ವಾಮಯ್ಯರವರ ಸಹಾಯವನ್ನು ಕೋರಿದರು

ರಾಜಕೋಟೆಯಲ್ಲಿ ಈಚೆಗೆ ನಡೆದ ಪ್ರಸಂಗಗಳ ಸಂಬಂಧವಾಗಿ ಫೆಡರಲ್ ಕೋರ್ಟಿಗೆ ಒಪ್ಪಿಸಲ್ಪಟ್ಟಿರುವ ವ್ಯವಹಾರದಲ್ಲಿ ತಮ್ಮ ಪರವಾಗಿ ವಕಾಲತ್ತನ್ನು ವಹಿಸಬೇಕೆಂದು ರಾಜಕೋಟೆಯ ವಕೀಲರು ಸರ್. ಸಿ. ಪಿ. ರಾಮಸ್ವಾಮಿಯವರನ್ನು ಪ್ರಾರ್ಥಿಸಿದರೆಂಬೊ, ಆದಕ್ಕೆ ಸಿ. ಪಿ. ರಾಮಸ್ವಾಮಿಅಯ್ಯರವರು ತಾವು ಈಗ ವಕಾಲತ್ತುವಹಿಸಿ ಕೆಲಸಮಾಡುತ್ತಿರುವವಿಲ್ಲವೆಂದೂ, ಮತ್ತು ದೇಶೀಯ ಸಂಸ್ಥಾನಗಳ ಸಮಸ್ಯೆಯ ವಿಚಾರದಲ್ಲಿ ಆಡಳಿತ ಸಂಬಂಧವಿಟ್ಟುಕೊಂಡಿರುವದರಿಂದ ವಕಾಲತ್ತು ವಹಿಸಲು ಸಾಧ್ಯವಿಲ್ಲವೆಂದೂ ಉತ್ತರವಿತ್ತಿರುವದಾಗಿ ತಿಳಿದುಬರುತ್ತದೆ.

ನರೇಂದ್ರರಿಗೆ ವೈಸರಾಯರ ಹಿತಬೋಧೆ.

ನರೇಂದ್ರ ಮಂಡಲದ ಸಭೆಯಲ್ಲಿ ವೈಸರಾಯರು ಮಾಡಿದ ಭಾಷಣದಲ್ಲಿ ನರೇಂದ್ರರ ಮುಂದಿನ ನಡವಳಿಕೆಯು ಹೇಗಿರಬೇಕೆಂಬುದಕ್ಕು ಸೂಚಿಸುತ್ತ–" ಭಾರತದ ಪ್ರಭುಗಳು ಬ್ರಿಟಿಷ್ ಸಾರ್ವಭೌಮ ಸರ್ಕಾರದ ಬೆಂಬಲದಿಂದ ಸಂಸ್ಥಾನಗಳಲ್ಲಿ ಉಂಟಾಗಿರುವ ಅಶಾಂತಿಯನ್ನು ಮೆಟ್ಟಿ ಹಾಕಬಹುದೆಂಬ ಭರವಸೆಯ ಮೇರೆ ಸುಮ್ಮನೆ ಕುಳಿತುಕೊಳ್ಳುವಂತಿಲ್ಲ. ನರೇಂದ್ರರ ಪ್ರಭುತ್ವವು ನೈಕ್ಷಿಗತವಾದುದು. ಆದ್ದರಿಂದ ಅದು ದಯೆಯಿಂದ ಕೂಡಿರ ಬೇಕು. ರಾಜರುಗಳು ತಮ್ಮ ಸಂಸ್ಥಾನಗಳೊಳಗೇ ಇದ್ದು, ಸಾರ್ವಜನಿಕ ಹಣದಲ್ಲಿ ವಿಶೇಷ ಪ್ರವೃತ್ತಿಯನ್ನು ತಮ್ಮ ಸ್ವಂತಕ್ಕೆ ಖರ್ಚುಮಾಡದೆ ಆಡಳಿತವಿಚಾರಗಳನ್ನು ಗೋಡ್ಯವಾಗಿಡದೆ ಇದ್ದರೆ ಅದು ದಯಾಳು ಪ್ರಭುತ್ವ ವೆಂದು ಶೋರುವುದು. ರಾಜಕೋಟೆಯ ಉದಾಹರಣೆಯು ಮುಂದಿರುವಾಗ ಈಗಲಾದರೂ ನರೇಂದ್ರರು ಸರಿಯಾಗಿ ವರ್ತಿಸಬೇಕು" ಎಂದು ಹೇಳಿದರು.

ಗಡಿನಾಡಿನಲ್ಲಿ ಗಲಭೆ

ಕೆಲವು ದಿವಸಗಳಿಂದ ಗಡಿನಾಡಿನಲ್ಲಿ ನಡೆಯುತ್ತಿದ್ದ ಮನುಷ್ಯಾಪಹಾರವೇ ಸೊವಲಾದ ಪುಂಡಾಟಿಕೆಯು ನಿಂತಂತೆ ಕಾಣುತ್ತಿತ್ತು. ಈಗ ತಿರುಗಿ ಕಳೆದವಾರ ವಾಯುವ್ಯ ಸರಹದ್ದಿನಲ್ಲಿರುವ ಧಾಕ್ಕೈ ಎಂಬ ಗ್ರಾಮಕ್ಕೆ ಕಾಡು ಜನರು ನುಗ್ಗಿ ನಾಲ್ವರು ಯನ್ವಸಸ್ಥರನ್ನೂ, ಹತ್ತು ವರ್ಷ ವಯಸ್ಸಿನ ಒಬ್ಬಳು ಹಿಂದೂ ಹುಡಗಿಯನ್ನೂ ಎತ್ತಿಕೊಂಡು ಹೋದರೆಂಬ ಸಮಾಚಾರ ಬಂದಿದೆ. ಪೇಲ್ಶಂಡ ಗ್ರಾಮವೆ ಆಕ್ಸಸಕ್ಕವಲ್ಲಿರುವ ಗ್ರಾಮಗಳಲ್ಲೂ ಪುಂಡರು ಲೂಟನಡೆಸಿದುದರಿಂದ ಅಲ್ಲಿಯ ಜನರೆಲ್ಲಾ ಭೀತರಾಗಿದ್ದಾರೆ.

ಹೆಬ್ಬೆಟ್ಟಿನ ಗುರುತಿಗೆ ಬದಲು ರಕ್ತನಾಳ!

ಡಾಕ್ಟರ್ ಎನ್ಸೋಫ್ಲೇರ್ಕರ್ಸ್ ಎಂಬ ಜರ್ಮನ್ ಡಾಕ್ಟರು ಹತ್ತುದ ಏಂಬದಿಯ ರಕ್ತನಾಳದ ಮೂಲಕ ಮನುಷ್ಯನ ಪತ್ತೆ ಹಚ್ಚುವ ಶೋಧ ನಡೆಸಿದ್ದಾರೆ ಈ ರಕ್ತನಾಳಗಳು ಒಬ್ಬನಲ್ಲಿರುವಂತೆ ಇನ್ನೊಬ್ಬನಲ್ಲಿಲ್ಲವಾದ್ದರಿಂದ ಈ ಅಲ್ಪ ವ್ಯತ್ಯಾಸಗಳಿಂದ ಬಹಳ ಉಪಕಾರವಾಗಬುವಂತೆ! ಇನ್ನು ಮುಂದೆ ಹೆಬ್ಬೆಟ್ಟಿನ ಗುರುತಿನ ಗದಲು ರಕ್ತನಾಳಗಳ ಗುರುತನ್ನು ತೆಗೆಯಬಹುದೆಂದೂ, ಖೂನಿ ಮಾಡಿದವರ ಪತ್ತೆಗೆ ಇದರಿಂದ ಬಹಳ ಸಹಾಯವಾಗಬಹುದೆಂದೂ ಯೋಚಿಸುತ್ತಿದ್ದಾರೆ.

ಹೆರ್ ಹಿಟ್ಲರರಿ ಪ್ರಕಟಣೆ

ಹೆರ್ ಹಿಟ್ಲರವರ ಪುಕಟಣೆಯನ್ನು ಹೆರ್ವಾ ರಿಚ್ ಟ್ರಾಫರು ಆಕಾಶವಾಣಿಯ ಮೂಲಕ ಪ್ರಪಂಚಕ್ಕೆಲ್ಲ ಸಾರಿದರು. ಆದರಲ್ಲಿ ಬೋಹೇಮಿಯ ಮತ್ತು ಮೋರೇವಿಯ ಆಡಳಿತವಿಚಾರವನ್ನು ಸೂಚಿಸಿ, ಸಾವಿರವರ್ಷಗಳವರೆಗೆ ಜರ್ಮನಿಗೆ ಸೇರಿದ್ದ ಈ ದೇಶಗಳು ಬಲಪ್ರಯೋಗದಿಂದಲೂ ಮೂರ್ಖತನದಿಂದಲೂ ಜರ್ಮನಿಯಿಂದ ಅಗಲಿ ಸಲ್ಪಟ್ಟವೆಂದು ಸೂಚಿಸಲಾಗಿದೆ. ಮತ್ತು ಇದುವರೆಗೂ ಜೆಕೋಸ್ಲೋವೇಕಿಯಾ ದೇಶಕ್ಕೆ ಸೇರಿದ್ದು ಈಗ ಜರ್ಮನಿ ಸೈನಿಕರಿಂದ ಆಕ್ರಮಿಸಲ್ಪಟ್ಟಿರುವ ಪ್ರದೇಶಗಳಲ್ಲಿರುವ ಜೆಕ್ ಜನರೆಲ್ಲ ಜರ್ಮನಿಯ "ರೀಚ್" ಮಹಾಸಭೆಯ ರಕ್ಷಣೆಯಲ್ಲಿರುವರೆಂದೂ ಬೊಹೇಮಿಯ ಮತ್ತು ಮೋರೇವಿಯ "ಪೋಟಿಕ್ಟರೇಟ್ಸ್" ಎಂಬ ಹೆಸರಿನಿಂದ ಪ್ರಭುತ್ವವನ್ನು ನಡೆಸಿಕೊಂಡು ಬರಲಾಗುವದೆಂದೂ ಆ ರಾಜಾಜ್ಞೆಯಲ್ಲಿ ಸೂಚಿಸಲಾಗಿದೆ. ಆ ಪ್ರಾಂತ್ಯಗಳಲ್ಲಿರುವ ಜರ್ಮನರೆಲ್ಲರೂ ಜರ್ಮನಿಯ ಪ್ರಜೆಗಳೆಂದು ಭಾವಿಸಲ್ಪಟ್ಟು ಜರ್ಮನಿಯ ಪ್ರಭುತ್ವಕ್ಕೆ ಒಳಪಡುವರೆಂದು ನಿರೂಪಿಸಲಾಗಿದೆ. ರಕ್ಷಣೆಗೆ ಒಳಪಟ್ಟ ದೇಶಗಳ ಆಡಳಿತದ ಮುಖ್ಯಾಧಿಕಾರಿಯು ಜರ್ಮನಿ ರಾಜ್ಯಾಧ್ಯಕ್ಷರ ನೆಂಬಿಕೆಗೆ ಪಾತ್ರರಾದ ವರ್ಗದವರಾಗಿರಬೇಕೆಂದು ಪ್ರಕಟನೆಯಲ್ಲಿ ಸೂಚಿಸಲಾಗಿದೆ.

ಜರ್ಮನಿಯು ಜೆಕೋಸ್ಲೋವೇಕಿಯಾ ದೇಶವನ್ನು ಸುಂಗಿತು!

ನಾಜಿಗಳ ಪಿತೂರಿಯಿಂದಲೂ, ಇತರ ಮಹಾರಾಜ್ಯಗಳ ಮಧ್ಯಸ್ಥಿಕೆಯಿಂದಲೂ ವಿಶೇಷವಾಗಿ ಜರ್ಮನಿಯು ವಾಸಮಾಡುತ್ತಿದ್ದ ಸೂಡೇಟ್ ಪ್ರಾಂತ್ಯವನ್ನು ಜರ್ಮನಿಗೊಪ್ಪಿಸಿ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸುವುದಾಗಿ ಅವರುಗಳಿಂದ ಭರವಸೆಪಡೆದು ಒದಗಿದ್ದ ಕತಿನ ಸಮಸ್ಯೆಯಿಂದ ಪಾರಾದೆವೆಂದು ತಿಳಿದಿದ್ದ ಜಕ್ಕರ ಮತ್ತು ಅವರಿಗೆ ರಕ್ಷಣಾಭರವಸೆಯನ್ನಿತ್ತ ಬ್ರಿಟ್ ಮತ್ತು ಫ್ರಾನ್ಸುಗಳ ತಪ್ಪು ಈಗ ಅವರುಗಳಿಗೆ ಮನವರಿಕೆಯಾಗಿದೆ. ಸೂಡೆಟ್‌ಪ್ರಾಂತ್ಯದ ಆಕ್ರಮಣದಿಂದ ತೃಪ್ತವಾಗದ ಜರ್ಮನಿಯು ಗುಪ್ತವಾಗಿ ಪಿತೂರಿನಡೆಸಿತು. ಅದನ್ನು ತಿಳಿದ ಪ್ರೇಗ್‌ನಗರದಲ್ಲಿದ್ದ ಕೇಂದ್ರಸರ್ಕಾರದವರು ಪಿತೂರಿಗೊಳಪಟ್ಟ ಪ್ರಾಂತೀಯ ಮಂತ್ರಿಗಳನ್ನು ನಿವೃತ್ತಗೊಳಿಸಿ ಹೊಸಮಂತ್ರಿಗಳನ್ನು ನಿಯಮಿಸಿದರು. ನಿವೃತ್ತರಾದ ಮಂತ್ರಿಗಳು ಪಿತೂರಿಯನ್ನು ಮುಂದುವರಿಸಿ ತಮಗೆ ಸಹಾಯನೀಡಬೇಕೆಂದು ಹಿಟ್ಲರನನ್ನು ಕೇಳಿಕೊಂಡರು. ಇಂಥ ಸಮಯವೊದಗಲೆಂದೇ ಕಾಯ್ದಿದ್ದ ಹಿಟ್ಲರನು ಸೈನ್ಯಸಹಾಯವನ್ನು ಕಳುಹಿಸಿದನು. ಮತ್ತು ಜರ್ಮನಿ ಸರ್ಕಾರದವರು ಜೆಕ್‌ಪ್ರಜೆಗಳನ್ನೆಲ್ಲಾ ಜರ್ಮನಿಯ ರೀಷ್‌ಸಭೆಯ ರಕ್ಷಣೆಗೆ ಒಳಪಡಿಸಲಾಗಿದೆ ಎಂದು ಪ್ರಕಟಿಸಿಬಿಟ್ಟರು ಅಂತೂ ಬಹು ಸುಲಭವಾಗಿ ಆಸ್ಟ್ರಿಯವನ್ನು ನುಂಗಿದಂತೆಯೇ ಜೆಕೋಸ್ಲೋವೇಕಿಯವನ್ನು ಎಲ್ಲರೂ ನೋಡುತ್ತಿರುವಾಗಲೇ ಜರ್ಮನಿಯು ನುಂಗಿಬಿಟ್ಟಿತು. ಮುಂದೆ ಇನ್ನಾವ ರಾಜ್ಯದ ಸರದಿಬರುತ್ತದೆಂಬುದನ್ನು ನೋಡಬೇಕಾಗಿದೆ.

ವಿಚಿತ್ರ ವಿವಾಹಪದ್ಧತಿ

ಸಯ್ಯಾಂ ರಾಜ್ಯದಲ್ಲಿ ಮೂವತ್ತು ವರ್ಷಗಳ ವರೆಗೂ ವಿವಾಹವಿಲ್ಲದಿರುವ ಸ್ತ್ರೀಯರೆಲ್ಲರೂ ಸರ್ಕಾರಕ್ಕೆ ತಮ್ಮ ವಿಷಯವನ್ನು ತಿಳಿಸಬೇಕು ಅವರು ಕೂಡಲೆ ಅವಳಿಗೆ ಒಬ್ಬ ವರನನ್ನು ಗೊತ್ತು ಮಾಡುವರು. ಇದು ಅಲ್ಲಿ ಬಹುಕಾಲದಿಂದಲೂ ನಡೆದುಬಂದಿರುವ ಪದ್ಧತಿ. ಹೀಗೆ ಸರ್ಕಾರದಿಂದ ಗೊತ್ತಾದ ವರನು ಸ್ತ್ರಿಯರಿಗೆ ಆಸ್ಪೀನೂ ಅನುಕೂಲವಾಗಿರುವುದಿಲ್ಲ ಯಾತಕ್ಕೆಂದರೆ ಸರಕಾರದವರೆ ವರವಲ್ಲಿರುವ ಅವಿವಾಹಿತ ವರರೆಲ್ಲರೂ ಅಪರಾಧಗಳನ್ನು ಮಾಡಿ ಬಂದೀಖಾನೆ ಶಿಕ್ಷೆಯನ್ನನುಭವಿಸುತ್ತಿರುವವರು. ಸಪ್ಪೃಹಣಿಯ ಪ್ರಭಾವದಿಂದ ಪುರುಷರು ಮರ್ನಷತೆಗೆ ಬೀಳುವುದಿಲ್ಲವೆಂದೂ ಆದ್ದರಿಂದ ಒಬ್ಬ ಅಪರಾಧಿಗೆ ಸುಶೀಲಳಾದ ಒಬ್ಬ ಕನ್ಯೆಯನ್ನು ವಿವಾಹ ಮಾಡುವುದರಿಂದ ಆ ಅಪರಾಧಿಯು ಆ ಹೆಂಗಸಿನ ಸಹವಾಸದಿಂದ ಸತ್ಪ್ರಜೆಯಾಗುವನೆಂದು ಆ ಸರ್ಕಾರದವರು ನಂಬಿರುತ್ತಾರೆ ಸಯ್ಯಾಮಿನಲ್ಲಿ ಅತ್ಯಲ್ಪ ಅಪರಾಧಕ್ಕೂ ಸೆರೆಮನೆ ಶಿಕ್ಷೆಯು ಸಾಮಾನ್ಯವಾಗಿದೆ. ಅವಿವಾಹಿತಸ್ತ್ರೀಯನ್ನು ಅಧಿಕಾರಿಗಳು ಪರಿಚಯಮಾಡಿಕೊಡುತ್ತಾರೆ. ಖೈದಿಯು ನೊಪಲನೆಯ ಅಪರಾಧಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದರೆ ಅವನು ಹತ್ತಾರು ಹೆಂಗಸರ ಪೈಕಿ ಯಾರನ್ನಾದರೂ ವರಿಸಿ ತನ್ನ ನಿಶ್ಚಯವನ್ನು ಇಪ್ಪತ್ತುದಿನಗಳೊಳಗಾಗಿ ತಿಳಿಸಬೇಕೆಂದು ಅವಕಾಶ ಕೊಡುವರು. ಖೈದಿಯು ಅನೇಕಬಾರಿ ಶಿಕ್ಷೆ ಅನುಭವಿಸಿದವನಾದರೆ ಅವನು ಹೆಣ್ಣು ನೋಡಿಹೊಡನೆಯೇ ತನ್ನ ಇಷ್ಟವನ್ನು ಹೇಳಬೇಕು ಅವನು ಇಂಥವಳನ್ನೇ ವಿವಾಹವಾಗಬೇಕೆಂದು ಸರ್ಕಾರವು ಬಂದಿವಾನನ್ನು ನಿರ್ಬಂಧಪಡಿಸುವುದಿಲ್ಲ. ವಿವಾಹಕ್ಕೆ ಇಷ್ಟು ಅನುಕೂಲವಿರುವುದನ್ನು ನೋಡಿ ಆ ದೇಶದ ಯುವಕರು ತಾವೇ ವಧುವನ್ನು ಹುಡುಕುವ ಬದಲು ಯಾವುದಾದರೂ ಸಣ್ಣ ಅಪರಾಧ ಮಾಡಿ ಬಂದೀಖಾನೆಗೆ ಸೇರಿ ಅನಂತರ ಅಲ್ಲಿ ವಿವಾಹವಾಗುವುದುಂಟೆಂದು. ತಿಳಿದುಬರುತ್ತದೆ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯ ವಿಚಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯು ಪ್ರತಿವರ್ಷ ಫಾಲ್ಗುನ ಶು॥ ೧೩ ಮಿತಿಯಲ್ಲಿ ಬರುತ್ತಿರುವದು ಎಲ್ಲರಿಗೂ ತಿಳಿದ ವಿಷಯವಷ್ಟೆ! ಆದರೆ ಈ ವರ್ಷ ಶು॥ ೧೩ ದಿವಸ ಏಕೆ ಬಂದಿತೆಂದು ಅನೇಕರು ನಮ್ಮನ್ನು ವಿಚಾರಿಸುತ್ತಿರುವರು. ಮಘಾ ನಕ್ಷತ್ರವು ಯಾವ ದಿವಸ ಪ್ರಾತಃಕಾಲದಲ್ಲಿರುವದೋ ಆ ದಿವಸವೇ ಈ ಆಚಾರ್ಯ ಭಗವತ್ಪಾದರ ಜಯಂತಿಯನ್ನು ನೆರವೇರಿಸುವದು ಅನಾದಿಕಾಲದಿಂದ ಬಂದ ಪದ್ಧತಿಯಾಗಿದೆ. ಈ ವರ್ಷ ಮಘಾ ನಕ್ಷತ್ರವು ಶು॥ ೧೩ ದಿವಸ ಇದ್ದುದರಿಂದ ಆ ದಿವಸವೇ ಜಯಂತಿಯ ದಿವಸವೆಂಬ ವಿಷಯವನ್ನು ಸರ್ವರೂ ಗಮನಿಸಬೇಕಾಗಿದೆ.

ಮುಳಗುಂದ

ಧಾರವಾಡ ಡಿ|| ಮುಳಗುಂದ ಗ್ರಾಮದಲ್ಲಿ ಪದ್ಧತಿ ಪ್ರಕಾರ ತಿಗಡಿಕೇರಿ ನಂದೀಶ್ವರದೇವಸ್ಥಾನದಲ್ಲಿ ಪುರಪ್ರಮುಖರ ಸಹಾಯದಿಂದ ರೇಣುಕರ ಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ದೇವಸ್ಥಾನವು ತಳಿರು ತೋರಣ ರಂಭಾಸ್ತಂಭಗಳಿಂದ ಅಲಂಕರಿಸಲ್ಪಟ್ಟಿತ್ತು. ಮೊದಲೇ ಹುಸ್ತಪತ್ರಿಕೆಗಳನ್ನು ಪ್ರಸಿದ್ಧಿಸಿದ ಮೇರೆಗೆ ಸಾಯಂಕಾಲ ೬ ಘಂಟೆಗೆ ಜಯಂತೀ ಜಾಲಕರಾದ ಶ್ರೀಮಾನ್ ಶೆಟ್ರ ಪಂಚಾಕ್ಷರಪ್ಪನವರು, ಉಜ್ಜಣ್ಣವರ ಪ್ರಭಣ್ಣನವರು, ಗಂಗಪ್ಪಾ ಹುಡೇದ ಇವರುಗಳ ಪ್ರಾರ್ಥನೆಯ ಮೇರೆಗೆ ಪುರಪ್ರಮುಖರಾದ ಯಜಮಾನ ಕರವೀರಪ್ಪನವರು ವಾಲಿ ಲಿಂಗಪ್ಪನವರು ಬಟ್ಟೂರ, ಅಡವಿಪ್ಪನವರು ಮತ್ತು ಶ್ರೀಮಾನ್ ಶಿವಪ್ಪನವರು ಕೋರಿ ಶೆಟ್ರು, ದೊಡ್ಡ ಬಸಪ್ಪನವರು ಕಾಗಿ ಮಾಸ್ತರ, ಚನ್ನಪ್ಪನವರು ಮತ್ತು ಇನ್ನಿತರ ವೀರಶೈವ ಹಾಗೂ ವೀರಶೈವೇತರರೂ ಆಗಮಿಸಿದ್ದರು.

ಜಗದಾಚಾರ್ಯರ ಪಲ್ಲಕ್ಕಿ ಮಹೋತ್ಸವವು ವಾದ್ಯಗಳಿಂದಲೂ ಭಜನಾಮೇಳಗಳಿಂದಲೂ ವಿಜೃಂಭಣೆಯೊಡನೆ ಶ್ರೀ ನಂದೀಶ್ವರ ದೇವಸ್ಥಾನದಿಂದ ಹೊರಟು ಪುರಪ್ರಮುಖ ಬೀದಿಗಳಲ್ಲಿ ಹಾಯ್ದು ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನಕ್ಕೆ ಬಂದು ತಲ್ಪಿತು ಬಳಿಕ ಸಭೆಗೂಡಿತು ಸರ್ವರ ಕೋರಿಕೆಯಂತೆ ಶ್ರೀಮಾನ್ ದೊಡ್ಡ ಬಸಪ್ಪನವರು ಕಾಗಿ ಮಾಸ್ತರ ಇವರು ವ್ಯಾಖ್ಯಾನವನ್ನು ಆರಂಭಿಸಿದರು ಜನಸ್ತೋಮವು ಚಿತ್ರದಲ್ಲಿ ಬರೆದ ಬೊಂಬೆಗಳಂತೆ ಸ್ಥಾನದಲ್ಲಿ ಕದಲದೆ ಕೊನೆಯ ವರೆಗೂ ಎಲ್ಲಾ ವಿಷಯಗಳನ್ನು ಗ್ರಹಣಮಾಡುತ್ತಿತ್ತು ಭಾಷಣಕಾರರು—ಪರಮಪವಿತ್ರವಾದ ವೀರಶೈವ ಮತವನ್ನು ಜಗದಾದಿಯಲ್ಲಿ ಶ್ರೀಮದ್ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದರು. ಇವರುಗಳಲ್ಲಿ ಒಬ್ಬರಾದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಈ ಶುಭದಿನದ ಪ್ರಪಂಚಕ್ಕೆ ಪ್ರಾಪ್ತವಾಗಿದೆ ಎಂದು ಪ್ರಾರಂಭಿಸಿ ಶ್ರೀಜಗದ್ಗುರು ರೇಣುಕಭಗವತ್ಪಾದರು ಮಾಡಿದ ಲೀಲೆಗಳಲ್ಲಿ ಕೆಲವಂಶಗಳನ್ನು ಹೇಳುತ್ತ ಆಗಸ್ತ್ಯರಿಗೂ ರೇಣುಕರಿಗೂ ನಡೆದ ಸಂವಾದ ಮತ್ತು ರೇಣುಕಾಚಾರ್ಯರ ಕಾಲನಿರ್ಣಯ, ಹಾಗೂ ಪಂಚಾಚಾರ್ಯರು ಮತ್ತ ವತಸಿದ್ಧಾಂತಗಳೂ, ಆದಿ ಪಂಚಾಚಾರ್ಯರ ಅವತಾರ, ವೀರಶೈವಪ್ರಾಚೀನತೆ. ಹಾಗೂ ಪಂಚಪೀಠಗಳ ಪ್ರಾಚೀನತೆ ಅವುಗಳನ್ನು ಸರ್ವ ಭಕ್ತಾದಿಗಳೂ ಕಾಪ್ಯಮಾಡಿಕೊಂಡು ಬಂದಿರುವ ರೀತಿ, ವಿಶಿಷ್ಟಾದ್ವೈತಾಚಾರ್ಯರ ತಾತ್ವಿಕ ಸಿದ್ಧಾಂತಗಳ ವಿಷಯ, ವೇದಮಾರ್ಗವನ್ನು ಅನುಸರಿಸಿದ ರೀತಿ ಶಕ್ತಾದ್ವೈತಿಯಲ್ಲಿ ಆಯಾ ಮತದವರ ಕೆಲಸ ಹೋಲಿಕೆ ಮುಂತಾಗಿ ೬ ಘಂಟೆಯ ವರೆಗೆ ಭಾಷಣಮಾಡಿದರು ಅನಂತರ ಉತ್ಸವವು ನಿಯಮಿತಸ್ಥಳಕ್ಕೆ ಬಂದು ತಲ್ಪಿತು ಅಲ್ಲಿ ವಿಶ್ವಕರ್ಮಮತೀಯರ ಮುಖಂಡರಾದ ಶ್ರೀಮಾನ್ ರಾಮಣ್ಣನವರು ಶ್ರೀಜಗದ್ಗುರು ಪಂಚಾಚಾರ್ಯರೇ ವೀರಶೈವಮತಸ್ಥಾಪಕರಲ್ಲದೆ ಅನ್ಯರಲ್ಲ ವೀರಶೈವ ಮತದ ಘನತೆಯು ವಿಶ್ವದಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಪ್ರತಿಯೊಬ್ಬ ಮಾನವನು ತನ್ನ ಜನ್ಮ ಸಾಫಲ್ಯವಾಗಿಕೊಳ್ಳಬೇಕಾದರೆ ಗುರು ಸೇವೆಯನ್ನು ಮಾಡಲೇಬೇಕು. ಗುರುವು ಪರಮ ಪವಿತ್ರವಸ್ತುವು ನೀವು ಒಗ್ಗಟ್ಟಿನಿಂದ ಜಗದ್ಗುರುಗಳ ಜಯಂತಿ ಮಾಡಿದ್ದಕ್ಕಾಗಿ ನಾನು ತಮ್ಮೆಲ್ಲರನ್ನು ವಂದಿಸುತ್ತೇನೆ, ಮುಂತಾಗಿ ಭಾಷಣಮಾಡಿದರು. ಅನಂತರ ಜಗದಾಚಾರ್ಯರ ಮಂಗಲ ಜಯಘೋಷದೊಡನೆ ಮಹೋತ್ಸವವು ಮುಕ್ತಾಯವಾಯಿತು. ಮೇಲ್ಕಂಡ ಕಾರ್ಯಕ್ಕಾಗಿ ಸಹಾಯಮಾಡಿದ ಸಕಲಮಹಾಶಯರಿಗೂ ಶ್ರೀಜಗದಾಚಾರ್ಯರು ಸಕಲ ಸಂಪದಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುವ

ವೀರಭದ್ರಯ್ಯ, ರುದ್ರಯ್ಯ, ಹೊಸಮಠ.
ಅಧ್ಯಕ್ಷ ಶ್ರೀಜಗದ್ಗುರು ಅಭಿನವ ರೇಣುಕ ವಾಚನಾಲಯ.

ಬಳ್ಳಾರಿ

ಇದೇ ತಾ|| ೫ ರವಿವಾರ ಸಾಯಂಕಾಲ ೭ ಘಂಟೆಗೆ ಈ ನಗರದ ಹಾಲುಮತದ ಸಂಘಿದವರು ಶ್ರೀಜಗದ್ಗುರು ರೇಣುಕಾಚಾರ್ಯರ ಉತ್ಸವವನ್ನು ಮಾಡಿದರು. ಅನೇಕತರಹದ ಮಂಗಲವಾದ್ಯಗಳೊಡನೆ ಉತ್ಸವವು ಪುರಬೀದಿಗಳಲ್ಲಿ ನಡೆದು ರಾತ್ರಿ ೯ ಘಂಟೆಗೆ ಸ್ವಸ್ಥಾನವನ್ನು ಸೇರಿತು. ಈ ಮಹೋತ್ಸವದಲ್ಲಿ ಹಾಲುಮತಾಧ್ಯಕ್ಷರಾದ ಒಡೆಯರ್ ಸಿದ್ದಯ್ಯ ಗಾದಯ್ಯ ಇವರು ಭಾಗವಹಿಸಿದ್ದರು. ಈ ರೀತಿಯಾಗಿ ವೀರಶೈವೇತರ ಮತ ಬಾಂಧವರೂ ಕೂಡ ತಮ್ಮ ಭಕ್ತಿಯ ಅಧಿಕ್ಯದಿಂದ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಆಚರಿಸುತ್ತಾರೆಂದ ಬಳಿಕ ಶ್ರೀಜಗದ್ಗುರು ರೇಣುಕರ ಪ್ರಭಾವವು ಅಖಂಡರೇಣುಕಕಾಷ್ಠಾದಿಗಳಲ್ಲಿ ನೆಲಸಿದೆಯೆಂದು ಹೇಳುವದರಲ್ಲಿ ಸಂಶಯವಿಲ್ಲ. ಈ ಉತ್ಸವದಲ್ಲಿ ಭಾಗವಹಿಸಿದ ಈ ಸಂಘಿದವರು ರೇಣುಕರಲ್ಲಿ ಬೈಯ್ದು ಭಕ್ತಿಭಾವವನ್ನು ನೋಡಿ ಪ್ರತಿಯೊಬ್ಬ ಮಾನವನಿಗೂ ಅತ್ಯರ್ಥಉಂಟಾಗಿ ಆತ್ಮಾನಂದವಿಷಿತು. ಪ್ರತಿವರ್ಷವೂ ಇದರಂತೆ ಸರ್ವರೂ ಗುರುಸೇವೆಮಾಡಿ ಆಯುರಾರೋಗ್ಯ ಭಾಗ್ಯಾದಿಗಳನ್ನು ಪಡೆಯಬೇಕೆಂದು ಹಾರೈಸುವ.

ಓರ್ವ ಪ್ರತ್ಯಕ್ಷದರ್ಶಿ.

ಶಿಟ್ಟಿಕೆರೆ.

ತಾ|| ೫-೩-೩೯ ಭಾಮವಾರ ಚಿಕ್ಕತಾಯಕನಹಳ್ಳಿ ಕಾಲ್ಲೂಕು ಶಿಟ್ಟಿಕೆರೆಯಲ್ಲಿರುವ ವೀರಶೈವ ಮಂಡಲಿಯವರು ರೇಣುಕಜಯಂತೀ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು ಸಾಯಂಕಾಲ ೫ ಘಂಟೆಗೆ ವೇಕದ ಗೌರಮ್ಮನ ದೇವಸ್ಥಾನದಲ್ಲಿ ವಿರಾಜಮಾನವಾದ ರೇಣುಕರ ಭಾವಚಿತ್ರಕ್ಕೆ ಮಹಾ ಮಂಗಳಾರತಿ ನಡೆದಮೇಲೆ ಪ್ರಸಾದವಿನಿಯೋಗವಾಯಿತು. ೬|| ಘಂಟೆಯಿಂದ ೭ ಘಂಟೆಯವರೆಗೆ ಭಜನೆಯು ನಡೆಯಿತು ೭ ಘಂಟೆಯಿಂದ ೯ ಘಂಟೆಯ ವರೆಗೆ ಚಿಕ್ಕ ರಥದಲ್ಲಿ ರೇಣುಕರ ಭಾವಚಿತ್ರವನ್ನಿಟ್ಟು ಊರಿನ ಮುಖ್ಯಬೀದಿಗಳಲ್ಲಿ ಉತ್ಸವವನ್ನು ಮಂಗಳವಾದ್ಯಗಳೊಡನೆ ನಡೆಯಿಸಿದರು. ಪ್ರತಿಯೊಬ್ಬರೂ ಬಹಳ ಭಕ್ತಿಯಿಂದಲೂ, ಮುತುರ್ಜಿಯಿಂದಲೂ ಈ ಕಾರ್ಯವನ್ನು ನೆರವೇರಿಸಿದರು.

ಓರ್ವ ಗುರುಭಕ್ತ.

ತುಮಕೂರು

ತುಮಕೂರಿನ ವೀರಶೈವ ಜಕಾಂಗದವರು ಪದ್ಧತಿ ಪ್ರಕಾರ ಶ್ರೀರೇಣುಕಭಗವತ್ಪಾದರ ಜಯಂತಿಯನ್ನು ವಿಶೇಷ ವೈಭವದಿಂದ ನೆರವೇರಿಸಿದರು.

ತಾ|| 4-3-39 ರಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಇಲ್ಲಿಯ ಶ್ರೀಜಗದ್ಗುರು ಶ್ರೀರೇಣುಕಾದಿ ಪಂಚಾಚಾರ್ಯರ ವೈದಿಕ ಮತ್ತು ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಮಲ್ಲಿಕಾರ್ಜುನಶಾಸ್ತ್ರಿಗಳು ಮತ್ತು ವಿದ್ಯಾರ್ಥಿಸಮೂಹದಿಂದ ವಿಧ್ಯುಕ್ತವಾಗಿ ಪೂಜಾ ಕಾರ್ಯಾದಿಗಳು ನಡೆದವು ಬಳಿಕ ಮನೋಹರವಾಗಿ ಪುಷ್ಪದಿಂದ ಶೃಂಗರಿಸಲ್ಪಟ್ಟ ರಜತಪಲ್ಲಕ್ಕಿಯಲ್ಲಿ ಭಾವಚಿತ್ರವನ್ನು ಮೂರ್ತಗೊಳಿಸಿ, ಸಕಲ ವಾದ್ಯವೈಭವ ದೊಡನೆಯೂ, ವೇದಘೋಷಪೂರ್ವಕವಾಗಿಯೂ ಉತ್ಸವವು ಪುರದ ಮುಖ್ಯಬೀದಿಗಳಲ್ಲಿ ಹೊರಟಿತು. ಪ್ರಪರಮತೀಯ ಸ್ತ್ರೀಪುರುಷರು ಅನನ್ಯ ಭಕ್ತಿಯಿಂದ ಹೆಣ್ಣುಕಾಯಿ, ಮಂಗಳಾರತಿಯನ್ನರ್ಪಿಸಿ ಶ್ರೀ ಸ್ವಾಮಿಯ ದರ್ಶನಾಶೀರ್ವಾದವನ್ನು ಪಡೆದು ಆತ್ಮಾನಂದದಿಂದ ಪ್ರೇಮವೇ ಮೈದಳೆದಿರುವಂತೆ ಮಹಾಸ್ವಾಮಿಯವರ, ಶ್ರೀಮದ್ಯುವರಾಜರವರ ಮತ್ತು ಶ್ರೀಜಯಚಾಮರಾಜೇಂದ್ರಒಡೆಯರವರ ಶ್ರೇಯಃಪ್ರಾರ್ಥನೆಯು ಪಾಠಶಾಲಾಧ್ಯಾಪಕರಾದ ವೇ|| ಮಲ್ಲಿಕಾರ್ಜುನಶಾಸ್ತ್ರಿಗಳವರಿಂದ ಮಾಡಲ್ಪಟ್ಟಿತು. ವೈದಿಕ ಮತ್ತು ಸಂಸ್ಕೃತ ಪಾಠಶಾಲಾಧ್ಯಕ್ಷರಾದ ವೇದಶ ಯಜಮಾನಿಸಿದ್ಧಪ್ಪನವರು ನಾವು ಜಗದಾಚಾರ್ಯರ ಜಯಂತಿಯನ್ನು ಏಶೆಮಾಡಬೇಕು? ಎಂಬ ವಿಚಾರದಲ್ಲಿ ಸ್ಫೂರ್ತಿದಾಯಕವಾದ ಭಾಷಣಭಕ್ತಿಯನ್ನು ಮಾಡಿದರು. ಆನಂತರ ಮಹಾಮಂಗಳಾರತಿ ನಡೆದು ಬಂದಿದ್ದ ಸಮಸ್ತ ಭಕ್ತವೃಂದಕ್ಕೂ ಪ್ರಸಾದವಿನಿಯೋಗವಾಗಿ ಜಯಂತೀಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಓರ್ವ ಉತ್ಸವಭಕ್ತ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಾಧೀಜರುಗಳು ಐದುವರ್ಷಕ್ಕೋ ಹತ್ತು ವರ್ಷಗಳಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಇಷ್ಟಲಿಂಗವನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಶರವೃತ್ತಿಯನುಸರಿಸಿ ಶಿಷ್ಯರ ಯಾವುದು ವಿಷಯಗಳನ್ನು ಬರೆದುಕೊಳ್ಳದೆ ಇಷ್ಟಲಿಂಗವನ್ನು ಸೂತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರದೂಡಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಇಸ್ಕಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಸಂಪದಾರಂಭಕ್ಕಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವಪಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೦ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ಕಯದಲ್ಲಿ ದೊರೆಯುವವು.

ವಿಷಯ ಹೆಸರು	ಸೂಚ	ಮೊತ್ತ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತೆಭಸ್ಮ	೧	೦—೮—೦
ಸುಂಡೂರಭಸ್ಮ	೧	೦—೮—೦

ಸೂಚ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದಔಷಧಾಲಯ,

ಪೋಸ್ಟ್, ಒಮಿಮಠ, ಜಿಲ್ಲಾ ಗಢವಾಲ್ ಯು. ಪಿ.

॥ ಶ್ರೀಃ ॥

ಸೌಮ್ಯಪ್ರಮಾಥಿವತ್ಸರಾರಭ್ಯಮುದ್ಘಾಟಿತಂಪಞ್ಚಾಂಗಮ್

ವಿಘ್ನಾಂ ಪಸ್ಮಿತ್ಯಂ ಮತಿಮತಿಕುಭಾಂ ನಿಶ್ಚಲಮುದಂ
ತಿಥಮ್ಯಾಂ ಸಮ್ಪತ್ತಿಂ ಪ್ರಳಯತಿನ್ಯಪಶಿಪ್ರೀತಿಮಖಿಲಾಮ್ ।
ಅದಭ್ರಾಯುಷ್ಯ ಶ್ರೀಹಯವದನನೆದೇಪೋಽತ್ರ ಪರಮಃ
ಪ್ರಮಾಥ್ಯಬ್ದೇ ನನ್ಮೇ ಜಗಮಮಯಹೇಷೋಽನಘತನುಃ ॥೧॥

ಪ್ರಮಾಥಿಶರದೊ ನ್ಯಪಕ್ಷತಿಸುಖೋಽರ್ಥಸೇನಾಮ್ಬುಧಾ
ಧಿಪಶ್ಚ ಸಚಿವೋಗುರುರ್ಧರಣಿಜೊ ರಸಾಧಿಪತ್ಯರಃ ।
ಶುಸ್ತದನುಧಾನ್ಯಪೋಽಪತುರವಿಶ್ಚ ಕೃಷ್ಣಪ್ರಭುಂ
ಸತೂನುಸಹಜಂ ಸದಾ ವಿರಚಪಶ್ಚ ಸಖ್ಯಾಧಿಪಃ ॥೨॥

ನನ್ಮಪ್ರಮಾಥಿತರದಾರಭ್ಯದಿನೇ ಭೂತಪತೇಃ ಸಭಕ್ತಿ ಭರಮ್ ।
ಪರಪಕಶೇಮಾಂ ದೈವತಸನ್ಮಾರ್ಥನಪದ್ಮಮಾಲಿಕಾಂ ಲೋಕಾಃ ॥

ಸರ್ವಾಮ್ನಾಯವಿಲೋಡನೋದ್ಭವಿತಭಾಶೇಷಪ್ರಮಾಖ್ಯಸಭ
ಜ್ಞಾ ನಕ್ಷೀರಪಯೋಧಿಭೇನಪತಳಸ್ಯಾನ್ಮೋಪದಾನುದ್ಭವಮ್ ।
ಸ್ನಿಗ್ಧಸ್ವಾದುಸುಗನ್ಧಶೃಗ್ವಿವಿಗಲಲ್ಲಾಲಾಕಣಾ ಭಾಸತಾಂ
ವಾಮೋಕ್ಷಜ್ಞಗಣಿನ್ದು ಜಾಳುಜಲಾತ್ಪಿಶ್ವಃ ಪುರಾಣೋ ಹಯಃ ॥

ಕಾಲಿನ್ದೀತೀರಕೃಷ್ಣದ್ರುಮತಲಧರಣಾ ನಾಮಪಾದೇ ನಿಕುಞ್ಜೇ
ನೃತ್ಯನ್ ದೃಷ್ಟಂ ಚ ಸಾದಂ ಭ್ರಜಯುವತಿಗಣಾಮನ್ತರೇ
ಪರ್ಯಮಾನಃ ।
ವೇಣುಂ ಪಾಣೌದ್ವಯೇನ ಕ್ವಣನಸುರುಚಿರಂ ಸಪ್ರಮೋದಂ
ವಿತನ್ವ
ನಾದ್ಯೇರ್ಮಾಗ್ನಂ ಚ ಮೋಹೇ ಭುವನತಲಮಸಾ
ವಾಸುದೇವನ್ಸದಾವ್ಯಾತ್ ॥೫॥

ಶೇಷಾಖಲಭೂಷಾಮಣಿದೋಷಾನುಮಣಿರೇಷಾ
ಭಾಷಾನುಶಮದೋಷಾತಿಗುಷಾ ಶುಧವೇಷಾ ।
ದೋಷಾಕರಭೂಷಾದಿಮುಭೂಷಾಗಣಭೋಷಾ
ಶೇಷಾವನತೋಷಾಪತು ದೋಷಾಹಿತಮೋಷಾ ॥೬॥

ನೀರಾಧಿಕಭಾವಾಧರರಾಜಿವಿವಾರಾ
ಸ್ಮಾರಿಕುಗಭಾರಾಕುರಿರಾಮಾವನಿಪೂರಾ ।
ಸೀರಾಯುಧಭಾರಾತಿಗಸಾರಾದರಭಾರಾ
ಧೀರಾಭಯಧಾರಾವನು ಧೀರಾ ಧೃತಮಾರಾ ॥೭॥

ಖಲಾನಾಂ ಸ್ತೇನಾನಾಂ ಜನಪದವಿನಾಶೋತ್ಸುಕಧಿಯಾ-
ಮಧರ್ಮೋತ್ಥಾನಾಂ ಚ ಪ್ರಕೃತಿನಿಪೀಡೈಕನಿರತಾನ್ ।
ವಿಘಾತಾನಾಂ ವೈಶ್ಯೇಃ ಪ್ರಸೃಮರಗದಾನಾಂ ಪ್ರಮಥನಾತ್
ಪ್ರಮಾಥ್ಯಬ್ದಾಸ್ಯಾಸಾದಧಿಧರನಿ ಸಾರ್ಥಾ ಧ್ರುವಮಧೂತ್ ॥೮॥

ಲೋಕೇ ಪ್ರಾಶ್ ಜ್ಯೈತ್ರಕುಳ್ಳಪ್ರಕಿಪದಿ ತರಕೇರುದ್ದೆನಾಮ್ಯಾ-
ಗವಪದ್ಯಾ—ಖ್ಯಾಯಾಂ ಯಸ್ಪೈಭೂವುರ್ಯುರ್ಗದಿನತಿಥಿಪತ್ಯಾಪ್ತಿ
ಸಜ್ಯಾಸ್ತ್ರಿಮಾಸಾಃ । ಶಲ್ಯೋ ಸೂನಾನ ನೇತ್ರಾಯನಮನು
ಸುರಭಿಪ್ರಾಣನಷ್ಕನ್ತಮಸ್ಮಾಂ —ಸಜ್ಞಾಪ್ಯಾಗ್ರಣರ್ದೇವಾರ್ಚನ
ಮುಖಕುಳಕಾರ್ಯಾಣಿ ಕುರ್ವನ್ತಿ ಸರ್ವೇ ॥೯॥

ಶ್ರೀಕೃಷ್ಣಾ ಮನಿಪೀತಿಶುನ್ತ ದನುಜಶ್ರೀಮನ್ನೃಸಿಂಹಪ್ರಭೌ—
ನ್ಯತಪ್ರಸೋರ್ಜಯಜಾಮರಾಜಪ್ರತಿಪತೇರಪ್ಯೊರ್ಜಿತಾಂ ಸನ್ತುದಂ ।
ಅರೋಗ್ಯಂ ಪುರುಷಾಯುಷಂ ಚ ತನುತಾಮಾನನ್ದ ಮಸ್ಯಾಪ್ಯತಂ
ಪದ್ಮಾಪ್ತಿಗ್ರುವದಾಸ ವಿಷ ಕರುಣಾನಿನ್ದುಸ್ತಿಲೋಕೇಶತಃ ॥೧೦॥

ಏವಂ ಮುದಾ ನವೀನಪ್ರಮಾಥಿವತ್ಸರಮುಖಾ ಸದಾಸ್ತೆ ।
ಶಮಿಮೌಲ್ಯಿ ಕೃಷ್ಣನ್ನಪಾಸ್ಥಾ ನಮಹಾಪಣ್ಡಿತಮುರ್ಧೀಕೃತಃ ॥೧೦॥

ಕರೂರುಶೇಷಾಚಾರ್ಯಃ, ಆಸ್ಥಾನಮಹಾವಿದ್ವಾನ್,
ಶ್ರೀಮಹೀಶೂರಪುರೀಮಹಾರಾಜಸಂಸ್ಕೃತಮಹಾಪಾಠಶಾಲಾಯಾಂ
ಜ್ಯೋತಿಷ್ಯಾಸ್ಥಾಪ್ರಧಾನೋಧ್ಯಾಯಃ

ನೂತನ ಪ್ರಮಾಥಿವಾನುಸಂವತ್ಸರದ ಶುಭಾಶುಭಫಲಗಳು.

ತಾ|| 22-3-39 ರಿಂದ 7-4-40 ರ ವರೆಗೆ

ಪ್ರಮಾಥಿಶರದೋನ್ಯಪಕ್ಷತಿಸುಖೋಽರ್ಥಸೇನಾಂಬುಧಾ-
ಧಿಪಶ್ಚ ಸಚಿವೋಗುರುರ್ಧರಣಿಜೋರಸಾಧಿಪತ್ಯರಃ ।
ಶುಸ್ತದನುಧಾನ್ಯಪೋಽಪತುರವಿಶ್ಚ ಕೃಷ್ಣಪ್ರಭುಂ
ಸತೂನುಸಹಜಂ ಸದಾ ವಿರಪಪಶ್ಚ ಸಖ್ಯಾಧಿಪಃ ॥

ಶಾಸ್ಯರ್ಯ—ಈ ಸಾರಿ ಪ್ರಮಾಥಿಸಂವತ್ಸರಕ್ಕೆ ರಾಜಾಸಾದಿ ಬುಧನೂ ಅರ್ಕ (ಬೆಲೆ) ಸೇನಾ-ಮೇಘ ಇವುಗಳಿಗೆ ಪ್ರಭೆಯು ನಾದ ಮತ್ತು ಮಂತ್ರಿಯಾದ ಗುರುವೂ, ರಸಾಧಿಪತಿಯಾದ ಕುಜನೂ ಧಾನ್ಯಾಧಿಪತಿಯಾದ ಶನಿಯೂ-ನೀರಸ ಮತ್ತು ಸಸ್ಯಗಳಿಗೆ ಅಧಿಪತಿಯಾದ ರವಿಯೂ ಸುಳ್ಳೂ-ತಮ್ಮಂದಿರೂ ಇವರುಗಳೊ ಡನೆ ಶ್ರೀ ಕೃಷ್ಣರಾಜಾರ್ಯಳಿಮನನ್ನು ಸದಾ ಕಾಪಾಡಲಿ.

ವೈಶ್ರಮಾಸ ತಾ|| 22-3-39 ರಿಂದ 19-4-39 ರ ವರೆಗೆ

ಪೂರ್ವ-ದಕ್ಷಿಣ-ಉತ್ತರದೇಶದ ಪ್ರಜೆಗಳಿಗೆ ಸೌಖ್ಯ ಹೆಚ್ಚು ವಿವಾ ಹಾದಿ ಶುಭಕಾರ್ಯಗಳು-ತಾಮ್ರ-ಸುಗಂಧದ್ರವ್ಯ-ಕೆಂಪು-ಕುಂಕುಮ ಮುತ್ತು ಇವುಗಳಿಗೆ ಹೆಚ್ಚು ಬೆಲೆ. ಗರ್ಭಿಣಿಯರಿಗೆ ಪೀಡೆ-ಶುಕ್ಲ ಪಕ್ಷ ದಲ್ಲಿ2-3 ಹದವಾದ ಮಳೆ-ಕೃಷ್ಣ ಪಕ್ಷದಲ್ಲಿ ಸ್ವಲ್ಪ ಮಳೆ-ಹುಂಟರಥಾಳ. ಕೆಲವು ಸಮಯಗಳಲ್ಲಿ ಹೆಚ್ಚು ಬಿಸಿಲು. ಏಪ್ರಿಲ್ 3-4 ನೇ ತಾರೀ ಖುಗಳಲ್ಲಿ ಧಾನ್ಯಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ ನವಣೆ-ಗೋಧಿ-ರಾಗಿ-ಜೋಳ ಮೊದಲಾದ ಹೊಟ್ಟುಳ್ಳ ಧಾನ್ಯಗಳಿಗೆ ಬೆಲೆ ಹೆಚ್ಚುವಿಕೆ. ಹಸುಗಳಲ್ಲಿ ಕಮ್ಮಿಳಕಾವು-ಬ್ರಾಹ್ಮಣಾ-ಮತ್ತು ಕ್ಷತ್ರಿಯರಿಗೆ ಪೀಡೆ. ಬೋರಾಗ್ನಿ ಭಯ-ಬರ್ಕಿ-ದೇಶಗಳಲ್ಲಿ ವಿಕ್ಷೇಪ ಯುದ್ಧದಿಂದ ಪರಾಜಯ.

ವೈಶಾಖಮಾಸ ತಾ|| 20-4-39ರಿಂದ 19-5-39ರ ವರೆಗೆ

ಪ್ರಜಾಜಾಖ್ಯಾ-ಹೆಚ್ಚು ಶುಭಕಾರ್ಯಗಳು-ಹತ್ತಿ-ಬೆಲ್ಲ-ಗೋಧಿ-ಕುಂ ಕುಮ-ಹೆಸರು-ಮಂಜಿಷ್ಠೆ-ಎಳ್ಳು-ತುಪ್ಪ-ಉದ್ದು-ಭತ್ತ ಇವುಗಳಿಗೆ ಹೆಚ್ಚು ಬೆಲೆ. ಇಕ್ಷ್ವಾಕು-ಶಕ-ಕಳಿಂಗ (ಸಾರಡ್ರ-ಸರ್ಕಾರ್) ಈ ದೇಶಗಳಲ್ಲಿ ಸುಭಿಕ್ಷ ಜನಗಳಿಗೆ ಕಲಹ ಮತ್ತು ರೋಗಗಳಿಂದ ತೊಂದರೆ. ಸಾರಾಷ್ಟ್ರ (ಬಿಲ್ಲ) ಸಿಂಧು ಸರಸ್ವತೀ ನದೀತೀರ ಈ ದೇಶದ ರಾಜರುಗಳಿಗೆ ಪರಸ್ಪರವಾಗಿ ಮನಸ್ತಾಪ. ಮೇ 2-3 ನೇ ತಾರೀಖುಗಳಲ್ಲಿ ಆಡಿಕೆ-ತೆಂಗಿನಸ್ಸ ಸಂಗ್ರಹಿಸಿದರೆ, 6 ನೇ ತಿಂಗಳಲ್ಲಿ ಲಾಭ. ಶುಕ್ಲ ಪಕ್ಷದಲ್ಲಿ ಮಳೆ ಕಡಿಮೆ. ಕೃಷ್ಣ ಪಕ್ಷ ದಲ್ಲಿ 2-3 ಹದವಾದ ಮಳೆ-ಅಪ್ಪು ಧಾನ್ಯಗಳಿಗೆ ಬೆಲೆ ಹೆಚ್ಚುವಿಕೆ.

ಜ್ಯೈಷ್ಠಮಾಸ ತಾ|| 20-5-39 ರಿಂದ 17-6-39ರ ವರೆಗೆ

ಶುಕ್ಲ ಪಕ್ಷದಲ್ಲಿ ಮಳೆ ಕಡಮೆ-ಕೃಷ್ಣ ಪಕ್ಷದಲ್ಲಿ 1-2 ಘಾಳಿ ಯಿಂದಕೂಡಿದ ಹದವಾದ ಮಳೆ. ಪ್ರಜೆಗಳಿಗೆ ರೋಗೋಪದ್ರವ ಹತ್ತಿ-ಬತ್ತ-ಎಳ್ಳು-ತುಪ್ಪ-ಉಪ್ಪು-ಉದ್ದು-ಪಾಸಿಲೆ-ನವಣೆ-ರಾಗಿ-ಗೋಧಿ-ಇವುಗಳಿಗೆ ಹೆಚ್ಚು ಬೆಲೆ. ಪ್ರಜೆಗಳಿಗೆ ಸಂತೋಷ. ಹಸು ಆಕೆ-ಬ್ರಾಹ್ಮಣರು-ಪಂಡಿತರು ಇವರುಗಳಿಗೆ ಪೀಡೆ. ಪ್ರಜೆಗಳಿಗೆ ಹೆಚ್ಚು ಕಲಹ-ಬ್ರಾಹ್ಮಣರಲ್ಲಿ ಪರಸ್ಪರ ಕಲಹ. ಕೃಷ್ಣ ಪಕ್ಷದಲ್ಲಿ ಪ್ರಜಾಸೌಖ್ಯ. ಈ ಮಾಹೆ 1-2 ನೇ ತಾರೀಖುಗಳಲ್ಲಿ ಭತ್ತ-ಕಂಜು-ಕಂಬಳಿ ಧಾನ್ಯ ಇವುಗಳನ್ನು ಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭವುಂಟಾಗುತ್ತೆ.

ಆಷಾಢಮಾಸ ತಾ|| 18-6-39 ರಿಂದ 16-7-39ರ ವರೆಗೆ

ಜನಗಳಿಗೆ ರೋಗೋಪದ್ರವ-ಬಿಸಿಲಿನ ತಾಪ. ಶುಕ್ಲ ಪಕ್ಷದಲ್ಲಿ ಒಳ್ಳೆ ಮಳೆ. ಕೃಷ್ಣ ಪಕ್ಷದಲ್ಲಿ ಸ್ವಲ್ಪ ಮಳೆ-ಹುಸುಗಳಲ್ಲಿ ಕರಾವು ಕಡಮೆ.ಎಳೆಮಕ್ಕಳಿಗೆ ಪೀಡೆ-ಸಿಂಧು ಕೋಸಲ (ಅಯೋಧ್ಯೆ) ಕಾಂಬೋಜ ಈ ದೇಶದ ರಾಜಮನಗಳಿಗೆ ಮನಸ್ತಾಪವಲ್ಲಿ ಹೆಚ್ಚು ಭಯವೂ-ಪರಿಣಾಮದಲ್ಲಿ ತುಯವೂ-ಒಗ್ಗಟ್ಟು ನಿಂದ ಜನಗಳು ಗುಂ ಪುಕೂಡಿ ಸರ್ಕಾರವನ್ನು ಎದುರಿಸುವಿಕೆ, ರಾಗಿ-ನವಣೆ ಪಾಲು ಹೆಚ್ಚಾಗಿ ಬೆಳೆಯುವಿಕೆ. ಈ ಮಾಹೆ 1-2 ನೇ ತಾರೀಖುಗಳಲ್ಲಿ ಎಳ್ಳು-ಯಚ್ಚೆ ಶೇಖರಿಸಿ 4 ನೇ ತಿಂಗಳಲ್ಲಿ ಮಾರಿದರೆ ಹೆಚ್ಚು ಲಾಭ.

ಅಧಿಕ ಶ್ರಾವಣಮಾಸ ತಾ|| 17-7-39 ರಿಂದ 15-8-39 ರ ವರೆಗೆ

ಶುಕ್ಲ ಪಕ್ಷದಲ್ಲಿ ಹದವಾದ 2-3 ಮಳೆ. ಕೃಷ್ಣ ಪಕ್ಷದಲ್ಲಿ ಸ್ವಲ್ಪ ಮಳೆ, ಹೆಚ್ಚು ಘಾಳಿ, ತೊಗರಿ-ಬೇಳೆ ಚೆನ್ನಾಗಿ ಫಲಿಸುವಿಕೆ, ಕಮ್ಮಾರ-ಉಡಗಿ-ಸುವರ್ಣಕಾರ-ಶಿಪಾಯಿ-ಅಡಿಗೆಯವರು ಇವರು ಗಳಿಗೆ ಉತ್ತಮ ಧನಲಾಭ ಮತ್ತು ಸೌಖ್ಯ. ಪ್ರಜೆಗಳಿಗೆ ಅಳ್ಳರು ಮತ್ತು ಸರ್ಕಾರದವರಿಂದ ಭಯ. ಪ್ರಜೆಗಳ ಜಮೀನುಗಳು ಸರ್ಕಾ ರದವರೆಗೆ ಸ್ವಾಧೀನವಾಗುವಿಕೆ. ಪ್ರಜೆಗಳಿಗೂ ಸರ್ಕಾರದವರಿಗೂ ಕಲಹ. ಧನಿಕರು ಹತದಿಂದ ಧನವನ್ನು ಕಳೆದುಕೊಳ್ಳುವಿಕೆ. ಪ್ರಜೆಗಳಿಗೂ ಪಶ್ಚಾದಿಗಳಿಗೂ ರೋಗೋಪದ್ರವ. ಚಿನ್ನ ಬೆಳ್ಳಿ ಇವುಗಳಿಗೆ ಬೆಲೆ ಹೆಚ್ಚುವಿಕೆ.

ನಿಜಶ್ರಾವಣಮಾಸ ತಾ|| 16-8-39 ರಿಂದ 13-9-39 ರ ವರೆಗೆ

ಪ್ರಜಾಸೌಖ್ಯ-ಸುಭಿಕ್ಷ-ಶುಕ್ಲ ಪಕ್ಷದಲ್ಲಿ ಒಳ್ಳೆ ಮಳೆ. ಗುಜರಾತ್ ಮೂಳವ-ತಿಲಂಗ ಈ ದೇಶದ ಪ್ರಜೆಗಳಿಗೂ ರಾಜರಿಗೂ ಕಲಹ. ತಾ|| 29 30 31 ರಲ್ಲಿ ಧಾನ್ಯ ಸಂಗ್ರಹಿಸಿ 6 ನೇ ತಿಂಗಳಲ್ಲಿ ಮಾರಿ ದರೆ 2 ರಷ್ಟು ಲಾಭ. ಆಗುರು-ಎಳ್ಳು ಇವುಗಳ ಬೆಲೆ ಹೆಚ್ಚುವಿಕೆ. ಕೃಷ್ಣ ಪಕ್ಷದಲ್ಲಿ ಹೆಚ್ಚುಮಳೆ. ಅಲ್ಲಲ್ಲಿ ಕಳ್ಳರ ಭಯ. ಅಲ್ಲಲ್ಲಿ ಸಾಂಕ್ರಾಮಿಕ ರೋಗಗಳು, ಸುಬಾಷಿಯರು ಪಶು-ಪಕ್ಷಿ ಇವುಗ ಗಳಿಗೆ ಪೀಡೆ.

ಭಾದ್ರಪದಮಾಸ ತಾ|| 14-9-39 ರಿಂದ 12-10-39 ರ ವರೆಗೆ

ಕೃಷ್ಣ ಪಕ್ಷದಲ್ಲಿ ಪ್ರಜೆಗಳಿಗೆ ರೋಗೋಪದ್ರವ, ಶುಕ್ಲ ಪಕ್ಷದಲ್ಲಿ ಪ್ರಜಾಸೌಖ್ಯ-ಸುಭಿಕ್ಷ, ಕೃಷ್ಣ ಪಕ್ಷದಲ್ಲಿ ಒಳ್ಳೆ ಮಳೆ. ರಾಜನಿಂದ ಇಷ್ಟಸಿದ್ಧ. ಪ್ರಜೆಗಳಿಗೂ ರಾಜರಿಗೂ ಕಲಹ. ಹೆಸರು-ಉದ್ದು ಇವುಗಳ ಬೆಲೆ ಕಡಮೆ. ವೇಶ್ಯಾ-ತಿರ್ಲಿ-ಬ್ರಾಹ್ಮಣರು ಇವರುಗಳಿಗೆ ಪೀಡೆ. ಗೋಧಿ-ನವಣೆ-ರಾಗಿ ಮೊದಲಾದ ಹೊಟ್ಟುಳ್ಳ ಧಾನ್ಯಗಳಿಗೆ ಹೆಚ್ಚು ಬೆಲೆ. ಗುಜರಾತ್-ಮಾಳವ-ತೆಲಗು ದೇಶಗಳಲ್ಲಿ ದುರ್ಭಿಕ್ಷ.

ಆಶ್ವಯುಜಮಾಸ ತಾ|| 13-10-39 ರಿಂದ 11-11-39 ರ ವರೆಗೆ

ಪ್ರಜೆ-ಪಶು-ಕರು-ಪಕ್ಷಿ ಇವುಗಳಿಗೆ ಸೌಖ್ಯ. ಶುಕ್ಲ ಪಕ್ಷದಲ್ಲಿ 2-3 ಹದವಾದ ಮಳೆ. ರಾಗಿ-ಹುರುಳಿ-ತೊಗರಿ-ಶಣಗಿ-ಅವರೆ ಈ ಬೆಳೆಗಳು ಚೆನ್ನಾಗಿ ಫಲಿಸುವಿಕೆ. ಕೃಷ್ಣ ಪಕ್ಷದಲ್ಲಿ ಮಳೆ ಕಡಮೆ. ಹಸು-ಕರುಗಳಿಗೆ ಕ್ಷೇಮ. ಬೆಲ್ಲ ಸಕ್ಕರೆ ಮೊದಲಾದ ಸಿಹಿ ಪದಾರ್ಥ ಗಳಿಗೆ ಸಮಬೆಲೆ. ಕೆಲವು ಸ್ಥಳಗಳಲ್ಲಿ ದುರ್ಭಿಕ್ಷ ರೋಗೋಪದ್ರವ. ಪ್ರಜೆಗಳಲ್ಲಿ ಪರಸ್ಪರ ಕಲಹ. ಭತ್ತ-ತುಪ್ಪ ಇವುಗಳಿಗೆ ಹೆಚ್ಚು ಬೆಲೆ. ಕುದುರುಗಳಿಗೆ ರೋಗೋಪದ್ರವ. ಅಕ್ಟೋಬರ್ 28 29 ರಲ್ಲಿ ಧಾನ್ಯಸಂಗ್ರಹಿಸಿ 5 ನೇ ತಿಂಗಳಲ್ಲಿ ಮಾರಿದರೆ ಹೆಚ್ಚು ಲಾಭವುಂ ಟಾಗುತ್ತದೆ.

ಕಾರ್ತಿಕಮಾಸ ತಾ|| 12-11-39 ರಿಂದ 10-12-39 ರ ವರೆಗೆ

ಪ್ರಜೆಗಳಿಗೆ ರೋಗೋಪದ್ರವ ಮತ್ತು ರಾಜಕೀಯರಿಂದ ಭಯ. ಅಲ್ಪವೃಷ್ಟಿ-ಬೆಲ್ಲ-ಸಕ್ಕರೆ ಇವುಗಳಿಗೆ ಸಮಬೆಲೆ. ಶುಷ್ಕ ಭತ್ತ-ಹತ್ತಿ-ಎಳ್ಳು-ಆಡಿಕೆ-ಬಟ್ಟೆ ಇವುಗಳಿಗೆ ಬೆಲೆ ಹೆಚ್ಚುವಿಕೆ. ರಾಜ ರುಗಳಿಗೆ ಭಯ, ಸುಭಿಕ್ಷ-ಕುದುರೆಗಳಿಗೆ ರೋಗೋಪದ್ರವ. ನವಂ ಬರ್ 26 27 28 ರಲ್ಲಿ ಎಳ್ಳೆ-ಎಳ್ಳು ಸಂಗ್ರಹಿಸಿ 2 ತಿಂಗಳಲ್ಲಿ ಮಾರಿದರೆ 2 ರಷ್ಟು ಲಾಭವುಂಟಾಗುತ್ತೆ. ಬೀಜ ಪದಾರ್ಥಗಳಿಗೆ ಬೆಲೆ ಹೆಚ್ಚುವಿಕೆ. ಚೀನಾ-ಸಾರಾಷ್ಟ್ರ-ಮ್ಲೇಚ್ಛದೇಶದ ರಾಜರುಗಳಿಗೆ ಪರಸ್ಪರ ಯುದ್ಧ.

ಮಾರ್ಗಶೀರ್ಷಮಾಸ ತಾ|| 11-12-39 ರಿಂದ 9-1-40 ರ ವರೆಗೆ

ಪ್ರಜಾಕ್ಷೇಮ, ಕೆಲವು ಸಮಯಗಳಲ್ಲಿ ರೋಗೋಪದ್ರವ, ಕೆಲವು ಪ್ರದೇಶಗಳಲ್ಲಿ ದುರ್ಭಿಕ್ಷ-ಅಲ್ಪವೃಷ್ಟಿ-ಧಾನ್ಯಗಳಬೆಲೆ ಹೆಚ್ಚುವಿಕೆ. ಡಿಸಂಬರ್ 26 27 28 ರಲ್ಲಿ ಹತ್ತಿ-ನೂಲು-ತುಪ್ಪ ಇವುಗ ಳನ್ನು ಸಂಗ್ರಹಿಸಿ 5 ನೇ ತಿಂಗಳಲ್ಲಿ ಮಾರಿದರೆ ಹೆಚ್ಚು ಲಾಭವುಂ ಟಾಗುತ್ತದೆ. ಯಳ್ಳು-ಬಟ್ಟೆ-ಆಡಿಕೆ-ಹತ್ತಿ ಇವುಗಳಿಗೆ ಹೆಚ್ಚುಬೆಲೆ. ಮಕ್ಕಳು-ಪಶು-ಪಕ್ಷಿ ಇವುಗಳಿಗೆ ಪೀಡೆ. ಇಂಡಿಯಾದೇಶ ಮತ್ತು ಯೂರೋಪ್‌ಖಂಡಗಳಲ್ಲಿ ರಾಜರುಗಳಿಗೆ ಭಯ ಮತ್ತು ಹಾನಿ.

ಪುಷ್ಯಮಾಸ ತಾ|| 10-1-40 ರಿಂದ 8-2-40 ರ ವರೆಗೆ

ಪ್ರಜಾಸೌಖ್ಯ ಮತ್ತು ರಾಜಕೀಯದಿಂದ ದುಃಖಿತಿಯೂ ಯಮೈಗಳಿಗೆ ರೋಗದಿಂದ ಪ್ರಾಣನಷ್ಟವೂ ಕೆಂಪು ಪದಾರ್ಥಗ ಗಿಂದ ಪರ್ವತಗಳಿಗೆ ಹೆಚ್ಚು ಲಾಭವೂ ಮಗಧದೇಶದ ರಾಜನಿಗೆ ಭಯ, ಅಲ್ಲಿನ ಪ್ರಜೆಗಳಿಗೆ ಜ್ವರಾದಿ ರೋಗಗಳು ಅಲ್ಪವೃಷ್ಟಿ, ಮಳ್ಳು-ಪಕ್ಷಿ-ಹಸು ಇವುಗಳಿಗೆ ಪೀಡೆ. ಬೆಲ್ಲ-ಕಡಲೆ-ಹೆಲಸಂಡೆ ಅವರೆ-ಹುರುಳಿ ಇವುಗಳ ಬೆಲೆ ಕಡಮೆ ಕಡಲೆ ಕಡಿ ಸುಭಿಕ್ಷ

ಮಾಘಮಾಸ ತಾ|| 9-2-40 ರಿಂದ 8-3-40 ರ ವರೆಗೆ

ಪ್ರಜೆಗಳಿಗೆ ಸೌಖ್ಯ-ದೇಶಕ್ಷೇಮ-ಧಾನ್ಯವೃದ್ಧಿ-ಹೆಚ್ಚುಫಾಲ. ಪೆಬ್ರವರಿ 23 24 ರಲ್ಲಿ ಧಾನ್ಯ ಸಂಗ್ರಹಿಸಿ 4ನೇ ತಿಂಗಳಲ್ಲಿ ಮಾರಿ ದರೆ ಹೆಚ್ಚು ಲಾಭ. ಕೆಲವು ಸಮಯಗಳಲ್ಲಿ ಪ್ರಜೆಗಳಿಗೆ ತೀಕ್ಷ್ಣ ವ್ಯಾಧಿ-ಹೊಟ್ಟುಳ್ಳ-ರಾಗಿ-ನವಣೆ-ಗೋಧಿ ಇವುಗಳಿಗೆ ಹೆಚ್ಚು ಬೆಲೆ. ಕೊಪ್ರರಿಗೂ ಹಸುಗಳಿಗೂ ರೋಗೋಪದ್ರವ. ರಾಜರಿಗೆ ಕ್ಲೇಶ ಪತ್ನಿಗಳಿಗೆ ಸೌಖ್ಯ.

ಫಾಲ್ಗುನಮಾಸ ತಾ|| 9-3-40 ರಿಂದ 7-4-40 ರ ವರೆಗೆ

ಪ್ರಜೆಗಳಿಗೆ ರೋಗೋಪದ್ರವ-ರಾಜವರ್ಗದವರಿಗೆ ಪೀಡೆ-ತೊಗರಿ-ಕಡಲೆ-ಹಲಸಂಡೆ-ರಾಗಿ-ಗೋಧಿ ಇವುಗಳಿಗೆ ಬೆಲೆ ಹೆಚ್ಚುವಿಕೆ. ತಾಲ್ಲೂಕು-ಮೋಬಲಿ-ಬಳ್ಳಿ ಇವ್ಲಿನ ಜನಗಳಿಗೆ ಪರಸ್ಪರ ಕಲಹ ಪಶು-ಪಕ್ಷಿಗಳಿಗೆ ಆರೋಗ್ಯ ಬ್ರಾಹ್ಮಣರಲ್ಲಿ ಒಬ್ಬರಿಗೊಬ್ಬರಿಗೆ ವಿರೋಧ-ಸಾಸವೆ-ಗೋಧಿ-ಉದ್ದು-ಎಳ್ಳು ಈ ಧಾನ್ಯಗಳ ಬೆಲೆಯು ಕಡಮೆ ಹೆಚ್ಚು ಫಾಲ. ಮಾರ್ಚ್ 23 24 ರಲ್ಲಿ ಧಾನ್ಯಸಂಗ್ರಹಿಸಿ 4ನೇ ತಿಂಗಳಲ್ಲಿ ಮಾರಿದರೆ ಲಾಭವುಂಟಾಗುತ್ತದೆ.

ಸರ್ವೇಜನಾಸ್ಸುಖಿನೋಭವಂತು

ಕರೂರುಶೇಷಾಚಾರ್ಯರು, ಆಸ್ಥಾನಮಹಾವಿದ್ವಾನ್,
ಜ್ಯೋತಿಷ್ಯಾಸ್ಥಾಪ್ರಧಾನೋಧ್ಯಾಯರು,
ಸಂಸ್ಕೃತಮಹಾಪಾಠಶಾಲಾ, ಮೈಸೂರು.

ಟಿ. ವಿ. ನರಸಿಂಹಾಚಾರ್ಯರು, ಆಸ್ಥಾನ ಜ್ಯೋತಿಷವಿದ್ವಾನ್,
ಶ್ರೀ ಸ್ವೆ ಸಿಂಹಜ್ಯೋತಿಷಿಪ್ರಜ್ಞಾಲಯ
ಕೃಷ್ಣರಾಜಮೊಹಲ್ಲಾ, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಮೂಲ್ಯವೇ ಆದ ಫೋಟೋ ಸೈಜು ೨೦×೧೪ ಬೆಲೆ ೧೪ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಮೋಕ್ಷಪ್ರಾಪ್ತವಾದ ಅಗಸ್ತ್ಯ, ಪಥಿಕ, ವ್ಯಾಸ, ಸಾನಂದ, ಪೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸಜ್ಜನ ಭೀಷ್ಮಾರ್ಜುನರು ಮಾಡಿರುತ್ತಿದ್ದ ಅವನು ಅಜ್ಞಾತವಾಸ ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪ ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೪ ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ವಿಕಶಾಲವಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪ ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ಭಜ್ಞಯೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದ್ಭಜ್ಞಯೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪ ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀರೆಸ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪ ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀರೆಸ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರಶಿಖಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಹಿಮಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅದ್ದಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ದೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೋಷಧನಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[48] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಳಾರ್ತಿಪ್ರಾರ್ಥನಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ) .... ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಬಸವಾದಿಶಿವತತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಸ್ತ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತವಿಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಾಧ್ವಾಂತದಿವಾಕರ (೩ನೆಯ ೩ನೆಯ ಆವೃತ್ತಿ) .... ೪ ಆಣೆ

ಪದ್ಮೋದ್ಭವರತ್ನಾವಳಿ .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಾಮು (ತೆಲಗು) ೪ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ಶ್ರೀಕರಭಾಷ್ಯಂ (ಚತುಸ್ಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೫ನೆಯ ಆವೃತ್ತಿ, ೭೦ಮಹತ್ವದ ಫೋಟೋಗಳಿರುವುವು) .... ೧। ರೂ

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* **The Philosophical Aspect of Virasaivism** (*English*) .... 8 As.

Speeches by Pandit Shri Kashinatha Shastriji *English*) 12 As.

ವೀರಶೈವರತ್ನ (ಮರಾಠಿ) ... ... ೧ ರೂ.

ಮಹಾಜಾಬಾಲೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ.

ವೀರಶೈವೋಪದೇಶ (ಸಂಸ್ಕೃತ) ... ... ೧ ರೂ.

ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) ... ... ೬ ಆಣೆ

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) ... ... ೨ ಆಣೆ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ರಾಜ್ಯಾದ್ಯಂತ ದೊಡ್ಡಸಿದ್ಧರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅತ್ಯಾಧುನಿಕ ಮಾದರಿಯಲ್ಲಿ ವೇದ ಸಿದ್ಧಾಂತ ಗುರುಪೂಜಾಮಹತ್ವ ಗಳಬಗ್ಗೆ ಮುದ್ರಿಸಿಕೊಡಲಾಗುತ್ತದೆ.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋಪ್ಪಸರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ಕ್ಕೆ ೯ ಸೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೨೭ನೇ ಮಾರ್ಚಿ ೧೯೩೯ [ಸಂಚಿಕೆ ೪೭

ಶ್ರೀರೇಣುಕ ಸ್ತವನ

ಶರಸ್ವಶದ ಲಿಂಗವ ಶಂ ।
ಶರನರ್ಚಿಸಿ ಶಂಕರಾಸ್ಪತನಾದಂ ॥
ಶರಸ್ವಶದಿ ಶರಪದವಿಯೆ ।
ಅರಿಸುವ ನೀನೆಂಥ ಹರನೊ ಗುರುರೇಣುಕನೇ ॥ ೧ ॥

ನಿನ್ನೆಯ ಚರಣಕೆ ಮಣಿಯಲು ।
ಮಾನ್ಯನು ತಾನಾದನಗ್ರ್ಯ ದೇವಾದಿಗಳಿಂ ॥
ನಿನ್ನೆಯ ಮಂಗಲಚರಣದಿ ।
ಮುನ್ನಪ್ಪಿಹುದಯ್ಯ ಮಹಿಮೆ ಗುರುರೇಣುಕನೆ ॥ ೨ ॥

ಹೊಟ್ಟೆಯೊಳು ಪದಿನಾಲ್ಕು ಲೋಕವ ।
ನಿಟ್ಟು ರಕ್ಷಿಸ ವಿಷ್ಣುವೇವನು ।
ದಿಟ್ಟನಾನು ಕರಧಿಯೊಡೆಯೆಂಬಿ ತಾನಹನು ॥
ಶ್ರೀಕ್ಷ ಸಾಗರವೊಂದುಗುಟುಕಿನೊ ।
ಅಬ್ಬ ಕುಂಭಜನಾವ ಪುತ್ರವ ।
ಪಿಚ್ಚೆಯೊಳ್ ಜಪಸೈದ ಪುಣ್ಯದಿ ಕಂಡ ರೇಣುಕನಂ ॥ ೩ ॥

ಆವನ ಸಹಾಯದಿಂ ದೇವಗಾಮನು ತಾನು ! ದೇವವ್ಯಂದದಿ
ಸೇವೆಗೊಂಡವನ ಹರಸಿವಂ । ಬಾ ವರವಿಭೀಷಣನ ಬನ್ನಿಸುವ
ಮನ್ನಿಸುತ ಮುಕ್ಕೋಟಿಲಿಂಗಗಳನು ॥
ಭಾವ ಕೈ ಮನಸೋತು ಮುಕ್ಕೋಟಿರೂಪಿಗಳ । ಜಾವಳಿ
ಧರಿಸುತಲಿ ಬಿಡದೊಂದು ನಿಮಿಷದಲಿ । ತಿರುಪತಿ ಸ್ಥಾಪಿಸಿದ
ವರಮುನಿಂ ನಿಗಮನುತ ಜಗದಾರ್ಯ ರೇಣುಕೇಶಾ ॥ ೪ ॥

ಚರಗಣಚಕ್ರವರ್ತಿ ಗುರುಮಂಗಳಮೂರ್ತಿ ವಿಶಾಲಕೀರ್ತಿ ಶಂ ।
ಕರ ಪರವಾದಿಮರ್ಮವಿವಾರಣದಕ್ಷ ಸುಶಿಷ್ಟ ಚಿತ್ತಭಾ ॥ ಕರ
ಹರಪಾದಪದ್ಮಮಧುಮೋಹಿತಭೃಂಗ ಹೃದೀಶವಾಸ ಸ । ಚ್ಚರಿತ
ಯನಿಶಾ ರಕ್ಷಿಪುದು ಮಂಗಲಮಸ್ತು ಜಯಂತಿಮಂಗಲಂ ॥ ೫ ॥

ಮಳವಳ್ಳಿ ಗಂಗಾಧರ,
ಹೆಡ್‌ಮಾಸ್ಟರ್, ತಿಗಡಿ ಸ್ಕೂಲ್.

ಶ್ರೀಜಗದ್ಗುರು ರೇಣುಕ ಸ್ತೋತ್ರ

॥ ಕಂದ ॥

ಶ್ರೀಮಚ್ಚಂಕರಮಾನಸ ।
ತಾಮರಸವಿಕಾಸಗೈವ ಭಾಸುರಸೂರಂ ॥
ಕಾಮಮಹೀಧರಕುಲಿಶಂ ।
ಕಾಮಿತಫಲದಾತ ಭೂತ ರೇಣುಕದೇವಂ ॥ ೧ ॥

ಪ್ರೇಮವಶಂ ಹೃತಶಾಕಂ ।
ಕೋಮಲಸುಮುಖಸಪ್ತಶತಸಂಸೇವಿತಪಾದಂ ॥
ಕೋಮಲಮುಖಿಸಪ್ತಜಯಾ ।
ರಾಮಾಂ ಕರಣಾಗತಜನಪಾಲನಶೀಲಂ ॥ ೨ ॥

ಅನಲನಿಲೋಚನಫಾಲಂ ।
ಘನತರಭಕ್ತೇಷ್ಟದಾನನಿತರಣಶೀಲಂ ॥
ಗಣಯೂಥನಾಥಲೋಲಂ ।
ಬಿನದಿಂ ಪಾಲಿಸುಗೆ ಬೇಗ ರೇಣುಕನೆಮ್ಮಂ ॥ ೩ ॥

॥ ಚಂಪಾಲಾ-ವೃತ್ತಂ ॥

ಸುಗುಣವಿಭೂಷಣಂ ಮಧುರಭಾಷಣಭೀಷಣ ಪುಷ್ಪಶೋಷಣಂ ।
ಸೊಗಯಿಪ ವೀರಪೀಠಪತಿಣಂ ಶರಣಾಗತಪೂಗಪೋಷಣಂ ॥
ಕುಗುಣಜನಾಳಿದರ್ಪಹರಣಂ ಭವಬಂಧನ ನಾಶಕಾರಣಂ ।
ಮಿಗೆ ನುಹಿಮಾಕರಂ ಪೊವೆಗೆ ರೇಣುಕನೆಮ್ಮನುದಿನ್ಯಪ್ಪಿಯಂ ॥

॥ ಶಾ-ವಿ-ವೃತ್ತಂ ॥

ದೇವಾದೇಶವನಾಂತು ಲಿಂಗಿಮತಮಂ ಸರ್ವತ್ರ ಸಂಸ್ಥಾಪಿಸಿ । ಭೂವಿ
ಖ್ಯಾತನ ನಾಮಿ ಮೂಜಗದೊಳೆಂದುಂ ಲಿಂಗದೊಳ್ ಪೊಣ್ಮುತುಂ ॥
ಅವಂ ರಂಜಪನೆಲ್ಲಿಯುಂ ಪರತರಬ್ರಹ್ಮಪ್ರಕಾಶೋಜ್ವಲಂ ।
ದೇವಂ ರೇಣುಕನಾತನಂ ನುತಿಸುವೆಂ ರಂಭಾಪುರೀನಾಸನಂ ॥ ೫ ॥

॥ ಕಂದ ॥

ಚರಪರಗಣವರರೇಣುಕ ।
ಚರಣಪಯೋಜಾತಕೊಲ್ದು ಸೊರಬದ ಗಂಗಾ ॥
ಧರನೆಂಬ ಛಾತ್ರನಗಳ್ ।
ಧರಿಪಿನೀ ಪದ್ಯಸರವನನೇಂ ಧನ್ಯಂ ॥ ೬ ॥

ಗಂಗಾಧರಶಿವಾಚಾರ್ಯ,
ನೊರಬ.

ಸ್ವೀಕಾರ.

ಅನಂತಪುರ ಡಿ॥ ಮಡಕಶಿರಾ ತಾ॥ ಜಂಬಲಬಂಡೆ ಗ್ರಾಮದ ಮಿ॥ರಾ॥ ಭೋಜೇಗೌಡರ ಪುತ್ರಿ ಸೌ॥ ಪಾರ್ವತಮ್ಮನವರು ಶಿವಾಧೀನರಾದ ನಿಮಿತ್ತವಾಗಿ ನೆರವೇರಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂ.ಗಳು ವೇ॥ ಟಿ. ಯಂ. ಗಂಗಾಧರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ರಾಜಧಾನೀ ನಿವಾಸಿಗಳಾದ ಡಾಕ್ಟರ್ ಟಿ. ಎಸ್ ಸಿದ್ದಪ್ಪನವರು ತಾ॥ 5-3-39 ನೇ ದಿವಸ ತಮ್ಮ ಗೃಹದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ॥ ರೂ. ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಪೀಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಈ ವರ್ಷದಲ್ಲಿ ಮಳೆಗಳು.

(ರೈತರು ಗಮನಿಸಬೇಕಾದ ವಿಷಯ)

ಸಾಧಾರಣವಾಗಿ ಪ್ರತಿ ಮಳೆಯ ಯೋಗವೂ ಎರಡು ವಾರಗಳು. ಪ್ರತಿ ಮಳೆಯನ್ನೂ ನಾಲ್ಕು ಪಾದವಾಗಿ ವಿಂಗಡಿಸಿರುವರು. ಪಾದವೊಂದಕ್ಕೆ ಮೂರು ನಾಲ್ಕು ದಿನಗಳು. ರೈತನಿಗೆ ತಾರೀಖು ನೆನಪಿನಲ್ಲಿಡುವುದು ಶ್ರಮವಾದ್ದರಿಂದ ಹುಣ್ಣಿಮೆ ಅಮಾವಾಸ್ಯೆ ಕಾಲಗಳ ಮಳೆಯ ವಿವರಗಳನ್ನು ಇಲ್ಲಿ ಕೊಟ್ಟಿದೆ.

ಮಾಸ		ಮಳೆ	ಪಾದ
ಚೈತ್ರ	ಪೂರ್ಣಿಮಾ	ರೇವತಿ	೨
,,	ಅಮಾವಾಸ್ಯೆ	ಅಶ್ವಿನಿ	೩
ವೈಶಾಖ	ಪೂರ್ಣಿಮಾ	ಭರಣಿ	೩
,,	ಅಮಾವಾಸ್ಯೆ	ಕೃತ್ತಿಕೆ	೩
ಜ್ಯೇಷ್ಠ	ಪೂರ್ಣಿಮಾ	ರೋಹಿಣಿ	೩
,,	ಅಮಾವಾಸ್ಯೆ	ಮೃಗಶಿರ	೩
ಆಷಾಢ	ಪೂರ್ಣಿಮಾ	ಆರ್ದ್ರಾ	೩
,,	ಅಮಾವಾಸ್ಯೆ	ಪುನರ್ವಸು	೪
ಆ॥ಶ್ರಾವಣ	ಪೂರ್ಣಿಮಾ	ಪುಷ್ಯಾ	೪
,,	ಅಮಾವಾಸ್ಯೆ	ಆಶ್ಲೇಷ	೪
ನಿಜಶ್ರಾವಣ	ಪೂರ್ಣಿಮಾ	ಮಖ	೪
,,	ಅಮಾವಾಸ್ಯೆ	ಪುಬ್ಬಾ	೪
ಭಾದ್ರಪದ	ಪೂರ್ಣಿಮಾ	ಹಸ್ತಾ	೧
,,	ಅಮಾವಾಸ್ಯೆ	ಚಿತ್ತಾ	೧
ಆಶ್ವಯುಜ	ಪೂರ್ಣಿಮಾ	ಸ್ವಾತಿ	೨
,,	ಅಮಾವಾಸ್ಯೆ	ವಿಶಾಖಾ	೨

ಕ್ಷಾಮಪೀಡಿತರಿಗೆ ಸರ್ಕಾರದ ಸಹಾಯ !

ಮದರಾಸ್ ಆಧಿಪತ್ಯಕ್ಕೊಳಪಟ್ಟಿರುವ ತಿರಪ್ಪೂರು, ಕೊಯಮತ್ತೂರು ಜಿಲ್ಲೆಗಳಲ್ಲಿಯ 100 ಗ್ರಾಮಗಳಲ್ಲಿ ಕ್ಷಾಮದಿಂದ ಪ್ರಜೆಗಳು ಜೀವನಕ್ಕೆಲ್ಲದೆ ಕಷ್ಟಪಡುತ್ತಿರುವದರಿಂದ, ಅವರುಗಳ ಕಷ್ಟಪರಿಹಾರಕ್ಕಾಗಿ ವಿಶೇಷತರದ ಕಾವುಗಾರಿಗಳನ್ನು ಕೈಗೊಳ್ಳತಕ್ಕದ್ದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಸುಮಾರು 23000 ಪ್ರಜೆಗಳು ಹೊಟ್ಟಿಗಿಲ್ಲದೆ ತಮ್ಮ ವನಕರುಗಳನ್ನು ಅತ್ಯಲ್ಪ ಬೆಲೆಗೆ ಮಾರುತ್ತಿದ್ದಾರೆಂಬುದು ಸ್ಥಳಾಧಿಕಾರಿಗಳಿಗೆ ತಿಳಿದು, ಸದ್ಯಃ ಅವರು 12 ಸ್ಥಳಗಳಲ್ಲಿ ದಿನವಹಿ 15000 ಪ್ರಜೆಗಳನ್ನು ಸಾಕಲಾರಂಭಿಸಿರುತ್ತಾರೆ. ಅನೇಕ ಸ್ಥಳೀಯ ಐಶ್ವರ್ಯವಂತರೂ ಸಹ ಬಡಜನ್ಮರಿಗೆ ಜೀವನವನ್ನು ನಡಿಸಲಾರಂಭಿಸಿರುವರು.

॥ ಶ್ರೀಜಗದ್ಗುರು-ಶಿಕ್ಷಾಪ್ರಸ್ಥೋ ವಿಜಯತೇ ॥

ಯುಗಾದಿಯ ಹಬ್ಬ.

ಪೀಠಸ್ಥ:- ಶ್ರೀ ಗುರುದೇಪಶಿವಾಚಾರ್ಯಸ್ವಾಮಿಗಳವರು
ಶಿಕ್ಷಮಾಂಡ್ಯ, ಹೀರೇಮಠ. (ಶ್ರೀ ವಿದ್ಯಾಪ್ರಸ್ಥಾಶ್ರಮ)

ಪರಮ ಪವಿತ್ರವಾದ ನಮ್ಮಿ ಭಾರತಭೂಮಿಯಲ್ಲಿ ಪೂರ್ವಜರು ಮಾನವಜನಿಯ ಉದ್ಧಾರಕ್ಕೋಸ್ಕರ ಪರಮಾತ್ಮ ಸಂಬಂಧಗಳಾದ ಪುರಾಣ ಪುಣ್ಯಕಥಾಶ್ರವಣಾದಿ ಭಕ್ತಿಮಾರ್ಗಗಳನ್ನು ಹಾಕಿಕೊಟ್ಟಿದ್ದಾರೆ ನಾವು ಈಗ ಆಚರಿಸತಕ್ಕ ಹಬ್ಬಗಳು ಪರಮಾತ್ಮನ ಸನ್ನಿಧಿಯನ್ನು ಮುಟ್ಟಿಸತಕ್ಕ ರಾಜಮಾರ್ಗವೆಂದು ಹೇಳಬೇಕಾಗಿದೆ. ಹಬ್ಬವು ಪರಮಾತ್ಮನ ಅದ್ಭುತ ಲೀಲೆಯ ಸ್ಮಾರಕ ದಿವಸವು. ಹಬ್ಬವೆಂದರೆ ಎಲ್ಲರಿಗೂ ಬಲು ಉಬ್ಬು. ಆ ದಿವಸ ಮಾನವನ ಉತ್ಸಾಹವು ಅಧಿಕವಾಗಿ ಉಳ್ಳೇರುತ್ತಿರುವುದು ಅಂದು ಸರ್ವರೂ ತಮ್ಮ ತಮ್ಮ ಮನೆಮಠಗಳನ್ನು ಸುಣ್ಣ ಬಣ್ಣಗಳಿಂದ ಸಾರಿಸಿ ಸಕ್ಕರ್ಪನ್ನಗಳನ್ನು ಸ್ವೀಕರಿಸಿ ಪರಮಾತ್ಮನ ಅದ್ಭುತ ಲೀಲೆಯನ್ನು ಪಾಡಿ ಆನಂದದಿಂದ ಕಾಲಕಳೆಯುವರು. ಆ ದಿವಸ ಕೋರ್ಟು-ಕಚೇರಿಗಳೂ, ಸ್ಕೂಲು-ಕಾಲೇಜುಗಳೂ ಸಹ ಮುಚ್ಚಲ್ಪಟ್ಟಿರುತ್ತವೆ ಚಿಕ್ಕ ಬಾಲಕರ ಆನಂದಕ್ಕೆ ಎಣೆಯೇ ಇಲ್ಲವಾಗಿರುತ್ತದೆ ಹಬ್ಬಗಳನ್ನಾಚರಿಸುವ ಪದ್ಧತಿಯು ನಮ್ಮ ಭಾರತದಲ್ಲಿ ಅಷ್ಟೇ ಅಲ್ಲ. ಇಂಗ್ಲೆಂಡ್, ಜರ್ಮನಿ, ಅಮೆರಿಕಾ, ಚೀನಾ, ಜಪಾನ್ ಮೊದಲಾದ ದೇಶಗಳಲ್ಲಿಯೂ ಉಂಟು. ಈ ಪ್ರಕಾರವಾಗಿ ಎಲ್ಲ ದೇಶಗಳಲ್ಲಿಯೂ ಹಬ್ಬಗಳನ್ನು ಆಚರಿಸುವದರಿಂದ ಅವರಿಗೆ ಪರಮಾತ್ಮನ ಕೃಪಾಕಟಾಕ್ಷವು ಪ್ರಾಪ್ತವಾಗಿ ಅವರು ಪುತ್ರಪಾತ್ರಾದಿಗಳಿಂದಲೂ ಧನಕನಕಾದಿಗಳಿಂದಲೂ ಮುದಾಂಧರಾಗಿ ಪರಮಾತ್ಮನನ್ನು ಮರೆಸಿ ಮಹಾಪಾಪಿಗಳಾದಲ್ಲಿ ಮುಳುಗಬಾರದೆಂಬ ಸದುದ್ದೇಶದಿಂದಲೇ ಪೂರ್ವಜರು ಪರಮಾತ್ಮನ ಅಗಾಧಲೀಲೆಗಳನ್ನು ವ್ಯಕ್ತ ಮಾಡತಕ್ಕ ಹಬ್ಬಗಳನ್ನು ಪೂರ್ವಕಾಲದಿಂದಲೂ ಆಚರಿಸುತ್ತ ಬಂದಿದ್ದಾರೆ. ಹೀಗಿರುವಲ್ಲಿ ಈಗಿನ ಹಲವು ನವೀನ ಸುಧಾರಕರು ಹಬ್ಬಗಳೆಂದರೆ ಹಣವ್ಯಯದಿವಸ ಕ್ಕೊಮ್ಮೆ ಮಿಷ್ಟಾನ್ನವನ್ನು ಉಣ್ಣುವದಕ್ಕಾಗಿ ಕಲ್ಪಿಸಿಕೊಂಡ ದಿವಸವೆಂದು ಹೇಳುತ್ತಾರೆ ಪ್ರಯೋಜನವಿಲ್ಲದೆ ನುದ್ದಿಶ್ಯ ನಮಂದೋಪಿ ಪ್ರವರ್ತತೇ । ಎಂಬ ವಾಕ್ಯದಂತೆ ಪ್ರಯೋಜನವಿಲ್ಲದೆ ಯಾವ ಮೂಢನೂ ಯಾವ ಕಾರ್ಯವನ್ನೂ ಮಾಡುವದಿಲ್ಲ ಅದರಿಂದ ಪ್ರತಿಯೊಂದು ಹಬ್ಬಗಳಿಗೂ ಪರಿಯಾದ ಕಾರಣಗಳು ಇದ್ದೇ ಇರುತ್ತವೆ.

ಸಂವತ್ಸರಾರಂಭ ಅಥವಾ ಯುಗಾದಿಯ ಹಬ್ಬ

ಜ್ಯೋತಿಷಶಾಸ್ತ್ರವು ವರ್ಷಾರಂಭದ ದಿವಸವನ್ನು ಪರಮಪವಿತ್ರವೆನ್ನುವದರಿಂದ ಪ್ರತಿಯೊಂದು ಧರ್ಮಾಚರಣೆಗೂ ಈ ವರ್ಷಾರಂಭದ ದಿವಸವು ಅತಿಮಹತ್ವದ್ದಾಗಿರುವದು ಹಿಂದೂಜನರು ಈ ದಿವಸವನ್ನು ಪುಣ್ಯಕಾಲವೆಂದು ಭಾವಿಸುತ್ತಾರೆ ಅದರಿ ವರ್ಷಾರಂಭವನ್ನು ಹಿಂದೂಸ್ಥಾನದ ಎಲ್ಲೆಡೆಯಲ್ಲಿಯೂ ಚೈತ್ರ ಶುದ್ಧ ಪ್ರತಿಪದೆಯ ದಿವಸವೇ ಆಚರಿಸುವದಿಲ್ಲವು. ಪೂರ್ವಕಾಲದಲ್ಲಿ ವಿಕ್ರಮ ಸಂಕ್ರಾಂತಿಯ ದಿವಸವನ್ನು ವರ್ಷಾರಂಭವೆಂದು ಭಾವಿಸುತ್ತಿದ್ದರೆಂಬುದಾಗಿ ಕೆಲವು ಅಧ್ಯಯನಗಳಿಂದ ಕಂಡುಬರುತ್ತದೆ ಉತ್ತರ ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ಕಾರ್ತಿಕ ಶುದ್ಧ ಪ್ರತಿಪದೆಯಿಂದ ವರ್ಷಾರಂಭವನ್ನು ಗಣಿಸುತ್ತಾರೆ ಕಾಶ್ಮೀರ ದೇಶದಲ್ಲಿ ಲಂಬ ವರುಷಗಳ ಹಿಂದೆ ಚೈತ್ರ ಶುದ್ಧ ಪ್ರತಿಪದವು ಹೊಸ ದಿವಸವೆಂದೂ ಆ ದಿವಸ ದೊಡ್ಡ ಉತ್ಸವವನ್ನು ಹೊರಡಿಸುತ್ತಿದ್ದರೆಂದೂ ಕೆಲವು ಐತಿಹಾಸಕ ಗ್ರಂಥಗಳಲ್ಲಿ ಉಲ್ಲೇಖಿಸಿದೆ ದಕ್ಷಿಣ ಭಾರತದಲ್ಲಿ ಚೈತ್ರ ಶುದ್ಧ ಪ್ರತಿಪದೆಯನ್ನು ವರ್ಷಾರಂಭವನ್ನಾಗಿ ಆಚರಿಸುತ್ತಾರೆ

ಕಾಲ ಅಥವಾ ಶಕ ಇವುಗಳ ಪರಿಜ್ಞಾನವಿಲ್ಲದೆ ನಮಗೆ ವರ್ಷಾರಂಭವೇನೆಂಬುದನ್ನು ನಿರ್ಣಯಮಾಡುವದು ಶಕ್ಯವಿಲ್ಲ. ಶಕವೆಂದರೆ ಕಾಲ ಪೂರ್ವದಲ್ಲಿ ಯಾವಯಾವ ದೇಶದಲಿ ಬಲಾಢ್ಯರಾದ ರಾಜರು ಆಳಿ ತಮ್ಮತಮ್ಮ ಧರ್ಮಗಳನ್ನು ನಾಶವಾಗದಂತೆ ಸ್ಥಿರಪಡಿಸಿರುವರೋ ಅಂಥವರ ಶಕ (ಕಾಲ) ವೇ ಈಗಲಾದರೂ ಆಯಾ ದೇಶಗಳಲ್ಲಿ ನಡೆಯುತ್ತಿರುವದು. ಪ್ರಸ್ತುತ ನಮ್ಮ ದೇಶದಲ್ಲಿ ಶಾಲೀವಾಹನಶಕ-ವಿಕ್ರಮಶಕ-ಸಪ್ತರ್ಷಿಶಕ ಬಂಗಾಲೀಸನ್, ಅಮಲೀಸನ್; ಫಸಲೀಸನ್, ಸೂರಸನ್, ಮಗಸನ್, ಕೋಲಮಕಾಲ, ನೇಪಾಲಕಾಲ, ಲಕ್ಷ್ಮಣಸೇನ ಕಾಲ, ಕ್ರಿಸ್ತಶಕ ಇವುಗಳು ಮುಖ್ಯವಾಗಿರುವವು. ಶಾಲೀವಾಹನಶಕ, ವಿಕ್ರಮಶಕ ಕ್ರಿಸ್ತಶಕ ಈ ಮೂರು ಶಕಗಳು ಮಾತ್ರ ನಮ್ಮ ದೇಶದಲ್ಲಿ ವಿಶೇಷ ನಡೆಯುತ್ತಿರುವವು

ವಿಕ್ರಮಕಾಲ (ಶಕ)

ಕ್ರಿಸ್ತಶಕಕ್ಕೆ ೫೬ ವರುಷಗಳ ಪೂರ್ವದಲ್ಲಿ ವಿಕ್ರಮಾರ್ಕನೆಂಬ ಬಲಾಢ್ಯನಾದ ರಾಜನು ಆಗಿ ಹೋದನು. ಇವನ ಪ್ರತಾಪವು ಅನೇಕ ಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿರುವದು ಈ ಶಕೆಯು ಬಂಗಾಲದಿಂದ ಉತ್ತರ ಹಿಂದೂಸ್ಥಾನದಲ್ಲಿ ನಡೆಯುತ್ತಿರುವದು ಕಾರ್ತಿಕ ಶುದ್ಧ ಪ್ರತಿಪದದಿಂದ ವಿಕ್ರಮಶಕೆಯು ವರ್ಷಾರಂಭವು.

ಶಾಲೀವಾಹನ ಕಾಲ (ಶಕ)

ಪೂರ್ವದಲ್ಲಿ ಶಾಲಿವಾಹನನೆಂಬ ಸರ್ವಗುಣಸಂಪನ್ನನಾದ ರಾಜನು ಮಣ್ಣಿನಿಂದ ಸೈನ್ಯವನ್ನು ನಿರ್ಮಿಸಿ ಅದಕ್ಕೆ ಜೀವಕಳೆಯನ್ನು ತುಂಬಿದನೆಂದೂ, ಆ ಸೈನ್ಯದ ಸಹಾಯದಿಂದ ದಿಗ್ವಿಜಯವನ್ನು ಮಾಡಿದನೆಂದೂ ಕೆಲವು ಗ್ರಂಥಗಳು ಹೇಳುತ್ತಿರುವವು ಕ್ರಿಸ್ತರ ಕ ೭೮ ವರುಷಗಳ ನಂತರ ಶಾಲೀವಾಹನ ಶಕೆಯು ಸ್ವಾರಂಭವಾಯಿತು. ಈ ಶಕೆಯು ದಕ್ಷಿಣ ಹಿಂದುಸ್ಥಾನದಲ್ಲಿ ನಡೆಯುತ್ತಿರುವದು ಈ ಶಕೆಯು ಜ್ಯೌತಿಷ ಗ್ರಂಥಗಳಲ್ಲಿಯೂ ಸುಪ್ರಸಿದ್ಧವಾಗಿದೆ ಚೈತ್ರಶುದ್ಧ ಪ್ರತಿಪದೆಯಿಂದ ಈ ಶಕೆಯ ವರ್ಷಾರಂಭವು ಆದ್ದರಿಂದಲೇ ಕರ್ನಾಟಕ, ತೆಲಗು, ತಮಿಳು ಮೊದಲಾದ ದೇಶವಾಸಿಗಳು ಆ ದಿವಸವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸುತ್ತಾರೆ ಈ ದಿವಸಕ್ಕೆ ಯುಗಾದಿಯೆಂತಲೂ ಪುಸಿದ್ಧಿಯುಂಟು ವಿಕ್ರಮ ಶಕೆಯು ಹೊಸ ದಿವಸವಾದ ಕಾರ್ತಿಕ ಶುದ್ಧ ಪ್ರತಿಪದಕ್ಕಿಂತಲೂ ಚೈತ್ರ ಶುದ್ಧ ಪ್ರತಿಪದವು ಅತಿಪವಿತ್ರವಾದುದೆಂದು ಅನೇಕ ಗ್ರಂಥಗಳಲ್ಲಿ ಉದಾಹರಿಸಲ್ಪಟ್ಟಿರುವದು ಯಾಕೆಂದರೆ ಎಲ್ಲ ಮಾಸಗಳಲ್ಲಿಯೂ ಚೈತ್ರಮಾಸವು ಮೊದಲು ಬರುವದು ಅದರಂತೆಯೇ ಎಲ್ಲ ಋತುಗಳಲ್ಲಿಯೂ ವಸಂತ ಋತುವೇ ಮೊದಲನೆಯದಾಗಿರುವದು ಆ ದಿವಸಕ್ಕೆ ಯುಗಾದಿಯೆಂತಲೂ ಪ್ರಸಿದ್ಧಿಯುಂಟು. ಯುಗಾದಿಯೆಂಬುದರಿಂದ ಸೃಷ್ಟಿಯ ಮೊದಲನೆಯ ದಿವಸವೆಂಬ ಅರ್ಥವು ವ್ಯಕ್ತವಾಗುವದು.

ಯುಗಾದಿಯ ಉತ್ಪತ್ತಿ.

"ಬಹುಸ್ಯಾಂ ಪ್ರಜಾಯೇಯ" ಎಂಬ ಭಗವದ್ವಾಕ್ಯದಂತೆ ಶ್ರೀ ಪರಶಿವನು ತನ್ನಲ್ಲಿ ಅವ್ಯಕ್ತರೂಪದಿಂದಿರುವ ಸ್ಥಾವರಜಂಗಮಾತ್ಮಕವಾದೀ ಜಗತ್ತನ್ನು ವ್ಯಕ್ತಗೊಳಿಸಲೋಸುಗ ವ್ಯವಹಾರಾರ್ಥವಾಗಿ ವರ್ಷ, ಋತು, ಮಾಸ, ಪಕ್ಷ, ಸಂವತ್ಸರಗಳನ್ನು ಯೋಜಿಸಿ ಇಂದ್ರಾದಿ ದೇವತೆಗಳನ್ನು ಕರೆದು ಅವರಿಗೆ ಜಗದ್ರಕ್ಷಣಾದಿ ಕಾರ್ಯಗಳನ್ನು ವಹಿಸಿದನು ಆ ದೇವತೆಗಳು ಪರಶಿವನ ಆಜ್ಞಾಪಾಲನಾರ್ಥವಾಗಿ ಹಿಮಾಲಯಕ್ಕೆ ಬಂದು ಪ್ರಥಮದಿವಸವನ್ನು ಯುಗಾದಿಯೆಂದು ಕರೆದರೆಂದು ಅನೇಕ ಗ್ರಂಥಗಳು ಹೇಳುತ್ತವೆ.

ಪ್ರಭವಾದಿ ಅರವತ್ತು ಸಂವತ್ಸರಗಳ ಉತ್ಪತ್ತಿ.

ಮನ್ಮಹಾಸಿಗಳಿಂದ ವಂದ್ಯನೂ ಗಾನಪ್ರಿಯನೂ ಆದ ನಾರದ ಮಹರ್ಷಿಯು ಒಂಗುನೊಂದು ದಿವಸ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿರಲು ಎಷ್ಟು ವಿಮಾನಗಳು ಪರಸ್ಪರ ಕ್ರೀಡಿಸುತ್ತಿದ್ದವನ್ನು ನೋಡಿ ನಾರದಮುನಿಯು ತಾನೂ ಗಗನಸಂಚಾರಿಯಾಗಬೇಕೆಂದು ಯೋಚಿಸಿದನು, ಇವನಲ್ಲಿ ಧನವಿಲ್ಲ ತಿಲಮಾತ್ರವೂ ಇಲ್ಲದುದರಿಂದ ನಾರದನಿಗೆ ಕನ್ಯೆಯನ್ನು ಕೊಡುವವರು ಯಾರೂ ದೊರೆಯಲಿಲ್ಲ ಆಗ ನಾರದನು ಶ್ರೀ ಕೃಷ್ಣನಿಗೆ ಹದಿನಾರು ಸಾವಿರ ಜನ ಸತಿಯರಿರುವರೆಂದು ತಿಳಿದು ಶ್ರೀಕೃಷ್ಣನ ಒಳಗೆ ಹೋಗಿ ಅವರಲ್ಲಿ ಒಬ್ಬ ಸ್ತ್ರೀಯನ್ನು ಯಾಚಿಸಬೇಕೆಂದು ದ್ವಾರಕಾನಗರಕ್ಕೆ ತೆರಳಿ, ಕೃಷ್ಣನಿಗೆ ನಮಸ್ಕರಿಸಿ, ದೇವಾ! ನನಗೆ ಇಷ್ಟು ವರೆಗೂ ಬ್ರಹ್ಮಚರ್ಯಾಶ್ರಮದಲ್ಲಿದ್ದು ಕಾಲವನ್ನು ಕಳೆದು ಮನಸ್ಸಿಗೆ ಬೇಸರವಾಗಿದೆ. ಇನ್ನುಮುಂದೆ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕೆಂಬ ಆಶೆಯುಂಟಾಗಿದೆ. ನಿನ್ನಲ್ಲಿ ಅಸಂಖ್ಯ ಜನ ಸ್ತ್ರೀಯರಿದ್ದಾರೆ. ಅವರೆಲ್ಲರಲ್ಲಿಯೂ ನೀನೊಬ್ಬನೇ ಕ್ರೀಡಿಸುವದು ಸಾಧ್ಯವಿಲ್ಲ. ಆದ್ದರಿಂದ ನನಗೋರ್ವ ಸ್ತ್ರೀಯಳನ್ನು ಕೊಡಬೇಕೆಂದು ಕೇಳಿದನು ಆಗ ಶ್ರೀಕೃಷ್ಣನು ಕಾಮಾಂಧನಾದ ನಾರದನ ವಾಕ್ಯವನ್ನು ಕೇಳಿ, ಜೀವರ್ಷಿಯೇ! ನನಗೆ ಅಸಂಖ್ಯಜನ ಸತಿಯರಿರುವದು ನಿಜ. ಆದರೆ ನಾನು ಯಾವ ಸ್ತ್ರೀಯಳ ಮನೆಯಲ್ಲಿ ಇರುವುದಿಲ್ಲವೋ ಆ ಸ್ತ್ರೀಯಳನ್ನು ನೀನು ಗ್ರಹಿಸಬಹುದೆಂದು ಹೇಳಿದನು. ಶ್ರೀಕೃಷ್ಣನ ಆಜ್ಞೆಯಂತೆ ನಾರದನು ಎಲ್ಲ ಸ್ತ್ರೀಯರ ಮನೆಯನ್ನೂ ನೋಡಿದನು. ಶ್ರೀಕೃಷ್ಣನು ಪ್ರತಿಯೊಬ್ಬ ಸ್ತ್ರೀಯಳ ಮನೆಯಲ್ಲಿಯೂ ಇದ್ದನು. ಆಗ ನಾರದನು ನಿರಾಶನಾಗಿ ತಿರುಗಿಬಂದನು. ಆಗ ಸಂಧ್ಯಾಕಾಲವಾದ್ದರಿಂದ ಜಪಸಂಧ್ಯಾವಂದನಾದಿಗಳನ್ನು ಮಾಡಲೋಸುಗ ಗಂಗಾನದಿಯ ಕಡೆಗೆ ಪ್ರಯಾಣ ಮಾಡಿದನು. ವಿವಾಹಸುಖವನ್ನು ಅನುಭವಿಸಬೇಕೆಂದು ಹಲವು ಬಗೆಯಿಂದ ಯೋಚಿಸುತ್ತಿರುವ ನಾರದನಿಗೆ ಕಡೆಗೆ ಪುನಃ ಶ್ರೀ ಕೃಷ್ಣನಲ್ಲಿಯೇ ಓರ್ವ ಸ್ತ್ರೀಯಳನ್ನು ಯಾಚಿಸಬೇಕೆಂಬುದನ್ನು ನಿರ್ಧರಿಸಿ ನದಿಯಲ್ಲಿ ಇಳಿದು ಸ್ನಾನ ಮಾಡಹತ್ತಿದನು. ವಿವಾಹಸುಖದ ವಿಚಾರದಲ್ಲಿಯೇ ಮಗ್ನನಾಗಿ ಮತ್ತೊಮ್ಮೆ ನಿರಿನಲ್ಲಿಮುಳುಗಿ ಏಳುವಷ್ಟರಲ್ಲಿಯೇ ಪುರುಷವೇಷವು ಹೋಗಿ ಸ್ತ್ರೀವೇಷವು ಪ್ರಾಪ್ತವಾಗಿತ್ತು. ಆಗ ನಾರದನು ತನ್ನ ಸ್ವರೂಪವನ್ನು ನೋಡಿ ಲಜ್ಜೆಯಿಂದ ಕೂಡಿ ಆಶ್ರಮದ ಕಡೆಗೆ ಬರಹತ್ತಿದನು. ಮಧ್ಯ ಮಾರ್ಗದಲ್ಲಿ ಓರ್ವ ಸನ್ಯಾಸಿಯು ಅವನ ಎದುರಿಗೆ ಬಂದನು. ಆಗ ಅತನು ಅವಳ ರೂಪಲಾವಣ್ಯಾದಿಗಳಿಗೆ ಮೋಹಿತನಾಗಿ ನಾರದಿಯನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋಗಿ ಶುಭಮುಹೂರ್ತದಲ್ಲಿ ಪಾಣಿಗ್ರಹಣಮಾಡಿಕೊಂಡನು ಆಮೇಲೆ ಸನ್ಯಾಸಿ ಮತ್ತು ನಾರದಿ ಇವರೀರ್ವರೂ ದಾಂಪತ್ಯಸುಖವನ್ನು ಹೊಂದಲಾಗಿ ನಾರದಿಯು ಉದರದಿಂದ ಅರವತ್ತು ಜನ ಪುತ್ರರು ಜನಿಸಿದರು ನಾರದಿಯು ಪುತ್ರರ ಶುಶ್ರೂಷೆಯಿಂದ ದುಃಖಿತಳಾಗಿ ಗೃಹಸ್ಥಜೀವನದಲ್ಲಿ ಅನಂತ ಕ್ಲೇಶಗಳನ್ನು ಸಹಿಸಲಾರದೆ ವಿಷ್ಣುವನ್ನು ಮರೆಹೊಕ್ಕು, ದೇವಾ! ಈ ಮಹಾದುಃಖದಿಂದ ನನ್ನನ್ನು ದೂರ ಮಾಡೆಂದು ಹಲವುಬಗೆಯಿಂದ ಪ್ರಾರ್ಥಿಸಲು ಕರುಣಾನಿಧಿಯಾದ ವಿಷ್ಣುವು ಪ್ರಸನ್ನನಾಗಿ ನಾರದನಿಗೆ ತನ್ನ ದಿವ್ಯದರ್ಶನವನ್ನಿತ್ತು ಎಲ್ಲೆ ನಾರದನೇ! ನೀನು ಮಹಾಜ್ಞಾನಿಯೆಂದು ಅನೇಕ ದೇವಾಧಿದೇವತೆಗಳಂದ ಹೊಗಳಿಸಿಕೊಳ್ಳುವವನಾಗಿ ಕಡೆಗೆ ನಶ್ವರವಾದ ವಿಷಯ ಜಾಲದಲ್ಲಿ ಧುಮುಕಿ-ಧುಃಖಕ್ಕೀಡಾದೆ, ಎಂದು ನಾನಾ ಪ್ರಕಾರವಾಗಿ ಉಪದೇಶಮಾಡಹತ್ತಿದನು. ಅವ್ಯರ್ಥಳಾದ ನಾರದಿಯು ಅರವತ್ತು ಜನ ಪುತ್ರರಲ್ಲಿ ಕೆಲವರು ಅವ್ಯಾ! ನಮಗೆ ಹಸಿವೆಯಾಗಿದೆಯೆಂತಲೂ ಹಲವರು ನಮಗೆ ತೃಷೆಯಾಗಿದೆಯೆಂತಲೂ ಕೂಗಹತ್ತಿದರು. ಅದನ್ನು ಕೇಳಿ ನಾರದಿಯು ಶ್ರೀ ವಿಷ್ಣುವನ್ನು ಕುರಿತು ದೇವಾ ಮೊದಲು ಈ ಪುತ್ರರನ್ನು ಸಮಾಧಾನಪಡಿಸಿ ಮುಂದೆ ಇವರಿಗೆ ಸುಖಜೀವನದ ಮಾರ್ಗವನ್ನು ತೋರಿಸು. ಆಮೇಲೆ ನನಗೆ ಪೂರ್ವದ ಪುರುಷವೇಷವನ್ನು ಕೊಟ್ಟು ನನ್ನನ್ನು ರಕ್ಷಿಸಬೇಕೆಂದು ಬೇಡಿಕೊಂಡಳು. ಆಗ ದೀನರಕ್ಷಕನಾದ ವಿಷ್ಣುವು ಆ ನಾರದಿಯ ಪ್ರಭವ ಮೊದಲಾದ ಅರವತ್ತು ಜನ ಪುತ್ರರಿಗೆ ಕ್ರಮವಾಗಿ ಒಂದೊಂದು ವರುಷ ರಾಜ್ಯಾಧಿಪತ್ಯವನ್ನು ಕೊಟ್ಟನು. ಮತ್ತು ನಾರದಿಯನ್ನು ನಾರದನನ್ನಾಗಿ ಮಾಡಿದನು. ನಾರದಿಯ ಪ್ರಭವಾದಿ ಅರವತ್ತು ಜನ ಪುತ್ರರು ಆ ಕಾಲದಿಂದ ಪ್ರತಿಯೊಂದು ವರುಷ ಕ್ರಮವಾಗಿ ಆಳಹತ್ತಿದರು. ಆದ್ದರಿಂದ ಒಂದು ಸಂವತ್ಸರವು ಅರವತ್ತು ವರುಷಗಳನ್ನೆಯ್ದಿ ಬರುತ್ತಿದೆ ಆ ಸಂವತ್ಸರದ ಪ್ರಥಮ ದಿವಸವೇ ಯುಗಾದಿಯು

ರೂಢಿವಿಧಿ-ಮತ್ತು ಶಾಸ್ತ್ರವಿಧಿ

ಹಿಂದುಸ್ಥಾನದಲ್ಲಿ ನಡೆಯಬೇಕಾದ ಹಬ್ಬಗಳಲ್ಲೆಲ್ಲ ಈ ಹಬ್ಬವೆ ಮೊದಲನೇ ಸೋಪಾನದಂತಿರುವದು ಈ ಹಬ್ಬವೆ ಬರುತ್ತಿದೆಂದು ತಿಳಿದೊಡನೆ ಚಿಕ್ಕವರಿಗೂ ಬಲ್ಲವರಿಗೂ ಹಿರಿಯರಿಗೂ ಕಿರಿಯರಿಗೂ ಆನಂದವು

ಉಳ್ಳೇರುತ್ತದೆ ಪ್ರತಿಯೊಬ್ಬ ಆಸ್ತಿಕರೂ ತಮ್ಮತಮ್ಮ ಮತಮನೆಗಳನ್ನು ಸುಣ್ಣಬಣ್ಣಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕರಿಸಿ ಯುಗಾದಿಯು ಶೀಘ್ರವಾಗಿ ಬರಲೆಂದು ಉತ್ಸಾಹದಿಂದ ಆ ಹಬ್ಬವನ್ನು ನಿರೀಕ್ಷಿಸುವರು ಯಾವುದಾದರೊಂದು ಹೊಸ ಕಾರ್ಯವನ್ನು ಮಾಡಬೇಕಾದರೆ ಪರಮಪವಿತ್ರವಾದ ಯುಗಾದಿಯ ದಿವಸ ಪ್ರಾರಂಭಿಸುವುದನ್ನು ನಾವು ಈಗಲಾದರೂ ಕಾಣುತ್ತೇವೆ. ಈ ದಿವಸವು ಹೊಸ ದಿವಸವಾದುದರಿಂದ ಇಂದಿನ ಪವಿತ್ರ ದಿವಸದಲ್ಲಿ ಪ್ರಾಪ್ತವಾದ ಸುಖದುಃಖವನ್ನು ಈ ವರುಷ ಸಮಾಪ್ತಿಯವರೆಗೂ ಅನುಭವಿಸಬೇಕಾಗುವದೆಂದು ಆಸ್ತಿಕ ಜನಗಳ ಅಭಿಪ್ರಾಯವದೆ ಆದ್ದರಿಂದಲೇ ಆ ದಿವಸ ಅಪಶಬ್ದಗಳನ್ನು ನುಡಿಯದೆ ಪವಿತ್ರ ಮನಸ್ಸಿನಿಂದ ಪರಮಾತ್ಮನನ್ನು ಪ್ರಾರ್ಥಿಸಬೇಕು ಒಟ್ಟಿನಮೇಲೆ ಆ ದಿವಸ ಸದಾಚಾರ ಸದ್ವರ್ತನೆಗಳಿಂದ ಕೂಡಿದವನಾಗಿ ಪುರಾಣ ಪುಣ್ಯಕಥೆಗಳಲ್ಲಿಯೂ ಜಗದೀಶನ ನಾಮ ಸ್ಮರಣೆಯಲ್ಲಿಯೂ ಕಾಲವನ್ನು ಕಳೆಯಬೇಕೆಂದು ಹಿರಿಯರು ಹೇಳುತ್ತಿರುವರು. ಆ ದಿವಸ ಉದಯಕಾಲದಲ್ಲೆದ್ದು ಶೌಚಾದಿ ಕ್ರಿಯೆಗಳನ್ನು ತೀರಿಸಿಕೊಂಡು ಅಭ್ಯಂಗಸ್ನಾನವನ್ನು ಮಾಡಬೇಕು. ನೂತನ ವಸ್ತ್ರಾಲಂಕಾರಗಳಿಂದ ಭೂಷಿತರಾಗಿ ಗುರುದೇವತೆಗಳ ದರ್ಶನವನ್ನು ತೆಗೆದುಕೊಂಡು ಪಂಚಾಂಗಶ್ರವಣಮಾಡಬೇಕು.

ಋತ್ವಾ ಸಂಬಸುಮಂ ಗುಡಾಮ್ಲಲವಣೈರ್ಯುಕ್ತಾಂ ಪೂರ್ವಯಾ ಸಾಸನರ ।
ಶ್ರೀ ವಿದ್ಯಾಯುರಲೋಗತಾ ವಿಜಯದಂ ಸೀಯಃಫಲಂ ಭೂಷಿತಃ ॥

ಅಂದರೆ ಈ ದಿವಸದ ಪೂರ್ವಯಾಮದಲ್ಲಿ ಬೇವಿನ ವಿಷವನ್ನು ಪಾನಮಾಡುವುದರಿಂದ ಆಯುರಾರೋಗ್ಯ ವಿದ್ಯಾ ಮೊದಲಾದುವುಗಳು ಅಭಿವೃದ್ಧಿಯಾಗುವೆಂಬ ಅಭಿಪ್ರಾಯವು. ಈ ಹಬ್ಬದಲ್ಲಿ ಬೇವಿನ ವಿಷಪಾನಮಾಡಬೇಕಾದ ಬಗ್ಗೆ ಒಂದು ಪೌರಾಣಿಕ ಕಥೆಯುಂಟು.

ಶ್ರೀ ಶಂಕರನ ವಿಷಪಾನಲೀಲೆ.

ಒಂದಾನೊಂದು ಕಾಲದಲ್ಲಿ ದುರ್ವಾಸಋಷಿಯ ಶಾಪದಿಂದ ಇಂದ್ರನ ಸಮಸ್ತ ಐಶ್ವರ್ಯವೂ ಸಮುದ್ರ ಪಾಲಾಗಿಹೋಯಿತು. ಆಗ ದೈತ್ಯರು ದೇವತೆಗಳಮೇಲೆ ದಂಡೆತ್ತಿಹೋದರು. ಆ ಕಾಳಗದಲ್ಲಿ ದೇವತೆಗಳು ಪರಾಜಯವನ್ನು ಹೊಂದಿ ದೈತ್ಯರನ್ನು ದಂಡಿಸುವ ಉಪಾಯವನ್ನು ಕಾಣದೆ ಕ್ಷೀರಸಮುದ್ರದ ಒಳಯಲ್ಲಿ ನಿಂತು ವಿಷ್ಣುವಿನ ಗುಣಗಾನಮಾಡತೊಡಗಿದರು. ಆಗ ವಿಷ್ಣುವು ದೇವತೆಗಳ ಸ್ತೋತ್ರದಿಂದ ಪ್ರಸನ್ನನಾಗಿ ಅವರೆಲ್ಲರ ಆಗಮನದ ಕಾರಣವನ್ನು ಕೇಳಿದನು ಎಲ್ಲ ದೇವತೆಗಳೂ ಕೈಜೋಡಿಸಿಕೊಂಡು ಇಂದ್ರನಿಗೆ ದುರ್ವಾಸ ಋಷಿಯ ಶಾಪದಿಂದ ಒದಗಿರುವ ದುಃಖವನ್ನೂ ದಾನವರು ದೇವತೆಗಳಮೇಲೆ ದಂಡೆತ್ತಿಬಂದ ಸಂಗತಿಯನ್ನೂ ಅರಿಕೆಮಾಡಿಕೊಂಡರು ಆಗ ದಯಾಮಯನಾದ ವಿಷ್ಣುವು ಎಲ್ಲ ದೇವತೆಗಳೇ! ದಾನವರ ನಾಶಕ್ಕೂ ನಿಮ್ಮ ಏಳಿಗೆಗೂ ನಿಮಗೊಂದು ಹಂಚಿಕೆಯನ್ನು ಹೇಳುವೆನು ಏನೆಂದರೆ ಈಗ ದಾನವರಿಗೆ ಜಯದಕಾಲವಿರುವದರಿಂದ ನೀವು ಅವರೊಡನೆ ಹೋರಾಡಿ ಫಲವಿಲ್ಲ. ನೀವು ಜಯಶಾಲಿಗಳಾಗಬೇಕಾದರೆ ಮೊದಲು ಅವರೊಡನೆ ಪ್ರೇಮ ಬೆಳೆಸಿರಿ ಆಮೇಲೆ ಅವರ ಸಹಾಯದಿಂದಲೇ ಮಂದರ ಪರ್ವತವನ್ನು ಕಡೆಗೋಲನ್ನಾಗಿಯೂ ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿ ಸಮುದ್ರಮಂಥನಮಾಡಿರಿ. ಆದರಿಂದ ಇಂದ್ರನ ಸಮಸ್ತ ಐಶ್ವರ್ಯವೂ ಪ್ರಾಪ್ತವಾಗುವದಲ್ಲದೆ ಅಮೃತವು ಸಹ ಪ್ರಾಪ್ತವಾಗುವದು. ಆಮೇಲೆ ಮೃತರನ್ನೂ ಸಜೀವಗೊಳಿಸುವಿರಿ ಸಮುದ್ರ ಮಂಥನ ಮಾಡುವಾಗ್ಗೆ ನಿಮಗೆ ಏನೋ ಕಷ್ಟಗಳು ಒದಗಬಹುದು ಅವುಗಳಿಗೆ ಹೆದರಬೇಡಿರಿ ಮತ್ತೆ ಈಗ ದಾನವರು ಹೇಳಿದಹಾಗೆ ಕೇಳಿರಿ ಅವರಿಗೆ ವಿರುದ್ಧವಾಗಿ ಯಾವ ಮಾತನ್ನೂ ಆಡಬೇಡಿರಿ ಎಂದು ಹೇಳಿ ವಿಷ್ಣುವು ಅಂತರ್ಧಾನನಾದನು ಆಗ ಎಲ್ಲ ದೇವತೆಗಳೂ ದೈತ್ಯರಿಂದಾದ ಬಲಿಯಲ್ಲಿಗೆ ಬಂದರು. ಶಸ್ತ್ರರಹಿತರಾದ ದೇವತೆಗಳನ್ನು ನೋಡಿ ಅನೇಕ ದಾನವರು ಅವರೊಡನೆ ಕಾದಲು ಹೋದರು. ನೀತಿಶಾಸ್ತ್ರಜ್ಞನೂ ಬಹು ಉದಾರಿಯೂ ಆದ ಬಲಿಯು ತಮ್ಮವರಾದ ದೈತ್ಯರನ್ನು ಅನೇಕ ನೀತಿವಾಕ್ಯಗಳಿಂದ ಸರ್ವಪ್ರಾಣ ಪಡಿಸಿದನು. ಮತ್ತು ಇಂದ್ರಾದಿ ದೇವತೆಗಳನ್ನು ಕರೆದು ಆಗಮನದ ಕಾರಣವನ್ನು ಕೇಳಿದನು. ಆಗ ಇಂದ್ರನು ವಿನಯದಿಂದ ಬಲಿರಾಜನನ್ನು ಸಂತೋಷ ಪಡಿಸಿ ಸಮುದ್ರಮಂಥನದ ಸಂಗತಿಯನ್ನೂ ಅಮೃತ ಪ್ರಾಪ್ತಿಯ ಪ್ರಸಂಗವನ್ನೂ ದಾನವರ ಎದುರಿಗೆ ತೆಗೆದನು. ಈ ಮಾತು ಯಾವತ್ತೂ ದಾನವರಿಗೆ ಒಪ್ಪಿಗೆಯಾಯಿತು. ಆಮೇಲೆ ದೇವದಾನವರು ಕೂಡಿ ಮಂದರ ಪರ್ವತವನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋಗಿ ಕ್ಷೀರಸಾಗರದಲ್ಲಿರಿಸಿದರು. ವಾಸುಕಿಯನ್ನು ಮಂದರಪರ್ವತಕ್ಕೆ ಸುತ್ತಿ ಮಂಥನಮಾಡಲಾರಂಭಿಸಿದರು ದೈತ್ಯರು ತಾವು ಹೆಚ್ಚಿನವರೆಂಬ ಹೆಮ್ಮೆಯಿಂದ ಬಾಲದ ಕಡೆಗೆ ಹಿಡಿಯದೇ ತಲೆಯ ಕಡೆಗೆ ಹಿಡಿದರು ದೇವತೆಗಳು ಬಾಲದ ಕಡೆಗೆ ಹಿಡಿದರು. ಈ ಪ್ರಕಾರವಾಗಿ ದೇವತೆಗಳು ಒಂದು ಕಡೆಗೆ ದೈತ್ಯರು ಮತ್ತೊಂದು ಕಡೆಗೆ ನಿಂತು ಸಮುದ್ರ ಮಂಥನ ಮಾಡಲಾರಂಭಿಸಿದರು. ಆದರ ಅಬ್ಬರಕ್ಕೆ ಜಲಚರ ಪ್ರಾಣಿಗಳು ದಿಕ್ಕೆಟ್ಟವು. ವಾಸುಕಿಯ ಬಾಯಿ ಕಿಡ್ಡಾಗಳಿಂದ ದುಃಸಹವಾದ ವಿಷಜ್ವಾಲೆಗಳು ಹೊರಟವು ಆದರಿಂದ ಎಷ್ಟೋ ಜನ ದೈತ್ಯರು ಬೆಂದು ಬೆಂದಾಗಿ ಮರಣವನ್ನೈದಿದರು ಹಲವರು ದುಸ್ಸಹವಾದ ತಾಪದಿಂದ ತಳಮಳಿಸುತ್ತ ತೇಜೋಹೀನರಾದರು. ಇತ್ತ ಕಷ್ಟಪಟ್ಟು ಪ್ರಾಣ ಹಾನಿ ಮಾಡಿಕೊಂಡರೂ ಅಮೃತ ಪ್ರಾಪ್ತಿಯು ಆಗದೆ ಇದ್ದುದನ್ನು ನೋಡಿ ದೇವತೆಗಳೂ ದಾನವರೂ ಧೈರ್ಯವನ್ನು ಬಿಡದೆ ಪುನಃ ಸಮುದ್ರ ಮಂಥನದ ಕಾರ್ಯವನ್ನು ಪ್ರಾರಂಭಿಸಿದರು. ಆದರಿಂದ ಸಮುದ್ರವು ಉಲ್ಲೋಲಕಲ್ಲೋಲವಾಯಿತು. ಆಪ್ಪರೋಗಣಗಳು ಸಮುದ್ರದೊಳಗಿಂದ "ಹಾಲಾಹಲ" ವಿಷವು ಉತ್ಪನ್ನವಾಗಿ ಮೂರು ಲೋಕಗಳನ್ನೇ ಸುಡತೊಡಗಿತು. ಈ ಮಹಾದುಃಖವನ್ನು ದೂರಮಾಡುವವರು ಯಾರೂ ಇಲ್ಲದಾಯಿತು. ಆಗ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳು ಕೈಲಾಸಕ್ಕೆ ಹೋಗಿ ಭಗವಾನ್ ಭವಾನೀಪತಿಯನ್ನು ಮರೆಹೊಕ್ಕು ನಮಸ್ಕರಿಸಿ ಸ್ತೋತ್ರಮಾಡತೊಡಗಿದರು

ದೇವದೇವ! ಮಹಾದೇವ! ಭೂತಾತ್ಮನ್! ಭೂತಭಾವನ! ।
ತ್ರಾಹಿ ನಃ ಶರಣಾಪನ್ನಾಂಸ್ತ್ರೈಲೋಕ್ಯದಹನಾದ್ವಿಷಾತ್ ॥
ತ್ವಮೇಕಃ ಸರ್ವಜಗತ ಈಶ್ವರೋ ಬಂಧಮೋಕ್ಷಯೋಃ ।
ತಂ ತ್ವಾಮರ್ಚಂತಿ ಕುಶಲಾಃ ಪ್ರಪನ್ನಾರ್ತಿಹರಂ ಗುರುಂ ॥

(ಶ್ರೀಭಾಗವತಸ್ಕಂ-೮-೭-೨೦-೨೨)

ಹೇ, ದೇವಾಧಿದೇವಾ, ಶಂಕರಾ! ಸ್ಥಾವರ ಜಂಗಮಾತ್ಮಕವಾದೀ ಜಗತ್ತಿನಲ್ಲಿರುವ ವಸ್ತುಗಳಿಗೆಲ್ಲಾ ನೀನೇ ಮೂಲಕಾರಣನಾಗಿರುವೆ. ಈ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳನ್ನು ಮಾಡುವ ಇಚ್ಛೆಯಾದಾಗ ನೀನೇ ಬ್ರಹ್ಮ, ವಿಷ್ಣು, ಮಹೇಶ್ವರರ ರೂಪವನ್ನು ಧರಿಸುವೆ. ನಿನ್ನ ಯಥಾರ್ಥಜ್ಞಾನವನ್ನು ಪಡೆಯಲು ಯಾರೂ ಸಮರ್ಥರಲ್ಲವು ಅಂಧಕಾಸುರ ಮೊದಲಾದ ರಾಕ್ಷಸರಿಂದ ಲೋಕಕ್ಕೊದಗಿದ ಅನೇಕ ಕಂಟಕಗಳನ್ನು ದೂರಮಾಡಿ ಲೋಕಪಾಲಕನೆಂದು ನೀನು ಜಗದ್ವಿಖ್ಯಾತನಾಗಿರುವೆ ಹೇ ದಯಾನಿಧೇ ಶಂಕರಾ! ನಿನ್ನ ದರ್ಶನಮಾತ್ರದಿಂದ ನಾವು ಕೃತಾರ್ಥರಾದೆವು, ನಮ್ಮನ್ನು ರಕ್ಷಿಸು. ದೇವದಾನವರು ಕೂಡಿ ಅಮೃತದ ಆಶೆಯಿಂದ ಸಮುದ್ರಮಂಥನ ಮಾಡಲಾರಂಭಿಸಿದೆವು ಅಮೃತನಾಪ್ತಿಯು ಒತ್ತಟ್ಟಿಗಿರಲಿ. ಮೂರು ಲೋಕಗಳನ್ನೇ ನಾಶಪಡಿಸುವಂಥ ಹಾಲಾಹಲ ವಿಷವು ಉತ್ಪನ್ನವಾಗಿರುವದು. ಈ ಮಹಾಸಂಕಟವನ್ನು ದೂರಮಾಡಲು ಯಾರೂ ಸಮರ್ಥರಿಲ್ಲವು ನೀನು ಅಂಥ ಸಮರ್ಥನಾದುದರಿಂದಲೇ ನಿನ್ನನ್ನು ಮರೆಹೊಕ್ಕಿರುವೆವು. ದೇವಾ ನಮ್ಮನ್ನು ರಕ್ಷಿಸು. ಈ ಪ್ರಕಾರವಾದ ದೇವದಾನವರ ಆರ್ತಸ್ವರಯುಕ್ತವಾದ ಸ್ತೋತ್ರವನ್ನು ಕೇಳಿ ದಯಾರ್ದ್ರಹೃದಯನಾದ ಶಂಕರನು ಆ ಹಾಲಾಹಲ ವಿಷವನ್ನು ಪಾನಮಾಡಿ ಕಂಠದಲ್ಲಿಯೇ ತಡೆದನು. ಆಗ ಅತನ ಕಂಠವು ನೀಲವರ್ಣವಾಯಿತು. ಅಂದಿನಿಂದ ಶಂಕರನಿಗೆ ನೀಲಕಂಠನೆಂಬ ನಾಮವು ಪ್ರಾಪ್ತವಾಯಿತು.

ಈ ಪ್ರಕಾರವಾಗಿ ಭಗವಾನ್ ಶಂಕರನು ಲೋಕಕ್ಷೇಮ ಕುದ್ದ ಪ್ರತಿಪದೆಯ ದಿವಸ ವಿಷಪಾನಮಾಡಿದ ಸ್ಮಾರಕವಾಗಿ ಧಾರಣೇಯರು ಆ ದಿವಸವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸುತ್ತಾರೆ. ಸರ್ವರೂ ಆ ದಿವಸ ಉದಯ ಕಾಲದಲ್ಲಿಯೇ ಅಭ್ಯಂಗಸ್ನಾನವನ್ನು ಮಾಡಿ ಶಿವಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಜಗದ್ರಕ್ಷಕನಾದ ಶಂಕರನು ಮಾಡಿದ ವಿಷಪಾನದ ಅದ್ಭುತ ಲೀಲೆಯನ್ನು ವ್ಯಕ್ತಪಡಿಸುವುದಕ್ಕಾಗಿ ಬೇವಿನ ವಿಷವನ್ನು ಈಗಲೂ ಪಾನಮಾಡುತ್ತಾರೆ. ಶ್ರೀಶಂಕರನು ಜಗದಾಧಿಯಲ್ಲಿ ಲೋಕಕ್ಕೆ ಅನುಗ್ರಹವನ್ನುಂಟುಮಾಡಿದುದರಿಂದ ಇದು "ಯುಗಾದಿ" ಎಂದು ಪ್ರಸಿದ್ಧವಾದ ಶಿವನ ಹಬ್ಬವಾಗಿ ಪ್ರಪಂಚದಲ್ಲಿ ಪವಿತ್ರವೆನಿಸಿ ಮೆರೆಯುತ್ತಿರುವದು.

ಶ್ರೀ ರೇಣುಕ ಜಯಂತೀಮಹೋತ್ಸವ
ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಬೆಟ್ಟ.

ಕೊಪ್ಪಳ್‌ಪೇಟೆ ತಾಲೂಕು ಶ್ರೀರೇವಣಸಿದ್ದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪದ್ಮತಿಪ್ರಕಾರ ಈ ವರುಷವೂ ಬಹು ವಿಜೃಂಭಣೆಯಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ನೆರವೇರಿಸಲ್ಪಟ್ಟಿತು. ತಾ|| ೬-೩-೩೯ ನೇ ಭಾನುವಾರ ಬೆಳಗ್ಗೆ ಎಂಟು ಘಂಟೆಯಾಗುತ್ತಿರಲಾಗಿ ಮಧ್ಯಾಹ್ನದ ವರಿಗೆ ಶ್ರೀರೇಣುಕ ಮೂರ್ತಿಗೆ ಶಾಸ್ತ್ರೋಕ್ತವಾಗಿ ಮಹಾರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯು ನಡೆದು ಮಹಾಮಂಗಳಾರತಿ ನಡೆದನಂತರ ನೆರೆದಿದ್ದ ಭಕ್ತಮಂಡಳಿಯವರಿಗೆ ಪ್ರಸಾದವಿನಿಯೋಗವು ನಡೆಯಿತು ಅದೇ ದಿವಸ ಸಾಯಂಕಾಲ ಉತ್ಸವವು ಮಂಗಲವಾದ್ಯನೈಭವದೊಡನೆ ಹೊರಟಿತು ಭೇರ್ಯೇಶ್ವರ ದೇವಸ್ಥಾನಕ್ಕೆ ಬಿಜಯಂಗೈದನಂತರ ಸರ್ವಜಾತಿಂಗಳಿಗೂ ಪ್ರಸಾದ ವಿನಿಯೋಗ ನಡೆದು ಶ್ರೀಜಗದ್ಗುರು ರೇಣುಕಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಉತ್ಸವವು ಮುಕ್ತಾಯಗೊಂಡಿತು.

ಆಚಾರ್ಯರ ಪಾದಸೇವಕ,
ಎಂ ವಿ. ಶಿವಪ್ಪ, ಪಾರುಪತ್ತೆಗಾರ್.

ವಿವಾಹಮಹೋತ್ಸವ.

ಕೃಷ್ಣರಾಜನಗರದ ತಾಲೂಕು ಕಾರಗಳ್ಳಿ ಕೊಪ್ಪಲು ಬಿ ವೀರಣ್ಣ ಜನರಲ್ ಮರ್ಚಂಟ್ ಇವರು ತಮ್ಮ ಪುತ್ರ ಚಿ|| ಬಸವರಾಜಮ್ಮನನ್ನು ಕೃಷ್ಣರಾಜಪೇಟೆ ತಾಲೂಕ್ ಸರ್ವಮಾನ್ಯ ಬೂಕಳ್ಳಿ ಗ್ರಾಮದ ಪುಟ್ಟ ಮಾದಪ್ಪನವರ ಪುತ್ರ ಚಿ|| ಸ್ವಿ|| ಒಪ್ಪನೆಂಬ ವರನಿಗೆ ಕೊಟ್ಟು ಮಾಳ ಬಹುಳ ೧೦ ನೇ ಸೋಮವಾರ ತಾ|| 13-3-39 ನೇ ದಿವಸ ಸಾಲಂಕೃತಕನ್ಯಾದಾನವನ್ನು ಮಾಡಿದರು ವೇ|| ಸೋಮನಹಳ್ಳಿ ಮಠದ ಶಿವಲಿಂಗಾರಾಧ್ಯರು ಪೌರೋಹಿತ್ಯವನ್ನು ವಹಿಸಿ ವಿಧ್ಯುಕ್ತವಾಗಿ ಕಾರ್ಯವನ್ನು ನೆರವೇರಿಸಿದರು. ಕೃಷ್ಣರಾಜನಗರದ ವು|| ಸಾಹುಕಾರ್ ಲೋಕಸೇವಾನಿರತ ಬಿ ಶಿದ್ಧಲಿಂಗ ಶೆಟ್ಟಿರು ಬಿ. ನಂಜುಂಡಶೆಟ್ಟಿರು ಶ್ರೀಕಂಠಶೆಟ್ಟಿರು ಲಾಳನಹಳ್ಳಿ ಬಿ. ಚನ್ನಪ್ಪನವರ ಪಾಪಣ್ಣನವರು ಚಿಂದಾಗಾಲ ಪುಟ್ಟಲಿಂಗಪ್ಪನವರು ಚನ್ನವೀರಪ್ಪನವರು ಕಾಮೇನಹಳ್ಳಿ ಮೋದೂರಪ್ಪನವರು ವಡ್ಡಳ್ಳಿ ಪಟೇಲ ಲಿಂಗಣ್ಣನವರು ಹೊಸ ಅಗ್ರಹಾರದ ಪುಟ್ಟ ಚಿಕ್ಕವೀರಪ್ಪನವರು ಏ. ಮಾದಪ್ಪನವರು ಇನ್ನು ಅನೇಕ ದೊಡ್ಡ ಮನುಷ್ಯರುಗಳು ಈ ಮಹೋತ್ಸವಕ್ಕೆ ಆಗಮಿಸಿದ್ದರು. ಬಿ ವೀರಣ್ಣನವರು ಪಟೇಲ ಮಾದಪ್ಪನವರು ಬಹಳ ಮುತುವರ್ಜಿಯಿಂದ ಕಾರ್ಯಗಳನ್ನು ಮಾಡಿ ಸರ್ವರಿ ಆದರಣೆಗೆ ಪಾತ್ರರಾದರಲ್ಲದೆ ಸದರಿ ಗ್ರಾಮದ ಮ|| ಹಂಚನಹಳ್ಳಿ ಜಲಗಪ್ಪನವರು ಚಿಕ್ಕವೀರತ್ತಪ್ಪನವರು ಸಹ ಸದರಿ ಬಿ. ವೀರಣ್ಣನವರ ಮನೆಯ ಶುಭಕಾರ್ಯದಲ್ಲಿ ಅತ್ಯಂತವಾಗಿ ಶ್ರಮವಹಿಸಿ ಬಂದ ಅತಿಥಿಗಳನ್ನು ಸಂತೋಷಗೊಳಿಸುತ್ತಿದ್ದರು. ಹೊಸನ ವಧೂವರರಿಗೆ ಆಗದಾಚಾರ್ಯರು ಪುತ್ರ ಪೌತ್ರಾದಿ ಸಕಲ ಸಂಪತ್ತನ್ನೀಯಲೆಂದು ಪ್ರಾರ್ಥಿಸುವ

ಒಬ್ಬ ಶ್ರೀಕೃಷ್ಣಭಕ್ತ.

ಪಂಚಾಚಾರ್ಯಪ್ರಭಾ.

೧೯೩೪ ನೆಯ ಮಾರ್ಚಿ ತಾ॥ ೨೭ನೇ ಸೋಮವಾರ.

ಸನ್ಯಾಸಾಶ್ರಮ.

ನಮ್ಮ ಪ್ರಾಚೀನ ಮಹರ್ಷಿಗಳು ಮಾನವನ ಉದ್ಧಾರಕ್ಕಾಗಿ ನಾಲ್ಕು ಆಶ್ರಮಗಳನ್ನು ಕಲ್ಪಿಸಿರುತ್ತಾರೆ ಬ್ರಹ್ಮಚರ್ಯ-ಗೃಹಸ್ಥ-ವಾನಪ್ರಸ್ಥ-ಸನ್ಯಾಸ ಎಂಬೀ ನಾಲ್ಕು ಶ್ರಮಗಳು. ಒಂದೊಂದು ರೀತಿಯಿಂದ ಪ್ರತಿಯೊಂದು ಆಶ್ರಮವೂ ಉತ್ತಮವೆನಿಸುವದು ಬ್ರಹ್ಮಚರ್ಯಾಶ್ರಮ ವಿಲ್ಲದೆ ಗೃಹಸ್ಥಾಶ್ರಮವು ಸಿದ್ಧಿಸುವುದಿಲ್ಲ ಗೃಹಸ್ಥಾಶ್ರಮವಿಲ್ಲದಿದ್ದಲ್ಲಿ ವಾನಪ್ರಸ್ಥಾಶ್ರಮವು ಸಿದ್ಧಿಸುವುದಿಲ್ಲ. ವಾನಪ್ರಸ್ಥಾಶ್ರಮವಿಲ್ಲದಿದ್ದಲ್ಲಿ ಸನ್ಯಾಸಾಶ್ರಮವು ಸಿದ್ಧಿಸುವುದಿಲ್ಲ. ಶೃಂಖಲಾನ್ಯಾಯದಂತೆ ಆಶ್ರಮಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ವ್ಯಕ್ತಿಯೊಬ್ಬ ಮನುಷ್ಯನೂ ಕ್ರಮವಾಗಿ ಆಯಾಯ ಕಾಲವಲ್ಲಿ ಬರುವ ಪಮ ಸ್ವಿಗನುಗುಣವಾಗಿ ಬ್ರಹ್ಮಚರ್ಯಾದಿ ಚತುರಾಶ್ರಮ ಗಳನ್ನು ಗುರುನಿಸಿಂದ ಪಡೆಯಬೇಕೆಂಬುದು ನಿಯಮ ವಾಗಿರುತ್ತದೆ.

ವನೇಷು ಚ ನಿಷ್ಪೈಕ್ಯೇಷು ತೃತೀಯಮ್ ಭಾಗಮಾಯುಷಃ ।
ಚತುರ್ಥಮಾಯುಷೋ ಭಾಗಂ ತ್ಯಕ್ತ್ವಾ ಸಂಗಾನ್ ಪರಿವ್ರಜೇತ್ ।

ಎಂದು ಮನುಧರ್ಮಶಾಸ್ತ್ರವು ಸಾಮಾನ್ಯವಾಗಿ ಆಯುಷ್ಯವನ್ನು ನಾಲ್ಕುಬಗವಾಡಿ ನಾಲ್ಕಾಶ್ರಮಗಳಿಗೆ ಹಂಚಿ ಕೊಟ್ಟಿರುತ್ತದೆ. ಮಾನಲಿನ ಇವ್ಯಕ್ತಿಯು ಪರ್ವಗಾವರೆಗೆ ದೀಕ್ಷೋಪನಯನಾದಿಸ ಸ್ಕಾರಗಳಿಂದ ಪರಿಶುದ್ಧನಾಗಿ ಗುರುಕುಲವಾಸಮಾಡಿ ಸಮ್ಯಕ್ಶಾಸ್ತ್ರಸಿದ್ಧತನಾಗಿ ಇಂದ್ರಿಯಗಳ ನ್ಯಾಹಾರವನ್ನು ಜಯಿಸಿ ಆತ್ಮವಿಚಾರದಲ್ಲಿ ತೊಡಗಿರಬೇಕು. ತದನಂತರ ವ್ಯಾವ್ಯವಹಾರಗಳನ್ನು ಸಮರ್ಥವಾಗಿ ನಿರ್ವಹಿಸಿ ಸಮರ್ಥನಾದ ಮೇಲೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಆ ಆಶ್ರಮಗಳನ್ನು ಸಮಾವರ್ತನವನ್ನು ಪೆಂದಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಆ ಆಶ್ರಮಗಳನ್ನು ಪಾಲಿಸುತ್ತ ವರ್ಷಗಳವರೆಗೂ ಕ್ರಮವಾಗಿ ಸಂಸಾರಸೌಖ್ಯವನ್ನು ಬಳಸಬೇಕು. ಅಲ್ಲಿಂದ ಎಳ್ಳಷ್ಟ್ಕಾದು ವರ್ಷಗಳವರೆಗೆ ತನ್ನ ಪ್ರಾಪಂಚಿಕಭಾರವನ್ನೆಲ್ಲ ಪುತ್ರರಿಗೆ ವಹಿಸಿ ನಿರ್ಜನಪ್ರದೇಶದಲ್ಲಿದ್ದು ಚಿತ್ತವನ್ನು ಪರಿಶುದ್ಧಿಗೊಳಿಸಿಕೊಳ್ಳಬೇಕು. ಅಲ್ಲಿಂದ ಸರ್ವಸಂಗಪರಿತ್ಯಾಗಮಾಡಿ ಸನ್ಯಾಸವನ್ನು ಸ್ವೀಕರಿಸಬೇಕು. ಹೀಗೆ ಕ್ರಮಬದ್ಧವಾದ ಸೋಪಾನಗಳಿಂದ ಹೋಗುವವನಿಗೆ ಮಾರಿಯಲ್ಲಿ ಯಾವ ಉಪಹತಿಗಳೂ ಸಂಭವಿಸದೆ ಪರಮಾತ್ಮನನ್ನು ಶೀಘ್ರ ನಿತ್ಯ ಸುಖವನ್ನು ಪಡೆವನು. ಇದಕ್ಕಾಗಿಯೇ ಆಶ್ರಮಸೌಕರ್ಯ ಗಳು ಕಲ್ಪಿಸಲ್ಪಟ್ಟಿರುತ್ತವೆ. ಆದರೆ

ಯದಹರೇವ ವಿಜೇತ್ಕಹರೇವ ಪ್ರವ್ರಜೇತ್ತದಹರೇವ ।
ಗೃಹಾದ್ವಾ ಬ್ರಹ್ಮಚರ್ಯಾದೇವ ಪ್ರವ್ರಜೇತ್

ಯಾವ ದಿವಸ ತನಗೆ ವೈರಾಗ್ಯವು ಉದಯಿಸುವುದೋ ಅದೇ ದಿವಸವೇ ಬ್ರಹ್ಮಚರ್ಯಾಶ್ರಮದಲ್ಲಿದ್ದರೂ ಗೃಹಸ್ಥಾಶ್ರಮದಲ್ಲಿದ್ದರೂ ವಾನಪ್ರಸ್ಥಾಶ್ರಮದಲ್ಲಿದ್ದರೂ ಸನ್ಯಾಸವನ್ನು ತೆಗೆದುಕೊಳ್ಳಬಹುದೆಂದು ಶ್ರುತಿಯು ಬೋಧಿಸುತ್ತಿರುವುದರಿಂದ ಕ್ರಮವಾಗಿ ಬ್ರಹ್ಮಚರ್ಯಾದ್ಯಾಶ್ರಮಗಳನ್ನು ಪಡೆದನಂತರವೇ ಸನ್ಯಾಸವನ್ನು ತೆಗೆದುಕೊಳ್ಳಬೇಕೆಂಬ ನಿಯಮವೇನಿಲ್ಲವೆಂದು ಕೆಲವರು. ತರ್ಕಿಸುವರು. ಆದರೆ ವಿರಕ್ತಾಶ್ರಮವನ್ನು ತೆಗೆದುಕೊಳ್ಳಲು ವೈರಾಗ್ಯವೇ ಪ್ರಬಲಕಾರಣವೆಂಬುದನ್ನು ಎಲ್ಲರೂ ಒಪ್ಪಲೇ ಬೇಕಷ್ಟೆ! ಆ ವೈರಾಗ್ಯವೆಂಬುದು ಎಲ್ಲರಿಗೂ ಸಹ್ಯ ಸಾಧಾರಣವಾಗಿ ಹುಟ್ಟುವುದಿಲ್ಲ. ಆಧವಾ ಒಂದೊಂದು ನಿಮಿತ್ತದಿಂದ ವೈರಾಗ್ಯವು ಹುಟ್ಟಿದರೂ ಅದು ಸ್ಥಿರವಲ್ಲ ಬ್ರಹ್ಮಚರ್ಯಾಶ್ರಮದಲ್ಲಿರುವಾಗ ಇಂದ್ರಿಯಗಳು ಬಲಾತ್ಕಾರದಿಂದ ಹುಡುಗಲ್ಪಟ್ಟಿರುತ್ತವೆ. ಪೂರ್ಣವಾಗಿ ಇಂದ್ರಿಯ ಜಯವಾಗಿರುವುದಿಲ್ಲ. ಆ ಕಾಲವಲ್ಲಿ ವೈರಾಗ್ಯವುಂಟಾಗಬಹುದು. ವೈರಾಗ್ಯವುಂಟಾಯಿತೆಂದು ವಿಧಿಬದ್ಧವಾಗಿ ಸನ್ಯಾಸವನ್ನು ಸ್ವೀಕರಿಸಿದರೆ ಮುಂದೆ ಘಟ ವಿರುವ ಪರ್ಯಂತರವೂ ಸರ್ವಸಂಗಪರಿತ್ಯಾಗವಾಡಲೇ ಬೇಕಾಗುತ್ತದೆ. ಪುನಃ ಸಂಸರ್ಗದೋಷದಿಂದ ವಿಷಯಾಭಿಮುಖನಾದರೆ ಆತನು ಮಹಾಪಾಪಿಯೆನಿಸಿಕೊಳ್ಳುವನು.

"ಇಂದ್ರಿಯೈರೇವ ಜಾಯಂತೇ ಪಾಪಾನಿ ಸುಕೃತಾನಿ ಚ"

ಇಂದ್ರಿಯನಿಗ್ರಹವೆಂಬುದು ಎಷ್ಟು ಕಷ್ಟಕರವಾದದ್ದೆಂಬುದನ್ನು ಈ ಮೇಲಿನ ಶ್ಲೋಕಾರ್ಧದಿಂದ ತಿಳಿಯಬಹುದು. ಇಂದ್ರಿಯಗಳಿಂದಲೇ ಪಾಪಗಳೂ ಪುಣ್ಯಗಳೂ ಉದಯಿಸುವವೆಂದು ಶ್ರೀ ರೇಣುಕರು ಇಂದ್ರಿಯಗಳ ಪ್ರಾಬಲ್ಯವನ್ನು ತೋರಿಸಿ,

ಉಕ್ತಮಾ ವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ ।
ಅರೂಢಪತಿತೋ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥

ನಿರಕ್ತನಾಗಿ ಪುನಃ ಪ್ರಪಂಚವ್ಯವಹಾರದಲ್ಲಿ ಲೋಲ ನಾಗಿ ಮನೆ-ಮಠಗಳನ್ನು ಕಟ್ಟಿಸಿಕೊಂಡು ರಾಗದ್ವೇಷ ಗಳಿಗೆ ಭಾಗಿಯಾಗಿ ಬಲಾತ್ಕಾರದಿಂದ ದಾಕ್ಷಿಣ್ಯಕ್ಕೆ ನಿರಕ್ತನೆಂಬೂ ಸನ್ಯಾಸಿಯೆಂಬೂ ಪೇಳಿಸಿಕೊಳ್ಳಲಪೇಕ್ಷಿಸಿದರೆ ಅವನು ನಿಜನಾದ ನಿರಕ್ತನಲ್ಲನೆಂದೂ, ಅವನನ್ನು ಅರೂಢಪತಿತನಾಗುವನೆಂದೂ, ಅಂಥವನು ಯಾವ ಕರ್ಮಗಳಿಗೂ ಅಧಿಕಾರಿಯಾಗಲಾರನೆಂದೂ ಅಪ್ಪಣೆ ಕೊಡಿಸಿರುತ್ತಾರೆ. ಆದುದರಿಂದ ಬ್ರಹ್ಮಚರ್ಯದಿಂದಲೇ ವಿರಕ್ತನಾಗುವುದಾಗಲಿ, ಗೃಹಸ್ಥಾಶ್ರಮದಿಂದಲೇ ವಿರಕ್ತ ನಾಗುವುದಾಗಲಿ ಕಷ್ಟಸಾಧ್ಯವಾದುದು. ಇಂದ್ರಿಯ ಜಯವು ಸಾಮಾನ್ಯವಾಗಿ ಎಲ್ಲರಿಗೂ ಆಗುವುದಿಲ್ಲವೆನ್ನುವದು ಪ್ರಸಿದ್ಧವಷ್ಟೆ!

ಸಣ್ಣ ಸಣ್ಣ ಮಕ್ಕಳನ್ನೇ ತೆಗೆದುಕೊಂಡು ವಿರಕ್ತ ಸನ್ಯಾಸಿ ಮಾಡುವುದೆಂತೂ ಬಹಳ ಮೂಢತನವು. ಯಾವ ಮಹಾತ್ಮನು ಪ್ರಪಂಚೋದ್ಧಾರಕ್ಕಾಗಿ ಭೂಮಿಯಲ್ಲಿ ಅವತರಿಸುವನೋ ಅವನು ಯಾವ ಆಶ್ರಮವನ್ನೂ ಹೊಂದದೆ ಒಂದೇ ಕಾಲದಲ್ಲಿ ವಿರಕ್ತನಾಗಬಹುದು. ಅವನಿಗೆ ಯಾವ ವಿಧಿನಿಷೇಧಗಳನ್ನೂ ಹೇಳಲಾಗುವುದಿಲ್ಲ. ಶ್ರೀ ಶಂಕರಾಚಾರ್ಯಾದಿಗಳು ಬಾಲ್ಯದಲ್ಲಿಯೇ ಸನ್ಯಾಸವನ್ನು ತೆಗೆದುಕೊಂಡರು. ಸ್ವಭಾವತಃ ಪಂಚಭೂತಶರೀರವನ್ನು ಧರಿಸಿ ಜೀವಭಾವದಲ್ಲಿರುವ ಸಾಮಾನ್ಯ ಮಾನವರ, ಆಯಾಮ ವಯೋನುಗುಣವಾಗಿ ೨೫ ವರ್ಷದವರೆಗೆ ನಿದ್ಯಾಭ್ಯಾಸದಲ್ಲಿದ್ದು ನಿಯತ ಬ್ರಹ್ಮಚರ್ಯವನ್ನು ಕಾಪಾಡಿ ಮುಂದೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಅತಿಥಿ ಅಭ್ಯಾಗತರಿಗೆ ಅನ್ನೋದಕಗಳನ್ನು ಕೊಡುತ್ತಾ ಲಿಂಗಪೂಜಾ ಯಜ್ಞಯಾಗಾದಿಗಳಲ್ಲಿ ನಿರತರಾಗಿ ಇಂದ್ರಿಯಗಳು ಸ್ವಸ್ವ ವ್ಯಾಪಾರದಿಂದ ಶಾಂತಿಯನ್ನೈದಿದ ಮೇಲೆ ೫೦ ವರ್ಷಗಳಿಂದಾಚೆ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ನಿರ್ಜನಗೋ ಸ್ಕರವಲ್ಲದ್ದಾಮುದೆ ವಾರ್ಧಕವಲ್ಲಿ ಸನ್ಯಾಸವನ್ನು ಸ್ವೀಕರಿ ಸಬೇಕು. ಪ್ರತಿಯೊಬ್ಬ ನಿಗೂ ಕಾಲಪರಿಪಾಕದಿಂದ ವೈರಾಗ್ಯವುಟ್ಟಾಗುವುದು ಸ್ವಭಾವಸಿದ್ಧವಾಗಿದೆ. ಆ ಕಾಲ ದಲ್ಲಿ ಇಂಟಾಗುವ ಅಂದರೆ ಬಾಲ್ಯದಲ್ಲಿ ಅದೇ ಮಾತಾ ವರಣದಲ್ಲಿ ಸನ್ಯಾಸಕಾರಣವಾದ ವೈರಾಗ್ಯವು ಬಿದುಗಾಳಿ ಯಲ್ಲಿ ಶಿಕ್ಕ ತೃಣ ತೂಲಾದಿಗಳಂತೆ ಚಂಚಲವಾದುದ ರಿಂದ, ಅಂಥ ಚಂಚಲ ವೈರಾಗ್ಯದಿಂದುಂಟಾದ ಸನ್ಯಾ ಸವು ನಿಜವಾದ ಸನ್ಯಾಸವಲ್ಲವು.

"ಕಲೌ ಪಂಚ ವಿವರ್ಜಯೇತ್"

ಎಂದೆ. ಈ ಕಲಿಕಾಲದಲ್ಲಿ ಸನ್ಯಾಸವೇ ಸಿದ್ಧಿಸುವುದಿಲ್ಲ ವೆಂದು ಹೇಳಿರುವುದನ್ನು ನೋಡಿದರೆ ಇಂದ್ರಿಯಗಳು ಬಹು ಚಂಚಲಸ್ವಭಾವವನ್ನು ಹೊಂದಿವೆಯೆಂದು ಸಿದ್ಧ ವಾಗುತ್ತದೆ. ಇದರಿಂದ ಈ ಕಾಲದ ಸನ್ಯಾಸಿಗಳು ನಿಜ ಸನ್ಯಾಸಿಗಳಲ್ಲವೆಂದೂ ಯಾವುದೋ ಒಂದು ಕುಪ್ಪಿಷ್ಟಿ ಯಿಂದ ಸನ್ಯಾಸಿಗಳಾಗುತ್ತಾರೆಯೇ ಹೊರತು ವಿಷಯ ವೈರಾಗ್ಯದಿಂದ ಸನ್ಯಾಸಿಗಳಾಗುವುದಿಲ್ಲವೆಂದೂ ಸ್ಪಷ್ಟ ವಾಗುತ್ತದೆ.

ಶೈಶವೇಽಭ್ಯಸ್ತವಿದ್ಯಾನಾಂ ಯಾವನೇ ವಿಷಯೈಷಿಣಾಂ ।
ಹಾಹಾ ಕೇ ಮಾನವೃತ್ತೀನಾಂ ಯೋಗೇಸಾಂತೇ ತನುತ್ಯಜಾಂ॥

ಎಂದು ಶ್ರೀಕಾಳಿದಾಸನು ರಘುಮಹಾರಾಜನು ಯಾವ ರೀತಿಯಾಗಿ ಬ್ರಹ್ಮಚರ್ಯಾದ್ಯಾಶ್ರಮಗಳನ್ನು ಪರಿಪಾಲಿಸು ತ್ತಿದ್ದನೆಂಬುದನ್ನು ಸ್ಪಷ್ಟಪಡಿಸಿರುತ್ತಾನೆ ವೀರಶೈವ ಮತವಲ್ಲಿ ಬ್ರಹ್ಮಚರ್ಯಾಶ್ರಮದಿಂದ ಸನ್ಯಾಸವನ್ನು ಸ್ವೀಕರಿಸುವ ಪದ್ಧತಿಯಿದೆ. ಇದಕ್ಕೆ ಮುಖ್ಯವಾಗಿ ವಿಷಯವೈರಾಗ್ಯವು ಬೇಕು. ಈ ಕಾಲದಲ್ಲಿ ಪವಿತ್ರವಾದ ಸನ್ಯಾಸಾಶ್ರಮವು ವರ್ಣಾಶ್ರಮಬಾಹ್ಯರ ಕೈಯಲ್ಲಿ ಶಿಕ್ಕು ಶೀನಪಕ್ಷಿಯ ಕೈಗೆ ಶಿಕ್ಕ ಶುಕಪಕ್ಷಿಯ ಹಾಗೆ ನಾತೋ ನ್ಮುಖವಾಗುತ್ತ ನಡೆದಿರುವದು. ಹೊಟ್ಟೆಪರಿಯಲು ಶಕ್ತಿಯಿಲ್ಲದೆ ಕಾಷಾಯವಸ್ತ್ರದಿಂದಾಚ್ಛಾದಿತರಾದ ಕಪ ಟವೇಷಧಾರಿಗಳು ಈ ಸನ್ಯಾಸದ ಮರೆಯಲ್ಲಿ ಜೀವಿಸು ತ್ತಿರುವುದು ಕಲಿಕಾಲದ ಪ್ರಭಾವವೇ ಸರಿ! ಇಂಥ ವರಿಗೆ ಎಂದು ನಿಜವೈರಾಗ್ಯವು ಹುಟ್ಟಿ ಗುರುಗಳಲ್ಲಿ ನಿಜ ಭಕ್ತಿಯಂಕುರಿಸಿ ಇವರಾಶ್ರಯಿಸಿರುವ ಸನ್ಯಾಸ ಶಬ್ದವು ಸಫಲವಾಗುವುದೋ ನೋಡಬೇಕು. ಸರ್ವಸಂಗಪರಿತ್ಯಾಗವೆಂಬ ಅರ್ಥವನ್ನು ಕೊಡುವ ಈ ಸನ್ಯಾಸಶಬ್ದವು ಈ ಕಾಲದಲ್ಲಿ ಅರ್ಥವಿಲ್ಲದ್ದಾಗಿ ಹಾಸ್ಯಾಸ್ಪದವಾಗಿದೆ. ನಿಜಸನ್ಯಾಸಿಗಳಾಗಬೇಕೆಂಬುವರು ಬ್ರಹ್ಮಚರ್ಯಾಶ್ರಮ ದಲ್ಲಿ ಪರಿಪೂರ್ಣರಾಗಿ ವಿಷಯವೈರಾಗ್ಯವನ್ನು ಪಡೆಯ ಬೇಕೆಂದು ಹಾರೈಸುತ್ತೇನೆ.

ವರ್ತಮಾನಸಂಗ್ರಹ.

ಹೊಸ ರೂಪಾಯಿಗಳು

ಕೃತ್ರಿಸುರೀತಿಯಿಂದ ವಿಶೇಷವಾಗಿ ತಯಾರಾಗುತ್ತಿರುವ ರೂಪಾಯಿಗಳ ಚಲಾವಣೆಯನ್ನು ತಡೆಗಟ್ಟಲು ಹೊಸ ರೂಪಾಯಿಗಳನ್ನು ತಯಾರಿಸಬೇಕೆಂದು ಜೋಬಾಯಿಯ ನಾಣ್ಯ ಕಚೇರಿಯವರು ಆಲೋಚಿಸುತ್ತಿದ್ದಾರೆ. ಮೋಟಾ ನಾಣ್ಯಗಳನ್ನು ತಯಾರಿಸಲು ಸಾಧ್ಯವೇ ಇಲ್ಲವೆಂತಹ ರೂಪಾಯಿಗಳನ್ನು ಸಿದ್ಧಗೊಳಿಸಲಾಗುವದಂತೆ! ಈ ಬಗೆಯ ನಾಣ್ಯಗಳು ಮಾರಿಷಸ್, ಹಾಂಕಾಂಗ್ ಮೊದಲಾದ ಪ್ರದೇಶಗಳಲ್ಲಿ ಚಲಾವಣೆಯಲ್ಲಿ ತರಲ್ಪಟ್ಟವೆ.

ವಜ್ರದ ಘಂಟೆ

ಜರ್ಸಾ ದೇಶದವರು ಈ ವರ್ಷ ಅಮೇರಿಕಾದೇಶದ ನ್ಯೂಯಾರ್ಕ್ ನಗರದಲ್ಲಿ ನಡೆಯುವ ವಿಶ್ವ ವಸ್ತುಪ್ರದರ್ಶನದಲ್ಲಿಡಲು ಒಂದು ಅಪೂರ್ವವಾದ ಘಂಟೆಯನ್ನು ನಿರ್ಮಾಣಮಾಡಿರುತ್ತಾರೆ. ಇದು 14 ಅಂಗುಲ ಎತ್ತರ 15 ಅಂಗುಲ ವ್ಯಾಸವುಳ್ಳದ್ದಾಗಿದೆ. ಇದರಲ್ಲಿ 366 ವಜ್ರಗಳೂ, 11600 ಮುತ್ತುಗಳೂ ಕೆತ್ತಲ್ಪಟ್ಟು ಇಪ್ಪತ್ತಾರು ವರೆ ಪೌಂಡು ತೂಕದ ಬೆಳ್ಳಿಯಿಂದಮಾಡಲ್ಪಟ್ಟಿದೆ. ಇದರ ಬೆಲೆ ಸುಮಾರು 250000 ಪೌಂಡುಗಳು. ಇದು ಕೇವಲ ಮಾದರಿಗಾಗಿಮಾಡಿದ ಘಂಟೆಯಾಗಿದೆ.

ಫ್ರಾನ್ಸಿನಲ್ಲಿರುವ ಇಟಲಿಯವರ ರಾಜಭಕ್ತಿ!

ಫ್ರಾನ್ಸ್‌ದೇಶದಲ್ಲಿ ವಾಸವಾಗಿರುವ 8 ಲಕ್ಷ ಇಟಲಿಯ ಪ್ರಜೆಗಳ ಪರವಾಗಿ ಸುಮಾರು 500 ಮಂದಿ ಪ್ರತಿನಿಧಿಗಳು ಕಳೆದವಾರ ವರ್ಸೇಲ್ಸ್‌ನಗರದಲ್ಲಿ ಒಂದು ಸಭೆಯನ್ನು ನಡೆಸಿ ಇಟಲಿ ಸರ್ಕಾರದವರು ಟ್ಯೂನಿಸ್, ಕಾರ್ಸಿಕ್, ನೀಸ್, ಸವಾಯ್ ಮತ್ತು ಜಿಬೂತಿ ಪ್ರದೇಶಗಳನ್ನು ಫ್ರೆಂಚ್ ಸರ್ಕಾರದಿಂದ ಕಸಿದುಕೊಳ್ಳಬೇಕೆಂದು ಪ್ರಯತ್ನ ನಡೆಸುತ್ತಿರುವದು ಅನ್ಯಾಯವೆಂದೂ ಅದು ಯುದ್ಧಕ್ಕೆ ಮಾರ್ಗಮಾಡುವದೆಂದೂ ಸೂಚಿಸಿ ಇಟಲಿ ಸರ್ಕಾರದವರ ವರ್ತನವನ್ನು ಖಂಡಿಸುವ ಒಂದು ನಿರ್ಣಯವನ್ನು ಅನುಮೋದಿಸಿ ಫ್ರಾನ್ಸ್ ಸರ್ಕಾರದಲ್ಲಿ ತಮಗಿರುವ ರಾಜಭಕ್ತಿಯನ್ನು ಪ್ರದರ್ಶಿಸಿದರು.

ಪಶ್ಚಿಮ ಇಂಡಿಯಾ ಸಂಸ್ಥಾನಗಳ ವಿಜಿನ್ಸಿಯ ಖಿಚಾಡಿಯ ತಾಲೂಕಿನಿಂದ ಬೆಂಕಿಕಡ್ಡಿಯನ್ನು ಮೈಸೂರು ಸಂಸ್ಥಾನಕ್ಕೆ ತರಕೂಡದೆಂದು ಸರ್ಕಾರದವರು ನಿಷೇಧಿಸಿದ್ದಾರೆ.

ಬೆಂಗಳೂರು ನರಸಿಂಹರಾಜರಸ್ತೆಯಲ್ಲಿರುವ ಕ್ರೈಸೆಂಟ್ ಪರಸ್ಪರ ಸಹಾಯಸಂಘದ ಕಾರ್ಯನಿರ್ವಾಹಕರಾಗಿದ್ದ ಕೆ. ಎಸ್. ಭಾರದ್ವಾಜರೆಂಬವರು ಆ ಸಂಘದ ಅಡಳಿತದ ಹಣದಲ್ಲಿ ಸುಮಾರು 10೫೦೦ ರೂಪಾಯಿಗಳಿಗೆ ಮೋಸ್ಟ್ಟು ದುರುಪಯೋಗಪಡಿಸಿದರೆಂದು ಅವರನ್ನು ಪೋಲೀಸರು ಬೆಂಗಳೂರು ಕಲಾಸ್ ಪಾಸ್ಯದಲ್ಲಿ ದಸ್ತಗಿರಿಮಾಡಿದರೆಂದು ತಿಳಿದುಬರುತ್ತದೆ.

ಆರಮನೆ ಎಲೆಕ್ಟ್ರಿಕ್ ಶಾಖೆಯ ಮುಖ್ಯಾಧಿಕಾರಿಗಳಾಗಿ ಕೆಲಸಮಾಡಿ ನಿವೃತ್ತರಾಗಿದ್ದ ಮಿ॥ ಆರ್. ಜಿ. ಹಾರ್ಡೇಕರವರು ವೃದ್ಧಾಪ್ಯದ ಕಾರಣ ಕಳೆದ 18 ನೆಯ ತಾರೀಖಿನದಿವಸ ರಾತ್ರಿ ರಾಜಧಾನಿದುಲ್ಲಿ ಮೃತರಾದರು. ಇವರು ಬಹಳ ಉಪಕಾರಿಗಳೂ, ಗುಣಾಢ್ಯರೂ ಸ್ನೇಹ ಪರರೂ ದೊಡ್ಡ ಕುಟುಂಬಿಗಳೂ ಆಗಿದ್ದರು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಪೋಸ್ಟ್‌ಕಾರ್ಡ್ ಕವರುಗಳ ಬೆಲೆಯನ್ನು ಇಳಿಸಬೇಕು

ನವದೆಹಲಿಯ ಕೇಂದ್ರಶಾಸನ ಸಭೆಯಲ್ಲಿ ಒಂದು ತೊಲೆಗಿಂತ ಹೆಚ್ಚು ತೂಕವಿರುವ ಕಾಗದಗಳ ಮೇಲಿನ ಅಂಚೆ ದರವನ್ನು ತೊಲೆಗೆ ಅರ್ಧಾಣೆಯಿಂದ ಕಾಲಾಣೆಗೆ ಇಳಿಸಬೇಕೆಂದು ಶ್ರೀಲಾಲ್‌ಚಂದ್ ನವಲ್‌ರಾಯ್ ರವರು ತಂದ ತಿದ್ದುಪಡೆ ಬಿದ್ದುಹೋಯಿತು. ಕಾರ್ಡಿನ ಬೆಲೆಯನ್ನು 9 ಕಾಸಿನಿಂದ ಅರ್ಧಾಣೆಗೂ ರಿಪ್ಲೈ ಕಾರ್ಡಿನ ಬೆಲೆಯನ್ನು ಒಂದಾಣೆಗೂ ಇಳಿಸಬೇಕೆಂದು ಪ್ರೊ|| ಎನ್. ಜಿ. ರಂಗರವರು ತಂದ ತಿದ್ದುಪಡೆಯು ಅಂಗೀಕೃತವಾಯಿತು.

ವಿಮಾನ ನಾಶಕ ವಿದ್ಯುತ್ಕಿರಣಗಳು!

ಆಂತರಿಕ್ಷದಲ್ಲಿ ಸಹಸ್ರಾರು ಅಡಿಗಳ ಎತ್ತರದಲ್ಲಿ ಹಾರಾಡುವ ಶತ್ರುವಿಮಾನಗಳನ್ನು ನಾಶಪಡಿಸಬಲ್ಲ ವಿದ್ಯುತ್ಕಿರಣಗಳನ್ನು ಕಂಡುಹಿಡಿದವರಿಗೆ 10 ಲಕ್ಷ ಪೌಂಡು ಬಹುಮಾನವನ್ನು ಕೊಡುವುದಾಗಿ ಬ್ರಿಟಿಷ್ ಸರ್ಕಾರವು ನಿಶ್ಚಯಿಸಿರುವುದಂತೆ! ಆಗಲೇ ನೂರಾರು ಜನ ಬ್ರಿಟಿಷ್ ವೈಜ್ಞಾನಿಕರು ಶೋಧನೆಗಳನ್ನು ನಡೆಸಿ ಸುಮಾರು 160 ಅಡಿ ಎತ್ತರದಲ್ಲಿ ಹಾರಾಡುವ ವಿಮಾನದ ಚಲನವನ್ನು ನಿಲ್ಲಿಸುವ ಕಿರಣಗಳನ್ನು ಕಂಡುಹಿಡಿದಿರುತ್ತಾರೆಂದೂ ಪ್ರಯೋಗಗಳು ಇನ್ನೂ ಮುಂದುವರಿಯುತ್ತಿರುವನೆಂದೂ ಪ್ರಕಟವಾಗಿದೆ.

ಹೊಸಬಗೆಯ ಕಂಚು!

ಪೂರ್ವಕಾಲದಲ್ಲಿ ಕಂಚಿನಿಂದ ಮಾಡಿದ ಆಯುಧಗಳನ್ನು ವೀರಾಧಿ ವೀರರು ಉಪಯೋಗಿಸುತ್ತಿದ್ದರೆಂದು ಕೇಳಿದ್ದರೂ ಆ ಬಗೆಯ ಕಂಚನ್ನು ತಯಾರಿಸುವದು ಮಾತ್ರ ಮರೆತುಹೋಗಿತ್ತು. ಈಗ ಕೆಲವು ಪರಿಶೋಧಕರು "ಬೆರಿಲ್ಲಿಯಂ" ಎಂಬ ಲೋಹವನ್ನು ತಾಮ್ರಕ್ಕೆ ಮಿಶ್ರಮಾಡಿ ಕಂಚು ತಯಾರಿಸುವದನ್ನು ಕಂಡುಹಿಡಿದಿದ್ದಾರೆ. ಇದರಿಂದ ಉಳಿ, ಗರಗಸ, ಮುಂತಾದ ಬಲವಾದ ಸಾಮಾನುಗಳನ್ನೂ ಮಣ್ಣು ಹಿಡಿಯದ ಕತ್ತಿ ಮುಂತಾದ ಉಕ್ಕಿನಿಂದ ಮಾಡಲ್ಪಡುತ್ತಿದ್ದ ಎಲ್ಲವಿಧ ಆಯುಧಗಳನ್ನೂ ತಯಾರಿಸಬಹುದಾಗಿದೆ. ಇದಲ್ಲದೆ ತುಕ್ಕು ಹಿಡಿಯದ ಉಕ್ಕಿಗಿಂತ ಇದರ ಬೆಲೆ ಬಹಳ ಕಡಿಮೆಯಾಗುವದಂತೆ!

ಮಾಂಚುಕೋ ಗಡಿಗೆ ಜಪಾನ್ ಸೈನ್ಯಗಳ ಪ್ರಯಾಣ!

ಮಾಂಚುಕೋ ಬಳಿ ಸಮುದ್ರದಲ್ಲಿ ಜಪಾನೀಯರು ಮೀನುಹಿಡಿಯಲು ರಷ್ಯನರು ಅಡ್ಡಿಪಡಿಸುವದನ್ನು ಪ್ರತಿಭಟಿಸಿ ಈ ಬಗ್ಗೆ ಮಾತಿನಲ್ಲಿ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಿಸುತ್ತಿದ್ದದ್ದು ಇನ್ನು ಮುಂದೆ ಸೈನ್ಯಬಲದಿಂದ ತೀರ್ಮಾನಹೊಂದುವಂತೆ ಕಾಣುತ್ತದೆ. ಮಾಂಚುಕೋ ಮತ್ತು ಕೊರಿಯಾದೇಶಗಳಲ್ಲಿದ್ದ ಜಪಾನಿನ ಅನೇಕ ಸೈನ್ಯಪಡೆಗಳು ಇದ್ದಕ್ಕಿದ್ದ ಹಾಗೆ ಸೋವಿಯಟ್ ರಷ್ಯದ ಗಡಿಗೆ ಕಳುಹಿಸಲ್ಪಟ್ಟಿವೆ. ಈ ಸೈನ್ಯದಲ್ಲಿ ಸುಮಾರು 40000 ಮಂದಿ ಸೈನಿಕರಿರುವರೆಂದು ಹೇಳಲಾಗಿದೆ. ಮಾಂಚುಕೊ-ರಷ್ಯಗಳ ವಾಗ್ವಾದವು ಸ್ಯವಸ್ಥೆಯಾಗುವವರೆಗೆ ಈ ಸೈನ್ಯಗಳು ಗಡಿಪ್ರದೇಶದಲ್ಲಿಯೇ ಇರುವವೆಂದು ತಿಳಿಯುತ್ತದೆ.

ನೈಧನ್ಯಕ್ಕಿಂತ ಮರಣವೇ ಉತ್ತಮ!

ಮಾರ್ಕಾವುರದಲ್ಲಿ ಕೋರ್ಟು ಅಮೀನ್ ಕೆಲಸವಲ್ಲಿದ್ದ ಸುಬ್ಬಣ್ಣನೆಂಬವನ ಪತ್ನಿ 22 ವರುಷ ವಯಸ್ಸಿನ ವೆಂಕಟಸುಬ್ಬಮ್ಮನೆಂಬ ಯುವತಿಯು ತನ್ನ ಗಂಡನು ಈಡೆಗೆ ಕಾಯಿಲೆಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೂ ರೋಗವು ಗುಣವಾಗುವುದಿಲ್ಲವೆಂದು ಮನೆಗೆ ಕಳುಹಿಸಲ್ಪಟ್ಟಿದ್ದರಿಂದಲೂ, ಅನಂತರ ಮೂರು ತಿಂಗಳ ಕಾಲ ತಾನೇ ಅವನನ್ನು ಉಪಚರಿಸಿ ಕೊನೆಗೆ ಅವನು ಬದುಕುವುದಿಲ್ಲವೆಂದು ಅಳೆಗೆ ನಿಶ್ಚಯವಾದುದರಿಂದಲೂ "ನಾನು ವೈಧವ್ಯವನ್ನು ಹೊಂದಿ ಬದುಕಿರಲಾರೆ, ನನ್ನ ಶವವನ್ನು ಆಸ್ಪತ್ರೆಯಲ್ಲಿ ಮಹಜರಾಗಿಸಿಕಳುಹಿಸಬಾರದು" ಎಂದು ಪೋಲೀಸರ ತಿಳುವಳಿಕೆ ಬಗ್ಗೆ ಒಂದು ಕಾಗದವನ್ನು ಬರೆದಿಟ್ಟು ಭಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು. ಇದಾದ ಮೂರು ದಿನಕ್ಕೆ ಅಕೆಯ ಗಂಡನೂ ಮೃತನಾದನು.

ಈಜಿಪ್ಟ್ ಅರಸರ ಸಹೋದರಿಯ ವಿವಾಹ

ಈಜಿಪ್ಟದ ಅರಸರಾದ ಫೆರೋಕರವರ ಸಹೋದರಿ ರಾಜಕುಮಾರಿ ಫಾಜಿಯವರನ್ನು ಇರಾನಿನ ರಾಜಕುಮಾರರಿಗೆ ಕೊಟ್ಟು ವಿವಾಹವು ಮುಂದಿನ ಏಪ್ರಿಲ್ ತಿಂಗಳಲ್ಲಿ ಜರುಗಲಿದೆ. ಇರಾನಿನ ರಾಜಕುಮಾರರು ರೈಲುಸ್ಪೇಷನ್ನಿಗೆ ಬರುತ್ತಲೆ ಅವರನ್ನು ಬಹು ಮರ್ಯಾದೆಯಿಂದ ಎದುರುಗೊಂಡು ಅಬ್ದೀನ್ ಅರಮನೆಗೆ ಕರೆದೊಯ್ಯರು. ಅಲ್ಲಿ ಫೆರೋಕ್ ಅರಸರು ತಮ್ಮ ಭಾವಿಬಾವನನ್ನು ಸ್ವಾಗತಿಸಿದರು. ವಿವಾಹವ ಒಪ್ಪಂದಕ್ಕೆ ಕಳೆದ 15ನೆಯ ತಾರೀಖಿನ ದಿನ ರುಜುಹಾಕಲಾಯಿತು. ಇದಕ್ಕಾಗಿ ಕೈರೋ ನಿವಾಸಿಗಳೆಲ್ಲರೂ ರಸ್ತೆಗಳಲ್ಲಿ ಕಾದುನಿಂತಿದ್ದರು ವಿವಾಹ ಒಪ್ಪಂದಕ್ಕೆ ರುಜು ಬಿದ್ದಕೂಡಲೆ ಗೌರವಾರ್ಥವಾಗಿ ತೋಪುಗಳು ಹಾರಿಬ್ಬಟ್ಟವು. ಮಹಮದೀಯರ ಮತ ಪದ್ಧತಿಯ ಪ್ರಕಾರ ವಿವಾಹ ಒಪ್ಪಂದದ ಕಾಲದಲ್ಲಿ ವಿವಾಹವಾಗಲಿರುವ ರಾಜಕುಮಾರಿಯು ಬಂದಿರಲಿಲ್ಲ ನೂರಾರುಮಂದಿ ರಾಜಕುಮಾರರ ಸಮ್ಮುಖದಲ್ಲಿ ಈಜಿಪ್ಟ್ ದೇಶದ ಪ್ರಭುಗಳೂ ಇರಾನಿನ ರಾಜಕುಮಾರರೂ ವಿವಾಹದ ಒಪ್ಪಂದಕ್ಕೆ ರುಜುಹಾಕಿದರು.

ಹೆಚ್ಚು ತೆರಿಗೆ ಕೊಡಲು ನೈತರ ಪ್ರತಿಭಟನೆ.

ಕಂದಾಯವನ್ನು ಹೆಚ್ಚಿಸುವ ಹೊಸ "ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟ್" ವ್ಯವಸ್ಥೆಗೆ ತಮ್ಮ ಪ್ರತಿಭಟನೆಯನ್ನು ಪ್ರದರ್ಶಿಸಲು ಲಾಹೋರು ಜಿಲ್ಲೆಯ ಬೇರೆ ತಾಲೂಕುಗಳ 2000 ರೈತರು ಶಾಸನಸಭಾ ಭವನಕ್ಕೆ ಹೊರಡಬೇಕೆಂದು ಪೋರಿಗೇಟ್ ಒಳ ಸೇರಿ, ಒಬ್ಬಿಂದ ಸ್ವಲ್ಪ ದೂರ ಹೋಗುವದರೊಳಗೆ ಪೋಲೀಸರು ಅವರುಗಳನ್ನು ತಡೆದು ಮ್ಯಾಜಿಸ್ಟ್ರೇಟರು ಹೊರಡಿಸಿರುವ 144ನೇ ಆಜ್ಞೆಯನ್ನು ತೋರಿಸಿದರು. ಅದರಲ್ಲಿ ಶಾಸನಸಭಾ ಭವನಕ್ಕೆ ಹೋಗುವ ಹಲವು ರಸ್ತೆಗಳಲ್ಲಿ ಅವರು ಬರಲಾಗದೆಂದು ನಿಷೇಧಿಸಲ್ಪಟ್ಟಿತ್ತು. ಅಲ್ಲದೆ ಎಲ್ಲರೂ ಹೀಗೆ ಏಕಕಾಲದಲ್ಲಿ ಬರುವದನ್ನು ಮಹಾಪ್ರಧಾನರು ಒಪ್ಪುವುದಿಲ್ಲವೆಂದೂ, ಐದು ಮಂದಿ ಪ್ರತಿನಿಧಿಗಳು ಬಂದರೆ ಅವರ ಕುಂದುಕೊರತೆಗಳನ್ನು ಕೇಳಿ ಚರ್ಚಿಸಲು ಸಿದ್ಧರಾಗಿರುವದಾಗಿಯೂ ಸೂಚಿಸಲ್ಪಟ್ಟಿತ್ತು. ಆದ್ದರಿಂದ ಜನರು ತಮ್ಮ ಪರವಾಗಿ ಮಾತನಾಡಲು 6 ಮಂದಿಗಳ ಹೆಸರುಗಳನ್ನು ಸೂಚಿಸಿ ಉಳಿದವರು ಚದುರಿ ಹೋದರು. ಈಗ ಅಧಿಕಾರಿಗಳು ಅನಂತರೊಡನೆ ಚರ್ಚೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅಜ್ಞೋಲ್ಲಂಘನ ಮಾಡಿದ ಹಲವರನ್ನು ಬಂಧಿಸಲಾಗಿದೆ.

ದೇಶಗಳ ಸ್ವಾತಂತ್ರ್ಯನಾಶ ಪ್ರಯತ್ನವನ್ನು ಪ್ರತಿಭಟಿಸಲು ಬ್ರಿಟಿಷ್ ಸರ್ಕಾರವು ಯೋಚಿಸುತ್ತಿದೆ.

ಕಳೆದ 23ನೆಯ ತಾರೀಖಿನದಿವ ಲಂಡನ್ನಿನ ಕಾಮನ್ಸ್ ಸಭೆಯಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ ಮಹಾಪ್ರಧಾನ ನವಿಲೆ ಛೇಂಬರ್ಲೀನರು ಉತ್ತರ ಕೊಡುತ್ತಾ "ಜರ್ಮನಿಯು ಈಚಿನ ನಡವಳಿಕೆಯಿಂದ ಅದು ಫೂರ್ಣ ಯೂರೋಪಿನಮೇಲೆ ಅಧಿಕಾರ ಹೊಂದುವ ಆಕಾಂಕ್ಷೆಯನ್ನು ಇಟ್ಟುಕೊಂಡಿರುವದೆಂಬ ಯೋಚನೆಯು ಎಲ್ಲರಲ್ಲೂ ಉಂಟಾಗುತ್ತದೆ. ಇವೇ ಅಲ್ಲದೆ ಜರ್ಮನಿಯ ಆಕ್ರೋತ್ಪರಗಳು ಇನ್ನು ಮುಂದೆ ಹೋಗಿರುವುದಾಗಿ ಬ್ರಿಟಿಷ್ ಸರಕಾರವು ಆಗಲೇ ತಿಳಿಸಿಬಿಟ್ಟಿದೆ. ಜರ್ಮನಿ ದೇಶವು ತನ್ನ ರಫ್ತು ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಕ್ಕೆ ಅಡ್ಡಿ ಪಡಿಸುವ ಇಚ್ಛೆಯು ಬ್ರಿಟಿಷ್ ಸರ್ಕಾರಕ್ಕಿಲ್ಲ ಅಲ್ಲದೆ ಯೂರೋಪಿನಲ್ಲಿ ಒಂದಕ್ಕೊಂದು ವಿರೋಧಿಸುವ ರಾಷ್ಟ್ರಗಳನ್ನು ಎತ್ತಿ ಕಟ್ಟುವ ಉದ್ದೇಶವೂ ಇಲ್ಲ. ಆದರೆ ಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರವನ್ನು ಚಮತ್ಕಾರದಿಂದಲೂ ಬಲಪ್ರಯೋಗದ ಭೀತಿಯನ್ನು ಹುಟ್ಟಿಸಿಯೂ ನಾಶ ಮಾಡಿ ಒಂದಾದಮೇಲೊಂದನಂತೆ ನುಂಗುವ ಕಾರ್ಯಕ್ರಮಕ್ಕೆ ಬ್ರಿಟಿಷ್ ಸರ್ಕಾರವು ಎಂದಿಗೂ ತಲೆಹಾಕಬಾರದೆಂಬ ವಿಚಾರವು ಇಂದು ನಮ್ಮ ಮುಂದಿದೆ. ಅಂತಹ ಕಾರ್ಯಕ್ರಮವನ್ನು ವಿರೋಧಿಸಲು ನಮ್ಮ ಕೈಯಲ್ಲಾಗುವ ಸರ್ವ ಪ್ರಯತ್ನಗಳನ್ನೂ ಮಾಡಲಾಗುವದು" ಎಂದು ಸೂಚಿಸಿದರು.

ಬಹು ಮುಖ್ಯ ಹೊಸ ನೌಕಾಕಾಲುವೆ

ಮೆಡಿಟರೇನಿಯ್ ಸಮುದ್ರದಿಂದ ಅಟ್ಲಾಂಟಿಕ್ ಸಮುದ್ರಕ್ಕೆ ಪ್ರವೇಶವಾಡಲು ಇರುವ ಒಂದೇ ದಾರಿಯಾದ ಜಿಬ್ರಾಲ್ಟರ್ ಒಂದು ವೇಳೆ ಶತ್ರುಗಳಿಂದ ಆಕ್ರಮಿಸಲ್ಪಟ್ಟರೆ, ಬ್ರಿಟಿಷ್ ಮತ್ತು ಫ್ರೆಂಚ್ ನೌಕಾಬಲಗಳು ಭೂಮಧ್ಯಸಮುದ್ರಕ್ಕೆ ಪ್ರವೇಶಮಾಡುವದೇ ಅಸಾಧ್ಯವಾಗುತ್ತದೆ. ಅಲ್ಲದೆ ಇಂಡಿಯಾದಿಂದ ಇಂಗ್ಲೆಂಡನ್ನು ತಲಪಲು ಆಫ್ರಿಕಾವನ್ನು ಬಳಸಿಕೊಂಡು ಹೋಗಬೇಕಾದ ಸಂದರ್ಭ ಒದಗಬಹುದು ಇದಕ್ಕಾಗಿ ಫ್ರಾನ್ಸಿನನೌಕಾಬಲವನ್ನು ವೃದ್ಧಿಗೊಳಿಸುವ ಬ್ರಿಟಿಷ್ ನೌಕಾಬಲಕ್ಕೆ ರಕ್ಷಣೆಯಾಗಿರತಕ್ಕ ಮತ್ತು ಭಾರಶದಿಂದ ಉತ್ತರ ಯೂರೋಪುದೇಶಗಳಿಗೆ ಎರಡುವರೆದಿನಗಳ ಪ್ರಯಾಣವನ್ನು ಕಡಿಮೆ ಮಾಡುವ ಬಹು ಉಪಯುಕ್ತವಾದ ಭಾರಿ ನೌಕಾ ಕಾಲುವೆಯೊಂದು ಫ್ರಾನ್ಸಿನ ನೈರುತ್ಯ ಭಾಗದಲ್ಲಿ ನಿರ್ಮಾಣವಾಗಲಿದೆ. ಇದು ಅಟ್ಲಾಂಟಿಕ್ ಸಾಗರವನ್ನೂ ಮತ್ತು ಭೂಮಧ್ಯ ಸಮುದ್ರವನ್ನೂ ಸೇರಿಸುವದಲ್ಲದೆ ಫ್ರಾನ್ಸನ್ನೂ ವಿಂಗಡಿಸುತ್ತದೆ ಈ ಉದ್ಯಮದ ಬಗ್ಗೆ ಸುಮಾರು 9 ಕೋಟಿ ಪೌಂಡುಗಳ ಅಂದಾಜು ಫ್ರೆಂಚ್ ಸರಕಾರದ ಮುಂದಿದೆ. ಇದಕ್ಕಾಗಿ ಸೂಯೆಜ್ ಕಾಲುವೆಯ ಕಂಪೆನಿಯಂತೆಯೇ ಒಂದು ಕಂಪೆನಿಯು ಸ್ಥಾಪಿತವಾಗಬೇಕೆಂದೂ ಹೊಸ ಕಾಲುವೆಯನ್ನು ವಾಣಿಜ್ಯರೀತಿಯಲ್ಲಿ ಆಡಳಿತ ನಡೆಸಬೇಕೆಂದೂ ಯೋಜಿಸಲಾಗಿದೆ ಈ ಕಾಲುವೆ ನಿರ್ಮಾಣದ ಯೋಜನೆಯಂತೆ ಇದನ್ನು ನಿರ್ಮಿಸಲು ಒಂದು ಲಕ್ಷ ಜನರನ್ನು ಒಂದೇ ಸಮನೆ 4 ವರ್ಷಗಳವರೆಗೆ ನೇಮಿಸಬೇಕಾಗಿದೆ. ಇದರ ಉದ್ದ ಸುಮಾರು 250 ಮೈಲಿಗಳು ಇದರಲ್ಲಿ 40000 ಟನ್‌ಗಳ ಜಹಜುಗಳೂ ಹೋಗಬಹುದಾಗಿದೆ ಇದಕ್ಕಿಂತ ಬಹು ಮುಖ್ಯವಾದ ನಾಯು ಮತ್ತು ಇತರ ರಕ್ಷಣೆಗಳ ಸಿದ್ಧತೆಗಳ ಯೋಚನೆಯೂ ಫ್ರೆಂಚ್ ಮತ್ತು ಇತರ ಸರ್ಕಾರಗಳ ಮುಂದಿದೆ.

ಮೆಮಲ್ ಸ್ವಾಧಾ

ಜೆಕೊಸ್ಲೊವೇಕಿಯವನ್ನು ನುಂಗಿ ಜೀರ್ಣಿಸಿಕೊಂಡ ಹಿಟ್ಲರನ ವಕ್ರದೃಷ್ಟಿಯು ಪೋಲಂಡಿಂಡಿಗೆ ಉತ್ತರದಲ್ಲಿ ಬಾಲ್ಟಿಕ್ ಸಮುದ್ರ ತೀರದಲ್ಲಿರುವ ಹಿಂದೆ ಜರ್ಮನಿಗೆ ಸೇರಿದ್ದು ಅನಂತರ ಸ್ವತಂತ್ರವಾಗಿದ್ದ ಮೇಮಲ್ ಪ್ರಾಂತ್ಯದಮೇಲೆ ಬಿತ್ತು. ಆ ಪ್ರಾಂತ್ಯವನ್ನು ಜರ್ಮನಿಗೆ ಬಿಟ್ಟುಕೊಡಬೇಕೆಂದು ಲಿಥ್ವೇನಿಯಾ ಸರ್ಕಾರಕ್ಕೆ ಜರ್ಮನಿ ಸರಕಾರವು ಬರೆದು ತಿಳಿಸಿತು. ಅನಂತರ ಕಳೆದ 22 ನೆಯ ತಾರೀಖಿನದಿನ ಪ್ರಾತಃಕಾಲ ಮೇಮಲ್ ಪ್ರಾಂತವು ಜರ್ಮನಿಗೆ ಒಪ್ಪಿಸಲ್ಪಟ್ಟಿತೆಂದು ಪ್ರಕಟಿಸಲ್ಪಟ್ಟಿತು. ಅದೇ ಮಧ್ಯಾಹ್ನ ಜರ್ಮನಿ ಸೈನ್ಯಗಳು ಮೇಮಲ್ ಪ್ರಾಂತ್ಯಕ್ಕೆ ಪ್ರವೇಶಿಸಿದವು ಹಿಟ್ಲರರು ಬರ್ಲಿನ್ ನಗರವನ್ನು ಬಿಟ್ಟು ಪ್ರಯಾಣಮಾಡಿ 23 ನೆಯ ತಾರೀಖು ಮಧ್ಯಾಹ್ನ 1 ಘಂಟೆಗೆ ಮೇಮಲ್ ನಗರವನ್ನು ಪ್ರವೇಶಿಸಿದರು. ಅಂದವಾಗಿ ಶೃಂಗರಿಸಲ್ಪಟ್ಟಿದ್ದ ರಸ್ತೆಗಳಲ್ಲಿ ಕಾರಿನಲ್ಲಿ ಕುಳಿತು ಮೆರವಣಿಗೆಯಿಂದ ಥಿಯೇಟರ್ ಚೌಕಕ್ಕೆ ಬಂದು ಅಲ್ಲಿ ಗುಂಪಾಗಿ ನೆರೆದಿದ್ದ ಜನರ ಸಮುದಾಯದ ಘೋಷಣೆಗಳನ್ನು ಕೇಳಿ ಪ್ರತಿವಂದಿಸಿದನಂತರ ಪ್ರಜೆಗಳನ್ನು ಸಂಬೋಧಿಸಿ "ಹಿಂದೆ ಮಹಾಬಲವಾಗಿದ್ದ ಜರ್ಮನಿಯು ನಿನ್ನನ್ನು ಕೈಬಿಟ್ಟಿತು. ಈಗ ಜಲಯುತವಾದ ಜರ್ಮನಿಯು ತಿರುಗಿ ನಿಮ್ಮ ಕೈ ಹಿಡಿದು ಸೇರಿಸಿಕೊಂಡಿದೆ. ನಮ್ಮ ಈ ಏಕಮತ್ಯವು ಮುಂದೆ ಎಂದಿಗೂ ಮುರಿದು ಬೀಳುವದಿಲ್ಲ. ಯಾವ ರಾಷ್ಟ್ರವೂ ಅದನ್ನು ಮುರಿಯಲು ಪ್ರಯತ್ನಿಸಬಾರದು" ಎಂದು ಭಾಷಣವನ್ನು ಮಾಡಿದರು. ಮುಂದೆ ಇವರ ಪದಾಘಾತವು ಇನ್ನಾವ ದೇಶವನ್ನುರಕ್ಷಿಸುವುದೋ? ಇವರ ಮುಂದೋಟವನ್ನು ತಡೆಯಲು ಪ್ರಜಾಪ್ರಭುತ್ವ ರಾಷ್ಟ್ರಗಳೆಲ್ಲಾ ಒಂದಾಗಿ ಸೇರಿ ತಮ್ಮ ಕಾರ್ಯಕ್ರಮವನ್ನು ನಿರ್ಧರಿಸುವಂತೆ ಮಾಡಬೇಕೆಂದು ಇಂಗ್ಲೆಂಡು ತನ್ನ ಕೈಲಾದ ಪ್ರಯತ್ನವನೆಲಾ ನಡೆಸಲು ಮುಂದುವರೆಯುವಂತೆ ಕಾಣುತ್ತದೆ.

ಕೊಟ್ಟೂರಲ್ಲಿ ಶ್ರೀವಾಗೀಶ ಶಿವಾಚಾರ್ಯರ ವ್ಯಾಖ್ಯಾನಗಳು.

ತಾ॥ ೧೨-೩-೧೯೩೯ ನೆಯ ಭಾನುವಾರ ಸಾಯಂಕಾಲ ೭ ಘಂಟೆಗೆ ಮಿರಾಳಘಟ್ಟ ಮಹದ ಜಾಗಟಗೇರಿಯವರ ನಾಟಕ ಥಿಯೇಟರಿನಲ್ಲಿ ಮುದೆನೂರು ವರಕವಿ ಶ್ರೀವಾಗೀಶ ಶಿವಾಚಾರ್ಯರು "ಸಾಮಾಜಿಕ ಸುಧಾರಣೆ" ಎಂಬ ವಿಷಯದಮೇಲೆ ವ್ಯಾಖ್ಯಾನವನ್ನು ಮಾಡಿದರು.

ಆರಂಭದಲ್ಲಿ ಇಲ್ಲಿಯ ನಗರಾಧ್ಯಕ್ಷರಾದ ವೇ॥ ಮಿರಾಳಘಟ್ಟ ಮಹದ ಜಾಗಟಗೇರಿ ಚೆನ್ನಬಸವಪ್ಪಯ್ಯನವರು ಶ್ರೀಗಳವರ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುತ್ತ ಪ್ರಾಸ್ತಾವಿಕ ಭಾಷಣವನ್ನು ಮಾಡಿದ ನಂತರ ಶ್ರೀಗಳವರು ವ್ಯಾಖ್ಯಾನಕ್ಕಾರಂಭಿಸಿದರು. ಸಭೆಗೆ ಸಕಲ ಮತದವರೂ ಆಗಮಿಸಿದ್ದರು ಇವರು ವ್ಯಾಖ್ಯಾನದಲ್ಲಿ ಮಹತ್ವಗಳಾದ ಅನೇಕ ವಿಷಯಗಳನ್ನು ವಿವರಿಸಿದರು. ಮುಖ್ಯವಾದವುಗಳೆಂದರೆ:—"ನೈತಿಕ ನೈತಿಕವಾದ, ಪರಮತೀಯರು ಇತರ ಮತೀಯರ ಮೇಲೆ ಇಟ್ಟಿರುವ ಕುದೃಷ್ಟಿ, ಏಕ್ಯೆದ ಅಭಾವ, ದ್ವೇಷಾಸೂಯೆಗಳಿಂದ ಸುಧಾರಣೆಗೆ ಬಂದಿರುವ ಅಡ್ಡಿ, ಪ್ರಚೀನ ಸ್ವಮಾನಗಳಿಗೆ ಈಗಿನವರು ಮಾಡುತ್ತಿರುವ ಅವಾರ್ಥ, ವೈದಿಕ ಮತದವರ ಭಿನ್ನಾಭಿಪ್ರಾಯ," ಮುಂತಾದವು

ಒಳಕ ಮೆ॥ ರಾ॥ ಸೀತಾರಾಮರಾಯರು ಭಾಷಣ ಕಾರರ ಆಗಾಧ ವಿದ್ವತ್ತು, ಇದನ್ನು ಸರ್ವರಿಗೂ ಉಪಯುಕ್ತವಾಗುವಂತೆ ಭಾಷಣಮಾಡಿದರೀತಿ ಮುಂತಾದುವುಗಳನ್ನು ವರ್ಣಿಸುತ್ತ ಉಪಸಂಹಾರ ಭಾಷಣವನ್ನು ಮಾಡಿದರು.

ತಾ॥ ೧೫-೩-೩೯ ನೆಯ ಬುಧವಾರ ಇಲ್ಲಿಯ ಹೈಸ್ಕೂಲಿನಲ್ಲಿ ಬಾಡದ ವೆ॥ ವೀರಭದ್ರಜ್ಜನವರ ಅಭಿಪ್ರಾಯದ ಮೇರೆಗೆ "ಕನ್ನಡನಾಡಿ ಹಾಗೂ ಪತ್ರಿಕೋದ್ಯಮ" ಎಂಬ ವಿಷಯದಮೇಲೆ ವ್ಯಾಖ್ಯಾನಮಾಡಿದರು ಆರಂಭದಲ್ಲಿ ವೆ॥ ಕೆಂಬಾವಿಮರದ ಗುರುಬಸವಶಾಸ್ತ್ರಿಗಳವರು ಪ್ರಾಸ್ತಾವಿಕ ಭಾಷಣಮಾಡುತ್ತ ಶ್ರೀಗಳವರು ಕೈಕೊಂಡಿರುವ 'ಧರ್ಮರಾಜ್ಯ" ದ ವಿಚಾರವಾಗಿ ಸರ್ವರಿಗೂ ತಿಳಿಯುವಂತೆ ಹೇಳಿದುದಲ್ಲದೆ ಅಕಸ್ಮಿಕವಾಗಿ ನಮ್ಮೆಲ್ಲರಿಗೆ ದರ್ಶನ ಕೊಟ್ಟಿದ್ದು ನಮ್ಮ ಭಾಗ್ಯವೆಂದರು. ವಿದ್ವಾಂಸರೆಲ್ಲರೂ ವಿಶೇಷವಿದ್ವತ್ಪೂರ್ಣವಾಗಿ ಮಾತನಾಡಿದರು. ಈ ಸಮಯಕ್ಕೆ ಸರ್ವಥಾ ಅವಶ್ಯಕವಾದುದೆಂದು ವಿವರಿಸಿದರು. ಸಭೆಯಲ್ಲಿ ವಿದ್ಯಾರ್ಥಿವೃಂದವೂ ಸೇರಿ ಶೋಭೆಯನ್ನುಂಟುಮಾಡಿದ್ದಿತು. ಸಂಜೆ ೫ ಘಂಟೆಯಿಂದ ೭ ಘಂಟೆವರೆಗೆ ಶ್ರೀಗಳವರು ತಡೆಯಿಲ್ಲದೆ ವ್ಯಾಖ್ಯಾನವನ್ನು ಮಾಡಿದರು. ಮುಖ್ಯವಾಗಿ ಇವರ ವ್ಯಾಖ್ಯಾನವಲ್ಲಿ "ಮಾತೃಭಾಷೆಯಾದ ಕನ್ನಡ ನುಡಿಯ ನೂಲಸ್ಥಾನ, ಪತ್ರಿಕೋದ್ಯಮಗಳ ಭಿನ್ನ ಭಿನ್ನ ಸರಣಿ, ಇಂಗ್ಲೀಷು-ಸಂಸ್ಕೃತ ಜ್ಞಾನಿಗಳಿಂದ ಆಗಬೇಕಾಗಿರುವ ಸಾಹಿತ್ಯಸೇವೆ, ನಮ್ಮ ಸಾಹಿತ್ಯ ಸಮ್ಮೇಲನದಿಂದುಂಟಾದ ಲಾಭ, ಎಲ್ಲಾ ನುಡಿಗೂ ಪ್ರಾಶಸ್ತ್ಯವು ಮೂಲವಾಗಿರುವುದು ಹೇಗೆ?" ಮುಂತಾದ ವಿಷಯಗಳನ್ನು ವಿವರಿಸಿದರು.

ಬಳಕ ಶ್ರೀಯುತ ಹೆಡ್‌ಮಾಸ್ಟರವರು ಆಭಾರವನ್ನು ಮನ್ನಿಸಿದರು "ಧರ್ಮರಾಜ್ಯ ಪತ್ರಿಕೆಯು ಸಲುವಾಗಿ ಇಲ್ಲಿಯ ಪ್ರಮುಖರು ಮನಸ್ಸಿನ ಮೇಲೆ ತೆಗೆದುಕೊಂಡು ಸಹಾಯಗಳನ್ನು ಮಾಡಿಸುತ್ತಲಿದ್ದಾರೆ ಹೆಡ್‌ಮಾಸ್ಟರವರು ಈ ಪತ್ರಿಕೆಯ ಉದ್ದೇಶಗಳನ್ನು ತಿಳಿಸಿ ಆನಂದಪಟ್ಟ ನಮ್ಮ ಹೈಸ್ಕೂಲ್ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಓದಲು ಅರ್ಹವಾದ ಪತ್ರಿಕೆಯಾದ್ದರಿಂದ ಈ "ಧರ್ಮರಾಜ್ಯ" ವನ್ನು ನಾವು ಆದರದಿಂದ ನಮ್ಮ ಶಾಲೆಗೆ ಬರುವಂತೆ ಮಾಡಿಕೊಳ್ಳಲೆ ಬೇಕೆಂದು ಹೇಳಿದರು ಎಲ್ಲರ ಅಭಿಪ್ರಾಯದಂತೆ ಪತ್ರಿಕೆಯು ಶಾಲೆಗೆ ಮಂಜೂರಾಯಿತು. ಎಲ್ಲರೂ ಪತ್ರಿಕೆಗೆ ಸಹಾಯವನ್ನು ಮಾಡಿದರು.

ಶ್ರೀವಾಗೀಶ ಶಿವಾಚಾರ್ಯರಿಂದ ಸಾರ್ಥಕವಾದ ವ್ಯಾಖ್ಯಾನಗಳನ್ನು ಕೇಳಿ ತುಂಬಾ ಸಂತೋಷಪಟ್ಟು ಇವರ ಸಂಕಲ್ಪವು ತೀಘ್ರವಾಗಿ ನೆರವೇರುವಂತೆ ಇಲ್ಲಿಯ ಗ್ರಾಮದ ಯುಜಮಾನರಾದ ವೇ॥ ಮಿರಾಳಘಟ್ಟ ಮಹದ ಸಣ್ಣವೀರಭದ್ರಯ್ಯನವರೂ, ಚೆನ್ನವೀರಭದ್ರಯ್ಯನವರೂ, ಗ್ರಾಮದ ಅನೇಕ ಭಕ್ತ ಮಾಹೇಶ್ವರರನ್ನೂ ಇತರ ಮತದ ಮಹಾಜನಗಳನ್ನೂ ಪ್ರೇರಿಸುತ್ತಿರುವುದು ತುಂಬಾ ಸಂತೋಷಪಡತಕ್ಕ ಸಂಗತಿಯಾಗಿದೆ.

ಓರ್ವ ಪ್ರೇಕ್ಷಕ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಬಸವನಾಳ.

ಧಾರವಾಡ ಜಿಲ್ಲಾ ಸಿಗ್ಗಾವಿತಾಲೂಕು ಪೈಕಿ ಬಸನಾಳಗ್ರಾಮದಲ್ಲಿ ಪದ್ಧತಿಯಮೇರೆ ತಾ॥ 5-3-1939 ನೆಯ ದಿವಸ ಶ್ರೀ ರೇಣುಕ ಜಯಂತಿಯನ್ನು ಸಂಭ್ರಮದಿಂದ ಈ ಗ್ರಾಮದ ಸಮಸ್ತ ಭಕ್ತವೃಂದವು ನೇರವೇರಿಸಿತು ಪ್ರಾತಃಕಾಲ ಆಚಾರ್ಯಮೂರ್ತಿಗೆ ಷೋಡಶೋಪಚಾರ ವೈಭವವು ನಡೆದ ಬಳಿಕ ತಳಿರು ತೋರಣಾದಿಗಳಿಂದ ಅಲಂಕರಿಸಿದ ವೀಧಿಗಳಲ್ಲಿ ಉತ್ಸವ ಹೊರಟಿತು ಸುಮಂಗಲೆಯರು ದಾರಿಯುದ್ದಕ್ಕೂ ಮಂಗಲಾರತಿಯನ್ನು ಮಾಡುತ್ತಿದ್ದರು. ಭಜನಾಮಂಡಲಿಯು ಭಜನೆಯನ್ನು ಮಾಡುತ್ತಲಿತ್ತು. ವಾದ್ಯಗಳ ಮಂಜುಳ ಧ್ವನಿಯು ಕರ್ಣಾನಂದವನ್ನುಂಟುಮಾಡುತ್ತಿದ್ದಿತು ಆಂದೋಲಿಕೋತ್ಸವವು ಮುನಃ ಮಳಕ್ಕೆ ತಲ್ಪಿ ರೇಣುಕಮೂರ್ತಿಗೆ ಮಂಗಳಾರತಿಯನ್ನು ಮಾಡಿ ಆಚಾರ್ಯ ಜಯಘೋಷದೊಡನೆ ಸಭೆಯು ವಿಸರ್ಜನೆಗೊಳಿಸಲ್ಪಟ್ಟಿತು. ಸಮಸ್ತ ಭಕ್ತವೃಂದನ್ನು ಫಲಾತೀರ್ವಾದದಿಂದ ತೃಪ್ತಿಗೊಂಡಿತು.

ಓರ್ವ ಉತ್ಸವಭಾಗಿ.

ಶ್ರೀ ಮಲ್ಲಿಕಾರ್ಜುನ ವೀರಶೈವ ಹಾಸ್ಟಲ್, ಹಾಸನದ ವರ್ತ.

ಹಾಸನದ ಸೆಂಟರಿಗೆ ಈ ವರ್ಷದಲ್ಲಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಭೋಜನದ ವಿಷಾಡು ಕಲ್ಪಿಸಿಯುತ್ತದೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ತಮ್ಮ ಶಾಲಾಮುಖ್ಯೋಪಾಧ್ಯಾಯರ ಸರ್ಟಿಫಿಕೇಟ್ ಎನಿಸಿ ಈ ಮಾಹ 28 ನೇ ತಾರೀಖಿನೊಳಗೆ ಸೆಕ್ರೆಟರಿಯವರ ವಿಳಾಸಕ್ಕೆ ಕಳುಹಿಸಿಕೊಡಬೇಕು ಮತ್ತು S.S.L.C ಪರೀಕ್ಷೆಗೆ ಬರತಕ್ಕವರು ಸೆಕ್ರೆಟರಿಯವರಲ್ಲಿಗೆ ಬಂದು ಅನುಕೂಲ ಪಡೆಯಬೇಕೆಂದು ಬಯಸಿದೆ

H S. Murugappa. B.A.L.L.B.
Secretary.
Mallikarjuna Veershaiva Hostel.
Hassan.

ದುಃಖವಾರ್ತೆ.

ಅನಂತಪುರಂ ಜಿಲ್ಲಾ ಮಡಕಶಿರಾ ತಾಲ್ಲೂಕು ಜಂಬುಲಬಂಡೆ ಗ್ರಾಮದ ಶ್ರೀಮಾನ್ ಭೋಜೆಗೌಡರ ಪುತ್ರಿ ಚಿ॥ ಸೌ॥ ಪಾರ್ವತಾಂಬ ಎಂಬವರು (ತಾ॥ 7-3-39) ನೇದಿವಸ ಶಿವಾಧೀನರಾದರೆಂಬ ವಿಷಯವನ್ನು ಒರೆಯಲು ಬಹು ವಿಷಾದವೆನಿಸುತ್ತದೆ. ಭೋಜೆಗೌಡರಿಗೆ ಗಂಡುಮಕ್ಕಳು ಇಲ್ಲದ್ದರಿಂದ ಮಗಳನ್ನು ಮನೆತನಕ್ಕೆ ನಿಲ್ಲಿಸಿಕೊಂಡು ಗುಡ್ಡದಹಳ್ಳಿ ಮೆ॥ರಾ॥ ಡಿ ನಂಜೇಗೌಡರಿಗೆ ಕೊಟ್ಟು ಲಗ್ನಮಾಡಿ ಮನೆಯಲ್ಲಿಯೇ ಇರಿಸಿಕೊಂಡಿದ್ದರು

ಸಾರ್ವತಮ್ಮನವರಿಗೆ ೨೫ ವರ್ಷ ವಯಸ್ಸಿನೊಳಗಾಗಿ ಸಾಗಾಂಟಿಕೆ, ಶಿವಕಂಕರಪ್ಪ ಎಂಬ ಇಬ್ಬರು ಮಕ್ಕಳು ಜನಿಸಿದರು. ಇವರು ತ್ರಿಕರಣಶುದ್ಧಿಯಿಂದ ಮನೆಕೆಲಸವನ್ನು ನೋಡುತ್ತ ಮಾತಾಪಿತೃಗಳ ವಾಕ್ಯಪರಿಪಾಲನೆ ಮಾಡುತ್ತ, ಪತಿಯಾಜ್ಞಾಪರಾಯಣೆಯಾಗಿಯೂ ಹರ ಗುರುಭಕ್ತಿ ಶಿಲೆಯಾಗಿಯೂ' ಶಿವಪೂಜಾ ಧುರಂಧರೆಯಾಗಿಯೂ, ಇದ್ದರಲ್ಲದೆ ಬಡಬಗ್ಗರಿಗೆ ಅನ್ನ ವಸ್ತ್ರಗಳನ್ನು ಸಹಾಯ ಮಾಡುತ್ತ ತಮ್ಮ ಹೆಸರಿಗೆ ಸರಿಯಾಗಿ ಸಾಲ್ವುತ್ ಪಾರ್ವತಿಯೇ ಅಗಿದ್ದರು ಶ್ರೀ ರಂಭಾಪುರೀ ಜಗದ್ಗುರುಗಳು ತಾ॥ ೨೪-೪-೧೯೩೩ ರಲ್ಲಿ ಜಂಬುಲಬಂಡೆ ಗ್ರಾಮಕ್ಕೆ ದಯಮಾಡಿಸಿದ ಕಾಲದಲ್ಲಿ ಇವರು ತಮ್ಮ ತಂದೆ ಭೋಜೆಗೌಡರಿಗೆ ಹೇಳಿ ಜಗದ್ಗುರುಗಳನ್ನು ತಮ್ಮ ಗೃಹಕ್ಕೆ ಬಿಜಮಾಡಿಸಿಕೊಂಡು ಪೂಜಿಸಿ ಧನ್ಯತೆಯಿಗಳಾದರು. ಅಲ್ಲದೆ ಪ್ರತಿವರ್ಷ ಶ್ರೀರೇಣುಕಜಯಂತಿ ಉತ್ಸವಕ್ಕೆ ತಮ್ಮ ಹೆಸರಿನಮೇಲೆ ೩೦ ರೂಪಾಯಿಗಳನ್ನು ಕಳುಹಿಸುತ್ತಿದ್ದರು. ಶ್ರೀಗಳವರು ಸ್ಥಾಪಿಸಿರುವ ಸಂಸ್ಕೃತ ಪಾಠಶಾಲೆಗೆ ೧೦೦ ರೂಪಾಯಿಗಳನ್ನು ಅರ್ಪಿಸಿದರು ಜೀವ್ಯವಯಸ್ಸಿನಲ್ಲಿ ಇವರಿಗೆ ಇಂಥ ಗುರುಭಕ್ತಿಯು ನೆಲಸಿದ್ದನ್ನು ಕಂಡು ಜಗದ್ಗುರುಗಳು ಬಹು ಸಂತೋಷಪಟ್ಟುಕೊಂಡುದಲ್ಲದೆ ತಾವು ಮೈಸೂರು ರಾಜಧಾನಿಗೆ ಆಗಮಿಸಿದಾಗ್ಗೆ ಈ ದಂಪತಿಗಳನ್ನು ಬರಮಾಡಿಕೊಂಡು ಆತಿಥ್ಯ ವೇದಿಸಿದರು. ತಮ್ಮ ತಂದೆ ಭೋಜೇಗೌಡರು ಕಟ್ಟಿಸಿರುವ ನೂತನ ಗೃಹ ಶಿವದೀವಸ್ಥಾನಗಳ ಪ್ರತಿಷ್ಠಾದಿ ಕಾರ್ಯಗಳನ್ನು ವಿಜೃಂಭಣೆಯಿಂದ ನಡೆಯಿಸಿ ಕೀರ್ತಿಯನ್ನು ಸಂಪಾದಿಸಬೇಕೆಂದೂ, ಪ್ರತಿಷ್ಠಾಕಾಲವು ಯಾವಾಗ ಕೂಡುವದೋ ಇಂತಹ ಕಾರ್ಯಗಳನ್ನು ನಾನು ಸ್ವಹಸ್ತದಿಂದ ನಡೆಯಿಸಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಮೋಕ್ಷವನ್ನೂ ಸಂಪಾದಿಸಿಕೊಳ್ಳಬೇಕೆಂದೂ ಆತುರಪಡುತ್ತಿದ್ದರು ಅಷ್ಟರಲ್ಲಿಯೇ ವಿಧಿ ವಕ್ರರಾದುದು ತುಂಬ ವ್ಯಸನಕರವಾಗಿದೆ. ಇವರು ಶಿವಾಧೀನರಾದ ದಿವಸ ಅನೇಕ ಬಂಧುವರ್ಗದವರು ಮಾಹೇಶ್ವರರೇ ಮೊದಲಾದ ಅಸಂಖ್ಯ ಜನರು ಸೇರಿ ಕಳೇಬರವನ್ನು ಉತ್ಸವದೊಡನೆ ರುದ್ರಭೂಮಿಗೆ ಸಾಗಿಸಿ ಶಾಸ್ತ್ರೀಯವಾಗಿ ಸಂಸ್ಕಾರವನ್ನು ನಡೆಯಿಸಿದರು. ಅಂದು ಮೆ॥ ರಾ॥ ಭೋಜೇಗೌಡರು ದಾನ ಧರ್ಮಗಳನ್ನು ಜಿನ್ನಾಗಿ ಮಾಡಿದರು. ಹನ್ನೊಂದನೆಯ ದಿನ ವಿಧಿವತ್ತಾಗಿ ತಮ್ಮ ಸ್ಥಳ ಪುರೋಹಿತರಾದ ವೇ॥ ಟಿ ಯಂ. ಗಂಗಾಧರಶಾಸ್ತ್ರಿಗಳಿಂದ ಕರ್ಮಗಳನ್ನು ಮಾಡಿಸಿ ಗಣಾರಾಧನೆ ಮಾಡಿದರು. ಆ ದಿನ ಸಾವಿರಾರುಜನ ಬಂಧುವರ್ಗದವರು ಅನೇಕ ಜನ ಮಾಹೇಶ್ವರರೂ ಬಹುಜನ ಬಡಬಗ್ಗರುಗಳಿಗೆ ಅನ್ನದಾನಮಾಡಿದರು ಮಾಹೇಶ್ವರರಿಗೆ ದಾನಧರ್ಮಗಳನ್ನು ಬಹಳ ಭಕ್ತಿಯಿಂದ ಮಾಡಿದರು. ಅದರೇನು ಅನಾಥರಿಗೂ ಮಾಹೇಶ್ವರರಿಗೂ ಕಲ್ಪವೃಕ್ಷದಂತಿದ್ದ ಈ ಪತಿವ್ರತಾಶಿರೋಮಣಿಯು ಕಣ್ಮರೆಯಾಗಿ ಸರ್ವರಿಗೂ ಮಹಾ ವ್ಯಸನವನ್ನುಂಟುಮಾಡಿದರು. ಸಕಲ ಸದ್ಗುಣ ಗಣಮಂಡಿತೆಯಾದ ಇವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲೆಂದು ಪ್ರಾರ್ಥನೆ.

ಟಿ ಯಂ. ಗಂಗಾಧರಶಾಸ್ತ್ರಿ, ಜಂಬುಲಬಂಡೆ.

ವಿಷಾದವಾರ್ತೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಗಲೂರು ತಾಲ್ಲೂಕು ಪಲ್ಲಾಗಟ್ಟೆಗ್ರಾಮದಲ್ಲಿದ್ದ ಪರೋಪಕಾರಿಗಳೂ ವಿದ್ಯಾಪ್ರೇಮಿಗಳೂ ಸರ್ವಜನಮಾನ್ಯರೂ ಶಿವಪೂಜಾದಿ ಕರ್ಮಗಳಲ್ಲಾ ಸಕ್ತರೂ, ಗುರುಸೇವಾನಿರತರೂ, ಯಜಮಾನರೂ ಆದ ಕುಂದೂರು ಬೃಹನ್ಮಠದ ಕರಬಸಪ್ಪಯ್ಯನವರು ಕಳೆದ 12-3-39 ನೆ ಭಾನುವಾರ ಮಧ್ಯಾಹ್ನ 12 ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಇವರು ಬಾಲ್ಯಾವಸ್ಥೆಯಲ್ಲಿಯೇ ಮಾತಾಪಿತೃಗಳ ವಿಯೋಗ ದುಃಖಕ್ಕೀಡಾಗಿ ಪರರ ಆಶ್ರಯದಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು ಜೋತಿಷ್ಯ, ಕನ್ನಡ, ಮತ್ತು ಸಂಸ್ಕೃತಗಳಲ್ಲಿ ಪಾಂಡಿತ್ಯವನ್ನು ಆರ್ಜಿಸಿದರು.

ಅನಂತರ ಅನೇಕರನ್ನು ತಮ್ಮಂತೆ ವಿದ್ಯಾವಂತರನ್ನಾಗಿ ಮಾಡಿದರು, ಮತ್ತು ಲೌಕಿಕವ್ಯವಹಾರದಲ್ಲಿ ಉದ್ಯುಕ್ತರಾಗಿ ಜಾತ್ಯೈಯಿಂದ ದ್ರವ್ಯಾರ್ಜನೆಯನ್ನು ಸಹ ಮಾಡಿ ಸರಳಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದರು. ಇವರಲ್ಲಿ ಸಹಜವಾಗಿ ಒಡಮೂಡಿದ ವಾಕ್ಚಾತುರ್ಯ, ಜ್ಞಾನಾರ್ಜನೆ, ಉತ್ಸುಕತೆ, ಗುರುಸೇವಾತತ್ಪರತೆ ಇವೆಲ್ಲವೂ ಇವರನ್ನು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ ಶ್ರೀ॥ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಕರುಣೆಗೆ ಪಾತ್ರರನ್ನಾಗಿ ಮಾಡಿದ್ದವಲ್ಲದೆ ಇಲ್ಲಿಯ ವೀರಶೈವ ಜನಾಂಗದಲ್ಲಿಯೂ ಅನ್ಯ ಜನಾಂಗದಲ್ಲಿಯೂ ಪ್ರೇಮವನ್ನು ಹೆಚ್ಚಿಸುತ್ತಿದ್ದವು.

ಇಂಥ ಮಹಾಶಯರ ವಿಯೋಗವು ನಮ್ಮಗಳಿಗೆ ಮಹಾದುಃಖವನ್ನುಂಟುಮಾಡಿದೆ. ಶ್ರೀ ಜಗದಾಚಾರ್ಯರು ಮತ್ತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಹಾರೈಸುವ,

ಓರ್ವ ದುಃಖಭಾಗಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮುರಕ್ಕೆ ಾವಿರಾರು ಶಿಷ್ಯರ ಮನೆಗಳಿರುತ್ತಿವ್ವು. ಆ ಮತಾಧಿಕಾರಿಗಳು ಂದುವರ್ಷಕ್ಕೋ ಹತ್ತುವರ್ಷಕ್ಕೋ ಒಂದೆಸಾರಿ ಹೋಗಿ ಶಿಷ್ಯ ಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆವರೆ ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮರಿದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ತೊರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರಮ ಪುಶಾರಂಪಸ್ಕಾಗಿ ಎಂದೂ ತಮ್ಮ ಶಿಷ್ಯರನ್ನು ಕಾಣದಿರುವಷ್ಟು ಕೆಡಕಂಪಿ ಕಾಗದಗಳನ್ನು ಪಲೋಗಿಸಿರುವವಲ್ಲದೆ ಸುಂದ ರವಾದ ಮತ್ತು ಭವ್ಯವಾದ ಬೈಂಡರ್ನ ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಿಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವ

ಔಷಧಿ ಹೆಸರು	ಕೆಜ್ಜೆ	ಮೂಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಿಂದ್ರೋದಯ	೧	೨೦—೦—೦
ಸ್ವ.. ತಿ ನೇ ಸಂಬರ್	೧	೮—೦—೦
ರಸಸಿಂಧೂರ	೧	೩—೦—೦
ಬ್ಲಸಿಂದೂರ	೧	೪—೦—೦
ಬಸಿಂಧೂರ	೧	೪—೦—೦
ಸ ಸಿಂಧೂರ	೧	೪—೦—೦
ಸ್ವರ್ಣಪಂಗ	೧	೩—೦—೦
ತ್ರಿಪಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮುಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟು—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಕಾಲ್ಪ ವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ತಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ವೃದ್ಧಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹಿಡಿಕೇವನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ಸ್ವರಶಸ್ತ್ರ ಭವ್ಯವಾಗಿ ಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ದೊಡ್ಡಿಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲಕ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆತ್ತುವುದು. ವಿ ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್ —

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸನಂದ, ಶುರ್ವಾಸ ಮುನಿಪುಂಗವರಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧೦—೦

ಸದ್ಯೋ ಪೀಠಾರೋಹಣಮಾಡಿದತಕ್ಷ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ... ೦—೧—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೪

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿರುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ನಾಡುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೪

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೪

ಶ್ರೀಕಾಶೀಕ್ಷೇತ್ರನಿರಾಜಮಾನ ಶ್ರೀ ಜಗದ್ಗುರು ನಿಶ್ವಾರಾಧ್ಯರ ಮೂಲಲಿಂಗಾವತಾರ ಫೋಟೋ .... ೦—೦—೪

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ... ೦—೦—೪

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೪

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೪

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ವಹಸ್ತಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೪

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಸೀರೆಯ ಮಹಾವಸ್ತ್ರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಸೀರೆಯ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .... ೦—೦—೪

ಶ್ರೀ ಜಗದ್ಗುರು ಕೇದಾರಪೀಠಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೪

ಹಿಮವತ್ಪರ್ವತದ ಪುಣ್ಯಕ್ಷೇತ್ರ ಶ್ರೀಶೈಲವು ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಸುಂದರ ಫೋಟೋ .... ೦—೦—೪

ಶ್ರೀರಂಭಾಪುರೀ ಜಗದ್ಗುರುಗಳವರ ಸ್ವಹಸ್ತಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೪

ಬೆಂಗಳೂರು ಕಾಮಾಕ್ಷಿಪಾಳ್ಯದಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಆಡಳಿತದ ಮಹೋತ್ಸವದ ಫೋಟೋ ೦—೦—೪

ಸೂಚನೆ—ಐದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೋಷಣವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಆಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[49] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು.

ಗೋತ್ರಸೂತ್ರಪಟ (೩ನೆಯ ಆವೃತ್ತಿ) .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ) .... ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಉಪನಾದಿಸಿಜತಪ್ಪಣ (೮ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯರತಕ .... ೨ ಆಣೆ

ವೀರಶೈವಮತಪುರಾತನಾಂಶ .... ೩ ಆಣೆ

ವೀರಶೈವಾಚಾರಪದಿ (೩ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಪೂರ್ಣಮಾತ್ರ. ಚಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೮ ಆಣೆ

ಉಪಮಾಧ್ವಾಂತದಿವಾಕರ (೩ನೆಯ ೩ನೆಯ ಆವೃತ್ತಿ) .... ೮ ಆಣೆ

ಸದ್ಯೋದ್ಧರತ್ನಾವಳಿ .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಪಣಮು (ತೆಲುಗು) ೪ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಸಿದ್ಧಾಂತಸಾರಾವಳಿ (ಶ್ರೀತೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ). .... ೧೨ ಆಣೆ

ಶಿವಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ಶ್ರೀಕರಧಾವ್ಯಂ (ಚತುಸ್ಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೩ನೆಯ ಆವೃತ್ತಿ, ೭ಂಮಹತ್ವದ ಫೋಟೋಗಳಿರುವುವು) .... ೧। ರೂ

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* The Philosophical Aspect of Virasaivism (*English*) .... 8 As.

Speeches by Pandit Shri Kashinatha Shastriji *English*) 12 As.

ವೀರಶೈವರತ್ನ (ಮರಾಠಿ) ... ... ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ.

ವೀರಶೈವೋದ್ಧಾರಕರ (ಸಂಸ್ಕೃತ) ... ... ೧ ರೂ.

ಸಿದ್ಧಾಂತಶಿಖಾಮಣಿ (ಸಂಸ್ಕೃತ, ಮೂಲಮಾತ್ರ) ... ... ೬ ಆಣೆ

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೬ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ.ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಈ ಪುಸ್ತಕಗಳ ಜಾಹೀರಾತು ಪ್ರಕಟಣೆಯು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನವರ ಅಪ್ಪಣೆ ಮೇರೆಗೆ ಅವರು ಗುರುಭಕ್ತರಿಂದ ಪಡೆದಿರುವ ಪತ್ರಗಳಿಂದ ಪ್ರಕಟಿಸಿರುವುದಾಗಿದೆ.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ ನೇ ಏಪ್ರಿಲ್ ೧೯೩೯ [ಸಂಚಿಕೆ ೪೮

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್ ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರಡಕ್ಷನ್ನಿನಲ್ಲಿ ಇವರು ೧೪ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ನುಲ್ಲಿಕಾರ್ಜುನಾರಾಧ್ಯರು ಮುದೇನೂರು ಮಳೇಮಠ, ಇವರು ರಚಿಸಿರುವರು. ಇದರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವವು. ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ. ಪುಟಗಳು 176. **ಬೆಲೆ 8 ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKTI-VISHISTADVAITA

OR

THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book. No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಸೂಸೇಜ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಒಳದೇಶದ ವೃತ್ತಾಂತಗಳು.

ತುಮಕೂರು ಪೌರಸಭಾ ಸದಸ್ಯರಾದ ಗತಿಸಿದ್ದ ಶ್ರೀ ಸಿ. ಕೃಷ್ಣರಾಯರ ಸ್ಥಾನಕ್ಕೆ ಶ್ರೀ ಯಜಮಾನ ಸಿದ್ಧಪ್ಪನವರು ಚುನಾಯಿಸಲ್ಪಟ್ಟಿದ್ದಾರೆ.

ಕಳೆದ ವರ್ಷ ಬೆಂಗಳೂರು ಮುನಿಸಿಪಾಲಿಟಿಯವರು 3472 ಬೀದಿ ನಾಯಿಗಳನ್ನು ವಿದ್ಯುಚ್ಛಕ್ತಿ ಪ್ರಯೋಗದಿಂದ ಕೊಲ್ಲಿಸಿರುವರೆಂದು ಪ್ರಕಟವಾಗಿದೆ.

ನೈಸೂರು ಹೈಕೋರ್ಟಿನ ಶ್ರೇಷ್ಠನ್ಯಾಯಾಧೀಶರಾದ ಸರ್ ಡಿ. ಸಿ. ರೇಲಿಯವರು 6 ತಿಂಗಳ ಕಾಲ ರಜಾ ಪಡೆದು ಇಂಗ್ಲೆಂಡಿಗೆ ಪ್ರಯಾಣ ಮಾಡುವುದಾಗಿ ತಿಳಿದು ಬಂದಿದೆ. ಅವರ ರಜಾಕಾಲದಲ್ಲಿ ನ್ಯಾಯಮೂರ್ತಿ ಶ್ರೀ ಅಬ್ದುಲ್ ಘನಿಯವರು ಶ್ರೇಷ್ಠನ್ಯಾಯಾಧೀಶರಾಗಿ ಕೆಲಸಮಾಡುವರು.

ಶ್ರೀಮನ್ಮಹಾರಾಜರವರು ಚೇಸಿಗೆಯ ನಿಮಿತ್ತ ಕೆಲವು ದಿನಗಳ ವರೆಗೆ ಪರಿವಾರ ಸಮೇತ ಕೆಮ್ಮಣ್ಣುಗುಂಡಿ ಬೆಟ್ಟದಲ್ಲಿ ವಾಸಮಾಡಲು ನಿಶ್ಚಯಿಸಿ ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯಿಂದ ದಯಮಾಡಿಸಿರುತ್ತಾರೆ. ಶ್ರೀಮಮ್ಮವರಾಜರವರು ರಾಣಿವಾಸ ಸಹಿತ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿರುತ್ತಾರೆ. ರಾಜಘರ್ ಸಂಸ್ಥಾನದ ರಾಜಕುಮಾರರು ಅವರ ಅತಿಥಿಗಳಾಗಿರುತ್ತಾರೆ.

ರಾಜಧಾನಿಯ ನಗರ ನ್ಯಾಯಾಧೀಶರು ಕುಳ್ಳಯ್ಯ ಎಂಬಾತನಿಗೆ ಸುಳ್ಳು ಪ್ರಮಾಣಪತ್ರ ಕೊಟ್ಟನೆಂಬುದಕ್ಕಾಗಿ 3 ತಿಂಗಳ ಸಾಧಾರಣ ಶಿಕ್ಷೆ ಮತ್ತು 50 ರೂ.ಗಳ ದಂಡ ದಂಡಕೊಡಲು ತಪ್ಪಿದರೆ ಮತ್ತೆ 15 ದಿನಗಳ ಸಾಧಾರಣ ಶಿಕ್ಷೆಯನ್ನು ವಿಧಿಸಿದರು. ಸಬ್‌ಕೋರ್ಟ್ ಮೊಕದ್ದಮೆಯೊಂದರಲ್ಲಿ ಆಪಾದಿತನ ಪರ ಕುಳ್ಳಯ್ಯನು ಜಾಮೀನಾಗಿ ನಿಲ್ಲುವಾಗ್ಗೆ ತನಗೆ ರಾಜಧಾನಿಯ ಕೃಷ್ಣ ರಾಜಮೊಹಲ್ಲದಲ್ಲಿ 1200 ರೂ. ಬೆಲೆಬಾಳುವ ಎರಡು ಮನೆಗಳಿರುವಂತೆ ಪ್ರಮಾಣ ಪತ್ರವನ್ನು ಬರೆದುಕೊಟ್ಟನಂತೆ! ಅದು ಸುಳ್ಳೆಂದು ತಿಳಿದುಬರಲು ಸಬ್‌ಜಡ್ಜರು ನಗರನ್ಯಾಯಾಧೀಶರಲ್ಲಿ ದೂರುಕೊಟ್ಟರು. ತಪ್ಪು ಸಾಬೀತಾದ್ದರಿಂದ ಆಪಾದಿತನಿಗೆ ಮೇಲ್ಕಂಡಂತೆ ಶಿಕ್ಷೆ ವಿಧಿಸಲ್ಪಟ್ಟಿತು.

ಸ್ಪೇಯುದ್ಧವು ಸಮಾಪ್ತಿಗೊಂಡಿತು

ಸ್ಪೇನಸರ್ಕಾರದವರು ಯುದ್ಧವನ್ನು ಮುಂದುವರಿಸಲು ಶಕ್ತಿಹೀನತೆಯ ಕಾರಣ ತಮ್ಮ ಆಧೀನದಲ್ಲಿದ್ದ ಎಲ್ಲ ಮುಖ್ಯ ನಗರಗಳನ್ನು ಕಳೆದ 29 ನೆಯ ತಾರೀಖಿನದಿನ ದಂಗೆಕೋರನಾಯಕ ಜನರಲ್ ಫ್ರಾಂಕೊರವರ ಕಡೆಯವರ ಒಪ್ಪಿಸಿಬಿಟ್ಟರು. ವರ್ಷಗಟ್ಟಲೆ ನಡೆದ ಸ್ಪೇನ್ ಇಂದಿಗೆ ಮುಕ್ತಾಯವಾದಂತಾಯಿತು.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆಯು.

ಮಹಾಶಯರೇ,

ಇತ್ತೀಚೆಗೆ ಸನಾತನವೀರಶೈವ ಧರ್ಮಾಚರಣೆಗಳಲ್ಲಿ ಕಲಿಪ್ರಭಾವದಿಂದ ಸ್ಥಿಕ್ಯಂತರವಾಗಿ ಮತಾಚಾರಗಳ ಪರಿಸ್ಥಿತಿಯು ದಿನೇದಿನೇ ಬದಲಾವಣೆಯಾಗುತ್ತಿರುವುದನ್ನು ನೋಡಿದರೆ ಮನಸ್ಸಿಗೆ ತುಂಬ ವಿಷಾದವಾಗುತ್ತಿದೆ ಮತಾಬಿಮಾನಿಗಳ ಆಲಸ್ಯದಿಂದಲೋ ಅಥವಾ ಮೇಂದಿಕಾರಿಗಳ ಜಾಗರೂಕತೆಯಿಂದಲೋ ಮತದಲ್ಲಿ ಹುಟ್ಟಿರುವ ಪಾಷಂಡ ಹುಟ್ಟುತ್ತಿರುವ ಅನಾಚಾರಗಳನ್ನು ಮತ್ತು ಇತ್ತೀಚೆಗೆ ಬೆಂದಮೂಲವಾಗಿ ಬಂದಿರುವ ಹಲಕೆಲವು ಪದ್ಧತಿಗಳನ್ನು ಸಮೂಲ ನಾಶಮಾಡಿ ಧರ್ಮಾಸ್ತಿತ್ವದಲ್ಲಿ ವಿದಿಸಿವೆ ಸರ್ವಾಂಗ ಸುಂದರವಾದ ಮತಾಚಾರಗಳನ್ನು ಬಲಿತಿಯಲ್ಲಿ ತಂದು ವೀರಶೈವಸಮಾಜದ ಪರಿಸ್ಥಿತಿಯನ್ನು ಮೊದಲಿನಂತೆ ಉತ್ತಮಗೊಳಿಸಬೇಕಾದರೆ ವಿದ್ವಾಂಸರ ಮತಕ್ಕೆ ಕಟ್ಟುಬಿದಿಯಬೇಕಿರುವ ಪೂಜ್ಯರಾದ ಗುರುವರ್ಯರುಗಳು ಕೆಚ್ಚೆದೆಹೆಜ್ಜೆ ತಪ್ಪಿಯಾಯ ಜಾಗಗಳಲ್ಲಿ ಪವಿತ್ರವಾದ ಗುರು ಉಪದೇಶವನ್ನು ಸ್ಥಿರಪಡಿಸಿ ಸಮಾಜೋದ್ಧಾರವನ್ನು ಮಾಡಿ ಸಮಾಜದಲ್ಲಿ ಪರಿವ್ರಜನಗಳನ್ನೇರ್ಪಡಿಸಿ ಪದ್ಧತಿಪ್ರಾಯಕ್ಕಾದ ಮಾಹೇಶ್ವರ ಪದಾಧಿಕಾರಿ ವರ್ಗದಲ್ಲಿ ಅತ್ಯುತ್ತಮವಾದ ಧರ್ಮಿಕ ಜಾಗೃತಿಕ್ಷಿಕ್ಷಣದಿಂದ ವೀರಶೈವ ಸಿದ್ಧಾಂತರಹಸ್ಯವನ್ನು ತಿಳಿಸಿಕೊಡುವುದರಿಂದ ಉಪದೇಶವನ್ನು ಪಡೆದ ಪ್ರಾಜ್ಞರಾಗಿರುವುದರಿಂದ ಸಮಾಜದಲ್ಲಿ ಸ್ವಾಸ್ಥ್ಯವನ್ನುಂಟುಮಾಡಿ ಸಮಾಜವನ್ನು ಸುಸ್ಥಿತಿಗೆ ತರಬಲ್ಲರೆಂಬುದು ಸರ್ವವಿದಿತವಾಗಿದೆ ಆದ್ದರಿಂದ ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಸಮಾಜದಲ್ಲಿ ಪೂರ್ವದಲ್ಲಿದ್ದಂತೆ ಪ್ರತಿಯೊಂದು ಗ್ರಾಮಗಳಲ್ಲಿಯೂ ಇಂದೇ ಈಗ ಪರಿಗಣಿಸಿ ಸ್ವಾಧ್ಯಾಯಿಪಾಠಕ್ಕಾಗಿ ಸಂಸ್ಕೃತ-ಕನ್ನಡಪಾಠಶಾಲೆಗಳನ್ನು ತೆರೆದು ವೀರಶೈವ ಮೊದಲಾದ ಪೂರ್ವಾಚಾರ್ಯರಿಂದ ಯೋಗ್ಯ ಶಿಕ್ಷಣವು ಕೊಡಲ್ಪಟ್ಟ ಸಂಬಂಧವು ವಿಷ್ಯರಿಗೆ ಶಿಷ್ಯರು ಪರಿಪೂರ್ಣರಾಗಿ ಸಾಲಿಯುವಂತೆ ಸ್ವಧರ್ಮಾಚಾರದ ಸ್ಥಿತಿಯನ್ನು ಸರಿಪಡಿಸಿರುವ ಸಂಗತಿಯು ನಿಮ್ಮಗಳಿಗೆ ವಿದಿತವೇ ಇರುತ್ತದೆ

ಪ್ರಸ್ತುತದಲ್ಲಿ ಗುರುಕುಲಾಶ್ರಮದಿಂದ ಮಾಹೇಶ್ವರ ಪದಾಧಿಕಾರಿ ವರ್ಗಗಳಿಗೆ ಧರ್ಮಿಕ ಹಾಗೂ ಸೈತಿಕ ಶಿಕ್ಷಣವನ್ನು ಕೊಡುವದಕ್ಕಾಗಿ ಶ್ರವಣಾಧಿನಾಮ ಸಂವತ್ಸರದ ವೈಶಾಖಶುದ್ಧ ೫ (ತಾ॥ ೪ನೇ ಏಪ್ರಿಲ್ ೧೯೮೯) ಸೋಮವಾರ ಜರಗಲಿರುವ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯ ಶುಭ ಸನ್ನಿವೇಶದಲ್ಲಿ ವೈದಿಕ ಪಾಠಶಾಲೆಯನ್ನು ಸ್ಥಾಪಿಸುವದಾಗಿ ನಿರ್ಧರಿಸಿರುತ್ತೇವೆ ಆ ಧರ್ಮಿಕಾಭಿಲಾಷೆ ತಮ್ಮ ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಿ ತಮ್ಮ ಸದುದ್ದೇಶವನ್ನು ನೆರವೇರಿಸುವುದಕ್ಕೆ ಅವಕಾಶ ಕೊಡುವುದಲ್ಲದೆ ಗುರುವರ್ಗಕ್ಕೆ ಗೌರವವನ್ನು ಪತಕ್ಕೆ ತೋಭೆಯನ್ನು ಉಂಟುಮಾಡಬೇಕೆಂದು ಹಾರೈಸುತ್ತೇವೆ

ಶಿಕ್ಷಣ ಹೊಂದಲಿಕ್ಕೆ ಬರತಕ್ಕ ಶಿದ್ಧವಂಶೀಯ ಕೀಂದ ಬಗ್ಗೆ ಯಮ್ಮ ತಮ್ಮ ಗ್ರಾಮದ ವೈವಿದವರಿಂದ ಶಿಫಾರಸ ಪತ್ರವನ್ನು ತರತಕ್ಕದ್ದು

ವಟುಗಳು ೧೨ ವರ್ಷ ಮೇಲ್ಪಟ್ಟು ಹೊಳಗಿನವರಿದ್ದು ಕನ್ನಡ್ಡವ ಮಾರ್ಗಾಯಣಕ್ಕೆ ಉತ್ತೀರ್ಣರಾಗಿರತಕ್ಕದ್ದು. ವಟುಗಳು ಆಶ್ರಮದ ನಿಯಮಗಳಿಗೆ ಒಳಪಟ್ಟವರಾಗಿ ಉತ್ತೀರ್ಣರಾಗುವವರೆಗೂ ಆಶ್ರಮದಲ್ಲಿರುವಂತೆ ಪ್ರಮಾಣಪತ್ರವನ್ನು ಬರೆದುಕೊಡತಕ್ಕದ್ದು

ಶ್ರೀಕ್ಷೇತ್ರ ಗೊಡಚಿ, ಡಿ ಬೆಳಗಾಂವ

R. S. Mathad,
ಗುರುಕುಲಾಶ್ರಮ
ವ್ಯವಸ್ಥಾಪಕರು

ಸಕಲ ಕನ್ನಡಿಗರಲ್ಲಿ ನಿವೇದನೆ.

ಮುದೇನೂರು ಶ್ರೀವಾಗೀಶ ಶಿವಾಚಾರ್ಯರಿಂದ ಸ್ಥಾಪಿತವಾದ ವೀರಶೈವ ಧರ್ಮಾಲಯ ಹಾಗೂ "ಧರ್ಮರಾಜ್ಯ" ಮಾಸಿಕ ಪತ್ರಿಕೆ ಇವುಗಳ ಉದ್ದೇಶದಿಂದ ಸದರಿ ಶ್ರೀಗಳವರೂ "ಧರ್ಮರಾಜ್ಯ" ದ ಸಂಪಾದಕರಾದ ನೆ॥ ಯಂ॥ ವಿ ಮಠದ ಇವರೂ ಸಂಚಾರಿಸುತ್ತಿರುವುದು ಸರಿಯಸ್ಟೆ! ಈ "ಧರ್ಮರಾಜ್ಯ" ಕ್ಕೆ ಸಹಾಯಾದಿಗಳನ್ನ ಮಾಡಿಸುವ ಉದ್ದೇಶದಿಂದ ಹುಬ್ಬಳ್ಳಿ ಹೈ ಕೋರ್ಟು ವಕೀಲರಾದ ನೆ॥ ಪಿ ಆರ್ಯ್, ಹಿರೇಮಠ ಇವರು ೨ ರಸೀದಿ ಬುಕ್ಕನ್ನೂ ನೆ॥ ಶಾಸ್ತ್ರಿಮಠದ ಬಸವಣ್ಣಯ್ಯನವರು ೧ ರಸೀದಿ ಬುಕ್ಕನ್ನೂ ಆಲ್ಕೊಡ ಹಿಂರೇಮಠದ ಶ್ರೀ॥ ಷ॥ ಬ್ರ॥ ಪಟ್ಟದೇವರುಗಳವರು ೧ ರಸೀದಿ ಬುಕ್ಕನ್ನೂ ನೆಗಳೂರು ಹಿರೇಮಠದ ಶ್ರೀ॥ ಷ॥ ಬ್ರ॥ ಶಿವಯೋಗಿ ಶಿವಾಚಾರ್ಯರು ೧ ರಸೀದಿ ಬುಕ್ಕನ್ನೂ ಹಿರೇಹರಕುಣಿ ಹಿರೇಮಠದ ಶ್ರೀ ಸಿದ್ದಲಿಂಗದೇವರು ೧ ರಸೀದಿ ಒಕ್ಕನ್ನೂ ಕಲೂರು ವಿರಕ್ತಮಠದ ನೆ॥ ಗುರುಬಸವ ಗವಾಯಿಗಳು ೧ ರಸೀದಿ ಒಕ್ಕನ್ನೂ ಸಿದ್ದಾಪುರ ಮಠದ ಸಂ॥ ನೆ॥ ವೀರಭದ್ರಯ್ಯನವರು ೧ ರಸೀದಿ ಬುಕ್ಕನ್ನೂ ಮುದೇನೂರು ಮಠದ ನೆ॥ ಚನ್ನಬಸವಯ್ಯನವರು ೨ ರಸೀದಿ ಬುಕ್ಕುಗಳನ್ನೂ ಪ್ರೇಮದಿಂದ ಪಡೆದಿದ್ದಾರೆ ಈ ಮೇಲ್ಕಂಡವರೆಲ್ಲರೂ "ಧರ್ಮರಾಜ್ಯ" ದ ಸಲುವಾಗಿ ಯತ್ನಮಾಡಿಸ್ತಿರುವ ಈ ಮಧ್ಯೆಸಮಯದಲ್ಲಿ ಕೊಟ್ಟೂರು ಮುಂತಾದಕಡೆ ಯಾರೋ ಒಬ್ಬರು ಬಂದು "ನಾನು ವಾಗೀಶ ಶಿವಾಚಾರ್ಯರ ಅಭಿಪ್ರಾಯದಿಂದ ಸಂಚರಿಸುತ್ತಿದ್ದೇನೆ" ಎಂದು ಹೇಳಿ ನಾಲ್ಕಾಣೆ ಎಂಟಾಣೆ ಹಿಂಗೆ ಕೂಬ್ಟಷ್ಟು ಹಣವನ್ನು ತೆಗೆದುಕೊಂಡು ಸ್ವತಃ ಕೃತ್ರಿಮವಾಗಿ ತಯಾರಿಸಿದ ರಸೀದಿಗಳನ್ನೊ ಸಹ ಕೊಟ್ಟಿದ್ದಾರೆಂಬುದು ಧರ್ಮಾಲಯದ ಅಧ್ಯಕ್ಷರಿಗಿ ತಿಲಿದುಬಂದಿದೆ ಈರೀತಿ ಕೃತ್ರಿಮ ಸಂಧಾನದಿಂದ ದುಷ್ಟನ್ನು ಕೀಳತಕ್ಕವರಾರೆಂಬುದನ್ನು ಪತ್ತೆಹಚ್ಚಿ ನಮ್ಮ ವಿಳಾಸಕ್ಕೆ ಬರೆದರೆ ದೊಡ್ಡ ಉಪಕಾರ ಮಾಡಿದಂತಾಗುವುದು

ಸಹಾಯಕರು ಜಾಗರೂಕರಾಗಿರಬೇಕಾಗಿ ಈ ಮೂಲಕ ನಿವೇದಿಸಿದ್ದಾಗಿದೆ

"ಧರ್ಮರಾಜ್ಯದ" ದಲಧ್ಯಕ್ಷರು,
ಶ್ರೀ ವಾಗೀಶಶಿವಾಚಾರ್ಯರು,
ಬೃಹನ್ಮಠ, ಮುದೆನೂರು,
ಪೋ॥ ರಾಣೆಬೆನ್ನೂರು, ಜಿ ಧಾರವಾಡ

ಬೆಳವಣಿಕಯಲ್ಲಿ ಶ್ರೀಜಗದ್ಗುರು ವಿದ್ಯಾರಾಧ್ಯ ಸಂಸ್ಕೃತ ಪಾಠಶಾಲೆಯ ಪ್ರಾರಂಭವೂ ಧಾರ್ಮಿಕ ಸಭೆಯೂ

ನೊದಲೆ ಪ್ರಸಿದ್ಧಿಪಡಿಸಿದ ಪ್ರಕಾರ ತಾ. ೨೨-೩-೮೯ ನೇ ಬುಧವಾರ ಪ್ರಾತಃಕಾಲದಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯಮಠಕ್ಕೆ ವಿಕಾದೇಶ (ರುದ್ರಾಭಿಷೇಕವು ಮುಗಿದನಂತರ ೧೧ ಘಂಟೆಗೆ ಶ್ರೀ ಹುಬ್ಬಳ್ಳಿ ಹಿಸ್ಸೇರಹುವ ಕದ ಅನ್ನವೀರಶಿವಾಚಾರ್ಯರ ಪಲ್ಲಕ್ಕಿ ಮಹೋತ್ಸವವು ತಳಿರು ತೋರಣ ರಂಭಾಸ್ತಂಭಾದಿಗಳಿಂದ ಶೋಭಿಸುತ್ತಿರುವ ಮುಖ್ಯಬೀದಿಗಳಲ್ಲಿ ಹೊರಟಿತು ಪರಸ್ಥಳದಿಂದ ಬಂದ ಅನೇಕ ಭಜನಾ ಸಂಘಿದವರು ಜಗದಾಚಾರ್ಯರ ಸ್ತೋತ್ರಗಳನ್ನು ಭಕ್ತಿಯಿಂದ ಹಾಡುತ್ತಿದ್ದರು ಅನೇಕ ವಾದ್ಯಗಳು ಭೋರ್ಗರೆಯುತ್ತಿದ್ದುವು ಮತ್ತೆಯೆಯಗೆ ಮಂಗಲಪದಗಳನ್ನು ಮನೋಹರವಾಗಿ ಹಾಡುತ್ತಲಿದ್ದರು ಉತ್ಸವವನ್ನು ಶ್ರೀ ಜಗದ್ಗುರು ವಿಶ್ವಾರಾಧ್ಯಾಶ್ರಮಕ್ಕೆ ತಲ್ಪಿತು ಆಶ್ರಮದ ಅಧ್ಯಕ್ಷರಾದ ಶ್ರೀಗುರುದೇವಶಿವಾಚಾರ್ಯಸ್ವಾಮಿಗಳು ಚಿಕ್ಕಮಣ್ಣೂರ ಇವರು ಅತ್ಯಂತ ಆದರದಿಂದ ಸ್ವಾಮಿಗಳನ್ನು ಬರಮಾಡಿಕೊಂಡರು. ಸದರಿ ಸ್ವಾಮಿಗಳ ಹಸ್ತದಿಂದ ಪಾಠಶಾಲೆಯ ಉದ್ಘಾಟನೆ ಸಮಾರಂಭವು ವೈಭವದೊಡನೆ ಜರಗಿತು ಅನಂತರ ಎರಡು ಮೂರು ಸಾವಿರ ಜನರಿಗೆ ಅನ್ನಸಂತರ್ಪಣೆಯು ನಡೆದ ಬಳಿಕ ಸಂಜೆಯ ನಾಲ್ಕುಘಂಟೆಗೆ ಶ್ರೀ ಸೂಡಿ ಜುಗ್ಗಿ ಮಠದ ಅಧ್ಯಕ್ಷರಾದ ಉಮಾಪತಿ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಧಾರ್ಮಿಕಸಭೆಯು ಪ್ರಾರಂಭವಾಯಿತು. ಸಭೆಗೆ ಕರಕೀಕಟ್ಟಿ, ಹಡಗಲಿ, ಕೌಜಗೇರಿ, ಚಿಕ್ಕಮಣ್ಣೂರು, ಸವಡಿ, ಜಾಲಿಹಾಳ, ನಿಡಿಗುಂದಿ, ಅರಹುಣಸಿ, ಸಂದಿಗವಾಡ, ಮಲ್ಲಾಪೂರ ಮೊದಲಾದ ಗ್ರಾಮಗಳಿಂದ ಅನೇಕ ಜನರು ಸೇರಿದ್ದರು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮೊದಲು ಪಂ॥ ವೈದ್ಯಸಿದ್ಧಲಿಂಗ ಶಾಸ್ತ್ರಿ ಇವರು ದೀಕ್ಷಾ ವಿಷಯದ ಬಗ್ಗೆ ಮನೋಹರವಾಗಿ ಹೇಳಿದರು. ಅನಂತರ ಶ್ರೀಜಗದ್ಗುರು ವಿಶ್ವಾರಾಧ್ಯ ಸಂಸ್ಕೃತಪಾಠಶಾಲೆಯ ಅಧ್ಯಾಪಕರಾದ ಪಂ॥ ಬಸವರಾಜಶಾಸ್ತ್ರಿ ರಕ್ಕಸಿಗಿ ಇವರು ವಿದ್ಯಾವಿಷಯವಾಗಿ ಜನಗಳಿಗೆ ಪರಿಣಾಮವಾಗುವಂತೆ ಭಾಷಣ ಮಾಡಿದರು ಮತ್ತು ಶ್ರೀ॥ ಜ॥ ವಿಶ್ವಾರಾಧ್ಯ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರಾದ ಶ್ರೀಗುರುದೇವ ಶಿವಾಚಾರ್ಯರು ಚಿಕ್ಕಮಣ್ಣೂರ ಇವರು ಸಂಸ್ಕೃತವನ್ನು ಏಕೆ ಕಲಿಯಬೇಕು? ಅದರಿಂದ ಏನು ಪ್ರಯೋಜನ? ಮತ್ತು ಪರದೇಶದವರು ಈ ವಿದ್ಯೆಗೆ ಎಷ್ಟು ಮರ್ಯಾದೆಯನ್ನು ಕೊಟ್ಟಿರುವರು ಎಂಬ ವಿಷಯವನ್ನು ಒಂದು ಘಂಟೆಯವರೆಗೂ ಸವಿಸ್ತಾರವಾಗಿ ಅಪ್ಪಣೆಕೊಡಿಸಿದರು ತರುವಾಯ "ಪ್ರವಚನಪಟು" ಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ ಇವರು ಪ್ರವಚನವನ್ನು ಎಲ್ಲ ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಹೇಳಿದರು ತರುವಾಯ ಆಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಈ ಸಮಾರಂಭಕ್ಕೆ ಹಡಗಲಿ ಶ್ರೀಮತಿ ನೀಲಮ್ಮ ಗೌಡಶಾಸಿ ಇವರು ಮೂರುಸಾವಿರ ಜನಗಳಿಗೆ ಮಿಷ್ಟಾನ್ನಭೋಜನಕ್ಕೆ ಸಲ್ಲುವ ಹಣವನ್ನು ಸಹಾಯಮಾಡಿದ್ದರಿಂದ ಈ ಪುಣ್ಯಾತ್ಮರಿಗೆ ಜಗದಾಚಾರ್ಯರು ಉತ್ತರೋತ್ತರ ಆಯುರಾರೋಗ್ಯವನ್ನು ದಯಪಾಲಿಸಲೆಂದೂ ಈ ಪಾಠಶಾಲೆಯ ಅಭಿವೃದ್ಧಿಗಾಗಿ ಅಹೋರಾತ್ರಿ ಪ್ರಯತ್ನಪಡುತ್ತಿರುವ ಬೆಳವಣಿಕೆಯ ಸಮಸ್ತ ದೈವದವರಿಗೆ ಜಗದೀಶನು ಸದಾ ಸುಖವನ್ನೀಯಲೆಂದೂ ಕೋರುವ

ಏರ್ಪ ಉತ್ಸವಧಾಗಿ

ಹೈದರಾಬಾದ್ ಸತ್ಯಾಗ್ರಹಕ್ಕೆ ವೀರಶೈವರು ಬೆಂಬಲ ಕೊಡಬೇಕಂತೆ!

ಹಿಂದೂ ಧರ್ಮ ಸಂರಕ್ಷಣೆಯ ಸಲುವಾಗಿ ಅಂತರರಾಷ್ಟ್ರೀಯ ಆರ್ಯ್ ಲೀಗಿನವರು ಹೈದರಾಬಾದಿನಲ್ಲಿ ಸತ್ಯಾಗ್ರಹಚಳವಳಿಯನ್ನು ಹೊಡಿರುತ್ತಾರಸ್ಟೆ! ಇದಕ್ಕಾಗಿ ಆರ್ಯ್ ಲೀಗಿನವರು ಅಖಿಲ ಭಾರತ ವೀರಶೈವಮಹಾಸಭೆಯ ಕಾರ್ಯಕಾರಿ ಸಮಿತಿಯವರಲ್ಲಿ ಮನವಿ ಮಾಡಿಕೊಂಡಿರುವುದಾಗಿಯೂ, ಸದರಿ ಕಾರ್ಯಕಾರಿ ಸಮಿತಿಯವರು ಅದನ್ನು ಅನುಮೋದಿಸಿರುವುದಾಗಿಯೂ 25-3-1989 ನೇ ಜನವಾಣಿ ಪತ್ರಿಕೆಯು ಪ್ರಕಟಿಸಿರುತ್ತದೆ ಹಿಂದೂ ಪತ್ರಿಕೆಯಲ್ಲಿ ಆರ್ಯ್ ಲೀಗಿನವರು ವೀರಶೈವರನ್ನು ಮನವಿ ಮಾಡಿಕೊಂಡಿರುವ ವಿಚಾರ ಮಾತ್ರ ಪ್ರಕಟವಾಗಿದೆ ಹಿಂದೆ ಆರ್ಯ ಸಮಾಜದವರಿಗೂ ವೀರಶೈವರಿಗೂ ಭಿನ್ನಾಭಿಪ್ರಾಯವು ಹುಟ್ಟಿ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರೆಂಬುದು ಪತ್ರಿಕೆಗಳ ಮೂಲಕ ಸರ್ವರಿಗೂ ತಿಳಿದೇಇದೆ ಈಗ ತಮ್ಮ ಕಷ್ಟಕಾಲದಲ್ಲಿ ಆರ್ಯ್ ಲೀಗಿನವರು ವೀರಶೈವರ ಬೆಂಬಲವನ್ನು ಕೋರುತ್ತಿರುವುದು ಆಶ್ಚರ್ಯವಾಗಿರುತ್ತದೆ. ಹಿಂದೂ ಧರ್ಮದ ಸಂರಕ್ಷಣಾರ್ಥವಾಗಿಯಾದರೂ ಆರ್ಯ ಸಮಾಜದವರು ತಮ್ಮ ದ್ವೇಷ ಬುದ್ಧಿಯನ್ನು ಬಿಟ್ಟು ವೀರಶೈವರ ಸ್ನೇಹವನ್ನು ಅಪೇಕ್ಷಿಸುತ್ತಿರುವುದು ಹಿಂದು ವಿಚಾರದಲ್ಲಿ ಸ್ತೋತ್ಸಾರ್ಹ

END OF PANCHA-
CHARYA
PRABHA